" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

# ಕರ್ನಾಟಕ ವಿಧಾನ ಪರಿಷತ್ತು
## ನೂರ ನಲವತ್ತೈದನೆಯ ಅಧಿವೇಶನ

### ವಿಷಯಾನುಕ್ರಮಣಿಕೆ (Index)

ದಿನಾಂಕ: 23ನೇ ಡಿಸೆಂಬರ್ 2021
ಗುರುವಾರ

1. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**1199-ಬೀದರ್ ಜಿಲ್ಲೆಯ ಕಾರಂಜಾ ಡ್ಯಾಂ ಕೆಳಗಡೆ ಉದ್ಯಾನವನ ನಿರ್ಮಾಣದ ಕುರಿತು**
-ಶ್ರೀ ಅರವಿಂದ ಕುಮಾರ್ ಅರಳಿ
-ಶ್ರೀ ಗೋವಿಂದ ಎಂ.ಕಾರಜೋಳ(ಜಲಸಂಪನ್ಮೂಲ ಸಚಿವರು)

**1218-ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಬಗ್ಗೆ**
-ಶ್ರೀ ಆಯನೂರು ಮಂಜುನಾಥ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
(ಗೃಹ ಸಚಿವರ ಪರವಾಗಿ)

**1231-ಮಾಗಡಿ ತಾಲ್ಲೂಕಿಗೆ ಹೇಮಾವತಿ ನೀರು ಹರಿಸುವ ಬಗ್ಗೆ**
-ಶ್ರೀ ಅ.ದೇವೇಗೌಡ
-ಶ್ರೀ ಗೋವಿಂದ ಎಂ.ಕಾರಜೋಳ(ಜಲಸಂಪನ್ಮೂಲ ಸಚಿವರು)

**1171-ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಮಾಡುವುದರ ಬಗ್ಗೆ**
-ಶ್ರೀ ಪ್ರಕಾಶ್ ಕೆ.ರಾಥೋಡ್
-ಶ್ರೀ ಗೋವಿಂದ ಎಂ.ಕಾರಜೋಳ(ಜಲಸಂಪನ್ಮೂಲ ಸಚಿವರು)

**1216-ಮರಡಿಪೂರ ಗ್ರಾಮಕ್ಕೆ ಚೆಕ್ ಡ್ಯಾಂ ನಿರ್ಮಾಣ ಕುರಿತು**
-ಶ್ರೀ ಎನ್.ಅಪ್ಪಾಜಿಗೌಡ(ಶ್ರೀ ಎಂ.ಎ.ಗೋಪಾಲಸ್ವಾಮಿ ಅವರ ಪರವಾಗಿ)
-ಶ್ರೀ ಗೋವಿಂದ ಎಂ.ಕಾರಜೋಳ(ಜಲಸಂಪನ್ಮೂಲ ಸಚಿವರು)

**1176-ಸ್ವಯಂ ಘೋಷಿತ ಆಸ್ತಿ ತೆರಿಗೆ ಕುರಿತು**
-ಶ್ರೀ ಎನ್.ರವಿಕುಮಾರ್
-ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)

**1220-ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಬರುವ ಪ್ರಮುಖ ನಾಲೆಗಳ ಕುರಿತು**
-ಶ್ರೀ ಪಿ.ಆರ್.ರಮೇಶ್
-ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**1153-ಬೆಂಗಳೂರು ನಗರದಲ್ಲಿರುವ ರಾಜಕಾಲುವೆ ಒತ್ತುವರಿ ಕುರಿತು**
-ಶ್ರೀ ಯು.ಬಿ.ವೆಂಕಟೇಶ್
-ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)

**1257-ಬೆಂಗಳೂರಿನ ವ್ಯಾಪ್ತಿಯ ರಸ್ತೆಗಳು ಹಾಗೂ ಫುಟ್‌ಪಾತ್‌ಗಳ ಕಾಮಗಾರಿಗಳ ಕುರಿತು**
-ಶ್ರೀಮತಿ ಭಾರತಿಶೆಟ್ಟಿ
-ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)

**1252-ಬೆಂಗಳೂರಿನ ರಸ್ತೆಗಳು ಹಾಗೂ ಪಾದಚಾರಿ ಮಾರ್ಗಗಳ ಗುಂಡಿಗಳನ್ನು ಸರಿಪಡಿಸುವ ಬಗ್ಗೆ**
-ಡಾ:ಕೆ.ಗೋವಿಂದರಾಜ್
-ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)

**ತಡೆಹಿಡಿಯಲಾದ ಪ್ರಶ್ನೆ 334 ಬೆಂಗಳೂರು ನಗರ ವ್ಯಾಪ್ತಿಯ 12 ಅತೀ ದಟ್ಟಣೆ ಸಂಚಾರಿ ರಸ್ತೆಗಳನ್ನು ಕೆ.ಆರ್.ಡಿ.ಸಿ.ಎಲ್. ಗೆ ವರ್ಗಾಯಿಸುವ ಕುರಿತು**
-ಶ್ರೀ ಪಿ.ಆರ್.ರಮೇಶ್
-ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)

**ತಡೆಹಿಡಿಯಲಾದ ಪ್ರಶ್ನೆ 1055- ಹಳ್ಳ ಹಿಡಿದ ವಿದ್ಯುತ್ ಚಿತಾಗಾರ ಯೋಜನೆ ಬಗ್ಗೆ.**
-ಶ್ರೀ ರಘುನಾಥ್ ರಾವ್ ಮಲ್ಕಾಪೂರೆ
-ಶ್ರೀ ಎನ್.ನಾಗರಾಜು(ಎಂ.ಟಿ.ಬಿ)(ಪೌರಾಡಳಿತ, ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**2. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ರಾಜ್ಯದ ಮೊರಾರ್ಜಿ ವಸತಿ ಶಾಲೆ ಹಾಗೂ ಇನ್ನಿತರ ವಸತಿ ಶಾಲೆಗಳ ಶಿಕ್ಷಕರನ್ನು ಖಾಯಂ ಮಾಡುವ ಬಗ್ಗೆ.**
-ಶ್ರೀ ಕೆ.ಟಿ.ಶ್ರೀಕಂಠೇಗೌಡ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

**ಆ)ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇಲ್ಲಿ 371(ಜೆ) ಮೀಸಲಾತಿ ಅಡಿ ನೇಮಕಾತಿ ವಿಳಂಬವಾಗುತ್ತಿರುವ ಬಗ್ಗೆ.**
-ಶ್ರೀ ಎಸ್.ವ್ಹಿ.ಸಂಕನೂರ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಇ)ಬಾಗಲಕೋಟೆ ಜಿಲ್ಲೆ ಸಾವಳಗಿ ಪಟ್ಟಣವನ್ನು ತಾಲ್ಲೂಕನ್ನಾಗಿ ಪರಿವರ್ತಿಸುವ ಬಗ್ಗೆ.**
-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಈ) ಕೋವಿಡ್-19 ಕಾರಣದಿಂದ ಎಲ್ಲಾ ವಿದ್ಯಾರ್ಥಿಗಳನ್ನು ಉತ್ತೀರ್ಣಗೊಳಿಸಿದ್ದರಿಂದ ಮುಂದಿನ ವಿದ್ಯಾಭ್ಯಾಸಕ್ಕಾಗಿ ಹಾಸ್ಟೆಲ್ ಸೌಲಭ್ಯದಿಂದ ವಂಚಿತರಾಗಿರುವ ಬಗ್ಗೆ.**

-ಶ್ರೀ ಚಿದಾನಂದ್ ಎಂ.ಗೌಡ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

**ಉ) ಬಿಬಿಎಂಪಿಗೆ ಸೇರಿದ ಸ್ವತ್ತುಗಳನ್ನು ಸಂರಕ್ಷಿಸಿ ವಶಕ್ಕೆ ಪಡೆಯುವಲ್ಲಿ ಕ್ರಮ ಕೈಗೊಳ್ಳದಿರುವ ಬಗ್ಗೆ.**

-ಶ್ರೀ ಪಿ.ಆರ್.ರಮೇಶ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಊ) ಆಲಮಟ್ಟಿ ಜಲಾಶಯದ ಪಕ್ಕದಲ್ಲಿ ಜಗಜ್ಯೋತಿ ಬಸವಣ್ಣನವರ ಪ್ರತಿಮೆಯನ್ನು ಸ್ಥಾಪನೆ ಮಾಡುವ ಬಗ್ಗೆ.**

-ಶ್ರೀ ಹಣಮಂತ ರುದ್ರಪ್ಪ ನಿರಾಣಿ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಋ) ಸಾರ್ವಜನಿಕ ಶಿಕ್ಷಣ ಇಲಾಖೆ ಕಚೇರಿಗಳಲ್ಲಿ ಶಿಕ್ಷಕರನ್ನು ಗೌರವಯುತವಾಗಿ ನಡೆಸಿಕೊಳ್ಳುವ ಬಗ್ಗೆ.**

-ಡಾ:ತಳವಾರ್ ಸಾಬಣ್ಣ
-ಶ್ರೀ ಬಿ.ಸಿ.ನಾಗೇಶ್(ಪ್ರಾಥಮಿಕ ಮತ್ತುಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**ಎ) ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಬೋಧನಾ ಅವಧಿ ಕಡಿತ ಮತ್ತು ವೇತನಾನುದಾನ ಬಿಡುಗಡೆ ಬಗ್ಗೆ.**

-ಶ್ರೀ ಮರಿತಿಬ್ಬೇಗೌಡ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಏ) ಕೋಲಾರ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಕಾಮಗಾರಿಗಳ ಬಿಲ್ ಪಾವತಿ ಬಗ್ಗೆ.**

-ಶ್ರೀ ಗೋವಿಂದರಾಜು
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಐ) ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲ್ಲೂಕಿನ ಗಾಮನಹಟ್ಟಿ ಸರ್ಕಾರಿ ಉರ್ದು ಶಾಲೆಯಲ್ಲಿ 8ನೇ ತರಗತಿ ನಂತರ ಪ್ರೌಢಶಾಲೆ ಪ್ರಾರಂಭಿಸುವ ಬಗ್ಗೆ.**

-ಶ್ರೀ ಬಿ.ಕೆ.ಹರಿಪ್ರಸಾದ್
-ಶ್ರೀ ಬಿ.ಸಿ.ನಾಗೇಶ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಒ) ಪ್ರೌಢಶಾಲಾ ಶಿಕ್ಷಕರ ಸಮಸ್ಯೆಗಳ ಬಗ್ಗೆ.**

-ಶ್ರೀ ಅರುಣ ಶಹಾಪುರ

-ಶ್ರೀ ಬಿ.ಸಿ.ನಾಗೇಶ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**ಓ) ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕು ಮಹಾರಾಷ್ಟ್ರ ಗಡಿ ಭಾಗದ ಗ್ರಾಮಗಳಲ್ಲಿ ಕನ್ನಡ ಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ.**

-ಶ್ರೀ ವಿಜಯ ಸಿಂಗ್

-ಶ್ರೀ ಬಿ.ಸಿ.ನಾಗೇಶ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**ಔ) ರಾಜ್ಯದಲ್ಲಿ ಸರ್ಕಾರಿ ಮತ್ತು ಸರ್ಕಾರದ ಅನುದಾನಿತ ಆಸ್ಪತ್ರೆಗಳಲ್ಲಿ ಸಂದರ್ಶಕರ ಸಮಿತಿ ರಚನೆ ಮಾಡುವ ಬಗ್ಗೆ.**

-ಶ್ರೀ ಯು.ಬಿ.ವೆಂಕಟೇಶ್

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಅಂ) ಉಡುಪಿಯಿಂದ ಕೇರಳಕ್ಕೆ ಮೂಡಬಿದರೆ-ಬಂಟ್ವಾಳ ತಾಲ್ಲೂಕಿನ 17 ಗ್ರಾಮಗಳ ಮೂಲಕ 400 ಕೆ.ವಿ. ಸಾಮರ್ಥ್ಯದ ವಿದ್ಯುತ್ ಸರಬರಾಜಾಗುತ್ತಿರುವ ಬಗ್ಗೆ.**

-ಶ್ರೀ ಕೆ.ಹರೀಶ್ ಕುಮಾರ್

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಅಃ) ಇಂಜಿನಿಯರಿಂಗ್ ಸಿ.ಇ.ಟಿ. ಕೌನ್ಸಿಲಿಂಗ್ ಮುಂಚೆ ಕಾಮೆಡ್-ಕೆ ಕೋಟಾದಡಿ ಸೀಟ್ ಪಡೆದ ವಿದ್ಯಾರ್ಥಿಗಳ ಶುಲ್ಕ ಹಿಂತಿರುಗಿಸುವ ಬಗ್ಗೆ.**

-ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಕ) ಕೋವಿಡ್-19 ವ್ಯಾಕ್ಸಿನ್‌ಗಳು ಪೋಲಾಗುತ್ತಿರುವ ವಿಚಾರದ ಬಗ್ಗೆ**

-ಶ್ರೀ ಎನ್.ರವಿಕುಮಾರ್

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾಗಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

**ಅ) ಕರ್ನಾಟಕ ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವೈದ್ಯಕೀಯ ವಿದ್ಯಾರ್ಥಿಗಳು ತಮ್ಮ ವ್ಯಾಸಂಗವನ್ನು ಮುಗಿಸಿದ ಮೇಲೆ ಕಡ್ಡಾಯವಾಗಿ ಒಂದು ವರ್ಷದ ಗ್ರಾಮೀಣ ಸೇವೆಯನ್ನು ಪೂರೈಸಬೇಕೆನ್ನುವುದರ ಬಗ್ಗೆ ಕಾನೂನು ರೂಪಿಸುವ ಕುರಿತು.**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ)

**ಆ) ಉಡುಪಿ ಜಿಲ್ಲೆಯಲ್ಲಿ ಕೊರೋನಾ 2ನೇ ಹಂತದ ಲಾಕ್‌ಡೌನ್ ತೆರವುಗೊಂಡು ಹಲವು ತಿಂಗಳುಗಳೇ ಕಳೆದರೂ ಗ್ರಾಮೀಣ ಭಾಗದಲ್ಲಿ ಪೂರ್ಣ ಪ್ರಮಾಣದಲ್ಲಿ ಬಸ್ ಸಂಚಾರ ಆರಂಭವಾಗದೇ ಇರುವ ಕಾರಣ ಜನಸಾಮಾನ್ಯರಿಗೆ ಮತ್ತು ವಿದ್ಯಾರ್ಥಿಗಳಿಗೆ ತೀವ್ರ ತೊಂದರೆಯಾಗುತ್ತಿರುವುದರ ಕುರಿತು.**

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಸಾರಿಗೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವರ ಪರವಾಗಿ)

**ಇ) ರಾಜ್ಯ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸುಮಾರು 14 ಸಾವಿರ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸುವ ಕುರಿತು.**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಜೀವನೋಪಾಯ ಹಾಗೂ ಉದ್ಯಮಶೀಲತೆ ಸಚಿವರ ಪರವಾಗಿ)

**ಈ) ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ತಹಶೀಲ್ದಾರ್ ಅವರನ್ನು ವರ್ಗಾವಣೆ ಮಾಡುವ ಬಗ್ಗೆ.**

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಕಂದಾಯ ಸಚಿವರ ಪರವಾಗಿ)

**ಉ) ಸರ್ಕಾರ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಗೋಶಾಲೆ ತೆರೆಯಲು ಅಗತ್ಯವಿರುವ ಜಮೀನುಗಳನ್ನು ಪಡೆದು ಅವಶ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಿ, ರೈತರಿಗೆ ಸಮಸ್ಯೆಯಾಗದಂತೆ ಗೋವುಗಳ ಸಂರಕ್ಷಣೆಗೆ ಮುಂದಾಗುವ ಬಗ್ಗೆ.**

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಪಶುಸಂಗೋಪನಾ ಸಚಿವರ ಪರವಾಗಿ)

**4. ನಿಯಮ 330ರ ಮೇರೆಗೆ ಚರ್ಚೆ**

**ಅ) ರಾಜ್ಯದ ವಿವಿಧ ಇಲಾಖೆಗಳಲ್ಲಿ ಗುತ್ತಿಗೆ ಕಾಮಗಾರಿಗಳ** ಮೊತ್ತದ **ಶೇಕಡಾ 40ರಷ್ಟು** ಮೊತ್ತ **ಲಂಚದ ರೂಪದಲ್ಲಿ ವ್ಯಯವಾಗುತ್ತಿದ್ದು ಭ್ರಷ್ಟಾಚಾರ ತಾಂಡವವಾಡುತ್ತಿರುವ ಬಗ್ಗೆ.**

-ಶ್ರೀ ಸಿ.ಎಂ.ಇಬ್ರಾಹಿಂ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
-ಶ್ರೀ ಎನ್.ರವಿಕುಮಾರ್
-ಶ್ರೀ ಡಾ:ತೇಜಸ್ವಿನಿ ಗೌಡ
- ಶ್ರೀ ಗೋವಿಂದ ಎಂ.ಕಾರಜೋಳ(ಜಲಸಂಪನ್ಮೂಲ ಸಚಿವರು)
-ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
-ಶ್ರೀ ಸಿ.ಸಿ.ಪಾಟೀಲ್(ಲೋಕೋಪಯೋಗಿ ಸಚಿವರು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**5. ನಿಯಮ 68ರ ಮೇರೆಗೆ ಮುಂದುವರೆದ ಚರ್ಚೆ**
**ವಿಷಯ: "ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ"**

-ಶ್ರೀ ಯು.ಬಿ.ವೆಂಕಟೇಶ್
-ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು)
-ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
-ಶ್ರೀ ಶಶೀಲ್ ಜಿ.ನಮೋಶಿ
-ಶ್ರೀ ಪ್ರಕಾಶ್ ಕೆ.ರಾಥೋಡ್
-ಶ್ರೀ ಎನ್.ರವಿಕುಮಾರ್
-ಶ್ರೀ ಬಸವರಾಜ ಪಾಟೀಲ್ ಇಟಗಿ
-ಶ್ರೀ ಲಕ್ಷ್ಮಣ ಸಂಗಪ್ಪ ಸವದಿ

**6. ನಿಯಮ 330ರ ಮೇರೆಗೆ ಚರ್ಚೆ**
**ಆ) "ಲೋಕಸೇವಾ ಆಯೋಗವು ಸಲ್ಲಿಸಿದ್ದ 2021ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್‌ಗಳ ಆಯ್ಕೆ ಪಟ್ಟಿ/ಸಲಹೆಗೆ ಸಂಬಂಧಿಸಿದಂತೆ ದಿನಾಂಕ:09.03.2018ರ (ರಿಟ್ ಅರ್ಜಿ ಸಂಖ್ಯೆ:13617-13627/2017) ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪನ್ನು ಪಾಲಿಸುವುದರ ಕುರಿತು.**

-ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)
-ಶ್ರೀ ಪಿ.ಆರ್.ರಮೇಶ್
-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

**7. ನಿಯಮ 68ರ ಮೇರೆಗೆ ಮುಂದುವರೆದ ಚರ್ಚೆ**
**ವಿಷಯ: "ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ"**

-ಶ್ರೀ ಅರವಿಂದ ಕುಮಾರ್ ಅರಳಿ
-ಶ್ರೀ ಬಸವರಾಜ ಪಾಟೀಲ್ ಇಟಗಿ
-ಶ್ರೀ ಗೋವಿಂದ ಎಂ.ಕಾರಜೋಳ(ಜಲಸಂಪನ್ಮೂಲ ಸಚಿವರು)

**8. ಪ್ರಕಟಣೆ**

9. **ನಿಯಮ 68ರ ಮೇರೆಗೆ ನಡೆದ ಚರ್ಚೆಗೆ ಸರ್ಕಾರದಿಂದ ಉತ್ತರ**
**ವಿಷಯ: "ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ"**

-ಶ್ರೀ ಗೋವಿಂದ ಎಂ.ಕಾರಜೋಳ(ಜಲಸಂಪನ್ಮೂಲ ಸಚಿವರು)
-ಶ್ರೀ ಕೆ.ಟಿ.ಶ್ರೀಕಂಠೇಗೌಡ
-ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು)
-ಶ್ರೀ ಬಸವರಾಜ ಪಾಟೀಲ್ ಇಟಗಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
-ಶ್ರೀ ನಸೀರ್ ಅಹ್ಮದ್
-ಶ್ರೀ ಕೆ.ಎ.ತಿಪ್ಪೇಸ್ವಾಮಿ
-ಶ್ರೀ ಬಿ.ಸಿ.ಪಾಟೀಲ್(ಕೃಷಿ ಸಚಿವರು)
-ಶ್ರೀ ಅಲ್ಲಂ ವೀರಭದ್ರಪ್ಪ
-ಶ್ರೀ ಬಿ.ಎ.ಬಸವರಾಜು(ನಗರಾಭಿವೃದ್ಧಿ ಸಚಿವರು)
-ಶ್ರೀ ಮರಿತಿಬ್ಬೇಗೌಡ
-ಶ್ರೀ ಗೋವಿಂದರಾಜು
- ಶ್ರೀ ಪ್ರಕಾಶ್ ಕೆ.ರಾಥೋಡ್
-ಶ್ರೀ ನಿರಾಣಿ ಹಣಮಂತ್ ರುದ್ರಪ್ಪ

**10. ಪ್ರಕಟಣೆ**

**11. ನಿಯಮ 330ರ ಮೇರೆಗೆ ಚರ್ಚೆ**

**ಇ) 1995ರ ನಂತರ ಪ್ರಾರಂಭವಾದ ಅನುದಾನರಹಿತ ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವುದರ ಕುರಿತು.**

-ಶ್ರೀ ಅರುಣ ಶಹಾಪುರ
-ಶ್ರೀ ಮರಿತಿಬ್ಬೇಗೌಡ
-ಶ್ರೀ ಕೆ.ಟಿ.ಶ್ರೀಕಂಠೇಗೌಡ
-ಎಸ್.ವಿ.ಸಂಕನೂರ
-ಡಾ: ವೈ.ಎ.ನಾರಾಯಣಸ್ವಾಮಿ
-ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
-ಶ್ರೀ ಬಿ.ಸಿ.ನಾಗೇಶ್(ಪ್ರಾಥಮಿಕ ಮತ್ತುಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**ಈ) ಕಲ್ಯಾಣ ಕರ್ನಾಟಕ ವಿಭಾಗದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಮಕ್ಕಳ ಶಿಕ್ಷಕರ ಅನುಪಾತದಲ್ಲಾದ (ಪಿಟಿಆರ್) ತಾರತಮ್ಯ ಹೋಗಲಾಡಿಸುವ ಕುರಿತು.**

-ಶ್ರೀ ಶಶೀಲ್ ಜಿ.ನಮೋಶಿ
-ಶ್ರೀ ಬಿ.ಸಿ.ನಾಗೇಶ್(ಪ್ರಾಥಮಿಕ ಮತ್ತುಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**ಉ) ಮೈಸೂರು ನಗರದಲ್ಲಿ ಪದವಿ ಪೂರ್ವ ಮತ್ತು ಪದವಿ ತರಗತಿಗಳಲ್ಲಿ ಗ್ರಾಮೀಣ ಪ್ರದೇಶದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಅಗತ್ಯಕನುಗುಣವಾಗಿ ಹಿಂದುಳಿದ ವರ್ಗದ ವಸತಿ ನಿಲಯಗಳ ಕೊರತೆಗಳಿರುವುದರಿಂದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೊಂದರೆಯಾಗುತ್ತಿರುವ ಕುರಿತು.**

-ಶ್ರೀ ಮರಿತಿಬ್ಬೇಗೌಡ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಊ) ದೇವಸ್ಥಾನಗಳ ಅಭಿವೃದ್ಧಿಗಾಗಿ ದಾನದ ರೂಪದಲ್ಲಿ ಪಡೆಯಲಾಗುವ ಭೂಮಿಯನ್ನು ಅಕ್ರಮವಾಗಿ ಪರಭಾರೆ ಮಾಡುತ್ತಿರುವುದರಿಂದ ದೇವಸ್ಥಾನಗಳ ಪೂಜೆಗೆ ಬಹಳ ತೊಂದರೆಯಾಗುತ್ತಿದ್ದು, ದಾನವಾಗಿ ಪಡೆದ ದೇವಸ್ಥಾನಗಳ ಭೂಮಿಯನ್ನು ದೇವರ ಹೆಸರಿನಲ್ಲಿಯೇ ಖಾತೆ/ಪಹಣಿ ಮಾಡುವ ಕುರಿತು.**

-ಶ್ರೀ ಎನ್.ರವಿಕುಮಾರ್
-ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್ (ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರು)

**ಋ) ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆಗೆ ಹಣ ಬಿಡುಗಡೆಯಾಗಿದ್ದರೂ ಸಹ ಭೂಸ್ವಾಧೀನ ಪ್ರಕ್ರಿಯೆ ಹಾಗೂ ನೀರು ಶೇಖರಣ ಜಲಾಶಯಗಳ ಕಾಮಗಾರಿಗಳು ಪ್ರಾರಂಭವಾಗದೆ ಇರುವುದರಿಂದ ಎತ್ತಿನಹೊಳೆ ಯೋಜನೆ ಅನುಷ್ಠಾನದ ಕುರಿತು.**

-ಡಾ:ವೈ.ಎ.ನಾರಾಯಣಸ್ವಾಮಿ
-ಡಾ:ತೇಜಸ್ವಿನಿ ಗೌಡ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು) (ಜನಸಂಪನ್ಮೂಲ ಸಚಿವರ ಪರವಾಗಿ)
-ಶ್ರೀ ನಸೀರ್ ಅಹ್ಮದ್
-ಶ್ರೀ ಕೆ.ಎ.ತಿಪ್ಪೇಸ್ವಾಮಿ
-ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
-ಶ್ರೀ ಗೋವಿಂದರಾಜು
-ಶ್ರೀ ಚಿದಾನಂದ್ ಎಂ.ಗೌಡ
-ಶ್ರೀ ಮರಿತಿಬ್ಬೇಗೌಡ

**ಎ)ರಾಮನಗರ ತಾಲ್ಲೂಕಿನಲ್ಲಿ ಭೂ ಮಂಜೂರಾತಿ ಸಮಿತಿ ರಚನೆಗೊಂಡಾಗಿನಿಂದಲೂ ಒಂದು ಬಾರಿಯು ಸಭೆ ಸೇರದೆ ಇರುವುದರಿಂದ 2004ನೇ ಸಾಲಿನಿಂದಲೂ ಅರ್ಜಿಗಳು ವಿಲೇವಾರಿಯಾಗದೆ ಬಾಕಿ ಉಳಿದಿರುವುದಲ್ಲದೆ ಭೂ ಮಂಜೂರಾತಿ ಸಮಿತಿಯಿಂದ ಮಂಜೂರಾಗಿರುವ ಗೋಮಾಳ ಜಮೀನುಗಳಿಗೆ ಸಾಗುವಳಿ ಪತ್ರ ಸಹ ನೀಡದಿರುವುದರಿಂದ ತೀವ್ರ ತೊಂದರೆಯಾಗುತ್ತಿರುವ ಕುರಿತು.**

-ಶ್ರೀ ಸಿ.ಎಂ.ಲಿಂಗಪ್ಪ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು) (ಕಂದಾಯ ಸಚಿವರ ಪರವಾಗಿ)

**12. ಪ್ರಕಟಣೆ**

~~~~~~~~~~~

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~~~~~~~~~

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

1279/23-12-2021/10-40/bkp-gr

# ಕರ್ನಾಟಕ ವಿಧಾನ ಪರಿಷತ್ತು

**ಗುರುವಾರ, 23ನೇ ಡಿಸೆಂಬರ್ 2021**

**ಸದನವು ಬೆಳಗಾವಿಯ ಸುವರ್ಣಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 10 ಗಂಟೆ 42 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅವರು ಸಭಾಪೀಠದಲ್ಲಿ ಉಪಸ್ಥಿತರಿದ್ದರು**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 01. ಪ್ರಶ್ನೋತ್ತರಗಳು

## ಅ)ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಸಭಾಪತಿಯವರು:-** ಪ್ರಶ್ನೆ ಸಂಖ್ಯೆ 1216 ಮಾನ್ಯ ಸದಸ್ಯರುಗಳಾದ ಶ್ರೀ ಎಂ.ಎ.ಗೋಪಾಲ ಸ್ವಾಮಿಯವರು ಸದನದಲ್ಲಿ ಹಾಜರಿರುವುದಿಲ್ಲ; ಪ್ರಶ್ನೆ ಸಂಖ್ಯೆ 1176 ಶ್ರೀ ಎನ್.ರವಿಕುಮಾರ್ ಅವರು ಸಹ ಸದನದಲ್ಲಿ ಹಾಜರಿರುವುದಿಲ್ಲ.

ಶ್ರೀ ತಿಪ್ಪೇಸ್ವಾಮಿಯವರ ಪ್ರಶ್ನೆ ಸಂಖ್ಯೆ: 1142 ನ್ನು ಲೋಕಾಯುಕ್ತಕ್ಕೆ ವರ್ಗಾವಣೆ ಮಾಡಲಾಗಿದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಗಳೆ, ಇದನ್ನು ತಪ್ಪಾಗಿ ವರ್ಗಾವಣೆ ಮಾಡಿದ್ದಾರೆ, DPAR ಗೆ 75% ಮಾಹಿತಿ ಬರುತ್ತದೆ. ಏತಕ್ಕೆ ವರ್ಗಾವಣೆ ಮಾಡಬೇಕು? ರೂಲ್ ಹಾಗೆಯೇ ಇರುತ್ತದೆ. ಈ ಸುವರ್ಣಸೌಧಕ್ಕೆ ಲೋಕೋಪಯೋಗಿ ಇಲಾಖೆಯಿಂದ ಎಷ್ಟು ಖರ್ಚು ಮಾಡಿದ್ದೀರಿ, ಎಂದು ಕೇಳಿರುತ್ತೇನೆ. ಬೇರೆ ಇಲಾಖೆಗೆ ಏಕೆ ವರ್ಗಾವಣೆ ಮಾಡಬೇಕು? ಬೆಳಗಾವಿಯಲ್ಲಿಯನ ಸುವರ್ಣಸೌಧ ನಿರ್ಮಾಣಕ್ಕೆ ಎಷ್ಟು ಹಣ ಖರ್ಚಾಗಿದೆ ಎನ್ನುವ ಮಾಹಿತಿಯನ್ನು ಕೇಳಿದ್ದೇನೆ. ದಯಮಾಡಿ ತಾವು ಕಾರ್ಯದರ್ಶಿಗಳನ್ನು pullup ಮಾಡಿ, ಉತ್ತರ ಕೊಡಿಸಬೇಕು.

**ಸಭಾಪತಿಯವರು:-** ಕೂಡಲೆ ಉತ್ತರ ಕೊಡಿಸುವ ವ್ಯವಸ್ಥೆಯನ್ನು ಮಾಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ 1199**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಗಳೆ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ನೀಡಿದ್ದಾರೆ. ತಮ್ಮ ಉತ್ತರದಲ್ಲಿ ಕಾರಂಜಾ ಅಣೆಕಟ್ಟನ್ನು ಅಭಿವೃದ್ಧಿ ಪಡಿಸುವ ಯೋಜನೆಯು ಪರಿಶೀಲನೆಯಲ್ಲಿದೆ ಎನ್ನುವ ಉತ್ತರವನ್ನು ನೀಡಿದ್ದಾರೆ. ಈ 'ಪರಿಶೀಲನೆ' ಎನ್ನುವ ಪದವು ಬಹಳ ತೊಂದರೆಯನ್ನು ನೀಡುತ್ತದೆ. 1960-70ರಲ್ಲಿ ಪ್ರಾರಂಭ ಆಗಿರುವ ಕಾರಂಜಾ ಜಲಾಶಯಕ್ಕೆ ಅಂದಿಗೆ 80 ಕೋಟಿ ರೂಪಾಯಿಗಳ ಅಂದಾಜು ಇದ್ದದ್ದು, ಇಂದು 723 ಕೋಟಿ ರೂಪಾಯಿಗಳಾದರೂ ಸಹ ಮುಗಿದಿರುವುದಿಲ್ಲ. ಆದ್ದರಿಂದ ಈ ಪರಿಶೀಲನೆ ಹಂತದಲ್ಲಿದೆ ಎನ್ನುವ ಉತ್ತರ ನಮ್ಮ ಅನುಮಾನಕ್ಕೆ ಕಾರಣ ಆಗುತ್ತದೆ. ಏಕೆಂದರೆ, ಹೀಗೆ ಉತ್ತರ ಕೊಡುತ್ತಾ, ಒಂದು ವರ್ಷ ಕಳೆದು ಹೋಗಿದೆ. ಈ ಜಲಾಶಯದ ಅಭಿವೃದ್ಧಿಗೆ ಮಂಜೂರಾತಿಯನ್ನು ಸರ್ಕಾರ ನೀಡಬೇಕು. ಹಾಗೆಯೇ ಈ ಅಣೆಕಟ್ಟಿಗೆ ಖಾಯಂ ಭದ್ರತೆಯನ್ನು ಕೇಳಿದ್ದೆವು. ಅದಕ್ಕೆ ಈ ಭದ್ರತಾ ವ್ಯವಸ್ಥೆಯನ್ನು ಖಾಸಗಿಯವರಿಗೆ ನೀಡಲಾಗಿದೆ. ಇಲ್ಲಿ Private Security Agency ಯವರು, ಬೆಳಗ್ಗೆ 4 ಜನ, ರಾತ್ರಿ 4ರಂತೆ ಒಟ್ಟು 8 ಜನರು ಇದ್ದಾರೆ. ಈ ಕಾರಂಜಾ ಯೋಜನೆಯು 127 ಎಕರೆ ಪ್ರದೇಶದಲ್ಲಿದೆ. ಈ ಪ್ರದೇಶವನ್ನು ಇಷ್ಟು ಜನರಿಂದ ಸರಿಯಾಗಿ ರಕ್ಷಣೆ ಮಾಡಲು ಸಾಧ್ಯವಾಗುವುದಿಲ್ಲ. ಹಾಗಾಗಿ, ಖಾಯಂ ಭದ್ರತೆಯ ವಿಷಯವಾಗಿ ಮೈಸೂರಿಗೆ ಪ್ರಸ್ತಾವನೆ ಕಳುಹಿಸಲಾಗಿದೆ. ಅದರಂತೆ ಸರ್ಕಾರವೇ ಖಾಯಂ ಭದ್ರತೆಯ ನೇಮಕಾತಿ ಮಾಡಬೇಕು. ಏಕೆಂದರೆ, ಈ ಪ್ರದೇಶಕ್ಕೆ ಬಹಳ ಪ್ರವಾಸಿಗರು ಬರುತ್ತಿರುತ್ತಾರೆ. ಅವರು ಇಲ್ಲಿರುವ ಲೋಕಲ್ ಜನಗಳು ಇವರಿಗೆ ಎದುರಿಸಿ ಒಳಗೆ ಹೋಗುತ್ತಾರೆ. ಅನೈತಿಕ ಚಟುವಟಿಕೆಗಳನ್ನು ನಡೆಸುತ್ತಾರೆ. ಹಾಗಾಗಿ, ಈ ಜಲಾಶಯಕ್ಕೆ ಒಂದು ಖಾಯಂ ಸೆಕ್ಯೂರಿಟಿಯನ್ನು ಒದಗಿಸಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಶ್ರೀ ಅರವಿಂದ ಕುಮಾರ್ ಅರಳಿಯವರು ಮೈಸೂರಿನ ಬೃಂದಾವನದ ಮಾದರಿಯಲ್ಲಿ ಅಲ್ಲಿ ಉದ್ಯಾನವನ ಆಗಬೇಕೆನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ಈಗಾಗಲೇ ಸರ್ಕಾರ ಕ್ರಮ ಕೈಗೊಂಡಿದೆ. ಸುಮಾರು 30 ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಒಂದು ಉದ್ಯಾನವನವನ್ನು ಅಭಿವೃದ್ಧಿಪಡಿಸುವುದಕ್ಕೆ ಪರಿಶೀಲನೆ ಹಂತದಲ್ಲಿದೆ. ಪರಿಶೀಲನೆ ಎನ್ನುವುದನ್ನು ಅರ್ಥ ಬೇರೆ ಮಾಡುವುದು ಬೇಡ. ಪರಿಶೀಲನೆ ಎಂದರೆ ಎಲ್ಲಾ ಆಯಾಮಗಳಿಂದಲೂ ಸಹ ಪರಿಶೀಲನೆಯನ್ನು ಮಾಡುತ್ತೇವೆ. ಈಗ ನಾವು ಒಂದು ಸಲ ಗಾರ್ಡನ್ ಮಾಡಿದರೆ ಅದು ಮುಗಿಯುವುದಿಲ್ಲ, ಅದರ ನಿರ್ವಹಣೆಯನ್ನು ಸಹ ನಾವು ಮಾಡಬೇಕಾಗುತ್ತದೆ. ತನ್ನ ಕಾಲ ಮೇಲೆ ಆ ಉದ್ಯಾನವನ ನಿಲ್ಲಬೇಕು. ಇವತ್ತು ಮೈಸೂರಿನ ಬೃಂದಾವನ ತನ್ನ ಕಾಲ ಮೇಲೆ ತಾನು ನಿಲ್ಲತಕ್ಕ ಸ್ಥಿತಿಯಲ್ಲಿದೆ. ಆ ರೀತಿಯಲ್ಲಿ ಪ್ರವಾಸಿಗರು ಬರಬೇಕು, ಬರತಕ್ಕ ಪ್ರವಾಸಿಗರಿಂದ ಸ್ವಲ್ಪಮಟ್ಟಿಗೆ ಹಣ ಸಂಗ್ರಹ ಆಗಬೇಕು. ಅಲ್ಲಿಂದ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬರುವ ಆದಾಯದಿಂದಲೇ ಅಲ್ಲಿನ ನಿರ್ವಹಣೆ ಆಗಬೇಕೆಂದು ಇರುತ್ತದೆ. ಆದ್ದರಿಂದ ಎಲ್ಲಾ ಆಯಾಮಗಳಿಂದಲೂ ನಾವು ಪರಿಶೀಲನೆಯನ್ನು ಮಾಡುತ್ತಿದ್ದೇವೆ.

ಇನ್ನೂ ಎರಡನೆಯದಾಗಿ, ಸೆಕ್ಯೂರಿಟಿಯ ವಿಚಾರವಾಗಿ ಮಾನ್ಯ ಸದಸ್ಯರು ಆತಂಕವನ್ನು ವ್ಯಕ್ತ ಮಾಡಿದ್ದಾರೆ, ಮೈಸೂರಿನ ಕೆ.ಆರ್.ಎಸ್., ಡ್ಯಾಮಿಗೆ ಮತ್ತು ಆಲಮಟ್ಟಿ ಡ್ಯಾಮಿಗೆ ಕೊಟ್ಟಿರುವ ರೀತಿಯಲ್ಲಿ ಸೆಕ್ಯೂರಿಟಿಯನ್ನು ನೀಡಬೇಕೆಂದು ಕೇಳಿದ್ದಾರೆ. ಕಾರಂಜಾ ಜಲಾಶಯದಲ್ಲಿ, ಪೊಲೀಸ್ ಇಲಾಖೆಯವರು ಅನುಮೋದನೆ ಮಾಡಿದಂತಹ ಸೆಕ್ಯೂರಿಟಿ ಏಜೆನ್ಸಿಯವರಿಗೆ ನಾವು ವಹಿಸಿಕೊಟ್ಟಿದ್ದೇವೆ. ಏಕೆಂದರೆ, ಅವರು ಎಲ್ಲಾ ಆಯಾಮಗಳಿಂದಲೂ ಸಹ ನೋಡಿರುತ್ತಾರೆ. ಅದರಲ್ಲಿ ಭದ್ರತೆಗೆ ಬೇಕಾದಂತಹ ತರಬೇತಿಯನ್ನು ಹೊಂದಿರುವ ವ್ಯಕ್ತಿಗಳು ಇದ್ದರೋ ಇಲ್ಲವೋ, ವೆಪನ್ಸ್ ಇವೆಯೋ ಇಲ್ಲವೋ ವೆಪನ್ಸ್ ಉಪಯೋಗ ಮಾಡುವವರಿಗೆ ಲೈಸೆನ್ಸ್ ಇದೆಯೋ ಇಲ್ಲವೋ ಇದೆಲ್ಲವನ್ನು ಪರಿಶೀಲನೆ ಮಾಡಿ ಸೆಕ್ಯೂರಿಟಿ ಏಜೆನ್ಸಿಯವರನ್ನು ಫಿಕ್ಸ್ ಮಾಡಲಾಗಿದೆ. ಮಾನ್ಯ ಸದಸ್ಯರಿಗೆ ಯಾವುದೇ ಆತಂಕ ಬೇಡ. ಆ ಕಾರಂಜಾ ಅಣೆಕಟ್ಟೆ ಸೆಕ್ಯೂರಿಟಿಗೆ 8-10 ಜನರು ಸಾಕು. ಮೈಸೂರಿನ ಕೆ.ಆರ್.ಎಸ್., ಡ್ಯಾಮಿಗೆ ಮತ್ತು ಆಲಮಟ್ಟಿ ಡ್ಯಾಮಿಗೆ ಕೊಟ್ಟಿರುವ ರೀತಿಯಲ್ಲಿ ಸೆಕ್ಯೂರಿಟಿಯನ್ನು ನೀಡಬೇಕಾದ ಅಗತ್ಯವಿಲ್ಲ. ಆದರೂ ಸಹ ಸೆಕ್ಯೂರಿಟಿಯನ್ನು ಇನ್ನೂ ಭದ್ರ ಪಡಿಸುವುದಕ್ಕೆ ವ್ಯವಸ್ಥೆ ಮಾಡಲಾಗುವುದು. ಅಲ್ಲಿ ಅನೈತಿಕ ಚಟುವಟಿಕೆ ನಡೆಯುತ್ತಿದೆ ಎಂದು ಮಾನ್ಯ ಸದಸ್ಯರು ಹೇಳಿದರು. ಅಲ್ಲಿ ಅನೈತಿಕ ಚಟುವಟಿಕೆಗಳು ನಡೆಯದಂತೆ ನಿರ್ಬಂಧವನ್ನು ಹಾಕಲಿಕ್ಕೆ ಸಂಬಂಧ ಪಟ್ಟ ಪೊಲೀಸ್ ಅಧಿಕಾರಿಗಳಿಗೆ ಮತ್ತು ಅಲ್ಲಿನ ಎಸ್.ಪಿ., ಯವರಿಗೆ ಸೂಚನೆಯನ್ನು ನೀಡುತ್ತೇನೆ. ಅದರ ಬಗ್ಗೆ ಮಾನ್ಯ ಸದಸ್ಯರಿಗೆ ಆತಂಕ ಬೇಡ. ಖಂಡಿತವಾಗಿ ಅಲ್ಲಿನ ಸೆಕ್ಯೂರಿಟಿಯನ್ನು ಬಲಪಡಿಸುತ್ತೇನೆ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಗಳೆ, ನನ್ನ ಆತಂಕ ಏನೆಂದರೆ ಈ ಸೆಕ್ಯೂರಿಟಿಯ ಜವಾಬ್ದಾರಿಯನ್ನು ಟೆಂಡರ್ ಮೂಲಕ ಲೋಕಲ್‌ರವರಿಗೆ ನೀಡಿದ್ದಾರೆ. ಈ ಲೋಕಲ್‌ನವರು ಯಾವುದೇ ತರಬೇತಿಯನ್ನು ಹೊಂದಿರುವುದಿಲ್ಲ. ಅವರು ಲೋಕಲ್ ಆಗಿರುವ ಕಾರಣ ಸುತ್ತಮುತ್ತಲ ಹಳ್ಳಿಯವರೆಲ್ಲರೂ ಸಹ ಪರಿಚಯಸ್ಥರಿರುತ್ತಾರೆ. ಆದ್ದರಿಂದ, ಜನರು ಅವರಿಗೆ ಹೆದರಿಸಿ ಒಳಗೆ ಹೋಗುತ್ತಾರೆ. ಅವರಿಗೆ ಯಾವುದೇ ಮರ್ಯಾದೆ ಕೊಡುವುದಿಲ್ಲ. ಅವರ ಬಗ್ಗೆ ಜನರಿಗೆ ಹೆದರಿಕೆ ಸಹ ಇಲ್ಲ. ಆದ್ದರಿಂದಲೇ ಸರ್ಕಾರದ ಮಟ್ಟದಲ್ಲಿ ಖಾಯಂ ಸೆಕ್ಯೂರಿಟಿಯನ್ನು ನೀಡಬೇಕೆಂದು ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಗೋವಿಂದ ಎಂ ಕಾರಜೋಳ:-**ಮಾನ್ಯ ಸಭಾಪತಿಗಳೇ, ಆ ಭಾಗದಲ್ಲಿ ನಿವೃತ್ತ ಸೈನಿಕರು ಇರುತ್ತಾರೆ. ಅಂತಹವರನ್ನು ಹುಡುಕಿ ನೇಮಕ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಲಾಗುವುದು.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ 1218**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆಯನೂರು ಮಂಜುನಾಥ**:- ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು ನನಗೆ ಒದಗಿಸಿರುವ ಉತ್ತರದಲ್ಲಿ ನಾನು ವೇತನದ ಬಾಕಿಯನ್ನು ಪಾವತಿಸಲಾಗಿದೆಯೇ ಎನ್ನುವುದಕ್ಕೆ ವಿವರವನ್ನು ಕೇಳಿದ್ದೆ. ಅದಕ್ಕೆ ಸರಿಯಾದ ಉತ್ತರವನ್ನು ಕೊಟ್ಟಿಲ್ಲ. ಜಿಲ್ಲಾ ಖಜಾನೆಯವರು ಈ ಭತ್ಯೆಯನ್ನು ಯಾವಾಗಿನಿಂದ ಕೊಡುತ್ತಾರೆ ಮತ್ತು ಇದನ್ನು ಕೊಡಲಿಕ್ಕೆ ಈಗಾಗಲೇ ಶುರು ಮಾಡಿದ್ದಾರೆಯೇ? ಎನ್ನುವ ಮಾಹಿತಿಯನ್ನು ಒದಗಿಸಬೇಕೆಂದು ನಾನು ಕೇಳಿದ್ದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು, ಗೃಹ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಹಿರಿಯ ಸದಸ್ಯರಾದ ಶ್ರೀ ಆಯನೂರು ಮಂಜುನಾಥ್‌ರವರು ಕೇಳಿದಂತಹ ಪ್ರಶ್ನೆ ಏನೆಂದರೆ ಪೋಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಸರ್ಕಾರದ ಸುತ್ತೋಲೆ ಪ್ರಕಾರ ವೇತನ ಬಾಕಿಯನ್ನು ಸೆಳೆಯಲು ನಿರ್ದಿಷ್ಟ ಅನುಮೋದನೆಯನ್ನು ನೀಡಿ, ಬಾಕಿ ಇರುವ ವೇತನವನ್ನು ಪಾವತಿಸಲು ಸರ್ಕಾರದ ಮಂಜೂರಾತಿ ಆದೇಶವನ್ನು ಹೊರಡಿಸಲಾಗಿದೆಯೇ ಎನ್ನುವ ಪ್ರಶ್ನೆಗೆ ಸ್ಪಷ್ಟವಾದ ಉತ್ತರವನ್ನು ಕೊಡಲಾಗಿದೆ. ಪೋಲೀಸ್ ಇಲಾಖೆಯಲ್ಲಿ ಮುಂಬಡ್ತಿ ವೇತನ ಬಾಕಿ, ಕಾಲಬದ್ಧ ವೇತನ ಬಡ್ತಿ, ವಾರ್ಷಿಕ ವೇತನ ಬಡ್ತಿ ಈ ಎಲ್ಲದಕ್ಕೂ ಸಹ ತಂತ್ರಾಂಶದಲ್ಲಿ ವೇತನವನ್ನು ಪಾವತಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಈ ತಿಂಗಳ ಅಂತ್ಯದೊಳಗೆ ಪೂರ್ಣ ಪ್ರಮಾಣದ ಹಣವನ್ನು ಬಿಡುಗಡೆ ಮಾಡುತ್ತೇವೆ ಎನ್ನುವ ಮಾತನ್ನು ಸ್ಪಷ್ಟಪಡಿಸಿದ್ದಾರೆ. ಯಾವುದೇ ಗೊಂದಲವಿಲ್ಲ ಈ ತಿಂಗಳ ಅಂತ್ಯದೊಳಗೆ ಪೂರ್ಣ ಪ್ರಮಾಣದ ಹಣವನ್ನು ಬಿಡುಗಡೆ ಮಾಡುತ್ತೇವೆ. ನಾಳೆ ಸಾಧ್ಯವಾದರೆ ಉತ್ತರವನ್ನು ಕೊಡುತ್ತೇವೆ. ಇಲ್ಲವಾದರೆ ಅವರಿಗೆ ಉತ್ತರವನ್ನು ಕಳುಹಿಸಿಕೊಡುತ್ತೇವೆ.

(ಮುಂದು)

**(1280) 23.12.2021 10.50 ಎಸ್‌ವಿ-ಎಂಡಿ** **(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಮುಂದಿನ ಪ್ರಶ್ನೆ ಸಂಖ್ಯೆ:1171 ಶ್ರೀ ಪ್ರಕಾಶ್ ಕೆ.ರಾಥೋಡ್ ಅವರದ್ದು. ಅವರು ಈಗ ಸದನದಲ್ಲಿ ಇಲ್ಲ. ಮುಂದಿನ ಪ್ರಶ್ನೆ ಸಂಖ್ಯೆ:1220 ಶ್ರೀ ಪಿ.ಆರ್.ರಮೇಶ್ ಅವರದ್ದಾಗಿದ್ದು, ಮುಖ್ಯಮಂತ್ರಿಗಳು ಬಂದ ನಂತರ ಅದನ್ನುತೆಗೆದುಕೊಳ್ಳುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1231**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅ.ದೇವೇಗೌಡ:-** ಮಾನ್ಯ ಸಭಾಪತಿಯವರೇ, 2014ರಿಂದ ಈ ಯೋಜನೆಯನ್ನು ಜಾರಿಗೊಳಿಸುತ್ತೇವೆಂದು ಹೇಳಿ ರೂ.324.67 ಕೋಟಿಗಳ ಮೊತ್ತಕ್ಕೆ ಕರಾರು ವಹಿಸಲಾಗಿದೆ ಎಂದು ಹೇಳಿದ್ದಾರೆ. ನಾಡಪ್ರಭು ಕೆಂಪೇಗೌಡರು ತಮ್ಮ ಆಶಯದಂತೆ ಸುಮಾರು ಕೆರೆಕಟ್ಟೆಗಳನ್ನು ಕಟ್ಟಿಸಿದ್ದು, ಇಂದು ಎಲ್ಲವೂ ಬತ್ತಿ ಹೋಗುವ ಪರಿಸ್ಥಿತಿಗೆ ಬಂದಿವೆ. ದಯಮಾಡಿ ಅವರ ಆಶಯದಂತೆ ತಕ್ಷಣ ಮಾಗಡಿ ತಾಲ್ಲೂಕಿನ ಕೆರೆಗಳಿಗೆ ನೀರು ತುಂಬಿಸುವ ಕಾರ್ಯವನ್ನು ಕೈಗೊಳ್ಳಬೇಕೆಂದು ತಮ್ಮ ಮೂಲಕ ಜಲಸಂಪನ್ಮೂಲ ಸಚಿವರನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಕೆರೆಗಳಿಗೆ ನೀರು ತುಂಬಿಸುವಂತಹ ಕೆಲಸ ಪ್ರಾರಂಭ ಆಗಿದೆ. ಶೇ.50 ರಷ್ಟು physical and financial progress ಆಗಿದೆ. ಮಾಗಡಿಯ 66 ಕೆರೆಗಳು ಮತ್ತು ಕುಣಿಗಲ್‌ನ 17 ಕೆರೆಗಳನ್ನು ತುಂಬಿಸುವಂತಹ ಕಾರ್ಯ ಪ್ರಗತಿಯಲ್ಲಿದೆ. ಡಿಸೆಂಬರ್ 2022ರ ವೇಳೆಗೆ ಕೆಲಸವನ್ನು ಮುಗಿಸಿ ನೀರು ಹರಿಸುವಂತಹ ಕೆಲಸ ಮಾಡುತ್ತೇವೆ.

**ಶ್ರೀ ಅ.ದೇವೇಗೌಡ:-** ಮಾನ್ಯ ಸಭಾಪತಿಯವರೇ, ಚುನಾವಣೆ ಬಂದಾಗ ಮಾತ್ರ ಹೋಗಿ ಉದ್ಘಾಟನೆ ಮಾಡುವುದು, ಪೂಜೆಗಳನ್ನು ಮಾಡುವಂತಹ ಕೆಲಸವನ್ನು ಮಾಡಲಾಗುತ್ತದೆ. ಪೈಪ್‌ಗಳನ್ನು ರಸ್ತೆಗಳಲ್ಲಿಯೇ ಬಿಡಲಾಗಿದೆಯೇ ವಿನಃ ಯಾವುದೇ ಕೆಲಸ ಕಾರ್ಯಗಳನ್ನು ಪ್ರಾರಂಭ ಮಾಡಿರುವುದಿಲ್ಲ. ದಿನಾಂಕ 28.02.2014ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿತ್ತು ಎಂದು ಹೇಳಿದ್ದಾರೆ. ಆದರೆ ಯಾವುದೇ ಕೆಲಸ ಆಗಿರುವುದಿಲ್ಲ. ಆದ್ದರಿಂದ ಮುಂದಿನ ಚುನಾವಣೆ ಬರುವುದರೊಳಗಾಗಿ ನೀರು ತುಂಬಿಸುವಂತಹ ಕೆಲಸವನ್ನು ಮಾಡಬೇಕೆಂದು ತಮ್ಮ ಮುಖಾಂತರ ಜಲಸಂಪನ್ಮೂಲ ಸಚಿವರನ್ನು ನಾನು ಪ್ರಾರ್ಥಿಸುತ್ತೇನೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಬಹುಶಃ ಮಾನ್ಯ ಶಾಸಕರು ಪೂರ್ಣ ಪ್ರಮಾಣದಲ್ಲಿ ಸ್ಥಳ ಪರಿಶೀಲನೆ ಮಾಡಿರುವುದಿಲ್ಲ ಎಂದು ನನ್ನ ಭಾವನೆ. ಈಗಾಗಲೇ ನಾವು ಪಂಪ್ ಹೌಸ್ ಕೆಲಸವನ್ನು ಮುಗಿಸಿದ್ದೇವೆ. 66 ಕೆ.ವಿ. ಸ್ಟೇಷನ್ ಅನ್ನು ಮುಗಿಸಿದ್ದೇವೆ. Raising Main ಅಂದರೆ ಪೈಪ್‌ಗಳನ್ನು ರಸ್ತೆಯಲ್ಲಿ ಬಿಟ್ಟಿದ್ದಾರೆ ಎಂದು ಹೇಳಿದ ಕೆಲಸವೂ ಸಹ ಪ್ರಗತಿಯಲ್ಲಿದೆ. ಬಹಳ ಮುಖ್ಯವಾದುದು Pump House, Head Works ಮಾಡುವುದು. ಆ ಕೆಲಸ ಈಗಾಗಲೇ ಪೂರ್ಣಗೊಂಡಿದೆ. 110 ಎಕರೆ ಜಮೀನು ಬೇಕು. ಅದರಲ್ಲಿ 24 ಎಕರೆ ನೇರ ಖರೀದಿಗೆ ರೈತರು ಒಪ್ಪಿದ್ದರಿಂದ ನೇರ ಖರೀದಿ ಮಾಡಿದ್ದೇವೆ. Land Acquisition Act ಪ್ರಕಾರ 19(1) ಅಧಿಸೂಚನೆಯಾಗಿದೆ. 30 ಎಕರೆಗೆ 11(1) ಅಧಿಸೂಚನೆಯಾಗಿದೆ. ಇದನ್ನು ನಾನು ಬಹಳ ಖಡಾಖಂಡಿತವಾಗಿ ಹೇಳುತ್ತೇನೆ. ಡಿಸೆಂಬರ್ 2022ರ ಒಳಗಾಗಿ ಅಂದರೆ ಇನ್ನು ಒಂದು ವರ್ಷದಲ್ಲಿ ಮುಗಿಸಲಾಗುತ್ತದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ 1171**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಕೊಟ್ಟಿದ್ದಾರೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಭೂಸ್ವಾಧೀನ ಹಾಗೂ ಪುನರ್ವಸತಿ, ಪುನರ್ ನಿರ್ಮಾಣಕ್ಕೆ ಪ್ರಸ್ತುತ ಸಾಲಿನಲ್ಲಿ ಎಷ್ಟು ಅನುದಾನವನ್ನು ನೀಡಲು ನಿರ್ಧರಿಸಲಾಗಿದೆ ಎಂಬ ಪ್ರಶ್ನೆಯನ್ನು ನಾನು ಕೇಳಿದ್ದೆನು. ಉತ್ತರದಲ್ಲಿ ಭೂಸ್ವಾಧೀನ (ಬಂಡವಾಳ ಅಡಿಯಲ್ಲಿ) ರೂ.730 ಕೋಟಿ, ಭೂಸ್ವಾಧೀನ (ಎಸ್.ಸಿ.ಪಿ. ಅಡಿಯಲ್ಲಿ) ರೂ.160 ಕೋಟಿ, ಭೂಸ್ವಾಧೀನ (ಎಸ್.ಸಿ.ಪಿ. ಅಡಿಯಲ್ಲಿ) ರೂ.80 ಕೋಟಿ ಎಂದು ಕೊಟ್ಟಿದ್ದಾರೆ.

ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿದೆ? ಈಗಾಗಲೇ ನಾವು ಡಿಸೆಂಬರ್ ತಿಂಗಳ ಅಂತ್ಯದಲ್ಲಿದ್ದೇವೆ. ಇಲ್ಲಿಯವರೆವಿಗೂ ಎಷ್ಟು ಖರ್ಚಾಗಿದೆ. ಯಾವ ಪ್ರಕ್ರಿಯೆಯಲ್ಲಿ ಎಷ್ಟಿದೆ? ಇದು ನನ್ನ ಮೊದಲನೆಯ ಪ್ರಶ್ನೆ.

ಎರಡನೆಯದಾಗಿ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಮಾಡಲು ಇರುವ ತಕರಾರುಗಳೇನು ಎಂದು ಕೇಳಿದಾಗ ಗೆಜೆಟ್ ಅಧಿಸೂಚನೆಯು ಅವಶ್ಯವಿದ್ದು, ಅದಾದ ನಂತರ ಮಾಡುತ್ತೇವೆಂದು ಹೇಳಿದ್ದಾರೆ. ಈ ಅಧಿಸೂಚನೆಯು ನ್ಯಾಯಾಧಿಕರಣದಲ್ಲಿದ್ದು, ಅದಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ. ಈಗಾಗಲೇ ಅದು ಡಿಸೆಂಬರ್‌ನಲ್ಲಿ hearing ಆಗಬೇಕಾಗಿತ್ತು. ಮುಂದೆ ಹೋಗಿದೆ. ತೆಲಂಗಾಣ ಮತ್ತು ಆಂಧ್ರ ಸರ್ಕಾರ ನೀಡಿರುವ ತಕರಾರು ಅರ್ಜಿಗಳಲ್ಲಿ ಯಾವುದೇ ಹುರುಳಿಲ್ಲ. ಅದನ್ನು ನ್ಯಾಯಾಧಿಕರಣದಲ್ಲಿ ಬೇಗ ಇತ್ಯರ್ಥ ಮಾಡಿ ಗೆಜೆಟ್ ಅಧಿಸೂಚನೆಯಾಯಿತು ಎಂದರೆ ರಾಷ್ಟ್ರೀಯ ಯೋಜನೆಗೆ ಪ್ರಸ್ತಾವನೆಯನ್ನು ಕಳುಹಿಸುವುದಾಗಿ ಸರ್ಕಾರ ಈಗಾಗಲೇ ಹೇಳಿದೆ. ಆ ಪ್ರಸ್ತಾವನೆಯನ್ನು ಸಲ್ಲಿಸುವುದಕ್ಕೆ ಸಚಿವರೂ ಬದ್ಧರಿದ್ದಾರೆ.

ತಮಗೆ ತಿಳಿದಿರುವಂತೆ ರಾಷ್ಟ್ರೀಯ ಯೋಜನೆಯನ್ನು ಮಾಡುವಾಗ ಸಾಕಷ್ಟು ಮಾರ್ಗಸೂಚಿಗಳಿವೆ. ಆ ಮಾರ್ಗಸೂಚಿಗಳಿಗನುಸಾರವಾಗಿ ನಾವು ಅದನ್ನು ಹಾಕಿದರೆ ಖಂಡಿತವಾಗಿ ಇಂದಿನ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರದಿಂದ ಶೇ.60 ರಷ್ಟು ಅನುದಾನ ಸಿಗುವ ಎಲ್ಲಾ ಸಾಧ್ಯತೆಗಳಿವೆ. ನಾನು ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ ಈ ತಕರಾರು ಅರ್ಜಿಯನ್ನು ವಜಾ ಮಾಡಿಸಿದರೆ ರಾಷ್ಟ್ರೀಯ ಯೋಜನೆ ಅನುಷ್ಠಾನಗೊಳಿಸಬಹುದು. 2009ರಲ್ಲಿ ರಾಷ್ಟ್ರೀಯ ಯೋಜನೆ ಅನುಷ್ಠಾನಕ್ಕೆ ಬಂದಾಗ ಶೇ.90ರಷ್ಟು ಅನುದಾನ ಕೇಂದ್ರದಿಂದ ನೆರವು ಬರುತ್ತಿತ್ತು. 2015ರಲ್ಲಿ ಎನ್.ಡಿ.ಎ. ಸರ್ಕಾರ ಬಂದ ಮೇಲೆ ಅದನ್ನು ಶೇ.60ಕ್ಕೆ ಇಳಿಸಿದ್ದಾರೆ. ಇದು ಇಡೀ ಏಷ್ಯಾ ಖಂಡದಲ್ಲಿಯೇ ದೊಡ್ಡದಾದ ಅಣೆಕಟ್ಟು. ರಾಷ್ಟ್ರೀಯ ಯೋಜನೆ ಮಾಡುವ ಮಾರ್ಗಸೂಚಿಯಲ್ಲಿಯೂ ಇದ್ದು, as a special case ಶೇ.90

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರಷ್ಟು ಕೇಂದ್ರದ ನೆರವನ್ನು ತೆಗೆದುಕೊಳ್ಳಬಹುದು. ಈಗಿನಿಂದಲೇ ಸರ್ಕಾರವು ಎಲ್ಲಾ ಸಂಸದರ ಜೊತೆಯಲ್ಲಿ ಸೇರಿ ಕೇಂದ್ರ ಸರ್ಕಾರಕ್ಕೆ ಒತ್ತಡವನ್ನು ಹಾಕಿದರೆ ಶೇ.90 ಅನುದಾನ ಬರುವ ಎಲ್ಲಾ ಸಾಧ್ಯತೆಗಳಿವೆ. ಸರ್ಕಾರ ಅದನ್ನು ಮಾಡಬೇಕು.

ಇನ್ನೂ ಮೂರನೆಯ ಹಂತಕ್ಕೆ 51148.94 ಕೋಟಿ ಪರಿಷ್ಕೃತ ಅಂದಾಜು ಮೊತ್ತವನ್ನು ಈಗಾಗಲೇ ಕೇಂದ್ರ ಜಲ ಆಯೋಗಕ್ಕೆ 12.11.2020ರಂದು ಸಲ್ಲಿಸಲಾಗಿದೆ. ಇದು ಇನ್ನೂ ಹೆಚ್ಚಿಗೆ ಆಗಬಹುದು ಎಂದು ನನ್ನ ಭಾವನೆ. ಅದರ ಬಗ್ಗೆ ಸಚಿವರು ಸ್ವಲ್ಪ ಸ್ಪಷ್ಟೀಕರಣ ನೀಡಿದರೆ ಒಳ್ಳೆಯದು.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಕಾಶ್ ರಾಥೋಡ್ ಅವರು ಭೂಸ್ವಾಧೀನಕ್ಕಾಗಿ ಆಯವ್ಯಯದಲ್ಲಿ ಮೀಸಲಿಡಲಾದ ರೂ.970 ಕೋಟಿಯ ಲೆಕ್ಕವನ್ನು ಮಾತ್ರ ಹೇಳಿದ್ದಾರೆ. ರಾಜ್ಯದ ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಬಸವರಾಜ ಬೊಮ್ಮಾಯಿಯವರು ಅಧಿಕಾರ ವಹಿಸಿಕೊಂಡ ಮೇಲೆ ಹೆಚ್ಚುವರಿಯಾಗಿ ರೂ.2500 ಕೋಟಿಗಳನ್ನು R & R (Rehabilitation and Resettlement) works ಗೆ ಕೊಟ್ಟಿದ್ದಾರೆ. ಕಾಂಗ್ರೆಸ್ ಸರ್ಕಾರವಿದ್ದಾಗ ಯಾವತ್ತೂ ಕೊಟ್ಟಿರುವುದಿಲ್ಲ. ಅವರು ಶೇ.90, ಶೇ.60ರ ಬಗ್ಗೆ ಹೇಳಿದರು. ನಾನು ಮಾನ್ಯ ಪ್ರಕಾಶ್ ಅವರಿಗೆ ಒಂದು ಅಂಶವನ್ನು ನೆನಪು ಮಾಡಿಕೊಡಲಿಕ್ಕೆ ಬಯಸುತ್ತೇನೆ. ಏಕೆಂದರೆ ಅವರ ತಂದೆಯವರೂ ನಮಗೆ ಗುರುತಿದ್ದಂಥವರು. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ 60 ವರ್ಷ ಕಾಂಗ್ರೆಸ್ ಪಕ್ಷವೇ ಆಡಳಿತ ಮಾಡಿದೆ. ಕೇಂದ್ರದಲ್ಲಿಯೂ ಅವರದ್ದೇ ಸರ್ಕಾರ, ಮುಂಬೈ ಪ್ರಾಂತ್ಯದಲ್ಲಿಯೂ ಅವರದ್ದೇ ಸರ್ಕಾರ, ಮೈಸೂರು ಪ್ರಾಂತ್ಯದಲ್ಲಿಯೂ ಅವರದ್ದೇ ಸರ್ಕಾರ. ಅಂದು 1963-64ರಲ್ಲಿ ಆಲಮಟ್ಟಿ ಯೋಜನಾ ವೆಚ್ಚ ರೂ.58.20 ಲಕ್ಷ ಇತ್ತು. ದೊಡ್ಡ ಮನಸ್ಸು ಮಾಡಿ ಕೊಟ್ಟಿದ್ದಿದ್ದರೆ ಅಣೆಕಟ್ಟು ಮೊದಲೇ ಆಗಿ ಹೋಗುತ್ತಿತ್ತು. 50 ವರ್ಷದ ಹಿಂದೆಯೇ ನೀರು ಬರುತ್ತಿತ್ತು.

**(ಈ ಹಂತದಲ್ಲಿ ಮಾನ್ಯ ಪ್ರಕಾಶ್ ರಾಥೋಡ್ ಅವರು ಮಾತನಾಡಲು ಎದ್ದುನಿಂತರು)**

ಕೇಳಿ ಮಾನ್ಯ ಪ್ರಕಾಶ್‌ರವರೇ, ಇನ್ನೂ ನಾನು ಉತ್ತರ ಹೇಳುವಾಗ ನೀವೆಷ್ಟು ತಾಸು ಕೃಷ್ಣೆ ಕಣ್ಣೀರು ಹರಿಸಿದ್ದೀರೋ, ಅಷ್ಟು ತಾಸು ಉತ್ತರ ಹೇಳುತ್ತೇನೆ. ಕಾಳಜಿ ಮಾಡಬೇಡಿ. ಮಾನ್ಯ ಎಸ್.ಆರ್.ಪಾಟೀಲರು ಎರಡು ತಾಸು ಮೂವತ್ತೇಳು ನಿಮಿಷಗಳ ಕಾಲ ಮಾತನಾಡಿದ್ದಾರೆ. ಈಗ ತಾವು ಒಂದು valid point ಅನ್ನು raise ಮಾಡಿದಿರಿ. ರೂ.51148 ಕೋಟಿ ಗಳ DPR (Detailed Project Report) ಅನ್ನು ಕಳುಹಿಸಲಾಗಿದ್ದು, ಅದು ಹೆಚ್ಚಾಗಬಹುದು ಎಂದು ಹೇಳಿದಿರಿ. ಅದು 2017ನೇ ಇಸವಿಯಲ್ಲಿ schedule of rate ಮೇಲೆ DPR ಮಾಡಿರುವಂಥದ್ದು. ಕೇಂದ್ರ ಸರ್ಕಾರಕ್ಕೆ ಮಾನ್ಯ ಯಡಿಯೂರಪ್ಪನವರು ಇದ್ದಾಗ 2020ರಲ್ಲಿ DPR

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಪರಿಶೀಲನೆಗಾಗಿ CWC (Central Water Commission) ಗೆ ಕಳುಹಿಸಲಾಗಿದೆ. ಅದು ನಿಮಗೆ ಗೊತ್ತಿರಲಿ. ಅದನ್ನು ನಾವು follow-up ಮಾಡುತ್ತಿದ್ದೇವೆ.

(ಮುಂದು)

**(1281) 23-12-2021 (11.00) ಕೆಜಿ – ಎಂಡಿ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಗೋವಿಂದ ಎಂ.ಕಾರಜೋಳ (ಮುಂದು):-**

ಮಾನ್ಯ ಸದಸ್ಯರಿಗೆ ನಾವು ಕೇಂದ್ರ ಸರ್ಕಾರದಲ್ಲಿ ಪರಿಶೀಲನೆ ಮಾಡಬೇಕು ಎನ್ನುವಂತಹ ಆತಂಕ ಇದೆ. ಈಗಾಗಲೇ, ಆಗಸ್ಟ ತಿಂಗಳಿನಲ್ಲಿ ಮಾನ್ಯ ಮುಖ್ಯಮಂತ್ರಿಯವರು ಮತ್ತು ನಾನು ಸೇರಿ ಕೆಂದ್ರ ಜಲ ಸಂಪನ್ಮೂಲ ಸಚಿವರಿಗೆ ಮತ್ತು ಕೇಂದ್ರ ಜಲಶಕ್ತಿ ಮಂತ್ರಾಲಯದ ಅಧಿಕಾರಿಗಳೊಂದಿಗೆ ಹಾಗೂ legal team ನವರ ಜೊತೆಯಲ್ಲಿ ಈಗಾಗಲೇ ಚರ್ಚೆ ಮಾಡಿದ್ದೇವೆ. ಆ ಬಗ್ಗೆ ಕಾಗದಗಳು ಇವೆ. ಅದಲ್ಲದೇ, ಇದೇ ತಿಂಗಳ 4ನೇ ತಾರೀಖಿನಂದು gazette notification ಆಗಬೇಕು ಎನ್ನುವುದರ ಬಗ್ಗೆ ನಾನು ಸಹ ಪತ್ರ ಬರೆದಿದ್ದೇನೆ. Gazette notification ಅಷ್ಟೇ ಅಲ್ಲ, ಈ ಯೋಜನೆ National Project ಆಗಬೇಕೆಂದು ಒತ್ತಾಯ ಮಾಡಿದ್ದೇನೆ. ಇದರ ಬಗ್ಗೆ ಮೂರು ಬಾರಿ ದೆಹಲಿಗೆ ಹೋಗಿ ಕೇಂದ್ರ ಸರ್ಕಾರದ ಜೊತೆಗೆ ಈ ಕೆಲಸವನ್ನು ಮಾಡಿದ್ದೇವೆ. ಮಾನ್ಯ ಮುಖ್ಯ ಮಂತ್ರಿಯವರು ನಾಲ್ಕು ಬಾರಿ ಮತ್ತು ನಾನು ಮೂರು ಬಾರಿ ಈ ಕೆಲಸವನ್ನು ಮಾಡಿದ್ದೇವೆ. ಮಾನ್ಯ ಸದಸ್ಯರು National project ಆಗಬೇಕೆಂಬ ಕಳಕಳಿಯನ್ನು ವ್ಯಕ್ತ ಪಡಿಸಿದ್ದಾರೆ. ಅಲ್ಲದೇ, 60% ಯೋಜನಾ ವೆಚ್ಚದ ಹಣ ಕೇಂದ್ರ ಸರ್ಕಾರದಿಂದ grant ಆಗಿ ಬರುತ್ತದೆ, ಇದರಿಂದ burden ಕಡಿಮೆಯಾಗುತ್ತದೆ, ಈ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರಕ್ಕೆ ಅನುಕೂಲವಾಗುತ್ತದೆಂದು ಹೇಳಿದ್ದಾರೆ. ಅದನ್ನು ನಾನು ಖಂಡಿತವಾಗಿ ಒಪ್ಪಿಕೊಳ್ಳುತ್ತೇನೆ. ಆದರೆ, ಕಾನೂನಾತ್ಮಕ ಸಮಸ್ಯೆಗಳಿರುವುದರಿಂದ gazette notification ಆಗಿಲ್ಲ.

ಮಾನ್ಯ ಸಭಾಪತಿಯವರೇ, ಕಾನೂನಾತ್ಮಕ ಸಮಸ್ಯೆಗಳು ಏನೆಂದರೆ, ಯಾವುದೇ ಒಂದು ಯೋಜನೆಯನ್ನು National Project ಆಗಿ ಘೋಷಣೆ ಮಾಡುವುದಕ್ಕಿಂತ ಮುಂಚೆ ಯಾವುದೇ ವ್ಯಾಜ್ಯಗಳು ಇರಬಾರದು ಎಂದು ಇದೆ. ಈಗ ನಮ್ಮ ವಿರುದ್ಧ ಮೂರು ರಾಜ್ಯಗಳ ವ್ಯಾಜ್ಯ Supreme Court ನಲ್ಲಿದೆ. ಮೊದಲನೆಯದಾಗಿ, ವ್ಯಾಜ್ಯಗಳು ಬಗೆಹರಿದಿಲ್ಲ. ಎರಡನೆಯದಾಗಿ, gazette notification ಮಾಡಬಾರದೆಂದು ಸಹ ವ್ಯಾಜ್ಯ ನ್ಯಾಯಾಲಯದಲ್ಲಿದೆ. ನಾವು ಅದು ಮುಗಿಯುವವರೆಗೂ ಕಾಯಬೇಕಾಗುತ್ತದೆ. ಕೇಸ್‌ಗಳನ್ನು ಬೇಗ ಮುಗಿಸುವ ಸಲುವಾಗಿ, ನಾವೀಗ ಅದನ್ನು ಬಹಳಷ್ಟು follow-up ಮಾಡುತ್ತಿದ್ದೇವೆ. ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಬಹಳ ಸೂಕ್ಷ್ಮವಾಗಿ ಹೇಳುತ್ತೇನೆ. ಮುಂದಿನ ತಿಂಗಳು ಅಂದರೆ, ಜನವರಿ, 10ನೇ ತಾರೀಖಿಗೆ Supreme Court ನಲ್ಲಿ ಕೇಸ್ ನಿಗಧಿಯಾಗಿದೆ. ಹಾಗಾಗಿ,

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅದಕ್ಕಿಂತಲೂ ಹೆಚ್ಚಿಗೆ ಮಾತನಾಡುವಂತಹ ಅವಶ್ಯಕತೆ ಇಲ್ಲ. ನಾವು ಈ ಯೋಜನೆ ಸಲುವಾಗಿ ಬೆನ್ನು ಹತ್ತಿದ್ದೇವೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ಯೋಜನೆ 1964 ರಲ್ಲಿ ಪ್ರಾರಂಭವಾಗಿದೆ, ಆಗ ಕಾಂಗ್ರೆಸ್ ಅಧಿಕಾರದಲ್ಲಿತ್ತು. ಆಗ ಅವರು ಮಾಡಬಹುದಾಗಿತ್ತು ಎಂದು ಹೇಳಿದ್ದಾರೆ. ಏನೇ ಪ್ರಗತಿಯಾಗಿದ್ದರೂ ಸಹ, ಅದು ಕಾಂಗ್ರೆಸ್ ಸರ್ಕಾರ ಇದ್ದಾಗ ಆಗಿದೆ ಎಂದು ಮಾನ್ಯ ಸಚಿವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಹಿಂದೆ ನಮ್ಮ ಸರ್ಕಾರ ಇದ್ದಂತಹ ಸಂದರ್ಭಗಳಲ್ಲಿ ನಾವು ಮಾಡಿದ್ದಂತಹ ವಾಗ್ದಾನಗಳನ್ನು ಪರಿಪೂರ್ಣವಾಗಿ ಮಾಡಿದ್ದೇವೆ. ಪ್ರತಿ ವರ್ಷ ನಾವು Irrigation Projects ಗೆ 10 ಸಾವಿರ ಕೋಟಿ ರೂಪಾಯಿಗಳನ್ನು ಮೀಸಲು ಇಡುತ್ತೇವೆಂದು ಹೇಳಿದ್ದೇವು. ಅದೇ ಪ್ರಕಾರವಾಗಿ ಒಟ್ಟು 54 ಸಾವಿರ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದ್ದೇವೆ. ಅದರಲ್ಲೂ ಕೃಷ್ಣಾಗೆ ಬಹುದೊಡ್ಡ ಪಾಲು ಬಂದಿದೆ. ಮಾನ್ಯ ಸಚಿವರ ಬಳಿ ಆ ಬಗ್ಗೆ ಮಾಹಿತಿ ಇರುತ್ತದೆ. ನಾನು ಇದನ್ನು ಇವತ್ತು ರಾಜಕೀಯ ಮಾಡುವುದಕ್ಕೆ ಹೇಳುತ್ತಿಲ್ಲ. ಕಾಂಗ್ರೆಸ್ ಸರ್ಕಾರ, ಜೆಡಿಎಸ್ ಸರ್ಕಾರ ಮತ್ತು ಅವರ ಸರ್ಕಾರವು ಮಾಡಿದೆ. ನಾನು ಇದನ್ನು ಇಲ್ಲವೆಂದು ಹೇಳುವುದಿಲ್ಲ. ಆದರೆ, ನಮ್ಮ ಭಾಗದ ಜನರು UKP (Upper Krishna Project) 3ನೇ ಹಂತ ಏನಿದೆ, ಅದು ಮುಗಿದರೆ, ಇದು ಮಾನ್ಯ ಸಚಿವರಿಗೆ ಗೊತ್ತಿದೆ. ವಿಶೇಷವಾಗಿ, ನಮ್ಮ ಬಿಜಾಪುರ ಜಿಲ್ಲೆ ಇದಕ್ಕೆ ಭೂಮಿಯನ್ನು ತ್ಯಾಗ ಮಾಡಿದೆ. ನಮಗೆ 3ನೇ ಹಂತದಲ್ಲಿ 90 ಟಿ.ಎಂ.ಸಿ ನೀರಿನ ಅವಕಾಶ ಬರುತ್ತದೆ. ನಮಗೆ ಕುಡಿಯುವ ನೀರಿನ ಅವಕಾಶ ತಲುಪುತ್ತದೆ. ಆಂಧ್ರ ಮತ್ತು ತೆಲಂಗಣ ರಾಜ್ಯದವರ ತಕರಾರು ಅರ್ಜಿಯಲ್ಲಿ ಯಾವುದೇ ಉರುಳಿಲ್ಲ. ಆಂಧ್ರ ಮತ್ತು ತೆಲಂಗಣ ರಾಜ್ಯದವರು ಮಾಡಿರುವಂತಹ ತಕರಾರು ಅರ್ಜಿ ಅವರವರ dispute ನಲ್ಲಿದೆ. ಅದಕ್ಕೆ ಆದಷ್ಟು ಬೇಗ ಈ ತಕರಾರು ಅರ್ಜಿಯನ್ನು ವಜಾ ಮಾಡಿಸಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ. ಆ ಮೇಲೆ ಅದು gazette notification ಆದ ತಕ್ಷಣ ಮುಂದೆ ಅದರ ಕಾರ್ಯಕ್ರಮವನ್ನು ಮಾಡಬಹುದು.

ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ಯೋಜನೆಗೆ 2500 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದೆ ಎಂದು ಹೇಳಿದ್ದಾರೆ. ಆದರೆ, ಉತ್ತರದಲ್ಲಿ 970 ಕೋಟಿ ರೂಪಾಯಿಗಳು ಎಂದು ತಿಳಿಸಿದ್ದಾರೆ. ಈಗಾಗಲೇ ನಾವು ಡಿಸೆಂಬರ್ ತಿಂಗಳಿನಲ್ಲಿದ್ದೇವೆ. ಇದಕ್ಕೆ 2500 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದರೂ ಸಹ, ಆ ಹಣವನ್ನು ಯಾವಾಗ ಖರ್ಚು ಮಾಡುತ್ತಾರೆ? ಕೇವಲ 970 ಕೋಟಿ ರೂಪಾಯಿಗಳು ಎಂದು ತಿಳಿಸಿದ್ದಾರೆ. ಆದರೆ, 54 ಸಾವಿರ ಕೋಟಿ ರೂಪಾಯಿಗಳನ್ನು ಪುನರ್‌ವಸತಿಗೆ ಮತ್ತು ಈ ಯೋಜನೆಗೆಂದು ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ, ಅದಕ್ಕೆ ನಾನು ಹಂತ ಹಂತವಾಗಿ ಪುನರ್‌ವಸತಿ ಬಗ್ಗೆ ಮಾತ್ರ ಕೇಳಿದ್ದೇನೆ. ಮಾನ್ಯ ಸಚಿವರು ಇದಕ್ಕೆ ಉತ್ತರ ಹೇಳುವಾಗ ಹೇಳಲಿ. ಆದರೆ, ಇದಕ್ಕೆ ಮೀಸಲಟ್ಟಿರುವಂತಹ ಹಣ ಬಹಳ ಕಡಿಮೆ ಎಂದು ಭಾವಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೇ, ಎರಡನೇಯದಾಗಿ, ರಾಷ್ಟ್ರೀಯ ಯೋಜನೆಯನ್ನು ಮಾಡಬೇಕಾದರೆ, inter-state dispute ಇರಬಾರದೆಂದು ಮಾನ್ಯ ಸಚಿವರು ಹೇಳಿದ್ದಾರೆ. “Inter-state projects which are dragging on, due to non-resolution of inter-state issues relating to sharing of cost, rehabilitation, aspects of power production etc. including river inter-linking projects.” ಇದು ಮಾರ್ಗ ಸೂಚಿಯಲ್ಲಿದೆ. ಇದು criteria for selection of National Projects. ಇದು ಅಡ್ಡಿಬಾರಬಾರದು ಎಂದು ನನ್ನ ಭಾವನೆ. ಮಾನ್ಯ ಸಚಿವರು ಈ ಮಾರ್ಗಸೂಚಿಯನ್ನು ನೋಡಿದರೆ, ಖಂಡಿತವಾಗಿ ಗೊತ್ತಾಗುತ್ತದೆ. ಏಕೆಂದರೆ, ನಾನು ನಿನ್ನೆ ದಿವಸ ಮಾತನಾಡುವಂತಹ ಸಂದರ್ಭದಲ್ಲಿ 16 ರಾಷ್ಟ್ರೀಯ ಯೋಜನೆಗಳನ್ನು ಮಾಡಿದ್ದಾರೆಂದ ಹೇಳದ್ದೇನೆ. ಕೆಲವು ರಾಜ್ಯಗಳಲ್ಲಿ 2-3 ಯೋಜನಗಳು ಆಗಿವೆ. Bhadra Canal ಗೆ ರಾಷ್ಟ್ರೀಯ ಯೋಜನೆ ಮಾಡಬೇಕೆಂದು ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. ಅದು ಮಂಜೂರಾಗಿಲ್ಲ. ಆದರೆ, ಆಲಮಟ್ಟಿ UKP (Upper Krishna Project) ಅತಿ ದೊಡ್ಡ ಜಲಾಶಯ ಆಗಿರುವುದರಿಂದ ಇದಕ್ಕೆ ಆದ್ಯತೆಯನ್ನು ಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡುತ್ತೇನೆ. ಇದರ ಬಗ್ಗೆ ಸಭೆಗಳನ್ನು ನಡೆಸಿದ್ದಾರೆ. ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಮಾಡಿದ್ದಾರೆ, ಮಾನ್ಯ ಮುಖ್ಯ ಮಂತ್ರಿಯವರು ಕೇಂದ್ರ ಸಚಿವರ ಜೊತೆಗೆ ಮಾತನಾಡಿದ್ದಾರೆ. ಅದನ್ನೆಲ್ಲಾ ಮಾಡಿದ್ದಾರೆ. ಒಳ್ಳೆಯದು. ಆದರೆ, ನಮಗೆ ಒಂದು ಫಲಿಂತಾಶ ಬೇಕು. ಮಾನ್ಯ ಸಚಿವರು ದಯವಿಟ್ಟು ಇದನ್ನು ಬೇಗ ಮಾಡಬೇಕೆಂದು ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಗೋವಿಂದ ಎಂ.ಕಾರಜೋಳ :-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಶ್ನೆಯನ್ನು ಬಹಳ ಉದ್ದವಾಗಿ ಕೇಳಿದ್ದಾರೆ ಹಾಗೂ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ವಿರೋಧ ಪಕ್ಷದ ನಾಯಕರೇ, 2013ರ ನಡೆದ ಚುನಾವಣೆಯ ಸಂದರ್ಭದಲ್ಲಿನ ಕಾಂಗ್ರೆಸ್ ಪ್ರಣಾಳಿಕೆಯ ಪ್ರತಿಯನ್ನು ತಂದಿದ್ದೇನೆ. ಇದನ್ನು ಓದುತ್ತೇನೆ. “ಕರ್ನಾಟಕ ಕಾಂಗ್ರೆಸ್ ಪಕ್ಷವು ಜನಜಾಗೃತಿಗಾಗಿ ತುಂಗಭದ್ರದಿಂದ ಕೂಡಲಸಂಗಮದವರೆಗೆ ದಿನಾಂಕ 07-01-2013 ರಿಂದ 14-01-2013ರವರೆಗೆ ಪಾದಯಾತ್ರೆಯನ್ನು ಮಾಡುತ್ತಾರೆ. ಇದನ್ನು ಇಷ್ಟಕ್ಕೆ ನಿಲ್ಲಿಸುತ್ತೇನೆ. ಏಕೆಂದರೆ, ಇದು ಬಹಳ ಇದೆ. ಇಲ್ಲಿ ಅವಶ್ಯವಿರುವಷ್ಟು ಮಾತ್ರ ಓದುತ್ತೇನೆ. ಮಾನ್ಯ ಸದಸ್ಯರು 10 ಸಾವಿರ ಕೋಟಿ ರೂಪಾಯಿಗಳ ಬಗ್ಗೆ ಹೇಳಿದ್ದಾರೆ. ತುಂಗಭದ್ರಾ ಎಂದರೆ, ಹೊಸಪೇಟೆ. ಹೊಸಪೇಟೆಯಲ್ಲಿಯೇ ತುಂಗಭದ್ರಾ ಇದೆ. ಅದಕ್ಕೆ ಬಿಜಾಪುರ ಭಾಷೆಯಲ್ಲಿ ಹೊಸಪೇಟೆಯಿಂದ ಕೊಡಲಸಂಗಮ ಎಂದು ಹೇಳೋಣ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೇ, 142 ಕೀಲೋಮೀಟರ್.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಆಯಿತು. 142 ಕೀಲೋಮೀಟರ್. ಅವರು ತೂಕವನ್ನು ಕಡಿಮೆ ಮಾಡಿಕೊಂಡರು. ಆದರೆ, ನಮ್ಮ ರಾಜ್ಯದ ಜನರ ಬಾರವನ್ನು ಕಡಿಮೆ ಮಾಡಲಿಲ್ಲ. ಶ್ರೀ ಎಸ್.ಆರ್.ಪಾಟೀಲ್‌ರವರು ಸದನದಲ್ಲಿದ್ದಾಗ, ನಾವು ಬಹಳ ಪ್ರೀತಿಯಿಂದ ಮಾತನಾಡಬೇಕಾಗುತ್ತದೆ. ಅದಕ್ಕಾಗಿ ಹೇಳುತ್ತಿದ್ದೇನೆ. ಈಗ ಓದುವುದು ಬಹಳ ಮುಖ್ಯವಾಗಿದೆ. ಇದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಬೇಕು.

**ಶ್ರೀ ಪ್ರಕಾಶ್ ಕೆ. ರಾಥೋಡ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅದನ್ನು ಓದಿದ ನಂತರ ಅದಕ್ಕೆ ಉತ್ತರ ಕೊಡುವುದಕ್ಕೆ ನನಗೆ ಒಂದು ಅವಕಾಶ ಕೊಡಿ.

**ಸಭಾಪತಿಯವರು:-** ರಾಥೋಡ್‌ರವರೇ, ಸಚಿವರು ಉತ್ತರ ಕೊಡುತ್ತಾರೆ. ತಾವು ಕುಳಿತುಕೊಳ್ಳಿ.

**ಶ್ರೀ ಗೋವಿಂದ ಎಂ.ಕಾರಜೋಳ :-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ಅವರು ಹೇಳುವುದನ್ನು ಬಹಳ ಶಾಂತ ರೀತಿಯಿಂದ ಕೇಳಿರುತ್ತೇನೆ. ಅದನ್ನು ಬಹಳ sportive ಆಗಿ ತೆಗೆದುಕೊಂಡಿರುತ್ತೇನೆ. ಅವರು ಸಹ ಅಷ್ಟೇ sportive ಆಗಿ ತೆಗೆದುಕೊಳ್ಳಬೇಕು.

**ಶ್ರೀ ಪ್ರಕಾಶ್ ಕೆ.ರಾಥೋಡ್**:- ಮಾನ್ಯ ಸಭಾಪತಿಯವರೇ, ನಾನು ಅದಕ್ಕೂ ಸಹ ಹೇಳುತ್ತೇನೆ.

**ಶ್ರೀ ಗೋವಿಂದ ಎಂ.ಕಾರಜೋಳ :-** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ನಡೆ ಕೃಷ್ಣಾ ಕಡೆಗೆ ಎಂದು ದಿನಾಂಕ 07-01-2013 ರಿಂದ 14-01-2013ರವರೆಗೆ ಪಾದಯಾತ್ರೆ ಮಾಡಿ ಕೂಡಲಸಂಗಮದಲ್ಲಿ ಸಮಾವೇಶವಾಗುತ್ತದೆ. ಇವರ ಮುಂದಿನ ಚುನಾವಣೆಯ ಪ್ರಾಣಳಿಕೆಯ ಒಂದು ಭಾಗವನ್ನು ಇಲ್ಲಿ ಓದುತ್ತೇನೆ. “ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ ನ್ಯಾಯಮೂರ್ತಿ ಶ್ರೀ ಬ್ರಿಜೇಶ್‌ಕುಮಾರ್‌ರವರ ಆಯೋಗವು ಕರ್ನಾಟಕದ ಪಾಲಿಗೆ ಹಂಚಿಕೆ ಮಾಡಿರುವ 177 ಟಿ.ಎಂ.ಸಿ ನೀರನ್ನು ಪೂರ್ಣವಾಗಿ ಬಳಸಿಕೊಳ್ಳಲು ಯಾವುದೇ ದೂರದೃಷ್ಟಿ ಕಾರ್ಯಕ್ರಮಗಳನ್ನು ಸರ್ಕಾರ ರೂಪಿಸಿಲ್ಲ. ಅಂದರೆ, ಅವತ್ತಿನ ಬಿ.ಜೆ.ಪಿ., ಸರ್ಕಾರ. ಈ ಭಾಗದ ರೈತರ ಮೂಗಿಗೆ ತುಪ್ಪ ಸವರುವ ಕೆಲಸ ಮಾಡುತ್ತಿದ್ದಾರೆ. ರಾಜ್ಯಕ್ಕೆ ಹಂಚಿಕೆಯಾಗಿರುವ ನೀರನ್ನು ಬಳಸಿಕೊಳ್ಳದೇ ರೈತರಿಗೆ ದ್ರೋಹ ಮಾಡಿದ್ದಾರೆ. ಇದರಿಂದ, ಪ್ರಗತಿಯಲ್ಲಿ ಕರ್ನಾಟಕ ಹಿಂದೆ ಬಿಳುವಂತೆ ಆಗಿದೆ. ತಮಗೆ ಆಗಿರುವ ಅನ್ಯಾಯವನ್ನು ಜನರ ಗಮನಕ್ಕೆ ತರುವುದು ವಿರೋಧ ಪಕ್ಷವಾದ ಕಾಂಗ್ರೆಸ್ ಪಕ್ಷದ ಜವಾಬ್ದಾರಿ ಎಂದು ಭಾವಿಸಿ “ಕಾಂಗ್ರೆಸ್ ನಡೆ ಕೃಷ್ಣಾ ಕಡೆಗೆ” ಎಂಬ ಹೆಸರಿನ ಪಾದಯಾತ್ರೆಯನ್ನು ನಡೆಸುತ್ತಿದ್ದೇವೆಂದು ಹೇಳಿದ್ದಾರೆ”.

(ಮುಂದು)

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(1282) 23-12-2021 (11.10) ಎಂವಿ-ಎಕೆ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಗೋವಿಂದ ಎಂ. ಕಾರಜೋಳ (ಮುಂದು):-**

ಅವರು ಪೇಪರ್‌ಗಳಿಗೆ ಜಾಹೀರಾತನ್ನು ಸಹ ನೀಡಿದ್ದಾರೆ. ಅವರು ಮುಂದುವರೆದು ಹೇಳುತ್ತಾರೆ, ಇದು ಕೇವಲ ನಮ್ಮ ಭರವಸೆಗಳು ಅಲ್ಲ. ಇದು ನಮ್ಮ ಪ್ರತಿಜ್ಞೆ. ಅಂದು ಅವರು ತಮ್ಮ ಭಾಷಣದಲ್ಲಿ ಹೇಳಿದಂತಹ ಶಬ್ದವೆಂದರೆ, 'ಕೂಡಲ ಸಂಗಮನಾಥನ ಸಾಕ್ಷಿಯಾಗಿ' ಎಂದು ಹೇಳುತ್ತಾರೆ. ನಿಮ್ಮ ಸಹಕಾರವಿದ್ದರೆ ಕರ್ನಾಟಕವನ್ನು 'ಹಸಿರು ಕರ್ನಾಟಕ' ಮಾಡುವ ಬದ್ಧತೆಯನ್ನು ಪ್ರದರ್ಶಿಸುತ್ತೇವೆ. ನಿಮ್ಮ ಸಹಕಾರವಿದ್ದರೆ ಎಂದರೆ, ಮುಂದೆ 2013ರಲ್ಲಿ ಚುನಾವಣೆ ಬಂತು. ಆಗ ನಮ್ಮನ್ನು ಆರಿಸಿ ಕಳುಹಿಸಿದರೆ ಎಂದು ಹೇಳಿದರು. ಕರ್ನಾಟಕದ ಜನ ಬಹಳ ಪ್ರಬುದ್ಧತೆಯುಳ್ಳವರು. ನಾನು ನಮ್ಮ ಅಖಂಡ ಬಿಜಾಪುರ ಜಿಲ್ಲೆಯಲ್ಲಿ 2015ರ ಚುನಾವಣೆಯಲ್ಲಿ ನಾನು ಒಬ್ಬ ಮಾತ್ರ ಗೆದ್ದು ಬಂದೆ. ಉಳಿದ ಅಭ್ಯರ್ಥಿಗಳನ್ನು ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲರು ಸೋಲಿಸಿಬಿಟ್ಟರು. ನಮ್ಮ ಪಕ್ಷದ ಎಲ್ಲಾ ಅಭ್ಯರ್ಥಿಗಳು ಸೋತುಬಿಟ್ಟರು. ಆದರೆ, ನಾನು ಒಬ್ಬ ಮಾತ್ರ ಗೆದ್ದು ಬಂದೆ. ಅದು ತುಂಬಾ ತಿಣುಕಾಡಿ ಸುಮಾರು ಏಳು ಸಾವಿರ ಮತಗಳಿಂದ ಗೆದ್ದು ಬಂದಿದ್ದೇನೆ. ಅದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಗೊತ್ತಿದೆ. ಆಗ ಅವರು ಏನು ಹೇಳಿದರು ಎಂದರೆ, ಹಸಿರು ಕರ್ನಾಟಕ ಮಾಡುವ ಬದ್ಧತೆಯನ್ನು ಪ್ರದರ್ಶಿಸುತ್ತೇವೆ. ನೀರಾವರಿ ಯೋಜನೆಗೆ ವರ್ಷಕ್ಕೆ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಮೂಲಕ ನಮ್ಮ ಸರ್ಕಾರದ ಅವಧಿಯಲ್ಲಿ ಸುಮಾರು ಐವತ್ತು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದರು. ಆದರೆ, ಅವರು ಖರ್ಚು ಮಾಡಿದ್ದು ಎಷ್ಟು? ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರು ಭಯಂಕರವಾಗಿ ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡರು.

**ಡಾ|| ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದು ಐದು ವರ್ಷಕ್ಕೆ

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಹೌದು, ಅವರು ಕೃಷ್ಣಾ ಮೇಲ್ದಂಡೆ ಯೋಜನೆಗೆ ಐದು ವರ್ಷಕ್ಕೆ 7,728 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದರು. ಡಾ||ವೈ.ಎ.ನಾರಾಯಣಸ್ವಾಮಿಯವರೇ, ಎಲ್ಲಾ ಅಂಕಿ-ಅಂಶಗಳು ನನ್ನ ತಲೆಯಲ್ಲೇ ಇರುತ್ತವೆ. ತಾವು ತಲೆ ಕೆಡಿಸಿಕೊಳ್ಳಬೇಡಿ.

**ಸಭಾಪತಿಯವರು:-** ಡಾ||ವೈ.ಎ.ನಾರಾಯಣಸ್ವಾಮಿಯವರೇ ತಾವು ಮಾನ್ಯ ಮಂತ್ರಿಗಳಿಗೆ ತೊಂದರೆ ಮಾಡಬೇಡಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಅವರು ಕೃಷ್ಣಾ ಮೇಲ್ದಂಡೆ ಯೋಜನೆಗೆ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಜಾಗದಲ್ಲಿ, ಐದು ವರ್ಷದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಮತ್ತು ಮಾಜಿ ಮಂತ್ರಿಗಳಾದ ಮಾನ್ಯ ಎಂ.ಬಿ.ಪಾಟೀಲರು ಮಾನ್ಯ ವಿರೋಧ ಪಕ್ಷ ನಾಯಕರ ಜಿಲ್ಲೆಯವರು. ಆದರೆ, ಅವರು ಖರ್ಚು ಮಾಡಿದ ಹಣ ಎಷ್ಟು ಎಂದರೆ, 7,728 ಕೋಟಿ ರೂಪಾಯಿಗಳು ಮಾತ್ರ.

**ಸಭಾಪತಿಯವರು:-** ಅವರಿಗೆ ನಮ್ಮ ಜಿಲ್ಲೆಯವರು ಎಂದು ಹೇಳಿ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಹೆಚ್ಚಿನ ಹಣವನ್ನು ಬಬಲೇಶ್ವರ ಕ್ಷೇತ್ರಕ್ಕೆ ಖರ್ಚು ಮಾಡಿದ್ದಾರೆ. ನಾನು ಏನಾದರೂ ಸುಳ್ಳು ಹೇಳುತ್ತಿದ್ದರೆ, ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರು ಇದನ್ನು dispute ಮಾಡಬಹುದು.

**ಡಾ:ಕೆ.ಗೋವಿಂದರಾಜ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅದು ನಿಮ್ಮ ಜಿಲ್ಲೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತನ್ನು ಮುಗಿಸಿಬಿಡುತ್ತೇನೆ.

**ಸಭಾಪತಿಯವರು:-** ಮಾನ್ಯ ಗೋವಿಂದ ಎಂ. ಕಾರಜೋಳರವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾವು ಮಾನ್ಯ ಸಚಿವರ ವಿಚಾರಗಳನ್ನು ಒಪ್ಪುತ್ತೇವೆ. ಈಗ ಏನು ಪ್ರಶ್ನೆ ಬಂದಿದೆ ಎಂದರೆ, ಅದು ನಮ್ಮ Election Manifesto. ನಾವು ಏನೂ dispute ಮಾಡುವುದಿಲ್ಲ. It is a printed matter. ನಾವು ಅದನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ ಮತ್ತು ನಾವು ಏನನ್ನು ಹೇಳಿದ್ದೇವೆ ಅದರಂತೆ ನಡೆದುಕೊಳ್ಳಬೇಕಾಗುತ್ತದೆ. ರಾಜಕಾರಣದಲ್ಲಿ ನಡೆ ಮತ್ತು ನುಡಿ ಒಂದೇ ರೀತಿ ಇರಬೇಕು ಎಂಬುದರಲ್ಲಿ ನಾವು ಮೊದಲಿಗರು. ಇಲ್ಲಿ ಏನಾಗಿದೆ ಎಂದರೆ, ನಾವು ಹೊಸಪೇಟೆಯಿಂದ ಅಂದರೆ ತುಂಗಭದ್ರಾ ನದಿಯಿಂದ ಕೂಡಲ ಸಂಗಮದವರೆಗೂ 142 ಕಿಲೋಮೀಟರ್ ಪಾದಯಾತ್ರೆ ಮಾಡಿ, ಅಂದು ಮುಕ್ತಾಯದ ಕೊನೆ ದಿನದ ಸಂದರ್ಭದಲ್ಲಿ ಅವತ್ತು ಮೊದಲು ಇದ್ದಂತಹ ಒಕ್ಕಲಿಗ ಸಮುದಾಯದ ಸ್ವಾಮೀಜಿಯವರಾದ ಶ್ರೀ ಶ್ರೀ ಶ್ರೀ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಬಾಲಗಂಗಾಧರನಾಥ ಸ್ವಾಮಿಜೀಯವರು ನಿಧನರಾದರು. ಆ ಸಂದರ್ಭದಲ್ಲಿ ಸಭೆ ನಡೆಸಬಾರದು ಎಂದು ನಿರ್ಣಯ ಮಾಡಿ, ಏನು ಮಾಡಿದೆವು ಎಂದರೆ, ನಾವು ಅಧಿಕಾರಕ್ಕೆ ಬಂದರೆ ನೀರಾವರಿಗೆ ಯೋಜನೆಗಳಿಗಾಗಿ ಪ್ರತಿ ವರ್ಷ ಹತ್ತು ಸಾವಿರ ಕೋಟಿ ರೂಪಾಯಿಗಳಂತೆ, ಐದು ವರ್ಷದಲ್ಲಿ ಐವತ್ತು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದೇವೆ. ನಾನು ಸತ್ಯವಾಗಿ ಹೇಳುತ್ತೇನೆ. ಆಗ ನಾನು ಪಕ್ಕದಲ್ಲೇ ಇದ್ದೆ. ಆಗ ನಾನು ಮೇಲ್ಮನೆಯ ವಿರೋಧ ಪಕ್ಷದ ನಾಯಕನಾಗಿದ್ದೆ. ಮಾನ್ಯ ಸಿದ್ದರಾಮಯ್ಯನವರು ಕೆಳಮನೆಯ ವಿರೋಧ ಪಕ್ಷದ ನಾಯಕರಾಗಿದ್ದರು. ಡಾ||ಜಿ.ಪರಮೇಶ್ವರ್‌ರವರು ಕೆ.ಪಿ.ಸಿ.ಸಿ ಅಧ್ಯಕ್ಷರಾಗಿದ್ದರು. ಆಗ ಅವರು ನೇರವಾಗಿ ಒಂದೆರಡು ವಾಕ್ಯಗಳನ್ನು ಮಾತನಾಡಿ, ಅಂದಿನ ಸಭೆಯನ್ನು ಮುಗಿಸಿ, ಬೆಂಗಳೂರಿಗೆ ಬರುವಂತಹ ಪ್ರಸಂಗ ಬಂತು. ಆಗ ನಾವು ಅಧಿಕಾರಕ್ಕೆ ಬಂದರೆ, ಐದು ವರ್ಷದಲ್ಲಿ ನೀರಾವರಿ ಯೋಜನೆಗಳಿಗೆ ಐವತ್ತು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದಂತೆ, ನಾವು ನೀರಾವರಿ ಯೋಜನೆಗಳಿಗೆ ಸುಮಾರು ಐವತ್ತೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆವು. ಮಾನ್ಯ ಸಚಿವರು ಹೇಳಿರುವುದು ಕೃಷ್ಣಾ ಮೇಲ್ದಂಡೆ ಯೋಜನೆಗೆ ಇರಬಹುದು. ಅದನ್ನು ನಾನು ಒಪ್ಪುತ್ತೇನೆ. ನಾವು ಅಧಿಕಾರಕ್ಕೆ ಬಂದರೆ ಪ್ರತಿ ವರ್ಷ ಕೇವಲ ಕೃಷ್ಣಾ ಮೇಲ್ದಂಡೆ ಯೋಜನೆಗೆ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿಲ್ಲ. ನಾವು ಹೇಳಿರುವುದು ನೀರಾವರಿ ಯೋಜನೆಗಳಿಗೆ ಎಂದು. ಅದನ್ನು ಮಾನ್ಯ ಸಚಿವರು ಸಹ ಓದಿದ್ದಾರೆ. ಪ್ರತಿ ವರ್ಷ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದಂತೆ, ಅದರ ಪ್ರಕಾರ ನಡೆದುಕೊಂಡು ಐವತ್ತೂರು ಸಾವಿರ ಕೋಟಿ ರೂಪಾಯಿ it is the actual money spent. ಅದು ಇರಬಹುದು. ಕೃಷ್ಣಾ ಮೇಲ್ದಂಡೆ ಯೋಜನೆಗೆ 7,728 ಕೋಟಿ ಎಂದು ಹೇಳಿದ್ದಾರೆ. ಅದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಆ ಅಂಕಿ-ಸಂಖ್ಯೆಗಳನ್ನು ತಿರುಚುವುದಕ್ಕೆ ಆಗುವುದಿಲ್ಲ. ಆದರೆ, ನೀರಾವರಿ ಯೋಜನೆಗೆ ಏನೆಂದು ಹೇಳಿದ್ದೆವು, ನಾವು ಅದರಂತೆ ನಡೆದಿದ್ದೇವೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೆ, ಮಾನ್ಯ ಸಚಿವರಾದ ಗೋವಿಂದ ಎಂ. ಕಾರಜೋಳರವರು ತಮ್ಮ ಮಾತನ್ನು ಮುಗಿಸಲಿ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನೀರಾವರಿ ಯೋಜನೆಗಳ ಬಗ್ಗೆ ಚರ್ಚೆ ಮಾಡಿದ್ದಾರೆ. ಅದಕ್ಕೆ ನಾನು ಅವರಿಗೆ ಉತ್ತರ ನೀಡುತ್ತೇನೆ.

**ಸಭಾಪತಿಯವರು:-** ಮಾನ್ಯ ಗೋವಿಂದ ಎಂ. ಕಾರಜೋಳರವರೆ ತಾವು ಅವರ ಪ್ರಶ್ನೆಗೆ ಉತ್ತರ ಹೇಳಿ ಸಾಕು.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿರುವುದಕಷ್ಟೆ ಉತ್ತರ ಹೇಳುತ್ತೇನೆ. ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರು ಪ್ರಸ್ತಾಪ ಮಾಡಿರುವುದಕ್ಕೆ ಈಗಾಗಲೇ ಉತ್ತರವನ್ನು ಹೇಳಿದ್ದೇನೆ. ಈಗ ಅದು ರಾಜ್ಯದ ನೀರಾವರಿ ಯೋಜನೆಗಳಿಗೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಆದರೆ, ನಾನು ಶ್ರೀ ಬ್ರಿಜೇಶ್ ಕುಮಾರ್‌ರವರ ತೀರ್ಪಿನ ಹಿನ್ನೆಲೆಯಲ್ಲಿ ಅವರು ಮಾಡಿರುವಂತಹ comment ನ್ನು ಆಧಾರದ ಮೇಲೆ ಹೇಳಿದ್ದೇನೆ ಹೊರತು, ಅದನ್ನು ನಾನು ಹಾಗೆಯೇ ಹೇಳಿಲ್ಲ. ನಾನು ಹೇಳುವುದು ಏನೆಂದರೆ, ಮಾನ್ಯ ವಿರೋಧ ಪಕ್ಷದವರು ಕೃಷ್ಣಾ ಮೇಲ್ದಂಡೆ ಯೋಜನೆ ವಿಚಾರದಲ್ಲಿ ಅಪರಾಧಿಯ ಸ್ಥಾನದಲ್ಲಿ ಇದ್ದಾರೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದರು, ನಾವು 7,748 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ನೀರಾವರಿ ಯೋಜನೆಗಳಿಗೆ...

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರೆ, ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳುತ್ತಿದ್ದಾರೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ನಮ್ಮ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯ ಒಂದು ಪ್ರತಿಯನ್ನು ಮಾನ್ಯ ಸಚಿವರಿಗೆ ನೀಡುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಆಯಿತು. ಮಾನ್ಯ ಸದಸ್ಯರು ನನಗೆ ಅದರ ಪ್ರತಿಯನ್ನು ಕಳುಹಿಸಿಕೊಡಲಿ. ಅವರು ಎರಡೆರಡು ಪ್ರಣಾಳಿಕೆಯನ್ನು ಮಾಡಿರಬಾರದು.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತನ್ನು ಮುಗಿಸುತ್ತೇನೆ. ಮಾನ್ಯ ಸಚಿವರು ಮಾತನಾಡುವ ಸಂದರ್ಭದಲ್ಲಿ ನಾನು ಮಾತನಾಡಲಿಲ್ಲ. "Allocation of Rs.10,000 crores every year to implement irrigation projects in Cauvery, Krishna water basin." ಇದು ನಮ್ಮ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕಾಂಗ್ರೆಸ್ ಪಕ್ಷದ ಪ್ರಣಾಳಿಕೆ. ನಾವು ಮಾಡಿರುವಂತಹ ಪ್ರಣಾಳಿಕೆಯಲ್ಲಿ ಇದೆ. ಅದರ ಒಂದು ಪ್ರತಿಯನ್ನು ಮಾನ್ಯ ಸಚಿವರಿಗೆ ಕಳುಹಿಸಿಕೊಡುತ್ತೇನೆ. ಅಮೇಲೆ ಅವರಿಗೆ ನೆನಪು ಮಾಡುವುದೇನೆಂದರೆ, ಭಾರತೀಯ ಜನತಾ ಪಕ್ಷದ ಪ್ರಣಾಳಿಕೆಯಲ್ಲಿ ಏನು ಇದೆ ಎಂದರೆ, ...

**ಸಭಾಪತಿಯವರು:-** ಮಾನ್ಯ ಸದಸ್ಯರೆ, ತಾವು ಅದನ್ನು ಆ ನಂತರ ಹೇಳಿ. ತಾವು ಅವರು ಕೇಳಿದ ಪ್ರಶ್ನೆಗೆ ಉತ್ತರ ಹೇಳಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಮುಗಿಸಿಬಿಡುತ್ತೇನೆ. “Rs.1.5 lakh crores Sujalam Suphalam Karnataka Yojane to complete all irrigation projects by 2023.” ಈಗ ಎರಡು ವರ್ಷವಾಯಿತು ಅವರು ಒಂದೂವರೆ ಲಕ್ಷ ಕೋಟಿ ಮಾಡಿದ್ದಾರೆಯೇ? ಇದು ಅವರ ಪ್ರಣಾಳಿಕೆ. ಇದು ನಮ್ಮದು ಅಲ್ಲ. ನಾನು ಅವರ ಪ್ರಣಾಳಿಕೆಯ ಪ್ರತಿಯನ್ನೂ ಕಳುಹಿಸುತ್ತೇನೆ ಮತ್ತು ನಮ್ಮ ಪ್ರಣಾಳಿಕೆಯ ಪ್ರತಿಯನ್ನೂ ಸಹ ಕಳುಹಿಸುತ್ತೇನೆ. ಈಗ ಅವರು ಅಧಿಕಾರದಲ್ಲಿದ್ದಾರೆ, ಮೊದಲು ಅವರು ಅದನ್ನು ಮಾಡಲಿ. ಅವರು ಒಂದೂವರೆ ಲಕ್ಷ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಿ. ಆಮೇಲೆ ನಾವು ಮಾಡಿಲ್ಲವೆಂದು ಹೇಳಲಿ. ನಾವು ಸ್ವಲ್ಪ ಖರ್ಚು ಕಡಿಮೆ ಮಾಡಿರುವುದಕ್ಕೆ, ಈಗಾಗಲೇ ವಿರೋಧ ಪಕ್ಷದಲ್ಲಿದ್ದೇವೆ. ಅದಕ್ಕೆ ಅವರು ಖರ್ಚು ಮಾಡಲಿ. ಇಲ್ಲವಾದರೆ ಅವರೂ ಸಹ ವಿರೋಧ ಪಕ್ಷದ ಕಡೆಗೆ ಬರುತ್ತಾರೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ: 1216**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) (ಶ್ರೀ ಎಂ.ಎ.ಗೋಪಾಲಸ್ವಾಮಿ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ಹೊಣಕೆರೆ ಹೋಬಳಿ, ಮರಡಿಪೂರ ಗ್ರಾಮದಲ್ಲಿ ಜಾರನಕಟ್ಟೆ ಹಳ್ಳದಲ್ಲಿ ಕೆರೆ ನೀರು ಹರಿಯುತ್ತಿರುವುದರಿಂದ ವಾಹನ ಸವಾರರಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ಎಂದು ಕೇಳಿರುವ ಪ್ರಶ್ನೆಗೆ. ಅವರು ಇದರ ಬಗ್ಗೆ ಕ್ರಮ ಕೈಗೊಳ್ಳುತ್ತೇವೆಂದು ಹೇಳಿದ್ದಾರೆ. ಮತ್ತೊಂದು ಮೂಲಭೂತವಾದ ಪ್ರಶ್ನೆ ಏನೆಂದರೆ, ಚೆಕ್ ಡ್ಯಾಂ ನಿರ್ಮಾಣದಿಂದ ಸಾವಿರಾರು ರೈತರಿಗೆ ಅನುಕೂಲವಾಗುವುದು ಹಾಗೂ ಕೊಳವೆಬಾವಿ ಹಾಗೂ ಬಾವಿಗಳಿಗೆ ಅನುಕೂಲವಾಗುವುದರಿಂದ ಚೆಕ್ ಡ್ಯಾಂ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು ಎಂದು ಕೇಳಿದ್ದೇವೆ. ಅದಕ್ಕೆ ಅವರು ಉತ್ತರವನ್ನು ನೀಡಿದ್ದಾರೆ. ಇದಕ್ಕೆ ಸುಮಾರು ಒಂದು ಕೋಟಿ ರೂಪಾಯಿಗಳಿಗಿಂತ ಕಡಿಮೆ ಹಣ ಬೇಕು. ಜಲಸಂಪನ್ಮೂಲ ಇಲಾಖೆ ಬಹಳ ದೊಡ್ಡ ಇಲಾಖೆ. ವರ್ಷಕ್ಕೆ ಸುಮಾರು ಹದಿನೈದು ಸಾವಿರ ಕೋಟಿ ರೂಪಾಯಿಗಿಂತ ಹೆಚ್ಚು ಹಣವನ್ನು ವಿನಿಯೋಗ ಮಾಡುತ್ತಾರೆ. ಇದು ಜನರಿಗೆ ಬಹಳ ತುರ್ತಾಗಿ ಮತ್ತು ಅಗತ್ಯವಾಗಿ ಬೇಕಾಗಿರುವುದರಿಂದ, ಈ ಕಾಮಗಾರಿಗೆ ಒಂದು ಕೋಟಿ ರೂಪಾಯಿ ಸಹ ಬೇಕಾಗಿಲ್ಲ. ಆದುದರಿಂದ ಸದನದಲ್ಲಿ ತಮ್ಮ ಮುಖಾಂತರ ಜನರ ಉಪಯೋಗಕ್ಕೋಸ್ಕರ ದಯವಿಟ್ಟು ಇದನ್ನು ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಕಾವೇರಿ ನೀರಾವರಿ ನಿಗಮದಲ್ಲಿ ಕಾರ್ಯಭಾರವನ್ನು ಹಂಚಲಾಗಿದೆ. ಸುಮಾರು ಏಳು ಸಾವಿರ ಕೋಟಿ ರೂಪಾಯಿಗಳಷ್ಟು ಕಾಮಗಾರಿಗಳಿಗೆ ಅನುಮೋದನೆಯಾಗಿ ಅವುಗಳ ಕಾಮಗಾರಿ ನಡೆಯುತ್ತಿವೆ. ಈ ವರ್ಷ ಅಂದರೆ, 2021-22ನೇ ಸಾಲಿಗೆ ನಮಗೆ capital head ನಲ್ಲಿ ಅನುದಾನ ಇರತಕ್ಕಂಥದ್ದು 1,200 ಕೋಟಿ ರೂಪಾಯಿಗಳು ಮಾತ್ರ. ಹೀಗಾಗಿ ಈ ವರ್ಷದಲ್ಲಿ ಯಾವುದೇ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕೆ ಅವಕಾಶವಿಲ್ಲ. ಮಾನ್ಯ ಸದಸ್ಯರ ಸಲಹೆಯನ್ನು ಸರ್ಕಾರ ಗಮನದಲ್ಲಿಟ್ಟುಕೊಂಡಿದೆ. ಮುಂದೆ ಅದನ್ನು ಪರಿಶೀಲನೆ ಮಾಡುತ್ತೇವೆ.

**ಸಭಾಪತಿಯವರು:-** ಅವರು ಒಂದು ಕೋಟಿ ರೂಪಾಯಿಗಳು ಎಂದು ಹೇಳಿದ್ದಾರೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಈಗ ನನ್ನ ಬಳಿ ಒಂದೊಂದು ಕೋಟಿಯ ಸುಮಾರು ನೂರು ಅರ್ಜಿಗಳು ಇವೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಆಯಿತು. ಅದನ್ನು ತಾವು ಪರಿಶೀಲಿಸಿ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಆ ರೀತಿ ಸುಮಾರು ನೂರು ಅರ್ಜಿಗಳು ಬಾಕಿಯಿವೆ. ಅದಕ್ಕೆ ನಾನು ಮಾನ್ಯ ಸದಸ್ಯರಿಗೆ ತಿಳಿಸಿದ್ದೇನೆ. ಈಗ workload ಮತ್ತು spill over works ಜಾಸ್ತಿ ಇದೆ. ಹಾಗಾಗಿ, ಅದನ್ನು ಮುಂದಿನ ದಿನಗಳಲ್ಲಿ ನೋಡುತ್ತೇವೆ.

**ಸಭಾಪತಿಯವರು:-** ಆಯಿತು. ಅದನ್ನು ಪರಿಶೀಲಿಸಿ.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ನಮಗೆ ಇಲ್ಲಿಯವರೆಗೆ ಏನೂ ಕೊಟ್ಟಿಲ್ಲ. ಈಗಲಾದರೂ ಅವರು ಕನಿಷ್ಟಪಕ್ಷ ಒಂದು ಕೋಟಿ ರೂಪಾಯಿ ಕೊಟ್ಟು, ನಮ್ಮ ಭಾಗದ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಜಲಸಂಪನ್ಮೂಲ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(ಮುಂದು)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(1283) 23.12.2021 11.20 LL-AK **(ಸಭಾಪತಿಯವರ ಉಪಸ್ಥಿತಿ)**

**ಪ್ರಶ್ನೆ ಸಂಖ್ಯೆ: 1176**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರವನ್ನು ಬಹಳ ಚೆನ್ನಾಗಿ ಕೊಟ್ಟಿದ್ದಾರೆ. ನನ್ನ ಮುಖ್ಯ ಪ್ರಶ್ನೆ ಏನೆಂದರೆ, ಸರ್ಕಾರಕ್ಕೆ ಬಹಳ ದೊಡ್ಡ ಪ್ರಮಾಣದಲ್ಲಿ ಆದಾಯ ಬರಬೇಕಾಗಿದೆ. ಅದರಲ್ಲಿಯೂ ವಿಶೇಷವಾಗಿ ಬೆಂಗಳೂರು ಮಹಾನಗರ ಪಾಲಿಕೆ(ಬಿ.ಬಿ.ಎಂ.ಪಿ.) ವ್ಯಾಪ್ತಿ ಕಡೆಯಿಂದ ಬರಬೇಕಾಗಿದೆ. ಅಲ್ಲಿ ಒಟ್ಟು ತೆರಿಗೆ ವ್ಯಾಪ್ತಿಯಲ್ಲಿ ಬರತಕ್ಕಂತಹ ಆಸ್ತಿಗಳು 18,52,802 ಅಂದರೆ ಸುಮಾರು 18 ½ ಲಕ್ಷ ಎಂದು ಹೇಳಬಹುದು. ಆದರೆ, ಅದರಲ್ಲಿ ತೆರಿಗೆ ಪಾವತಿ ಮಾಡುತ್ತಿರುವಂತಹವರು ಸುಮಾರು 12 ½ ಲಕ್ಷ . ಇನ್ನುಳಿದ ಸುಮಾರು 6 ಲಕ್ಷ ಆಸ್ತಿಯನ್ನು ಯಾರು ಹೊಂದಿದ್ದಾರೆ, ಅಂದರೆ ಅದರಲ್ಲಿ ಮನೆ ಇರಬಹುದು, multi-storied apartment ಕಟ್ಟಿರುವಂತಹವರು ಇರಬಹುದು ಅಥವಾ ಬೇರೆ ಬೇರೆ ರೀತಿಯ ಆಸ್ತಿಗಳನ್ನು ಹೊಂದಿರುವವರು ಇರಬಹುದು. ಅವರಲ್ಲಿ ಹತ್ತಿರ ಹತ್ತಿರ 6 ಲಕ್ಷ ಆಸ್ತಿದಾರರು ಸರ್ಕಾರಕ್ಕೆ ತೆರಿಗೆಯನ್ನು ಪಾವತಿಸಿರುವುದಿಲ್ಲ. ಇದರಿಂದಾಗಿ, ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಅಂದರೆ, ಸಾವಿರಾರು ಕೋಟಿ ರೂಪಾಯಿಗಳ ಆದಾಯ ಸರ್ಕಾರಕ್ಕೆ ಬರಬೇಕಾಗಿದೆ. ಇದರ ಬಗ್ಗೆ ಸರ್ಕಾರದ ಯೋಜನೆ ಏನು ಎನ್ನುವುದು ನನ್ನ ಮೊದಲನೆಯ ಪ್ರಶ್ನೆ.

ಎರಡನೆಯದಾಗಿ, ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ 'ಬಿ' ಖಾತಾ ಹೊಂದಿರತಕ್ಕಂತಹವರ ಸಂಖ್ಯೆ ಲಕ್ಷಾಂತರ ಇರುತ್ತದೆ. ಅವರು ಬೆಂಗಳೂರು ನಗರದ ಕುಡಿಯುವ ನೀರು, ಸ್ಯಾನಿಟೇಷನ್, ರಸ್ತೆ ಮತ್ತು ವಿದ್ಯುತ್ ಅಂದರೆ, 'ಎ' ಖಾತೆಯನ್ನು ಹೊಂದಿರುವಂತಹವರು ಯಾವ ಸೌಲಭ್ಯಗಳನ್ನು ಉಪಯೋಗಿಸುತ್ತಾರೆ, ಆ ಎಲ್ಲಾ ಸೌಲಭ್ಯಗಳನ್ನು 'ಬಿ' ಖಾತಾ ಹೊಂದಿರುವವರು ಸಹ ಉಪಯೋಗಿಸುತ್ತಾರೆ. ಆದರೆ, ತೆರಿಗೆ ಪಾವತಿಯನ್ನು ಮಾತ್ರ ಬಹಳ ಕಡಿಮೆ ಪಾವತಿ ಮಾಡುತ್ತಿರುವುದರಿಂದ, ಸರ್ಕಾರಕ್ಕೆ ಬಹಳ ದೊಡ್ಡ ಪ್ರಮಾಣದಲ್ಲಿ ವಂಚನೆಯಾಗುತ್ತಿರುತ್ತದೆ. ಅಂದರೆ, ಸರ್ಕಾರಕ್ಕೆ ಆದಾಯ ಬರುತ್ತಿರುವುದಿಲ್ಲ. ಇದರಿಂದಾಗಿ, ನಮ್ಮ ಕರ್ನಾಟಕ ರಾಜ್ಯದ ಅಭಿವೃದ್ಧಿಗೂ ಕೂಡ ಬಹಳ ದೊಡ್ಡ ತೊಂದರೆಯಾಗಿರುತ್ತದೆ.

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ಅದಕ್ಕೆ ಸರ್ಕಾರ ಏನು ಮಾಡಬೇಕೆಂಬ ಸಲಹೆ ಹೇಳಿ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಸರ್ಕಾರದ ಯೋಜನೆ ಏನು ಎಂಬ ಪ್ರಶ್ನೆ ಕೇಳುತ್ತೇನೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಇವೊತ್ತಿನ ದಿವಸ ಬೆಂಗಳೂರು ಬೃಹತ್ ಬೆಂಗಳೂರು ಆಗಿರುತ್ತದೆ. ಅಂದರೆ, ಅದು ತನ್ನ ವ್ಯಾಪ್ತಿಯನ್ನು ಹೆಚ್ಚಿಗೆ ಮಾಡಿಕೊಂಡಿರುತ್ತದೆ. ಇದರಿಂದಾಗಿ, ಜನಸಂಖ್ಯೆಯ ದಟ್ಟಣೆಯೂ ಕೂಡ ಹೆಚ್ಚು ಆಗಿರುತ್ತದೆ. ಹೀಗಾಗಿ, ಯಾವ ರೀತಿ ಜನಸಂಖ್ಯೆ ಮತ್ತು ವಸತಿಗಳು ಹೆಚ್ಚಾಗುತ್ತಿದೆ ಅಥವಾ ವಾಣಿಜ್ಯ ಚಟುವಟಿಕೆಗಳು ಹೆಚ್ಚಾಗುತ್ತಿವೆ ಅದೇ ರೀತಿ ಸಹಜವಾಗಿ ಆದಾಯ ಕೂಡ ಹೆಚ್ಚಾಗಬೇಕು. ಅದಕ್ಕೆ ತಕ್ಕಂತೆ, ಇವೊತ್ತಿನ ದಿವಸ ಅಭಿವೃದ್ಧಿಗೆ ಬಹಳಷ್ಟು ಹಣವನ್ನು ವೆಚ್ಚ ಮಾಡುತ್ತಿದ್ದೇವೆ. ಅದರ ಜೊತೆಗೆ, ಇನ್ನೂ ಹೆಚ್ಚಿಗೆ ಹಣವನ್ನು ವೆಚ್ಚ ಮಾಡುವಂತಹ ಅವಶ್ಯಕತೆ ಇದೆ. ಈಗ ಪುನಃ 110 ಹಳ್ಳಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿಸಿಕೊಳ್ಳಲಾಗಿದೆ. ಈ ಮೊದಲು 07 ಮುನಿಸಿಪಾಲಿಟಿಗಳನ್ನು ಶ್ರೀ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಸೇರಿಸಿಕೊಳ್ಳಲಾಗಿದೆ. ಅದಕ್ಕೆ ಅದರದ್ದೇ ಆದಂತಹ ಸವಾಲುಗಳಿವೆ. ಏಕೆಂದರೆ, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇರುವಂತಹ ಅಭಿವೃದ್ಧಿ ಪರಿಸ್ಥಿತಿ ಮತ್ತು ಮಹಾನಗರ ಪಾಲಿಕೆಗೆ ಬಂದಾಗ ಅದನ್ನು ಪರಿವರ್ತನೆ ಮಾಡುವಂಥದ್ದಕ್ಕೆ ಅದರದ್ದೇ ಆದ ಸವಾಲುಗಳಿರುತ್ತವೆ. ಹೀಗಾಗಿ, ಸರ್ಕಾರದ ಆದಾಯ ಬಹಳ ಮುಖ್ಯವಾಗಿರುತ್ತದೆ.

ನನಗೆ ನಿಜವಾಗಿಯೂ ಕೂಡ ಬಹಳ ಸಂತೋಷವಾಗಿದೆ. ಏಕೆಂದರೆ, ನಮ್ಮ ಮಾನ್ಯ ಶಾಸಕರೊಬ್ಬರು ಬೆಂಗಳೂರಿನ ಆದಾಯದ ಬಗ್ಗೆ ಪ್ರಶ್ನೆ ಕೇಳಿರುವಂಥದ್ದು ಆಗಿದೆ. ಇವೊತ್ತಿನ ದಿವಸ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸುಮಾರು 18,52,802 ಆಸ್ತಿಗಳಿವೆ. ಅದರಲ್ಲಿ ನಮ್ಮ ಲೆಕ್ಕದ ಪ್ರಕಾರ 13,056 ಆಸ್ತಿಗಳವರು self-assessment of property tax ಅಡಿಯಲ್ಲಿ ಆಸ್ತಿಯನ್ನು declare ಮಾಡಿಕೊಂಡಿರುತ್ತಾರೆ. ಅದರಲ್ಲಿ ಸುಮಾರು 9,108 ಆಸ್ತಿಗಳವರು multi-storied residential apartments ಇದೆ. 97,000 ವಾಣಿಜ್ಯ ಕಟ್ಟಡಗಳು ಇರುತ್ತವೆ. 12,59,000 ವಸತಿ ಕಟ್ಟಡಗಳು ಇರುತ್ತವೆ. ಇದು ಇಷ್ಟು ಸ್ವಯಂ ಘೋಷಿತ ಆಸ್ತಿಯಾಗಿರುತ್ತದೆ. ಇನ್ನು ಸುಮಾರು 10,516 ಆಸ್ತಿಗಳಿಗೆ ಕೆಲವರು false declaration, tax evasion ಮಾಡುತ್ತಾರೆ. ಅಂತಹ ಪ್ರಕರಣಗಳಲ್ಲಿ ನಾವು ಈಗಾಗಲೇ ಡಿಮ್ಯಾಂಡ್ ನೋಟಿಸ್ ಕೊಟ್ಟಿದ್ದೇವೆ. ಇದರ ಜೊತೆಗೆ, ಕೆಲವರಿಗೆ ಆಸ್ತಿ ತೆರಿಗೆಯನ್ನು revise ಮಾಡಿದ್ದೇವೆ. ಅದರಿಂದಾಗಿ, ಸುಮಾರು 56 ಕೋಟಿ ರೂಪಾಯಿಯಷ್ಟು ತೆರಿಗೆಯನ್ನು ಸಹ ನಾವು ವಸೂಲಿ ಮಾಡಿದ್ದೇವೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಈಗ ಬಂದಿರುವಂಥ ಪ್ರಶ್ನೆ ಏನೆಂದರೆ, 'ಎ' ಖಾತೆ ಮತ್ತು 'ಬಿ' ಖಾತೆ ಎಂದು ಏನು ಇದೆ, ಅವುಗಳಲ್ಲಿ ತೆರಿಗೆ ಸಂಗ್ರಹಣೆ ಮಾಡುವಾಗ differentiation ಮಾಡುವುದಿಲ್ಲ. ಅದು 'ಎ' ಖಾತೆ ಇರಲಿ ಅಥವಾ 'ಬಿ' ಖಾತೆ ಇರಲಿ ನಾವು ಅವುಗಳಲ್ಲಿ ತೆರಿಗೆ ಸಂಗ್ರಹಣೆ ಮಾಡುತ್ತಿದ್ದೇವೆ. 'ಬಿ' ಖಾತೆ ಅಂದರೆ, land conversion ಇಲ್ಲದೇ ಮಾಡಿರುವಂಥದ್ದು, ಲೇಔಟ್ ಪ್ಲಾನ್ ಇಲ್ಲದೇ ಮಾಡುವಂಥದ್ದು, violation of plan ಮಾಡಿರುವಂಥದ್ದು, ಇವೆಲ್ಲವೂ ಸಹ 'ಬಿ' ಖಾತೆಯಲ್ಲಿ ಸೇರುತ್ತದೆ. ಇದರ ಬಗ್ಗೆಯೂ ಸಹ ನಾವು ಒಂದು ಕಾನೂನನ್ನು ಮಾಡಿ,

ಕೆಲವೊಂದನ್ನು ಸರಳೀಕರಣ ಮಾಡಿ, ಅವುಗಳನ್ನು ಸಕ್ರಮಗಳನ್ನು ಮಾಡಿ, ಸರ್ಕಾರದ ಆದಾಯವನ್ನು ಹೆಚ್ಚಿಸುವ ಸಲುವಾಗಿ ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕೋ, ಆ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ.

ತಮಗೆಲ್ಲಾ ಗೊತ್ತಿರುವಂತೆ, ಈ ಹಿಂದೆ ಅಕ್ರಮ-ಸಕ್ರಮ ಎಂಬ ಒಂದು ಕಾನೂನು ಬಂದಿತ್ತು. ಸದರಿ ಕಾನೂನನ್ನು ಈಗಾಗಲೇ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಲಾಗಿರುತ್ತದೆ. ನಾನು ಮುಖ್ಯಮಂತ್ರಿಯಾಗಿ ಬಂದ ನಂತರ, ಅದನ್ನು ಬಹಳ ಗಂಭೀರವಾಗಿ ಫಾಲೋ-ಅಪ್ ಮಾಡುತ್ತಿದ್ದೇನೆ ಮತ್ತು ಇದಕ್ಕೆ ಸಂಬಂಧಪಟ್ಟಂತಹವರ ಜೊತೆ ನಾನು ಮಾತನಾಡಿರುತ್ತೇನೆ. ಅಂದರೆ, ಸದರಿ ಅರ್ಜಿದಾರರ ಬೇಡಿಕೆ ಏನು, ಅವರ grievances ಏನು ಎಂದು ಮಾತನಾಡಿದ್ದು, ಅದನ್ನು ಆದಷ್ಟು ಬೇಗ ಪರಿಹರಿಸುತ್ತೇವೆ. ಕೇವಲ ಬೆಂಗಳೂರಿನಲ್ಲಿ ಮಾತ್ರವಲ್ಲದೇ, ಇಡೀ ಕರ್ನಾಟಕ ರಾಜ್ಯದಲ್ಲಿ ಅಕ್ರಮ-ಸಕ್ರಮಗಳು ನಿಂತು ಹೋಗಿರುವುದರಿಂದ, ಅದನ್ನು ಮಾಡಿದರೆ ಬಹಳಷ್ಟು ಜನರಿಗೆ ತಮ್ಮ ಆಸ್ತಿ ದಾಖಲೆಗಳು ಆಗುತ್ತದೆ. ಇದರಿಂದಾಗಿ, ಅವರು ನೆಮ್ಮದಿಯಿಂದ ಬದುಕುವುದು ಹಾಗೂ ಆ ಆಸ್ತಿ ಮೇರೆಗೆ ಸಾಲ-ಸೌಲಭ್ಯಗಳನ್ನು ಪಡೆದುಕೊಳ್ಳಬಹುದು. ಇದರಿಂದಾಗಿ, ಸರ್ಕಾರಕ್ಕೂ ಸಹ ಬಹಳ ದೊಡ್ಡ ಪ್ರಮಾಣದಲ್ಲಿ ಆದಾಯ ಬರುತ್ತದೆ. ಏಕೆಂದರೆ, ಇವರೆಲ್ಲರೂ ಬಹಳ ವರ್ಷಗಳಿಂದ ಅಲ್ಲಿಯೇ ಇರುತ್ತಾರೆ. ಅದಕ್ಕೆ ಹಲವಾರು ಕಾರಣಗಳಿರುತ್ತವೆ. ಆದುದರಿಂದ, ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿರುವ ಪ್ರಕರಣವನ್ನು ಆದಷ್ಟು ಬೇಗ ಬಗೆಹರಿಸಿ, ಆ ಕೆಲಸವನ್ನು ಸಹ ನಾವು ಮಾಡುತ್ತೇವೆ. ಈಗಾಗಲೇ ಯಾರು ಆಸ್ತಿ ತೆರಿಗೆ ವಂಚನೆ ಮಾಡಿದ್ದಾರೆ, ಅವರೆಲ್ಲರಿಗೂ ವಿಶೇಷವಾದಂತಹ tax violation drive ಮಾಡಿ, ಹೆಚ್ಚು ತೆರಿಗೆ ವಸೂಲಿ ಮಾಡಿ ಸರ್ಕಾರದ ಆದಾಯವನ್ನು ಹೆಚ್ಚು ಮಾಡುವುದಕ್ಕೆ ಅಗತ್ಯ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ನನ್ನ ಪ್ರಶ್ನೆಗೆ ಬಹಳ ಚೆನ್ನಾಗಿ ಉತ್ತರ ಕೊಟ್ಟಿರುತ್ತಾರೆ ಮತ್ತು ಅವರಿಗೆ ಆಡಳಿತ ಚೆನ್ನಾಗಿ ಗೊತ್ತಿರುತ್ತದೆ. ಹಾಗಾಗಿ, ನಾನು ಅವರಲ್ಲಿ ಪ್ರಸ್ತಾಪಿಸುವುದೇನೆಂದರೆ, ಬೆಂಗಳೂರು ಮಹಾನಗರದಲ್ಲಿ ದೊಡ್ಡ ಪ್ರಮಾಣದಲ್ಲಿರತಕ್ಕಂತಹ 'ಬಿ' ಖಾತೆಯನ್ನು ಹೊಂದಿರುವ ಆಸ್ತಿಯನ್ನು, 'ಎ' ಖಾತೆಯಾಗಿ ಯಾವಾಗ ಪರಿವರ್ತನೆ ಮಾಡುತ್ತಾರೆ ಎಂಬ ಮೊದಲನೆ ಪ್ರಶ್ನೆ ಕೇಳುತ್ತೇನೆ. ಎರಡನೆಯದಾಗಿ, onetime penalty ಹಾಕಿ ಸರ್ಕಾರಕ್ಕೂ ಆದಾಯ ಬರುತ್ತದೆ ಮತ್ತು 'ಎ' ಖಾತೆ ಆಗುವುದರಿಂದ ಸರ್ಕಾರಕ್ಕೆ ಮತ್ತು ಆಸ್ತಿದಾರರಿಗೂ ಅನುಕೂಲವಾಗುತ್ತದೆ. ಅಲ್ಲದೇ, ಹತ್ತಿರ ಹತ್ತಿರ ಶೇಕಡ 25 ರಷ್ಟು ಆಸ್ತಿ ತೆರಿಗೆ ಬರಬೇಕಾಗಿದೆ. ಆದುದರಿಂದ, ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಉತ್ತರ ನೀಡಬೇಕೆಂದು ವಿನಂತಿ ಮಾಡುತ್ತೇನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ತಮ್ಮ ಪ್ರಶ್ನೆಗೆ ಉತ್ತರ ನೀಡಿರುತ್ತಾರೆ. ಆದರೆ, ಅದಕ್ಕೆ ಲಕ್ಷ್ಯ ಕೊಟ್ಟಿಲ್ಲವೆಂದು ಕಾಣುತ್ತಿದೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಈಗಾಗಲೇ ಉತ್ತರ ನೀಡಿರುತ್ತೇನೆ. 'ಬಿ' ಖಾತೆಯ ಆಸ್ತಿಗಳನ್ನು ಸಕ್ರಮ ಮಾಡಿಕೊಳ್ಳುವುದಕ್ಕೆ ಏನೆಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದೇವೆ ಮತ್ತು ಅದಕ್ಕೆ ಇರುವಂತಹ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಡ್ಡಿಯನ್ನು ಸರಿಪಡಿಸಿಕೊಂಡು ಮಾಡುತ್ತೇವೆಂದು ಉತ್ತರ ನೀಡಿರುತ್ತೇನೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಪ್ರಶ್ನೆ ಸಂಖ್ಯೆ:1220**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ನೀಡಿರುವ ಉತ್ತರವನ್ನು ನೋಡಿದಾಗ ನನಗೆ ಸದರಿ ಉತ್ತರವನ್ನು ನೀಡುವಾಗ ಕಾರ್ಪೋರೇಷನ್‌ಗೆ ಸಂಪೂರ್ಣ ಮಾಹಿತಿ ಇಲ್ಲದೇ ಇರುವ ರೀತಿಯಲ್ಲಿ ಉತ್ತರವನ್ನು ನೀಡಿರುತ್ತಾರೆ. ಏಕೆಂದರೆ, ನಾನು ಪ್ರಶ್ನೆ ಕೇಳಿರುವಂಥದ್ದು, ಬೆಂಗಳೂರು ಮಹಾನಗರದಲ್ಲಿರುವಂತಹ ರಾಜಕಾಲುವೆಗಳು ಅಂದರೆ, primary and secondary drains ಗೆ ಸಂಬಂಧಪಟ್ಟಂತೆ ಈ ಯೋಜನೆ ರೂಪಿಸಿದ ವರ್ಷ ಯಾವುದು ಮತ್ತು ಆ ಕಾರ್ಯಾದೇಶ ನೀಡಿದ ವರ್ಷ ಯಾವುದು ಎಂದು. ಏಕೆಂದರೆ, ನಾನು ಬೆಂಗಳೂರು ಮಹಾಪೌರರಾಗಿ ಕೆಲಸ ಮಾಡಿದಂತಹ ವರ್ಷ 2003-04. ಆ ಸಂದರ್ಭದಲ್ಲಿ ಈ Remodelling of Drains ಯೋಜನೆಯನ್ನು ರೂಪಿಸಿದರು.

(ಮುಂದು)

**(1284) 23.12.2021 11.30 YL-RN** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪಿ.ಆರ್.ರಮೇಶ್ (ಮುಂದು):-**

ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಎಂ.ಎಲ್.ಎ. ಆಗಿದ್ದು, ಆಗ 15 ಪ್ಯಾಕೇಜ್ ಮಾಡಿದ್ದು, ಇದರ ಬಗ್ಗೆ ಮಾನ್ಯ ಡಿ.ಕೆ.ಶಿವಕುಮಾರ್‌ರವರೊಂದಿಗೆ ಕೆಳಮನೆಯಲ್ಲಿ 'ಕಾಲುವೆಗಳಲ್ಲಿ ಇದ್ದಂತಹ ಹೂಳನ್ನು ಎಲ್ಲಿ ಹಾಕಲಾಗಿದೆ' ಎಂದು ಪ್ರಸ್ತಾಪ ಮಾಡಿದಾಗ ಅದೊಂದು ದೊಡ್ಡ ಸುದ್ದಿಯಾಗಿತ್ತು. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೂ ನೆನಪಿರಬೇಕು. ಈಗ ನೀಡಿರುವ ಉತ್ತರವನ್ನು ನೋಡಿದರೆ ಈ ಯೋಜನೆಯನ್ನು 2016 ರಿಂದ ರೂಪಿಸಲಾಗಿದೆ ಎನ್ನುವಂತಿದೆ. ಸುಮಾರು 320.00 ಕೋಟಿ ರೂಪಾಯಿಗಳ ಅನುದಾನದಲ್ಲಿ ಮೊದಲನೆ ಯೋಜನೆಯನ್ನು ಕೈಗೆತ್ತಿಕೊಂಡು 15 ಪ್ಯಾಕೇಜ್‌ಗೆ ಸಂಬಂಧಿಸಿದಂತೆ ಬಿ.ಬಿ.ಎಂ.ಪಿ. ವತಿಯಿಂದಲೇ ಕೆಲಸ ಮಾಡಿಸಬೇಕೆಂದು ಮಾಡಲಾಗಿತ್ತು. ತದನಂತರ ಈ ಯೋಜನೆಯನ್ನು ಹಾಗೆಯೇ NURM project ವಹಿಸಲಾಯಿತು. 2005-06ನೇ ಸಾಲಿನಲ್ಲಿ ನರ್ಮ್ ಯೋಜನೆಯು ಜಾರಿಗೆ ಬಂತು. ಆದರೆ, 2013-14ನೇ ಸಾಲಿನಲ್ಲಿ 15 ಪ್ಯಾಕೇಜ್‌ನ ಯೋಜನೆಯನ್ನು ರೂಪಿಸಲಾಗಿತ್ತು. ಹಾಗಾಗಿ ಈ ಯೋಜನೆಯು ಸಂಪೂರ್ಣವಾಗಿ hijack ಆಗಿತ್ತು. ಆ ಸಂದರ್ಭದಲ್ಲಿ ರೂ.420.00 ಕೋಟಿಗಳನ್ನು ಪರಿಷ್ಕರಿಸಲಾಗಿತ್ತು. Then it has come to 900 crores. ಈ ಸಂಬಂಧ ಲೋಕಾಯುಕ್ತಕ್ಕೂ ಅರ್ಜಿ ಸಲ್ಲಿಸಿದ್ದು, still it is pending. There is so much information. ಇಂತಹ ಸಂದರ್ಭದಲ್ಲಿ CAG ಅವರು ಒಂದು ವಿಚಾರ ಹೇಳಿದ್ದಾರೆ. 1900ನೇ ಸಾಲಿನಲ್ಲಿ ಕೋರಮಂಗಲ ವ್ಯಾಲಿ ಮತ್ತು ವೃಷಭಾವತಿ ವ್ಯಾಲಿ ಇದ್ದಿದ್ದು, ಕೋರಮಂಗಲ ವ್ಯಾಲಿ 113 ಕಿಲೋ ಮೀಟರ್ ಮತ್ತು ವೃಷಭಾವತಿ ವ್ಯಾಲಿ 226 ಕಿಲೋ ಮೀಟರ್ ಇತ್ತು. 2016-17ನೇ ಸಾಲಿನಲ್ಲಿ ಸರ್ವೇ ಮಾಡಿದಾಗ ಕೋರಮಂಗಲ 63 ಮತ್ತು ವೃಷಭವತಿ 102 ಕಿಲೋ ಮೀಟರ್ ಇತ್ತು. That mean it is encroached upon. So many times,

already encroached. ಇದನ್ನು ಮಾಸ್ಟರ್ ಪ್ಲಾನ್ ಮಾಡಲು 2010-11ನೇ ಸಾಲಿನಲ್ಲಿ STUP Consultants ರವರಿಗೆ ನೀಡಲಾಗಿದ್ದು, ರೂ.3.6 ಕೋಟಿ ವೆಚ್ಚವನ್ನು ಭರಿಸಲಾಗಿದೆ. ಆದರೆ, National Disaster Management Norms ಏನಿದೆ, ಅದಕ್ಕೆ fit ಆಗುವ ರೀತಿಯಲ್ಲಿ there should be some guidelines with proper comprehensive plan.

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಅದಕ್ಕೆ ಏನಾಗಬೇಕಾಗಿದೆ ಅದನ್ನು ಹೇಳಿ. ಇದು ಪ್ರಶ್ನೋತ್ತರ ಅವಧಿ. ಪ್ರಶ್ನೆ ಕೇಳಿ, ಭಾಷಣ ಮಾಡಲು ಕುಳಿತರೆ ಹೇಗೆ?

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಏನೇನು ಇಲ್ಲ, ಅದೆಲ್ಲದರ ಹಿನ್ನೆಲೆ ಹೇಳಬೇಕಲ್ಲವೇ? ಸರ್ಕಾರ ಏನು ಉತ್ತರ ನೀಡಬೇಕಾಗಿತ್ತು, ಅದರ ಬಗ್ಗೆ ಹೇಳುತ್ತಿದ್ದೇನೆ ಅಷ್ಟೇ.

**ಸಭಾಪತಿಯವರು:-** ಆಯಿತು ಬಿಡಿ. ಪ್ರಶ್ನೆ ಕೇಳಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, 2003ನೇ ಸಾಲಿನಿಂದ ಸುಮಾರು ರೂ.2000 ಕೋಟಿಗಳಷ್ಟು ಬೆಂಗಳೂರು ನಗರದ ಕಾಲುವೆಗಳಿಗೆ ಖರ್ಚು ಮಾಡಲಾಗಿದ್ದು, ಅದರ ಬಗ್ಗೆ ಸರ್ಕಾರ ಮಾಹಿತಿ ನೀಡಿರುವುದಿಲ್ಲ. ಅಷ್ಟೆಲ್ಲಾ ಹಣವನ್ನು ಖರ್ಚು ಮಾಡಿದ್ದರೂ ಸಹ ಬಗೆಹರಿಸಲು ಸಾಧ್ಯವಾಗದೇ ಇರುವಂತಹ ಕಾಲುವೆಗಳ ಸಮಸ್ಯೆಯನ್ನಿಟ್ಟುಕೊಂಡಿದ್ದೇವೆ ಏತಕ್ಕೆ? ಜೊತೆಗೆ concrete ಆಗಿ ಯೋಜನೆ ಮಾಡಿ, ಶಾಶ್ವತವಾದಂತಹ ಪರಿಹಾರ ನೀಡಲು ಸರ್ಕಾರ ಏನಾದರೂ ಚಿಂತನೆ ಮಾಡಿದೆಯೇ? ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕು.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆ ಬಹಳ ಮೂಲಭೂತವಾದ ಪ್ರಶ್ನೆಯಾಗಿದೆ. ಬೆಂಗಳೂರು ನಗರದಲ್ಲಿ ಹಲವಾರು ಸವಾಲುಗಳಿದ್ದು, ಈ ರಾಜಕಾಲುವೆಗಳನ್ನು ನಿರ್ಮಾಣ ಮಾಡುವುದು ಒಂದು ಸವಾಲಾಗಿದೆ. ಯಾವ ರೀತಿ collection and waste disposal ಮಾಡುವುದಿದೆ ಅದು ಒಂದು ಸವಾಲು. ಅದೇ ರೀತಿ ರಾಜಕಾಲುವೆಗಳನ್ನು ನಿರ್ಮಿಸಿ, ನಿರ್ವಹಿಸುವುದು ಒಂದು ಮುಖ್ಯವಾದ ಸಮಸ್ಯೆಯಾಗಿದೆ. ಅದರಿಂದ ಬರುವಂತಹ untreated water ಹೋಗುವಂತದ್ದು, ಎಲ್ಲಾ pollution create ಮಾಡುವುದು ಸಹ ಮುಖ್ಯ ಸವಾಲಾಗಿದ್ದು, ಅದರ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅದರ ಜೊತೆಗೆ 2003-04ನೇ ಸಾಲಿನಲ್ಲಿ ಯೋಜನೆ ರೂಪಿಸಿರುವ ಕುರಿತು, ರೂ.330.00 ಕೋಟಿ ಹಣ ಏನಾಗಿತ್ತು ಹಾಗೂ 15 ಪ್ಯಾಕೇಜ್‌ಗೆ ಸಂಬಂಧಿಸಿದಂತೆ ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದು, ಅದರ ಬಗ್ಗೆ ಕಡತ ತರಿಸಿ ನೋಡಿ ಮಾಹಿತಿ ಒದಗಿಸುತ್ತೇನೆ. ಈಗಾಗಲೇ ಮಾನ್ಯ ಸದಸ್ಯರು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಹಿತಿಗಾಗಿ ಲೋಕಾಯುಕ್ತಕ್ಕೆ ಅರ್ಜಿ ಸಲ್ಲಿಸಿದ್ದೇನೆ ಎಂದು ತಿಳಿಸಿದ್ದು, ಲೋಕಾಯುಕ್ತಕ್ಕೆ ಏನೆಂದು ಅರ್ಜಿ ಸಲ್ಲಿಸಿದ್ದಾರೆ, ನಮ್ಮ ಸರ್ಕಾರದ ನಿಲುವೇನಿದೆ ಅದರ ಬಗ್ಗೆ ಸಹ ಪರಿಶೀಲನೆ ಮಾಡುತ್ತೇನೆ. ಹಾಗೆಯೇ ಹಣ ಖರ್ಚು ಮಾಡಿರುವಂತಹ ಸಿ.ಎ.ಜಿ. ವರದಿ ಬಗ್ಗೆ ಕೇಳಿದ್ದು, ಅದರ ಹಿಂದೆ ಎಷ್ಟೆಲ್ಲಾ ಹಣ ಖರ್ಚಾಗಿದೆ ಎಂಬುದನ್ನು ಸಹ ತಿಳಿಸುತ್ತೇನೆ. ಏಕೆಂದರೆ, ಮಾನ್ಯ ಸದಸ್ಯರು 2003ನೇ ಸಾಲಿನಿಂದ ಮಾಹಿತಿ ಕೇಳಿದ್ದು, ಅಂದಿನಿಂದ ಇಂದಿನವರೆಗೂ ಹಲವಾರು ಸರ್ಕಾರ ಅಧಿಕಾರಕ್ಕೆ ಬಂದು ಹೋಗಿವೆ. ಹಾಗಾಗಿ ಅದರ ಬಗ್ಗೆ ಸಹ ಪರಿಶೀಲನೆ ಮಾಡುತ್ತೇನೆ. ಆದರೆ, ಇದರಲ್ಲಿ ಮುಖ್ಯವಾದ ಪ್ರಶ್ನೆಯೇನೆಂದರೆ, ಪ್ರಥಮ ಕಾಲುವೆಗಳು ಮತ್ತು ದ್ವಿತೀಯ ಕಾಲುವೆಗಳು ಒಳಗೊಂಡಂತೆ ಸುಮಾರು 842 ಕಿಲೋ ಮೀಟರ್‌ಗಳಷ್ಟು ಗುರುತಿಸಲಾಗಿದ್ದು, ಈಗಾಗಲೇ ಸುಮಾರು 440 ಕಿಲೋ ಮೀಟರ್‌ಗಳಷ್ಟು ಸಂಪೂರ್ಣವಾಗಿ ರಾಜ ಕಾಲುವೆ ಗೋಡೆಗಳ ನಿರ್ಮಾಣವಾಗಿದೆ ಹಾಗೂ ಬಾಕಿ ಉಳಿದಿರುವ ಕಾಲುವೆಗಳ ಬಗ್ಗೆ ಕ್ರಮಕೈಗೊಳ್ಳಬೇಕಾಗಿದೆ. ನನಗೆ ಬಂದಿರುವ ಮಾಹಿತಿ ಪ್ರಕಾರ 2016 ರಿಂದ 2021ನೇ ಸಾಲಿನವರೆಗೂ 313 ಕಿಲೋ ಮೀಟರ್ ರಾಜ ಕಾಲುವೆಗಳನ್ನು ನಿರ್ಮಿಸಲಾಗಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ರೂ.2096.88 ಕೋಟಿ ಹಂಚಿಕೆಯಾಗಿದ್ದು, ಅದರಲ್ಲಿ ರೂ.1658.41 ಕೋಟಿ ಖರ್ಚಾಗಿದೆ. ಪ್ರಥಮ ಕಾಲುವೆ ಮತ್ತು ದ್ವಿತೀಯ ಕಾಲುವೆ ಸೇರಿ ಒಟ್ಟು 428 ಕಿಲೋ ಮೀಟರ್ ಅಭಿವೃದ್ಧಿ ಮಾಡಿದ್ದು, ಬಾಕಿ 414 ಬಾಕಿ ಉಳಿದಿವೆ. ಮೊನ್ನೆ ಮಳೆ ಬಂದಂತಹ ಸಂದರ್ಭದಲ್ಲಿ ಯಲಹಂಕದಿಂದ ಬರುವಂಥ ವ್ಯಾಲಿ ಮತ್ತು ಕೆ.ಆರ್.ಪುರ ಕ್ಷೇತ್ರದಲ್ಲಿರುವ ಎಲ್ಲಾ ಪ್ರದೇಶಕ್ಕೆ ಸುಮಾರು 8 ರಿಂದ 10 ಕಿಲೋ ಮೀಟರ್‌ವರೆಗೆ ನಾನೇ ನಡೆದುಕೊಂಡು ಹೋಗಿ ಎಲ್ಲೆಲ್ಲಿ bottlenecks ಇದೆ. ಎಲ್ಲೆಲ್ಲಿ ಬಹಳ ದೊಡ್ಡ ಗೋಡೆಗಳ ಅಡೆತಡೆಗಳಿವೆ, ಎಲ್ಲೆಲ್ಲಿ ರಾಜ ಕಾಲುವೆಗಳನ್ನು ಅಕ್ರಮ ಮಾಡಿಕೊಂಡಿದ್ದಾರೆ, NGT Norms, ಬಫರ್ ಜೋನ್‌ನಲ್ಲಿ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ, ಅದೆಲ್ಲವನ್ನೂ ನೋಡಿದ್ದೇನೆ. ರಾಜ ಕಾಲುವೆ ಪುನರ್ ನಿರ್ಮಾಣ ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಇಂಜಿನಿಯರ್ಸ್, ಸಚಿವರು ಮತ್ತು ಎಲ್ಲಾ ಪಕ್ಷದ ಶಾಸಕರು ಕುಳಿತುಕೊಂಡು ಸಭೆ ಮಾಡಿ, ಒಂದು ತೀರ್ಮಾನ ಮಾಡಿದ್ದೇವೆ. ಇದನ್ನು ಪುನರ್ ನಿರ್ಮಾಣ ಮಾಡಲು ವಿಶೇಷವಾಗಿ bottlenecks ಎಲ್ಲಿದೆ ಅದನ್ನು ತೆಗೆದು, ಉಳಿದಂತೆ construction ಮಾಡಲು DPR (Detailed Project Report) ಮಾಡಬೇಕೆಂದು ತಿಳಿಸಿದ್ದೇವೆ. ಸದ್ಯಕ್ಕೆ ರೂ.1200.00 ಕೋಟಿ ರೂಪಾಯಿ ನೀಡಿ, 128 ಕಿಲೋ ಮೀಟರ್ ರಾಜಕಾಲುವೆಯನ್ನು ತಕ್ಷಣವೇ ಕೈಗೆತ್ತಿಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ. ಅದಕ್ಕೆ ಕಾರಣವೇನು ಎಂದು ಮಾನ್ಯ ಸದಸ್ಯರು ಕೇಳಿದ್ದು, ಅವರಿಗೆ ಗೊತ್ತಿರುವ ಹಾಗೆ ಬಹಳಷ್ಟು ಪ್ರದೇಶಗಳಲ್ಲಿ ರಾಜ ಕಾಲುವೆಗಳು ಅಕ್ರಮವಾಗಿದೆ. ದೊಡ್ಡ-ದೊಡ್ಡ landlords ದಾಖಲೆಗಳನ್ನು ಬದಲಾವಣೆ ಮಾಡಿ ಮಾರಾಟ ಮಾಡಿರುವಂಥದಾಗಿದೆ, ಜೊತೆಗೆ ದೊಡ್ಡ-ದೊಡ್ಡ ಕಂಪನಿಗಳನ್ನು high-towers ರಾಜ ಕಾಲುವೆ ಮೇಲೆ ನಿರ್ಮಾಣ ಮಾಡಲಾಗಿದೆ, ಬಹಳಷ್ಟು violations ದೊಡ್ಡ ಪ್ರಮಾಣದಲ್ಲಿ ಆಗಿರುವುದರಿಂದ ಬಹಳಷ್ಟು ಅಡಚಣೆಯಾಗಿದೆ. 30 ರಿಂದ 40 ಕಿಲೋ ಮೀಟರ್ ಇದ್ದಂತಹ ರಾಜಕಾಲುವೆಗಳು ಈಗ 7 ರಿಂದ 8 ಕಿಲೋ ಮೀಟರ್ ಆಗಿರುವುದನ್ನು ನೋಡಿದ್ದೇನೆ. ಈ 128

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಿಲೋ ಮೀಟರ್ ರಾಜ ಕಾಲುವೆಗಳಲ್ಲಿ ಪ್ರಮುಖವಾಗಿ ಎಲ್ಲೆಲ್ಲಿ bottlenecks ಇದೆ, ಅದೆಲ್ಲವನ್ನೂ clear ಮಾಡಿಸುತ್ತೇನೆ. ಮುಂದೆ ಎಷ್ಟೇ ಜೋರಾಗಿ ಮಳೆ ಬಂದರೂ ಸಹ ಈ ರಾಜಕಾಲುವೆಗಳಿಂದ ಹೊರಗೆ ನೀರು ಹರಿಯದ ಹಾಗೆ ವ್ಯವಸ್ಥೆ ಆಗಬೇಕೆಂದು ಇಂಜಿನೀಯರ್ಸ್‌ಗೆ ಸೂಚನೆ ನೀಡಿದ್ದೇನೆ. ಕೆಲವು ಏರಿಯಾದಲ್ಲಿ ಅನಿವಾರ್ಯತೆ ಇದೆ. ಏಕೆಂದರೆ, ಬಹಳ ದೂರದಿಂದ ದೊಡ್ಡ ಪ್ರಮಾಣದಲ್ಲಿ ನೀರು ಹರಿದು ಬಂದು ಸೇರಿಕೊಳ್ಳುತ್ತವೆ. ಉದಾಹರಣೆಗೆ: ಮಡಿವಾಳ ರಾಜ ಕಾಲುವೆಯಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ನೀರು ಸೇರುತ್ತಿದೆ ಹಾಗೂ drainage water ಕೂಡಾ ಅಲ್ಲಿ ಸೇರುತ್ತಿದೆ. ಎಲ್ಲೆಲ್ಲಿ treatment plant ಇದೆ, ಅವುಗಳನ್ನೂ ಚಾಲನೆ ಮಾಡಿ ಕೂಡಲೇ treat ಮಾಡಿ, ನೀರನ್ನು ಬಿಡಿ ಎಂದು ಆದೇಶ ನೀಡಿದ್ದೇವೆ. ಈ 128 ಕಿಲೋ ಮೀಟರ್ ರಾಜ ಕಾಲುವೆಗಳನ್ನು ಕೈಗೆತ್ತಿಕೊಂಡರೆ ಬಹುತೇಕ ಸಮಸ್ಯೆಗಳು ಬಗೆಹರಿಯುತ್ತವೆ. ಉಳಿದ ರಾಜ ಕಾಲುವೆಗಳ ಸಮಸ್ಯೆಯನ್ನು ಸಹ ಮುಂದಿನ ವರ್ಷಗಳಲ್ಲಿ ಮುಗಿಸುತ್ತೇವೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ನೀಡಿರುವ ಉತ್ತರದಲ್ಲಿ ಇನ್ನೂ ರೂ.4670.42 ಕೋಟಿ ಅನುದಾನ ಬೇಕಾಗಿರುತ್ತದೆ ಎಂದು ತಿಳಿಸಿದ್ದಾರೆ. ಈ ಹಿಂದೆ ಎರಡು ಸಾವಿರ ಅಥವಾ ಎರಡೂವರೆ ಸಾವಿರ ಕೋಟಿ ರೂಪಾಯಿ ಖರ್ಚು ಮಾಡಲಾಗಿದ್ದು, ಎಷ್ಟು ರಾಜ ಕಾಲುವೆಗಳು ಸಂಪೂರ್ಣಗೊಂಡಿವೆ. ಏಕೆಂದರೆ ಉತ್ತರದಲ್ಲಿ 428 ಕಿಲೋ ಮೀಟರ್ ಎಂದು ತಿಳಿಸಲಾಗಿದ್ದು, ಬಾಕಿ 414 ಕಿಲೋ ಮೀಟರ್ ಬಾಕಿ ಇದೆ. ಸಂಪೂರ್ಣವಾಗಿ comprehensive ಆಗಿ ಯೋಜನೆಯನ್ನು ರೂಪಿಸಲಾಗಿದೆ, ಆ ಯೋಜನೆ ಪ್ರಕಾರ ಎಲ್ಲಿ ಅವಶ್ಯಕತೆ ಇದೆ, ಅಂತಹ ಕಡೆಗಳಲ್ಲಿ ಆದ್ಯತೆ ಮೇರೆಗೆ ತೆಗೆದುಕೊಳ್ಳುವುದರ ಕಡೆ ಗಮನಹರಿಸಬೇಕಾಗಿದೆ. ಆದರೆ, 128 ಕಿಲೋ ಮೀಟರ್ ರಾಜಕಾಲುವೆಯನ್ನು ಮಾತ್ರ ತೆಗೆದುಕೊಳ್ಳಲಾಗುತ್ತದೆ ಎಂದು ಹೇಳುತ್ತಿದ್ದಾರೆ.

(ಮುಂದು)

(1285) 23-12-2021 /11.40 / SK-RN **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪಿ.ಆರ್.ರಮೇಶ್ (ಮುಂದು):-**

ತಕ್ಷಣ ಯಾವ ಏರಿಯಾದಲ್ಲಿ ಸಮಸ್ಯೆ ಇದೆ, ಅಂತಹದ್ದನ್ನು tackle ಮಾಡುವಂತಹದ್ದಕ್ಕೆ ಮಾಡಬೇಕು. ಬೆಂಗಳೂರಿನಲ್ಲಿ ಸಾಕಷ್ಟು ಜನ experts ಇದ್ದೇವೆ. ತಾವು ಮೀಟಿಂಗ್ ಕರೆದು ಮಾತನಾಡಿದರೆ, ಎಲ್ಲವೂ ಬರುತ್ತದೆ.

**ಸಭಾಪತಿಯವರು:-** ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ. ಮಾನ್ಯ ಪಿ.ಆರ್. ರಮೇಶ್‌ರವರೇ, ದಯವಿಟ್ಟು, ತಾವು ಕುಳಿತುಕೊಳ್ಳಿ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಎಲ್ಲೆಲ್ಲಿ bottlenecks ನ ಸಮಸ್ಯೆಯಿದೆಯೋ, ಅಲ್ಲಿಯೇ ಬಂದು tackle ಮಾಡುತ್ತೇವೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ 1153**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಒದಗಿಸಿದ್ದಾರೆ. ಒಟ್ಟು 842 ಎಕರೆ ರಾಜಕಾಲುವೆ ಇದೆ. ಇದರಲ್ಲಿ ಸುಮಾರು 382 ಎಕರೆ ಅತಿಕ್ರಮಣವಾಗಿದೆ. ಬಡವರ ಮನೆಗಳು ಯಾವ್ಯಾವುದು ಇತ್ತೋ, ಅವುಗಳನ್ನೆಲ್ಲಾ ಹೊಡೆದು ಹಾಕಿದ್ದಾರೆ. ಯಾರು ಸರ್ಧ ಸಧೃಡವಾಗಿದ್ದಾರೆ, ಅವರದ್ಯಾರದು ಮನೆಗಳನ್ನು ಮುಟ್ಟುವುದಕ್ಕೆ ಇಲಾಖಾಧಿಕಾರಿಗಳು ಹೋಗಿಲ್ಲ. ಈ ಭಾಗದ ಕೆಲಸಕ್ಕೆ ಸರ್ಕಾರ ತುಂಬಾ ಹಣ ಖರ್ಚು ಮಾಡುತ್ತಿದೆ. ಇದನ್ನು ನೋಡಿಕೊಳ್ಳುವಂತಹ ಅಧಿಕಾರಿಗಳು ಸರಿಯಾಗಿಲ್ಲ ಎನ್ನುವುದು ನನ್ನ ಭಾವನೆ. ಸುಮಾರು 198 ವಾರ್ಡ್‌ಗಳಲ್ಲಿ ಒಬ್ಬರೇ ಕಮಿಷನರ್ ಇದ್ದಾರೆ. ಒಂಭತ್ತು ಡಿವಿಜನ್‌ಗಳಿವೆ. ಆ ಒಂಭತ್ತು ಡಿವಿಜನ್‌ಗಳಿಗೆ minimum requirement at-least ಕೆ.ಎ.ಎಸ್., ಅಧಿಕಾರಿ ಇಲ್ಲವಾದರೆ ಐ.ಎ.ಎಸ್., ಅಧಿಕಾರಿಗಳನ್ನು ಹಾಕಿದರೆ, ಒಳ್ಳೆಯದು. ಕೆ.ಎ.ಎಸ್., ಅಧಿಕಾರಿಗಳನ್ನು ಹಾಕಿದರೆ ಆಗುತ್ತದೆ. ಬೇರೆ ಬೇರೆ ಇಲಾಖೆಗಳಿಂದ ಅಧಿಕಾರಿಗಳು ಹಣ ಖರ್ಚು ಮಾಡಿ, ಇಲ್ಲಿಗೆ ಎರವಲು ಆಗಿ ಬಂದು ಬಿಡುತ್ತಾರೆ. ಇಲ್ಲಿ ಅವರಿಗೆ ಕೆಲಸನೇ ಗೊತ್ತಿರುವುದಿಲ್ಲ. ಇದರಿಂದಾಗಿ ಬೆಂಗಳೂರು ಹದಗೆಟ್ಟು ಹೋಗುತ್ತಿದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಆನಂತರ ನಾನು ಹೇಳುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಯು.ಬಿ. ವೆಂಕಟೇಶ್‌ರವರು ಕೇಳಿರುವಂತಹ ಪ್ರಶ್ನೆ, ಈಗಾಗಲೇ ಪಿ.ಆರ್.ರಮೇಶ್‌ರವರ ಪ್ರಶ್ನೆಗೆ ಈಗಾಗಲೇ ಅದರ ಬಗ್ಗೆ ಸ್ವಲ್ಪ ಉತ್ತರವನ್ನು ಕೊಟ್ಟಿದ್ದೇನೆ. ರಾಜ ಕಾಲುವೆಯ ಸುತ್ತಲೂ ಅತಿಕ್ರಮಣ ಮಾಡಿದ್ದಾರೆಂಬ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ರಾಜ ಕಾಲುವೆಯಲ್ಲಿ ಒಟ್ಟು 382 ಅತಿಕ್ರಮಣವಾಗಿದೆ ಎಂದು identify ಮಾಡಿದ್ದೇವೆ. ಅದರಲ್ಲಿ ಸುಮಾರು 2626 ಪ್ರಕರಣಗಳು ಇವೆ. ಸುಮಾರು 1912 ಪ್ರಕರಣಗಳಲ್ಲಿ ತೆರವುಗೊಳಿಸಿ, ಅವುಗಳನ್ನು ಇತ್ಯರ್ಥ ಮಾಡಿದ್ದೇವೆ. ಕೇವಲ 714 ಪ್ರಕರಣಗಳು ಮಾತ್ರ ಇವೆ. ಇವುಗಳನ್ನು ತೆರವು ಮಾಡುವುದಕ್ಕೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಕೆಲವರು ಕೆಲವು ಕಾರಣದಿಂದಾಗಿ, ಮಾನ್ಯ ನ್ಯಾಯಾಲಯದ ಮೊರೆ ಹೋಗಿದ್ದಾರೆ. ಹಾಗಾಗಿ, ಎಲ್ಲಾ ಕಾರಣಗಳಿಂದ ನಿಂತಿದೆ. ಅದು ಬಂದ ಕೂಡಲೇ ನಾವು ಕ್ರಮ ಕೈಗೊಳ್ಳುತ್ತೇವೆ. ಮಾನ್ಯ ಸದಸ್ಯರು ಹೇಳಿದಂತೆ ಬಡವರ ಮನೆಗಳನ್ನು ಮಾತ್ರ ತೆಗೆಯುತ್ತಾರೆ. ಉಳ್ಳವರಿಗೆ ಮನೆಗಳನ್ನು ಉಳಿಸುತ್ತಾರೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಅದು ಖಂಡಿತವಾಗಿಯೂ ಇಲ್ಲ. ನಾನು ಮುಖ್ಯಮಂತ್ರಿಯಾಗಿ ಬಂದಮೇಲೆ ಸೂಚನೆಯನ್ನು ಕೊಟ್ಟಿದ್ದೇನೆ. ನಾನು ಇಲ್ಲಿ ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ಒಂದೆರಡು ಡೆವಲಪರ್ಸ್ ಕಟ್ಟಿರುವುದು ನನ್ನ ಗಮನಕ್ಕೆ ಬಂದಿತ್ತು. ಅವರಿಗೆ ಕೂಡಲೇ ನೋಟಿಸ್ ಕೊಟ್ಟು, ಆದೇಶ ಕೊಟ್ಟು, ಅವುಗಳನ್ನು ತೆರವುಗೊಳಿಸುವುದಕ್ಕೆ ಎಲ್ಲಾ ಸೂಚನೆಯನ್ನು ಕೊಟ್ಟಿದ್ದೇನೆ. ಅದರ ಬಗ್ಗೆ ದೊಡ್ಡವರು ಮಾನ್ಯ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನ್ಯಾಯಾಲಯಕ್ಕೆ ಹೋಗಿ, ತಡೆಯಾಜ್ಞೆ ತರುತ್ತಾರೆ ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಕಾರ್ಪೋರೇಷನ್‌ನಲ್ಲಿರುವಂತಹ Legal Panel ಗೆ ನಾನು ಒಂದು ಸ್ಪಷ್ಟವಾದ ನಿರ್ದೇಶನವನ್ನು ಕೊಟ್ಟಿದ್ದೇನೆ. ನೀವು ಬಹಳ docile ಆಗಿ, ಅಲ್ಲಿ ವಾದ ಮಾಡುವಂತಹ ಅವಶ್ಯಕತೆ ಇಲ್ಲ. ಕಾನೂನು ನಮ್ಮ ಪರವಾಗಿದೆ. ಗಟ್ಟಿಯಾಗಿ ವಾದ ಮಾಡಿ, ಇವುಗಳನ್ನು ತೆರವುಗೊಳಿಸುವಂತಹ ಜವಾಬ್ದಾರಿ ಅವರದಾಗಿದೆ. ಈ Legal Panel performance ಮೇಲೆ ನಾವು ಮುಂದುವರೆಸುತ್ತೇವೆ. ಎಷ್ಟು ಪ್ರಕರಣಗಳನ್ನು ತೆಗೆದುಕೊಂಡಿದ್ದೀರಿ? ಎಷ್ಟು ಪ್ರಕರಣಗಳಲ್ಲಿ ಗೆದ್ದಿದ್ದೀರಿ? ಮತ್ತು ಎಷ್ಟು ಪ್ರಕರಣಗಳಲ್ಲಿ ಸೋತಿದ್ದೀರಿ ಎನ್ನುವುದರ ಬಗ್ಗೆ analysis ಮಾಡುವುದಕ್ಕೆ ನಮ್ಮ ಆಯುಕ್ತರಿಗೆ ಹೇಳಿದ್ದೇನೆ. ಅದರ ಮೇಲೆ ಅವರನ್ನು ಮುಂದುವರೆಸುತ್ತೇವೆ. ಇಲ್ಲವಾದರೆ ಅವರನ್ನು ಮುಂದುವರೆಸುವುದಿಲ್ಲ ಎನ್ನುವ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಇನ್ನು ಮುಂದೆ ಯಾವುದೇ ಬೇಧ-ಭಾವವಿಲ್ಲದೇ, ತೆರುವುಗೊಳಿಸುವುದಕ್ಕೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮೊನ್ನೆ ಮಳೆಗಾಲದಲ್ಲಿ ಇಲ್ಲಿ ಅನಾಹುತವಾದಾಗ, ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದೇ, ಒಳ್ಳೇ ಒಂದು ಪುಣ್ಯ ಎಂದು ಹೇಳಿದರೆ, ಅದು ತಪ್ಪಾಗಲಾರದು. Legal Panel ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅವರು ಒಂದು ಕೇಸ್‌ಗೂ ಹೋಗುವುದಿಲ್ಲ. ಬೇರೆಯವರ ಪರವಾಗಿ ಆಗಿ ಬಿಡುತ್ತದೆ. ಸರ್ಕಾರಕ್ಕೆ ಸಂಬಂಧಪಟ್ಟ ವಿಚಾರಗಳು ಎಲ್ಲೆಲ್ಲಿ ಬರುತ್ತದೆಯೋ, ಈ Legal Panel ಗೆ ಏನಾದರೊಂದು special drive ಮಾಡಬೇಕು. ಮಾನ್ಯ ಅಶೋಕ್‌ರವರು ಒಂದು ಕೇಸ್‌ಗೆ ನಾಲ್ಕೈದು ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಮೊನ್ನೆ ತಾನೇ ಹೇಳಿದ್ದರು. ಅದರಿಂದ ಅವರು ಹಾಜರಾಗಲ್ಲ. ಅದಕ್ಕೆ ಫೀ ಅನ್ನು ಜಾಸ್ತಿ ಮಾಡುವುದಿಲ್ಲ. ಇದರಲ್ಲಿ ಏನು ತೀರ್ಮಾನ ಮಾಡಬೇಕು ಎಂಬುದರ ಬಗ್ಗೆ ತಾವೇ ಮಾಡಬೇಕು.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಇವರಿಗೆ ಸರಿಯಾದ ಫೀ ಇದೆ. ಫೀಗೂ ಮತ್ತು performance ಗೂ ಲಿಂಕ್ ಮಾಡುವುದು ಸರಿಯಲ್ಲ. ಏಕೆಂದರೆ, ಅವರು ಲೀಗಲ್ ಪ್ಯಾನಲ್‌ಗೆ ಬರಬೇಕೆಂದು ಬಂದಿರುತ್ತಾರೆ. ನನ್ನ ಲೀಗಲ್ ಪ್ಯಾನಲ್ ತೆಗೆದುಕೊಳ್ಳಿ ಎಂಬ ಬಗ್ಗೆ ಬಹಳಷ್ಟು ಸ್ಪರ್ಧೆ ಇದೆ. ಅವರು ಬಂದಮೇಲೆ, ಅವರು perform ಮಾಡಬೇಕು. ಆದ್ದರಿಂದ, performance based continuation ಎಂದು ಹೇಳಿದ್ದೇನೆ. ಮಾನ್ಯ ಸದಸ್ಯರು ಎಂಟು ವಲಯಗಳು ಮಾತನಾಡಿದ್ದಾರೆ. ಈಗಾಗಲೇ ಎಂಟು ವಲಯಗಳಿಗೆ ವಿಶೇಷ ಆಯುಕ್ತರಾದ ಐ.ಎ.ಎಸ್.ನವರೇ ಇದ್ದಾರೆ. ಅವರ ಕೆಳಗಡೆ ಜಿಲ್ಲಾಧಿಕಾರಿಗಳಿದ್ದಾರೆ. Zonal Commissioners ಇದ್ದಾರೆ. ಅವರಿಗೆ ಕೆಲಸ ಮಾಡುವುದಕ್ಕೆ ಹೇಳಬೇಕು. ಅದನ್ನು ಹೇಳುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಜಂಟಿ ಆಯುಕ್ತರು ಯಾರು ಅಲ್ಲಿ ಕೆಲಸ ಮಾಡುತ್ತಾರೋ, ಅವರು ಆ ಗ್ರೇಡ್‌ನವರು ಅಲ್ಲ. ದಯವಿಟ್ಟು, ಅದರ ಕಡೆ ಗಮನಹರಿಸಬೇಕೆಂದು ನಾನು ತಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳಿಕೊಳ್ಳುತ್ತೇನೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ 1257**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ವಿವಿಧ ರೀತಿಯ ಕಾಮಗಾರಿಗಳ ಉತ್ತರವನ್ನು ಕೊಟ್ಟಿದ್ದಾರೆ. ಕೆ.ಇ.ಬಿ. ಇಲಾಖೆ, ಟೆಲಿಫೋನ್ ಇಲಾಖೆ, ವಾಟರ್, ಡ್ರೈನೇಜ್, ಗ್ಯಾಸ್, ಮರ ತೆರವು ಎಲ್ಲಾ ಮಾಹಿತಿಯನ್ನು ಕೊಟ್ಟಿದ್ದಾರೆ. ಕಾಮಗಾರಿ ಎಷ್ಟು ದಿನಗಳವರೆಗೆ ನಡೆಯುತ್ತದೆ ಎನ್ನುವುದಕ್ಕೆ ಆರವತ್ತು ದಿನ, ನೂರೈವತ್ತು ದಿನ, ಒಂದು ವರ್ಷ, ಒಂದೂವರೆ ವರ್ಷ ಎಂದು ನಿರ್ದಿಷ್ಟ ದಿನಗಳನ್ನು ಸೂಚಿಸಿದ್ದಾರೆ. ಈ ಅವಧಿಗಳಲ್ಲಿ ಕೆಲಸಗಳಾಗುತ್ತಿಲ್ಲ. ಎಲ್ಲಾ ಕಾಮಗಾರಿಗಳು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವಂತಹದ್ದು ಆಗುತ್ತದೆ. ಇದರಿಂದ ಸಾರ್ವಜನಿಕರಿಗೆ ಅನೇಕ ತೊಂದರೆಗಳಾಗುತ್ತದೆ. ಇವರು ಉಲ್ಲೇಖ ಮಾಡಿರುವಂತೆ, ರಸ್ತೆಗಳ ಅಗಲೀಕರಣವನ್ನು ಮಾಡುತ್ತಾರೆ. ಅರ್ಧ ರಸ್ತೆ ಅಗಲೀಕರಣವಾಗುತ್ತದೆ. ಅಷ್ಟು ಹೊತ್ತಿಗೆ ಒಬ್ಬರು ತಡೆಯಾಜ್ಞೆಯನ್ನು ತರುತ್ತಾನೆ. ಕಂಟ್ರ್ಯಾಕ್ಟರ್‌ಗಳು ಇದರಲ್ಲಿ ಯಾವ ವ್ಯವಸ್ಥೆಯನ್ನು ಮಾಡದೇ ಕೆಲಸ ಮಾಡುತ್ತಾರೆ. ಒಂದು ಬದಿಯ ರಸ್ತೆಯನ್ನು ಮಾಡುತ್ತಿದ್ದೇವೆಂದು ಉಲ್ಲೇಖ ಮಾಡಿದರು. ಒಂದು ಬದಿಯ ರಸ್ತೆಯನ್ನು ಮಾಡುತ್ತಾ, ಮಾಡುತ್ತಾ, ಇನ್ನೊಂದು ಕಡೆ ಖುಲ್ಲಾ ಇರುತ್ತದೆ. ಆ ರಸ್ತೆಯಾದ ಕೂಡಲೇ ಇನ್ನೊಂದು ರಸ್ತೆಯ ಅಗಲೀಕರಣ ಮಾಡುವುದಿಲ್ಲ. ಉದಾಹರಣೆಗೆ ಶೇಷಾದ್ರಿಪುರಂ ರಸ್ತೆಯಲ್ಲಿ ಆರೇಳು ತಿಂಗಳಿನಿಂದ ಒಂದು ರಸ್ತೆ ಪೂರ್ತಿಯಾದರೂ ಕೂಡ, ಇನ್ನೊಂದು ರಸ್ತೆ ಪೂರ್ತಿಯಾಗುವುದಿಲ್ಲ. ಒಬ್ಬ ಕೆ.ಇ.ಬಿ.ಯವರು ರಸ್ತೆಯನ್ನು ಅಗಿಯುವುದಕ್ಕೆ ಹೋಗುತ್ತಾನೆ, ಅಗಿದು ಮುಚ್ಚುವಂತಹ ಸಂದರ್ಭದಲ್ಲಿ, ಇನ್ನೊಬ್ಬರು ಬರುತ್ತಾರೆ. ಇದಕ್ಕೆ alternative ವ್ಯವಸ್ಥೆಯೇ ಇಲ್ಲ. ಎಲ್&ಟಿ. ಕಂಪನಿಗಳಲ್ಲಿ ಸ್ವಲ್ಪ ತೊಂದರೆಯಾದರೂ ಕೂಡ, ಅದು ಸ್ವಲ್ಪ ರೀತಿಯಲ್ಲಿ ವ್ಯವಸ್ಥೆಯಾಗುತ್ತದೆ. ಬಿ.ಬಿ.ಎಂ.ಪಿ., ಯಿಂದ ನಡೆಯುವಂತಹ ಕೆಲಸಗಳು ಯಾವುದು ಕೂಡ ಸುಸೂತ್ರವಾಗಿ ನಡೆಯುವುದಿಲ್ಲ. ರಸ್ತೆಯ ಮಧ್ಯೆದಲ್ಲಿ ಮರ ಇದೆ ಎಂದು ಹೇಳಿ, ಅದಕ್ಕೆ ಅನುಮತಿ ಇಲ್ಲವೆಂದು, ಕೆಲಸವನ್ನು ಹಾಗೆ ನಿಲ್ಲಿಸಿ ಬಿಡುತ್ತಾರೆ ಮತ್ತು ಹೊಂಡ ಕೂಡ ಅಲ್ಲಿಯೇ ಇರುತ್ತದೆ. ಇಷ್ಟೊಂದು ದೊಡ್ಡ ಅವ್ಯವಸ್ಥೆಯಾಗುತ್ತಿದೆ. ಕಟ್ಟಡ ನಿಯಂತ್ರಣದ ಒಂದು ಸಂಸ್ಕೃತಿ ಇರುತ್ತದೆ. ಈ ವ್ಯವಸ್ಥೆಯನ್ನು ಮಾಡಬೇಕಾದರೆ, ನಾನು ಕೊನೆಯದಾಗಿ ಪ್ರಶ್ನೆಯನ್ನು ಕೇಳಿದ್ದೇನೆ. ಕಾಮಗಾರಿ ಗುಣ ನಿಯಂತ್ರಣ ಮಂಡಳಿಯವರು ವರದಿ ಕೊಟ್ಟಿದ್ದನ್ನು ಹೇಳಿದ್ದಾರೆ. ಡಾ|| ವಿಶ್ವನಾಥ್‌ರವರು, ರವೀಂದ್ರರವರು ಇವರು ಇದ್ದುಕೊಂಡು, ಅವರೊಂದು ವರದಿಯನ್ನು ರಚನೆ ಮಾಡಿ, 2008 ರಲ್ಲಿ ಕಾರ್ಯಪಡೆಯ ಕೆಲಸವನ್ನು ಮಾಡಿ, ಮಧ್ಯಂತರ ವರದಿಯನ್ನು ಕೊಟ್ಟಿದೆ. ಕಳೆದ ಬಾರಿ ಸದನದಲ್ಲಿ ಇದನ್ನೇ ಹೇಳಿದ್ದೇನೆ. ಆ ವ್ಯವಸ್ಥೆಯ ನಿರ್ಮಾಣ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಇವತ್ತಿನವರೆಗೂ ಮಾಡಿಲ್ಲ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ರಸ್ತೆಗಳಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲಾಗುವ ಅಗತ್ಯವಿರುವ ನಿರ್ಮಾಣ ಸಂಸ್ಕೃತಿ ನೀತಿಯನ್ನು ಸರ್ಕಾರ ಸಿದ್ಧಪಡಿಸುವುದೇ? ನಾನು ಕೇಳಿರುವಂತಹ ಪ್ರಶ್ನೆ ಏನೆಂದರೆ, ರೂಪಿಸುವ ಕ್ರಮ ಕೈಗೊಳ್ಳುವುದೇ ಎಂಬ

ಪ್ರಶ್ನೆಯನ್ನು ಕೇಳಿದ್ದೆ. ಇವರು ಇಲಾಖೆಯಲ್ಲಿ ಸಲ್ಲಿಸಿರುವುದಾಗಿ ತಿಳಿದು ಬಂದಿರುತ್ತದೆ. ಇದನ್ನು ಹೇಳುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಂದ ಮಾತ್ರ ಸಾಧ್ಯ. ಮಾನ್ಯ ಮುಖ್ಯಮಂತ್ರಿಗಳ ಮೇಲೆ ವಿಶ್ವಾಸವಿದೆ. ಈ ಕೆಲಸ ಏನಾದರೂ ಆಗುವುದಾದರೆ, ಮಾನ್ಯ ಮುಖ್ಯಮಂತ್ರಿಗಳಿಂದ ಮಾತ್ರ ಸಾಧ್ಯ. ಈ ಒಂದು ನಿರ್ಮಾಣ ಸಂಸ್ಕೃತಿಯ ನೀತಿಯನ್ನು ಸರ್ಕಾರ ಸಿದ್ಧಪಡಿಸಬೇಕು. ಅದಕ್ಕೆ ಸಂಬಂಧಪಟ್ಟಂತಹ ಒಂದು ಕಮಿಟಿ ಮಾಡಿ, ಕೆಲಸವನ್ನು ಮಾಡಬೇಕೆಂದು ಹೇಳಿ, ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ರಸ್ತೆಗಳ ಬಗ್ಗೆ ಹಲವಾರು ಬಾರಿ ಚರ್ಚೆಯಾಗಿದೆ. ರಸ್ತೆ, ಫುಟ್‌ಪಾತ್‌ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬಿ.ಡಬ್ಲ್ಯೂ.ಎಸ್.ಎಸ್.ಬಿ., ಬೆಸ್ಕಾಂ, ಕೆ.ಪಿ.ಟಿ.ಸಿ.ಎಲ್., ಬಿ.ಎಂ.ಆರ್.ಸಿ.ಎಲ್, ಕೆ.ಆರ್.ಡಿ.ಸಿ.ಎಲ್, Minor Irrigation ಕೆಲಸ ಮಾಡುತ್ತದೆ. ಬಹಳ ಬೃಹತ್ ಆಗಿದೆ. ಇದು ಹೇಳಿದಷ್ಟು ಸುಲಭವಲ್ಲ. ಅವೆಲ್ಲಾ activity ಆಗಬೇಕು. ಬೆಂಗಳೂರು ರಸ್ತೆ ನಿರ್ಮಾಣ ಎಂದರೆ, ಬರೀ ಯಾವುದೋ ಒಂದು ರಸ್ತೆಯನ್ನು ನಿರ್ಮಾಣ ಮಾಡಿ, ವಾಹನಗಳು ಓಡಾಡುವುದಲ್ಲ. ಅದರಲ್ಲಿ ಎಲ್ಲಾ ಸೇವೆಗಳು ಬರುತ್ತವೆ. ಇವತ್ತು ಗ್ಯಾಸ್, ವಾಟರ್, sewage ಸೇವೆಗಳು ಬರುತ್ತವೆ. ಬೃಹತ್ ಇಂಜಿನಿಯರಿಂಗ್ ಟಾಸ್ಕ್ ಇದೆ. ಈಗಾಗಲೇ ಒಂದು ಕಾರಣವನ್ನು ಹೇಳಿದ್ದೇನೆ. ಮಾನ್ಯ ಸದಸ್ಯರು ಹೇಳಿದಂತೆ, ಕೆಲವು ಮಾನ್ಯ ನ್ಯಾಯಾಯದ ಮೊರೆ ಹೋಗುತ್ತಾರೆ. ಕೆಲವು ಕಡೆ ಭೂ ಸ್ವಾಧೀನ ಇದೆ. ಕೆಲವು ಕಡೆ traffic diversion issues ಇದೆ. ಒಂದು ರಸ್ತೆಯನ್ನು ಮಾಡಬೇಕಾದರೆ, ಪೈಪ್‌ಲೈನ್ ಶಿಫ್ಟ್ ಮಾಡಬೇಕಾಗುತ್ತದೆ. Sewage ಅನ್ನು ಕೂಡ ಶಿಫ್ಟ್ ಮಾಡಬೇಕಾಗುತ್ತದೆ. Sewage ಅನ್ನು ಒಂದೇ ಬಾರಿ ಶಿಫ್ಟ್ ಮಾಡುವುದಕ್ಕಾಗುವುದಿಲ್ಲ. ಆ sewage ಅನ್ನು ಮೊದಲು ಬೇರೆ ಕಡೆ divert ಮಾಡಿ, ಆನಂತರ ಶಿಫ್ಟ್ ಮಾಡಬೇಕಾಗುತ್ತದೆ. Ground level challenges ಇದೆ. ತಾವೆಲ್ಲರೂ ಕೂಡ ಇದನ್ನು ಅರ್ಥ ಮಾಡಿಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ. ಮಾನ್ಯ ಸದಸ್ಯರು ಕ್ವಾಲಿಟಿ ಬಗ್ಗೆ ಕೇಳಿದರು. ಈಗಾಗಲೇ ಕ್ವಾಲಿಟಿ ಬಗ್ಗೆ ಹಲವಾರು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. Indian Quality Standards, Indian Standard Code ಪ್ರಕಾರ ನಾವು ರಸ್ತೆಗಳನ್ನು ಮಾಡುತ್ತಿದ್ದೇವೆ. ಅದಕ್ಕೆ ಬೇಕಾದಂತಹ guidelines ಕೊಟ್ಟಿದ್ದೇವೆ. ಪರಿಣತರಾದ TATA Steel ಮತ್ತಿತರ ಎಲ್ಲರನ್ನು ಇದರಲ್ಲಿ involve ಮಾಡಿಕೊಂಡು Third Party Inspection ಮಾಡಿಕೊಂಡು ಮಾಡುತ್ತಿದ್ದೇವೆ.

(ಮುಂದು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(1286)23.12.2021/11.50/ಎಂ.ಎಂ-ವಿ.ಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಸವರಾಜ ಬೊಮ್ಮಾಯಿ [ಮುಂದು]:-**

ಇನ್ನಷ್ಟು ಬಿಗಿ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಗುಣಮಟ್ಟವನ್ನು ಎಲ್ಲಾ ಹಂತದಲ್ಲೂ ಚೆಕ್ ಮಾಡಬೇಕೆಂದು ಸೂಚನೆ ಕೊಟ್ಟಿದ್ದೇವೆ. ಎಲ್ಲಾ ಪೂರ್ಣವಾದ ಮೇಲೆ ಗುಣಮಟ್ಟವನ್ನು ಚೆಕ್ ಮಾಡಿದರೆ ಪ್ರಯೋಜನವಿಲ್ಲ. ಪ್ರಾರಂಭದಿಂದ ಹಿಡಿದು ಕೊನೆಯವರೆಗೂ ಅದು digging of the road ಹಿಡಿದು, laying of pipeline and roads quality ಎಲ್ಲವನ್ನೂ ಕೂಡ ಎಲ್ಲಾ ಹಂತದಲ್ಲಿಯೂ ಗುಣಮಟ್ಟದಲ್ಲಿ ಮಾಡಬೇಕು ಮತ್ತು Third Party Inspection ಗೂ ಕೆಲವು ನಿರ್ದೇಶನಗಳನ್ನು ಕೊಡಬೇಕೆಂದು ಸೂಚನೆ ಕೊಟ್ಟಿದ್ದೇವೆ. Advance action ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ. ಒಂದು ರಸ್ತೆ ಮಾಡುವುದಕ್ಕಿಂತ ಮುಂಚೆ ಅಲ್ಲಿ ಏನಾದರೂ ಭೂಸ್ವಾಧೀನತೆ ಇದೆಯೇ, road diversion ಇದೆಯೇ ಎಂಬ ಬಗ್ಗೆ ಮೊದಲೇ advance action ತೆಗೆದುಕೊಂಡು ಅವರಿಗೆ ತಿಳಿಸಿ ಆಮೇಲೆ ರಸ್ತೆ ಮಾಡುವುದಕ್ಕೆ ಸಮಯವನ್ನು ಕಡಿಮೆ ಮಾಡುವ ಸಲುವಾಗಿ ಕ್ರಮ ತೆಗೆದುಕೊಂಡಿದ್ದೇವೆ. ಈಗಾಗಲೇ ಒಂದು Task Force ಮಾಡಿದ್ದೇವೆ. ಅವರು ಹೇಳಿದಂತೆ ಎಲ್ಲಾ ಇಲಾಖೆಗಳ ಜೊತೆಗೆ ಸಮನ್ವಯ ಮಾಡಿಕೊಂಡು ಮಾಡುವುದಕ್ಕೆ ಅವರೇನು ಸಲಹೆ ಕೊಟ್ಟಿದ್ದಾರೆ ಅದನ್ನು ಗಂಭೀರವಾಗಿ ಪರಿಗಣಿಸಿ ಬರುವಂತಹ ದಿನಗಳಲ್ಲಿ ಕಾರ್ಯಾಚರಣೆ ಮಾಡುತ್ತೇವೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಗುಣಮಟ್ಟ ಮತ್ತು ವ್ಯವಸ್ಥೆಯ ಬಗ್ಗೆ ಕೇಳುತ್ತಿದ್ದೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ನಿಮ್ಮ ಸಲಹೆಯನ್ನು ಗಂಭೀರವಾಗಿ ಪರಿಗಣಿಸಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾವು ಯಾವುದಾದರೂ ಕೆಲಸ ಮಾಡಬೇಕಾದರೆ; ಈಗ ನಾವು ಅಡಿಗೆ ಮಾಡುವಾಗ ಉಪ್ಪನ್ನು ತಂದು ಅಡಿಗೆ ಮಾಡುವುದಿಲ್ಲ. ಎಲ್ಲಾ ಸಾಮಾನುಗಳನ್ನು ಇಟ್ಟುಕೊಂಡು ಮಾಡುತ್ತೇವೆ. ಅದೇ ರೀತಿ ಗುತ್ತಿಗೆದಾರರು ಕಾಮಗಾರಿಗಳನ್ನು ಮಾಡುವಾಗ ಎಲ್ಲಾ ವ್ಯವಸ್ಥೆಗಳನ್ನೂ ಮಾಡಿಕೊಂಡು ಮಾಡಬೇಕು. ಮಧ್ಯದಲ್ಲಿ ಕೆ.ಇ.ಬಿ., ಬಂತು, ಮರ ಕಡಿಯಬೇಕಾದಾಗ ಅರಣ್ಯ ಇಲಾಖೆಗೆ ಹೋಗಬೇಕು. . . .

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ ಮೇಲೆ ಉತ್ತರವನ್ನೂ ಕೇಳಬೇಕು. Advance action ತೆಗೆದುಕೊಳ್ಳುತ್ತೇವೆ. ಅಲ್ಲಿ ಏನಾದರೂ ಭೂ ಸ್ವಾಧೀನತೆ ಇದೆಯೇ, ವಿದ್ಯುಚ್ಛಕ್ತಿ ಸಮಸ್ಯೆ ಇದೆಯೇ ಅಥವಾ traffic diversion ಇದೆಯೇ ಎಂಬ ಬಗ್ಗೆ advance action ತೆಗೆದುಕೊಳ್ಳುವುದಕ್ಕೆ ಒಂದು Task Force ಮಾಡಿದ್ದೇವೆ. ಆ Task Force ಮುಖಾಂತರ ಎಲ್ಲಾ ಇಲಾಖೆಗಳೊಂದಿಗೆ ಸಮನ್ವಯತೆ ಮಾಡಿಕೊಂಡು advance action ತೆಗೆದುಕೊಂಡು ಆಮೇಲೆ ರಸ್ತೆಗಳನ್ನು ಮಾಡುತ್ತೇವೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಪ್ರಶ್ನೆ ಸಂಖ್ಯೆ: 1252**
**(ಉತ್ತರವನ್ನು ಲಗತ್ತಿಸಿದೆ)**

**ಡಾ: ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಕೊಟ್ಟಿದ್ದಾರೆ. ನಾನು ಮುಖ್ಯಮಂತ್ರಿಯವರು ಹಾಗೂ ಬೆಂಗಳೂರು ನಗರದ ಉಸ್ತುವಾರಿ ವಹಿಸಿರುವ ಮುಖ್ಯಮಂತ್ರಿಯವರಲ್ಲಿ ಮನವಿಯೇನೆಂದರೆ ಡ್ರೈವಿಂಗ್ ಕಷ್ಟದ ಸ್ಥಿತಿ ಬೆಂಗಳೂರು ನಂ.11 ಇದು world study ಪ್ರಕಾರ ಬಂದಿರುವ ವರದಿ. ಇದನ್ನು ಸರ್ಕಾರ ಹೌದು ಎಂದು ಒಪ್ಪಿಕೊಂಡಿದೆ. ಇದಕ್ಕೆ ಏನು ಮಾಡುತ್ತೇವೆ ಎಂದು ಹೇಳಿಲ್ಲ. ಹೌದು ಎಂದು ಒಪ್ಪಿಕೊಂಡಿದೆ. ಇವತ್ತು potholes ಇಷ್ಟಿದೆ ಇದನ್ನು ತಮಗೆ ಕಳುಹಿಸಿಕೊಡುತ್ತೇನೆ. ದಯಮಾಡಿ ಮುಖ್ಯಮಂತ್ರಿಯವರಿಗೆ ಇದನ್ನು ಕೊಡಿ. ಇದರಲ್ಲಿ ಏನು ಹೇಳುತ್ತಾರೆಂದರೆ 'ಗುಂಡಿಯಿಂದ ಅಪಘಾತ, ಪ್ರಾಣ ಬಿಟ್ಟ ಬಾಲಕಿ'. 'ರಸ್ತೆ ಗುಂಡಿ ಮುಚ್ಚಿ ಅಮೂಲ್ಯ ಜೀವ ಉಳಿಸಿ' ಇದನ್ನು ಕೋರ್ಟ್ ಹೇಳುತ್ತದೆ. 'ಗುಂಡಿ ಮುಚ್ಚಿದ ವಾರದಲ್ಲಿಯೇ ಕಿತ್ತು ಹೋದ ರಸ್ತೆ', ರಸ್ತೆ ಮಧ್ಯದಲ್ಲಿ ಕುಸಿತ, ಹೊಂಡದಲ್ಲಿ ಬಿದ್ದ ಬಾಲಕ, ರಸ್ತೆ ಗುಂಡಿಗೆ ಸವಾರ ಬಲಿ. ಗುಂಡಿ ಬಿದ್ದ ರಸ್ತೆಗೆ ಹೂ ಅಲಂಕಾರ ಮಾಡಿ ಹೋಮ ಮಾಡಿ ವಿಶಿಷ್ಟ ಪ್ರತಿಭಟನೆ, ವಾಹನ ಸವಾರರಿಗೆ ರಸ್ತೆ ಕಾಮಗಾರಿ ಕಂಟಕ.

**ಸಭಾಪತಿಯವರು**:- ಈಗ ಏನು ಮಾಡಬೇಕೆಂದು ಹೇಳಿ.

**ಡಾ: ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡುವುದು ಮತ್ತು ಸಲಹೆ ಕೊಡುವುದೇನೆಂದರೆ, ಗುಂಡಿಗಳನ್ನು ಮುಚ್ಚುವುದು ಎಂದರೆ ಸುಮ್ಮನೇ 'ಕೃಷ್ಣದೇವರಾಯ ತೆನಾಲಿ ರಾಮಕೃಷ್ಣನಿಗೆ ಕುದುರೆಗೆ ನೀರು ತೋರಿಸಿಕೊಂಡು ಬರುವಂತೆ ಹೇಳುತ್ತಾರೆ. ಅವನು ನೀರನ್ನು ತೋರಿಸಿಕೊಂಡು ಬರುತ್ತಾನಷ್ಟೇ, ನೀರನ್ನು ಕುಡಿಸುವುದಿಲ್ಲ'. ಇದು ಆ ತರಹ ಆಗಿದೆ. ಏಕೆಂದರೆ ಈ ಅಧಿಕಾರಿಗಳೇನು ಮಾಡುತ್ತಾರೆ ಎಂದರೆ ಗುಂಡಿ ಮುಚ್ಚುವುದಕ್ಕೆ ಸುಮ್ಮನೇ ಹೀಗೆಂದು ಬರುತ್ತಾರೆ, ಅದು ಇನ್ನೊಂದು ವಾರಕ್ಕೆ ಮತ್ತೆ ಕಿತ್ತು ಹೋಗುತ್ತದೆ. ಬಿ.ಬಿ.ಎಂ.ಪಿ ಯಲ್ಲಿ Quality Assurance Department ಇದೆ. ತಾವು ಇದರ ಬಗ್ಗೆ ಗಂಭೀರವಾಗಿ ಆದೇಶ ಮಾಡಿ ಇದನ್ನು ಸರಿಯಾಗಿ ಮುಚ್ಚುವಂತಹ ಕೆಲಸ ಆಗಬೇಕು. ಉದಾಹರಣೆಗೆ ಹೇಳುವುದಾದರೆ ತಾವು ಹೆಚ್ಚಾಗಿ ಹೆಚ್.ಎ.ಎಲ್ ವಿಮಾನ ನಿಲ್ದಾಣಕ್ಕೆ ಓಡಾಡುತ್ತೀರಿ. ಈಗ ಅಲ್ಲೊಂದು ರಸ್ತೆ ಮಾಡಿದ್ದಾರೆ ಅದನ್ನು KRIDL (Karnataka Rural Infrastructure Development Limited) ಗೆ ಕೊಟ್ಟಿದ್ದಾರೆ. ನಾನು ಆಯುಕ್ತರನ್ನು ಮೊನ್ನೆ ತಾನೇ ರಸ್ತೆ ಮಾಡಲಾಗಿದೆ ಆಗಲೇ 5-6 ಗುಂಡಿ ಬಿದ್ದಿದೆ ಎಂದು ಕೇಳಿದೆ. ಆಗ ಅವರು ಇದನ್ನು ಬಿ.ಬಿ.ಎಂ.ಪಿ.ಯಿಂದ ಮಾಡಿಲ್ಲ, KRIDL ನವರು ಮಾಡಿದ್ದಾರೆ ಎಂದು ಹೇಳಿದರು. KRIDL ಗೆ ಏತಕ್ಕೆ ಕೊಡುತ್ತೀರಿ? ಅವರಿಗೆ ಕೊಟ್ಟರೆ ಲಾಭ ಮಾಡಿಕೊಳ್ಳುತ್ತಾರೆ ಹೊರತು ಬಿ.ಬಿ.ಎಂ.ಪಿ ಗೆ ಒಳ್ಳೆಯ ಹೆಸರು

ತಿದ್ದುಪಡಿಯಾಗದ ಪ್ರತಿ,ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬರುವುದಿಲ್ಲ. ಆದ್ದರಿಂದ ತಾವು ಬಿ.ಬಿ.ಎಂ.ಪಿ.ಯಿಂದಲೇ ಮಾಡಿಸಿ ಎನ್ನುವುದು ನನ್ನ ಸಲಹೆ. ಬಹಳಷ್ಟು ರಸ್ತೆಗಳು ಹೀಗೇ ಆಗಿವೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಹಾಗಾದರೆ ಬಿ.ಬಿ.ಎಂ.ಪಿ. ಗೆ ಕೊಡಬೇಕೇ?

**ಡಾ: ಕೆ.ಗೋವಿಂದರಾಜ್**:- ಮಾನ್ಯ ಮುಖ್ಯಮಂತ್ರಿಯವರೇ, ಬಿ.ಬಿ.ಎಂ.ಪಿ.ಗೆ ಎಂದರೆ, ನಾನೇನು ಅಲ್ಲಿಯೂ ಒಪ್ಪಿಗೆ ಕೊಡುವುದಿಲ್ಲ. KRIDL ಗೆ ಏತಕ್ಕೆ ಕೊಡುತ್ತೀರಿ ಎಂದು ಕೇಳುತ್ತಿದ್ದೇನೆ. ಲೋಕೋಪಯೋಗಿ ಇಲಾಖೆಯಿಂದ ಮಾಡಿಸಿ. Quality Assurance Department ಮಾಡಿಸಿ ಎಂದು ಹೇಳುತ್ತೇನೆ. ರಸ್ತೆ ಗುಂಡಿಗಳು ಒಂದು ಮಾಫಿಯಾ ಆಗಿದೆ. ಜೊತೆಗೆ ಪಾದಚಾರಿಗಳ ರಸ್ತೆ ಇದೆ. ಅಲ್ಲಿ ಕ್ಯಾಂಟೀನ್, ಕೈಗಾಡಿಗಳಲ್ಲಿ ತಿಂಡಿ-ತಿನಿಸು ಮಾರುವುದರಿಂದ ಫುಟ್‌ಪಾತ್‌ನಲ್ಲಿ ಜನರು ಓಡಾಡುವುದಕ್ಕೆ ಆಗುವುದಿಲ್ಲ ಮತ್ತು ಅಲ್ಲಿ traffic jam ಆಗುತ್ತದೆ. ಎಲ್ಲಾ residential area ಗಳಲ್ಲಿ ಈ ಸಮಸ್ಯೆ ಇದೆ. ಇದಕ್ಕೆ ಬಿ.ಬಿ.ಎಂ.ಪಿ. ಅಧಿಕಾರಿಗಳು ಮತ್ತು ಪೊಲೀಸ್ ಅಧಿಕಾರಿಗಳೊಂದಿಗೆ ಒಂದು ಸಭೆ ಮಾಡಿದರೆ ಒಳ್ಳೆಯದು ಎಂದುಕೊಳ್ಳುತ್ತೇನೆ. ಎರಡನೆಯದಾಗಿ, ತಾವು ತಿಂಗಳಿಗೊಂದು ಸಲ ಬೆಂಗಳೂರು ನಗರವನ್ನು ಪ್ರದಕ್ಷಿಣೆ ಹಾಕಬೇಕು. ಅಂದರೆ, ನೀವು ಅವರು ಕೊಡುವ route ಮೇಲೆ ಹೋಗಬೇಡಿ. ತಾವೇ ಒಂದು route select ಮಾಡಿ ಇಂತಿಂಥ ಏರಿಯಾಗಳಲ್ಲಿ ನಿಮ್ಮ intelligence ನಿಂದ ಮಾಹಿತಿ ತರಿಸಿಕೊಳ್ಳಿ. ಎಲ್ಲೆಲ್ಲಿ ಕಳಪೆ ಕೆಲಸಗಳಾಗಿವೆ, ಎಲ್ಲೆಲ್ಲಿ ನಿಜವಾಗಲೂ ತಾವು ನೋಡಬೇಕಾಗಿದೆ, ಕಸ ಎಲ್ಲಿರುತ್ತದೆ, ಗುಂಡಿಗಳೆಲ್ಲಿದೆ, ಎಲ್ಲೆಲ್ಲಿ ಕಾನೂನುಬಾಹಿರ ಎಂಬ ಬಗ್ಗೆ ತಾವು ಒಂದು ಸಲ private visit ಮಾಡಿ. ನೀವು ವಿಸಿಟ್ ಮಾಡುವಾಗ ಒಂದು ಭಾಗವನ್ನು ಆಯ್ಕೆ ಮಾಡಿಕೊಳ್ಳಿ. ಪೂರ್ವ ಭಾಗಕ್ಕೆ ಭಾನುವಾರದಂದು visit ಮಾಡಿ. ಏಕೆಂದರೆ ಆಗ traffic jam ಆಗುವುದಿಲ್ಲ, ಜನರಿಗೂ ಕಿರಿಕಿರಿಯಾಗುವುದಿಲ್ಲ ಎಂದು ನನ್ನ ಸಲಹೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಗೋವಿಂದರಾಜುರವರು ನನಗೆ ಆತ್ಮೀಯ ಮಿತ್ರರು.

**ಸಭಾಪತಿಯವರು:-** ಅವರು ಎಲ್ಲರಿಗೂ ಆತ್ಮೀಯರು.

**ಶ್ರೀ ಬಸವರಾಜ ಬೊಮ್ಮಾಯಿ:-** ಅವರು ಲೀಡರ್ ಆಗುವುದಕ್ಕಿಂತ ಮುಂಚೆ ನನ್ನ ಆತ್ಮೀಯ ಮಿತ್ರರು. ಲೀಡರ್ ಆದಮೇಲೆ ಅಲ್ಲ. ಲೀಡರ್ ಆದಮೇಲೆ ಲೀಡರ್‌ಗೆ ಆತ್ಮೀಯರಾದರು ನಮಗೆ ಆಗಲಿಲ್ಲ. ಏನೂ ಇಲ್ಲದಾಗಲೂ ಅವರು ನನ್ನ ಆತ್ಮೀಯ ಮಿತ್ರರು. NGEF, KWSSB ಯಲ್ಲಿ ಕೆಲಸ ಮಾಡುವಾಗ ನನಗೆ ಆತ್ಮೀಯ ಮಿತ್ರರಾಗಿದ್ದರು. ಈಗ ಅವರು ಅವರ ಲೀಡರ್‌ಗೆ ಆತ್ಮೀಯ ಮಿತ್ರರಾಗಿದ್ದಾರೆ. ಆದರೂ ನನ್ನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆತ್ಮೀಯ ಮಿತ್ರರೆಂದು ಕರೆದುಕೊಳ್ಳುತ್ತೇನೆ. ಅವರು ಬೆಂಗಳೂರಿನ ಬಗ್ಗೆ ಬಹಳ ಕಳಕಳಿ ತೋರಿಸಿದ್ದಾರೆ. ಅವರಿಗೆ ಧನ್ಯವಾದಗಳು. ಬಿ.ಬಿ.ಎಂ.ಪಿ. ಬಗ್ಗೆ ಅವರಿಗೆ ಬಹಳ ಭರವಸೆ ಇದೆ. ಧನ್ಯವಾದಗಳು. ಈಗತಾನೇ ನಾವು, ಬಿ.ಬಿ.ಎಂ.ಪಿ. ಕಾಮಗಾರಿ ಯಾವ ರೀತಿ ಆಗಿದೆ, ಏನಾಗಿದೆ ಎಂದು ಮಾತನಾಡಿದೆವು. ಆದರೂ ಕೂಡ ಬಿ.ಬಿ.ಎಂ.ಪಿ. ಯಲ್ಲಿ ಬಹಳಷ್ಟು ಭರವಸೆ ತೋರಿಸುತ್ತಿದ್ದಾರೆ, ಇರಲಿ. Potholes ಮುಖ್ಯ ಸಮಸ್ಯೆಯೇನೆಂದರೆ, ರಸ್ತೆ ಮಾಡುವಾಗ ಯಾವ design ಮಾಡುತ್ತೇವೆ ಮತ್ತು ಯಾವ ಗುಣಮಟ್ಟದಲ್ಲಿ ಆ ರಸ್ತೆಯನ್ನು ಮಾಡಬೇಕು, ಯಾವ quality material ಹಾಕಬೇಕು fundamentally ಅಲ್ಲಿ ವ್ಯತ್ಯಾಸವಾಗಿರುತ್ತದೆ. ಅದು ಅವರ ತಪ್ಪು.

**ಡಾ: ಕೆ. ಗೋವಿಂದರಾಜ್**:- ಗುಣಮಟ್ಟದ ರಸ್ತೆ ಮಾಡಿದರೆ potholes ಬೀಳುವುದೇ ಇಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಗೋವಿಂದರಾಜುರವರೇ, ಒಂದು ನಿಮಿಷ, ನೀವೀಗ ಕುಳಿತುಕೊಳ್ಳಬೇಕು. ನೀವು ಹೇಳಿದ್ದನ್ನು ನಾನು ಶಾಂತವಾಗಿ ಕುಳಿತುಕೊಂಡು ಕೇಳಿದ್ದೇನೆ. ಒಳಮರ್ಮ ನನಗೆ ಗೊತ್ತಿದೆ. ಶಾಸಕನಾಗಿ ನನಗಿದು ಐದನೆ term. ಬಿ.ಬಿ.ಎಂ.ಪಿ. ವ್ಯವಸ್ಥೆ ಹೇಗೆ ನಡೆಯುತ್ತಿದೆ ಎಂಬುದು ನನಗೂ ಗೊತ್ತಿದೆ. ನಿನ್ನಷ್ಟಿಲ್ಲದಿದ್ದರೂ ಸ್ವಲ್ಪವಾದರೂ ನನಗೆ ಗೊತ್ತಿದೆ. Pothole ಮೂಲ ಅಲ್ಲಿದೆ. ಎರಡನೆಯದಾಗಿ ಯಾವ traffic design ಆಗಿರುತ್ತದೆ, ಯಾವ ರಸ್ತೆ design ಆಗಿರುತ್ತದೆ ಅದಕ್ಕಿಂತ 10-20 ಪಟ್ಟು ಲೋಡ್ ವಾಹನಗಳು ಓಡಾಡುತ್ತವೆ. ಹೊರಗಡೆಯಿಂದ ಚೆನ್ನೈಗೆ, ಹೈದರಾಬಾದ್‌ಗೆ ಹೋಗುವಂತಹ ರಸ್ತೆಗಳಲ್ಲಿ ಕೂಡ ಓಡಾಡುತ್ತವೆ. ರಸ್ತೆಗಳನ್ನು design ಮಾಡಿದ್ದರೂ heavy loads ಬಂದಿದ್ದರಿಂದ ಖಂಡಿತವಾಗಲೂ ಅದರ ಮೇಲೆ ದೊಡ್ಡ ಭಾರ ಬೀಳುತ್ತದೆ. ಅದು ಕೆಟ್ಟು ಹೋಗುತ್ತದೆ. ಇದು ಒಂದು ಕಡೆಯಾದರೆ ಬಹಳಷ್ಟು ಗೊಂದಲಗಳು ನಾವು ಬರುವುದಕ್ಕಿಂತ ಮುಂಚೆ ಈ pothole ನಲ್ಲಿತ್ತು. ನಾನು ಆಯುಕ್ತರಿಗೆ 'ಏನ್ರೀ ಈ pothole ಅನ್ನು ಏತಕ್ಕೆ ಬೇಗ ತುಂಬಿಸುತ್ತಿಲ್ಲ' ಎಂದು ಕೇಳಿದೆ. ಅದಕ್ಕೆ ಅವರು 'ಇಲ್ಲ ಸರ್, ಅವರಿಗೆ Annual Maintenance Contract ಕೊಟ್ಟಿದ್ದೇವೆ ಅವರು ಮಾಡುತ್ತಾರೆ' ಎಂದು ಹೇಳಿದರು. Potholes ಮುಚ್ಚುವುದು emergency ಆಗಿದೆ. Annual Maintenance Contract ಕೊಟ್ಟಿರುವಂತಹದ್ದು major repairs ಗೆ. ನೀವು potholes ಗೆ ಕೇಳಿದರೆ ಅದು dispute ಆಗುತ್ತದೆ, ಜನ ಸಾಯ್ತುತ್ತಾರೆ. ಆದ್ದರಿಂದ ನಾನೊಂದು ಆದೇಶ ಮಾಡಿದ್ದೇನೆ. Potholes ತುಂಬುವುದಕ್ಕೆ ಯಾವುದೇ Annual Maintenance Contract ಅನ್ನು ಪರಿಗಣಿಸಬೇಡಿ, potholes ಅನ್ನು ತುಂಬಿ, ಆಮೇಲೆ Annual Maintenance Contract ನಲ್ಲಿ ಬೇಕಾದರೆ ಅವರಿಗೆ ಕೊಡುವ ಹಣದಲ್ಲಿ ಹಿಡಿದಿಟ್ಟುಕೊಳ್ಳಿ, ಈ ಕೆಲಸ ತುರ್ತಾಗಿ ಗುಣಮಟ್ಟದಲ್ಲಿ ಆಗಬೇಕೆಂದು ಆದೇಶ ಕೊಟ್ಟಿದ್ದೇನೆ. ಎರಡನೆಯದಾಗಿ potholes ಏತಕ್ಕೆ ಕಳಪೆ ಮಟ್ಟದ್ದಾಗುತ್ತದೆಂದರೆ ಮಳೆ ಬಿದ್ದ ತಕ್ಷಣವೇ ಒತ್ತಡಕ್ಕೆ ನಾವು potholes ಮಾಡಿದರೆ ಒಂದು ವಾರದಲ್ಲಿ ಮತ್ತೆ ಕಿತ್ತುಕೊಂಡು ಹೋಗುತ್ತದೆ. ನಿರಂತರವಾಗಿ ಆಗಸ್ಟ, ಸೆಪ್ಟೆಂಬರ್, ಅಕ್ಟೋಬರ್ ಮತ್ತು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನವೆಂಬರ್ ನಿಂದ 10-15 ದಿವಸಕ್ಕೆ ಮಳೆಯಾಗುತ್ತಿದೆ. ಮಳೆ ಸಂಪೂರ್ಣವಾಗಿ ಮಳೆ ನಿಂತ ಮೇಲೆ ಒಂದು ಸಲಕ್ಕೆ ಶಾಶ್ವತವಾಗಿ ಆಗಬೇಕು ಮತ್ತು ಕೆಲವು ಕಡೆಗಳಲ್ಲೆಲ್ಲಾ ದೀರ್ಘವಾದಂತಹ stretch ಮಾಡುವುದಕ್ಕೆ ಹೇಳಿದ್ದೇವೆ.

(ಮುಂದು)

(1287) 23-12-2021 KH/VK 12-00 **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಬೊಮ್ಮಾಯಿ(ಮುಂದು):-**

ಇಂಜಿನಿಯರಿಂಗ್‌ನಲ್ಲಿ ಒಂದು pothole ಮುಚ್ಚಿದರೆ, ಅದರ pressure ಆ ಕಡೆಗೆ open ಆಗುತ್ತದೆ. ಆದ್ದರಿಂದ, ಆ complete stretch ಅನ್ನು ಪೂರ್ಣವಾಗಿ ಮಾಡಬೇಕೆಂದು ಹೇಳಿದ್ದೇವೆ. ಈ ರೀತಿಯ ಹಲವಾರು ಬದಲಾವಣೆಗಳನ್ನು ಮಾಡಿದ್ದೇವೆ. Inspection ಬಗ್ಗೆ ತಮ್ಮಿಂದ ಮಾರ್ಗದರ್ಶನವನ್ನು ಪಡೆದುಕೊಂಡು ನಾನು ಮಾಡುತ್ತೇನೆ.

**ಡಾ: ಕೆ.ಗೋವಿಂದರಾಜ್:-** ಮಾನ್ಯ ಮುಖ್ಯಮಂತ್ರಿಯವರೇ, ಫುಟ್‌ಪಾತ್ ಬಗ್ಗೆ ಸ್ವಲ್ಪ ಹೇಳಿ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಕೆ.ಗೋವಿಂದರಾಜ್‌ರವರೇ, ಈಗಾಗಲೇ ನಾನು ಉತ್ತರವನ್ನು ಕೊಟ್ಟಿದ್ದೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## ತಡೆ ಹಿಡಿಯಲಾದ ಪ್ರಶ್ನೆಗಳು

### ಪ್ರಶ್ನೆ ಸಂಖ್ಯೆ: 334
### (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಇವತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 12 ರಸ್ತೆಗಳನ್ನು ಪಿ.ಡಬ್ಲ್ಯೂ.ಡಿ., ಇಲಾಖೆಯವರು ಕೆ.ಆರ್.ಡಿ.ಸಿ.ಎಲ್., ಯವರಿಗೆ ಕೊಟ್ಟಿದ್ದಾರೆ. ಮಾನ್ಯ ಕೆ.ಗೋವಿಂದರಾಜ್‌ರವರು ಹೇಳಿದ ಹಾಗೆ ಆ ರಸ್ತೆಗಳನ್ನು ಸೇರಿಸಿಕೊಂಡು ಕೊಟ್ಟಿದ್ದಾರೆ. ಈಗಾಗಲೇ ಇದನ್ನು ಕೊಟ್ಟು ಒಂದೂವರೆ ವರ್ಷಗಳಾಯಿತು. ಒಂದೂವರೆ ವರ್ಷದಿಂದ ಈ ರಸ್ತೆಗಳು ಯಾವುದೇ ಒಂದು ಉನ್ನತಿಯನ್ನು ಕಂಡಿಲ್ಲ ಮತ್ತು ಇದರ ಬಗ್ಗೆ ಯಾರೂ ಕೂಡ ಚಿಂತನೆ ಮಾಡುತ್ತಿಲ್ಲ. ಬಿ.ಬಿ.ಎಂ.ಪಿ.,ಯವರನ್ನು ಕೇಳಿದರೆ ನಾವು ಅವರಿಗೆ ರಿಲೀಸ್ ಮಾಡಿಕೊಟ್ಟಿದ್ದೇವೆ. ಈಗ ನಾವು ಇದನ್ನು ಏನು ಮಾಡುವುದಿಲ್ಲ ಎಂದು ಹೇಳುತ್ತಾರೆ. ಕೆ.ಆರ್.ಡಿ.ಸಿ.ಎಲ್.,ರವರನ್ನು ಕೇಳಿದರೆ ನಮಗೆ ಮಂಜೂರಾತಿ ಕೊಟ್ಟಿಲ್ಲ. ಸರ್ಕಾರದ ಮುಂದೆ ಇರಿಸಿದ್ದೇವೆ. ಇನ್ನೂ ನಮಗೆ ಮಂಜೂರಾತಿ ಬಂದಿಲ್ಲ. ಮಂಜೂರಾತಿ ಬಂದಾಗ ನೋಡೋಣ ಎಂದು ಹೇಳುತ್ತಾರೆ. ಇದರಲ್ಲಿ ಮಾನ್ಯ ಕೆ.ಗೋವಿಂದರಾಜ್‌ರವರು ಹೇಳಿರುವಂತಹ ರಸ್ತೆಯನ್ನು ಸೇರಿಸಿಕೊಂಡು ಮಾಗಡಿ ರಸ್ತೆಯೊಂದು ಇದೆ. ನಾನು ಪ್ರತಿದಿನ ಮಾಗಡಿ ರಸ್ತೆಯಲ್ಲಿ ಓಡಾಡುತ್ತೇನೆ. ಮೊನ್ನೆಯ ದಿವಸ ನಾನು ಮಾಗಡಿ ರಸ್ತೆಯಲ್ಲಿ ಬರುವಾಗ ಕಮೀಷನರ್ ಮತ್ತು ಚೀಫ್ ಇಂಜಿನಿಯರ್‌ರವರ ಹತ್ತಿರ ಮಾತನಾಡಿದೆ. ಆಗ ಜೆಸಿಬಿ ತೆಗೆದುಕೊಂಡು ಇರುವ potholes ಗಳನ್ನು ಪೂರ್ತಿಯಾಗಿ ಕಿತ್ತು ಹಾಕಿಬಿಟ್ಟರು. ಇದ್ದರಿಂದ, ಆ ರಸ್ತೆ ಹೇಗಾಗಿದೆ ಎಂದರೆ, ಕೇವಲ ಮಣ್ಣು, ಯಾವುದೇ ವಾಹನಗಳು ಓಡಾಡುವ ಹಾಗಿಲ್ಲ. ಇಲ್ಲಿ ಏನಾಗಿದೆ ಎಂದು ಕೇಳಿದರೆ, ಕಮೀಷನರ್‌ರವರ ಆದೇಶದ ಮೇಲೆ ಕೆಲಸ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ಆದರೆ, ಅದರ ಸಂಪೂರ್ಣವಾದ ನಿರ್ವಹಣೆಯನ್ನು ಬಿ.ಬಿ.ಎಂ.ಪಿ.,ಯವರು ಮಾಡುವುದಿಲ್ಲ. ಈಗ ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಕಡತ ಹೋಗಿದೆ ಎಂದು ಹೇಳುತ್ತಾರೆ. ಈ 12 ರಸ್ತೆಗಳನ್ನು ಕೆ.ಆರ್.ಡಿ.ಸಿ.ಎಲ್., ಗೆ ಕೊಟ್ಟಿರುವ ಉದ್ದೇಶವೇನೆಂದರೆ, ಉತ್ತಮವಾದಂತಹ design ಅನ್ನು ಪಿ.ಡಬ್ಲ್ಯೂ.ಡಿ.,ಯವರು ಮಾಡುತ್ತಾರೆ ಎಂದು ಕೊಟ್ಟಿದ್ದಾರೆ. ಇದಕ್ಕೆ ಸುಮಾರು 650 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ ಎನ್ನುವ ಮಾಹಿತಿಯನ್ನು ತಾವು ಕೊಟ್ಟಿದ್ದೀರಿ. ಆದರೆ, ಇಲ್ಲಿ ಒಟ್ಟಾರೆ 1120.48 ಕೋಟಿ ರೂಪಾಯಿಗಳಿಗೆ ಸರ್ಕಾರಿ ಆದೇಶವಾಗಿದೆ. ಈ ಮೊತ್ತಕ್ಕೆ ಇನ್ನು ಮಂಜೂರಾತಿ ಕೊಟ್ಟಿಲ್ಲ. ಹಾಗೆಯೇ, ಟೆಂಡರ್ ಕರೆದಿಲ್ಲ. ಈಗಾಗಲೇ ಅವರಿಗೆ handover ಮಾಡಿ ಒಂದೂವರೆ ವರ್ಷವಾಯಿತು. ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿನ ಒಟ್ಟು 191 ಕಿ.ಮೀ. no man's land ಆಗಿದೆ. ನಾವು ಯಾರನ್ನೇ ಕೇಳಿದರೂ ನಮ್ಮದಲ್ಲ ಎಂದು ಹೇಳುತ್ತಾರೆ. ತಾವು ಕೊಟ್ಟಿರುವಂತಹ ಲಿಖಿತ ಉತ್ತರದಲ್ಲಿ ಶೇಕಡಾ 65 ರಷ್ಟು ಭೌತಿಕ ಪ್ರಗತಿಯಾಗಿದೆ ಎಂದು ತಿಳಿಸಿದ್ದೀರಿ. ದಯವಿಟ್ಟು, ತಾವು ಬೆಂಗಳೂರಿಗೆ ಬಂದ ತಕ್ಷಣ ಮಾಗಡಿ ರಸ್ತೆ ಕಡೆಗೆ ಭೇಟಿ ನೀಡಿ. ಶೇಕಡಾ 65 ರಷ್ಟು

ಭೌತಿಕ ಪ್ರಗತಿಯಾಗಿದ್ದರೆ, ತಾವು ಯಾವುದೇ ಸಮಯದಲ್ಲಿ ಏನೂ ಬೇಕಾದರೂ ಹೇಳಬಹುದು. ಅಲ್ಲಿ ಏನೂ ಆಗಿಲ್ಲ. ಒಂದು ಕಿ.ಮೀ demo reach ಎಂದು ಕೊಟ್ಟಿದ್ದಾರೆ. ಆ demo reach ಮಾಡುವುದಕ್ಕೆ it should be a classic one or a showcase one. ಆ showcase one ಮಾಡುವುದಕ್ಕೆ ಅವರು ಯಾವುದೇ ರೀತಿಯ ಕ್ರಮಗಳನ್ನು ತೆಗೆದುಕೊಂಡಿಲ್ಲ. ಮಾನ್ಯ ಮುಖ್ಯಮಂತ್ರಿಯವರೇ ತಾವು ಸ್ವಲ್ಪ ತಿಳಿದುಕೊಳ್ಳಿ. ಕಾರ್ಪೋರೇಷನ್ drain ಮಾಡಿದೆ. ಇದರ ಮೇಲೆ ಕೆ.ಆರ್.ಡಿ.ಸಿ.ಎಲ್., precast slabs ಅನ್ನು ಹಾಕುತ್ತಿದೆ. ನಾನು ಅಲ್ಲಿ ನಿಂತುಕೊಂಡು ಇದನ್ನು ಯಾರು drain ಮಾಡಿದ್ದು ಎಂದು ಕೇಳಿದಾಗ, ಇದನ್ನು ಬಿ.ಬಿ.ಎಂ.ಪಿ.,ಯವರು ಮಾಡಿದ್ದು, ಇದು ಮುಂಚೆಯಿಂದಲೇ ಇದೆ ಎಂದು ಹೇಳಿದರು. ಇದರ ಮೇಲೆ ತಾವು ಏನು precast slabs ಹಾಕುತ್ತಿದ್ದೀರಿ ಎಂದರೆ, ಇದನ್ನು ಮುಚ್ಚುವುದಕ್ಕೆ ಹೇಳಿದ್ದಾರೆ, ಅದನ್ನು ಮುಚ್ಚುತ್ತಿದ್ದೇವೆ ಎಂದು ಹೇಳಿದರು. ಈಗ ಇದರ ಬಿಲ್ ಆಗುವುದು ಎಲ್ಲಿ ಗೊತ್ತಾ, ಇವತ್ತು drain ಸಮೇತ ಬಿಲ್ ಆಗುತ್ತದೆ. ಈಗಾಗಲೇ ಕಾರ್ಪೋರೇಷನ್ ರವರು ಬಿಲ್ ಮಾಡಿದ್ದಾರೆ. ಇದರ ಮೇಲೆ precast slabs ಹಾಕಿ, drain ಸಮೇತ ಬಿಲ್ ಆಗುತ್ತದೆ. ಇದನ್ನು ಬೇಕಾದರೆ ತಾವೇ ನೋಡಿ. ಇನ್ನೊಂದು ಕಡೆ ಇದಕ್ಕೆ ಮಂಜೂರಾತಿ ಕೊಟ್ಟಿಲ್ಲ. Demo reach ಗೆ ಎರಡೆರಡು ಕಿ.ಮೀ ಒಂದೆರಡು ಕಡೆ ಕೊಟ್ಟಿದ್ದೀರಿ. ಆ demo reach ಮಾಡುವಂತಹದ್ದು showcase one ಆಗಬೇಕು. ಅದನ್ನು ಯಾರಾದರೂ ನೋಡಿದರೆ ಖಂಡಿತವಾಗಿಯೂ ಕೆ.ಆರ್.ಡಿ.ಸಿ.ಎಲ್., ಕೆಲಸ ಮಾಡುವುದು ಬೇಡವೆಂದು ಕೈಬಿಡುತ್ತಾರೆ. ದಯವಿಟ್ಟು ಈ ಕೆಲಸವನ್ನು ಬಿ.ಬಿ.ಎಂ.ಪಿ., ವಹಿಸುವಂತಹದ್ದು ಉತ್ತಮ. ಇಲ್ಲವೆಂದರೆ, ತಾವೊಂದು time frame ಮಾಡಿ, showcase one ರೀತಿ ಮಾಡಿ ರಸ್ತೆಗಳನ್ನು ಕೊಡುವುದಿದ್ದರೆ ಮಾಡಿಸಿ, ನಮಗೇನೂ ತೊಂದರೆ ಇಲ್ಲ. ಆದರೆ, ದಯವಿಟ್ಟು, ನಾಗರೀಕರಿಗೆ ಯಾವುದೇ ತೊಂದರೆ ಇಲ್ಲದೆ ಇರುವ ರೀತಿಯಲ್ಲಿ ಮಾಡಿ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, 'High Density Corridor', ಬೆಂಗಳೂರಿನಲ್ಲಿ ಮುಖ್ಯ ರಸ್ತೆಗಳಾಗಿವೆ. ನಮ್ಮ ಹುಬ್ಬಳ್ಳಿ, ಧಾರವಾಡ, ಬೆಳಗಾವಿ ನಿಲ್ದಾಣಕ್ಕೆ ಹೋಗುವಂತಹ ರಸ್ತೆ ಇದ್ದು, ಹೈದರಾಬಾದ್ ಮತ್ತು ಚೆನ್ನೈನಿಂದ ಬರುವಂತಹ ರಸ್ತೆ ಹಾಗೂ ಹೊಸೂರಿಗೆ ಹೋಗುವಂತಹ ರಸ್ತೆ. ಇವು ಪ್ರಮುಖ ರಸ್ತೆಗಳು. ಮೊದಲು 7 'High Density Corridor' ಎಂದು ಮಾಡಿದ್ದರು. ಈಗ ಇದು 12 ಕ್ಕೆ ಏರಿದೆ. ಇದರ ಬಗ್ಗೆ 2020-21ನೇ ಸಾಲಿನ ಬಜೆಟ್‌ನಲ್ಲಿ 191 ಕಿ.ಮೀ ಉದ್ದದ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕೆಂದು ಬಂದಿದೆ. 'High Density Corridor' ನ ಯೋಜನೆಯಲ್ಲಿ 2017-18ನೇ ಸಾಲಿನಲ್ಲಿ ಈಗಾಗಲೇ 67 ಕಿ.ಮೀ. ಅನ್ನು ಸುಮಾರು 200 ಕೋಟಿ ರೂಪಾಯಿಗಳಲ್ಲಿ ಅಭಿವೃದ್ಧಿಪಡಿಸಿದ್ದಾರೆ. ಉಳಿದ ಕಡೆಗಳಲ್ಲಿ ಯಾವ ರೀತಿ ಡೆಮೊ ಆಗಿದೆ ಎನ್ನುವುದನ್ನು ಖಂಡಿತವಾಗಿಯೂ ಪರಿಶೀಲನೆ ಮಾಡುತ್ತೇನೆ. ಆ ರೀತಿ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಹಳೆ ವಿಮಾನ ನಿಲ್ದಾಣ ಹತ್ತಿರ ಮಾಡಿರುವಂತಹದ್ದು. ಈ ಎರಡನ್ನು ಕೆ.ಆರ್.ಡಿ.ಸಿ.ಎಲ್., ಕಡೆಯಿಂದ ಏನು ಮಾಡಿದ್ದಾರೆ. ನಿಜವಾಗಿಯೂ ಇದು ಸಮರ್ಪಕವಾಗಿ ಇರಲಿಲ್ಲವೆಂದರೆ, ಕಳಪೆ ಇದ್ದರೆ, ಕೆ.ಆರ್.ಡಿ.ಸಿ.ಎಲ್., ರವರಿಗೆ ಕೊಡುವಂತಹದ್ದನ್ನು ಪುನರ್ ಪರಿಶೀಲನೆ ಮಾಡುತ್ತೇನೆ. ಎರಡನೆಯದಾಗಿ, ಇದಕ್ಕೆ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸಂಬಂಧಪಟ್ಟಂತೆ ನನಗೆ ಕಡತ ಬಂದಿದ್ದು, ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿದಾಗ ಹಲವಾರು ಲೋಪದೋಷಗಳು ಅದರಲ್ಲಿ ಕಂಡುಬಂದಿದೆ. ಇದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ರಸ್ತೆ ಅಭಿವೃದ್ಧಿಗೆ 336 ಕೋಟಿ ರೂಪಾಯಿಗಳು ಖರ್ಚಾಗುತ್ತದೆ. 5 ವರ್ಷಗಳ ನಿರ್ವಹಣೆಗೆ 785 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ತಮಗೆಲ್ಲಾ ಗೊತ್ತಿರುವ ಹಾಗೆ ಸಾಮಾನ್ಯವಾಗಿ ನಾವು ಯಾವುದಾದರೂ ಒಂದು ಕಾಮಗಾರಿಯನ್ನು ಮಾಡಿದರೆ 3 ವರ್ಷಗಳ ಕಾಲ ಯಾರು ನಿರ್ವಹಣೆ ಮಾಡಿರುತ್ತಾರೋ, ನಾವು ಅವರಿಗೆ ಕೊಡುತ್ತೇವೆ. ಇದನ್ನು ಅವರೇ ಮಾಡಬೇಕು. 5 ವರ್ಷಗಳಲ್ಲಿ 3 ವರ್ಷ ಅವರೇ ನಿರ್ವಹಣೆ ಮಾಡುವುದಿದ್ದರೂ ಕೂಡ ಇಷ್ಟು ದೊಡ್ಡ ಮೊತ್ತ ಏಕೆ ಎಂದು ನಾನು ಪ್ರಶ್ನೆಯನ್ನು ಕೇಳುತ್ತೇನೆ. ನಂತರ ಇದರಲ್ಲಿ 'White Topping Concrete' ಸುಮಾರು 53 ಕಿ.ಮೀ ಇದೆ. 'White Topping Concrete' ಬಂದಮೇಲೆ ನಿರ್ವಹಣೆ ಪ್ರಶ್ನೆ ಬರುವುದಿಲ್ಲ. ಒಬ್ಬ ಕಪ್ಪು ಪಟ್ಟಿ ಇರುವಂತಹ ಗುತ್ತಿಗೆದಾರನಿಗೆ ಇದನ್ನು ಸೇರಿಸಿ ಕೊಟ್ಟಿದ್ದಾರೆ. ಹೀಗೆ ಸುಮಾರು 7-8 ಲೋಪದೋಷಗಳು ಇವೆ. ಇದನ್ನು ಕಡತದಲ್ಲಿ ಮಂಡಿಸಿ, ಅದನ್ನು short term re-tender ಮಾಡಿ ಎಂದು ಈಗಾಗಲೇ ಆದೇಶ ಕೊಟ್ಟಿದ್ದೇನೆ. ಈ ನ್ಯೂನತೆಗಳನ್ನೆಲ್ಲಾ ಸರಿಪಡಿಸಿ ಮಾಡಬೇಕೆಂದು ಹೇಳಿದ್ದೇನೆ. ಇದನ್ನು ಕೆಟಿಪಿಪಿ ಕಾಯ್ದೆ ಪ್ರಕಾರವೇ ಮಾಡಬೇಕೆಂದು ಹೇಳಿದ್ದೇನೆ. ಇದನ್ನು ನಾವು ಖಂಡಿತವಾಗಿಯೂ ಮಾಡುತ್ತೇವೆ. ಇದನ್ನು ಯಾರು ಮಾಡಬೇಕೆನ್ನುವ ಮೂಲ ಪ್ರಶ್ನೆಯನ್ನು inspection ಮಾಡಿಸಿ, ವರದಿಯನ್ನು ತೆಗೆದುಕೊಂಡು ನಾನು ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದವರಿಗೆ ಈ ರಸ್ತೆಗಳಿಂದ ಯಾವುದೇ ತೊಂದರೆ ಆಗದೇ ಇರುವ ರೀತಿಯಲ್ಲಿ ಬಿ.ಬಿ.ಎಂ.ಪಿ.,ಯವರಿಗೆ ತಕ್ಷಣವೇ ಸೂಚನೆಯನ್ನು ಕೊಡಿ. ಇದನ್ನು ಅವರು ನಿರ್ವಹಣೆ ಮಾಡಿ ಸುಗಮವಾಗಿ inconvenience ಮಾಡದೇ ಇರುವ ರೀತಿಯಲ್ಲಿ ರಸ್ತೆಯನ್ನು ಮಾಡುತ್ತಾರೆ.

**ಶ್ರೀ ಬಸವರಾಜ ಬೊಮ್ಮಾಯಿ**:- ಮಾನ್ಯ ಸಭಾಪತಿಯವರೇ, ಯಾರು ರಸ್ತೆ ಮಾಡುತ್ತಾರೆ. ಅವರೇ ನಿರ್ವಹಣೆ ಮಾಡಬೇಕು. ಕೆ.ಆರ್.ಡಿ.ಸಿ.ಎಲ್.,ನವರು ರಸ್ತೆ ಮಾಡುವುದು, ಇವರು ಬೇರೆಯವರು ನಿರ್ವಹಣೆ ಮಾಡುವುದು ಸರಿ ಹೋಗುವುದಿಲ್ಲ. ಯಾವ ಏಜೆನ್ಸಿಯವರು ಈ ರಸ್ತೆಯನ್ನು ನಿರ್ಮಾಣ ಮಾಡುತ್ತಾರೆ, ಅವರೇ ನಿರ್ವಹಣೆ ಮಾಡಬೇಕು. ಅದು ಅವರ ಜವಾಬ್ದಾರಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ: 1055**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಮಂತ್ರಿಯವರು ತುಂಬಾ ಒಳ್ಳೆಯವರು. ಆದರೆ, ಇವರು ಅಧಿಕಾರಿಗಳು ಕೊಟ್ಟಿರುವಂತಹ ಉತ್ತರವನ್ನು ಕೊಟ್ಟಿದ್ದಾರೆ. ಬೀದರ್ ನಗರದಲ್ಲಿ ದಶಕಗಳ ಹಿಂದೆ ವಿದ್ಯುತ್ ಚಿತಾಗಾರ ಯೋಜನೆಗೆ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅದರ ಪರಿಸ್ಥಿತಿ ಏನಿದೆ? ಎನ್ನುವ ಪ್ರಶ್ನೆಯನ್ನು ಮಾನ್ಯ ಸಚಿವರಿಗೆ ಕೇಳಿದ್ದೆ. ಬೀದರ್ ಜಿಲ್ಲೆ ಸುಮಾರು 5 ಲಕ್ಷ ಜನಸಂಖ್ಯೆಯನ್ನು ಹೊಂದಿರುವಂತಹ ಒಂದು ನಗರ. ಅಲ್ಲಿ ಒಂದು ಕೂಡ ಶವ ಸಂಸ್ಕಾರಗಳಿಗೆ ವಿದ್ಯುತ್ ಚಿತಾಗಾರ ಇರಲಿಲ್ಲ. 2010ನೇ ಸಾಲಿನಲ್ಲಿ ಆಗಿನ ಜಿಲ್ಲಾಧಿಕಾರಿಗಳು ವಿಶೇಷ ಮುತುವರ್ಜಿಯನ್ನು ವಹಿಸಿ, ಸುಮಾರು 2 ಕೋಟಿ ರೂಪಾಯಿಗಳಲ್ಲಿ ವಿದ್ಯುತ್ ಚಿತಾಗಾರಕ್ಕೆ ಮಂಜೂರಾತಿ ಕೊಟ್ಟಿದ್ದಾರೆ. ಮಾನ್ಯ ಸಚಿವರು ಕೊಟ್ಟಿರುವಂತಹ ಲಿಖಿತ ಉತ್ತರದಲ್ಲಿ “ದಿನಾಂಕ:05-08-2010 ರ ಮೂಲಕ ಕ್ರಿಯಾ ಯೋಜನೆ ಅನುಮೋದನೆಗೊಂಡಿರುತ್ತದೆ. ಕಾಮಗಾರಿಯು ಸ್ಥಳದ ಸಮಸ್ಯೆಯಿಂದಾಗಿ ಅನುಷ್ಠಾನಗೊಂಡಿರುವುದಿಲ್ಲ” ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ.

(ಮುಂದು)

**(1288) ಎಸ್‌ಪಿಆರ್/ಬಿಎನ್‌ಎಸ್ 12:10 23/12/2021** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ(ಮುಂದು):-**

ಈಗ ಹೇಳಿರುವುದು 2010 ನೇ ಸಾಲಿನ ವಿಚಾರವಾಗಿದ್ದು; ನಾವೀಗ 2021 ನೇ ಸಾಲಿನಲ್ಲಿದ್ದೇವೆ. ಅಲ್ಲಿನ ಜನರು ಶವ ಸಂಸ್ಕಾರವನ್ನು ಹೇಗೆ ಮಾಡಬೇಕು? ಈ ವಿಚಾರದಲ್ಲಿ ಜನ ಪ್ರತಿನಿಧಿಗಳೊಂದಿಗೆ ಚರ್ಚಿಸಿ, ಹಾಲಿ ಇರುವ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಚಿತಾಗಾರವನ್ನು ಪ್ರಾರಂಭಿಸಬೇಕೆಂಬ ಚಿಂತನೆಯನ್ನು ಇಲಾಖೆ ಮತ್ತು ಸರ್ಕಾರ ಮಾಡಿದೆಯೇ ಎಂದು ನಾನು ಮಂತ್ರಿಗಳನ್ನು ಕೇಳಬಯಸುತ್ತೇನೆ. ನಂತರದಲ್ಲಿ ನನಗೆ ಉಪಪ್ರಶ್ನೆಗಳನ್ನು ಕೇಳಲು ಅವಕಾಶವನ್ನು ನೀಡಬೇಕು.

**ಶ್ರೀ ಎನ್.ನಾಗರಾಜು(ಎಂ.ಟಿ.ಬಿ.):-** ಮಾನ್ಯ ಸಭಾಪತಿಯವರೇ, ಈ ಹಿಂದೆ ವಿದ್ಯುತ್ ಚಿತಾಗಾರವನ್ನು ಮಾಡಬೇಕೆಂದು ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಯೋಜನೆಯಡಿ ಮುಖ್ಯಮಂತ್ರಿಗಳು 150 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದರು. ಯೋಜನೆಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅಲ್ಲಿನ ನಿವೇಶನದಲ್ಲಿ ತಕರಾರು ಇರುವುದರಿಂದ

ಯೋಜನೆಯು ಸ್ಥಗಿತಗೊಂಡಿರುತ್ತದೆ. 2020-21 ನೇ ಸಾಲಿನಲ್ಲಿ ಈ ಯೋಜನೆಗೆ ತಲಾ 50 ಲಕ್ಷದಂತೆ ಒಟ್ಟಾರೆ ಒಂದು ಕೋಟಿ ರೂಪಾಯಿಗಳ ಅನುದಾನವು ಮಂಜೂರಾಗಿ, ಬಿಡುಗಡೆಯಾಗಿರುತ್ತದೆ. ಅಲ್ಲಿ ಈಗ ಗ್ಯಾಸ್ ಆಧಾರಿತ ಚಿತಾಗಾರವನ್ನು ನಿರ್ಮಿಸಲು ಈಗಾಗಲೇ ಒಂದು ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. ಆ ಪೈಕಿ 50 ಲಕ್ಷ ರೂಪಾಯಿಗಳ ಅನುದಾನದಡಿ ಒಂದು ಚಿತಾಗಾರವು ಈಗಾಗಲೇ ನಿರ್ಮಾಣವಾಗಿದೆ. ಇದು ಅಲ್ಲಿ ಅವಶ್ಯಕವಾಗಿದೆ. ಆ ಪ್ರದೇಶದಲ್ಲಿ ಪ್ರತಿನಿತ್ಯ 2-3 ಸಾವುಗಳಾಗುತ್ತಿವೆ. ಈಗಾಗಲೇ ಒಂದು ಚಿತಾಗಾರವು ಪ್ರಾರಂಭವಾಗಿ ಕಾರ್ಯನಿರ್ವಹಿಸುತ್ತಿದೆ. ಮತ್ತೊಂದು ಚಿತಾಗ್ಗಾರವನ್ನು ಪ್ರಾರಂಭಿಸಲು 50 ಲಕ್ಷ ರೂಪಾಯಿಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ನಮ್ಮ ಬೀದರ್ ಜಿಲ್ಲೆಯಲ್ಲಿ ಉರ್ದು ಭಾಷೆಯ ಪ್ರಭಾವವು ಹೆಚ್ಚಾಗಿದೆ. ಆ ಭಾಗದಲ್ಲಿ ಪುರಸಭೆಗೆ '**ಬಲ್ದಿಯಾ**' ಎಂಬುದಾಗಿಯೂ ಸಹ ಕರೆಯುತ್ತಾರೆ. '**ಕ್ಯಾ ಬಲ್ದಿಯಾ**' ಎಂದು ಕೇಳಿದರೆ, '**ಖಾಯಾ, ಪೀಯಾ, ಚಲ್ದಿಯಾ**' ಎಂಬುದಾಗಿ ಉತ್ತರಿಸುತ್ತಾರೆ. ಯಾರು ಏನು ಕೆಲಸ ಮಾಡುತ್ತಾರೆ, ಏನು ಸೌಲಭ್ಯಗಳನ್ನು ಪಡೆಯುತ್ತಾರೆ ಎನ್ನುವುದು ಅವರಿಗೂ ಮತ್ತು ಭಗವಂತನಿಗೂ ಸಹ ಗೊತ್ತು. ನಾನು ವಿದ್ಯುತ್ ಚಿತಾಗಾರ ಬಗ್ಗೆ ಪ್ರಶ್ನೆಯನ್ನು ಕೇಳಿದರೆ, ಮಂತ್ರಿಗಳು ಗ್ಯಾಸ್ ಆಧಾರಿತ ಚಿತಾಗಾರದ ಬಗ್ಗೆ ಉತ್ತರಿಸುತ್ತಾರೆ. ಪರಿಸ್ಥಿತಿ ಹೀಗಾದರೆ, ಮೀಸಲಿಟ್ಟ ಅನುದಾನ ಏನಾಯಿತು ಎಂದು ನಾನು ಕೇಳಲಿಚ್ಛಿಸುತ್ತೇನೆ. ಸಿ.ಎಂ.ಎಸ್.ಎಂ.ಟಿ.ಡಿ.ಪಿ. ಯೋಜನೆಯಡಿ 150 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಗ್ಯಾಸ್ ಆಧಾರಿತ ಎರಡು ಚಿತಾಗಾರಗಳನ್ನು ಮಾಡಲಾಗಿದೆ ಎಂದು ಸಚಿವರು ತಿಳಿಸುತ್ತಿದ್ದಾರೆ. ಇದನ್ನು ಒಪ್ಪಿಕೊಳ್ಳುತ್ತೇನೆ. ಆದರೆ, ನಾನು ಪ್ರಸ್ತಾಪಿಸುತ್ತಿರುವ ಯೋಜನೆಯು, 2010 ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಕೇಂದ್ರ ಸರ್ಕಾರದಿಂದ ನೆರವನ್ನು ಪಡೆದುಕೊಂಡು, ಸಿ.ಎ.ಎ.ಸಿ.ಎ. ಯೋಜನೆಯಡಿ ಬೀದರ್ ನಗರದ ನರಸಿಂಹ ಝರಾ ದೇವಸ್ಥಾನದ ಬಳಿ, ಸುಮಾರು 2 ಎಕರೆ ಪ್ರದೇಶದಲ್ಲಿ 2 ಕೋಟಿ ರೂಪಾಯಿಗಳ ವೆಚ್ಚದಲ್ಲಿ ವಿದ್ಯುತ್ ಚಿತಾಗಾರ ಮಾಡಲು ನಿರ್ಧರಿಸಲಾಗಿತ್ತು. ಈ ಯೋಜನೆಗೆ ಸಂಬಂಧಪಟ್ಟಂತೆ ಟೆಂಡರನ್ನೂ ಸಹ ಕರೆಯಲಾಗಿದೆ. ಈ ಬಗ್ಗೆ ಅಧಿಕಾರಿಗಳು ಸರಿಯಾದ ಮಾಹಿತಿಯನ್ನು ಸಚಿವರಿಗೆ ನೀಡಿಲ್ಲ. ವಿದ್ಯುತ್ ಚಿತಾಗಾರ ನಿರ್ಮಾಣ ಕಾಮಗಾರಿಯು ಜಿಲ್ಲಾಡಳಿತವು ಬೆಂಗಳೂರು ಮೂಲದ ಖಾಸಗಿ ಗುತ್ತಿಗೆದಾರರೊಬ್ಬರಿಗೆ ವಹಿಸಿದ್ದು, ಆದರೆ, ಟೆಂಡರ್‌ನ್ನು ಪಡೆದ ಗುತ್ತಿಗೆದಾರರು ಬೀದರ್‌ನತ್ತ ಸುಳಿದಿರುವುದಿಲ್ಲ.

**ಸಭಾಪತಿಯವರು:-** ಸದಸ್ಯರೇ, ಓದಬೇಡಿ ; ಬದಲಾಗಿ ನಿಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆಯನ್ನೇ ಕೇಳುತ್ತಿದ್ದೇನೆ. ಟೆಂಡರ್‌ನ ಇ.ಎಂ.ಡಿ. ಮೊತ್ತವನ್ನು ಗುತ್ತಿಗೆದಾರರಿಂದ ಈಗಾಗಲೇ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಈ ಬಗ್ಗೆ ಉತ್ತರದಲ್ಲಿ ಎಲ್ಲಿಯೂ ಸಹ ಪ್ರಸ್ತಾಪಿಸಿಲ್ಲ. ಗ್ಯಾಸ್ ಮೂಲಕ ಶವಗಳನ್ನು

ಸುಡುವ ಪ್ರಕ್ರಿಯೆ ಬಗ್ಗೆ ಸಚಿವರು ಪ್ರಸ್ತಾಪಿಸುತ್ತಿದ್ದಾರೆ. ಇಲಾಖೆಯು ಅಲ್ಲಿ ಕೇವಲ ಒಂದು ಚಿತಾಗಾರವನ್ನು ಮಾತ್ರವೇ ಮಾಡಿದೆ. ಆದರೆ ಅಲ್ಲಿ ಇವತ್ತಿನವರೆಗೆ ಕೇವಲ 3 ಶವಗಳನ್ನು ಮಾತ್ರವೇ ಸುಡಲಾಗಿದೆ. ಸರ್ಕಾರವು ತಲಾ 50 ಲಕ್ಷ ರೂಪಾಯಿಗಳಂತೆ ಒಟ್ಟಾರೆ ಒಂದು ಕೋಟಿ ರೂಪಾಯಿಗಳನ್ನು ವ್ಯಯಿಸಿದೆ. ಇದನ್ನು ಸ್ಥಳೀಯರು ಯಾರೂ ಸಹ ಒಪ್ಪಿಕೊಳ್ಳಲು ಸಿದ್ಧರಿಲ್ಲ. ಏಕೆಂದರೆ, ಆ ಚಿತಾಗಾರದಲ್ಲಿ ಒಂದೊಂದು ಶವವನ್ನು ಸುಡಲು 3 ಗಂಟೆಗಳ ಸಮಯವು ಬೇಕಾಗುತ್ತದೆ. ಅಲ್ಲಿನ ನಗರ ಸಭೆಯು ಒಂದು ಶವವನ್ನು ಸುಡಲು 3,000 ರೂಪಾಯಿಗಳಷ್ಟು ವೆಚ್ಚವನ್ನು ಭರಿಸಬೇಕು ಎನ್ನುವ ಕರಾರನ್ನು ಹಾಕಿದೆ. ಈ ರೀತಿಯಾಗಿ ಅವೈಜ್ಞಾನಿಕವಾಗಿ ಅಲ್ಲಿನ ಅಧಿಕಾರಿಗಳು ತಮ್ಮ ದರ್ಪವನ್ನು ತೋರುತ್ತಿದ್ದಾರೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಯನ್ನು ನೀಡಿ, ಅಲ್ಲಿ ವಿದ್ಯುತ್ ಚಿತಾಗಾರವನ್ನು ಪ್ರಾರಂಭಿಸಬೇಕೆಂದು ನಾನು ಸಚಿವರಲ್ಲಿ ಕೈಮುಗಿದು ವಿನಂತಿಸುತ್ತೇನೆ. **'ಬಲ್ವಿಯಾ, ಖಾಯಾ, ಪೀಯಾ, ಚಲ್ವಿಯಾ'** ಎನ್ನುವ ಮನೋಭಾವನೆಯನ್ನು ಸಚಿವರು ದೂರಮಾಡಬೇಕು.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಮುಖ್ಯಮಂತ್ರಿಗಳೇ,...

**ಸಭಾಪತಿಯವರು:-** ಸಚಿವರೇ, ಉತ್ತರಿಸಿ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, 'ಶೇಕಡಾ 40 ರಷ್ಟು' ಈ ವಿಷಯವು ಪ್ರಸ್ತಾಪವಾಗುತ್ತದೆ. ಆಗ ಮುಖ್ಯಮಂತ್ರಿಗಳು ಉತ್ತರಿಸಬೇಕು.

**ಸಭಾಪತಿಯವರು:-** ಆ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಪುನಃ ಸದನಕ್ಕೆ ಬರುತ್ತಾರೆ.

**ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಶ್ರೀ ಸಿ.ಎಂ.ಇಬ್ರಾಹಿಂ ರವರು ಪ್ರಸ್ತಾಪಿಸಿದ 'ಶೇಕಡಾ 40 ರಷ್ಟು' ಈ ವಿಷಯದ ಬಗ್ಗೆ ನಾವೂ ಸಹ ಚರ್ಚಿಸಲು ಅಷ್ಟೇ ಆಸಕ್ತಿಯವನ್ನು ವಹಿಸಿದ್ದೇವೆ. ಆದ್ದರಿಂದ ಸಚಿವರು ಇದರ ಬಗ್ಗೆ ಸಮರ್ಪಕವಾದ ಉತ್ತರವನ್ನು ನೀಡುತ್ತಾರೆ. ಸದಸ್ಯರು ಹೆಚ್ಚಿನ ಉತ್ತರವನ್ನು ಬಯಸಿದ್ದಲ್ಲಿ ನಾನೂ ಸಹ ಉತ್ತರವನ್ನು ನೀಡುತ್ತೇನೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಮುಖ್ಯಮಂತ್ರಿಗಳೇ, ಕೆ.ಪಿ.ಎಸ್.ಸಿ.ಗೆ ಸಂಬಂಧಪಟ್ಟ ವಿಚಾರವೊಂದಿದೆ.

**ಸಭಾಪತಿಯವರು:-** ಸದಸ್ಯರೇ ಕುಳಿತುಕೊಳ್ಳಿ. ಸಚಿವರೇ ಉತ್ತರಿಸಿ. ಬೇರೆಯವರ ಪ್ರಶ್ನೆಯಲ್ಲಿ ನೀವು ಮಾತನಾಡುತ್ತೀರಿ. ಸದಸ್ಯರು ಪ್ರಶ್ನೆಯನ್ನು ಕೇಳುತ್ತಿದ್ದಾರೆ; ನೀವು ಮಧ್ಯದಲ್ಲಿ ಮಾತನಾಡುತ್ತಿದ್ದೀರಿ.

**ಶ್ರೀ ಎನ್.ನಾಗರಾಜು(ಎಂ.ಟಿ.ಬಿ.):-** ಮಾನ್ಯ ಸಭಾಪತಿಯವರೇ, ವಿದ್ಯುತ್ ಚಿತಾಗಾರದ ಕಾಮಗಾರಿಗೆ 150 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ. ಆದರೆ ಅಲ್ಲಿನ ಸ್ಥಳದ

ಸಮಸ್ಯೆಯಿಂದಾಗಿ, ಯೋಜನೆಯು ಸ್ಥಗಿತಗೊಂಡಿದೆ. ಇದಾದ ನಂತರ, ತಲಾ 50 ಲಕ್ಷ ರೂಪಾಯಿಗಳಂತೆ, ಎರಡು ಯೋಜನೆಗಳಿಗೆ ಅಂದಾಜನ್ನು ಸಿದ್ಧಪಡಿಸಿದ್ದು, ಆ ಪೈಕಿ ಒಂದು ಚಿತಾಗಾರವು ಈಗಾಗಲೇ ಕಾರ್ಯಾರಂಭವಾಗಿದೆ. ಆ ಭಾಗದಲ್ಲಿ ಪ್ರತಿದಿನ ಸುಮಾರು 2-3 ಸಾವುಗಳಾಗುತ್ತಿವೆ. ಈ ಸಂಬಂಧ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ಹೀಗಾಗಿ ನಾವು ಅಲ್ಲಿ ಸ್ಥಳ ಮತ್ತು ವ್ಯವಸ್ಥೆಗಳ ಪರಿಶೀಲನೆ ಮಾಡಿ, ಸದಸ್ಯರೊಂದಿಗೆ ಚರ್ಚಿಸಿ, ಸಮಸ್ಯೆಯನ್ನು ಬಗೆಹರಿಸುವ ಕ್ರಮಗಳನ್ನು ಕೈಗೊಳ್ಳಲಾಗುವುದು.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಅಲ್ಲಿ ಗ್ಯಾಸ್ ಆಧಾರಿತ ಚಿತಾಗಾರ ಅಲ್ಲಿ ಇಲ್ಲವೇ ಇಲ್ಲ. ಅದು ನಮ್ಮ ಮಲ್ಕಾಪೂರೆ ಗ್ರಾಮದ ಸರ್ವೆ ನಂಬರ್...., ಈ ಯೋಜನೆಯ ಅನುಷ್ಠಾನಕ್ಕಾಗಿ ಎಷ್ಟು ಜಾಗ ಬೇಕೋ ಅಷ್ಟು ಜಾಗ ಅಲ್ಲಿ ಲಭ್ಯವಿದೆ. ಇಲಾಖೆಯ ಅಧಿಕಾರಿಗಳು ತಪ್ಪು ಕೆಲಸಗಳನ್ನು ಮಾಡುತ್ತಿದ್ದಾರೆ. ಸಚಿವರು ಅಲ್ಲಿಗೆ ಭೇಟಿ ನೀಡಿ, ವಾಸ್ತವಾಂಶಗಳನ್ನು ಪರಿಶೀಲಿಸಿ, ಸಮಸ್ಯೆಗಳನ್ನು ಬಗೆಹರಿಸಬೇಕು. ಇದರ ಬಗ್ಗೆ ನನಗೆ ಯಾವುದೇ ಅಭ್ಯಂತರವಿಲ್ಲ.

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ.):-** ಮಾನ್ಯ ಸಭಾಪತಿಯವರೇ, ಈ ಯೋಜನೆಯ ಅನುಷ್ಠಾನಕ್ಕಾಗಿ ಸದಸ್ಯರು ನಮಗೆ 1-3 ಎಕರೆಗಳಷ್ಟು ಜಮೀನನ್ನು ಕೊಡಿಸಲಿ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಮೊದಲು ನೀವು ಸ್ಥಳಕ್ಕೆ ಭೇಟಿ ನೀಡಿ.

**ಸಭಾಪತಿಯವರು:-** ಸಚಿವರೇ, ನೀವು ಅಲ್ಲಿಗೆ ಭೇಟಿ ನೀಡಿದಾಗ, ಸದಸ್ಯರನ್ನೂ ಸಹ ಕರೆದುಕೊಂಡು ಪರಿಶೀಲನೆ ಮಾಡಿ.

**ಶ್ರೀ ಎನ್.ನಾಗರಾಜು(ಎಂ.ಟಿ.ಬಿ.):-** ಮಾನ್ಯ ಸಭಾಪತಿಯವರೇ, ನಗರಸಭೆಯ ವ್ಯಾಪ್ತಿಯಲ್ಲಿ ಈಗಾಗಲೇ ಚಿತಾಗಾರಗಳಿವೆ. ಸದಸ್ಯರು ಕನಿಷ್ಠ ಒಂದು ಎಕರೆಯಷ್ಟು ಜಮೀನನ್ನು ಕೊಡಿಸಿದರೆ, ಕೆಲಸಗಳನ್ನು ನಾವು ಮಾಡಿಸುತ್ತೇವೆ.

**ಸಭಾಪತಿಯವರು:-** ಇಲ್ಲಿಗೆ ಪ್ರಶ್ನೋತ್ತರ ಅವಧಿಯು ಮುಕ್ತಾಯವಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ: 23ನೇ ಡಿಸೆಂಬರ್ 2021, ಸಮೂಹ-4ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 108 ಪ್ರಶ್ನೆಗಳ ಪೈಕಿ 65 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:-** ಮಂಡಿಸಲಾಯಿತು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 2. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

### ಅ) ವಿಷಯ:- ರಾಜ್ಯದ ಮೊರಾರ್ಜಿ ವಸತಿ ಶಾಲೆ ಹಾಗೂ ಇನ್ನಿತರ ವಸತಿ ಶಾಲೆಗಳ ಶಿಕ್ಷಕರನ್ನು ಖಾಯಂ ಮಾಡುವ ಬಗ್ಗೆ

- - - - -

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಿದ್ದಕ್ಕಾಗಿ ಧನ್ಯವಾದಗಳು.

ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳಡಿ ಬರುವ ಮೊರಾರ್ಜಿ ವಸತಿ ಶಾಲೆ, ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ, ಡಾ|| ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ ಮತ್ತು ಇಂದಿರಾಗಾಂಧಿ ವಸತಿ ಶಾಲೆಗಳು ಸೇರಿದಂತೆ, ರಾಜ್ಯದ ಇನ್ನಿತರೆ ವಸತಿ ಶಾಲೆಗಳಲ್ಲಿ ಕಳೆದ 3 ರಿಂದ 8 ವರ್ಷಗಳ ಅವಧಿಯವರೆಗೆ 150 ಕ್ಕೂ ಹೆಚ್ಚು ಶಿಕ್ಷಕರು ಸೇವೆಯನ್ನು ಸಲ್ಲಿಸುತ್ತಾ, ಬಂದಿದ್ದಾರೆ. ಸದರಿ ಶಿಕ್ಷಕರನ್ನು ಈ ಹಿಂದೆ ಸೇವೆ ಸಲ್ಲಿಸಿದವರನ್ನು ಖಾಯಂಗೊಳಿಸಿದಂತೆ, ಇವರನ್ನೂ ಸಹ ಖಾಯಂಗೊಳಿಸುವಂತೆ ರಾಜ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿಗಳು ಸಂಖ್ಯೆ: 52876/2018 ಮತ್ತು 6581/2020 ಗಳಲ್ಲಿ ನ್ಯಾಯಾಲಯವು ಹೊರಡಿಸಿದ ಆರ್ಡರ್‌ನಲ್ಲಿ ಆದೇಶಿರುತ್ತದೆ. ಆದರೆ, ಈ ಪೈಕಿ ಸುಮಾರು 50 ಶಿಕ್ಷಕರನ್ನು ಶಾಲೆಯಿಂದ ಹೊರಹಾಕಿರುತ್ತಾರೆ. ಈ ಕುರಿತು ನಾವು ಶಾಸಕರು ಲಿಖಿತವಾಗಿಯೂ ಸಹ ಮನವಿ ಮಾಡಿದ್ದೇವೆ. ಆದರೂ ಸಹ ಅವರುಗಳನ್ನು ಇನ್ನೂ ಸೇವೆಗೆ ಹಿಂಪಡೆದಿರುವುದಿಲ್ಲ. ಇದರ ಜೊತೆಗೆ ಈ ಹಿಂದಿನ ಸಚಿವರು ಇವರನ್ನು ಖಾಯಂ ಮಾಡಲು ಒಪ್ಪಿದ್ದು, ಅದರಂತೆ, ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗದ ಸಚಿವರು ಉಚ್ಚ ನ್ಯಾಯಾಲಯದ ಆದೇಶವನ್ನು ಪಾಲಿಸಿ, ಇವರುಗಳನ್ನು ಖಾಯಂಗೊಳಿಸುವಂತೆ ಮತ್ತು ಹೊರ ಉಳಿದವರನ್ನು ಶಾಲೆಗೆ ಮರು ಪ್ರವೇಶಿಸಲು ಅವಕಾಶ ಮಾಡಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ. ಸಭಾನಾಯಕರೇ, ಇದಕ್ಕೆ ಸಂಬಂಧಪಟ್ಟ ಸಚಿವರಾಗಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)** ಮಾನ್ಯ ಸಭಾಪತಿಯವರೇ, ಸದಸ್ಯರು ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ, ಕಡತಗಳನ್ನು ಪರಿಶೀಲಿಸಿ, ನಮ್ಮ ಇಲಾಖಾಧಿಕಾರಿಗಳೊಂದಿಗೆ ಚರ್ಚಿಸಿ, ಶಿಕ್ಷಕರುಗಳಿಗೆ ಸಹಾಯವಾಗುವ ಹಾಗೂ ಸದಸ್ಯರಿಗೆ ಸಮಾಧಾನವಾಗುವ ರೀತಿಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಆ) ವಿಷಯ:- ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇಲ್ಲಿ 371(ಜೆ) ಮೀಸಲಾತಿ ಅಡಿ ನೇಮಕಾತಿ ವಿಳಂಬವಾಗುತ್ತಿರುವ ಬಗ್ಗೆ**

- - - - -

**ಶ್ರೀ ಎಸ್.ವ್ವಿ.ಸಂಕನೂರ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು.

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡಕ್ಕೆ ಸಂಬಂಧಿಸಿದಂತೆ, ಪ್ರಮುಖವಾದ ಎರಡು ವಿಷಯದ ಕುರಿತು ಹಲವಾರು ಪತ್ರಿಕೆಗಳಲ್ಲಿ ಬಂದ ಮಾಹಿತಿಯನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

***(1) ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇಲ್ಲಿ 371 (ಜೆ) ಮೀಸಲಾತಿಯಡಿ ನೇಮಕಾತಿಗಳು ನೆನೆಗುದಿಗೆ ಬಿದ್ದಿರುವ ಕುರಿತು.***

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇವರು 2017 ರಲ್ಲಿ ಇಪ್ಪತ್ತು ಪ್ರಾಧ್ಯಾಪಕರ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಅಧಿಸೂಚನೆ ಹೊರಡಿಸಿದ್ದರು. ಈ ಕುರಿತು ವಿಶ್ವವಿದ್ಯಾಲಯವು ನೇಮಕಾತಿ ಮಾಡಿಕೊಳ್ಳಲು ಸೆಪ್ಟಂಬರ್/ಅಕ್ಟೋಬರ್ 2017 ರಲ್ಲಿ ಲಿಖಿತ ಪರೀಕ್ಷೆ ನಡೆಸಿ, ಅಂಕಗಳನ್ನೂ ಕೂಡಾ ಪ್ರಕಟ ಮಾಡಿದ್ದರು. ಈ ಹಂತದಲ್ಲಿ ಅಂದಿನ ಕುಲಪತಿಗಳು ನಿವೃತ್ತಿ ಅಂಚಿನಲ್ಲಿದ್ದ ಕಾರಣ, ಸಂದರ್ಶನ ನಡೆಸಿ, ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲು ಆಗಿರುವುದಿಲ್ಲ. ಹೀಗಾಗಿ ಕಳೆದ ನಾಲ್ಕು ವರ್ಷಗಳಿಂದ, ಕೋವಿಡ್-19 ಮುಂತಾದ ಕಾರಣಗಳಿಂದ ನಿಂತು ಹೋದ ನೇಮಕಾತಿ ಪ್ರಕ್ರಿಯೆ ಇದುವರೆಗೆ ಪುನಃ ಪ್ರಾರಂಭವಾಗಿರುವುದಿಲ್ಲ. ಈ ಕಾರಣಕ್ಕಾಗಿ ನೇಮಕಾತಿಗಾಗಿ ಅರ್ಜಿ ಸಲ್ಲಿಸಿದ ಸುಮಾರು 70 ಕ್ಕೂ ಹೆಚ್ಚು ಅಭ್ಯರ್ಥಿಗಳು ತೊಂದರೆ ಹಾಗೂ ಅನ್ಯಾಯಕ್ಕೆ ಒಳಗಾಗಿದ್ದಾರೆ. ಈ ಹಿನ್ನೆಲೆಯಲ್ಲಿ ನೇಮಕಾತಿಗಾಗಿ ಅರ್ಜಿ ಸಲ್ಲಿಸಿದ ಪದವೀಧರರು ಕುಲಪತಿಗಳನ್ನು ಪ್ರಶ್ನೆ ಮಾಡಿದಾಗ, ಸರ್ಕಾರದಿಂದ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲು ನನಗೆ ಅನುಮತಿ ಬರಬೇಕಾಗಿದೆ, ಎಂದು ತಿಳಿಸಿದ್ದರು. ಆದ್ದರಿಂದ ಮಾನ್ಯ ಉನ್ನತ ಶಿಕ್ಷಣ ಸಚಿವರು ಸದ್ಯ ಇರುವ ತಾಂತ್ರಿಕ ತೊಂದರೆಗಳನ್ನು ನಿವಾರಿಸಿ, ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಿಗೆ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸೂಕ್ತ ನಿರ್ದೇಶನ ನೀಡಲು ಒತ್ತಾಯಿಸುತ್ತೇನೆ.

***(2) ಕರ್ನಾಟಕ ವಿಶ್ವವಿದ್ಯಾಲಯದ ನೌಕರರು ಇತ್ತೀಚೆಗೆ ತರಗತಿ ಬಹಿಷ್ಕರಿಸಿ ಪ್ರತಿಭಟನೆ ಮಾಡಿರುವ ಕುರಿತು***

ವಿಶ್ವವಿದ್ಯಾಲಯದ ಪದೋನ್ನತಿ ಹೊಂದಿದ ಪ್ರಾಧ್ಯಾಪಕರಿಗೆ ನೀಡಬೇಕಾಗಿರುವ ಹಿಂಬಾಕಿ ಮತ್ತು ಪ್ರತಿ ತಿಂಗಳು 1 ನೇ ತಾರೀಖಿಗೆ ವೇತನ ಬಿಡುಗಡೆಗೊಳಿಸಬೇಕು ಮುಂತಾದ ಬೇಡಿಕೆಗಳನ್ನು ಈಡೇರಿಸಲು ಈ ಹಿಂದೆ ಪ್ರಾಧ್ಯಾಪಕರು ತರಗತಿ ಬಹಿಷ್ಕರಿಸಿದ್ದರು. ಈ ಸಂದರ್ಭದಲ್ಲಿ ಕುಲಪತಿಗಳು/ಕುಲಚಿವರು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಒಂದು ತಿಂಗಳೊಳಗಾಗಿ ಸಮಸ್ಯೆಗಳನ್ನು ಪರಿಹರಿಸುವ ಭರವಸೆ ನೀಡಿದ ಹಿನ್ನೆಲೆಯಲ್ಲಿ ನೌಕರರ ಸಂಘಟನೆಯವರು ಮುಷ್ಕರವನ್ನು ಹಿಂಪಡೆದಿರುತ್ತಾರೆ. ಆದರೆ, ಎರಡು-ಮೂರು ತಿಂಗಳು ಕಳೆದರೂ ನೌಕರರ ಬೇಡಿಕೆಗಳು ಈಡೇರದೇ ಇರುವುದು ದುರ್ದೈವದ ಸಂಗತಿಯಾಗಿದೆ. ಈ ಕುರಿತು ಕರ್ನಾಟಕ ವಿಶ್ವವಿದ್ಯಾಲಯದ ಶಿಕ್ಷಕರ ಹಾಗೂ ಶಿಕ್ಷಕೇತರ ಸಂಘಟನೆಯವರು ಬಾಕಿ ವೇತನ ಬಿಡುಗಡೆ ಹಾಗೂ ಪ್ರತಿ ತಿಂಗಳ ವೇತನ ಬಿಡುಗಡೆಯಲ್ಲಿ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಯೇ ವಿಳಂಬಕ್ಕೆ ಕಾರಣವೆಂದು ಹೇಳುತ್ತಿರುವರು. ಇದಲ್ಲದೇ, ಇಂತಹ ಅಧಿಕಾರಿಯನ್ನು ಹಿಂಪಡೆಯಬೇಕೆಂದು ಪ್ರತಿಭಟ್ಟನೆಕಾರರು ಸರ್ಕಾರವನ್ನು ಆಗ್ರಹಿಸಿದ್ದಾರೆ. ಈ ಹಿನ್ನೆಲೆಯಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದ ಶಿಕ್ಷಕ ಮತ್ತು ಶಿಕ್ಷಕೇತರ ನೌಕರರಿಗೆ, ಅತಿಥಿ ಉಪನ್ಯಾಸಕರಿಗೆ, ಸಂಶೋಧನಾ ವಿದ್ಯಾರ್ಥಿಗಳಿಗೆ ಬಿಡುಗಡೆಯಾಗಬೇಕಾದ ವೇತನ, ಬಾಕಿ ವೇತನ ನಿಯಮಿತ ಕಾಲದಲ್ಲಿ ಬಿಡುಗಡೆ ಮಾಡಲು ಕುಲಪತಿಗಳಿಗೆ ಸೂಕ್ತ ನಿರ್ದೇಶನ ನೀಡಲು ಉನ್ನತ ಶಿಕ್ಷಣ ಸಚಿವರಲ್ಲಿ ಒತ್ತಾಯಿಸುತ್ತೇನೆ. ಇದಲ್ಲದೇ, ವೇತನ ಬಿಡುಗಡೆಯಲ್ಲಿ ವಿಳಂಬಕ್ಕೆ ಕಾರಣರಾದ ಹಣಕಾಸು ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಲು ಆಗ್ರಹಿಸುತ್ತೇನೆ.

**ವೈಸ್ ಛೇರ್ಮನ್:-** ಶ್ರೀ ಸಂಕನೂರರವರೇ, ನಿಮ್ಮ ಪ್ರಸ್ತಾವನೆಯು ಸುದೀರ್ಘವಾಗಿರದೇ, 150 ಪದಗಳ ಮಿತಿಯೊಳಗಿರಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರು ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ, ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ತರಿಸಿ ಕೊಡಲಾಗುವುದು.

(ಮುಂದು)

**(1289) 12.20 23-12-2021 ಸಿಎಸ್/ಬಿಎನ್ಎನ್**

**ಇ) ವಿಷಯ: ಬಾಗಲಕೋಟೆ ಜಿಲ್ಲೆ ಸಾವಳಗಿ ಪಟ್ಟಣವನ್ನು ತಾಲ್ಲೂಕನ್ನಾಗಿ ಪರಿವರ್ತಿಸುವ ಬಗ್ಗೆ**

~~~~~~~

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೇ, ಬಾಗಲಕೋಟೆ ಜಿಲ್ಲೆಯ ಜಮಖಂಡಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸಾವಳಗಿಯು ತಾಲ್ಲೂಕ್ ಕೇಂದ್ರವಾಗಲು ಅತ್ಯಂತ ಯೋಗ್ಯ ಸ್ಥಳವಾಗಿದ್ದು, ಸ್ವತಂತ್ರ ಪೂರ್ವದ ಸಂಸ್ಥಾನಿಕರ ಕಾಲದಲ್ಲಿ ಸಾವಳಗಿ ನಗರವು ತಾಲ್ಲೂಕಾಗಿ ಐತಿಹಾಸಿಕ ಮಹತ್ವ ಪಡೆದಿತ್ತು. ಜಮಖಂಡಿ ಸಂಸ್ಥಾನದ ರಾಜ್ಯಭಾರವನ್ನು ಸಾವಳಗಿಯಿಂದಲೇ ಮಾಡುತ್ತಿದ್ದು, ಐತಿಹಾಸಿಕ ದಾಖಲೆ, ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ತವರೂರಾಗಿ ಪ್ರಖ್ಯಾತಿ ಪಡೆದ ಹಿನ್ನಲೆಯಲ್ಲಿ ಸಾವಳಗಿಯನ್ನು ತಾಲ್ಲೂಕು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~~~~~

ಕೇಂದ್ರವನ್ನಾಗಿಸುವ ವಿಷಯವು ಮಹತ್ವವನ್ನು ಪಡೆದಿದ್ದು, ಈ ವಿಚಾರವನ್ನು ಶೂನ್ಯ ವೇಳೆಯ ಅಡಿಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

ಸಾವಳಗಿ ಗ್ರಾಮವು ಹೋಬಳಿ ಕೇಂದ್ರವಾಗಿ ಸಾವಳಗಿ 24 ಹಳ್ಳಿಗಳ ಕೇಂದ್ರಸ್ಥಾನವಾಗಿದೆ. ಸಾವಳಗಿಯೂ ಜಮಖಂಡಿಯಿಂದ 40 ಕಿ.ಮೀ ವಿಜಯಪುರದಿಂದ 60 ಕಿ.ಮೀ ಅಥಣಿಯಿಂದ 30 ಕಿ.ಮೀ ದೂರದಲ್ಲಿದ್ದು, ಸುಮಾರು 15-20 ಸಾವಿರ ಜನಸಂಖ್ಯೆಯನ್ನು ಹೊಂದಿದ್ದು, ಇಲ್ಲಿ ಪ್ರಾಥಮಿಕ ಶಾಲೆಯಿಂದ ಹಿಡಿದು ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಹೊಂದಿದೆ. ಈ ಭಾಗದಲ್ಲಿ ಸರ್ಕಾರವು ಸುಮಾರು 25 ಸಾವಿರ ಎಕರೆ ನೀರಾವರಿ ಸೌಲಭ್ಯ ಒದಗಿಸಲು ಸಾವಳಗಿ-ತುಂಗಳ ಏತ ನೀರಾವರಿ ಪ್ರಾರಂಭವಾಗಿದ್ದು, ಇಲ್ಲಿ ತಾಲ್ಲೂಕು ಕಚೇರಿಗಳನ್ನು ಪ್ರಾರಂಭಿಸಲು ಸಂಸ್ಥಾನ ಕಾಲದ ಕಟ್ಟಡಗಳು ಒಳ್ಳೆಯ ಸ್ಥಿತಿಯಲ್ಲಿವೆ. ಆದ್ದರಿಂದ ಸರ್ಕಾರದ ಆರ್ಥಿಕ ಹೊಣೆ ಕಡಿಮೆಯಾಗುತ್ತದೆ. ಈ ಭಾಗದಲ್ಲಿ ಸುಮಾರು ಸಾವಿರಾರು ಎಕರೆಗಳಷ್ಟು ದ್ರಾಕ್ಷಿ ಮತ್ತು ವಾಣಿಜ್ಯ ಬೆಳೆಗಳು ಲಕ್ಷಾಂತರ ಎಕರೆಗಳಷ್ಟು ಕಬ್ಬು, ಜೋಳ, ಗೋಧಿ, ಹತ್ತಿ ಮುಂತಾದ ಬೆಳೆಗಳು ರೈತರ ಆರ್ಥಿಕ ಮೂಲ ಬೆಳೆಗಳಾಗಿವೆ. ಸಾವಳಗಿಯಿಂದ 20 ಕಿ.ಮೀ ವ್ಯಾಪ್ತಿಯಲ್ಲಿ ಒಟ್ಟು 3 ಸಕ್ಕರೆ ಕಾರ್ಖಾನೆಗಳಿವೆ. ಸುಮಾರು 40 ವರ್ಷಗಳ ಹಿಂದೆ ಕಲ್ಕತ್ತಾದ ಸ್ಟಾಟಿಸ್ಟಿಕಲ್ ಇನ್ಸಿಟಿಟ್ಯೂಟ್‌ನ ವಿಜ್ಞಾನಿಗಳಾದ ಶ್ರೀ ಎ.ಎಲ್.ಪ್ರಕಾಶ್ ರಾವ್ ಮತ್ತು ಶ್ರೀ ಎಲ್. ಎಸ್. ಭಟ್ ಇವರು ಜಿಲ್ಲಾ ಹಾಗೂ ತಾಲ್ಲೂಕು ಮರು ವಿಗಂಡನೆಯ ಸಲುವಾಗಿ ಪ್ರಾದೇಶಿಕ ಅಧ್ಯಯನ ಮಾಡಿ ತಮ್ಮ ವರದಿಯಲ್ಲಿ ಸಾವಳಗಿಯನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಲು ಸೂಕ್ತವಾಗಿದೆ ಎಂದು ವರದಿಯನ್ನು ನೀಡಿರುತ್ತಾರೆ.

ಆದುದರಿಂದ ಈ ಭಾಗದ ಜನರ ಕಷ್ಟ ಕಾರ್ಪಣ್ಯಗಳನ್ನು ನಿವಾರಿಸುವ ನಿಟ್ಟಿನಲ್ಲಿ ಅನುಕೂಲವಾಗುವಂತೆ ಸಾವಳಗಿ ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಿ ಇಲ್ಲಿನ ಜನರ ಬಹುದಿನಗಳ ಬೇಡಿಕೆಯನ್ನು ಈಡೇರಿಸುವ ಬಗ್ಗೆ ಈ ಸದನದ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಗಳೇ, ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್. ಆರ್. ಪಾಟೀಲ್‌ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಚಾರವನ್ನು ಮಾನ್ಯ ಕಂದಾಯ ಸಚಿವರ ಗಮನಕ್ಕೆ ತಂದು, ಅವರಿಗೆ ಉತ್ತರ ಕೊಡಿಸಲಾಗುವುದು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಈ) ವಿಷಯ: ಕೋವಿಡ್-19 ಕಾರಣದಿಂದ ಎಲ್ಲಾ ವಿದ್ಯಾರ್ಥಿಗಳನ್ನು ಉತ್ತೀರ್ಣಗೊಳಿಸಿದ್ದರಿಂದ ಮುಂದಿನ ವಿದ್ಯಾಭ್ಯಾಸಕ್ಕಾಗಿ ಹಾಸ್ಟೆಲ್ ಸೌಲಭ್ಯದಿಂದ ವಂಚಿತರಾಗಿರುವ ಬಗ್ಗೆ**

\- - - - - - -

**ಶ್ರೀ ಚಿದಾನಂದ್ ಎಂ.ಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, 2020-21ನೇ ಶೈಕ್ಷಣಿಕ ಸಾಲಿನಲ್ಲಿ ಕೋವಿಡ್-19 ಕಾರಣಗಳಿಂದ ಪ್ರಸಕ್ತ ಶೈಕ್ಷಣಿಕ ಸಾಲಿನ ಎಲ್ಲಾ ವಿದ್ಯಾರ್ಥಿಗಳನ್ನು ಶಿಕ್ಷಣದಿಂದ ವಂಚಿತರಾಗದೇ ಮುಂದುವರೆಸುವ ಉದ್ದೇಶದಿಂದ ಸರ್ಕಾರವೇ ಉತ್ತೀರ್ಣಗೊಳಿಸಲಾಗಿದೆ. ಬಹುತೇಕ ವಿದ್ಯಾರ್ಥಿಗಳು ಮುಂದಿನ ವಿದ್ಯಾಭ್ಯಾಸಕ್ಕಾಗಿ ವಿವಿಧ ಕಾಲೇಜುಗಳಲ್ಲಿ ಪ್ರವೇಶಾತಿ ಪಡೆದಿರುತ್ತಾರೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದ್ದು, ಹಾಸ್ಟೆಲ್‌ಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈಗಾಗಲೇ ಹಾಸ್ಟೆಲ್‌ನಲ್ಲಿ ಶೇಕಡ 100 ರಷ್ಟು ಸೀಟುಗಳು ಭರ್ತಿಯಾಗಿವೆ. ಆದರೆ ಮುಂದಿನ ವ್ಯಾಸಂಗಕ್ಕಾಗಿ ಕಾಲೇಜಿಗೆ ದಾಖಲಾದ ಗ್ರಾಮೀಣ ವಿದ್ಯಾರ್ಥಿಗಳು ಹಾಸ್ಟೆಲ್ ಸೌಕರ್ಯದಿಂದ ವಂಚಿತರಾಗಿದ್ದಾರೆ. ಇಂತಹ ವಿದ್ಯಾರ್ಥಿಗಳು ಕಾಲೇಜಿಗೆ ಹೋಗಲು ಆಗದೇ ಮನೆಯಲ್ಲಿಯೇ ಇದ್ದು ಕೂಲಿನಾಲಿಗೆ ಹೋಗುತ್ತಿದ್ದಾರೆ. ಇಂತಹ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಕರ್ಯವನ್ನು ನೀಡಿದರೆ ಅವರು ಸಹ ಶಿಕ್ಷಣದಿಂದ ವಂಚಿತರಾಗುವುದಿಲ್ಲ. ಹಾಸ್ಟೆಲ್ ಸೀಟುಗಳ ಸಮಸ್ಯೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಹಾಸ್ಟೆಲ್ ವಂಚಿತ ವಿದ್ಯಾರ್ಥಿಗಳ ಸಮಸ್ಯೆಯನ್ನು ಸರಿಪಡಿಸುವ ನಿಟ್ಟಿನಲ್ಲಿ ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ ಎಂದು ನಾನು ಈ ಶೂನ್ಯವೇಳೆಯಲ್ಲಿ ಸರ್ಕಾರವನ್ನು ಕೇಳಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಶ್ರೀ ಚಿದಾನಂದ ಗೌಡರವರು ಹಿಂದುಳಿದ ವರ್ಗಗಳ ಹಾಸ್ಟೆಲ್ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಮೆಟ್ರಿಕ್ ಪೂರ್ವದ ವಿದ್ಯಾರ್ಥಿ ನಿಲಯಗಳಲ್ಲಿ ನಮ್ಮದೇನೂ ಸಮಸ್ಯೆಗಳಿಲ್ಲ. ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಕೊರತೆಯಿಂದಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ ಎಂದು ಶೂನ್ಯವೇಳೆಯಲ್ಲಿ ಪ್ರಸ್ತಾಪವನ್ನು ಮಾಡಿದ್ದಾರೆ. ಇದೇ ಪ್ರಶ್ನೆಯನ್ನು ನಿಯಮ 330ರ ಅಡಿಯಲ್ಲಿ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರು ಸಹ ಕೇಳಿದ್ದಾರೆ. ಅದಕ್ಕೆ ನಾನು ವಿಸ್ತೃತವಾದ ಉತ್ತರವನ್ನು ನೀಡುತ್ತೇನೆ. ಆದಾಗ್ಯೂ ಸಹ ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಈ ವಿಚಾರ ಪ್ರಸ್ತಾಪಿಸಿದ್ದಕ್ಕಾಗಿ ಕೆಲವೊಂದು ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ನೀಡಬಯಸುತ್ತೇನೆ. ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ 1137, ವಿದ್ಯಾರ್ಥಿಗಳಿಗೆ ಮಂಜೂರಾತಿ ದೊರಕಿರುವುದು 1,22,780 ವಿದ್ಯಾರ್ಥಿಗಳಿಗೆ ಅವಕಾಶವನ್ನು ಕಲ್ಪಿಸಬಹುದು. ಇದರಲ್ಲಿ 54,559 ವಿದ್ಯಾರ್ಥಿಗಳು ನವೀಕರಣಗೊಂಡಿದ್ದಾರೆ. ಈಗ ಖಾಲಿ 73,221 ಇದೆ. ಈಗ ಇನ್ನೂ ಹೊಸದಾಗಿ ವಿದ್ಯಾರ್ಥಿಗಳು ಸೇರ್ಪಡೆ ಆಗುವವರಿದ್ದಾರೆ. ಈಗ ಹೊಸದಾಗಿ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಿರುವ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿದ್ಯಾರ್ಥಿಗಳ ಸಂಖ್ಯೆ 1,99,460 ಈ ಪೈಕಿ 73221 ಸೇರಿದಂತೆ 1,26,259 ವಿದ್ಯಾರ್ಥಿಗಳಿಗೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಕೇಳಿದ್ದಾರೆ. ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಮತ್ತು ಸದನಕ್ಕೆ ಉತ್ತರ ನೀಡುವುದೇನೆಂದರೆ ಈಗಾಗಲೇ ತುಂಬಾ ಜನ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ತೊಂದರೆ ಆಗಿರುವ ಹಿನ್ನಲೆಯಲ್ಲಿ ನಮ್ಮ ಮುಖ್ಯಮಂತ್ರಿಗಳು ನಿನ್ನೆಯ ದಿವಸ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿ, ಕನಿಷ್ಠ ಹೊಸದಾಗಿ 100 ಹಾಸ್ಟೆಲ್‌ಗಳನ್ನು ಮಂಜೂರು ಮಾಡುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಿ ಕೊಡಲಾಗುತ್ತಿದೆ. ಇದೇ ವಾರದಲ್ಲಿ ಆ ಪ್ರಸ್ತಾವನೆಗೆ ಅನುಮೋದನೆ ದೊರೆಯುತ್ತದ್ದೆ ಎನ್ನುವ ವಿಶ್ವಾಸ ನಮಗಿದೆ. ಹೊರಗಿರುವ ಎಲ್ಲಾ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಯಾವುದಾದರೂ ರೂಪದಲ್ಲಿ ವಿದ್ಯಾರ್ಥಿನಿಲಯಗಳಲ್ಲಿ ಅವಕಾಶ ಕಲ್ಪಿಸಿ ಕೊಡುವುದು ನಮ್ಮ ಮುಂದಿರುವ ಗುರಿ. ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರು ನೀಡಿರುವ ನಿಯಮ 330ರ ಅಡಿಯಲ್ಲಿ ಈ ಬಗ್ಗೆ ವಿಸ್ತೃತವಾದ ಚರ್ಚೆಯನ್ನು ಮಾಡುವುದಕ್ಕೆ ಅವಕಾಶ ಇದೆ. ಈಗಿರುವ ಹಾಸ್ಟೆಲ್‌ಗಳಲ್ಲಿ ಶೇಕಡ 5 ರಷ್ಟು ಹೆಚ್ಚು ಮಾಡಬೇಕೆಂದು ಆದೇಶ ನೀಡಿದ್ದೇವೆ. ಇದರಿಂದ ಸುಮಾರು 12,000 ಜನ ಮಕ್ಕಳಿಗೆ ಅನುಕೂಲವಾಗಿದೆ. ಈ ಬಗ್ಗೆ ತುಂಬಾ ಜನ ಶಾಸಕರು ನಮ್ಮಲ್ಲಿ ಸ್ಥಳಾವಕಾಶ ಇದೆ, ನಮಗೆ ಅವಕಾಶ ಮಾಡಿಕೊಡಿ ಎಂದು ಕೇಳಿದ್ದಾರೆ. ಹಾಗಾಗಿ ಎಲ್ಲಿ ಸ್ಥಳಾವಕಾಶ ಇದೆ ಅಲ್ಲಿ 10% ಹೆಚ್ಚಿಗೆ ಮಾಡಿ ಎಂದು ಈಗಾಗಲೇ ಸೂಚನೆಯನ್ನು ನೀಡಿದ್ದೇವೆ. ಆ ಹಿನ್ನಲೆಯಲ್ಲಿ ಆದೇಶ ಹೊರಟಾಗ ಮಕ್ಕಳಿಗೆ ಬೇಕಾದ ಮೂಲ ಭೂತ ಸೌಕರ್ಯಗಳಿಗೆ ಅಲ್ಲಿರತಕ್ಕ ಅನುದಾನವನ್ನು ಬಳಸಿಕೊಳ್ಳಲು ಅನುಮತಿಯನ್ನು ಕೂಡ ನೀಡಲಾಗಿದೆ. ಒಟ್ಟಾರೆ ಈ ಸಮಸ್ಯೆಯನ್ನು ಪರಿಹಾರ ಮಾಡಬೇಕೆಂದು ಸರ್ಕಾರ ನಿರ್ಧಾರವನ್ನು ಕೈಗೊಂಡಿದೆ. ಈ ಮಧ್ಯೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಯಾವ ವಿದ್ಯಾರ್ಥಿಗಳು ಬಂದರೂ ಸಹ ಎಂತಹ ಕಠಿಣ ಪರಿಸ್ಥಿತಿ ಇದ್ದರೂ ಸಹ ಯಾರನ್ನೂ ವಾಪಸ್ಸು ಕಳುಹಿಸಿಲ್ಲ. ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರು ನೀಡಿರುವ ನಿಯಮ 330ರ ಅಡಿಯಲ್ಲಿ ಈ ಬಗ್ಗೆ ವಿಸ್ತೃತವಾದ ಉತ್ತರವನ್ನು ನೀಡಲಾಗುವುದು.

**ಉ) ವಿಷಯ: ಬಿ.ಬಿ.ಎಂ.ಪಿ ಗೆ ಸೇರಿದ ಸ್ವತ್ತುಗಳನ್ನು ಸಂರಕ್ಷಿಸಿ ವಶಕ್ಕೆ ಪಡೆಯುವಲ್ಲಿ ಕ್ರಮ ಕೈಗೊಳ್ಳದಿರುವ ಬಗ್ಗೆ.**

\- - - - - - -

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಗಳೇ, ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಗೆ ಸೇರಿದ ಸ್ವತ್ತುಗಳನ್ನು ಸಂರಕ್ಷಿಸಿ ವಶಕ್ಕೆ ಪಡೆಯುವಲ್ಲಿ ಪಾಲಿಕೆ ಹಿಂದೇಟು ಹಾಕುತ್ತಿರುವ ಪ್ರಕರಣಗಳ ವಿಷಯವು ಮಹತ್ವದಾಗಿರುವುದರಿಂದ ವಿಷಯವನ್ನು ಶೂನ್ಯ ವೇಳೆಯ ಅಡಿಯಲ್ಲಿ ಸದನದಲ್ಲಿ ಪ್ರಸ್ತಾಪಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುವ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ ವಾರ್ಡ್ 143ರಲ್ಲಿ ಬರುವ ಲಾಲ್‌ಬಾಗ್ ಫೋರ್ಟ್ ರಸ್ತೆ ಹಾಗೂ ಡೈಯಾಗನಲ್ ರಸ್ತೆಯ ಮಧ್ಯ ಇರುವ ತ್ರಿಕೋನ ಆಕಾರದ ಪಾಲಿಕೆ ಸ್ವತ್ತು(ನಂದಿನಿ ಹೋಟೆಲ್ ಪಕ್ಕ) /ರೋಷನಬೇಗ್ ರಸ್ತೆಯ (ನಾಗರಕಟ್ಟೆ ರಸ್ತೆ) ಅಶ್ವತ್ಥಕಟ್ಟೆ ಹಾಗೂ ಆಂಜನೇಯ ದೇವಸ್ಥಾನ ಸೇರಿದಂತೆ ತ್ರಿಕೋನ ಆಕಾರ ಇರುವ ನಿವೇಶನ/ಸಜ್ಜನ್‌ರಾವ್ ಸರ್ಕಲ್ ಹತ್ತಿರ ಇರುವ ಡೈಯಾಗನಲ್ ರಸ್ತೆ ಹಾಗೂ ಕನ್ನಿಕಾ ಪರಮೇಶ್ವರಿ ದೇವಸ್ಥಾನ ರಸ್ತೆಯ ಮಧ್ಯೆ ಇರುವ ತ್ರಿಕೋನ ಆಕಾರದ ಮೂಲೆ ನಿವೇಶನ್ನ ಹಾಗೂ ಆರ್.ವಿ.ರಸ್ತೆಯಲ್ಲಿರುವ ಬಿಸಿಲು ಮಾರಮ್ಮ ದೇವಸ್ಥಾನ ಸೇರಿದಂತೆ ಪಾಲಿಕೆಯ ನಿವೇಶನದ ಬಗ್ಗೆ.

ಸದರಿ 4 ನಿವೇಶನ/ಜಾಗಗಳು ಪಾಲಿಕೆ ಸ್ವತ್ತುಗಳಾಗಿದ್ದು, ಇವುಗಳ ಬಗ್ಗೆ ಸಾಕಷ್ಟು ಬಾರಿ ದೂರುಗಳು ಬಂದಿದ್ದರೂ ಪಾಲಿಕೆಯಿಂದ ಸೂಕ್ತ ಹಾಗೂ ತ್ವರಿತ ಕ್ರಮಗಳನ್ನು ಜರುಗಿಸಿ ನ್ಯಾಯಾಲಯ ಅಥವಾ ಬೇರೆ ಯಾವುದೇ ಪ್ರಾಧಿಕಾರದ ಜತೆಗೆ ಪಾಲಿಕೆ ಕಾನೂನಿನ ಕ್ರಮ ಕೈಗೊಳ್ಳದೇ ಇರುವುದರಿಂದ ಹಲವಾರು ವರ್ಷಗಳಿಂದ ಈ ಎಲ್ಲಾ ನಿವೇಶನಗಳು ಖಾಸಗಿ ವ್ಯಕ್ತಿಗಳ ವಶದಲ್ಲಿದ್ದು, ಇದರಿಂದ ಆರ್ಥಿಕ ಲಾಭ ಪಡೆಯುತ್ತಿದ್ದರೂ ಸಹ ಪಾಲಿಕೆ ಕಠಿಣ ಕ್ರಮಗಳನ್ನು ಕೈಗೊಳ್ಳದೇ ಇರುವುದರಿಂದ ಸಾರ್ವಜನಿಕ ಸ್ವತ್ತುಗಳು ಪರರ ಪಾಲು ಆಗಿರುವ ಆತಂಕವನ್ನು ನಿವಾರಿಸುವ ಸಲುವಾಗಿ ಈ ಸ್ವತ್ತುಗಳನ್ನು ಸರ್ಕಾರದ ಸುಪರ್ದಿಗೆ ತೆಗೆದುಕೊಳ್ಳಲು ಈ ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಶ್ರೀ ಪಿ.ಆರ್.ರಮೇಶ್‌ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು, ಅವರಿಗೆ ಉತ್ತರ ಕೊಡಿಸಲಾಗುವುದು.

(ಮುಂದು)

**(1290)/12-30/23-12-2021/ಎಲ್‌ಎಂ/ಜಿಆರ್ (ಸಭಾಪತಿಯವರ ಉಪಸ್ಥಿತಿ)**

**ಊ) ವಿಷಯ:- ಆಲಮಟ್ಟಿ ಜಲಾಶಯದ ಪಕ್ಕದಲ್ಲಿ ಜಗಜ್ಯೋತಿ ಬಸವಣ್ಣನವರ ಪ್ರತಿಮೆಯನ್ನು ಸ್ಥಾಪನೆ ಮಾಡುವ ಬಗ್ಗೆ.**

-------

**ಶ್ರೀ ಹಣಮಂತ ರುದ್ರಪ್ಪ ನಿರಾಣಿ(ಪದವೀಧರರ ಕ್ಷೇತ್ರ):-** ಅಖಂಡ ವಿಜಯಪೂರ-ಬಾಲಗಕೋಟೆ ಜಿಲ್ಲೆಯ ಆಲಮಟ್ಟಿ ಹಿನ್ನೀರಿನ ಪಕ್ಕದಲ್ಲಿ ಸಾಮಾಜಿಕ ಅಮಾನತೆಯ ಪ್ರತೀಕವಾದ ಬಸವಣ್ಣನವರ ಪ್ರತಿಮೆಯನ್ನು (ಗುಜರಾತಿನಲ್ಲಿ ನಿರ್ಮಾಣಿಸಿದ ಸರ್ಧಾರ ವಲ್ಲಭಾಯಿ ಪಟೇಲ್ ಪ್ರತಿಮೆಯಂತೆ) ನಿರ್ಮಾಣ ಮಾಡುವುದು.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಅಖಂಡ ವಿಜಯಪೂರ-ಬಾಲಗಕೋಟೆ ಜಿಲ್ಲೆಯ ಆಲಮಟ್ಟಿಯ ಲಾಲ ಬಹದ್ದೂರ್ ಜಲಾಶಯದ ವ್ಯಾಪ್ತಿಯಲ್ಲಿ ಈಗಾಗಲೇ ವಿಶ್ವ ದರ್ಜೆಯ ಉದ್ಯಾನವನಗಳು, ಸಂಗೀತ ಕಾರಂಜಿ, ದೋಣಿ ವಿಹಾರ, ಲೇಜರ್ ಶೋಗಳು ಪ್ರವಾಸಿಗರನ್ನು ಸೆಳೆಯುತಿವೆ.

ಈ ಪ್ರವಾಸಿ ಸ್ಥಳವು ದೇಶ-ವಿದೇಶದ ಪ್ರವಾಸಿಗರನ್ನು ಕೈ ಬಿಸಿ ಸೆಳೆಯುತ್ತಿವೆ. ಆದರೆ ಈ ಭಾಗದ ಜನರು ಪ್ರಾಣಿಗಳನ್ನು, ಜಂಗಲ್ ಸಪಾರಿಗಳನ್ನು ನೋಡಲು ರಾಜ್ಯದ ಇನ್ನಿತರ ಸ್ಥಳಗಳಿಗೆ ಹೋಗ್ಗುತ್ತಿದ್ದಾರೆ. ಅಖಂಡ ವಿಜಯಪೂರ-ಬಾಗಲಕೋಟೆ ಜಿಲ್ಲೆಯ ಐತಿಹಾಸಿಕ ಬದಾಮಿ, ಐಹೊಳೆ, ಪಟ್ಟದಕಲ್ಲು, ದಕ್ಷಿಣ ಕಾಶಿ ಎಂದು ಪ್ರಸಿದ್ದವಾದ ಮಾಕೂಟ, ಜಮಶಂಕರಿ, ಕೂಡಲ ಸಂಗಮ ಹಾಗೂ ವಿಜಯಪೂರದಲ್ಲಿನ ಗೋಳಗುಮ್ಮಟ, ಇಬ್ರಾಹಿಂ ರೋಜಾ, ಶಿವನ ಮಂದಿರ ಇಂತಹ ಅನೇಕ ಐತಿಹಾಸಿಕ ಸ್ಥಳಗಳು ಅಖಂಡ ವಿಜಯಪೂರ-ಬಾಲಗಕೋಟೆ ಜಿಲ್ಲೆಯು ಹೊಂದಿವೆ.

ಆದ್ದರಿಂದ ಈ ಅಖಂಡ ವಿಜಯಪೂರ-ಬಾಗಲಕೋಟೆ ಜಿಲ್ಲೆಯ ಆಲಮಟ್ಟಿ ಹಿನ್ನೀರಿನ ರಾಮಪೂರದಲ್ಲಿ ಪ್ರಾಣಿ ಸಂಗ್ರಹಾಲಯ ನಿರ್ಮಾಣ, ಜಂಗಲ್ ಸಫಾರಿ, ಮನರಂಜನೆಯ ಪ್ರವಾಸಿ ದೋಣಿ ವಿಹಾರ, ಕೇರಳ ಮಾದರಿಯಲ್ಲಿ ಆಲಮಟ್ಟಿ ಹಿನ್ನೀರಿನಲ್ಲಿ ದೋಣಿಗಳಲ್ಲಿ ವಸತಿ ಮಾಡಿಸುವುದು, ಜಿಪ್ ಲೈನ್ ನಿರ್ಮಾಣ, ಚಿಕ್ಕ ಸಂಗಮದ ಹತ್ತಿರ ಮೈಸೂರಿನ ರಂಗನತಿಟ್ಟು ಪಕ್ಷಿದಾಮದ ಮಾದರಿಯಲ್ಲಿ ಇಲ್ಲಿಯೂ ಪಕ್ಷಿಧಾಮ ನಿರ್ಮಿಸುವುದು, ಹಿನ್ನೀರಿನಲ್ಲಿರುವ ದ್ವೀಪಗಳಲ್ಲಿ ರೆಸಾರ್ಟ್‌ಗಳನ್ನು ನಿರ್ಮಾಣ ಮಾಡುವುದು, ಈ ಸ್ಥಳಕ್ಕೆ ಬರುವ ಪ್ರವಾಸಿಗರಿಗೆ ವಸತಿ ಗೃಹಗಳು ಮತ್ತು ಯಾತ್ರಿ ನಿವಾಸಗಳ ನಿರ್ಮಾಣ ಮಾಡುವುದು, ಅಲಂಕಾರಿಕ ಅಕ್ವೇರಿಯಂಗಳ ನಿರ್ಮಾಣ ಮಾಡುವುದು, ಪ್ಯಾಂಟಸಿ ವಾಟರ್ ಪಾರ್ಕ್, ಅಖಂಡ ವಿಜಯಪೂರ-ಬಾಲಗಕೋಟೆ ಜಿಲ್ಲೆಯ ಇತಿಹಾಸದ ಬಗ್ಗೆ ಪ್ರವಾಸಿಗರಿಗೆ ತಿಳಿಹೇಳುವ ಧ್ವನಿ ಮತ್ತು ಬೆಳಕು ವ್ಯವಸ್ಥೆ ಮಾಡುವುದು, ಅಖಂಡ ವಿಜಯಪೂರ-ಬಾಗಲಕೋಟೆ ಜಿಲ್ಲೆಯ ಜನಪದ, ನಾಟಕ ಮತ್ತು ಇತ್ಯಾದಿಯ ಬಗ್ಗೆ ಪ್ರವಾಸಿಗರಿಗೆ ಸ್ಥಳೀಯ ಕಲಾವಿದರಿಂದ ತಿಳಿಸಲು ಹೊರಾಂಗಣ ರಂಗಮಂದಿರ ನಿರ್ಮಾಣ ಮಾಡುವುದು, ಕೂಡಲ ಸಂಗಮನಾಥನ ದೇವಸ್ಥಾನದ ದೇವಾಲಯದ ಹತ್ತಿರ ದೆಹಲಿ ನಗರದಲ್ಲಿರುವ ಪ್ರವಾಸಿ ತಾಣವಾದ ಸ್ವಾಮಿ ನಾರಾಯಣ ಅಕ್ಷರಧಾಮದ ಹಾಗೆ ಇಲ್ಲಿಯೂ ಕೂಡಾ ಪ್ರವಾಸಿಗರನ್ನು ಸೆಳೆಯಲು ಅದೇ ಮಾದರಿಯಲ್ಲಿ ದೇವಾಲಯವನ್ನು ನಿರ್ಮಿಸುವುದು.

ಇಲ್ಲಿ ಪ್ರವಾಸಿ ತಾಣವಾಗಿ ಮಾಡುವುದರಿಂದ ಈ ಭಾಗದ ಅನೇಕ ಮುಳುಗಡೆ ಸಂತ್ರಸ್ಥರ ಕುಟುಂಬಗಳಿಗೆ ಸಣ್ಣಪುಟ್ಟ ಉದ್ಯೋಗ ಮಾಡಲು ಮತ್ತು ಈ ಭಾಗದವರ ಬದುಕಿಗೆ ಅವಕಾಶ ಸಿಕ್ಕಂತಾಗುತ್ತದೆ, ಹಾಗೂ ಈ ಭಾಗದಲ್ಲಿ ಪ್ರವಾಸಿಗರನ್ನು ಸೆಳೆಯುವುದರಿಂದ ಇಲ್ಲಿಯ ಆದಾಯವು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೆಚ್ಚಿದಂತಾಗುತ್ತದೆ ಆದ್ದರಿಂದ ಈ ವಿಷಯದ ಕುರಿತು ತಮ್ಮ ಮುಖಾಂತರ ಮಾನ್ಯ ಪ್ರವಾಸೋದ್ಯಮ ಸಚಿವರ ಗಮನವನ್ನು ಸೆಳೆಯುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು**):- ಮಾನ್ಯ ಸದಸ್ಯರು ಕೇಳಿದ ವಿಷಯದ ಬಗ್ಗೆ ಮಾನ್ಯ ಪ್ರವಾಸೋದ್ಯಮ ಇಲಾಖೆಯ ಸಚಿವರಿಂದ ಉತ್ತರವನ್ನು ಒದಗಿಸಲಾಗುತ್ತದೆ.

**ಖ) ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆ ಕಚೇರಿಗಳಲ್ಲಿ ಶಿಕ್ಷಕರನ್ನು ಗೌರವಯುತವಾಗಿ ನಡೆಸಿಕೊಳ್ಳುವ ಬಗ್ಗೆ.**

-----------

**ಡಾ: ತಳವಾರ್ ಸಾಬಣ್ಣ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಗಳೆ, ಸಮಾಜದಲ್ಲಿ ಶಿಕ್ಷಕರಿಗೆ ಅತ್ಯುನ್ನತ ಸ್ಥಾನ ಪುರಾಣ, ವೇದಗಳ ಕಾಲದಿಂದಲೇ ಇದೆ. ನಮ್ಮ ಪೂರ್ವಜರ ಹಾಗೂ ನಾಗರೀಕತೆಯ ಕಾಲದಿಂದಲೂ ಶಿಕ್ಷಕರಾಗಿ ಕೆಲಸ ಮಾಡುವವರಿಗೆ ಸಮಾಜದಲ್ಲಿ ಗೌರವದ ಸ್ಥಾನವಿದೆ. ನಮ್ಮ ಸಮಾಜವನ್ನು ಹಾಗೂ ನಮ್ಮ ದೇಶವನ್ನು ಕಟ್ಟಲು ಶಿಕ್ಷಕರ ಪಾತ್ರ ಅತ್ಯುನ್ನತವಾದ ಪಾತ್ರ ಎಂದು ನಮಗೆಲ್ಲರಿಗೂ ತಿಳಿದಿರುವ ವಿಷಯ. ಆದರೆ ಈಗಿನ ನಮ್ಮ ಶಿಕ್ಷಣ ಇಲಾಖೆಯ ಕಛೇರಿಗಳಲ್ಲಿ ಅವರಿಗೆ ಸಿಗಬೇಕಾದ ಗೌರವವನ್ನು ಕೊಡುತ್ತಿಲ್ಲ.

ತಮಗೆ ತಿಳಿದಿರುವಂತೆ ಹೆಚ್ಚಾಗಿ ಆಗಾಗ ತಮ್ಮ ಎಲ್ಲಾ ಕೆಲಸಗಳಿಗಾಗಿ ಶಿಕ್ಷಕರು ಕ್ಷೇತ್ರ ಶಿಕ್ಷಣಾಧಿಕಾರಿ, ಉಪನಿರ್ದೇಶಕರ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿಗಳಿಗೆ ಹೋಗಬೇಕಾಗಿರುವುದು ಸಾಮಾನ್ಯ. ನಮ್ಮ ರಾಜ್ಯದ ಎಲ್ಲಾ ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿಗಳಲ್ಲಿ ಮತ್ತು ಉಪ ನಿರ್ದೇಶಕರ ಕಛೇರಿಗಳಲ್ಲಿ ತಮ್ಮದೇ ಇಲಾಖೆಯ ತಮ್ಮ ಕೆಲಸಕ್ಕಾಗಿ ಬಂದರೆ ಕುಳಿತುಕೊಳ್ಳಲು ಕುರ್ಚಿಗಳನ್ನು ಹಾಕುವ ಸೌಜನ್ಯವೂ ಇಲಾಖೆಯಲ್ಲಿ ಇಲ್ಲ. ಶಿಕ್ಷಕರು ಹೊರಗೆ ಅಪರಿಚಿತರಂತೆ ಇಲ್ಲವೇ ಭಯದಿಂದ ಅಪರಾಧಿಗಳಂತೆ ನಿಂತುಕೊಂಡು ಕಾಯಬೇಕು. ಕ್ಷೇತ್ರ ಶಿಕ್ಷಣಾಧಿಕಾರಿಗಳ ಮತ್ತು ಉಪ ನಿರ್ದೇಶಕರ ಕಛೇರಿ ಕೋಣೆಯ ಒಳಗೆ ಹೋದರೆ ಕುಳಿತುಕೊಳ್ಳಲು ಹೇಳಿ ಮಾತನಾಡಿಸುವ ಕ್ರಮವನ್ನು ಇಲ್ಲಿಯವರೆಗೆ ರಾಜ್ಯದ ಅನೇಕ ಶಿಕ್ಷಣ ಇಲಾಖೆಯ ಕಛೇರಿಗಳು ಅನುಸರಿಸುತ್ತಿಲ್ಲ ಎಂದು ಶಿಕ್ಷಕರು ಆರೋಪಿಸುತ್ತಿದ್ದಾರೆ. ಅದಲ್ಲದೆ ಕಛೇರಿಗಳಲ್ಲಿರುವ ಇತರ ಸಿಬ್ಬಂದಿಗಳು ಕಛೇರಿ ಅಧೀಕ್ಷಕರಿಂದ ಹಿಡಿದು 'ಡಿ' ದರ್ಜೆ ನೌಕರರು ಸಹ ಶಿಕ್ಷಕರು ಹೋದಾಗ ಇವರಿಗೆ ಗೌರವ ಕೊಡುವ ರೂಢಿಯೇ ಇಲ್ಲ. ಅಲ್ಲಿ ಹಾಕಲಾಗಿರುವ ಕುರ್ಚಿಗಳಲ್ಲಿ ಆರಾಮವಾಗಿ ಕುಳಿತಿರುತ್ತಾರೆ. ಬಂದ ಶಿಕ್ಷಕರು ಅವರ ವಿಭಾಗಕ್ಕೆ ಸಂಬಂಧಿಸಿದ ಕ್ಲರ್ಕ್ ಇಲ್ಲವೇ ಅಟೆಂಡರ್ ಇಲ್ಲವೆ 'ಡಿ' ದರ್ಜೆ ನೌಕರನ ಮುಂದೆ ನಿಂತುಕೊಂಡೆ ತಮ್ಮ ಕೆಲಸಗಳನ್ನು ಮಾಡಿಸಿಕೊಡಲು ಕೇಳಿಕೊಳ್ಳಬೇಕು. ಇಂದು ನಾವು ಶಿಕ್ಷಣಾಧಿಕಾರಿ, ಉಪ ನಿರ್ದೇಶಕರು, ಕ್ಲರ್ಕ್ ಇಲ್ಲವೆ ಅಟೆಂಡರ್ ಇಲ್ಲವೆ 'ಡಿ' ದರ್ಜೆ ನೌಕರರು ಆಗಿದ್ದೇವೆ

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಎಂದರೆ ಅದಕ್ಕೆ ಒಬ್ಬ ಉತ್ತಮ ಶಿಕ್ಷಕರು ಕಾರಣ ಎಂಬುದನ್ನು ಅವರು ಮರೆತಂತಿದೆ. ಅದಲ್ಲದೆ ಈ ಕಛೇರಿಗಳಲ್ಲಿ ಶೌಚಾಲಯದ ಬಾಗಿಲ ಮೇಲೆ ಕಛೇರಿ ಸಿಬ್ಬಂದಿಗೆ ಮಾತ್ರ ಎಂದು ನಾಲಫಲಕ ಹಾಕಿರುತ್ತಾರೆ. ಹಾಗಾದರೆ ಅಲ್ಲಿಗೆ ತಮ್ಮ ಕೆಲಸಕ್ಕಾಗಿ ಹೋಗುವ ಶಿಕ್ಷಕರು, ವಿಶೇಷವಾಗಿ ಮಹಿಳಾ ಶಿಕ್ಷಕರು ಯಾವ ಶೌಚಾಲಯವನ್ನು ಬಳಸಬೇಕು? ಇದಲ್ಲದೆ ಶಿಕ್ಷಕರಿಗೆ ಅಗತ್ಯವಿರುವ ದಾಖಲೆಗಳು ಇತರ ಅರ್ಜಿಗಳ ವಿಲೇವಾರಿಗಳನ್ನು ಸರಿಯಾದ ಸಮಯಕ್ಕೆ ನೀಡದೆ ಅನೇಕ ಸಲ ಕಛೇರಿಗೆ ಅಲೆದಾಡುವಂತೆ ಮಾಡುತ್ತಿರುವುದು ಸಾಮಾನ್ಯವಾಗಿ ಶಿಕ್ಷಕರು ಶಾಲೆ ಸಮಯದಲ್ಲಿ ತಮ್ಮ ಬೋಧನಾ ಕೆಲ್ಸಸ ಬಿಟ್ಟು ಆಗಾಗ ಕಛೇರಿಗೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇಲಾಖೆಯಲ್ಲಿ ಕೆಲಸ ಮಾಡಿಸಿಕೊಳ್ಳಬೇಕಾದರೆ ಶಿಕ್ಷಕರು ಹಣ ನೀಡಬೇಕಾಗಿರುವುದು ಇನ್ನು ತುಂಬಾ ಖೇದಕರ ವಿಷಯವಾಗಿದೆ.

ಶಿಕ್ಷಕರು ಕಛೇರಿಗಳಿಗೆ ಅಲೆದಾಟ ತಪ್ಪಿಸಿ ಬೋಧನಾ ಸಮಯದಲ್ಲಿ ಹೊರಹೋಗದಂತೆ ಮಾಡಲು ಬಿ.ಇ.ಓ ಕಛೇರಿ ಮತ್ತು ಉಪ ನಿರ್ದೇಶಕರ ಕಛೇರಿಯ ಎಲ್ಲಾ ಕೆಲಸಗಳಿಗೆ ಆನ್ಲೈನ್ ಅಳವಡಿಸಿಕೊಂಡು ಶಿಕ್ಷಕರು ಕಡ್ಡಾಯವಾಗಿ ಆನ್ಲೈನ್ ಮೂಲಕವೇ ಕಛೇರಿ ವ್ಯವಹಾರ ಮಾಡುವಂತೆ ಹಾಗೂ ಸಂಬಂಧಿಸಿದ ದಾಖಲೆಗಳು ಕಛೇರಿಗಳಿಂದ ದೊರಕುವಂತೆ ಮಾಡುವ ವ್ಯವಸ್ಥೆ ಮಾಡಲು ಸೂಕ್ತ ಕ್ರಮ ಕೈಗೊಳ್ಳಬೇಕು. ಆದರೆ ಇಂದು ಈ ಶಿಕ್ಷಣ ಇಲಾಖೆಯ ಅಶಿಸ್ತಿನ ಮತ್ತು ಅಗೌರವ ತೋರುವ ರೀತಿ ಶಿಕ್ಷಕರನ್ನು ಸಂಬಳ ಪಡೆಯುವ ಕಾರಕೂನರಂತೆ ನಡೆಸಿಕೊಳ್ಳುವ ವ್ಯವಸ್ಥೆಗೆ ತಂದು ನಿಲ್ಲಿಸಿದೆ. ಇದು ನನ್ನ ಅನುಭವಕ್ಕೆ ಬಂದಿದೆ. ಈ ಕೂಡಲೇ ಬದಲಾವಣೆಯಾಗಬೇಕು ಎಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರನ್ನು ಈ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಬಿ.ಸಿ.ನಾಗೇಶ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)**:- ಮಾನ್ಯ ಸಭಾಪತಿಗಳೆ, ಶಿಕ್ಷಕರಿಗೆ ಗೌರವ ಕೊಡುವುದು ನಮ್ಮ ಹಳೆಯ ಕಾಲದಿಂದಲೂ ನಡೆದುಕೊಂಡು ಬಂದಿರುವ ಪದ್ಧತಿ. ಮಾನ್ಯ ಸದಸ್ಯರು specific ಆಗಿ ಯಾವುದಾದರೂ incident ಬಗ್ಗೆ ಹೇಳಿದರೆ. ಖಂಡಿತವಾಗಿ ಅಂತಹವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಹಾಗೂ ಮಾನ್ಯ ಸದಸ್ಯರು ಹೇಳಿದ ಹಾಗೆ ಎಲ್ಲ ಬಿ.ಇ.ಓ., ಗಳಿಗೆ instruction ಕೊಡುತ್ತೇನೆ. ಶಿಕ್ಷಕರನ್ನು ಗೌರವದಿಂದ ನಡೆಸಿಕೊಳ್ಳಬೇಕೆಂದು ಸೂಚನೆಯನ್ನು ಕೊಡುತ್ತೇನೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಎ) ವಿಷಯ: ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಬೋಧನಾ ಅವಧಿ ಕಡಿತ ಮತ್ತು ವೇತನಾನುದಾನ ಬಿಡುಗಡೆ ಬಗ್ಗೆ.**

----------

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ರಾಜ್ಯದ ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸುಮಾರು ೧೨೦೦ ಕ್ಕೂ ಹೆಚ್ಚು ಅರೆಕಾಲಿಕ ಉಪನ್ಯಾಸಕರು ಹಾಗೂ ಅತಿಥಿ ಉಪನ್ಯಾಸಕರು ಕಳೆದ ೧೫ ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುತ್ತಾರೆ. ಇತ್ತೀಚೆಗೆ ಪಾಲಿಟೆಕ್ನಿಕ್‌ಗಳಲ್ಲಿ ಪಠ್ಯಕ್ರಮಗಳ ಪರಿಷ್ಕರಣೆಯನ್ನು ಮಾಡಿರುವುದರಿಂದ ಬೋಧನಾ ಅವಧಿಯು ೪೦ರ ಬದಲಾಗಿ ೩೩.೨ಕ್ಕೆ ಕಡಿತಗೊಳಿಸಲಾಗಿದೆ. ಇದರಿಂದಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗೆ ತುಂಬಾ ತೊಂದರೆಯುಂಟಾಗಿದೆ. ಬಹಳಷ್ಟು ಮಂದಿ ಉಪನ್ಯಾಸಕರು ಅವಕಾಶ ವಂಚಿತರಾಗಿದ್ದಾರೆ. ದೀರ್ಘಕಾಲದಿಂದ ಅರೆಕಾಲಿಕ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಿದವರಲ್ಲಿ ಕೆಲವರನ್ನು ಪದವಿಯಲ್ಲಿ ೨ನೇ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆಂಬ ಕಾರಣಕ್ಕೆ ಬಿಡುಗಡೆಗೊಳಿಸಲಾಗಿದೆ. ಅರೆಕಾಲಿಕ ಉಪನ್ಯಾಸಕರ ಮರು ನೇಮಕಾತಿ ಸಂಬಂಧ ಹೊರಡಿಸಿರುವ ಸುತ್ತೋಲೆಯನ್ನು ನಿಯಮಾನುಸಾರ ಪಾಲಿಸುತ್ತಿಲ್ಲ. ಕಳೆದ ೨ ವರ್ಷಗಳಿಂದ ಇವರಿಗೆ ಸರಿಯಾಗಿ ವೇತನ ಪಾವತಿಸುತ್ತಿಲ್ಲ. ಕೋವಿಡ್ ಅವಧಿಯಲ್ಲಿ ಆನ್‌ಲೈನ್‌ನಲ್ಲಿ ಬೋಧನೆ ಮಾಡಿರುವುದಕ್ಕೆ ವೇತನ ನೀಡಿರುವುದಿಲ್ಲ. ಈ ಹಿಂದೆ ನೀಡುತ್ತಿದ್ದಂತೆ ವಾರ್ಷಿಕ ೧೦ ತಿಂಗಳ ವೇತನವನ್ನು ನೀಡಬೇಕು. ಬೋಧನೆ, ಪರೀಕ್ಷೆ, ಮೌಲ್ಯಮಾಪನ ಕಾರ್ಯಗಳನ್ನು ಕಾಲಕಾಲಕ್ಕೆ ಮಾಡಿಕೊಂಡು ಬರುತ್ತಿರುವ ಈ ವರ್ಗದವರ ಬಾಕಿ ವೇತನವನ್ನು ಕೂಡಲೇ ಬಿಡುಗಡೆಗೊಳಿಸಬೇಕು. ಪಠ್ಯಕ್ರಮ ಬೋಧನಾ ಅವಧಿಯನ್ನು 40ಕ್ಕೆ ಪರಿಷ್ಕರಣೆ ಮಾಡಬೇಕು ಹಾಗೂ ಸದರಿಯವರಿಗೆ ಸೇವಾ ಭದ್ರತೆ ನೀಡಬೇಕು.

ಮುಂದುವರೆದು, ಅನುದಾನಿತ, ಅನುದಾನ ರಹಿತ, ಅರೆಕಾಲಿಕ ಹಾಗೂ ಅತಿಥಿ ಉಪನ್ಯಾಸಕರಿಗೆ ಪಾಲಿಟೆಕ್ನಿಕ್‌ಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ದರ ಪರಿಷ್ಕರಣೆಯನ್ನು ನಿಯಮಾನುಸಾರ ಮೂರು ಬಾರಿ ಪರಿಷ್ಕರಣೆ ಮಾಡಬೇಕಾಗಿತ್ತು. ಆದರೆ ೧೦ ವರ್ಷಗಳಾದರೂ ಮೌಲ್ಯಮಾಪನ ದರ ಪರಿಷ್ಕರಣೆ ಮಾಡದೆ ಇರುವುದು ದು:ಖದ ಸಂಗತಿ. ಆದಕಾರಣ, ಕೂಡಲೇ ಉತ್ತರ ಪತ್ರಿಕೆಗಳ ಮೌಲ್ಯಮಾಪನ ದರ ಪರಿಷ್ಕರಣೆಯನ್ನು ಮಾಡುವಂತೆ ಮಾನ್ಯ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರನ್ನು ಕೋರುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**:- ಮಾನ್ಯ ಸಭಾಪತಿಗಳೆ, ಮಾನ್ಯ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರಿಂದ ಉತ್ತರವನ್ನು ಒದಗಿಸಲಾಗುತ್ತದೆ.

(ಮುಂದು)

(1291)23-12-2021(12-40)bsd-gr

**ಐ)ವಿಷಯಃ- ಕೋಲಾರ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಕಾಮಗಾರಿಗಳ ಬಿಲ್ ಪಾವತಿ ಬಗ್ಗೆ.**

\- - - - -

**ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಕೋಲಾರ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ತುರ್ತು ಕುಡಿಯುವ ನೀರಿನ ಕಾಮಗಾರಿಗಳನ್ನು ಪರಿಹರಿಸುವ ಸಲುವಾಗಿ, ಕೊರೆದಿರುವ ಕೊಳವೆ ಬಾವಿಗಳು ಹಾಗೂ ಇತರೆ ಕಾಮಗಾರಿಗಳಿ, ತಾಲ್ಲೂಕು ಟಾಸ್ಕ್‌ಫೋರ್ಸ್ ಸಮಿತಿಗಳಲ್ಲಿ, ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೋಲಾರ ರವರು ೧೩೭೧ ಕಾಮಗಾರಿಗಳಿಗೆ ರೂ.೪೨೮೪.೫೮ ಲಕ್ಷಗಳಿಗೆ, ಆಯಾ ತಾಲ್ಲೂಕು ಟಾಸ್ಕ್‌ಫೋರ್ಸ್ ಸಮಿತಿಯಲ್ಲಿ ಘಟನೋತ್ತರ ಮಂಜೂರಾತಿಯನ್ನು ಪಡೆಯಲಾಗಿದೆ, ಆದರೆ ಈ ಕಾಮಗಾರಿಗಳು ಯಾವುದೇ ಕ್ರಿಯಾ ಯೋಜನೆಯಲ್ಲಿ ಸೇರ್ಪಡೆಗೊಂಡಿರುವುದಿಲ್ಲ. ಈ ಕಾಮಗಾರಿಗಳನ್ನು ನಿರ್ವಹಿಸಿರುವ ಏಜೆನ್ಸಿ/ಗುತ್ತಿಗೆದಾರರಿಗೆ ಹಣವನ್ನು ಪಾವತಿಸದಿದ್ದಲ್ಲಿ ಮುಂದೆ ಯಾವುದೇ ಕಾಮಗಾರಿಗಳನ್ನು ನಿರ್ವಹಿಸಲು ಸಾಧ್ಯವಿಲ್ಲದ ಪರಿಸ್ಥಿತಿ ಎದುರಾಗುತ್ತದೆ. ಈಗಾಗಲೇ ಕೋಲಾರದಲ್ಲಿ-೧೩೨, ಮಾಲೂರು-೧೮೩, ಬಂಗಾರಪೇಟೆ-೧೪೯, ಕೆಜಿಎಫ್-೧೫೩, ಮುಳಬಾಗಿಲು-೨೪೬, ಶ್ರೀನಿವಾಸಪುರ-೫೧೮ ಕಾಮಗಾರಿಗಳನ್ನು ನಿರ್ವಹಿಸಿರುತ್ತಾರೆ. ಇದರ ಅಂದಾಜು ಮೊತ್ತ ರೂ.೪೨೮೪.೫೮ ಲಕ್ಷಗಳಾಗಿದ್ದು, ಇದರ ಅನುಮೋದನೆಗಾಗಿ ಕೋಲಾರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಆಯುಕ್ತರಿಗೆ ದಿನಾಂಕ ೧೯-೦೨-೨೦೨೧ ರಂದು ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿರುತ್ತಾರೆ. ಆದರೆ ಇದುವರೆಗೂ ಅನುಮೋದನೆಗೊಂಡಿರುವುದಿಲ್ಲ. ಆದರೆ ಮುಂದಿನ ದಿನಗಳಲ್ಲಿ ಈ ಭಾಗದ ಗ್ರಾಮೀಣ ಪ್ರದೇಶದ ಜನರಿಗೆ ಕುಡಿಯುವ ನೀರಿನ ಸಮಸ್ಯೆಯಾಗುತ್ತಿರುವುದರಿಂದ., ಈಗಾಗಲೇ ಪೂರ್ಣಗೊಂಡಿರುವ ೧೩೭೧ ಕಾಮಗಾರಿಗಳಿಗೆ ರು.೪೨೮೪.೫೮ ಲಕ್ಷಗಳಿಗೆ ಅನುಮೋದನೆಯನ್ನು ನೀಡುವಂತೆ ತಮ್ಮ ಮೂಲಕ ಶೂನ್ಯ ವೇಳೆಯಲ್ಲಿ ವಿಷಯವನ್ನು ಪ್ರಸ್ತಾಪಿಸುತ್ತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಶೂನ್ಯವೇಳೆಯ ಪ್ರಶ್ನೆಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಂದ ಉತ್ತರವನ್ನು ಪಡೆದು ಸದನದಲ್ಲಿ ಮಂಡಿಸಲಾಗುವುದು.

**ಐ)ವಿಷಯಃ- ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲ್ಲೂಕಿನ ಗಾಮನಹಟ್ಟಿ ಸರ್ಕಾರಿ ಉರ್ದು ಶಾಲೆಯಲ್ಲಿ ೮ನೇ ತರಗತಿ ನಂತರ ಪ್ರೌಢಶಾಲೆ ಪ್ರಾರಂಭಿಸುವ ಬಗ್ಗೆ.**

\- - - - -

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲ್ಲೂಕಿನ ಗಾಮನಹಟ್ಟಿ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯು ಒಂದರಿಂದ ಎಂಟನೆ ತರಗತಿವರೆಗೆ ನಡೆಯುತ್ತಿದ್ದು, ೮ನೇ ತರಗತಿಯೊಂದರಲ್ಲೇ ಸುಮಾರು ೨೦ ಮಕ್ಕಳು ಓದುತ್ತಿದ್ದು, ಈ ಮಕ್ಕಳಿಗೆ ಒಂದು ಉರ್ದು ಪ್ರೌಢ ಶಾಲೆ ಅತಿ ಅವಶ್ಯವಿರುವುದು ತಿಳಿದುಬಂದಿರುತ್ತದೆ.

ಎಂಟನೇ ತರಗತಿಯ ನಂತರ ಪ್ರೌಢ ಶಾಲೆಗೆ ಮಕ್ಕಳು ಹೋಗಲು ಸಮೀಪದಲ್ಲಿ ಯಾವುದೇ ಉರ್ದು ಪ್ರೌಢ ಶಾಲೆಗಳು ಇಲ್ಲದ ಕಾರಣ ವಿದ್ಯಾರ್ಥಿಗಳಿಗೆ, ಅದರಲ್ಲೂ ಹೆಣ್ಣುಮಕ್ಕಳಿಗೆ ತುಂಬಾ ತೊಂದರೆಯಾಗುತ್ತಿದೆ. ಪ್ರೌಢ ಶಾಲೆಗೆ ಹೋಗಬೇಕಾದರೆ ಸುಮಾರು ೧೨ ಕಿಲೋಮೀಟರ್ ದೂರ ಪ್ರಯಾಣ ಮಾಡಬೇಕಾಗುತ್ತದೆ. ಗಾಮನಹಟ್ಟಿ ಗ್ರಾಮದ ಸುತ್ತ ೨ ರಿಂದ ೩ ಕಿಲೋಮೀಟರ್ ಅಂತರದಲ್ಲಿ ನವನಗರ, ಅಮರಗೋಳ, ತಾಜನಗರ, ಭೈರಿದೇವರಕೊಪ್ಪದ ಉರ್ದು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಸುಮಾರು ೮೦ ರಿಂದ ೯೦ ಮಕ್ಕಳು ೮ನೇ ತರಗತಿಯಲ್ಲಿ ಓದುತ್ತಿದ್ದು, ಈ ಗ್ರಾಮಕ ಮಕ್ಕಳು ಇದೇ ಸವಾಲು ಎದುರಿಸುತ್ತಿದ್ದಾರೆ. ಆದ್ದರಿಂದ ಗಾಮನಹಟ್ಟಿ ಗ್ರಾಮದಲ್ಲಿ ಒಂದು ಉರ್ದು ಪ್ರೌಢ ಶಾಲೆಯನ್ನು ಮಂಜೂರು ಮಾಡಿಕೊಟ್ಟಲ್ಲಿ ಈ ಗ್ರಾಮದ ಜೊತೆಗೆ ಸುತ್ತಮುತ್ತಲಿನ ಗ್ರಾಮದ ಮಕ್ಕಳಿಗೂ ಮುಂದಿನ ವಿದ್ಯಾಭ್ಯಾಸಕ್ಕೆ ಸಹಾಯವಾಗುವುದರಿಂದ ಕೂಡಲೇ ಮಂಜೂರಾತಿ ನೀಡಬೇಕೆನ್ನುವ ಮಹತ್ವದ ವಿಷಯದ ಕುರಿತು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಬಯಸುತ್ತೇನೆ.

**ಶ್ರೀ ಬಿ.ಸಿ.ನಾಗೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಹರಿಪ್ರಸಾದ್‌ರವರು ಅಲ್ಲಿ ೮ನೇ ತರಗತಿಯಲ್ಲಿ ೨೦ ಮಕ್ಕಳಿದ್ದಾರೆ ಮತ್ತು ಪ್ರಾಥಮಿಕ ಶಾಲೆಯಲ್ಲಿ ೮೦-೯೦ ಮಕ್ಕಳು ಓದುತ್ತಿರುವ ಬಗ್ಗೆ ಹೇಳಿದ್ದಾರೆ. ನಮ್ಮ ಅಧಿಕಾರಿಗಳಿಗೆ ತಕ್ಷಣ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಹಿತಿ ತೆಗೆದುಕೊಳ್ಳಲು ಹಾಗೂ ಅಲ್ಲಿ ಜರೂರತ್ತು ಇದ್ದರೆ ಮುಂದಿನ ಕ್ರಮ ಕೈಗೊಳ್ಳಲು ಯೋಚನೆ ಮಾಡುತ್ತೇನೆ.

**ಒ)ವಿಷಯಃ- ಪ್ರೌಢಶಾಲಾ ಶಿಕ್ಷಕರ ಸಮಸ್ಯೆಗಳ ಬಗ್ಗೆ.**

\- - - - - -

**ಶ್ರೀ ಅರುಣ ಶಹಾಪೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪ್ರೌಢಶಾಲಾ ಶಿಕ್ಷಕರು ತಮ್ಮ ಜ್ವಲಂತ ಸಮಸ್ಯೆಗಳನ್ನು ಈಡೇರಿಸುವಂತೆ ಹೋರಾಟವನ್ನು ಕೈಗೊಳ್ಳುವುದಾಗಿ ಎಚ್ಚರಿಸಿದ್ದಾರೆ. ಅವರ ಬೇಡಿಕೆಗಳಾದ ಕಳೆದ ೧೦ ವರ್ಷಗಳಿಂದ ಪ್ರೌಢಶಾಲಾ ನೌಕರರಿಗೆ ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡಿಲ್ಲ, ಪ್ರತಿ ವರ್ಷ ನಿಯಮಾನುಸಾರ ಅನುಪಾತದಂತೆ ವಿಭಾಗವಾರು ಪ್ರೌಢಶಾಲಾ ಮುಖ್ಯೋಪಧ್ಯಾಯ ಹುದ್ದೆಗೆ ಬಡ್ತಿ ನೀಡುತ್ತಿಲ್ಲವೆಂಬುದಾಗಿದೆ. ಸಂಯುಕ್ತ ಪದವಿಪೂರ್ವ ಕಾಲೇಜಿನಿಂದ ಬೇರ್ಪಟ್ಟ ಪ್ರೌಢಶಾಲಾ ವಿಭಾಗದಲ್ಲಿ ಮುಖ್ಯೋಪಧ್ಯಾಯರ ಹುದ್ದೆ ಸೃಜಿಸುವುದು ಹಾಗೂ ಪ್ರಸಕ್ತ ನಡೆಯುತ್ತಿರುವ ೨೦೨೧ರ ವರ್ಗಾವಣೆ ಕೌನ್ಸಿಲಿಂಗ್‌ನಲ್ಲಿ ಪ್ರೌಢ ಸಹ ಶಿಕ್ಷಕರ ಹುದ್ದೆಗೆ ಮೀಸಲಿದ್ದ ಪದವೀಧರ ಮುಖ್ಯೋಪಾಧ್ಯಾಯ ಹುದ್ದೆಗೆ ಖಾಲಿಯಿರುವ ಸ್ಥಳಗಳಿಗೆ ವರ್ಗಾವಣೆಗೆ ಮೀಸಲಿದ್ದ ಸ್ಥಳಕ್ಕೆ ವರ್ಗಾವಣೆಗೆ ಅವಕಾಶ ಒದಗಿಸಿ ಕೊಟ್ಟಿಲ್ಲವೆಂದು ಹಾಗೂ ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆಗೆ ಪದೋನ್ನತಿ ಪಡೆದು ಬಂದ ಶಿಕಷಕರು ವರ್ಗಾವಣೆ ಬಯಸಿ ಬಂದಾಗ ಪ್ರಾಥಮಿಕ ಸೇವಾ ಅವಧಿ ಪರಿಗಣಿಸಿ ವರ್ಗಾವಣೆ ನೀಡಿದಾಗ ಪ್ರೌಢ ಶಿಕ್ಷಕರಿಗೆ ಅನ್ಯಾಯವಾಗುತ್ತದೆ. ಈ ಎರಡೂ ಶಿಕ್ಷಕರ ಮಟ್ಟದಲ್ಲಿ ಕಾಯ್ದೆ ತಿದ್ದುಪಡಿ ಮಾಡಿ ಪ್ರೌಢಶಾಲಾ ಶಿಕ್ಷಕರಿಗೆ ನ್ಯಾಯ ಒದಗಿಸುವುದಾಗಬೇಕು ಎಂದು ಆಗ್ರಹಿಸಿದ್ದಾರೆ. ಈ ಹಿನ್ನಲೆಯಲ್ಲಿ ಕೂಡಲೇ ಈ ಪ್ರೌಢಶಾಲಾ ಶಿಕ್ಷಕರ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ.

**ಶ್ರೀ ಬಿ.ಸಿ. ನಾಗೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ ಚರ್ಚಿಸಿ ಮುಂದಿನ ದಿನಗಳಲ್ಲಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

**ಒ)ವಿಷಯಃ ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕು ಮಹಾರಾಷ್ಟ್ರ ಗಡಿ ಭಾಗದ ಗ್ರಾಮಗಳಲ್ಲಿ ಕನ್ನಡ ಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ.**

\- - - - -

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಮಹಾರಾಷ್ಟ್ರ ಗಡಿಭಾಗದಲ್ಲಿರುವ ಗ್ರಾಮಗಳಲ್ಲಿ ಕನ್ನಡ ಮಾಧ್ಯಮ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಶಾಲೆಗಳು ಇಲ್ಲದಿರುವ ಕಾರಣ ಅಲ್ಲಿನ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆ ಕಲಿಯಲು ತುಂಬಾ ತೊಂದರೆಯಾಗಿದ್ದು, ಅಲ್ಲಿ ಕನ್ನಡ ಮಾಧ್ಯಮ ಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ ಈಗಾಗಲೇ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮನವಿ ಕೋರಿದ್ದು, ಕನ್ನಡ ಶಾಲೆಗಳು ಇನ್ನೂ ಪ್ರಾರಂಭವಾಗಿಲ್ಲ. ಆದುದರಿಂದ, ಈ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕನ್ನಡ ಶಾಲೆಗಳನ್ನು ಪ್ರಾರಂಭ ಮಾಡುವಂತೆ ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಬಯಸುತ್ತೇನೆ.

**ಶ್ರೀ ಬಿ.ಸಿ.ನಾಗೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು):-** ಮಾನ್ಯ ಸಭಾಪತಿಯವರೇ, ಗಡಿನಾಡಿನ ಶಾಲೆಯ ಮಕ್ಕಳ ಸಂಖ್ಯೆಯನ್ನು ಆಧರಿಸಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

**ಔ)ವಿಷಯಃ- ರಾಜ್ಯದಲ್ಲಿ ಸರ್ಕಾರಿ ಮತ್ತು ಸರ್ಕಾರದ ಅನುದಾನಿತ ಆಸ್ಪತ್ರೆಗಳಲ್ಲಿ ಸಂದರ್ಶಕರ ಸಮಿತಿ ರಚನೆ ಮಾಡುವ ಬಗ್ಗೆ.**

\- - - - - - -

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಸರ್ಕಾರಿ ಮತ್ತು ಸರ್ಕಾರದ ಅನುದಾನಿತ ಆಸ್ಪತ್ರೆಗಳಿಗೆ ಸಮಾಜ ಸೇವಕರು ಮತ್ತು ಸೇವೆಯುಳ್ಳ ಜನರನ್ನು ಒಳಗೊಂಡಂತೆ ಆಸ್ಪತ್ರೆಯ ಸಂದರ್ಶಕರ ಸಮಿತಿ ರಚಿಸದಿರುವುದು ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.

ಈ ಸಂದರ್ಶನ ಸಮಿತಿ ಸದಸ್ಯರನ್ನಾಗಿ ಕ್ಷೇತ್ರದ ಶಾಸಕರು, ವಿಧಾನ ಪರಿಷತ್ತಿನ ಸದಸ್ಯರನ್ನು ನೇಮಕ ಮಾಡಲಾಗುತ್ತಿತ್ತು. ಬಹುತೇಕ ಸಂದರ್ಭಗಳಲ್ಲಿ ಸ್ಥಳೀಯ ಶಾಸಕರು ಅಧ್ಯಕ್ಷರಾಗುತ್ತಿದ್ದರು. ಪ್ರತಿ ತಿಂಗಳು ಸಭೆ ಸೇರುವ ಈ ಸಮಿತಿಯ ಸಭೆಯಲ್ಲಿ ವಿಶೇಷವಾಗಿ ಆ ಭಾಗದ ಲೋಕಸಭಾ ಸದಸ್ಯರು ತಪ್ಪದೇ ಹಾಜರಾಗಿ, ಚರ್ಚೆಯಲ್ಲಿ ಪಾಲ್ಗೊಂಡು ಸಾರ್ವಜನಿಕರಿಗೆ ಆಗಬೇಕಿರುವ ಕೆಲಸಗಳ ಪಟ್ಟಿಯನ್ನು ಮಾಡಿ ಸಂಬಂಧಪಟ್ಟ ಇಲಾಖೆಗೆ ಪತ್ರ ಬರೆದು ಅನುಷ್ಠಾನಗೊಳಿಸುತ್ತಿದ್ದರು. ಇದರಿಂದ ಜನಸಾಮಾನ್ಯರಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಗುಣಮಟ್ಟದ ಚಿಕಿತ್ಸೆ ದೊರೆಯುತ್ತಿತ್ತು. ಆಸ್ಪತ್ರೆಯಲ್ಲಿ ಕೆಲಸ ಕಾರ್ಯಗಳು ಸರಿಯಾದ ರೀತಿಯಲ್ಲಿ ಸಾಗುತ್ತಿತ್ತು. ಅಲ್ಲದೆ, ಆಸಕ್ತಿಯುಳ್ಳ ಜನ ಪ್ರತಿನಿಧಿಗಳೆಲ್ಲರೂ ಇದರಲ್ಲಿ ಸಕ್ರಿಯವಾಗಿ ಪಾಲ್ಗೊಂಡು ತಮ್ಮದೇ ಆದ ಕೊಡುಗೆ, ಸಲಹೆ/ಸೂಚನೆಗಳನ್ನು ನೀಡುತ್ತಿದ್ದರು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದರೆ ದಿನಗಳು ಕಳೆದಂತೆ ಈ ಜನಪ್ರತಿನಿದಿಗಳು ಇಂತಹ ವಿಚಾರಗಳಲ್ಲಿ ನಿರಾಸಕ್ತಿ ಹೊಂದುತ್ತಿರುವುದರಿಂದ ಕಾಲಕಾಲಕ್ಕೆ ಅಭಿವೃದ್ಧಿ ಸಮಿತಿ ರಚನೆಯಾಗದೇ ಅಭಿವೃದ್ಧಿ ಕೆಲಸಗಳು ಕುಂಠಿತಗೊಂಡಿರುವುದು ವಿಪರ್ಯಾಸವೇ ಸರಿ.

ದಯಮಾಡಿ, ಸರ್ಕಾರ ಈ ವಿಚಾರದಲ್ಲಿ ಎಚ್ಚೆತ್ತುಕೊಂಡು, ಸರ್ಕಾರದ ಸವಲತ್ತುಗಳು ಯಶಸ್ವಿಯಾಗಿ ಜನರನ್ನು ತಲುಪಿಸುವ ನಿಟ್ಟಿನಲ್ಲಿ ಸರ್ಕಾರಿ ಆಸ್ಪತ್ರೆ ಸರ್ಕಾರದ ಅನುದಾನಿತ ಆಸ್ಪತ್ರೆ, ಸರ್ಕಾರಿ ಶಾಲೆಗಳ ಅಭಿವೃದ್ಧಿ ಸಮಿತಿಗಳನ್ನು ರಚಿಸಬೇಕೆನ್ನುವ ವಿಷಯದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಿಂದ ಉತ್ತರವನ್ನು ನಂತರ ಒದಗಿಸಲಾಗುವುದು.

**ಅಂ)ವಿಷಯಃ- ಉಡುಪಿಯಿಂದ ಕೇರಳಕ್ಕೆ ಮೂಡಬಿದರೆ- ಬಂಟ್ವಾಳ ತಾಲ್ಲೂಕಿನ 17 ಗ್ರಾಮಗಳ ಮೂಲಕ 400 ಕೆ.ವಿ. ಸಾಮರ್ಥ್ಯದ ವಿದ್ಯುತ್ ಸರಬರಾಜಾಗುತ್ತಿರುವ ಬಗ್ಗೆ.**

\- - - - - -

**ಶ್ರೀ ಕೆ.ಹರೀಶ್‌ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ೪೦೦ ಕೆವಿ ವಿದ್ಯುತ್ ಸರಬರಾಜು ಯೋಜನೆಯು (UPCL) ಉಡುಪಿಯಿಂದ ಕೇರಳಕ್ಕೆ ಮೂಡಬಿದಿರೆ ಮೂಲಕ ಬಂಟ್ವಾಲ ತಾಲ್ಲೂಕಿನ ೧೭ ಗ್ರಾಮಗಳಲ್ಲಿ ಹಾದು ಹೋಗಲಿದ್ದು, ಈ ಕುರಿತು ಜಿಲ್ಲಾಧಿಕಾರಿಗಳಾಗಲೀ ಅಥವಾ ಸಂಬಂಧಪಟ್ಟ ಸ್ಥಳೀಯ ಅಧಿಕಾರಿಗಳಾಗಲೀ ಯಾವುದೇ ಮಾಹಿತಿ ನೀಡದಿರುವುದು ಹಾಗೂ ಗೌಪ್ಯ ಸರ್ವೆ ಕಾರ್ಯ ನಡೆಯುತ್ತಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿ ಬಂದಿರುತ್ತದೆ.

ಈ ವಿದ್ಯುತ್ ಪ್ರಸರಣ ಯೋಜನೆ ಜಾರಿಗೊಂಡಲ್ಲಿ ಸಾವಿರಾರು ಕೃಷಿ ಕುಟುಂಬಗಳು, ಕೃಷಿಯನ್ನು ನಂಬಿ ಬದುಕುವ ರೈತರು ಆರ್ಥಿಕ ಸಂಕಷ್ಟಕ್ಕೆ ಒಳಗಾಗಿ ತಮ್ಮ ಜೀವನ ಸಾಗಿಸಲು ಅನಾನುಕೂಲವಾಗಲಿದೆ. ನಿಯಮಬಾಹಿರವಾದ ಈ ಯೋಜನೆಯಿಂದ ಆಗಬಹುದಾದ ದುಷ್ಪರಿಣಾಮಗಳನ್ನು ಸರ್ಕಾರ ಮುಂದಾಗಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನೆಪಮಾತ್ರಕ್ಕೆ ಸಾರ್ವಜನಿಕ ಹಿತಾಸಕ್ತಿಯ ಯೋಜನೆ ಇದು ಎಂಬುದಾಗಿ ಪ್ರಚಾರ ಗಿಟ್ಟಿಸಿಕೊಳ್ಳುವ ಸರ್ಕಾರದ ಯೋಜನೆಯಿಂದ ಪರಿಸರಕ್ಕೆ ಪ್ರಾಣಿ ಸಂಕುಲಕ್ಕೆ ಆಗುವ ನಷ್ಟವನ್ನು ಅಂದಾಜಿಸದಿರುವುದು ದುರಂತವೇ ಸರಿ. ವಿಶೇಷವಾಗಿ ಈ ಯೋಜನೆ ಜಾರಿಯಿಂದಾಗಿ ಭೂ ಮೌಲ್ಯದಲ್ಲಿ ತೀವ್ರ ಇಳಿಕೆ, ಕೃಷಿ ಚಟುವಟಿಕೆಗಳಿಗೆ ನಿರ್ಬಂಧ, ಹೈಟೆನ್ಶನ್ ಗೋಪುರಗಳ ಪಕ್ಕದಲ್ಲಿ ಕೃಷಿ ಮತ್ತು ವಾಣಿಜ್ಯ ಚಟುವಟಿಕೆಗಳಿಗೆ ನಿಷೇಧ ಹೇರುವಿಕೆ, ತೆರೆದ ಬಾವಿ ಅಥವಾ ಕೊಳವೆ ಬಾವಿಗಳನ್ನು ದುರಸ್ಥಿ ಮಾಡುವಂತಿಲ್ಲದಿರುವುದು, ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳವರು ಸಾಲ ನೀಡಲು ಹಿಂದೇಟು, ಮರ ಮತ್ತು ಸಸ್ಯಗಳ ಬೆಳವಣಿಗೆ ಕುಂಠಿತ, ನಿರಂತರ ವಾಯುಮಾಲಿನ್ಯ ಹೆಚ್ಚಳ ಇನ್ನು ಮುಂತಾದ ಆಘಾತಕಾರಿ ಘಟನೆಗಳು ಎದುರಾಗಲಿವೆ.

ಮುಖ್ಯವಾಗಿ ಹೈ ಟೆನ್ಶನ್ ವಿದ್ಯುತ್ ಪ್ರಸರಣದಿಂದಾಗಿ ಎಲೆಕ್ಟ್ರೋ ಮ್ಯಾಗ್ನೆಟಿಕ್ ವಿಕಿರಣಗಳು ಬಿಡಿಗಡೆಯಾಗಿ ಮನುಷ್ಯರ ದೇಹವನ್ನು ಹೊಕ್ಕು, ಶ್ವಾಸಕೋಶ ಕ್ಯಾನ್ಸರ್, ಹೃದಯ ಸಂಬಂಧಿ ಕಾಯಿಲೆಗಳು ಅಂಗವಿಕಲತೆ, ನರದೌರ್ಬಲ್ಯ ಮುಂತಾದ ಅನಾರೋಗ್ಯ ಸಮಸ್ಯೆಗಳು ಶಾಶ್ವತವಾಗಿ ಕಾಡಲಿವೆ ಎಂಬುದಾಗಿ PRO. BEHARI AND MOLTRI ಎನ್ನುವವರು ವರದಿ ನೀಡಿರುತ್ತಾರೆ.

ಈ ಕಾರಣದಿಂದ ಸಾರ್ವಜನಿಕರು ಮತ್ತು ರೈತರಿಗೆ ಮಾರಕವಾಗಬಹುದಾದ ಈ ಯೋಜನೆಯ ಮಾರ್ಗವನ್ನು ಬದಲಾವಣೆ ಮಾಡಬೇಕು ಅಥವಾ ಈ ಯೋಜನೆಯನ್ನು ಸಂಪೂರ್ಣ ಕೈಬಿಡಬೇಕು ಅಥವಾ ಕೇರಳ ರಾಜ್ಯದಲ್ಲಿ ಭೂಮಿಯ ಕೆಳಗೆ ವಿದ್ಯುತ್ ಪ್ರಸರಣ ಯೋಜನೆಯನ್ನು ಜಾರಿಗೊಳಿಸಿರುವ ಮಾದರಿಯಲ್ಲಿ ಪರಿಸರಕ್ಕೆ ಧಕ್ಕೆಯಾಗದಂತೆ ಕ್ರಮ ಕೈಗೊಳ್ಳಬೇಕೆನ್ನುವ ವಿಷಯದ ಬಗ್ಗೆ ಮಾನ್ಯ ಇಂಧನ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಧಿಸಿದಂತೆ ಮಾನ್ಯ ಇಂಧನ ಸಚಿವರಿಂದ ನಂತರ ಉತ್ತರವನ್ನು ಕೊಡಿಸಲಾಗುವುದು.

(ಮುಂದು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(1292)/23.12.2021/12.50/ಹೆಚ್‌ವಿ:ಎಂಡಿ

**ಅಃ)ವಿಷಯ: ಇಂಜಿನಿಯರಿಂಗ್ ಸಿ.ಇ.ಟಿ. ಕೌನ್ಸಿಲಿಂಗ್ ಮುಂಚೆ ಕಾಮೆಡ್-ಕೆ ಕೋಟಾದಡಿ ಸೀಟ್ ಪಡೆದ ವಿದ್ಯಾರ್ಥಿಗಳ ಶುಲ್ಕ ಹಿಂತಿರುಗಿಸುವ ಬಗ್ಗೆ.**

\- - - - - - -

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ಪ್ರಸಕ್ತ 2021-22ನೇ ಸಾಲಿನಲ್ಲಿ ದ್ವಿತೀಯ ಪಿ.ಯು.ಸಿ. ತೇರ್ಗಡೆ ಹೊಂದಿ, ಸಿ.ಇ.ಟಿ. ಪರೀಕ್ಷೆಗೆ ಹಾಜರಾಗಿ ಕಾಮೆಡ್-ಕೆ ಕೋಟಾದಡಿ ಶುಲ್ಕ ಪಾವತಿಸಿ ಸೀಟು ಪಡೆದ ವಿದ್ಯಾರ್ಥಿಗಳು ತದನಂತರ ಸಿ.ಇ.ಟಿ. ಮೊದಲನೆಯ ಸುತ್ತಿಗೆ ಕೌನ್ಸಿಲಿಂಗ್‌ಗೆ ಹಾಜರಾಗಿರುತ್ತಾರೆ. ಈ ನಡುವೆ ಕಾಮೆಡ್-ಕೆ ರವರು ದಿನಾಂಕ:06.12.2021ರೊಳಗೆ ಸೀಟುಗಳನ್ನು ಸರೆಂಡರ್ ಮಾಡಲು ಅವಕಾಶ ಕಲ್ಪಿಸಿದ್ದು, ಈ ದಿನಾಂಕದೊಳಗೆ ಮೊದಲನೆಯ ಸುತ್ತಿನ ಸೀಟು ಹಂಚಿಕೆ ಫಲಿತಾಂಶವಾಗದ ಕಾರಣ ಮತ್ತು ಮೊದಲನೆಯ ಸುತ್ತಿನ ಕೌನ್ಸಲಿಂಗ್ ಸೀಟು ಹಂಚಿಕೆ ಫಲಿತಾಂಶವು ದಿನಾಂಕ:11.12.2021ರಂದು ಪ್ರಕಟಗೊಂಡ ಹಿನ್ನೆಲೆಯಲ್ಲಿ ಕಾಮೆಡ್-ಕೆ ಸೀಟ್ ಅನ್ನು ಸರೆಂಡರ್ ಮಾಡಲು ವಿದ್ಯಾರ್ಥಿಗಳಿಗೆ ಸಾಧ್ಯವಾಗಿರುವುದಿಲ್ಲ.

ತದನಂತರ ವಿದ್ಯಾರ್ಥಿಗಳು 2ನೇ ಸುತ್ತಿನ ಕೌನ್ಸಿಲಿಂಗ್‌ಗೆ ಹಾಜರಾಗಿ ಸಿ.ಇ.ಟಿ. ಉಚಿತ ಸೀಟು ಹಂಚಿಕೆಯಾಗಿರುವವವರು ಸರ್ಕಾರಿ ಶುಲ್ಕ ಪಾವತಿಸಿ ದಾಖಲಾದ ಕಾರಣ ಈ ಹಿಂದೆ ಕಾಮೆಡ್-ಕೆ ಕೋಟಾದಡಿ ಸೀಟಿಗಾಗಿ ಪಾವತಿಸಿದ್ದ ಶುಲ್ಕವನ್ನು ಹಿಂದಿರುಗಿಸುವಂತೆ ಸಾಕಷ್ಟು ಮನವಿ ಮಾಡಿದ್ದಾಗ್ಯೂ ಮನವಿಗಳನ್ನು ಸ್ವೀಕರಿಸದೆ, ಈವರೆಗೂ ಹಣ ಹಿಂದಿರುಗಿಸದೆ ಸೂಕ್ತವಾಗಿ ಸ್ಪಂದಿಸುತ್ತಿಲ್ಲದಿರುವ ವಿಚಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಕೊಡಿಸಲಾಗುವುದು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಕ) ವಿಷಯ:- ಕೋವಿಡ್-19 ವ್ಯಾಕ್ಸಿನ್‌ಗಳು ಪೋಲಾಗುತ್ತಿರುವ ವಿಚಾರದ ಬಗ್ಗೆ**

-----

**ಶ್ರೀ ಎನ್.ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):-** ಸನ್ಮಾನ್ಯ ಸಭಾಪತಿಯವರೇ, ಕೋವಿಡ್ ಸಂಕಷ್ಟ ಕಾಲದಲ್ಲಿ ನಮ್ಮ ದೇಶದ ಎಲ್ಲಾ ಜನರಿಗೆ ವ್ಯಾಕ್ಸಿನ್ ಒದಗಿಸುವ ಸದುದ್ದೇಶದಿಂದ ಕೇಂದ್ರ ಸರ್ಕಾರವು ಉಚಿತವಾಗಿ ವ್ಯಾಕ್ಸಿನ್‌ಗಳನ್ನು ಒದಗಿಸುತ್ತಿದೆ. ಸದರಿ ವ್ಯಾಕ್ಸಿನ್ ತಯಾರಿಸಲು ಸಂಶೋಧನೆಗಾಗಿ ಹಲವಾರು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುತ್ತಿದ್ದೆ. ಆದರೆ, ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಸದರಿ ವ್ಯಾಕ್ಸಿನ್ ಪೋಲಾಗುತ್ತಿರುವ ಕುರಿತು ಇಂದಿನ ಪತ್ರಿಕೆಗಳಲ್ಲಿ ವರದಿಯಾಗಿದೆ. ಆದ್ದರಿಂದ ರಾಜ್ಯ ಸರ್ಕಾರ ತಕ್ಷಣ ವ್ಯಾಕ್ಸಿನ್‌ಗಳನ್ನು ಪೋಲು ಮಾಡಲು ಕಾರಣಕರ್ತರಾದವರ ವಿರುದ್ಧ ತೀವ್ರ ಶಿಸ್ತು ಕ್ರಮ ಕೈಗೊಳ್ಳುವುದರ ಜೊತೆಗೆ ಮುಂದಿನ ದಿನಗಳಲ್ಲಿ ವ್ಯಾಕ್ಸಿನ್ ಪೋಲಾಗದಂತೆ ತಡೆಯಲು ಕ್ರಮ ಕೈಗೊಳ್ಳಬೇಕೆಂದು ಅಗ್ರಹಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಿಂದ ನಂತರ ಉತ್ತರವನ್ನು ಒದಗಿಸಲಾಗುವುದು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾಗಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

**(ಅ) ವಿಷಯ: ಕರ್ನಾಟಕ ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವೈದ್ಯಕೀಯ ವಿದ್ಯಾರ್ಥಿಗಳು ತಮ್ಮ ವ್ಯಾಸಂಗ ಮುಗಿಸಿದ ಮೇಲೆ ಕಡ್ಡಾಯವಾಗಿ ಒಂದು ವರ್ಷದ ಗ್ರಾಮೀಣ ಸೇವೆಯನ್ನು ಪೂರೈಸಬೇಕೆನ್ನುವುದರ ಬಗ್ಗೆ ಕಾನೂನು ರೂಪಿಸುವ ಕುರಿತು**

\- - - - - -

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, _ಡಾ|| ವೈ.ಎ.ನಾರಾಯಣಸ್ವಾಮಿಯವರು ದಿನಾಂಕ:14.12.2021ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ ಉತ್ತರವನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಆ)ವಿಷಯ: ಉಡುಪಿ ಜಿಲ್ಲೆಯಲ್ಲಿ ಕೊರೋನಾ 2ನೇ ಹಂತದ ಲಾಕ್‌ಡೌನ್ ತೆರವುಗೊಂಡು ಹಲವು ತಿಂಗಳುಗಳೇ ಕಳೆದರೂ ಗ್ರಾಮೀಣ ಭಾಗದಲ್ಲಿ ಪೂರ್ಣ ಪ್ರಮಾಣದಲ್ಲಿ ಬಸ್ ಸಂಚಾರ ಆರಂಭವಾಗದೇ ಇರುವ ಕಾರಣ ಜನಸಾಮಾನ್ಯರಿಗೆ ಮತ್ತು ವಿದ್ಯಾರ್ಥಿಗಳಿಗೆ ತೀವ್ರ ತೊಂದರೆಯಾಗುತ್ತಿರುವುದರ ಕುರಿತು**

\- - - - -

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, _ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರು ದಿನಾಂಕ:16.12.2021ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಾರಿಗೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವರ ಪರವಾಗಿ ಉತ್ತರವನ್ನು ಸದನ ಮುಂದೆ ಮಂಡಿಸುತ್ತಿದ್ದೇನೆ.

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**(ಇ) ವಿಷಯ: ರಾಜ್ಯ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸುಮಾರು 14 ಸಾವಿರ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸುವ ಕುರಿತು**

\- - - - - -

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಶ್ರೀ ಕೆ.ಟಿ.ಶ್ರೀಕಂಠೇಗೌಡರು ಮತ್ತು ಶ್ರೀ ಎಸ್.ವ್ಹಿ.ಸಂಕನೂರ ಇವರುಗಳು ದಿನಾಂಕ:17.12.2021ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಪರವಾಗಿ ಉತ್ತರವನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಈ) ವಿಷಯ: ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ತಹಶೀಲ್ದಾರ್ ಅವರನ್ನು ವರ್ಗಾವಣೆ ಮಾಡುವ ಬಗ್ಗೆ**

-----

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಶ್ರೀ ವಿಜಯ ಸಿಂಗ್‌ರವರು ದಿನಾಂಕ:21.12.2021ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಕಂದಾಯ ಸಚಿವರ ಪರವಾಗಿ ಉತ್ತರವನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಉ) ವಿಷಯ: ಸರ್ಕಾರ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಗೋಶಾಲೆ ತೆರೆಯಲು ಅಗತ್ಯವಿರುವ ಜಮೀನುಗಳನ್ನು ಪಡೆದು ಅವಶ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಿ, ರೈತರಿಗೆ ಸಮಸ್ಯೆಯಾಗದಂತೆ ಗೋವುಗಳ ಸಂರಕ್ಷಣೆಗೆ ಮುಂದಾಗುವ ಬಗ್ಗೆ**

-----

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, _ಶ್ರೀ ಕೆ.ಹರೀಶ್‌ಕುಮಾರ್‌ರವರು ದಿನಾಂಕ:22.12.2021ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಪಶುಸಂಗೋಪನಾ ಸಚಿವರ ಪರವಾಗಿ ಉತ್ತರವನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಉಳಿದಿರುವ ಶೂನ್ಯವೇಳೆಯ ಪ್ರಸ್ತಾವಗಳಿಗೆ ಸರ್ಕಾರ ಆದಷ್ಟು ಬೇಗನೇ ಉತ್ತರವನ್ನು ಒದಗಿಸಿಕೊಡುವಂತಹ ಕೆಲಸವನ್ನು ಮಾಡಬೇಕಾಗಿದೆ. ಏಕೆಂದರೆ, ನಾಳೆಯೇ ಅಧಿವೇಶನ ಕೊನೆಯಾಗಿರುವುದರಿಂದ ಆದಷ್ಟು ಬೇಗನೇ ಕಳುಹಿಸಿಕೊಡಿ. ನಮ್ಮಲ್ಲಿ ಹತ್ತು ಶೂನ್ಯವೇಳೆಯನ್ನು ತೆಗೆದುಕೊಳ್ಳುವುದಕ್ಕೆ ಮಾತ್ರ ಪ್ರಾವಿಜ಼ನ್ ಇದೆ. ಆದರೆ , ಇಡೀ ಅಧಿವೇಶನದಲ್ಲಿ ಎಷ್ಟು ಜನ ಸದಸ್ಯರು ಶೂನ್ಯವೇಳೆಯ ಪ್ರಸ್ತಾಪವನ್ನು ನೀಡಿದ್ದಾರೆ ಅಷ್ಟನ್ನೂ ತೆಗೆದುಕೊಂಡಿದ್ದೇನೆ. ಅವರೆಲ್ಲರೂ ಕಷ್ಟಪಟ್ಟು ಪ್ರಸ್ತಾವಗಳನ್ನು ಕಳುಹಿಸಿಕೊಟ್ಟಿರುತ್ತಾರೆ. ಆದ್ದರಿಂದ ತಾವು ಅದಕ್ಕೆ ಬೇಗನೆ ಉತ್ತರಗಳನ್ನು ಕಳುಹಿಸಿಕೊಡುವಂತಹ ಪ್ರಯತ್ನವನ್ನು ಮಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ನಾಳೆಯೊಳಗೆ ಆದಷ್ಟು ಬೇಗ ಎಷ್ಟು ಸಾಧ್ಯವೋ ಅಷ್ಟು ಉತ್ತರಗಳನ್ನು ಒದಗಿಸಿಕೊಡಲಾಗುತ್ತದೆ.

**ಸಭಾಪತಿಯವರು:-** ಈಗ ನಿಯಮ 330ರಡಿ ಚರ್ಚೆ. ಮೊದಲಿಗೆ ಶ್ರೀ ಪಿ.ಆರ್. ರಮೇಶ್ ಅವರದು.

**ಶ್ರೀ ಸಿ.ಎಂ.ಇಬ್ರಾಹಿಂ:-** ಸನ್ಮಾನ್ಯ ಸಭಾಪತಿಯವರೇ, ನನ್ನ ವಿಷಯವನ್ನು ಮೊದಲು ತೆಗೆದುಕೊಂಡು ನಂತರ  ಮಾನ್ಯ ಪಿ.ಆರ್.ರಮೇಶ್ ಅವರ ವಿಚಾರಕ್ಕೆ ಅವಕಾಶವನ್ನು ನೀಡಬೇಕೆಂದು ವಿನಂತಿಸುತ್ತೇನೆ.

**ಸಭಾಪತಿಯವರು:-** ಆಯಿತು. ಮಾನ್ಯ ಇಬ್ರಾಹಿಂರವರೇ ತಾವೇ ಮೊದಲು ಪ್ರಾರಂಭಿಸಿ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 4. ನಿಯಮ 330ರ ಮೇರೆಗೆ ಚರ್ಚೆ

**ಅ) ವಿಷಯ: ರಾಜ್ಯದ ವಿವಿಧ ಇಲಾಖೆಗಳಲ್ಲಿ ಗುತ್ತಿಗೆ ಕಾಮಗಾರಿಗಳ** ಮೊತ್ತದ **ಶೇಕಡ 40ರಷ್ಟು** ಮೊತ್ತ **ಲಂಚದ ರೂಪದಲ್ಲಿ ವ್ಯಯವಾಗುತ್ತಿದ್ದು ಭ್ರಷ್ಟಾಚಾರ ತಾಂಡವವಾಡುತ್ತಿರುವ ಬಗ್ಗೆ.**

-------

**ಶ್ರೀ ಸಿ.ಎಂ.ಇಬ್ರಾಹಿಂ(ವಿಧಾನಸಭೆಯಿಂದ ಚುನಾಯಿತರಾದವರು):-** ಸನ್ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶವನ್ನು ನೀಡಿರುವುದಕ್ಕಾಗಿ ಮೊಟ್ಟಮೊದಲನೆಯದಾಗಿ ನಾನು ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಈ ವಿಚಾರದ ಬಗ್ಗೆ ನಾವೆಲ್ಲರೂ ಪಕ್ಷಬೇಧ ಮರೆತು ಚರ್ಚೆಯಲ್ಲಿ ಪಾಲ್ಗೊಳ್ಳಬೇಕಾಗಿರುವ ಅವಶ್ಯಕತೆ ಇದೆ. ಕರ್ನಾಟಕ ರಾಜ್ಯ ಕಂಟ್ರಾಕ್ಟರ್ ಅಸೋಸಿಯೇಷನ್‌ನವರು ಈ ದೇಶದ ಪ್ರಧಾನ ಮಂತ್ರಿಗಳಿಗೊಂದು ಪತ್ರವನ್ನು ಬರೆದಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಪ್ರತಿ ಇಲಾಖೆಯಲ್ಲಿಯೂ........

**ಸಭಾಪತಿಯವರು:-** ಮಾನ್ಯ ಇಬ್ರಾಹಿಂರವರೇ, ಈಗ ತಾವು ವಿಷಯವನ್ನು ಪ್ರಸ್ತಾಪ ಮಾಡಿ, ನಂತರ ತಮಗೆ ಸರ್ಕಾರದಿಂದ ಉತ್ತರವನ್ನು ಕೊಡಿಸುತ್ತೇನೆ. ಏಕೆಂದರೆ, ಎರಡು ಮೂರು ಬಾರಿ ಕಾರ್ಯಕಲಾಪಗಳ ಪಟ್ಟಿಯಲ್ಲಿ ಬಂದರೂ ಚರ್ಚೆಗೆ ಅವಕಾಶವನ್ನು ಕೊಡುವುದಕ್ಕೆ ಸಾಧ್ಯವಾಗಿರಲಿಲ್ಲ.

**ಶ್ರೀ ಸಿ.ಎಂ.ಇಬ್ರಾಹಿಂ:-** ಸನ್ಮಾನ್ಯ ಸಭಾಪತಿಯವರೇ, ಆಗಬಹುದು. ಇದರಿಂದ ಅವರಿಗೂ ಅವಮಾನವಾಗಿದೆ ನಮಗೂ ಅವಮಾನವಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಇಬ್ರಾಹಿಂರವರಿಗೆ ಏತಕ್ಕೋಸ್ಕರ ಅವಮಾನವಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಆದರೆ, ನಮಗಂತೂ ಅವಮಾನವಾಗಿಲ್ಲ. ಆ ರೀತಿ ನಾವು ನಡೆದುಕೊಂಡಿಲ್ಲ.

**ಸಭಾಪತಿಯವರು:-** ನೋಡೋಣ, ಅವರು ಮಾತನಾಡಿ ಮುಗಿಸಿದ ಮೇಲೆ ಗೊತ್ತಾಗುತ್ತದೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಕಂಟ್ರಾಕ್ಟರ್ ಅಸೋಸಿಯೇಷನ್‌ನವರು ಇವರ ಮೇಲೆ ಮಾನ್ಯ ಪ್ರಧಾನಮಂತ್ರಿಗಳಿಗೆ ಪತ್ರವನ್ನು ಬರೆದಿದ್ದಾರೆ.

**ಶ್ರೀ ಎನ್.ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):-** ಸನ್ಮಾನ್ಯ ಸಭಾಪತಿಯವರೇ, ಆ ರೀತಿ ಪತ್ರ ಬರೆದಿರುವವರು ಅವರ ಕಡೆಯವರೇ ಇರಬಹುದು. ಕಾಂಗ್ರೆಸ್ ಪಕ್ಷದವರೇ ಇರಬಹುದು.

**ಶ್ರೀ ಸಿ.ಎಂ.ಇಬ್ರಾಹಿಂ:-** ಸನ್ಮಾನ್ಯ ಸಭಾಪತಿಯವರೇ, ಕ್ರಮ ತೆಗೆದುಕೊಳ್ಳಲಿ, ಅವರಿಗೇನಾದರೂ ಗಂಡಸುತನವಿದ್ದರೆ, common it is a challenge, take the action. ಅವರ ಮೇಲೆ ಕೇಸ್ ದಾಖಲು ಮಾಡಲಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ತನಿಖೆ ನಡೆಸುತ್ತೇವೆಂದು ಹೇಳಿದ್ದಾರೆ.

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ನಾನು ಮಾನ್ಯ ಸಿ.ಎಂ.ಇಬ್ರಾಹಿಂ ಅವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ನೀಡಿದ್ದೇನೆ. ಅವರು ಯಾರು ತಪ್ಪಿತಸ್ಥರು ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ. ತಾವು ಯಾಕೆ ತಲೆಕೆಡಿಸಿಕೊಳ್ಳುತ್ತಿದ್ದೀರಿ?

**ಶ್ರೀ ಸಿ.ಎಂ.ಇಬ್ರಾಹಿಂ:-** ಸನ್ಮಾನ್ಯ ಸಭಾಪತಿಯವರೇ, ಅವರಿಗೆ ಅವಮಾನವಾಗಿಲ್ಲವೆಂದರೆ, ಕೇಸ್ ಹಾಕಲಿ.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ತಾವು ಏನಾದರೂ ಶಿಫಾರಸ್ಸು ಮಾಡಿ ಮಾನ್ಯ ರವಿಕುಮಾರ್ ಅವರನ್ನು ಮಂತ್ರಿಗಳನ್ನಾಗಿ ಮಾಡಿಬಿಡಿ. ಅವರು ಚೆನ್ನಾಗಿ ಉತ್ತರವನ್ನು ಕೊಡುತ್ತಾರೆ.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ಮಾನ್ಯ ರವಿಕುಮಾರ್ ಅವರನ್ನು ತೆಗೆಯುವಂತಿಲ್ಲ, ನಿಮ್ಮನ್ನು ಹಾಕುವಂತಿಲ್ಲ ಆ ರೀತಿ ಆಗಿದೆ.

**ಡಾ:ತೇಜಸ್ವಿನಿ ಗೌಡ:-** ಸನ್ಮಾನ್ಯ ಸಭಾಪತಿಯವರೇ, ಲಂಚ ಕೊಡುವುದು ಮತ್ತು ಲಂಚ ತೆಗೆದುಕೊಳ್ಳುವುದು ಎರಡೂ ಅಪರಾಧವಾಗಿದೆ. ಶೇಕಡಾ 40ರಷ್ಟು ಕಮೀಶನ್ ಕೊಟ್ಟಿದ್ದೇವೆಂದು ಅವರು ಹೇಳಿದ್ದರೇ, ಲಂಚ ಕೊಡುವುದು ಸಹ ಅಪರಾಧವಾಗಿದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಮಾನ್ಯ ತೇಜಸ್ವಿನಿಗೌಡರೇ, ತಾವು ಏನು ಕೇಳಬೇಕೆಂದು ಇದ್ದೀರಿ ಅವೆಲ್ಲವನ್ನೂ ಬರೆದಿಟ್ಟುಕೊಂಡು ಮಾನ್ಯ ಇಬ್ರಾಹಿಂರವರು ತಮ್ಮ ಮಾತುಗಳನ್ನು ಮುಗಿಸಿದ ನಂತರ ಕೇಳಿ ಮಧ್ಯೆಮಧ್ಯೆ ಅವರ ಮಾತಿಗೆ ಅಡಚಣೆಯನ್ನುಂಟು ಮಾಡಬೇಡಿ.

**ಶ್ರೀ ಸಿ.ಎಂ.ಇಬ್ರಾಹಿಂ:-** ಸನ್ಮಾನ್ಯ ಸಭಾಪತಿಯವರೇ, ಮಂತ್ರಿಗಳು ಶೇಕಡಾ 5ರಷ್ಟು ಕಮೀಶನ್ ಕೇಳಿದ್ದಾರೆಂದು ಕರ್ನಾಟಕ ರಾಜ್ಯ ಕಂಟ್ರಾಕ್ಟರ್ ಅಸೋಸಿಯೇಷನ್‌ನವರು ಪತ್ರವನ್ನು ಬರೆದಿದ್ದಾರೆ.

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ನಾನು ಸಹ 'ಕಾಂಗ್ರೆಸ್ ಸರ್ಕಾರವಿದ್ದಾಗ ಶೇಕಡಾ 50ರಷ್ಟು ಕಮೀಶನ್' ಎಂದು ನಾನು ಪತ್ರವನ್ನು ಬರೆಯುತ್ತೇನೆ. ಅವರಿಗೆ ಓಕೆ.ನಾ?

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರು ಮಂತ್ರಿಗಳಲ್ಲ, ಸರ್ಕಾರವಲ್ಲ. ಅವರು ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ. ಎಲ್ಲದಕ್ಕೂ ಅವರು ಎದ್ದು ನಿಂತು ಮಾತನಾಡುತ್ತಿರುತ್ತಾರೆ.

**(ಗೊಂದಲ)**

**ಡಾ:ತೇಜಸ್ವಿನಿ ಗೌಡ:-** ಸನ್ಮಾನ್ಯ ಸಭಾಪತಿಯವರೇ, ಇವರಿಗೆ ಸಹಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಅವರು ನೇರವಾಗಿ ಹೋರಾಟ ಮಾಡಲಿ, ಈ ರೀತಿ ದುರುದ್ದೇಶದಿಂದ ಸದನವನ್ನು ದುರುಪಯೋಗ ಮಾಡಿಕೊಳ್ಳಬಾರದು. ಭಾರತೀಯ ಜನತಾ ಪಕ್ಷದ ಸರ್ಕಾರವಿದು, ಈ ರೀತಿ ಮಾಡಿದರೆ, ಯಾವ ರೀತಿ ಸಚಿವರು ಕೆಲಸ ಮಾಡುವುದು.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ರವಿಕುಮಾರ್‌ರವರು ಸರ್ಕಾರವಲ್ಲ. ಸರ್ಕಾರ ಉತ್ತರ ಕೊಡುತ್ತದೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಇಬ್ರಾಹಿಂರವರು ಈ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡುತ್ತಾರೆ. ಅವರು ಮಾತನಾಡುವಂತಹ ಸಂದರ್ಭದಲ್ಲಿ ಯಾವುದಾದರು ಅಸಂಸದೀಯ ಪದಗಳೆಂದು ನನಗೆ ಕಂಡುಬಂದರೆ, ಅದನ್ನು ಕಡತದಿಂದ ತೆಗೆದು ಹಾಕುತ್ತೇನೆ. ಅವರ ಮಾತುಗಳನ್ನು ಎಲ್ಲರೂ ಕೇಳಿ, ನೋಟ್ ಮಾಡಿಕೊಳ್ಳಿ ನಂತರ ಪ್ರಶ್ನೆ ಮಾಡಿ. ಈಗ ಏತಕ್ಕೋಸ್ಕರ ಈ ರೀತಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಗುದ್ದಾಡುತ್ತಿದ್ದೀರಿ? ಮಾನ್ಯ ಇಬ್ರಾಹಿಂರವರು ಮಾತನಾಡುವ ಸಂದರ್ಭದಲ್ಲಿ ಯಾರೂ ಮಧ್ಯೆ ಮಾತನಾಡಬಾರದು. ಇದು ಎಲ್ಲರ ಜವಾಬ್ದಾರಿಯಾಗಿದೆ. ಇದರ ಬಗ್ಗೆ ಯಾವ ರೀತಿಯಲ್ಲಿ ಜನರಿಗೆ ಸಂದೇಶವನ್ನು ಕಳುಹಿಸಬಹುದು ಎನ್ನುವುದರ ಬಗ್ಗೆ ಚಿಂತನೆ ಮಾಡಿ ಅದನ್ನು ಬಿಟ್ಟು ನಿಮ್ಮ ನಿಮ್ಮಲ್ಲೇ ಬಡಿದಾಡುವುದು ಸರಿಯಾದ ಕ್ರಮವಲ್ಲ.

**ಶ್ರೀ ಸಿ.ಎಂ.ಇಬ್ರಾಹಿಂ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಂಸದರು, ಚುನಾಯಿತ ಪ್ರತಿನಿಧಿಗಳು ಎಂದರೆ, ಈ ಪಕ್ಷ ಆ ಪಕ್ಷ ಎಂದು ಭೇದಭಾವವಿಲ್ಲ. ಅವರು ನಮ್ಮ ಮೇಲೂ ಆರೋಪ ಮಾಡಿದ್ದಾರೆ. ಯಾರು ಈ ರೀತಿ ಆರೋಪ ಮಾಡಿರುವವರು ಎಂದರೆ, ಗುತ್ತಿಗೆದಾರರ ಸಂಘದ ಅಧ್ಯಕ್ಷರಾಗಿರುವ ಡಿ.ಕೆಂಪಣ್ಣನವರು. ಕರ್ನಾಟಕ ರಾಜ್ಯ ಕಂಟ್ರಾಕ್ಟರ್ ಅಸೋಸಿಯೇಷನ್ ಎನ್ನುವುದು ನೋಂದಾಯಿತ ಸಂಸ್ಥೆಯಾಗಿದೆ.

(ಗೊಂದಲ)

**ಶ್ರೀ ಶಶೀಲ್ ಜಿ.ನಮೋಶಿ:-** ಸನ್ಮಾನ್ಯ ಸಭಾಪತಿಯವರೇ, ಅವರು ಕಾಂಗ್ರೆಸ್ ಮೆಂಬರ್ ಆಗಿದ್ದಾರೆ.

(ಗೊಂದಲ)

**ಡಾ:ವೈ.ಎ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಅವರು ಕಾಂಗ್ರೆಸ್ ಪಕ್ಷದವರು......

(ಗೊಂದಲ)

**ಸಭಾಪತಿಯವರು:-** ವೈ.ಎ.ನಾರಾಯಣಸ್ವಾಮಿಯವರು ಮಾತನಾಡುವುದು ಯಾವುದೂ ಕಡತಕ್ಕೆ ಹೋಗಬಾರದು

(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿ ಸದನದ ನಡವಳಿಗಳನ್ನು ದಾಖಲಿಸಿರುವುದಿಲ್ಲ)

**ಶ್ರೀ ಎಂ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೆ, ಇವರ ಕರ್ಮಕಾಂಡವನ್ನು ಪ್ರಧಾನಮಂತ್ರಿಗಳಿಗೆ ಪತ್ರ ಬರೆದು ತಿಳಿಸಿದ್ದಾರೆ. ಇದನ್ನು ನಾವು ಹೇಳುತ್ತಿಲ್ಲ.

(ಗೊಂದಲ)

(ಮುಂದು)

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(1293) 23.12.2021 1.00 ಪಿಕೆ:ಎಂಡಿ** **(ಸಭಾಪತಿಯವರ ಉಪಸ್ಥಿತಿ)**

(ಗೊಂದಲ)

**ಶ್ರೀ ಎಂ. ನಾರಾಯಣಸ್ವಾಮಿ:-** ನಿಮ್ಮ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ.

(ಗೊಂದಲ)

**ಸಭಾಪತಿಯವರು**:- ಇದು ಯಾವುದೂ ಕಡತಕ್ಕೆ ಹೋಗಬಾರದು. ನನ್ನ ಅನುಮತಿ ಪಡೆಯದೇ ಯಾರೇ ಮಾತನಾಡಲಿ ಅದು ಕಡತಕ್ಕೆ ಹೋಗಬಾರದು. ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ಮತ್ತು ಮಾನ್ಯ ಎಂ.ನಾರಾಯಣಸ್ವಾಮಿಯವರು ಮಾತನಾಡಿದ್ದು ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿ ಸದನದ ನಡೆವಳಿಗಳನ್ನು ದಾಖಲಿಸಿರುವುದಿಲ್ಲ)**

(ಗೊಂದಲ)

**ಶ್ರೀ ಪಿ.ಆರ್.ರಮೇಶ್**:- ಮಾನ್ಯ ಇಬ್ರಾಹಿಂ ಸಾಹೇಬರು, ಕುಂಬಳಕಾಯಿ ಕಳ್ಳ ಎಂದಷ್ಟೇ ಹೇಳುತ್ತಿದ್ದಾರೆ ಅಷ್ಟೆ.

**ಸಭಾಪತಿಯವರು:-** ನೀವು ಮಾತನಾಡಲು ಯಾರು ಅನುಮತಿ ಕೊಟ್ಟರು? ನಿಮ್ಮನ್ನು ಯಾರು ಕರೆದರು? ದಯವಿಟ್ಟು ಕುಳಿತುಕೊಳ್ಳಿ. ನನ್ನ ಬಾಯಲ್ಲಿ ಕೆಟ್ಟದ್ದು ಬರಿಸಬೇಡಿ. ನನ್ನ ತಲೆ ಕೆಟ್ಟಿದೆ. ಮಾತನಾಡಲು ಅನುಮತಿ ಕೊಡದೇ ಇದ್ದರೂ ಏಕೆ ಎದ್ದು ನಿಂತು ಮಾತನಾಡುತ್ತೀರಿ? ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಸಿ.ಎಂ.ಇಬ್ರಾಹಿಂ**:- ಮಾನ್ಯ ಸಭಾಪತಿಗಳೆ, 7ನೇ ತಿಂಗಳ 6ನೇ ದಿನಾಂಕದಂದು ಪ್ರಧಾನ ಮಂತ್ರಿಯವರಿಗೆ ಪತ್ರ ಬರೆದಿದ್ದಾರೆ. ಆದಾದ ಮೇಲೆ ಪತ್ರಿಕೆ ಹೇಳಿಕೆ ಕೊಟ್ಟರು. ಅವರು, ನಾವು ರಾಜ್ಯಪಾಲರಿಗೆ ದೂರು ಕೊಟ್ಟೆವು; ಏನೂ ಆಗಲಿಲ್ಲ, ಮುಖ್ಯಮಂತ್ರಿಗಳಿಗೂ ದೂರು ಕೊಟ್ಟೆವು; ಆದರೂ ಏನು ಆಗಲಿಲ್ಲ ಎಂದು ಹೇಳುತ್ತಾರೆ. ಇಂಥದ್ದನ್ನು ಸಾರ್ವಜನಿಕರು ಓದಿದರೆ ನಮ್ಮ ಗೌರವ ಏನಾಗಬೇಕು? ನನಗೆ 70 ವರ್ಷವಾಯಿತು. ನನ್ನ ರಾಜಕೀಯ ಜೀವನದಲ್ಲಿ ಒಂದೇ ಒಂದು raid, CBI enquiry ಆಯಿತು. ಅದರ ರಿಪೋರ್ಟ್ ಸದನದ ಮುಂದೆ ಇದೆ. ಅದರಲ್ಲಿ "honest, no allegation, he is the perfect person" ಎಂದು ಹೇಳಿದರು. ಈ ಅಸೋಸಿಯೇಷನ್‌ನವರು, ರಾಜಕಾರಣಗಳಿಗೆ ಸಿಗುತ್ತಿರುವುದು ಶೇಕಡ 10 ರಷ್ಟು ಮತ್ತು ಬಾಕಿ ಶೇಕಡ 30 ರಷ್ಟು ಅಧಿಕಾರಿಗಳಿಗೆ ಹೋಗುತ್ತಿದೆ ಎಂದು ಹೇಳುತ್ತಿದ್ದಾರೆ. ಈಗ ಮಾತ್ರ ಅಲ್ಲ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ನಾವು ಕುಳಿತು ಇಂಥದ್ದಕ್ಕೆ ಒಂದು ನಿಯಂತ್ರಣ ಹಾಕದೇ ಇದ್ದರೆ ದೇಶ ಎಲ್ಲಿ ಹೋಗುತ್ತದೆ? Planning Commission ನ Vice Chairman ಆಗಿ ನಾಲ್ಕು ವರ್ಷ ಕೆಲಸ ಮಾಡಿದ್ದು ಅದರ ಅನುಭವವನ್ನು ನಿಮಗೆ ಹೇಳುತ್ತೇನೆ. ಬೆಂಗಳೂರಿನಿಂದ ಒಂದು ರೂಪಾಯಿ ಬಿಟ್ಟರೆ ಹಳ್ಳಿಗಳಿಗೆ ನಲವತ್ತು ಪೈಸೆ ತಲುಪುತ್ತಿರಲಿಲ್ಲ. ಏಕೆ? ಹಿಂದೆ ಮಾನ್ಯ ರಾಜೀವ್‌ಗಾಂಧೀಯವರೂ ಕೂಡ ಈ ಮಾತನ್ನು ಹೇಳಿದ್ದರು. ನಂಜುಂಡಪ್ಪನವರು ವರದಿ ಕೊಟ್ಟರು. ಹಿಂದುಳಿದ ತಾಲ್ಲೂಕುಗಳಿಗೆ ಸಾವಿರಾರು ಕೋಟಿ ಖರ್ಚು ಮಾಡಿದ ಮೇಲೆ, ನಂತರ, backward ಇದ್ದದ್ದು most backward ಆಗಿದೆ ಎನ್ನುವ ರಿಪೋರ್ಟ್ ಬಂತು. ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವುದಕ್ಕೆ ಮುಂದಾದರೆ ಅವರು, ಆ ಕೆಲಸವನ್ನು ಅವನು ಮಾಡಿದ, ಇವನು ಮಾಡಿದ ಎಂದು ಹೇಳುತ್ತಾರೆ. ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ಹಕ್ಕುಬಾಧ್ಯತಾ ಸಮಿತಿಯ ಅಧ್ಯಕ್ಷರಾಗಿದ್ದಾರೆ ಮತ್ತು ನಾನು ಆ ಸಮಿತಿಯ ಸದಸ್ಯನಾಗಿದ್ದೇನೆ. ತಪ್ಪು ಮಾಡಿದ ಅಧಿಕಾರಿ ಎಲ್ಲಾದರೂ ಸಿಗುತ್ತಾನೆಯೇ? ಆತ ನಿವೃತ್ತಿಯಾಗಿರುತ್ತಾನೆ ಅಥವಾ ಬೇರೆ ಇಲಾಖೆಗೆ ವರ್ಗಾವಣೆಯಾಗಿ ಹೋಗಿರುತ್ತಾನೆ. ಇದಕ್ಕೆ ಒಂದು ಶಾಶ್ವತ ಪರಿಹಾರ ಮಾಡದೇ ಇದ್ದರೆ we will be perished. ರಸ್ತೆಯಲ್ಲಿ ನಡೆದುಕೊಂಡು ಹೋದರೆ ಜನ ನಮ್ಮನ್ನು ಗೌರವದಿಂದ ನೋಡುತ್ತಿಲ್ಲ. ಒಂದು ಸಲ ನಾನು ಒಂದು ರಸ್ತೆಗೆ ಡಾಂಬರು ಹಾಕಿಸುವ ಸಂಬಂಧ ಮಾತನಾಡಿದಾಗ ಮೂರು ದಿವಸಕ್ಕೆ ಡಾಂಬರು ಹಾಕಿದರು; ಆದರೆ 20 ದಿವಸಗಳ ನಂತರ ಅದು ಕಿತ್ತುಕೊಂಡು ಹೋಯಿತು. Quality control ಎನ್ನುವುದು ಎಲ್ಲಿದೆ? ಯಾರು ಚೆಕ್ ಮಾಡುತ್ತಾರೆ?

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀಮತಿ ಭಾರತಿ ಶೆಟ್ಟಿಯವರು ಸಭಾಪೀಠವನ್ನಲಂಕರಿಸಿದರು)**

ಪ್ರಸ್ತುತ ವಿಚಾರವಾಗಿ ಹೇಳುವುದಾದರೆ, ಇವರ ಮೇಲೆ ತಕ್ಷಣ ಕ್ರಮ ಕೈಗೊಳ್ಳಬೇಕು ಇಲ್ಲವೇ ಜಂಟಿ ಸದನ ಸಮಿತಿ ಮಾಡಿ. ಅದರಲ್ಲಿ ಎಲ್ಲಾ ಪಕ್ಷದ ಸದಸ್ಯರು ಇರಲಿ. ಈ ಕುರಿತು ಆಳವಾಗಿ ಅಧ್ಯಯನ ಮಾಡೋಣ. ಹಣ ಎಲ್ಲಿ ಹೋಗುತ್ತಿದೆ? ಎಲ್ಲಿ ಏನಾಗುತ್ತಿದೆ? ಏಕೆ ಈ ರೀತಿ ಹೇಳುತ್ತಿದ್ದಾರೆ ಎನ್ನುವುದು ಗೊತ್ತಾಗಬೇಕು. ಹೀಗೆ ಮಾಡದೇ ಇದ್ದರೆ ಜನ ನಮ್ಮನ್ನು ಕ್ಷಮಿಸುವುದಿಲ್ಲ. ಸಭಾನಾಯಕರೇ, ತಾವು ಪ್ರಾಮಾಣಿಕರಾಗಿದ್ದೀರಿ ಎನ್ನುವುದು ನಮಗೆ ಗೊತ್ತಿದೆ. ನಮ್ಮನ್ನು ರಾಜಕೀಯಕ್ಕೆ ತಂದವರು ಮಾನ್ಯ ನಿಜಲಿಂಗಪ್ಪನವರು. ಅವರ ಜೀವನ ಹೇಗಿತ್ತು? ಬಸ್ ಸ್ಟ್ಯಾಂಡ್‌ನಿಂದ ಹೋಗಬೇಕಾದರೆ ಅವರಿಗೊಂದು ಕಾರು ಇರಲಿಲ್ಲ. ಮಾನ್ಯ ವೀರೇಂದ್ರ ಪಾಟೀಲರು ಸಾಯಬೇಕಾದರೆ 80 ಲಕ್ಷ ರೂಪಾಯಿಗಳ ಸಾಲ ಇತ್ತು. ಮಂತ್ರಿಯಾಗಿದ್ದ ಮಾನ್ಯ ಬೋರಯ್ಯನವರು ಜಟಕಾ ಗಾಡಿಯಲ್ಲಿ ಹೋಗುತ್ತಿದ್ದರು. ಮಾನ್ಯ ಎಂ.ವಿ.ರಾಮರಾಯರು ಮುಂತಾದ ನಾಯಕರನ್ನು ಕೊಟ್ಟ ನಾಡು ನಮ್ಮದು. ಇವತ್ತು ನಾವು ಯಾವ ಹೆಸರನ್ನು ತೆಗೆದುಕೊಂಡು ಹೊರಗೆ ಹೋಗುತ್ತಿದ್ದೇವೆ? ಇದರ ಬಗ್ಗೆ ನಾವು ಚಿಂತನೆ ಮಾಡಬೇಕಿದೆ. ಈ ವಿಚಾರದಲ್ಲಿ ಕಾಂಗ್ರೆಸ್, ಬಿಜೆಪಿ ಅಥವಾ ಜನತಾದಳ ಎಂದು ನೋಡಬೇಡಿ. ಇವೆಲ್ಲವನ್ನೂ ಬಿಟ್ಟು ನಾವು

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಹೊರಗೆ ಬರಬೇಕು. ಮೊನ್ನೆ ವಿಧಾನ ಪರಿಷತ್ತಿಗೆ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯಿತು. ದುಡ್ಡನ್ನು ಹರಾಜು ಹಾಕುವ ರೀತಿಯಲ್ಲಿ ಇತ್ತು. ರೂ. 25 ಸಾವಿರ, 50 ಸಾವಿರ, 1 ಲಕ್ಷ ನಡೆಯುತ್ತಿತ್ತು. ಇದರಲ್ಲಿ ಮೂರು ಪಕ್ಷದವರೂ ಇದ್ದರು. ಯಾರೋ ಒಬ್ಬ ಗಲಿ ಜಬ್ಬಾರ್ ಎನ್ನುವವನನ್ನು ಕರೆದುಕೊಂಡು ಬಂದರು. ಆತ ಬರುವಾಗ ರೋಲ್ಸ್ ರಾಯ್ ಕಾರ್‌ನಲ್ಲಿ ಬಂದು ಚುನಾವಣೆ ಮುಗಿದ ಮೇಲೆ ಆಟೋ ರಿಕ್ಷಾದಲ್ಲಿ ಹೋದ. ಆತ, " ಚಡ್ಡಿ ಏಕ್ ಬಚಾ ಹೈ, ಬಹಾರ್ ಕಾ ಸಬ್ ಗಯಾ ಹೈ, ಇಸ್ ಲಿಯೇ ಮೇ ಆಟೋ ಮೇ ಜಾ ರಹಾ ಹೂ" ಎಂದು ಹೇಳಿದ. ಪರಿಸ್ಥಿತಿ ಹೀಗಾದರೆ ನಾವು ಎಲ್ಲಿಗೆ ಹೋಗಿ ನಿಲ್ಲುತ್ತೇವೆ? ಹಿಂದೆಲ್ಲಾ, ರಾಜಕಾರಣಿಗಳು ಭಾಷಣಕ್ಕೆ ಬರುತ್ತಾರೆ ಎಂದರೆ ಹತ್ತು ಸಾವಿರ ಜನ ಸೇರುತ್ತಿದ್ದರು. ಬಂದ ಜನರೆದುರಿಗೆ ಮಾತನಾಡುವ ಅಭ್ಯಾಸ ಹೊಂದಿರುವವರು ನಾವು. ಆದರೆ, ಈಗ ತಂದ ಜನಕ್ಕೆ ಭಾಷಣ ಮಾಡಬೇಕಿದೆ. ಭಾಷಣ ಕೇಳುವುದಕ್ಕೆ ಜನ ಬರುವುದೇ ಇಲ್ಲ. ಶೇಕಡ 60 ರಷ್ಟು ಜನ, ದುಡ್ಡು ಇಲ್ಲದ ಈತ ಏಕೆ ಚುನಾವಣೆಗೆ ನಿಂತ ಎಂದು ಹೇಳಿಕೊಳ್ಳುವಂತಾಗಿದೆ. ಶೇಕಡ 60 ರಷ್ಟು ಮತಗಳು ಖರೀದಿ ಮಾಡುವಂಥದ್ದಾಗುತ್ತಿದೆ. ಕಾರಣ ಇಂತಹ ಸ್ಟೇಟ್‌ಮೆಂಟ್‌ಗಳು. ಅವರು ದೂರು ನೀಡುತ್ತಿದ್ದಾರೆ, ಆದರೆ ನೀವು ತಿಂದಿಲ್ಲ ಎಂದು ಹೇಳುತ್ತಿದ್ದೀರಿ, ಹಾಗಾದರೆ ಆಪಾದನೆ ಮಾಡಿದವರ ಮೇಲೆ ಏಕೆ ಕ್ರಮ ಕೈಗೊಳ್ಳಲಿಲ್ಲ ಎಂದು ಕೇಳುತ್ತಿದ್ದಾರೆ. ಮಾನ್ಯ ಸಿದ್ದರಾಮಯ್ಯನವರು, ನಾನು ಅಕ್ಕಿ ಕೊಟ್ಟೆ ಎಂದು ಹೇಳಿಕೊಂಡು ಚುನಾವಣೆ ಎದುರಿಸಲು ಹೋದರು. ಆಗ ನಾನು, ನೀವು ಅಕ್ಕಿ ಕೊಟ್ಟಿರಬಹುದು, ಆದರೆ ಓಟು ಹಾಕಬೇಕಾದರೆ fresh ಆಗಿ ಏನು ಕೊಟ್ಟಿರಿ ಎಂದು ಕೇಳಿದೆ. ಅದು ಮುಖ್ಯ. ಇಷ್ಟೆಲ್ಲಾ ಮಾಡಿದ ಮೇಲೂ ಬಂದ ಸೀಟುಗಳು 80 ಮಾತ್ರ. ಮುಂದೆ ನಮ್ಮ ಗತಿ ಏನಾಗುತ್ತದೆ; ನಿಮ್ಮ ಗತಿ ಏನಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಉಪಚುನಾವಣೆ ವಿಷಯ ಬಿಟ್ಟು ಬಿಡೋಣ. ಆದರೆ general election ಆದಮೇಲೆ ನೀವು ಈ ಕಡೆ ಕುಳಿತುಕೊಳ್ಳುತ್ತೀರೋ ಆ ಕಡೆ ಕುಳಿತುಕೊಳ್ಳುತ್ತೀರೋ ಗೊತ್ತಿಲ್ಲ. ಆದರೆ ನಾವು ಇದ್ದಷ್ಟು ದಿನ, what we have done ಎಂಬುದನ್ನು ತಿಳಿದುಕೊಳ್ಳಬೇಕು. ಈ ವಿಚಾರವನ್ನು ರಾಜ್ಯ ಸರ್ಕಾರದ ಮತ್ತು ದೇಶದ ಗಮನಕ್ಕೆ ತರುವಂತಹ ಕೆಲಸ ಮಾಡಿದ್ದೇನೆ. ಇದು ನನ್ನ ಕರ್ತವ್ಯ ಕೂಡ ಆಗಿದೆ. ಮಹಾಭಾರತದಲ್ಲಿ ಹೇಳುವ ಹಾಗೆ, ಇನ್ನು ಮುಂದಿನ ಫಲಾಫಲಗಳು ನಿಮಗೆ ಬಿಟ್ಟಿದ್ದು. ಇದು ಎಲ್ಲರಿಗೂ ಅನ್ವಯಿಸುತ್ತದೆ. ನೀವು ಈ ವಿಚಾರದಲ್ಲಿ ಕ್ರಮ ಕೈಗೊಳ್ಳಬೇಕು. ನಾನು ಸದನಕ್ಕೆ ಈ ವಿಷಯ ತಂದಿದ್ದೇನೆ. ಅವರು ಈಗ ನನ್ನ ಮೇಲೆ ಏನು ಮಾಡುತ್ತಾರೋ ಗೊತ್ತಿಲ್ಲ. ಏಕೆಂದರೆ ಅವರೆಲ್ಲಾ ಬಲ ಹೊಂದಿದವರಾಗಿದ್ದಾರೆ. ಐದು ಲಕ್ಷ ರೂಪಾಯಿಗಳನ್ನು ಕೊಟ್ಟರೆ ಸಾಕು ಸುಪಾರಿ ಕಿಲ್ಲರ್‌ಗಳು ಬಡಿದು ಹೋಗುತ್ತಾರೆ. ಆ ಅಶ್ವತ್‌ನಾರಾಯಣ ಕಣ್ಣೀರು ಹಾಕಿಕೊಂಡು ಅಳುತ್ತಿದ್ದ. ಯಾರು ಯಾವಾಗ ಬಂದು ಹೊಡೆಯುತ್ತಾರೋ ಗೊತ್ತಿಲ್ಲ. "ಮುಲ್ಕ್ ಅಲ್ಲಾಹ್ ಕಾ, ಸಾಯಾ ರಸೂಲ್ ಕಾ, ದಿಯಾ ಉಸ್ ಕಾ ಭೀ ಭಲಾ, ನಹೀ ದಿಯಾ ಉಸ್ ಕಾ ಭೀ ಭಲಾ" ಎಂದು, "ಜಯ ನಮೋ ಪಾರ್ವತಿ ಪತಯೇ ಹರ ಹರ ಮಹಾದೇವ್" ಎಂದು ಜಂಗಮರು ಜೋಳಿಗೆ ಹಾಕಿಕೊಂಡು ಹೋಗುವ ಹಾಗೆ ಹೊರಟಿದ್ದೇವೆ. ನಮಗೇನಾಗುತ್ತದೆಯೋ ಗೊತ್ತಿಲ್ಲ. ಸೆಕ್ಯೂರಿಟಿ ಕೊಡಿ ಎಂದು ಕೇಳಿದರೆ, Chief Secretary ಅಧ್ಯಕ್ಷತೆಯಲ್ಲಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಭೆ ಇದೆ, ಸಭೆಯನ್ನು ಮಾಡಿ ನಂತರ ನಿಮಗೆ ಸೆಕ್ಯೂರಿಟಿ ಕೊಡುತ್ತೇವೆ ಎಂದು ಹೇಳುತ್ತಾರೆ. ನೀವು ಸೆಕ್ಯೂರಿಟಿ ಕೊಡದೇ ಇದ್ದರೂ ಪರವಾಗಿಲ್ಲ; ಆದರೆ ಸತ್ತ ಮೇಲೆ ಸಂತಾಪ ಸೂಚನೆ ಮಾಡುವುದಕ್ಕೆ ಹೋಗಬೇಡಿ. ಕಾಲ ಎನ್ನುವುದು ಬಹಳ ವಿಚಿತ್ರವಾಗಿ ಹೋಗುತ್ತಿದೆ. ಭ್ರಷ್ಟಾಚಾರ ಅತಿಯಾಗಿದೆ. ಹಿಂದೆ, ಮಾನ್ಯ ನರಸಿಂಹರಾಯ ಎನ್ನುವ ಅಧಿಕಾರಿಯ ಜೊತೆ ನಾನು ಕೆಲಸ ಮಾಡಿದ್ದೇನೆ. ಲಕ್ಷ್ಮಣ ರಾಯರು, ನಂಜುಂಡಪ್ಪನವರಂತಹ ಅಧಿಕಾರಿಗಳಿದ್ದರು. ಮಾನ್ಯ ಮೇಲ್ಕೋಟೆಯವರು, ಮಾನ್ಯ ಲಿನ್‌ನವರು. ಎರಡು ಚಪಾತಿಗಳನ್ನು ಪ್ಯಾಕೆಟ್‌ನಲ್ಲಿ ಕಟ್ಟಿಕೊಂಡು ಬಂದು ಮಧ್ಯಾಹ್ನ ತಿಂದು ಹೋಗುತ್ತಿದ್ದರು. ಇಂತಹ ಐಎಎಸ್ ಅಧಿಕಾರಿಗಳಿದ್ದರು. ಇವತ್ತು ಏನಾಗಿದೆ? ನಾನು ಕೇಂದ್ರದಲ್ಲಿದ್ದಾಗ ನಾನು ಕಂಡಿರುವ ಹಾಗೆ, ಶೇಕಡ 99 ರಷ್ಟು ಐಎಎಸ್ ಅಧಿಕಾರಿಗಳು ಪ್ರಾಮಾಣಿಕರಾಗಿದ್ದರು. ಶ್ರೀ ಪಿ.ಸಿ. ಸೇನ್, ಶ್ರೀ ಅನಿಲ್ ಬೈಜಲ್ ಅಂತಹ ಅಧಿಕಾರಿಗಳಿದ್ದರು. ಬೇರೆಯವರು ನನ್ನ ಹತ್ತಿರ ಬಂದು, ಇವರೆಲ್ಲಾ ಆರ್‌ಎಸ್‌ಎಸ್, ಭಜರಂಗದಳದವರು; ಇವರನ್ನು ತೆಗೆದುಕೊಳ್ಳಬಾರದು ಎಂದು ಹೇಳಿದರು. ಆಗ ನಾನು ಅವರು ಆರ್‌ಎಸ್‌ಎಸ್‌ನವರಾಗಿರಲಿ ಅಥವಾ ಭಜರಂಗ ದಳದವರಾಗಿರಲಿ, I am not bothered. If he is honest, I will take ಎಂದು ಹೇಳಿದೆ. ಅಂತಹ ಸುಮಾರು 70 ಜನ ಐಎಎಸ್-ಐಪಿಎಸ್ ಅಧಿಕಾರಿಗಳನ್ನು ಇಟ್ಟುಕೊಂಡು ಕೇಂದ್ರದಲ್ಲಿ ಎರಡನೆಯ ಸ್ಥಾನದಲ್ಲಿದ್ದು ಕೊಂಡು ಕೆಲಸ ಮಾಡಿದೆವು. I am the first Minister who brought Indian Airlines - Air India into profit. ಇದಕ್ಕೆ ನಾನೊಬ್ಬನೇ ಕಾರಣ ಅಲ್ಲ. ಶ್ರೀ ಅನಿಲ್ ಬೈಜಲ್‌ನವರು ಇವತ್ತು ದೆಹಲಿಯಲ್ಲಿ Lieutenant Governor ಆಗಿದ್ದಾರೆ. ಇಂತಹ ಅಧಿಕಾರಿಗಳು ನಮ್ಮ ರಾಜ್ಯ ಸರ್ಕಾರದಲ್ಲಿ ಬೆರಳೆಣಿಕೆಯಷ್ಟು ಮಾತ್ರ ಇದ್ದಾರೆ.

(ಮುಂದು)

(1294) 23-12-2021 1.10 DS-AK **(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಸಿ.ಎಂ.ಇಬ್ರಾಹಿಂ(ಮುಂದು):-**

ಆದ್ದರಿಂದ ಇವತ್ತು ಸರ್ಕಾರದವರು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಸಮಾಲೋಚನೆ ಮಾಡಬೇಕಾಗುತ್ತದೆ. ಲಂಚ ಕೊಡುವುದು ಅಪರಾಧ, ಅದೇರೀತಿ ಲಂಚ ತೆಗೆದುಕೊಳ್ಳುವುದು ಸಹ ಅಪರಾಧ. ಮಾನ್ಯ ಸಹೋದರಿಯವರು ಹೇಳಿದ ಹಾಗೆ ಇದರ ಬಗ್ಗೆ ಒಂದು ವಿಧೇಯಕವನ್ನು ತಂದುಬಿಡಿ. ಲಂಚ ಕೊಡುವುದು ಅಪರಾಧವಲ್ಲ, ಲಂಚ ತೆಗೆದುಕೊಳ್ಳುವುದು ಅಪರಾಧ ಎಂದು ಹೇಳಿಬಿಡಿ ಶೇಕಡ 90 ರಷ್ಟು ಲಂಚ ತೆಗೆದುಕೊಳ್ಳುವುದು ಕಡಿಮೆಯಾಗಿಬಿಡುತ್ತದೆ. ಏಕೆಂದರೆ, ಲಂಚ ಕೊಟ್ಟವನಿಗೆ ಹೇಳುವುದಕ್ಕೆ ಧೈರ್ಯ ಇಲ್ಲ. ಅವರಿಗೆ ಕೆಲಸ ಆಗಬೇಕು ಅಷ್ಟೆ. ನಾನು ಈಗ ವ್ಯವಹಾರದಲ್ಲಿಲ್ಲ. ನಿಮ್ಮ ಹೆಸರು ಹೇಳಿದರೂ ಕೆಲಸ ಆಗುವುದಿಲ್ಲ. ನಿಮ್ಮ ಹೆಸರು ಹೇಳಿದರೆ ಯಾರು ದುಡ್ಡು ತೆಗೆದುಕೊಳ್ಳುವುದಿಲ್ಲ, ನಾವು ಯಾವುದಕ್ಕೂ ಇಲ್ಲದ ಹಾಗೆ ಆಗಿಬಿಟ್ಟಿದ್ದೇವೆ ಎಂದು ನನ್ನ ಮಗ ಹೇಳುತ್ತಾನೆ. ನಾನು ಕೂಡ ಮಂತ್ರಿಯಾಗಿದ್ದೆ. ವರ್ಗಾವಣೆ ಮಾಡಿಕೊಡುವುದಕ್ಕೆ ಆ ಕಾಲದಲ್ಲಿ ಯಾರು ಹಣ ತೆಗೆದುಕೊಳ್ಳುತ್ತಿರಲಿಲ್ಲ. ಆದರೆ ಇವತ್ತು ದುರ್ದೈವ. ತಮ್ಮ ಮುಖಾಂತರ ನಾನು ಕೈಮುಗಿದು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರಾರ್ಥನೆ ಮಾಡುತ್ತೇನೆ, ದಯವಿಟ್ಟು ಈ ರಾಜ್ಯದ ಗೌರವವನ್ನು ಉಳಿಸಿ ಎಂದು ಹೇಳಬಯಸುತ್ತಿದ್ದೇನೆ. ನನ್ನ ಮಾತಿನಿಂದ ನೋವಾಗಿದ್ದರೆ ನಾನು ಕ್ಷಮೆ ಕೇಳುತ್ತೇನೆ. ನಾನು ನೋವುಂಟು ಮಾಡಬೇಕೆನ್ನುವ ಉದ್ದೇಶವಿಲ್ಲ. ನಾನು maximum achieve ಮಾಡಿಬಿಟ್ಟಿದ್ದೇನೆ. ನಾನು ಅಲ್ಲಿಯ ತನಕ ಹೋಗಿ ಆಗಿದೆ. ನನಗೆ ಇಲ್ಲಿ ಸ್ಥಾನ ಇಲ್ಲದಿದ್ದರೂ ಕನ್ನಡ ನಾಡಿನ ಜನತೆಯ ಹೃದಯ ಸಿಂಹಾಸನದಲ್ಲಿ ಸ್ಥಾನ ಇದೆ. “ಇವನಾರವ, ಇವನಾರವ, ಇವನಾರವ ಎಂದೆನಿಸದಿರಯ್ಯಾ, ಇವ ನಮ್ಮವ, ಇವ ನಮ್ಮವ, ಇವ ನಮ್ಮವ ಎಂದೆನಿಸಯ್ಯಾ” ಎಂದು ಹೇಳಿದ ಹಾಗೆ ನಾನು ಯಾರ ಮನೆಗೆ ಹೋದರೂ ಒಂದಿಷ್ಟು ಪ್ರಸ್ಥಾದ ನನಗೆ ಸಿಗುತ್ತದೆ. ನನಗೆ ಜಾತಿ ಇಲ್ಲ, ಕುಲ ವಿಲ್ಲ, ಮತವಿಲ್ಲ. ಹಿಂದೆ ನಮ್ಮಲ್ಲಿದ್ದ ಅನೇಕ ಜನರು ಬಿಜೆಪಿಗೆ ಹೋಗಿದ್ದಾರೆ. ಅವರ ಊರಿಗೆ ಹೋದರೆ ಅವರ ಮನೆಗೆ ಹೋಗಿ ಮಾತನಾಡಿಸಿಕೊಂಡು ಬರುತ್ತೇನೆ. ಏಕೆಂದರೆ, ಸ್ನೇಹ ಮುಖ್ಯ. ಇವತ್ತು ನಾನು ಕಾಂಗ್ರೆಸ್ ಪಕ್ಷದಲ್ಲಿರಬಹುದು, ಸ್ನೇಹಕ್ಕೆ ಏನಿದೆ? ಇವತ್ತು ಯಾವುದೇ ವಿಧವಾದಂತಹ ಶತೃತ್ವವನ್ನಿಟ್ಟುಕೊಂಡಿಲ್ಲ. ಆದ್ದರಿಂದ ಈ ವಿಚಾರವನ್ನು ಇವತ್ತು ಪ್ರಸ್ತಾಪ ಮಾಡಿದ್ದೇನೆ. ಈ ವಿಚಾರವನ್ನು ಗಂಭೀರವಾಗಿ ತೆಗೆದುಕೊಂಡು ಏನಾದರೂ ಕ್ರಮವನ್ನು ತೆಗೆದುಕೊಳ್ಳಿ. ಇವರಿಗೆ ಒಂದು ನೋಟಿಸ್ ಕೊಟ್ಟು ಕರೆಯಿಸಿ. ಇವರಿಗೆ suo-moto action ತೆಗೆದುಕೊಂಡಿದ್ದೇವೆಂದು ಹೇಳಿದರೆ ನಾವು ಹೊರಗಡೆ ಹೋಗಿ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆ. ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ವೈಸ್ ಛೇರ್ಮನ್:-** ಮಾನ್ಯ ಮರಿತಿಬ್ಬೇಗೌಡರೇ, ತಾವು ಮಾತನಾಡಿ.

**ಶ್ರೀ ಗೋವಿಂದ ಎಂ.ಕಾರಜೋಳ(ಜಲಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೇ, ನಿನ್ನೆ ಪ್ರಸ್ತಾಪ ಮಾಡಿರುವ ನೀರಾವರಿ ಯೋಜನೆಗಳ ಬಗ್ಗೆ ನಾನು ಈಗ ಉತ್ತರ ಕೊಡುತ್ತೇನೆ. ನಂತರ ಮಾನ್ಯ ಮರಿತಿಬ್ಬೇಗೌಡರು ಮಾತನಾಡಲಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಈ ವಿಚಾರ ಮಾತನಾಡಿ ಆಗಿರುವುದರಿಂದ ನಾನು ಕೂಡ ಐದು ನಿಮಿಷ ಮಾತನಾಡಿ ಬೇಗ ಮುಗಿಸುತ್ತೇನೆ.

**ವೈಸ್ ಛೇರ್ಮನ್:-** ಮಾನ್ಯ ಮರಿತಿಬ್ಬೇಗೌಡರೇ, ಮಾನ್ಯ ಸಚಿವರು ಉತ್ತರ ಕೊಟ್ಟ ಮೇಲೆ ತಾವು ಮಾತನಾಡಿ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಮರಿತಿಬ್ಬೇಗೌಡರೇ, ಮಾನ್ಯ ಇಬ್ರಾಹಿಂ ರವರು ಪ್ರಾರ್ಥನೆ ಮಾಡುವುದಕ್ಕೆ ಹೋಗಬೇಕೆಂದು ಹೇಳಿದರು, ಅದಕ್ಕಾಗಿ ನಾನು ಆಯಿತು ಎಂದು ಒಪ್ಪಿಕೊಂಡೆ.

ಅವರು ಚರ್ಚೆ ಮಾಡುವುದಕ್ಕೆ ನಮಗೇನು ತಕರಾರು ಇಲ್ಲ. ಸರ್ಕಾರ ಉತ್ತರ ಕೊಡುತ್ತದೆ. ಆದ್ದರಿಂದ ಅವರಿಗೆ ಅವಕಾಶ ಕೊಡಲಾಯಿತು.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):- :-** ಯಾವಾಗ ಅವಕಾಶ ಕೊಡುತ್ತೀರಿ ಎಂಬುದನ್ನು ಹೇಳಿ. ನಾವು ಆ ಚರ್ಚೆಯಲ್ಲಿ ಭಾಗವಹಿಸಬೇಕು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಯಾವಾಗ ಅವಕಾಶ ಕೊಡುತ್ತೀರಿ ಎಂಬುದನ್ನು ಹೇಳಿ.

**ವೈಸ್ ಛೇರ್ಮನ್:-** ಮಾನ್ಯ ಸಚಿವರು ಉತ್ತರ ಕೊಟ್ಟ ನಂತರ ತಮಗೆ ಅವಕಾಶ ಕೊಡುತ್ತೇನೆ.

**ಶ್ರೀ ಶಶಿಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದ ಬಗ್ಗೆ, ಕಲ್ಯಾಣ ಕರ್ನಾಟಕದ ಬಗ್ಗೆ ಇನ್ನು ಕೆಲವರು ಮಾತನಾಡುವವರು ಇದ್ದಾರೆ. ಬಹಳಷ್ಟು ಜನರು ಮಾತನಾಡುವುದಕ್ಕೆ ಹೆಸರು ಕೊಟ್ಟಿದ್ದಾರೆ. ಅವರೆಲ್ಲಾ ಮಾತನಾಡಿದ ಮೇಲೆ ಉತ್ತರ ಕೊಡಬೇಕೆಂದು ನಾನು ಕೇಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಇಬ್ರಾಹಿಂ ರವರು ನಿಯಮ 330 ರಡಿಯಲ್ಲಿ ಪ್ರಶ್ನೆಯನ್ನು ಕೇಳಿದ್ದಾರೆ. ಸರ್ಕಾರ ಉತ್ತರ ಕೊಡುವುದಕ್ಕೆ ತಯಾರಿದೆ. ಆದರೆ ಬೇರೆಯವರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರಾ?

**ವೈಸ್ ಛೇರ್ಮನ್:-** ಮಾನ್ಯ ಸಚಿವರೇ, ಈಗ ನಿಯಮ 330 ಕ್ಕೆ ಉತ್ತರ ಕೊಡಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆ ವಿಷಯದ ಬಗ್ಗೆ ನಾವು ಕೂಡ ಚರ್ಚೆಯಲ್ಲಿ ಭಾಗವಹಿಸಬೇಕಾಗಿದೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಈಗ ಆ ವಿಷಯ ಇಲ್ಲಿಗೆ ನಿಲ್ಲಿಸಿ. ನಾನು ಉತ್ತರ ಕೊಡುತ್ತೇನೆ. ನೀರಾವರಿ ಯೋಜನೆಗಳ ಬಗ್ಗೆ ದಿನಗಟ್ಟಲೇ ಚರ್ಚೆ ಮಾಡಿದ್ದಾರೆ. ಉತ್ತರ ಕರ್ನಾಟಕದ ಯೋಜನೆಗಳ ಬಗ್ಗೆಯೇ ಚರ್ಚೆ ಮಾಡಿದ್ದಾರೆ. ಉತ್ತರ ಕೊಡದಿದ್ದರೆ ಕಷ್ಟವಾಗುತ್ತದೆ. ಈಗ ತಾವು ಉತ್ತರ ಕೊಡಿ ಎಂದು ಹೇಳಿದ್ದೀರಿ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಕಲ್ಯಾಣ ಕರ್ನಾಟಕದ ಬಗ್ಗೆ ಉತ್ತರ ಕರ್ನಾಕದ ಬಗ್ಗೆ ನಾನು ಕೂಡ ಮಾತನಾಡಬೇಕಾಗಿದೆ.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಚಿವರೇ, ಇದರ ಬಗ್ಗೆ ಮಾತನಾಡಬೇಕೆಂದು ನಮ್ಮ ಕಡೆಯಿಂದ ನಾವು ಪಟ್ಟಿಯನ್ನು ಕೂಡ ಕೊಟ್ಟಿದ್ದೇವೆ. ಇನ್ನು 3-4 ಜನರಿಗೆ ಅವಕಾಶ ಕೊಡುತ್ತೇವೆಂದು ಮಾನ್ಯ ಸಭಾಪತಿಯವರು ಹೇಳಿದ್ದಾರೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಬಹಳ ಪ್ರಮುಖವಾಗಿ ಅವರ ಪಕ್ಷದ ನಾಯಕರು 2 ಗಂಟೆ 37 ನಿಮಿಷ ಮಾತನಾಡಿದ್ದಾರೆ. ಅದಲ್ಲದೆ ಇನ್ನೂ 10 ಸದಸ್ಯರು ಮಾತನಾಡಿದ್ದಾರೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ? ನಾನು ಕೂಡ ನೀರಾವರಿ ಯೋಜನೆಗಳ ಬಗ್ಗೆ ಮಾತನಾಡುತ್ತೇನೆಯೇ ಹೊರತು ಬೇರೇನೂ ಇಲ್ಲ.

**ವೈಸ್ ಛೇರ್ಮನ್:-** ನಿಯಮ ೩೩೦ರ ಅಡಿಯಲ್ಲಿ ಚರ್ಚೆಯಾಗುತ್ತಿದೆ. ಅದಕ್ಕೆ ಉತ್ತರವನ್ನು ಕೊಟ್ಟ ನಂತರ ನಿಮ್ಮ ಉತ್ತರವನ್ನು ಕೊಡಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಇಬ್ರಾಹಿಂರವರು ನಿಯಮ 330ರ ಅಡಿಯಲ್ಲಿ ಏನು ವಿಷಯವನ್ನು ತಂದಿದ್ದಾರೆ, ಅದರ ಬಗ್ಗೆ ನಾವು ಮಾತನಾಡುತ್ತೇವೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಮಾನ್ಯ ಇಬ್ರಾಹಿಂ ಸಾಹೇಬರ ವಿಚಾರಕ್ಕೆ ನಾನು ಉತ್ತರವನ್ನು ಕೊಡುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ನಾವೆಲ್ಲರೂ ಮಾತನಾಡಬೇಕಾಗಿದೆ, ಆದರೆ ನಾವು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಉತ್ತರ ಕರ್ನಾಟಕದವರಾದರೂ ಒಂದಿಬ್ಬರು ಮಾತನಾಡಲಿ ಎನ್ನುತ್ತೇವೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಈ ರೀತಿ ಎಲ್ಲರೂ ಮಾತನಾಡುತ್ತಿದ್ದರೆ ಇದು ಮುಗಿಯದ ಕೆಲಸ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನಾವ್ಯಾರು ಮಾತನಾಡುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಿಯಮ 330ರ ಅಡಿಯಲ್ಲಿ ಮಾನ್ಯ ಇಬ್ರಾಹಿಂರವರು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ನಾವು ಉತ್ತರವನ್ನು ಕೊಡುತ್ತೇವೆ. ಆನಂತರ ಅರ್ಧ ಗಂಟೆ ಕಾಲಾವಧಿ ಚರ್ಚೆ, ಉತ್ತರ ಕರ್ನಾಟಕದ ವಿಚಾರ ಎಲ್ಲವನ್ನು ಚರ್ಚೆಗೆ ತೆಗೆದುಕೊಳ್ಳಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ನಾವೆಲ್ಲರೂ ಮಾತನಾಡಬೇಕಾಗಿತ್ತು, ಆದರೆ ನಾವ್ಯಾರು ಮಾತನಾಡುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಿಯಮ 330ರ ಅಡಿಯಲ್ಲಿ ಮಾನ್ಯ ಇಬ್ರಾಹಿಂರವರು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ನಾವು ಉತ್ತರವನ್ನು ಕೊಡುತ್ತೇವೆ. ನಂತರ ತಾವು ನಿರ್ಧಾರ ಮಾಡಿ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಮಾನ್ಯ ಇಬ್ರಾಹಿಂ ಸಾಹೇಬರು ಶ್ರೀಮಾನ್ ನಿಜಲಿಂಗಪ್ಪನವರ ಕಾಲದಿಂದಲೂ.....

(ಗೊಂದಲ)

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಿಯಮ 330ಕ್ಕೆ ಉತ್ತರವನ್ನು ಕೊಡಲಿ, ನಾವು ನಂತರ ಮಾತನಾಡೋಣ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನನಗೆ 5 ನಿಮಿಷಗಳ ಕಾಲ ಮಾತನಾಡಲು ಅವಕಾಶ ಮಾಡಿಕೊಡಿ.

**ವೈಸ್ ಛೇರ್ಮನ್:-** ಮಾನ್ಯ ಸಚಿವರು ಉತ್ತರವನ್ನು ಕೊಟ್ಟ ನಂತರ ನೀವು ಬೇಕಾದರೆ ಅವರ ಬಳಿ ಸ್ಪಷ್ಟೀಕರಣವನ್ನು ಕೇಳಿಕೊಳ್ಳಿ, ಈಗ ದಯಮಾಡಿ ಕುಳಿತುಕೊಳ್ಳಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಈಗ ಸರ್ಕಾರದ ಪರವಾಗಿ ಅವರು ಉತ್ತರವನ್ನು ನೀಡುತ್ತಿದ್ದಾರೆ, ನೀವು ನಂತರ ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಕೊಟ್ಟ ನಂತರ ಮಾತನಾಡುವುದು ಏನಿದೆ?

**ಶ್ರೀ ಗೋವಿಂದ ಎಂ.ಕಾರಜೋಳ(ಜಲಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೇ, ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ವಿಧಾನಸೌಧವನ್ನು ಕಟ್ಟಿದ್ದರಿಂದ ಹಿಡಿದು ಇವತ್ತಿನವರೆವಿಗೂ ಆಪಾದನೆಗಳು, ಭ್ರಷ್ಟಾಚಾರದ ಬಗ್ಗೆ ಮಾತನಾಡುವುದು ಎಲ್ಲಾ ಕಾಲದಲ್ಲಿಯೂ ನಡೆದಿದೆ. ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರುತ್ತೇನೆ. ವಿಧಾನಸೌಧವನ್ನು ಕಟ್ಟಿದಂಥ ಕೆಂಗಲ್ ಹನುಮಂತಯ್ಯನವರು ಪ್ರಾಮಾಣಿಕರು. ಅವರ ಮೇಲೆಯೇ ಆಪಾದನೆಯಾಗಿ, ವಿಧಾನ ಸಭೆಯಲ್ಲಿಯಲ್ಲಿ ಚರ್ಚೆಯಾಯಿತು. ವಿಧಾನಸೌಧವನ್ನು ಕಟ್ಟುವುದರಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪವನ್ನು ಮಾಡಿದರು. ನಾನು ಫೋಟೋ ಸಹಿತ ಇಟ್ಟುಕೊಂಡಿದ್ದೇನೆ, ಇದು ನಿಮಗೆ ಗೊತ್ತಿರಲಿ. ನಾನು ಇದಿಷ್ಟನ್ನು ಹೇಳುವುದಕ್ಕೆ ಹೋಗುವುದಿಲ್ಲ. ಬಹಳ ಸಂಕ್ಷಿಪ್ತವಾಗಿ ಅವರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದನ್ನು ಮಾತ್ರ ಹೇಳಲಿಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಯಾರೋ ಒಬ್ಬರು ಕಾಂಟ್ರ್ಯಾಕ್ಟರ್ ಕೆಂಪಯ್ಯ ಎನ್ನುವವರು ಆಪಾದನೆಯನ್ನು ಮಾಡಿದ್ದಾರೆ. ಅವರ ಸಂಘದಲ್ಲಿರತಕ್ಕಂಥ ಸದಸ್ಯರು ಕೇವಲ 800 ಜನ. ರಾಜ್ಯದಲ್ಲಿ ನೋಂದಾಯಿತ ಗುತ್ತಿಗೆದಾರರು 42,000 ಜನ ಇದ್ದಾರೆ. ನಾನೇಕೆ ಇದನ್ನು ಸದನದ ಮಾಹಿತಿಗಾಗಿ ಇಡುತ್ತಿದ್ದೇನೆಂದರೆ, ಸತ್ಯ ಗೊತ್ತಾಗಲಿ ಎಂದು. ನಾನು ಒಂದು ವಿಚಾರವನ್ನು ಹೇಳಲಿಕ್ಕೆ ಬಯಸುತ್ತೇನೆ. 42,000 ಜನರ ಅಭಿಪ್ರಾಯ 800 ಜನರ ಅಭಿಪ್ರಾಯವಾಗುವುದಿಲ್ಲ ಮತ್ತು ಆಪಾದನೆಯನ್ನು ಮಾಡುವುದು ಅಂದರೆ ಗಾಳಿಯಲ್ಲಿ ಗುಂಡು ಹೊಡೆಯತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಅವರು ಆಪಾದನೆ ಮಾಡಿದ್ದು ಏನು, 'ಶಾಸಕರು', ಶಾಸಕರು ಎಂದರೆ ಒಂದೇ ಪಕ್ಷದವರಲ್ಲ. ಈ ಸದನ, ಆ ಸದನ ಮತ್ತು ಕೆಲವು ಸಂಸತ್ ಸದಸ್ಯರು, ಸಚಿವರು, ಅಧಿಕಾರಿಗಳು ಎಂದು ಹೇಳಿದ್ದಾರೆ. ಅವರ ಆಪಾದನೆ ಏನೆಂದರೆ, ಶೇಕಡ 40ಕ್ಕೆ ಹೆಚ್ಚಾಗಿದೆ ಎನ್ನುತ್ತಾರೆ. ಹಾಗಾದರೆ ಇಲ್ಲಿರತಕ್ಕಂಥ ಸುಮಾರು 70 ಜನ ಕೆಳಮನೆಯಲ್ಲಿರಕ್ಕಂಥ ಸುಮಾರು 220 ಜನ ಎಲ್ಲರೂ ಭ್ರಷ್ಟಾಚಾರವನ್ನು ಮಾಡಿದ್ದಾರೆ ಎಂದು ಅರ್ಥವೇ? ಎಲ್ಲರೂ ಕಮಿಶನ್ ಪಡೆದಿದ್ದಾರೆ ಎಂದು ಅರ್ಥವೇ? ಈ ಆಪಾದನೆಯಲ್ಲಿ ಹುರುಳಿಲ್ಲದ ಒಂದು ಅಂಶವೇನೆಂದರೆ ಅವರು ನಾವು ಶೇಕಡ 40ರಷ್ಟು ಕೊಟ್ಟಿದ್ದೇವೆಂದು ಹೇಳುತ್ತಾರೆ. ಶೇಕಡ 40ರಷ್ಟು ಕೊಟ್ಟಿದ್ದೇವೆಂದು ಹೇಳುತ್ತಾರೆ. ಶೇಕಡ 40ರಷ್ಟು ಕೊಟ್ಟ ಮೇಲೆ ಕಾಮಗಾರಿಯನ್ನು ಮಾಡಬೇಕಾದರೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಶೇಕಡ 20ರಷ್ಟು ತೆರಿಗೆಯನ್ನು ಕೊಡಬೇಕಾಗುತ್ತದೆ. ಶೇಕಡ 40 ಮತ್ತು ಶೇಕಡ 20 ಎಂದರೆ ಅದು ಒಟ್ಟು ಶೇಕಡ 60ರಷ್ಟು ಆಯಿತು. ಯಾವ ಕಾಂಟ್ರ್ಯಾಕ್ಟರ್ ಇದ್ದಾರೆಯೋ ಅವರು ಶೇಕಡ 60ರಷ್ಟು ಕೊಟ್ಟ ನಂತರ ಶೇಕಡ 40ರಷ್ಟರಲ್ಲಿ ಈ ರಾಜ್ಯದಲ್ಲಿ ಅವರು ಕಾಮಗಾರಿಯನ್ನು ಮಾಡಿರುವುದನ್ನು ಅವರು ತೋರಿಸಬೇಕು. ನಾನದನ್ನು ನೋಡಬೇಕು, ತಜ್ಞರನ್ನು ನೇಮಿಸುತ್ತೇನೆ, ನೋಡುತ್ತೇನೆ. ಶೇಕಡ 40ರಷ್ಟರಲ್ಲಿ ಮಾಡಿದ ಕೆಲಸವನ್ನು ಅವರು ತೋರಿಸಬೇಕು. ಕೇವಲ ಶೇಕಡ 40ರಲ್ಲಿ ಅವರು ಹಾಕಿದ ಬಂಡವಾಳದಲ್ಲಿ ಬಡ್ಡಿ ಬರಬೇಕು.

(ಮುಂದು)

1295/23-12-2021/1-20/bkp-ak **(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಗೋವಿಂದ ಎಂ. ಕಾರಜೋಳ(ಮುಂದು)**

ಅವನ ಶ್ರಮಕ್ಕೆ ಲಾಭ ಬರಬೇಕು. ಹಾಗಾದರೆ, ಅವನು ಎಷ್ಟು ಕೆಲಸ ಮಾಡಿದ್ದಾನೆ, ಏನು ಕೆಲಸ ಮಾಡಿದ್ದಾನೆ ಎಂಬ ಬಗ್ಗೆ ಅಪಾದನೆ ಮಾಡಿದವನು ಅದರ ಪಟ್ಟಿಯನ್ನು ಕೊಡಬೇಕು. ಯಾರು ಯಾರು ಶಾಸಕರು ಮತ್ತು ಯಾರು ಯಾರು ಮಂತ್ರಿಗಳು ತೆಗೆದುಕೊಂಡಿದ್ದಾರೆ, ಯಾರು ಯಾರು ಅಧಿಕಾರಿಗಳು ತೆಗೆದುಕೊಂಡಿದ್ದಾರೆ, ಅವರದ್ದೆಲ್ಲಾ ಪಟ್ಟಿಯನ್ನು ಕೊಡಬೇಕು. ಸುಮ್ಮನೆ ಗಾಳಿಯಲ್ಲಿ ಗುಂಡು ಹೊಡೆಯುವ ಕೆಲಸ ಅಲ್ಲ. ನಾನು ನಿಮಗೆ ಈ ಬಗ್ಗೆ ಹೇಳಲಿಕ್ಕೆ ಬಯಸುತ್ತೇನೆ. ಒಂದು ಕಾಂಗ್ರೆಸ್ ಆಫೀಸ್‌ನಲ್ಲಿ ನಡೆದಂತಹ ಚರ್ಚೆಯಲ್ಲಿ ಅಂದು ಏನಾಗಿದೆ, ನಗರಾಭಿವೃದ್ಧಿ ಪ್ರಾಧಿಕಾರದಿಂದ ಕೈಗೊಳ್ಳಲಾದ ....

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ರಿಪ್ಲೈ ಕೊಡಿಸಿ.

**ಶ್ರೀ ಗೋವಿಂದ ಎಂ. ಕಾರಜೋಳ:-** ನಾನು ಕೊಡುತ್ತಿರುವುದು ರಿಪ್ಲೈ ಆಗಿದೆ.

**ವೈಸ್ ಛೇರ್ಮನ್:-** ಮಾನ್ಯ ಸಚಿವರು ರಿಪ್ಲೆಯನ್ನೇ ಕೊಡುತ್ತಿದ್ದಾರೆ, ದಯಮಾಡಿ ಕುಳಿತ್ತುಕೊಳ್ಳಿ.

**ಶ್ರೀ ಗೋವಿಂದ ಎಂ. ಕಾರಜೋಳ:-** ನಿಮಗೆ ಏನು ಬೇಕೋ ಅದನ್ನು ಶೋಬಾನ ಹಾಡಲಿಕ್ಕೆ ಆಗುವುದಿಲ್ಲ.

**(ಗೊಂದಲ)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ವೈಸ್ ಛೇರ್ಮನ್:-** ಮಾನ್ಯ ಸಚಿವರು ರಿಪ್ಲೈಯನ್ನೇ ಕೊಡುತ್ತಿದ್ದಾರೆ, ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ನಿಯಮಾವಳಿಗಳ ಪ್ರಕಾರ ರಿಪ್ಲೈ ಎಲ್ಲರಿಗೂ ಕೊಡಬೇಕು. ಇದು ಪದ್ಧತಿ. ತಾವು ಹಿರಿಯ ಸಚಿವರು ಇದ್ದೀರಿ. ಸಭಾ ನಿಯಮವನ್ನು ನಡೆಸಿಕೊಡಬೇಕಲ್ಲವೇ?

**(ಈ ಹಂತದಲ್ಲಿ ಕಾಂಗ್ರೆಸ್ ಮತ್ತು ಜೆ.ಡಿ(ಎಸ್) ಪಕ್ಷದ ಸದಸ್ಯರೆಲ್ಲರೂ ಬಾವಿಗೆ ಬಂದು ಧರಣಿ ನಿರತರಾದರು ಮತ್ತು ಸದನದ ಬಾವಿಯಿಂದ ಮಾತನಾಡತೊಡಗಿದರು ಮತ್ತು ಘೋಷಣೆ ಕೂಗಲು ಪ್ರಾರಂಭಿಸಿದರು)**

**(ಈ ಹಂತದಲ್ಲಿ ಮಾನ್ಯ ವೈಸ್ ಛೇರ್ಮನ್ ರವರು ಬಾವಿಯಲ್ಲಿ ನಿಂತು ಮಾತನಾಡುತ್ತಿರುವುದು ಯಾವುದು ಸಹ ರೆಕಾರ್ಡ್‌ಗೆ ಹೋಗಬಾರದು ಎಂದು ಸೂಚಿಸಿದರು)**

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಸಭಾಪತಿಯವರು:-** ಈಗ ಸದನವನ್ನು 3-00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಮಧ್ಯಾಹ್ನ 1 ಗಂಟೆ 24 ನಿಮಿಷಕ್ಕೆ ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3-00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

**(1296) 23-12-2021, 3.10 ಕೆಜಿ – ಆರ್‌ಎನ್**

**(ಸದನವು ಭೋಜನ ವಿರಾಮದ ನಂತರ ಪುನಃ ಮಧ್ಯಾಹ್ನ 3 ಗಂಟೆ 11 ನಿಮಿಷಗಳಿಗೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಸಭಾಪತಿಯವರು**:- ಸಭಾನಾಯಕರೇ, ಪಿ.ಆರ್.ರಮೇಶ್‌ರವರ ವಿಷಯವನ್ನು ತೆಗೆದುಕೊಳ್ಳೋಣವೇ? ಪ್ರಕಾಶ್ ರಾಥೋಡ್‌ರವರೇ, ತಾವು ಏನು ಮಾಡುತ್ತಿದ್ದೀರಿ?

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೆ, ನಾವು ಬಾವಿಗೆ ಬರುತ್ತಿದ್ದೇವೆ.

**ಸಭಾಪತಿಯವರು**:- ಏಕೆ? ನಿಮ್ಮದು ಏನು ಬಾವಿ ಮಹಾರಾಯರೇ?

(ಗೊಂದಲ)

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**(ಈಹಂತದಲ್ಲಿ ವಿರೋಧ ಪಕ್ಷದ ನಾಯಕರು, ವಿರೋಧ ಪಕ್ಷದ ಮುಖ್ಯ ಸಚೇತಕರವರನ್ನು ಹೊರತುಪಡಿಸಿ, ಕಾಂಗ್ರೆಸ್ ಮತ್ತು ಜೆ.ಡಿ.(ಎಸ್) ಪಕ್ಷದ ಮಾನ್ಯ ಸದಸ್ಯರು ಸದನದ ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)**

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರರು):-** ಮಾನ್ಯ ಸಭಾಪತಿಯವರೇ, ನೀರಾವರಿ ಸಮಸ್ಯೆಗಳ ಬಗ್ಗೆ ಉತ್ತರ ಕೊಡುತ್ತೇನೆಂದು ಹೇಳಿ ಮಾನ್ಯ ಜಲಸಂಪನ್ಮೂಲ ಸಚಿವರು ನಿಯಮ 330 ಬಗ್ಗೆ ಉತ್ತರ ಕೊಡುವುದಕ್ಕೆ ಪ್ರಾರಂಭ ಮಾಡಿದ್ದಾರೆ.

(ಗೊಂದಲ)

**ಸಭಾಪತಿಯವರು:-** ಈಗ ಬೇಡ ಬಿಡಿ. ಆಯಿತು. ಈಗ ನಿಮಗೆ ಏನಾಗಬೇಕು ಹೇಳಿ? ಒಂದು ನಿಮಿಷ ಎಲ್ಲರೂ ಸುಮ್ಮನಿರಿ. ನಾನು ಹೇಳುತ್ತೇನೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ...

(ಗೊಂದಲ)

**ಸಭಾಪತಿಯವರು:-** ಒಂದು ನಿಮಿಷ. ನಾನು ಹೇಳುತ್ತೇನೆ. ವೈ.ಎ.ನಾರಾಯಸ್ವಾಮಿಯವರೇ, ತಾವು ಏನಾದರೂ ಹೇಳುತ್ತೀರಾ?

(ಗೊಂದಲ)

**ಡಾ:ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರು ನಿಯಮ 330ಕ್ಕೆ ಉತ್ತರ ಕೊಡುವುದಕ್ಕೆ ಹೋಗಿದ್ದು, ನೀರಾವರಿ ಬಗ್ಗೆ ಅಲ್ಲ. ಎಂ.ನಾರಾಯಣಸ್ವಾಮಿಯವರು ನೀರಾವರಿ ಬಗ್ಗೆ ಎಂದು ಹೇಳಿದ್ದಾರೆ. ಅದಕ್ಕೆ ಅದನ್ನು correction ಮಾಡುತ್ತಿದ್ದೇನೆ. ನಿಯಮ 330 ಬಗ್ಗೆ ಉತ್ತರ ಕೊಡುವುದಕ್ಕೆ ಹೋಗಿದ್ದು.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ತಾವು ಆ ಸಮಯದಲ್ಲಿ ಪೀಠದಲ್ಲಿ ಇರಲಿಲ್ಲ. ಆಗ ಏನಾಯಿತು ಎಂದರೆ, ಅವರು ನಿನ್ನೆ ದಿವಸ ನೀರಾವರಿ ಬಗ್ಗೆ ಸುಧೀರ್ಘವಾಗಿ ಮಾತನಾಡಿದ್ದಾರೆ. ಅದಕ್ಕೆ ನಾವು ಉತ್ತರ ಕೊಡಬೇಕೆಂದು ಹೇಳಿದರು. ಅದಕ್ಕೆ ನಾವು ಸಭಾಪತಿಯವರಿಗೆ ಇನ್ನಷ್ಟು ಜನ ಮಾತನಾಡಬೇಕೆಂದು ಚೀಟಿ ಕಳುಹಿಸಿದ್ದೆವು. ಅದಕ್ಕೆ ಸಭಾಪತಿಯವರು ಅವಕಾಶ ಕೊಡುತ್ತೇವೆಂದು ಹೇಳಿದ್ದಾರೆಂದು ಹೇಳಿದೆವು. ಆದರೆ, ಈಗ ಸಮಯ ಇಲ್ಲದಿರುವುದರಿಂದ ನಾವು ಯಾರು ಮಾತನಾಡುವುದಿಲ್ಲ. ಉತ್ತರ ಕರ್ನಾಟಕ ಭಾಗದಿಂದ ಬಂದವರಿಗೆ ಮಾತ್ರ ಅವಕಾಶ ಕೊಡಿ ಎಂದು ಕೇಳಿದೆವು. ಅದಕ್ಕೆ ಅವರು ಇಲ್ಲ, ಉತ್ತರ ಕೊಡುತ್ತೇವೆಂದು ಹೇಳಿದರು. ಅದಕ್ಕೆ ಪೀಠದಲ್ಲಿದ್ದ ಸಭಾಪತಿಯವರು ಅವರು ಉತ್ತರ ಕೊಟ್ಟ ಮೇಲೆ, ನಿಯಮ 330 ಬಗ್ಗೆ ಚರ್ಚೆ ಮಾಡಿ ಎಂದು ಹೇಳಿದರು. ಅದರಂತೆ, ನಾವು ನೀರಾವರಿ ಬಗ್ಗೆ ಉತ್ತರ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೊಡುತ್ತಾರೆಂದು ಸುಮ್ಮನೆ ಕುಳಿತ್ತಿದ್ದೆವು. ಕೊನೆಗೆ ಅವರು ನಿಯಮ 330 ಕ್ಕೆ ಉತ್ತರ ಕೊಡುವುದಕ್ಕೆ ಶುರು ಮಾಡಿದರು. ನಮಗೆ ಆ ಉತ್ತರ ಬಂದಿಲ್ಲ. ಅದರ ಕಾಪಿಯೂ ಬಂದಿಲ್ಲ.

(ಗೊಂದಲ)

**ಸಭಾಪತಿಯವರು:-** ಒಂದು ನಿಮಿಷ. ಎಲ್ಲರೂ ಸುಮ್ಮನಿರಿ. Confuse ಮಾಡಬೇಡಿ.

(ಗೊಂದಲ)

**ಶ್ರೀ ಸಿ.ಸಿ.ಪಾಟೀಲ್ (ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಸಿ.ಎಂ.ಇಬ್ರಾಹಿಂರವರು ಎತ್ತಿದಂತಹ 40% commission ಬಗ್ಗೆ ಮಾನ್ಯ ಸಚಿವರಾದ ಗೋವಿಂದ ಕಾರಜೋಳರವರು ಉತ್ತರ ಕೊಡುತ್ತಿದ್ದಾರೆ. ನಾನು ಉತ್ತರ ಕೊಡುವುದಕ್ಕೆ ಸಿದ್ದನಿದ್ದೇನೆ. ಮಾನ್ಯ ಸದಸ್ಯರಾದ ಸಿ.ಎಂ.ಇಬ್ರಾಹಿಂರವರು 40% commission ಬಗ್ಗೆ ಹೇಳಿದ್ದಾರೆ, ಅದರ ಬಗ್ಗೆ ನಮ್ಮ ಕಡೆ ಇರುವಂತಹ ಮಾಹಿತಿಯನ್ನು ಕೊಡುತ್ತೇವೆ. ಹಾಗೆಯೇ, ಅವರ ಸರ್ಕಾರದಲ್ಲಿ ಏನಾಗಿತ್ತು ಎನ್ನುವುದನ್ನು ಹೇಳಲಿ. ಅವರ ಸರ್ಕಾರದಲ್ಲಿಯೂ ಏನೇನು ಮಾತುಕತೆಯಾಗಿತ್ತು ಎನ್ನುವುದನ್ನು ಹೇಳಲಿ.

(ಗೊಂದಲ)

**ಸಭಾಪತಿಯವರು:-** ಆಯಿತು. ಒಂದುನಿಮಿಷ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಷ. ನಮಗೆ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ನಿಯಮ 330 ರ ಬಗ್ಗೆಯೂ ಅವಕಾಶ ಕೊಡಿ. ನಾವು ಮಾತನಾಡಬೇಕು.

(ಗೊಂದಲ)

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ಎಲ್ಲವನ್ನು ಶಾಂತ ರೀತಿಯಿಂದ ಕೇಳಿದರೆ, ನಾವು ಉತ್ತರ ಕೊಡುವುದಕ್ಕೆ ರೆಡಿ ಇದ್ದೇವೆ. ನಾವು ಉತ್ತರ ಕೊಡುವುದಕ್ಕೆ ರೆಡಿ ಇಲ್ಲವೆಂದರೆ, ಅವರು ಪ್ರಶ್ನೆ ಎತ್ತಲಿ. We are ready here to give answer.

(ಗೊಂದಲ)

**ಸಭಾಪತಿಯವರು:-** ಯಾರಾದರೂ ಒಬ್ಬರು ಮಾತನಾಡಿ. ಎಲ್ಲರೂ ಏಕೆ ಮಾತನಾಡುತ್ತೀರಿ?

(ಗೊಂದಲ)

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಅವರು print ನಲ್ಲಿ ಲಿಖಿತ ಮೂಲಕ ಎಲ್ಲರಿಗೂ reply ಕೊಡಬೇಕು.

(ಗೊಂದಲ)

**ಸಭಾಪತಿಯವರು:-** ಇಬ್ರಾಹಿಂರವರೇ, ಒಂದು ನಿಮಿಷ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(ಗೊಂದಲ)

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಅವರು ಕೊಡಲಿಲಲ್ಲ. ಅವರು ಏಕ್‌ದಂ ಜಗಳಕ್ಕೆ ಬಿದ್ದರು.

(ಗೊಂದಲ)

**ಸಭಾಪತಿಯವರು:-** ಇಬ್ರಾಹಿಂರವರೇ, ಒಂದು ನಿಮಿಷ ಸುಮ್ಮನೆ ಇರಿ. ನಾನು ಹೇಳುತ್ತೇನೆ.

(ಗೊಂದಲ)

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅವರು ನಮ್ಮನ್ನು ಇಷ್ಟೊಂದು ಹೆದರಿಸಿದರೆ, ನಾವು ಕೆಲಸ ಮಾಡಬೇಕೋ ಬೇಡವೋ ಹೇಳಿ? ಅವರು ಏಕೆ ನಮ್ಮನ್ನು ಎದರಿಸುತ್ತಾರೆ? ನಾವು ಮಾಡಿದ ತಪ್ಪೇನು? ನಾನು ವಾಸ್ತವಾಂಶ ಏನಿದೆ ಅದನ್ನು ಹೇಳಿದ್ದೇನೆ. ದಿನ ಪತ್ರಿಕೆಯಲ್ಲಿ ಬಂದಿರುವಂತಹ ವಿಷಯವನ್ನು ಹೇಳಿದ್ದೇನೆ. ಏನು ಕ್ರಮ ತೆಗೆದುಕೊಳ್ಳುತ್ತೀರಿ? ಅವರು ನಮ್ಮ ಮೇಲೆ ಏಕೆ ಬೀಳುತ್ತಾರೆ? ಅವರಿಗೆ contractor ಗಳ ಮೇಲೆ ಬೀಳುವುದಕ್ಕೆ ಧೈರ್ಯ ಇಲ್ಲ. ಏಕೆ ಇವರ ಮೇಲೆ action ತೆಗೆದುಕೊಂಡಿಲ್ಲ? ನಮ್ಮ ಮೇಲೆ ಏಕೆ ಬಂದು ಬೀಳುತ್ತಾರೆ? ನಾವು ಅವರಿಗೆ ಪುಕ್ಕಟೆಯಾಗಿ ಸಿಕ್ಕಿದ್ದೇವೆಯೇ?

(ಗೊಂದಲ)

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಗೋವಿಂದ ಕಾರಜೋಳರವರ ಸ್ವಭಾವ ಎಲ್ಲರಿಗೂ ಗೊತ್ತಿದೆ.

(ಗೊಂದಲ)

**ಸಭಾಪತಿಯವರು:-** ಒಂದು ನಿಮಿಷ ಕೇಳಿ. ಎಲ್ಲರೂ ಸುಮ್ಮನಿರಿ.

(ಗೊಂದಲ)

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಅವರು ಮಂತ್ರಿಗಳ ಬಗ್ಗೆ ಏಕ ವಚನದಲ್ಲಿ ಮಾತನಾಡುವಂತಹ ಕೆಲಸ ಮಾಡಿದ್ದಾರೆ. ಹಾಗಾಗಿ, ಅವರು ಕ್ಷಮೆ ಕೇಳಬೇಕು.

(ಗೊಂದಲ)

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಯಾರು ಮಾತನಾಡಿದ್ದಾರೆ?

(ಗೊಂದಲ)

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಯಾರು ಮಾತನಾಡಿದ್ದಾರೆ. ಅವರು ಕ್ಷಮೆ ಕೇಳಲಿ.

(ಗೊಂದಲ)

**ಸಭಾಪತಿಯವರು:-** ಮರಿತಿಬ್ಬೇಗೌಡರವರೇ, ತಾವು ಮಾತನಾಡಬೇಡಿ. ನಿಮಗೆ ಎಷ್ಟು ಬಾರಿ ಮಾತನಾಡಬೇಡಿ ಎಂದು ಹೇಳಬೇಕು. ನಿಮಗೆ ಬುದ್ಧಿ ಇದೆಯೋ, ಇಲ್ಲವೋ? ಬಾವಿಯಲ್ಲಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಿಂತುಕೊಂಡು ಮಾತನಾಡಬೇಡಿ ಎಂದು ಎಷ್ಟು ಬಾರಿ ಹೇಳಬೇಕು. ನಾನು ಹೇಳುವುದನ್ನು ಕೇಳಿ. ಇಲ್ಲಿ ಹುಡುಗಾಟ ಆಡಬೇಡಿ. ಒಂದು ನಿಮಷ ಎಲ್ಲರೂ ಕೇಳಿ. ಇಬ್ರಾಹಿಂರವರು ಉಪವಾಸ ಇದ್ದೇನೆ. 2-3 ದಿವಸಗಳು ಆಯಿತು. ಇದೇ ವಿಷಯವನ್ನು ಕೇಳುತ್ತಿದ್ದೇನೆಂದು ಹೇಳಿದರು. ಅದಕ್ಕೆ ನಾನು written answer ಬಂದಿಲ್ಲ. ನೀವು ಮಾತನಾಡಬೇಕೆಂದರೆ, ಮಾತನಾಡಿ, ಉತ್ತರ ಹೇಳಬೇಕಾದರೆ ಹೇಳುತ್ತಾರೆಂದು ಹೇಳಿದೆ. ಅವರು ನನ್ನ ಮಾತಿನ ಮೇಲೆ ಮಾತನಾಡಿದ್ದಾರೆ. ಈಗ ಅವರು ಮಾತನಾಡಿದ ನಂತರ ಉತ್ತರ ಬೇಕೆಂದರೆ, ಉತ್ತರ ಹೇಳಿ. ಇಲ್ಲವೆಂದರೆ, written answer ಅನ್ನು ಆ ಮೇಲೆ ತಂದುಕೊಡಿ.

(ಗೊಂದಲ)

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ನನ್ನ ಒಂದು ಸಣ್ಣ ವಿನಂತಿ ಮನವಿ ಇದೆ. ಇಬ್ರಾಹಿಂರವರೇ,

(ಗೊಂದಲ)

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ತಾವು ಹೇಳುವುದು ಸರಿ ಇದೆ. ಇವರು ಇಷ್ಟು ಕುಳ್ಳ ಇದ್ದಾರೆ, ಎದ್ದು ನಮ್ಮ ಮೈಮೇಲ ಬೀಳುತ್ತಾರೆ. ನಾನು ಇಷ್ಟು ಉದ್ದ, ಇಷ್ಟು ಎತ್ತರ ಇದ್ದೇನೆ. ಅವರು ನನ್ನ ಮೈಮೇಲೆ ಬಿದ್ದರೆ ನಾನೇನು ಮಾಡಲಿ?

(ಗೊಂದಲ)

**ಶ್ರಿ ಸಿ.ಸಿ.ಪಾಟೀಲ್(ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೇ, ನಮ್ಮ ಉತ್ತರದಿಂದ ಅವರ ಗುಡ್ಡದಲ್ಲಿರುವ ಹಾವುಗಳು ಆಚೆ ಬರುತ್ತವೆ. ಅವರ ಗುಡ್ಡದಲ್ಲಿರುವ ಕೊಳಕು ಆಚೆಗೆ ಬರುತ್ತದೆ. ಅದಕ್ಕೆ ಅವರಿಗೆ ಈಗ ಉತ್ತರ ಬೇಡವಾಗಿದೆ ಅಷ್ಟೇ.

(ಗೊಂದಲ)

**ಸಭಾಪತಿಯವರು:-** ಸಿ.ಸಿ.ಪಾಟೀಲ್‌ರವರೇ, ಒಂದು ನಿಮಿಷ. ಎಲ್ಲರೂ ಸುಮ್ಮನಿರಿ. ನನಗೆ ಸಭೆಯನ್ನು ನಡೆಸಿ ಎಂದು ಹೇಳುತ್ತೀರೋ ಅಥವಾ ಬೇಡವೆಂದು ಹೇಳುತ್ತೀರೋ ಹೇಳಿ ಬಿಡಿ. ಇಲ್ಲವೆಂದರೆ, ನಾನು adjourn ಮಾಡಿ ಹೋಗುತ್ತೇನೆ. ನಾನು ಹೇಳಿದ ಮಾತನ್ನೇ ಕೇಳುವುದಿಲ್ಲವೆಂದರೆ ಹೇಗೆ? ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ ಇರಿ. ನಾನು ಹೇಳುವುದನ್ನು ಕೇಳುವುದಿಲ್ಲವೆಂದರೆ, ಹೇಗೆ? ಇಬ್ರಾಹಿಂರವರು ಪೀಠಕ್ಕೆ ಬಹಳ ವಿನಂತಿ ಮಾಡಿಕೊಂಡರು. ನನಗೂ ಸಹ ಅವರು ಮಾತನಾಡಲಿ ಎಂದು interest ಇತ್ತು. ಅದಕ್ಕೆ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟೆ. ಈಗ ಅವರು 330 ಬಗ್ಗೆ ಮಾತನಾಡಿದ ಮೇಲೆ, ಒಬ್ಬರಿಗೆ ಅಥವಾ ಇಬ್ಬರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕಾಗುತ್ತದೆ. ಅವಕಾಶ ಕೊಟ್ಟ ನಂತರ ಉತ್ತರ ಬೇಕೆಂದರೆ, 330 ರ ಬಗ್ಗೆ ಉತ್ತರ ಹೇಳಿ ಮುಂದೆ ಹೋಗಬೇಕಾಗುತ್ತದೆ. ಇನ್ನೂ ಬರಗಾಲದ ಮತ್ತು ಉತ್ತರ ಕರ್ನಾಟಕದ ಬಗ್ಗೆ ಶ್ರೀ ವೆಂಕಟೇಶ್‌ರವರು, ಶ್ರೀ ಬಸವರಾಜ ಪಾಟೀಲ್ ಇಟಗಿ ಮತ್ತು ಶ್ರೀ ನಮೋಶಿಯವರು ಮಾತನಾಡುವವರಿದ್ದಾರೆ. ಈ ಮೂರು ಜನ ಸದಸ್ಯರು

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಮಾತನಾಡಿದ ನಂತರ, ಸರ್ಕಾರ ಉತ್ತರ ಕೊಡಬೇಕು. ಆದರೆ, ಯಾವ ಸಚಿವರು ಉತ್ತರ ಕೊಡುತ್ತಾರೆಂದು ಗೊತ್ತಿಲ್ಲ. ಇದಕ್ಕೆ ಉತ್ತರ ಯಾರು ಕೊಡುತ್ತಾರೆ ಕೊಡಲಿ. ಆದರೆ, ನಿಯಮ 330 ನ್ನು ಅವರು raise ಮಾಡಿದಾಗ, ನಮ್ಮ condition ಗೆ ಅವರು, ಅವರ condition ಗೆ ನಾವು ಒಪ್ಪಿಕೊಂಡೇ ನಿಯಮ 330ಕ್ಕೆ ಅನುಮತಿ ಕೊಟ್ಟಿದ್ದೇನೆ. ಅವರು written answer ಬೇಕೆಂದರೆ, ಸರ್ಕಾರ written answer ಕೊಡುವವರೆಗೂ ಕಾಯಬೇಕು. ಇಲ್ಲವೆಂದರೆ, ಉತ್ತರ ಹೇಳುವುದಕ್ಕೆ ಸರ್ಕಾರಕ್ಕೆ ಎಲ್ಲಾ ಅಧಿಕಾರ ಇದೆ. ಹಾಗಾಗಿ, ಉತ್ತರ ಹೇಳಬಹುದು.

**ಶ್ರೀ ಎಂ.ನಾರಾಯಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ತಾವು ಹೇಳಿದ್ದು ಸರಿ ಇದೆ. ತಾವು ಹೇಳಿದ್ದನ್ನು ನಾವೀಗ ಒಪ್ಪಿಕೊಳ್ಳುತ್ತೇವೆ. ಮಾನ್ಯ ಸಚಿವರು ನೀರಾವರಿ ಬಗ್ಗೆ ಉತ್ತರ ಕೊಡುತ್ತೇವೆ ಎಂದಾಗ, ಪೀಠಕ್ಕೆ ಬೇಡವೆಂದು dictate ಮಾಡುತ್ತಾರೆ. ಅವರು ಮಂತ್ರಿಯಾಗಿ ಅದು ಬೇಡ, ಇದನ್ನು ತೆಗೆದುಕೊಳ್ಳಿ ಎಂದು ಪೀಠಕ್ಕೆ dictate ಮಾಡುತ್ತಾರೆ.

**(ಗೊಂದಲ)**

**ಸಭಾಪತಿಯವರು:-** ಎಂ.ನಾರಾಯಣಸ್ವಾಮಿಯವರೇ, ಒಂದು ನಿಮಿಷ. ಈಗ ನಾನು ಹೇಳುತ್ತಿದ್ದೇನೆ ಅಲ್ಲವೇ? ಈಗ ಬಾವಿಯಿಂದ ಹೊರಗೆ ಬನ್ನಿ. ನೀವು ತಿಳಿದುಕೊಳ್ಳಿ. ನಾನೀಗ clear-cut ಆಗಿ ಹೇಳಿದ್ದೇನೆ. ಇಬ್ರಾಹಿಂರವರು oral ಉತ್ತರ ಕೊಡಿ ಎಂದರೆ, ಕೊಡುತ್ತಾರೆ. Written answer ಬೇಕೆಂದರೆ, ಸಮಯ ಕೊಡಲಿ. ಕೊಡುತ್ತಾರೆ. ಈಗ ನೀರಾವರಿ ಬಗ್ಗೆ ಉತ್ತರ ಕರ್ನಾಟಕದವರು ಇನ್ನೂ ಮೂರು ಜನ ಮಾತನಾಡುವವರಿದ್ದಾರೆ. ಅವರು ಮಾತನಾಡಿದ ಮೇಲೆ ಸರ್ಕಾರ ಉತ್ತರ ಹೇಳಬೇಕು. ಅಲ್ಲಿಯವರೆಗೆ ಇಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಿಯಮ 330ರ ಬಗ್ಗೆ ನಾವು ಮಾತನಾಡಬೇಕಾಗಿದೆ. ಜೊತೆಗೆ ಅದನ್ನು ಮಾತನಾಡಬೇಕು.

**ಸಭಾಪತಿಯವರು**:- ಆಯಿತು, ಅವಕಾಶ ಕೊಡುತ್ತೇನೆ. ಬಾವಿಯಿಂದ ಹೊರಗೆ ಬಂದು ನಿಮ್ಮ ನಿಮ್ಮ ಸ್ಥಳಗಳಲ್ಲಿ ಕುಳಿತುಕೊಳ್ಳಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆಗಬಹುದು. ಆಗಬಹುದು.

**(ಈ ಹಂತದಲ್ಲಿ ಬಾವಿಯಲ್ಲಿ ಧರಣಿ ನಿರತರಾಗಿದ್ದ ಕಾಂಗ್ರೆಸ್ ಮತ್ತು ಜೆ.ಡಿ.(ಎಸ್) ಪಕ್ಷದ ಸದಸ್ಯರು ಸದನದ ಬಾವಿಯಿಂದ ಹೊರಗಡೆ ಬಂದು ಅವರವರ ಸ್ಥಾನಗಳಿಗೆ ತೆರಳಿದರು)**

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**(ಈ ಹಂತದಲ್ಲಿ ಶ್ರೀ ಸಿ.ಎಂ.ಇಬ್ರಾಹಿಂರವರು 'ಭೋಲೋ ಭಾರತ್ ಮಾತಾಕೀ' ಎಂದು ಹೇಳಿದಾಗ ಕಾಂಗ್ರೆಸ್ ಮತ್ತು ಜೆ.ಡಿ.(ಎಸ್) ಪಕ್ಷದ ಮಾನ್ಯ ಸದಸ್ಯರು 'ಜೈ' ಎಂಬ ಘೋಷಣೆ ಕೂಗಿದರು)**

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ. ಈಗ ನಿಯಮ 330 ರ ಮೇಲೆ ಇಬ್ರಾಹಿಂರವರು ಮಾತನಾಡಿದ್ದಾರೆ, ಅದರ ಬಗ್ಗೆ ಯಾರಾದರೂ ಮಾತನಾಡುವವರಿದ್ದರೆ, ಮಾತನಾಡಬಹುದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಒಂದು ಪ್ರಶ್ನೆ ಇದೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಉತ್ತರ ಕೊಡುತ್ತಾರೆ. ಅದು ಪೂರ್ಣವಾದ ನಂತರ ಮಾತನಾಡಲಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಒಂದಿಬ್ಬರು ಮಾತನಾಡಲಿ. ಇಬ್ರಾಹಿಂರವರಾದರೂ ಮಾತನಾಡಲಿ.

**(ಗೊಂದಲ)**

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಬೇಡ. ಉತ್ತರ ಕೊಟ್ಟ ಮೇಲೆ ಮಾತನಾಡಲಿ.

**(ಗೊಂದಲ)**

**ಶ್ರೀಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರು ಬೇಡವೆಂದು ಏಕೆ ಪೀಠಕ್ಕೆ dictate ಮಾಡುತ್ತಿದ್ದಾರೆ?

**(ಗೊಂದಲ)**

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ತಮಗೆ ಹೇಳುತ್ತಿದ್ದೇನೆ. ಇದನ್ನು ಅವರಿಗೆ ಹೇಳುತ್ತಿಲ್ಲ.

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ. ನೀವು ಯಾರು ನನ್ನ ಮಾತು ಕೇಳಲಿಲ್ಲವೆಂದರೆ ಹೇಗೆ?

**(ಗೊಂದಲ)**

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸಚಿವರು ಅರ್ಧಬರ್ಧ ಉತ್ತರ ಕೊಟ್ಟಿದ್ದಾರೆ. ಈಗ ಉತ್ತರ ಕೊಡಲಿ. ಆಮೇಲೆ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

**(ಗೊಂದಲ)**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ ಉತ್ತರ ಕರ್ನಾಟಕದ ಜ್ವಲಂತ ಸಮಸ್ಯೆಗಳ ಬಗೆಗಿನ ಚರ್ಚೆಗಳು ಅರ್ಧಕ್ಕೆ ನಿಂತಿವೆ. ಅದಕ್ಕೆ ತಾವು allow ಮಾಡಿದ್ದೀರಿ. ಇಬ್ರಾಹಿಂರವರು ಮಾತನಾಡಿದ್ದಕ್ಕೆ ಇನ್ನೂ written reply ಬಂದಿಲ್ಲ. ನಾವು Reply ಬಂದ ಮೇಲೆ, ಮಾತನಾಡುತ್ತೇವೆ. ಆನಂತರ ಶ್ರೀ ಕಾರಜೋಳರವರು ಅದಕ್ಕೆ ಉತ್ತರ ಕೊಡಲಿ.

**(ಗೊಂದಲ)**

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ. ಇಬ್ರಾಹಿಂರವರೇ, ತಮಗೆ written answer ಬರುವವರೆಗೂ ಸಮಾಧಾನ ಇದೆಯೇ?

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, written answer ಬರಬೇಕಲ್ಲವೇ. ಅವರು ನಮ್ಮ ಮೇಲೆ ಏನು ಸಿಟ್ಟು ಮಾಡಿಕೊಂಡಿದ್ದಾರೋ, ನಮ್ಮನ್ನು ಏನು ಹೆದರಿಸಿದ್ದಾರೋ, ಅದು ದಯವಿಟ್ಟು ಬೇಡ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ಇಬ್ರಾಹಿಂರವರನ್ನು ಹೆದರಿಸುವುದಿಲ್ಲ.

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, “ಬೇಡುವವನಿಲ್ಲದೇ ಬಡವಾದೆನಯ್ಯ” ಅನ್ನುವಂತೆ.,

**(ಗೊಂದಲ)**

**ಸಭಾಪತಿಯವರು:-** ಸಿ.ಎಂ.ಇಬ್ರಾಹಿಂರವರೇ, ಆಯಿತು ಬಿಡಿ. ವೆಂಕಟೇಶ್‌ರವರೇ, ಮಾತನಾಡಿ.

(ಮುಂದು)

**(1297) 23-12-2021 (3.20) ಎಂವಿ-ವಿಕೆ** **(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಮಾನ್ಯ ಪಿ.ಆರ್.ರಮೇಶ್‌ರವರೆ, ನಿಯಮ ೩೩೦ರ ಮೇಲೆ ಇರುವ ವಿಷಯದ ಚರ್ಚೆಯನ್ನು ಪ್ರಾರಂಭ ಮಾಡಿ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈಗ ನಿಯಮ ೩೩೦ರ ಮೇಲೆ ಚರ್ಚೆಗೆ ತೆಗೆದುಕೊಳ್ಳುತ್ತೀರಾ?

**ಸಭಾಪತಿಯವರು:-** ಹೌದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಹಾಗಾದರೆ, ಇನ್ನು ಉತ್ತರ ಬಂದಿಲ್ಲ.

**ಶ್ರೀ ಪಿ.ಆರ್.ರಮೇಶ್ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಪಿ.ಆರ್.ರಮೇಶ್‌ರವರು ನಿಯಮ ೩೩೦ರ ಅಡಿ ವಿಷಯವನ್ನು ಮಂಡನೆ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಅಥವಾ ಕಾನೂನು ಮಂತ್ರಿಗಳು ಬರುತ್ತೇವೆಂದು ತಿಳಿಸಿದ್ದಾರೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಇದು ತುಂಬಾ ಗಂಭೀರವಾದ ವಿಷಯ. ಹಾಗಾದರೆ ಅವರು ಬರಲಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾವು ಎಷ್ಟು ವರ್ಷದಿಂದ ಸದನದಲ್ಲಿ ಇದ್ದೇವೆ? ಅವರು ಏನೋ discuss ಮಾಡಿಕೊಳ್ಳುತ್ತಾರೆ. ನಮಗೆ ಲಿಖಿತ ಹೇಳಿಕೆ ಬರದೆ, ತಾವು ಮಾತನಾಡಿ ಎಂದು ಹೇಳುವುದು ಸರಿಯಲ್ಲ. ಈಗ ನಾವು ಉತ್ತರ ಕರ್ನಾಟಕ ಜ್ವಲಂತ ಸಮಸ್ಯೆಗಳ ಬಗ್ಗೆ ಅರ್ಧ ಚರ್ಚೆಯಾಗಿದೆ. ಈಗಾಗಲೇ ಮಾನ್ಯ ಯು.ಬಿ.ವೆಂಕಟೇಶ್‌ರವರು ಮಾತನಾಡುತ್ತಿದ್ದಾರೆ. ಅವರು ಚರ್ಚೆಯನ್ನು ಪಾರಂಭ ಮಾಡಲಿ.

**ಸಭಾಪತಿಯವರು:-** ಈಗ ನಿಯಮ ೩೩೦ರ ಮೇರೆಗೆ ಚರ್ಚೆಗೆ ಮಾನ್ಯ ಪಿ.ಆರ್.ರಮೇಶ್‌ರವರ ವಿಷಯ ಇತ್ತು. ಆದರೆ, ಮಾನ್ಯ ಸಿ.ಎಂ.ಇಬ್ರಾಹಿಂರವರು ಏನು ಹೇಳಿದರು ಎಂದರೆ, ನಾನು ಉಪವಾಸ ಇದ್ದೇನೆ. ನನಗೆ ಮಾತನಾಡುವುದಕ್ಕೆ ಅವಕಾಶ ನೀಡಿ ಎಂದರೆ, ನಾನು ಅವರಿಗೆ ಅವಕಾಶ ನೀಡಿದೆ. ಈಗ ಮಾನ್ಯ ಪಿ.ಆರ್.ರಮೇಶ್‌ರವರ ವಿಷಯ ತೆಗೆದುಕೊಂಡ ನಂತರ ಉತ್ತರ ಕರ್ನಾಟಕ ಚರ್ಚೆಯನ್ನು ಆ ನಂತರ ತೆಗೆದುಕೊಳ್ಳುತ್ತೇನೆ.

**(ಗೊಂದಲ)**

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಪಿ.ಆರ್.ರಮೇಶ್‌ರವರ ೩೩೦ರ ಅಡಿ ಚರ್ಚೆಗೆ ಉತ್ತರವನ್ನು ಕೊನೆಗೆ ನೀಡುತ್ತೇವೆ.

**ಸಭಾಪತಿಯವರು:-** ಉತ್ತರ ಬಂದಿದ್ದರೆ. ಮಾನ್ಯ ಸದಸ್ಯರಿಗೆ ನೀಡಿ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ನಿಯಮ ೩೩೦ರ ಅಡಿಯಲ್ಲಿ ಆದ್ದ ಚರ್ಚೆಗೆ ಏನು, re-modernisation ಅನ್ನು ಜಾಸ್ತಿ ಮಾಡಿದ್ದಾರೆ. ದಯವಿಟ್ಟು ಆ ನಿಟ್ಟಿನಲ್ಲಿ ಅದನ್ನು cover ಮಾಡಿಕೊಳ್ಳಲಿ. ಈಗ ಉಪ್ಪಾರ ಜನಾಂಗದವರಿಗೆ ಜಾಸ್ತಿ ಹೋಗಿದೆ. ಅದು ಹೇಗೆ ಹೋಗಿದ್ದೆ ಎಂದು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಕಾನೂನು ಸಚಿವರು ಕೆಳಮನೆಯಲ್ಲಿ ಉತ್ತರ ನೀಡುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಮಂತ್ರಿಯವರನ್ನು ಇಲ್ಲಿಗೆ ಕರೆಯಿಸಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದಕ್ಕೆ ಉತ್ತರ ಕರ್ನಾಟಕದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಿ.

**ಸಭಾಪತಿಯವರು:-** ಮಾನ್ಯ ಪಿ.ಆರ್.ರಮೇಶ್‌ರವರೆ, ಮಾನ್ಯ ಕಾನೂನು ಮಂತ್ರಿಗಳು ಬರುವವರೆಗೆ ತಾವು ಕುಳಿತ್ತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅವರು ಬಂದ ಕೂಡಲೇ ಇದನ್ನು ಚರ್ಚೆಗೆ ತೆಗೆದುಕೊಳ್ಳಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗ ಉತ್ತರ ಕರ್ನಾಟಕದ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡಿಸಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಕಳೆದ ಮೂರು ದಿವಸಗಳಿಂದ ಇದೇ ರೀತಿ ಆಗುತ್ತಿದೆ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಸುಮ್ಮನಿರಿ, ನಾನು ಹೇಗೆ ಮಾಡುವುದು. ಈಗ ತಲೆಗೆ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಮಾತನಾಡುತ್ತಿದ್ದೀರಿ. ನಾನು ಹೇಳುತ್ತಿದ್ದೇನೆ, ತಾವು ಕುಳಿತುಕೊಳ್ಳಿ. ಮಾನ್ಯ ಪಿ.ಆರ್.ರಮೇಶ್‌ರವರೆ, ನಿಮ್ಮ ವಿಷಯಕ್ಕೆ ಮಾನ್ಯ ಕಾನೂನು ಮಂತ್ರಿಗಳು ಅಥವಾ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕಾಗುತ್ತದೆ. ಆದರೆ, ಅವರು ಕೆಳಮನೆಯಲ್ಲಿ ಉತ್ತರ ನೀಡುತ್ತಿದ್ದಾರೆ. ಅದಕ್ಕೆ ಅವರು ಬರುವವರೆಗೆ wait ಮಾಡುತ್ತಿರೋ ಹೇಗೆ?

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಇವತ್ತು ನೀವು ಖಂಡಿತವಾಗಿ ಇದಕ್ಕೆ ಅವಕಾಶ ಮಾಡಿಕೊಡುತ್ತೇನೆಂದರೆ, ನಾನು ತಾವು ಹೇಳಿದ ಹಾಗೆ ಕೇಳುತ್ತೇನೆ.

**ಸಭಾಪತಿಯವರು:-** ನಾನು ನೂರಕ್ಕೆ ನೂರು ಮಾಡಿಕೊಡುತ್ತೇನೆ. ತಾವು ಕುಳಿತುಕೊಳ್ಳಿ.
**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, this is the correct decision.

**ಶ್ರೀ ಗೋವಿಂದ ಎಂ. ಕಾರಜೋಳ (ಜಲಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಿ.ಎಂ.ಇಬ್ರಾಹಿಂ ಸಾಹೇಬರು ಹೇಳಿದರು. ಇರದೇ ಇರತಕ್ಕಂಥವರು ನನ್ನ ಮೇಲೆ ಬಿದ್ದರು ಎಂದು. ನಾನು ಅವರ ಮೇಲೆ ಬಿದ್ದಿಲ್ಲ. ನಾನು ಅವರಿಗೆ ಸಹಕಾರಿಯಾಗುವಂತಹ material ಅನ್ನು ತೆಗೆದುಕೊಂಡು ಬಂದಿದೆ. ಅದು ಅವರಿಗೆ ಉಪಯೋಗವಾಗುತ್ತಿತ್ತು.

**ಸಭಾಪತಿಯವರು:-** ಮಾನ್ಯ ಗೋವಿಂದ ಎಂ. ಕಾರಜೋಳರವರೆ, ನೀವು ಮತ್ತು ಮಾನ್ಯ ಸಿ.ಎಂ.ಇಬ್ರಾಹಿಂ, ಇಬ್ಬರು ಕೂಡಿಕೊಂಡು ಮೊದಲು ಏನು ಮಾಡಿದ್ದೀರಿ ಎಂದು ನನಗೆ ಗೊತ್ತಿದೆ. ತಾವು ಸುಮ್ಮನೆ ಕುಳಿತುಕೊಳ್ಳಿ. ಮಾನ್ಯ ಸಿ.ಎಂ.ಇಬ್ರಾಹಿಂ ರವರ ವಿಷಯ ಮುಗಿದು ಹೋಗಿದೆ. ಅವರ ಬಗ್ಗೆ ಮಾತನಾಡುವುದನ್ನು ಬಿಟ್ಟುಬಿಡಿ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ನಾನು ಅವರ ಮೇಲೆ ಬೀಳುವುದಕ್ಕೆ ಹೇಗೆ ಸಾಧ್ಯ?

**ಸಭಾಪತಿಯವರು:-** ನಾನೂ ಸಹ ಅದನ್ನೇ ಹೇಳುತ್ತಿದ್ದೇನೆ.
**ಶ್ರೀ ಸಿ.ಎಂ.ಇಬ್ರಾಹಿಂ:-** ಅದು ನಮ್ಮ ಹಳೆಯ ಕಂಪನಿ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:-** ಅದು ನನಗೆ ಗೊತ್ತಿದೆ. ಮಾನ್ಯ ಯು.ಬಿ.ವೆಂಕಟೇಶ್‌ರವರೆ, ಹತ್ತು ನಿಮಿಷ ಮಾತನಾಡಿ. ಅದಕ್ಕಿಂತ ಹೆಚ್ಚು ಸಮಯ ಕೊಡುವುದಿಲ್ಲ.

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಸ್ವಲ್ಪ ಕಲ್ಯಾಣ ಕರ್ನಾಟಕದ ಬಗ್ಗೆ ಮಾತನಾಡುವುದು ಇದೆ. ಅದಕ್ಕೆ ಅವಕಾಶ ಮಾಡಿಕೊಡಿ. ಈಗ ಮಾನ್ಯ ಶಶೀಲ್ ಜಿ. ನಮೋಶಿಯವರು ಮಾತನಾಡುತ್ತಾರೆ.

**ಸಭಾಪತಿಯವರು:-** ಈಗ ನೀವು ಮಾತನಾಡಬೇಡಿ ಎಂದು ಯಾರು ಹೇಳಿದ್ದಾರೆ. ಮಾನ್ಯ ಯು.ಬಿ.ವೆಂಕಟೇಶ್‌ರವರು ನಿನ್ನೆಯ ದಿವಸ ಅರ್ಧ ಮಾತನಾಡಿದ್ದಾರೆ. ಅವರು ಮುಗಿದ ಮೇಲೆ ನಿಮಗೆ ಅವಕಾಶ ಕೊಡುತ್ತೇನೆ.

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯಸಭಾಪತಿಯವರೇ, ಈಗ ಉತ್ತರ ಕರ್ನಾಟಕದಲ್ಲಿ ಅಧಿವೇಶನ ನಡೆಯುತ್ತಿದೆ. ಅದಕ್ಕೆ ಕಲ್ಯಾಣ ಕರ್ನಾಟಕಕ್ಕೆ ಏನೇನು ಅನ್ಯಾಯವಾಗಿದೆ ಹೇಳುತ್ತೇವೆ. ನೀವು ಸ್ವಲ್ಪ ನಮ್ಮ ಕಡೆಯೂ ಸಹ ನೋಡಿ.

**ಸಭಾಪತಿಯವರು:-** ಮಾನ್ಯ ಸುನೀಲ್ ವಲ್ಯಾಪುರ್‌ರವರೆ, ನೀವು ಯಾವಾಗಲಾದರೂ ಒಮ್ಮೆ ಬಂದು ಮಾತನಾಡುತ್ತೀರಿ. ನಿನ್ನೆಯ ದಿವಸ ಮಾನ್ಯ ಯು.ಬಿ.ವೆಂಕಟೇಶ್‌ರವರು ಮಾತನಾಡುತ್ತಿರುವುದು ಅರ್ಧವಾಗಿದೆ. ಅವರು ಮಾತನಾಡಿದ್ದು ಮುಗಿದ ನಂತರ ನಿಮಗೆ ಅವಕಾಶ ಕೊಡುತ್ತೇನೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

## 5. ನಿಯಮ 68ರ ಮೇರೆಗೆ ಮುಂದುವರೆದ ಚರ್ಚೆ

**ವಿಷಯ:- ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ.**

- - - - -

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತ್ತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಈ ಹಿಂದಿನ ಕೇಂದ್ರದ ಯು.ಪಿ.ಎ ಸರ್ಕಾರ ಸಂವಿಧಾನಕ್ಕೆ 118ನೇ ತಿದ್ದುಪಡಿಯನ್ನು ತರುವ ಮೂಲಕ ಕಲಂ 371(ಜೆ) ಅನ್ನು ಹೈದ್ರಾಬಾದ್-ಕರ್ನಾಟಕದ ಆರು ಜಿಲ್ಲೆಗಳಿಗೆ ಒದಗಿಸಿದೆ. ಇದಕ್ಕೆ ನಮ್ಮ ನಾಯಕರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇದರ ನಾಯಕತ್ವವನ್ನು ತೆಗೆದುಕೊಂಡು, ಬಿಜೆಪಿಯವರನ್ನು ಬಿಟ್ಟು ಬೇರೆ ಪಕ್ಷಗಳ ಜೊತೆಗೂಡಿ ಕಲಂ 371(ಜೆ) ಅನ್ನು ತಂದಿದ್ದಾರೆಂದು ಹೇಳುವುದಕ್ಕೆ ನಮಗೆ ಸಂತೋಷವಾಗುತ್ತದೆ. ನಾನು ನಿನ್ನೆಯ ದಿವಸ ಅರ್ಧ ಭಾಗ ಮಾತನಾಡಿದ್ದೆ. ಇವತ್ತು ಅದರ ಮುಂದುವರೆದ ಭಾಗವನ್ನು ಮಾತನಾಡುತ್ತೇನೆ.

**ಸಭಾಪತಿಯವರು:-** ನೀವು ನಿನ್ನೆಯ ದಿವಸ ಶೇಕಡಾ ೮೦ರಷ್ಟು ಮಾತನಾಡಿದ್ದೀರಿ. ನಾನು ನೀವು ಮಾತನಾಡಿರುವ ಸಮಯವನ್ನು ಬರೆದಿಟ್ಟುಕೊಂಡಿದ್ದೇನೆ. ನಾನು ನಿಮಗೆ ಹತ್ತು ನಿಮಿಷಕ್ಕಿಂತ ಹೆಚ್ಚಿಗೆ ಸಮಯ ಕೊಡುವುದಿಲ್ಲ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ಕೇವಲ ಶೇಕಡಾ ೩೦ರಷ್ಟು ಮಾತ್ರ ಮಾತನಾಡಿದ್ದೇನೆ. ತಾವು ಬೇಕಿದ್ದರೆ ಮೇಡಂರವರನ್ನು ಕೇಳಿ. ಈಗ ಕಲ್ಯಾಣ ಕರ್ನಾಟಕದಲ್ಲಿ ಕಲಂ 371(ಜೆ) ಬಂದಮೇಲೆ, ಆಗಬೇಕಾದಂತಹ ಯಾವುದೇ ಕೆಲಸ ಆಗಿಲ್ಲವೆಂದು ನಿನ್ನೆಯ ದಿವಸ ಸುಮಾರು ಉದಾಹರಣೆಗಳನ್ನು ನೀಡಿದ್ದೇನೆ. ಇವತ್ತಿಗೂ ಸಹ KKRDB (Kalyana Karnataka Region Development Board) ಯಲ್ಲಿ ಶೇಕಡಾ 50ರಷ್ಟು ಹುದ್ದೆಗಳು ಖಾಲಿಯಿವೆ. ಇದಕ್ಕೆ ಇವರು ಯಾರನ್ನು ಸಹ clearance ಕೇಳಬೇಕಾಗಿಲ್ಲ. ಇದಕ್ಕೆ ಸಂವಿಧಾನದ ಪ್ರಕಾರ ಯಾವಾಗ ಕಲಂ 371(ಜೆ) ತಿದ್ದುಪಡಿಯಾಗಿ ಬಂತೋ, ಆಗ ರಾಜ್ಯದ ಮಾನ್ಯ ಸಿದ್ದರಾಮಯ್ಯನವರ ಕಾಂಗ್ರೆಸ್ ಸರ್ಕಾರ ಇದು ಅನುಷ್ಠಾನವಾಗಲಿ ಎಂದು ಬೇಗ ನಿಯಮಗಳನ್ನು ಮಾಡಿಕೊಟ್ಟಿತು. ಆಗ ಆ ಭಾಗದ ಮಂತ್ರಿ ಯಾರು ಇರುತ್ತಾರೋ ಅವರೇ ಮಂಡಳಿಗೆ ಅಧ್ಯಕ್ಷರಾಗಿರಬೇಕೆಂದು ಮಾಡಿದರು. ಈ ಸರ್ಕಾರ ಬಂದ ಮೇಲೆ ಒಂದೂವರೆ ವರ್ಷ ಆ ಭಾಗಕ್ಕೆ ಒಬ್ಬರನ್ನು ಮಂತ್ರಿಗಳನ್ನು ಮಾಡಲಿಲ್ಲ ಮತ್ತು ಮಂಡಳಿಗೆ ಅಧ್ಯಕ್ಷರನ್ನು ಸಹ ನೇಮಕ ಮಾಡಲಿಲ್ಲ. ಇವರು ಕೊನೆಗೆ ಏನು ಮಾಡಿದರು ಎಂದರೆ, ಈ ಗಂಜಿ ಕೇಂದ್ರದ ರೀತಿ ಅಲ್ಲಿನ ಶಾಸಕರಿಗೆ ಆ ಹುದ್ದೆಯನ್ನು ನೀಡಿ, ಅವರನ್ನೇ ಅಧ್ಯಕ್ಷರನ್ನಾಗಿ ಮಾಡಿದರು. ಈಗ ಒಬ್ಬ ಮಂತ್ರಿ ಆ ಮಂಡಳಿಗೆ ಅಧ್ಯಕ್ಷನಾಗಿದ್ದರೆ, ಅವರು ಮಂತ್ರಿ ಪರಿಷತ್ತಿನಲ್ಲಿ ಇರುತ್ತಾರೆ. ಅವರು ಆ ಭಾಗದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬಹುದು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮತ್ತು ಅದಕ್ಕೆ ಏನು ಮಾಡಬಹುದು ಎಂದು ಕೇಳಬಹುದು. ಆ ಮಂಡಳಿಗೆ ಒಬ್ಬ ಶಾಸಕರನ್ನು ಅಧ್ಯಕ್ಷನಾಗಿ ಮಾಡಿದರೆ, ಅವರು ಕ್ಯಾಬಿನೆಟ್‌ಗೆ ಹೋಗುವಂತಿಲ್ಲ. ನೀವು ಶಾಸಕರಿಗೆ ಅಧ್ಯಕ್ಷರನ್ನಾಗಿ ಮಾಡಿ. ಅಂದರೆ, ಸುಮಾರು ಶಾಸಕರನ್ನು ಬೇರೆ ಬೇರೆ ಮಂಡಳಿಗಳಿಗೆ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಅದೇ ರೀತಿ ಅದರ ಅಧ್ಯಕ್ಷರನ್ನಾಗಿ ಮಾಡಿದ್ದರೆ ನಮ್ಮದೇನೂ ತಕರಾರು ಇರುತ್ತಿರಲಿಲ್ಲ. ಆದರೆ, ಈಗ ಅಲ್ಲಿ ಅಧ್ಯಕ್ಷರಾಗಿರುವವರು ಅವರು ಒಬ್ಬ ಶಾಸಕರು.  ಪಾಪ ಅವರು ಮಂತ್ರಿ ಪರಿಷತ್ತಿ ಹೋಗುವುದಕ್ಕೆ ಆಗುವುದಿಲ್ಲ ಮತ್ತು ಯಾವುದೇ ಮಂತ್ರಿಗಳ ಬಳಿ ಹೋಗಿ ಜೋರಾಗಿ ಕೇಳುವುದಕ್ಕೆ ಆಗುವುದ್ದಿಲ್ಲ. ಅದೇ ಒಬ್ಬ ಮಂತ್ರಿಯನ್ನು ಮಂಡಳಿಯ ಅಧ್ಯಕ್ಷನನ್ನಾಗಿ ಮಾಡಿದ್ದರೆ, ಬೇಕಾದಷ್ಟು ಅನುಕೂಲವಾಗುತ್ತಿತ್ತು. ಈ ಸರ್ಕಾರವಿರಬಹುದು, ಕೇಂದ್ರ ಸರ್ಕಾರವಿರಬಹುದು, ಅಂದರೆ, ಡಬಲ್ ಎಂಜಿನ್. ಕಲಬುರಗಿಯ ಔಟರ್ ರಿಂಗ್ ರೋಡ್ ಯೋಜನೆಯನ್ನು ರದ್ದುಪಡಿಸಿದರು. ಎನ್.ಜೆ.ಎಂ.-೨ ಇತ್ತು. ಅದು ತುಮಕೂರು ಜಿಲ್ಲೆಗೆ ಹೋಯಿತು. ಕಲ್ಯಾಣ ಕರ್ನಾಟಕದಲ್ಲಿ  ಒಂದೇ ಒಂದು SEZ (Special Economic Zones) ಇಲ್ಲ. ಜವಳಿ ಪಾರ್ಕ್ ರದ್ದಾಗಿ ಹೋಯಿತು. ನಾನು ಕಲಬುರಗಿ ಕೇಂದ್ರದ ಬಗ್ಗೆ ನಿನ್ನೆಯ ದಿವಸವೇ ಹೇಳಿದೆ. ಅದು ಈ ರಾಜ್ಯಕ್ಕೆ ಮೊದಲು ಇತ್ತು. ಅದನ್ನು ಏಕೆ ಮುಚ್ಚಿದರು? ಅದು analogue ಆಗಿತ್ತು. ಇವತ್ತಿನ ಟೆಕ್ನಾಲಜಿಯಲ್ಲಿ ಅದನ್ನು ಡಿಜಿಟಲ್ ಮಾಡುವುದಕ್ಕೆ ಏನು ಕಷ್ಟವಿದೆ? ಅವರು ಅದನ್ನು ಮಾಡಲಿಲ್ಲ. ಈಗ ಯಾದಗಿರಿ ಜಿಲ್ಲೆಯ ಸೈದಾಪುರದಲ್ಲಿ ರೈಲ್ವೆ ಕೋಚ್ ಫ್ಯಾಕ್ಟರಿ ಇದೆ. ಅಲ್ಲಿ ರೈಲ್ವೆ ಕೋಚ್ ಅನ್ನು ತಯಾರಿಸಲಾಗುತ್ತದೆ. ಅದರಲ್ಲಿ ಶೇಕಡಾ 50ರಷ್ಟು ಉತ್ಪಾದನೆ ಆಗುತ್ತಿಲ್ಲ. ಅಲ್ಲಿನ ಸಾಮರ್ಥ್ಯಕ್ಕೆ ಪ್ರತಿದಿನ 15 ರಿಂದ 20 ಚಾಸಿಸ್ ಉತ್ಪಾದನೆ ಆಗಬೇಕಾಗಿತ್ತು. ಆದರೆ, ಐದು ಚಾಸಿಸ್ ಮೇಲೆ ಉತ್ಪಾದನೆ ಆಗುತ್ತಿಲ್ಲ. ಅದನ್ನು ಯಾರೂ ಸಹ ಕೇಳುವವರೇ ಇಲ್ಲ. ಈಗ ಕಲಬುರಗಿ ರೈಲ್ವೆ ಡಿವಿಜನ್ ಅನ್ನು ಉತ್ತರ ಭಾರತದ ಲಾಥೋರ್‌ಗೆ ತೆಗೆದುಕೊಂಡು ಹೋದರು. ಆಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಂತ್ರಿಗಳಾಗಿದ್ದಾಗ, ಅದಕ್ಕೆ ಸುಮಾರು ಐದು ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಅದು ಬಜೆಟ್‌ನಲ್ಲಿ ಬಂದಿತ್ತು. ಅದರ ಕೆಲಸವನ್ನು ಸಹ ಪ್ರಾರಂಭ ಮಾಡಿದ್ದರು. ಮಾನ್ಯ ಡಿ.ವಿ.ಸದಾನಂದಗೌಡರು ಸಹ ನಾಮಕಾವಸ್ತೆಗೆ ಒಂದು ಲಕ್ಷನೋ ಒಂದು ಕೋಟಿಯನ್ನೋ ಇಟ್ಟಿದ್ದರು. ಆದರೆ, ಈಗ ಇರುವ ಕೇಂದ್ರ ಮತ್ತು ರಾಜ್ಯ ಸರ್ಕಾರ ಹಾಗೂ ಮಂತ್ರಿಗಳು ಇದನ್ನು ವಿಚಾರಿಸಲೇ ಇಲ್ಲ. ಆ ಡಿವಿಜನ್ ಸಹ ಆಗಲಿಲ್ಲ. ನಾನು ಅನುದಾನ ಕೊರತೆಯ ಬಗ್ಗೆ ಹೇಳುವುದಾದರೆ, ಅನುದಾನಕ್ಕೆ 1,500 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡುತ್ತಾರೆ. ಡಿಸೆಂಬರ್ ಕೊನೆಯಲ್ಲಿ 300 ಕೋಟಿ ರೂಪಾಯಿಗಳನ್ನು ಕೊಡುತ್ತಾರೆ. ಅದು ಮಾರ್ಚ್ ಒಳಗಡೆ ಪೂರ್ಣಗೊಳ್ಳಬೇಕೆಂದು ಹೇಳುತ್ತಾರೆ. ಈ ರೀತಿಯಾದರೆ ಹೇಗೆ? ಮೊನ್ನೆಯ ದಿವಸ ಮಂತ್ರಿಗಳು ಹೋಗಿ ಕಲ್ಯಾಣ ಕರ್ನಾಟಕ ಎಂದು ದೊಡ್ಡ ಕಾರ್ಯಕ್ರಮವನ್ನು ಮಾಡಿ, ಅದಕ್ಕೆ ಇನ್ನೂ ಡಬಲ್ ಅಂದರೆ, 1,500 ಕೋಟಿಯಿಂದ 3,000 ಕೋಟಿ ಕೊಡುತ್ತೇವೆಂದರು. ಈಗ ಕೊಡುವಂತಹ 1,500 ಕೋಟಿ ರೂಪಾಯಿಗಳಲ್ಲಿ 300 ಕೋಟಿ ರೂಪಾಯಿಗಳನ್ನು ಸೆಪ್ಟೆಂಬರ್-ಡಿಸೆಂಬರ್ ತಿಂಗಳಿನಲ್ಲಿ ಕೊಟ್ಟಿದ್ದಾರೆ. ಅಲ್ಲಿ ಸಿಬ್ಬಂದಿಗಳು ಇಲ್ಲ. ಅವರು ಈ 300 ಕೋಟಿಗೆ ಲೆಕ್ಕಾಚಾರ ಮಾಡಿ ಅದನ್ನು ಖರ್ಚು

ಮಾಡುವಷ್ಟರಲ್ಲಿ, ಮಾರ್ಚ್ ತಿಂಗಳು ಬಂದು ಬಿಡುತ್ತದೆ. ಈ ಕಂತು ಇಷ್ಟಕ್ಕೆ ಮುಗಿದು ಹೋಗುತ್ತದೆ. ಮೊದಲು ಒಂದು ಮನವಿ ಮಾಡಿದ್ದರು, ಅಂದರೆ, ಹೈದ್ರಾಬಾದ್-ಕರ್ನಾಟಕದ ಎಲ್ಲಾ ಶಾಸಕರು ಮತ್ತು ಜನಪ್ರತಿನಿಧಿಗಳು, ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಶಾಸಕರುಗಳು ಮಾನ್ಯ ಹೆಚ್.ಡಿ.ಕುಮಾರ್‌ಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ ಇದನ್ನು ವಾಪಸ್ಸು ತೆಗೆದುಕೊಳ್ಳಬಾರದು ಮತ್ತು lapse ಆಗುವುದಕ್ಕೆ ಬಿಡಬಾರದು ಎಂದು. ಆದರೆ, ಅದು ಆಗಲೇ ಇಲ್ಲ. ಆದರೆ, ಇವರ ಸರ್ಕಾರದಲ್ಲಾದರೂ ಈ ಭಾಗಕ್ಕೆ ಅದು carryover ಆಗುವಂತೆ ಮಾಡಲಿ. ಈಗ ಉದ್ಯೋಗದ ಬಗ್ಗೆ ಹೇಳುವುದಾದರೆ, ಈಗ ಕಲ್ಯಾಣ ಕರ್ನಾಟಕದಲ್ಲಿ ತುಂಬಬೇಕಾಗಿರುವಂತಹ ಸುಮಾರು 25 ರಿಂದ 30 ಸಾವಿರ ಹುದ್ದೆಗಳು ಖಾಲಿಯಿವೆ. ಈ ಹುದ್ದೆಗಳನ್ನು ತಕ್ಷಣ ತುಂಬಬೇಕು. ಸರ್ಕಾರ ಆ ಹುದ್ದೆಗಳನ್ನು ಏಕೆ ತುಂಬುತ್ತಿಲ್ಲವೆಂದು ಹೇಳಬೇಕು. ಆ ನಂತರ ಹುದ್ದೆಗಳ ನೇಮಕಾತಿಯಲ್ಲಿ ಈ ಭಾಗದವರಿಗೆ ಶೇಕಡಾ ಆ ರಷ್ಟು ಅವಕಾಶ ಸಿಗಬೇಕು. ಆದರೆ, ಅದು ಅವರಿಗೆ ಸಿಗುತ್ತಿಲ್ಲ. ಆದಕಾರಣ ಜನರಿಗೆ ಮತ್ತು ಸರ್ಕಾರಕ್ಕೆ ಗೊತ್ತು. ಹೊರಗಡೆ ಯಾರಿಗೂ ಶೇಕಡಾ ಆ ರಷ್ಟು ಹುದ್ದೆಗಳು ಸಿಗುತ್ತಿಲ್ಲ. ಕಲಂ 371(ಜೆ) ಪ್ರಕಾರ ಅವರಿಗೆ ಶೇಕಡಾ ಆ ರಷ್ಟು ಹುದ್ದೆಗಳು ದೊರೆಯಬೇಕಾಗಿತ್ತು. ಅವರಿಗೆ ಮುಂಬಡ್ತಿಗಳು ಸಿಗಬೇಕಾಗಿತ್ತು. ಅವರಿಗೆ ಇದರಲ್ಲಿ ಅನ್ಯಾವಾಗುತ್ತಿದೆ. 2017-18ರಲ್ಲಿ 6 ಮೆಡಿಕಲ್ ಕಾಲೇಜುಗಳ ಘೋಷಣೆಯಾಗುತ್ತದೆ. ಯಾದಗಿರಿ ಜಿಲ್ಲೆ, ಚಿಕ್ಕಬಳ್ಳಾಪುರ ಜಿಲ್ಲೆ ಮತ್ತು ಹಾವೇರಿ ಜಿಲ್ಲೆ ಇತ್ಯಾದಿ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜ್‌ಗೆ ಸುಮಾರು 500 ರಿಂದ 750 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೆ, ಯಾದಗಿರಿ ಮೆಡಿಕಲ್ ಕಾಲೇಜ್‌ಗೆ ಬಜೆಟ್‌ನಲ್ಲಿ ಒಂದು ರೂಪಾಯಿಯನ್ನು ಸಹ ಮೀಸಲಿಟ್ಟಿಲ್ಲ. ಅವರು ಘೋಷಣೆ ಮಾಡಿದ್ದು ಬಿಟ್ಟರೆ, ಇವತ್ತಿನವರೆವಿಗೂ ಸಹ ಒಂದು ರೂಪಾಯಿಯ ಕೆಲಸ ಆಗಿಲ್ಲ. ಅದು ಏಕೆ ಎಂದು ಸರ್ಕಾರ ಹೇಳಬೇಕು.

**ಶ್ರೀ ಅಲ್ಲಂ ವೀರಭದ್ರಪ್ಪ:-** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:-** ಮಾನ್ಯ ಯು.ಬಿ.ವೆಂಕಟೇಶ್‌ರವರೆ, ನನ್ನ ಕಡೆ ನೋಡಿಕೊಂಡು ಮಾತನಾಡಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಅವರು ಈ ಭಾಗದವರು. ನಾನು ಏನಾದರೂ ತಪ್ಪು ಹೇಳಿದರೆ ಅದನ್ನು ಸರಿಪಡಿಸಲಿ.

**ಸಭಾಪತಿಯವರು:-** ಮಾನ್ಯ ಅಲ್ಲಂ ವೀರಭದ್ರಪ್ಪನವರೆ, ಅವರು ಹೇಳುವುದನ್ನು ನೀವು ಬರೆದು ಇಟ್ಟುಕೊಳ್ಳಿ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಈಗ ರಾಜ್ಯದಲ್ಲಿ ಯಾವ್ಯಾವ ಜಿಲ್ಲೆಗಳು ಏನೇನು ಇಂಡೆಕ್ಸ್‌ನಲ್ಲಿ ಇದೆ ಎಂದು. ನೀತಿ ಆಯೋಗದವರು ಒಂದು ಇಂಡೆಕ್ಸ್ ಮಾಡಿದ್ದಾರೆ. ಯಾದಗಿರಿ ಜಿಲ್ಲೆ ೩ನೇ ಇಂಡೆಕ್ಸ್‌ನಲ್ಲಿ ಇದೆ. ರಾಜ್ಯದಲ್ಲಿ ಸಾಕ್ಷರತೆಯ ಪ್ರಮಾಣ ಶೇಕಡಾ 75.56 ಇದ್ದರೆ. ಯಾದಗಿರಿ ಜಿಲ್ಲೆಯಲ್ಲಿ ಸಾಕ್ಷರತೆಯ ಪ್ರಮಾಣ ಶೇಕಡಾ 53ರಷ್ಟು ಇದೆ. ಈಗ ಒಂದು ಕೈಗಾರಿಕೆ ಪ್ರದೇಶ ಮಾಡುವುದಕ್ಕೆ 2011ರಲ್ಲಿ ಯಾದಗಿರಿ ಜಿಲ್ಲೆಯ ಕಡಚೂರು ಬಳಿ ಮೂರು ಸಾವಿರ ಎಕರೆ ಜಮೀನು ವಶಪಡಿಸಿಕೊಳ್ಳುತ್ತಾರೆ. ಆದರೆ, ನನಗೆ ಗೊತ್ತಿರುವಂತೆ ಅಲ್ಲಿ 7 ರಿಂದ 8 ಕೈಗಾರಿಕೆಗಳು ಮಾತ್ರ ಇವೆ.

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು 2011ರ ಸಾಕ್ಷರತೆಯ ಪ್ರಮಾಣದ ಬಗ್ಗೆ ಹೇಳುತ್ತಿದ್ದಾರೆ. ಇನ್ನು ಜನಗಣತಿ ಆಗಿಲ್ಲ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಡಾ||ತಳವಾರ್ ಸಾಬಣ್ಣನವರು ಉಪಕುಲಪತಿಯಾಗಿದ್ದಂತಹವರು. 2011ರ ನಂತರ ಜನಗಣತಿ ಎಲ್ಲಿ ಆಗಿದೆ? ಈಗ ದಾಖಲೆಯಲ್ಲಿ ಏನಿದೆ ಅದನ್ನು ಹೇಳುತ್ತಿದ್ದೇನೆ.

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಅದಕ್ಕೆ ಇಂದಿನ ಸರ್ಕಾರ ಕಾರಣವಾಗುತ್ತದೆಯೇ?

**ಸಭಾಪತಿಯವರು:-** ಡಾ: ತಳವಾರ್ ಸಾಬಣ್ಣನವರೆ, ಉತ್ತರ ಹೇಳುವಾಗ ಅದನ್ನು ಹೇಳಿ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಸರ್ಕಾರ ಉತ್ತರ ಹೇಳುವಾಗ, ಅವರು ಅದನ್ನು ಹೇಳಲಿ.

**(ಗೊಂದಲ)**

**(ಮುಂದು...**

(1298) 23.12.2021 03.30 LL-VK

**(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಮಾನ್ಯ ತಳವಾರ್ ಸಾಬಣ್ಣನವರೇ, ತಾವು ಪ್ರಾಂಶುಪಾಲರಿದ್ದೀರಿ. ತಮ್ಮ ಕಡೆ ಕೈ ತೋರಿಸಿದಾಗ ಮಾತ್ರ ತಾವು ಮಾತನಾಡಬೇಕು. ಈಗ ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಯು.ಬಿ. ವೆಂಕಟೇಶ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಕಳೆದ ಬಾರಿ ನಡೆದ ಅಧಿವೇಶನದಲ್ಲಿಯೂ ಸಹ ನಾನು ಮಾತನಾಡುವಾಗ ಮಾನ್ಯ ತಳವಾರ್ ಸಾಬಣ್ಣನವರು ಇದೇ ರೀತಿ ಮಾತನಾಡಿದ್ದರು. ಕಳೆದ ಬಾರಿಯ ಅಧಿವೇಶನದಲ್ಲಿ ನಾನು, "ಆ ಭಾಗದವರಿಗೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅನ್ಯಾಯ ಆಗಿದೆ. ಚುನಾವಣಾ ಕಾಲದಲ್ಲಿ ಕೋಳಿ ಸಮಾಜವನ್ನು ಎಸ್.ಟಿ.ಗೆ ಸೇರಿಸಿ” ಎಂದು ಹೇಳಿದಾಗ ಇವರೆಲ್ಲರೂ “ಓಹೋ” ಎಂದುಕೊಂಡು ಮೇಲೆ ಎದ್ದು ನಿಂತರು. ಅದು ಇವೊತ್ತಿನವರೆಗೂ ಆಗಿರುವುದಿಲ್ಲ. ನಾನು ಏನಾದರೂ ಹೇಳಿದರೆ ಮಾತ್ರ ಅದಕ್ಕೆ ಎದುರು ಮಾತನಾಡುತ್ತಾರೆ. ನಾನು ಅವರ ಭಾಗದ ಬಗ್ಗೆ ಮಾತನಾಡಿದ್ದಕ್ಕಾಗಿ ಅವರು ನನ್ನನ್ನು ಅಭಿನಂದಿಸುವುದನ್ನು ಬಿಟ್ಟು, ನನಗೆ ಹೇಳುತ್ತಾರೆ. ಇದು ಯಾವ ನ್ಯಾಯ? ಹೈದರಾಬಾದ್-ಕರ್ನಾಟಕದ ಬಗ್ಗೆ ಮಾತನಾಡಬಾರದೆಂದರೆ ಅದನ್ನು ಹೇಳಲಿ, ನಾನು ಸುಮ್ಮನೆ ಕುಳಿತುಕೊಳ್ಳುತ್ತೇನೆ.

**ಸಭಾಪತಿಯವರು:-** ತಾವು ಮಾತನಾಡಿ.

**ಶ್ರೀ ಸಿ.ಎಂ.ಇಬ್ರಾಹಿಂ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ತಾವು 'ಸಾಬಣ್ಣ', 'ಸಾಬಣ್ಣ' ಎಂದು ಕರೆದರೆ ಹೊರಗಡೆ ಸಾಬರಿಗೆ ತಪ್ಪು ಸಂದೇಶ ಹೋಗುತ್ತದೆ.

**ಸಭಾಪತಿಯವರು:-** ಅಯ್ಯೋ, ಅವರ ಹೆಸರು ಸಾಬಣ್ಣ ಕಣ್ರೀ. ಅಂದರೆ, ಅವರ ಹೆಸರು 'ತಳವಾರ್ ಸಾಬಣ್ಣ' ಎಂದು. ಅದಕ್ಕೆ ನಾನು ಅವರ ಹೆಸರು ಕರೆದಿದ್ದೇನೆ. ಹೌದು ತಾನೆ ಸಾಬಣ್ಣನವರೆ?

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಹೌದು ಸರಿ.

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಯಾರು ತಪ್ಪು ತಿಳಿದುಕೊಳ್ಳಬಾರದೆಂದು ನಾನು ಆ ರೀತಿ ಹೇಳಿದೆನು.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಯಾದಗಿರಿ ಜಿಲ್ಲೆಯಲ್ಲಿ ಶಿಕ್ಷಣ 30ನೇ ಸ್ಥಾನದಲ್ಲಿದೆ. ಈ ರಾಜ್ಯದ per capita income 2,05,692 ರೂಪಾಯಿ ಪ್ರತಿ ಮನುಷ್ಯನಿಗೆ ಆದರೆ, ಯಾದಗಿರಿ ಜಿಲ್ಲೆಯಲ್ಲಿ 97,363 ರೂಪಾಯಿ. ಏತಕ್ಕಾಗಿ, ಹೈದರಾಬಾದ್-ಕರ್ನಾಟಕದ ಯಾದಗಿರಿ 30 ನೇ ಸ್ಥಾನ, ರಾಯಚೂರು 29 ನೇ ಸ್ಥಾನ, ಬಳ್ಳಾರಿ 23ನೇ ಸ್ಥಾನ. ಪ್ರತ್ಯೇಕ ರಾಜ್ಯದ ಕೂಗು 2018ರಲ್ಲಿ ಬಂದಿತ್ತು. ಆಗ, ಸ್ಥಳೀಯವಾಗಿದ್ದಂತಹ ವೈಜನಾಥ್ ಪಾಟೀಲ್‌ರವರು ಪ್ರತ್ಯೇಕ ರಾಜ್ಯಕ್ಕಾಗಿ ಬಹಳಷ್ಟು ಹೋರಾಟ ಮಾಡಿದ್ದರು. ಈಗ ಅವರು ಮರಣ ಹೊಂದಿರುತ್ತಾರೆ. ಆ ಸಮಯದಲ್ಲಿ ಅವರು, “ನಮ್ಮ ಭಾಗಕ್ಕೆ ತಾವು ಯಾವುದೇ ರೀತಿಯ ಅನುಕೂಲ ಮಾಡುವುದಿಲ್ಲ. ಅದಕ್ಕಾಗಿ ನಾವು ಪ್ರತ್ಯೇಕ ರಾಜ್ಯ ಮಾಡುತ್ತೇವೆ” ಎಂದು ಹೋರಾಟ ಮಾಡಿದರು. ಆಗ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರ ಸರ್ಕಾರ, “ಸುಮಾರು 09

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಇಲಾಖೆಗಳನ್ನು ಹೈದರಾಬಾದ್-ಕರ್ನಾಟಕಕ್ಕೆ ಸ್ಥಳಾಂತರ ಮಾಡುತ್ತೇವೆಂದು" ಹೇಳಿತ್ತು. ಅದರಂತೆ, ಈಗ ಎಷ್ಟು ಇಲಾಖೆಗಳು ಅಲ್ಲಿಗೆ ಸ್ಥಳಾಂತರವಾಗಿರುತ್ತದೆ? ಒಂದು ಇಲಾಖೆ ಸಹ ಸ್ಥಳಾಂತರವಾಗಿರುವುದಿಲ್ಲ. ತೊಗರಿಬೇಳೆ ಮತ್ತು ಬೇರೆ ರೀತಿ ದ್ವಿದಳ ಧಾನ್ಯಗಳನ್ನು ಬೆಳೆಯುವಂಥದ್ದು, ಗುಲ್ಬರ್ಗಾ ಅಥವಾ ಸುತ್ತಮುತ್ತಲ ಉತ್ತರ ಕರ್ನಾಟಕ ಭಾಗದಲ್ಲಿ. ಆದರೆ, ಅದರ ಬೋರ್ಡ್ ಇರುವುದು ಬೆಂಗಳೂರಿನಲ್ಲಿ. ಅದನ್ನು ಏತಕ್ಕಾಗಿ ಗುಲ್ಬರ್ಗಾಕ್ಕೆ ಶಿಫ್ಟ್ ಮಾಡುವುದಿಲ್ಲ? ಈ ಭಾಗದ ಯಾವುದೇ ಕ್ಷೇತ್ರದಲ್ಲಿ ಒಂದು ಹೆಗ್ಗುರುತು ಮೂಡುವಂತಹ ಕೆಲಸ ಆಗಿರುವುದಿಲ್ಲ.

ಅದರ ಜೊತೆಗೆ, ಹೈದರಾಬಾದ್-ಕರ್ನಾಟಕಕ್ಕೆ ಇಲ್ಲಿಯವರೆಗೂ ಎಷ್ಟು ಅನುದಾನ ನೀಡಲಾಗಿದೆ, ಯಾವುದೇ ಒಂದು ನೋಡುವಂತಹ ಕೆಲಸ ಆಗಿರುವುದಿಲ್ಲ. ಅಂದರೆ, ಹೈದರಾಬಾದ್-ಕರ್ನಾಟಕ ಬೋರ್ಡ್ ಬಂದ ನಂತರ ಸುಮಾರು 500 ಕೋಟಿ ಅಥವಾ 1000 ಕೋಟಿ ರೂಪಾಯಿಯ ಕೆಲಸ ಆಗಿರುವುದಿಲ್ಲ. ಯಾವುದೋ ಸಣ್ಣ ಸಣ್ಣ ರಸ್ತೆಗಳು ಅಂದರೆ, 30 ಅಡಿಯ ಸಣ್ಣ ರಸ್ತೆಯನ್ನು ಮಾಡುತ್ತಾರೆಯೇ ಹೊರತು, ಒಂದೇ ಒಂದು ನೋಡುವಂತಹ ಕೆಲಸ ಆಗಿರುವುದಿಲ್ಲ. ಆ ಭಾಗದ ಜನ ಎಲ್ಲಾ ಕ್ಷೇತ್ರದಲ್ಲಿಯೂ ಸಹ ಹಿಂದುಳಿದ್ದಾರೆ. ಈ ಬಗ್ಗೆ ಸರ್ಕಾರ ಮನಸ್ಸು ಮಾಡಬೇಕಾಗಿತ್ತು. ಮಾನ್ಯ ಕಾರಜೋಳ ಸಾಹೇಬರು ಅಲ್ಲಿ ಉಸ್ತುವಾರಿ ಇದ್ದರು, ಆ ಕಾಲದಲ್ಲಾದರೂ ಆ ಭಾಗ ಅಭಿವೃದ್ಧಿ ಹೊಂದಬೇಕಾಗಿತ್ತು. ಈ ರೀತಿ ಹೇಳಿದ್ದಕ್ಕೆ ಮಾನ್ಯ ಕಾರಜೋಳರವರು ಕೋಪ ಮಾಡಿಕೊಳ್ಳಬಾರದು. ನಾನು ಹೇಳುವುದೇನೆಂದರೆ, ಸರ್ಕಾರಗಳು 371(ಜೆ) ಬಂದ ಮೇಲೆ ಇದನ್ನು ಬೇರೆ ಕಡೆ ಹೋಲಿಕೆ ಮಾಡಬೇಕು. ಅಂದರೆ, 371(ಜೆ) ಬಂದಿರುವ ಬೇರೆ ರಾಜ್ಯಗಳಾದ ನಾಗಲ್ಯಾಂಡ್, ಮಣಿಪುರ, ಕಾಶ್ಮೀರ, ವಿದರ್ಭ ಮತ್ತು ತೆಲಂಗಾಣ ರಾಜ್ಯಗಳಿಗೆ ಪ್ರವಾಸ ನೀಡಿ, ಅಲ್ಲಿ ಯಾವ ರೀತಿ ಅಭಿವೃದ್ಧಿಯಾಗಿರುತ್ತದೆ ಅದನ್ನು ನಮ್ಮ ರಾಜ್ಯಕ್ಕೆ ಹೋಲಿಕೆ ಮಾಡಬೇಕು. ಏತಕ್ಕೆ ನಮ್ಮ ಭಾಗ ಈ ರೀತಿ ಇದೆ ಎಂದು ಹೋಲಿಕೆ ಮಾಡಬೇಕು. ಅದಕ್ಕೆ ಮೊದಲು ಸರ್ಕಾರ ಎಲ್ಲಾ ರೀತಿಯಿಂದಲೂ ಒಂದು ಸುಸೂತ್ರವಾದಂತಹ ಒಂದು ಸಮಗ್ರ ರೂಪುರೇಷೆಯನ್ನು ಇದಕ್ಕೆ ಕೊಡಬೇಕು. ಇದಕ್ಕೆ ನೀತಿ-ನಿರೂಪಣೆ ಆಗುವಂತಹ ಒಂದು ಕಾರ್ಯಕ್ರಮ ಆಗಬೇಕು. ಏಕೆಂದರೆ, ಇದಕ್ಕೆ ಬೋರ್ಡ್ ಆಗಿದೆ, ಅಧ್ಯಕ್ಷರು ಇದ್ದಾರೆ. ಆದರೆ, ಅದರಲ್ಲಿ ಸದಸ್ಯರು ಇರುವುದಿಲ್ಲ. ಇದರ ಜೊತೆಗೆ, ಈ ಬಗ್ಗೆ ಒಂದು ಉಪ ಸಮಿತಿಯನ್ನು ಮಾನ್ಯ ಶ್ರೀರಾಮುಲುರವರ ಅಧ್ಯಕ್ಷತೆಯಲ್ಲಿ ರಚಿಸಿದ್ದು, ಆ ಉಪಸಮಿತಿ ಇವೊತ್ತಿನವರೆಗೂ ಒಂದು ಸಭೆ ನಡೆಸಿರುವುದಿಲ್ಲ. ಅಂದರೆ, ಕೆ.ಕೆ.ಆರ್.ಡಿ.ಬಿ. ನಲ್ಲಿ ಈ ಸರ್ಕಾರ ಬಂದಾಗಿನಿಂದ ಒಂದೇ ಒಂದು ಸಭೆ ನಡೆಸಿರುವುದಿಲ್ಲ. ಇಷ್ಟು ಅನ್ಯಾಯ ಆಗಿರುವುದನ್ನು ಎಲ್ಲಿಯಾದರೂ ಕೇಳಿದ್ದೀರಾ? ಜನಪ್ರತಿನಿಧಿಗಳನ್ನು ಕರೆದು ಈ ಭಾಗದ ಜನರ ಸಮಸ್ಯೆಗಳನ್ನು ಕೇಳುವುದಕ್ಕೆ ಏನು ತೊಂದರೆ? ಅದನ್ನು ಮಾಡುವುದು ಅಥವಾ ಬಿಡುವುದು ಬೋರ್ಡ್ ಕಥೆ. ಕನಿಷ್ಠ ಪಕ್ಷ ಜನರನ್ನು ಕರೆದು, "ಈ ಭಾಗದಲ್ಲಿ ಏನಾಗಿದೆ, ನಾವೆಲ್ಲರೂ ಸೇರಿ ಏನು ಮಾಡಬೇಕು" ಎಂದು ಕೇಳುವುದಕ್ಕೆ ಒಂದು ಸಭೆ ನಡೆಸುವುದಿಲ್ಲವೆಂದರೆ ಏನರ್ಥ? ಸದರಿ ಉಪ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಮಿತಿಯಲ್ಲಿ ಮಾನ್ಯ ಶ್ರೀರಾಮುಲುರವರನ್ನು ಅಧ್ಯಕ್ಷರೆಂದು ಮಾಡುತ್ತಾರೆ. ಆದರೆ, ಅವರು ಆ ಭಾಗಕ್ಕೆ ಬರುವುದೇ ಇಲ್ಲ. ಆ ಉಪ ಸಮಿತಿಗೆ ಬೇರೆ ಸದಸ್ಯರು ಸಹ ಇರುವುದಿಲ್ಲ. ಸರ್, ನಾನು ಮಾತನಾಡಿದರೆ ಆಡಳಿತ ಪಕ್ಷದವರಿಗೆ ಬೇಜಾರು ಆಗುತ್ತದೆ.

**ಶ್ರೀ ಬಿ.ಜಿ. ಪಾಟೀಲ್:-** ಮಾನ್ಯ ವೆಂಕಟೇಶ್‌ರವರೇ ತಾವು ಮಾತನಾಡಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಪಾಟೀಲರೇ, ನಾವು ಹೇಗೆ ಮಾತನಾಡುವುದು? ನಾನು ಮಾತನಾಡಿದರೆ ತಮ್ಮ ಕಡೆಯವರೇ ಬೇಜಾರು ಮಾಡುತ್ತಾರೆ. ತಾವು ಇದ್ದ ಹಾಗೆ ಬೇರೆಯವರು ಮಾತನಾಡುವುದಿಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವೆಂಕಟೇಶ್‌ರವರೇ, ತಾವು ಅವರ ಕಡೆ ನೋಡದೆ, ಪೀಠದ ಕಡೆ ನೋಡಿ ಮಾತನಾಡಿ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, 371(ಜೆ) ಬಂದಿರುವುದು ಒಂದು ಪುಣ್ಯ. ಆದರೆ, ಈ ಸರ್ಕಾರಗಳಿಂದ ಆ ಭಾಗದ ಜನರು ಪಾಪವನ್ನು ಅನುಭವಿಸುವಂಥದ್ದು ಆಗುತ್ತಿದೆ. ಅದು ಯಾವುದೇ ಸರ್ಕಾರ ಇರಬಹುದು. ನಮ್ಮ ಸರ್ಕಾರ ಅಥವಾ ನಿಮ್ಮ ಸರ್ಕಾರ ಎಂದು ಅಲ್ಲ. ಸರ್ಕಾರಗಳು ಬರುತ್ತವೆ, ಹೋಗುತ್ತವೆ. ಆದರೆ, ಜನರು ಅವರೇ ಇರುತ್ತಾರೆ. ಆ ಕಷ್ಟಗಳು ಅಂದರೆ, ಅಲ್ಲಿ ಅತಿವೃಷ್ಟಿ-ಅನಾವೃಷ್ಟಿ ಬರುತ್ತಲೇ ಇರುತ್ತವೆ. ಉತ್ತರ ಕರ್ನಾಟಕದ ನೀರಾವರಿಗೆ ಸರ್ಕಾರದ ಯೋಜನೆ ಏನು? ಯಾವುದೋ ಒಂದು ಕಾಲದಲ್ಲಿ ರಾಯಚೂರು ಹತ್ತಿರ ಒಂದು ಬ್ಯಾರೇಜ್ ಮಾಡಿ ನೀರಾವರಿಗೆ ಅನುಕೂಲ ಮಾಡಿರುತ್ತಾರೆ. ಆದರೆ, ಗುಲ್ಬರ್ಗಾ ಅಥವಾ ಯಾದಗಿರಿ ಭಾಗದಲ್ಲಿ ಏನಾದರೂ ಯೋಜನೆ ಮಾಡಬಹುದಲ್ಲವೇ? ಈ ರೀತಿಯ ಯಾವುದೇ ಯೋಜನೆಗಳನ್ನು ಸರ್ಕಾರ ತೆಗೆದುಕೊಳ್ಳುವುದಿಲ್ಲ. ಇದರಿಂದಾಗಿ, ಆ ಭಾಗದ ಜನರು ಈ ಭಾಗಕ್ಕೆ ಕೂಲಿ ಕೆಲಸಕ್ಕೆ ಬರುತ್ತಾರೆ. ಅದನ್ನು ನೋಡಿದರೆ ನಮಗೆ ಅಯ್ಯೋ ಅನಿಸುತ್ತದೆ. ಏಕೆಂದರೆ, ಚಿಕ್ಕ ಚಿಕ್ಕ ಮಕ್ಕಳನ್ನು ಹೆತ್ತುಕೊಂಡ ತಾಯಿ ಮಣ್ಣು ಹೊರುತ್ತಿರುತ್ತಾರೆ. ಅದನ್ನು ನಾವು ಬೆಂಗಳೂರಿನಲ್ಲಿ ನೋಡುತ್ತಿರುತ್ತೇವೆ. ಆ ಮಕ್ಕಳಿಗೆ ವಿದ್ಯಾಭ್ಯಾಸ ಸಹ ಇರುವುದಿಲ್ಲ. ಸರ್ಕಾರ ಈ ನಿಟ್ಟಿನಲ್ಲಿ ಕ್ರಮ ತೆಗೆದುಕೊಂಡು ಅವರು ಗುಳೆ ಹೋಗುವುದನ್ನು ನಿಲ್ಲಿಸಬೇಕು. ಆ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಬೇಕು. ಅಲ್ಲದೇ, ಆ ಮಕ್ಕಳಿಗೆ ಪೌಷ್ಠಿಕ ಆಹಾರ ಇರುವುದಿಲ್ಲ; ಆಸ್ಪತ್ರೆಗಳಲ್ಲಿ ವೈದ್ಯರು ಇರುವುದಿಲ್ಲ; ಶಾಲೆಗಳಲ್ಲಿ ಶಿಕ್ಷಕರು ಇರುವುದಿಲ್ಲ; ಶಿಕ್ಷಕರು ಇರುವ ಕಡೆ ಶಾಲೆಗಳು ಸರಿಯಾಗಿರುವುದಿಲ್ಲ. ಆದುದರಿಂದ, ಈ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು.

ಯಾವುದೇ ಒಂದು ಭಾಗವನ್ನು ಅಭಿವೃದ್ಧಿ ಮಾಡಬೇಕಾದರೆ, Industrial, Social, Economical, Educational ಎಲ್ಲಾ ಹಬ್ ಒಂದು ಕಡೆ ಬರುವ ರೀತಿ ಮಾಡಬೇಕು. ಆದರೆ, ಸರ್ಕಾರ ಅಲ್ಲಿರುವಂತಹ ಜನರಿಗೆ ಕೆಲಸವನ್ನು ಕೊಡುವುದಿಲ್ಲ. ಆದರೆ, ನಮ್ಮ ಸರ್ಕಾರ 'ಡಬಲ್ ಇಂಜಿನ್ ಸರ್ಕಾರ' ಎಂದು ಹೇಳುತ್ತಾರೆ. ಈ ಹಿಂದೆ ಇದ್ದಂತಹ ಕೆಲಸಗಾರರಿಗೆ ಕೆಲಸದಿಂದ ಸಹ ತೆಗೆದಿರುತ್ತಾರೆ. ಕೋವಿಡ್-19 ಬಂದಾಗಿನಿಂದ ಎಷ್ಟು ಜನರ ಕೆಲಸ ಹೋಗಿರುತ್ತದೆ? ಕೋವಿಡ್-19 ಸಾಂಕ್ರಾಮಿಕ ರೋಗ ಪ್ರಾರಂಭವಾಗಿದ್ದೇ ಗುಲ್ಬರ್ಗಾ(ಕಲಬುರಗಿ) ಜಿಲ್ಲೆಯಲ್ಲಿ. ನನಗೆ ಗೊತ್ತಿರುವ ಮಾಹಿತಿ ಪ್ರಕ್ಕಾರ, ಸದರಿ ಕಲಬುರಗಿ ಜಿಲ್ಲೆಗೆ ಸೌದಿ ಅರೇಬಿಯಾದಿಂದ ಒಬ್ಬ ಮುಸಲ್ಮಾನರು ಬಂದ ನಂತರ ಕೋವಿಡ್-19 ನಮ್ಮ ರಾಜ್ಯದಲ್ಲಿ ಮೊದಲು ಪ್ರಾರಂಭವಾಗಿರುತ್ತದೆ. ಆದರೆ, ಕಲಬುರಗಿ ಜಿಲ್ಲೆಗೆ ಏಮ್ಸ್ ಬರಬೇಕಾಗಿತ್ತು. ಆದರೆ, ನಮ್ಮ ನಾಯಕರು ಕಲಬುರಗಿ ಜಿಲ್ಲೆಗೆ ಇ.ಎಸ್.ಐ. ಆಸ್ಪತ್ರೆ ತಂದರು. ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡಿ ಭವ್ಯವಾದ ಆಸ್ಪತ್ರೆ ನಿರ್ಮಾಣ ಮಾಡಲಾಗಿರುತ್ತದೆ. ಇದು ಇಡೀ ಏಷ್ಯಾ ದೇಶದಲ್ಲಿಯೇ ನಂಬರ್ ಒನ್ ಆಸ್ಪತ್ರೆಯಾಗಿರುತ್ತದೆ. ಏಕೆಂದರೆ, ಒಂದೇ ಆಸ್ಪತ್ರೆಯಲ್ಲಿ ಡೆಂಟಲ್ ಕಾಲೇಜು, ಆಸ್ಪತ್ರೆ ಮತ್ತು ಹಾಸ್ಟೆಲ್ ಒಂದೇ ಕ್ಯಾಂಪಸ್‌ನಲ್ಲಿ ಇರುವುದು ಇಡೀ ಏಷ್ಯಾದಲ್ಲಿಯೇ ನಂಬರ್ ಒನ್ ಆಗಿರುತ್ತದೆ. ಅದಕ್ಕೆ ಶೇಕಡ 87 ರಷ್ಟು ಅನುದಾನವನ್ನು ಕೇಂದ್ರ ಸರ್ಕಾರ ಕೊಡುತ್ತದೆ. ಇನ್ನುಳಿದ ಶೇಕಡ 13ರಷ್ಟು ರಾಜ್ಯ ಸರ್ಕಾರ ಕೊಡಬೇಕು. ಆದರೆ, ಆ ಆಸ್ಪತ್ರೆಯನ್ನು ಸರಿಯಾಗಿ ನಡೆಸುವುದಕ್ಕೆ ಈ ಸರ್ಕಾರದಿಂದ ಆಗುತ್ತಿಲ್ಲ. ಆ ಆಸ್ಪತ್ರೆಯನ್ನು ಏಮ್ಸ್ ಆಗಿ convert ಮಾಡಬಹುದು. ಅಂದರೆ, ಆ ಆಸ್ಪತ್ರೆಯಲ್ಲಿ ಅಷ್ಟು ಸೌಲಭ್ಯಗಳು ಇರುತ್ತವೆ. ಸುಮಾರು ನೂರಾರು ಕೋಟಿ ರೂಪಾಯಿ ಮೌಲ್ಯದ ಯಂತ್ರೋಪಕರಣಗಳು ಇರುತ್ತವೆ. ನನಗೆ ಗೊತ್ತಿರುವ ಮಾಹಿತಿ ಪ್ರಕಾರ ಆ ಆಸ್ಪತ್ರೆಯಲ್ಲಿರುವ ಸಾಕಷ್ಟು ಯಂತ್ರೋಪಕರಣಗಳನ್ನು ಇನ್ನೂ ಓಪನ್ ಸಹ ಮಾಡಿರುವುದಿಲ್ಲ. ಶೇಕಡ 13 ರಷ್ಟು ಖರ್ಚು ಆಗುವ ಅನುದಾನವನ್ನು ರಾಜ್ಯ ಸರ್ಕಾರ ಕೊಟ್ಟು ಆ ಆಸ್ಪತ್ರೆ ಶೇಕಡ 100 ರಷ್ಟು working condition ತರುವುದಕ್ಕೆ ಇವರಿಂದ ಸಾಧ್ಯವಾಗುತ್ತಿಲ್ಲ. ಏಮ್ಸ್ ಮಾಡಿ ಎಂದರೆ, ಅದು ಆಗುವುದಿಲ್ಲ. ನಿಮ್ಹಾನ್ಸ್ ಮಾಡಿ...

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ಸದರಿ ಆಸ್ಪತ್ರೆಯಲ್ಲಿ ಎಲ್ಲಾ ಯಂತ್ರೋಪಕರಣಗಳು ಕಾರ್ಯನಿರ್ವಹಿಸುತ್ತಿವೆ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಹೌದು. ಅವು ಕಾರ್ಯನಿರ್ವಹಿಸುತ್ತಿವೆ. ಆದರೆ, ಆ ಸ್ಟಾಂಡರ್ಡ್‌ಗೆ ಇರುವುದಿಲ್ಲ. ಅಂದರೆ, ಯಾವ ಸ್ಟಾಂಡರ್ಡ್‌ಗೆ ಅದು ಬರಬೇಕಾಗಿತ್ತೋ ಆ ಅಂತರರಾಷ್ಟ್ರೀಯ ಮಟ್ಟಕ್ಕೆ ಅದು ಇರುವುದಿಲ್ಲ.

**(ಗೊಂದಲ)**

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಮಾನ್ಯ ಶಶೀಲ್ ನಮೋಶಿಯವರೇ, ತಾವು ಮಾತನಾಡುವಾಗ ಅದನ್ನು ಹೇಳಿ. ಮಾನ್ಯ ವೆಂಕಟೇಶ್‌ರವರೇ ತಾವು ಪೀಠದ ಕಡೆ ನೋಡಿಕೊಂಡು ಮಾತನಾಡಿ.

**(ಗೊಂದಲ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಕಡತಕ್ಕೆ ತಪ್ಪು ಮಾಹಿತಿ ಹೋಗಬಾರದು.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ತಪ್ಪು ಮಾಹಿತಿ ನೀಡುತ್ತಿಲ್ಲ. ಅದು ಸರಿಯಾದ ಮಾಹಿತಿಯಾಗಿದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಕಲಬುರಗಿಯಲ್ಲಿರುವ ESI hospital is functioning with all parameters and requirements. ಏನು ಸರ್ಕಾರ ಕೊಟ್ಟಿದೆ ಆ ಎಲ್ಲಾ ಕೆಲಸಗಳನ್ನು ಸದರಿ ಆಸ್ಪತ್ರೆ ಮಾಡುತ್ತಿದೆ. ಇದು ನನ್ನ ಮಾಹಿತಿ.

**ಸಭಾಪತಿಯವರು:-** ಅದನ್ನು ತಾವು ಉತ್ತರ ಹೇಳುವಾಗ ಹೇಳಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನನ್ನ ಮಾಹಿತಿಯನ್ನು ನಾನು ಹೇಳುತ್ತಿದ್ದೇನೆ. ಒಂದು ವೇಳೆ ಅದನ್ನು ಮಾಡಿದ್ದರೆ ಒಳ್ಳೆಯದು. ಅದನ್ನು ಮಾಡಿಲ್ಲವೆನ್ನುವುದು ನನ್ನ ಮಾಹಿತಿ.

**ಸಭಾಪತಿಯವರು:-** ಮಾನ್ಯ ವೆಂಕಟೇಶ್‌ರವರೇ, ತಾವು ಪೀಠದ ಕಡೆ ಮಾತನಾಡಿ. ಅವರ ಕಡೆ ನೋಡಿ ಏತಕ್ಕೆ ಮಾತನಾಡುತ್ತೀರಿ?

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, without any prejudice.

**Sri U.B. VENKATESH:-** We trust you.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಅವರು ಆರೋಪ ಮಾಡುತ್ತಿದ್ದಾರೆಂದು ನಾನು ಹೇಳುತ್ತಿಲ್ಲ. ಆದರೆ, ಸದರಿ ಆಸ್ಪತ್ರೆಯಲ್ಲಿ ಎಲ್ಲಾ ಕಾರ್ಯಗಳು ಆಗುತ್ತಿದೆಯೆಂದು ಹೇಳುತ್ತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾವು ಸರ್ಕಾರವನ್ನು ಟ್ರಸ್ಟ್ ಮಾಡುತ್ತೇವೆ. ಆದರೆ, ಆ ಆಸ್ಪತ್ರೆ ಯಾವ ಸ್ಟ್ಯಾಂಡರ್ಡ್‌ಗೆ ಇರಬೇಕಾಗಿತ್ತು, ಅದು ಇರುವುದಿಲ್ಲ. ಅಲ್ಲಿ ಬೇಕಾದಂತಹ ಸ್ಟಾಫ್ ಇರುವುದಿಲ್ಲ. ಅಂದರೆ, ಅಲ್ಲಿಗೆ ಬೇಕಾದಂತಹ ಶೇಕಡ 100ರಷ್ಟು ಸ್ಟಾಫ್ ಇದೆಯೇ? ಅದನ್ನು ಯಾರಾದರೂ ತಿಳಿಸಲಿ. **(ಗೊಂದಲ)** ಅಲ್ಲಿಗೆ ಸೆಂಟ್ರಲ್ ಯೂನಿವರ್ಸಿಟಿ ತೆಗೆದುಕೊಂಡು ಬಂದಿದ್ದಾರೆ. ಆದರೆ, ಅಲ್ಲಿನ ಪ್ರಾಂಶುಪಾಲರು ಅರ್ಧ ಭಾಗ ಪಠ್ಯಕ್ರಮವನ್ನು ಪ್ರಾರಂಭಿಸಿರುವುದಿಲ್ಲ. ಆ ಮಾತನ್ನು ಒಪ್ಪಿಕೊಳ್ಳುತ್ತಾರೆಯೇ?

**ಸಭಾಪತಿಯವರು:-** ತಾವು ಅವರನ್ನು ಏತಕ್ಕೆ ಮೇಲೆ ಏಳಿಸುತ್ತೀರಿ? ತಾವು ಪೀಠದ ಕಡೆ ನೋಡಿ ಮಾತನಾಡಿ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಏಕೆಂದರೆ, ಈ ಸಬ್ಜೆಕ್ಟ್‌ನಲ್ಲಿ ಅವರೆಲ್ಲರೂ ಪರಿಣಿತರು. ನನ್ನ ಮೇಲೆ ಬೇಜಾರು ಮಾಡಿಕೊಳ್ಳುತ್ತಿದ್ದಾರೆ. ಹಾಗಾಗಿ, ನನಗೆ ಗೊತ್ತಿಲ್ಲದ ವಿಚಾರವನ್ನು ಅವರು ಹೇಳಲಿ ಎಂದು ನಾನು ಅವರ ಕಡೆ ಮಾತನಾಡುತ್ತಿದ್ದೇನೆ. ಈಗ ಅಲ್ಲಿ ಸೆಂಟ್ರಲ್ ಯೂನಿವರ್ಸಿಟಿ ಮತ್ತು ಇ.ಎಸ್.ಐ. ಇದೆ. ಅದರ ಜೊತೆಗೆ, ಏಮ್ಸ್ ಮತ್ತು ನಿಮ್ಹಾನ್ಸ್ ಮಾಡಲಿ. ಸೆಂಟ್ರಲ್ ಯೂನಿವರ್ಸಿಟಿಯಲ್ಲಿ ಏನಾದರೂ ಮಾಡಲಿ. ಇದೆಲ್ಲವೂ ಸಹ ಅಭಿವೃದ್ಧಿ ಮಾಡುವಂತಹ ವಿಷಯಗಳು. ಆ ಭಾಗದಲ್ಲಿ ಚೆನ್ನಾಗಿ ಅಭಿವೃದ್ಧಿ ಮಾಡಬೇಕು. ಶಿಕ್ಷಣ ಮತ್ತು ಉದ್ಯೋಗವನ್ನು ಎಲ್ಲಿಯವರೆಗೂ ಕೊಡುವುದಿಲ್ಲವೋ ಅಲ್ಲಿಯವರೆಗೂ ಈ ದೇಶ ಉದ್ಧಾರವಾಗುವುದಿಲ್ಲ. ಆ ಭಾಗದ ಮಕ್ಕಳಿಗೆ ಉದ್ಯೋಗ ಕೊಡುವುದಿಲ್ಲ, ಶಿಕ್ಷಣವು ಕೊಡುವುದಿಲ್ಲ. ಇನ್ನೂ ಈ ಸರ್ಕಾರಕ್ಕೆ ಆರೋಗ್ಯದ ಬಗ್ಗೆ ಮೊದಲೇ ಗೊತ್ತಿರುವುದಿಲ್ಲ.

**ಸಭಾಪತಿಯವರು:-** ಮಾನ್ಯ ವೆಂಕಟೇಶ್‌ರವರೇ, ತಮಗೆ ಮಾತನಾಡಲು ಇನ್ನೂ 05 ನಿಮಿಷ ಮಾತ್ರ ಅವಕಾಶವಿದೆ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ತಾವು ಹೇಗೆ ಹೇಳುತ್ತೀರೋ ಹಾಗೆ? ಈ ಕಲಂ ತಂದಿದ್ದು, ಈ ಭಾಗದ ಜನರಿಗೆ ಒಳ್ಳೆಯದಾಗಬೇಕೆಂದು. ಆದರೆ, ಒಳ್ಳೆಯದು ಆಗುತ್ತಿಲ್ಲ ಎಂಬ ಕೊರಗಿನಿಂದ ಈ ಅಂಶಗಳನ್ನು ನಾನು ಹೇಳುತ್ತಿದ್ದೇನೆ. ಎಲ್ಲಾ ಇಲಾಖೆಗಳಲ್ಲಿ ಅಗತ್ಯ ಸಿಬ್ಬಂದಿ ಇರುವುದಿಲ್ಲ. ಅಲ್ಲಿ ಯಾರು ಕೆಲಸ ಮಾಡುತ್ತಾರೆ? ಅಲ್ಲಿ ಕೇವಲ ಮೂರು ಇಲಾಖೆಗಳು ಇವೆ. ಒಂದು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಲೋಕೋಪಯೋಗಿ ಇಲಾಖೆ, ಜಿಲ್ಲಾ ಪಂಚಾಯಿತಿ ಮತ್ತು ಖಜಾನೆ ಇರುತ್ತದೆ. ಅದನ್ನು ಹೊರತುಪಡಿಸಿ ಬೇರೆ ಯಾವುದೇ ಇಲಾಖೆ ಇರುವುದಿಲ್ಲ.

(ಮುಂದು)

**(1299) 23.12.2021 3.40 YL-BNS** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಯು.ಬಿ.ವೆಂಕಟೇಶ್ (ಮುಂದು):-**

ಇಲಾಖೆಗಳಲ್ಲಿ ನೌಕರರೇ ಇಲ್ಲ. ಕೆ.ಕೆ.ಆರ್.ಡಿ.ಬಿ. ಯಲ್ಲಿ ಹಣ ಇದ್ದು, ಆ ಹಣವನ್ನು ಖರ್ಚು ಮಾಡಲು ಕೆ.ಕೆ.ಆರ್.ಡಿ.ಬಿ. ಮತ್ತೆ ಪಿ.ಡಬ್ಲ್ಯೂ.ಡಿ. ಗೆ ಹೋಗಬೇಕು. ಕೆ.ಕೆ.ಆರ್.ಡಿ.ಬಿ. ಎಂದು ಮಾಡಿದ ಮೇಲೆ ಅಲ್ಲಿ ಕಛೇರಿಯನ್ನು ನಿರ್ಮಿಸಿ, ಅದಕ್ಕೆ ಒಂದು secretariat, staff, engineers, ಮೇಲ್ವಿಚಾರಕರನ್ನು ಮಾಡಬೇಕಲ್ಲವೇ? ಸರ್ಕಾರ ಯಾವುದೇ ಮೂಲಭೂತ ಸೌಕರ್ಯವನ್ನು ಒದಗಿಸುತ್ತಿಲ್ಲ ಎಂದು ಹೇಳುತ್ತಾ, ಈ Article 371 ಜೆ ಮೇಲೆ ನನಗೆ ಮಾತನಾಡಲು ಇಷ್ಟು ಸಮಯ ಅವಕಾಶ ಕಲ್ಪಿಸಿಕೊಟ್ಟಿದ್ದೀರಿ, ಆದರೂ ಇನ್ನು ಮಾತನಾಡುವುದು ಬಹಳಷ್ಟು ಇದೆ. ಆದರೆ, ಆಡಳಿತ ಪಕ್ಷದ ಸದಸ್ಯರು ಬೇಜಾರು ಮಾಡಿಕೊಳ್ಳುತ್ತಾರೆ, ಹಾಗಾಗಿ ನನ್ನ ಮಾತನ್ನು ಮುಗಿಸುತ್ತೇನೆ ಧನ್ಯವಾದಗಳು.

**ಸಭಾಪತಿಯವರು:-** ತಮಗೆ ಇನ್ನು 4 ನಿಮಿಷ ಸಮಯ ಇದೆ ಮಾತನಾಡಿ.

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇನ್ನೂ ಮಾತನಾಡಲಿ ನಮಗೆ ಏನು ಬೇಜಾರು ಇಲ್ಲ. ಅವರು ಗುಲ್ಬರ್ಗಾ ಇ.ಎಸ್.ಐ. ಆಸ್ಪತ್ರೆಗೆ ಸಂಬಂಧಿಸಿದಂತೆ ಮಾತ್ರ ಹೇಳುತ್ತಿದ್ದರು. ಆದರೆ, ಗುಲ್ಬರ್ಗಾ ಜಿಲ್ಲೆಯಲ್ಲಿ 4 ವೈದ್ಯಕೀಯ ಕಾಲೇಜುಗಳಿವೆ. ಯಾವ ಜಿಲ್ಲೆಯಲ್ಲಿಯು ಅಷ್ಟು ವೈದ್ಯಕೀಯ ಕಾಲೇಜುಗಳು ಇಲ್ಲ.

**ಸಭಾಪತಿಯವರು:-** ಆಯಿತು. ತಾವು ಉತ್ತರ ನೀಡುವಾಗ ಮಾತನಾಡಿ, ಈಗ ಬೇಡ. ಮಾನ್ಯ ಯು.ಬಿ.ವೆಂಕಟೇಶ್‌ರವರೇ ತಾವು ಮಾತನಾಡಿ.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅಷ್ಟು ವೈದ್ಯಕೀಯ ಕಾಲೇಜುಗಳು ಇದ್ದರೂ ರೋಗಿಗಳು ಮಹಾರಾಷ್ಟ್ರಕ್ಕೆ ಹೋಗುತ್ತಿದ್ದಾರೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ತಾವು ಇನ್ನೂ ಮಾತನಾಡಲು ಅವಕಾಶ ಕಲ್ಪಿಸಿದರೆ ನಾನು ಮಾತನಾಡಲು ಸಿದ್ಧನಾಗಿದ್ದೇನೆ. ತಾವು 5-6

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಿಮಿಷ ಎಂದು ಸಮಯ ನಿಗದಿ ಮಾಡಿದ ಪ್ರಯುಕ್ತ ನನ್ನ ಮಾತನ್ನು ನಿಲ್ಲಿಸಿದ್ದೇನೆ. ನನಗೆ ಇನ್ನೊಂದು ಅರ್ಧ ಗಂಟೆ ಕಾಲಾವಕಾಶವನ್ನು ಮಾತನಾಡಲು ಕೊಡಿ.

**(ಗೊಂದಲ)**

**ಸಭಾಪತಿಯವರು:-** ಎಲ್ಲರೂ ಏತಕ್ಕೆ ಎದ್ದು ನಿಲ್ಲುತ್ತೀರಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಶ್ರೀ ಸಿ.ಎಂ.ಇಬ್ರಾಹಿಂರವರು ಕಾಂಗ್ರೆಸ್ ಸರ್ಕಾರ ಇದ್ದಾಗ ಆದ ಹಳೆಯ ವಿಚಾರವನ್ನು ಈಗ ಏತಕ್ಕೆ ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅದು ಹಳೆಯ ವಿಚಾರವಾಗಿಲ್ಲ. ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿ ಇದ್ದಾಗಲೇ ಆ ವೈದ್ಯಕೀಯ ಕಾಲೇಜುಗಳನ್ನು ನಿರ್ಮಾಣ ಮಾಡಿದ್ದು. ಆ ವೈದ್ಯಕೀಯ ಕಾಲೇಜಿಗೆ ಸಿಬ್ಬಂದಿಗಳನ್ನು ನೇಮಕ ಮಾಡಲು ಬಿ.ಜೆ.ಪಿ. ಸರ್ಕಾರಕ್ಕೆ ಆಗುತ್ತಿಲ್ಲ.

**ಸಭಾಪತಿಯವರು:-** ಆಯಿತು ಬಿಡಿ. ಕುಳಿತುಕೊಳ್ಳಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಸರ್ಕಾರದ ಬಗ್ಗೆ ಮಾತನಾಡಿದ್ದಕ್ಕೆ ಹೇಳುತ್ತಿದ್ದೇನೆ. ಕಾಂಗ್ರೆಸ್ ಸರ್ಕಾರವೇ ಎಲ್ಲವನ್ನೂ ಜಾರಿಗೆ ತಂದಿದ್ದು. ಈ ದೇಶದಲ್ಲಿ ಏನಾದರೂ ಕೆಲಸವಾಗಿದ್ದರೆ ಅದು ಕಾಂಗ್ರೆಸ್ ಸರ್ಕಾರದಿಂದಲೇ ಆಗಿರುವುದು.

**ಸಭಾಪತಿಯವರು:-** ಮಾನ್ಯ ಎಂ.ನಾರಾಯಣಸ್ವಾಮಿಯವರೇ ಆಯಿತು ಕುಳಿತುಕೊಳ್ಳಿ. ಮಾನ್ಯ ಶಶೀಲ್ ಜಿ.ನಮೋಶಿಯವರೇ ತಾವು ಮಾತನಾಡಿ.

**ಶ್ರೀ ಶಶೀಲ್ ಜಿ.ನ**ಮೋ**ಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕ, ಅಥವಾ ಕಿತ್ತೂರು ಕರ್ನಾಟಕವು ಒಂದು ಕಡೆಯಾದರೆ, ಅಂದಿನ ಹೈದ್ರಾಬಾದ್ ಕರ್ನಾಟಕ ಅಥವಾ ಕಲ್ಯಾಣ ಕರ್ನಾಟಕದ ಆಗುಹೋಗುಗಳ ಬಗ್ಗೆ ಹಾಗೂ ಸರ್ಕಾರದಿಂದ ಆಗಬೇಕಾದ ಅನೇಕ ವಿಷಯ ಮತ್ತು ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಲಾಗುತ್ತಿದೆ. ನಾನು ವಿಶೇಷವಾಗಿ ಕಲ್ಯಾಣ ಕರ್ನಾಟಕ ಭಾಗದ ಕೆಲವು ಮುಖ್ಯಾಂಶಗಳನ್ನು ಈ ಸದನದ ಮೂಲಕ ಸರ್ಕಾರದ ಗಮನಕ್ಕೆ ತಂದು, ಸರ್ಕಾರವು ಹೆಚ್ಚು ಒತ್ತು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮತ್ತು ನಿಲುವು ನೀಡಬೇಕೆಂದು ಹೇಳಲು ಬಯಸುತ್ತೇನೆ. ಅನೇಕ ರಾಜ್ಯಗಳಲ್ಲಿ ಹಿಂದುಳಿದ ಭಾಗವೆಂದು ವಿಶೇಷ ಸ್ಥಾನಮಾನ ನೀಡಲಾಗಿದೆ. ಅದೇ ರೀತಿ ನಮ್ಮ ರಾಜ್ಯದಲ್ಲಿ ಸಹ ಆಗಬೇಕೆಂದು ಅನೇಕ ವರ್ಷಗಳಿಂದ ಹೋರಾಟ ನಡೆಸಲಾಯಿತು.

**(ಈ ಹಂತದಲ್ಲಿ ಮಾನ್ಯ ವೈಸ್ ಛೇರ್ಮನ್‌ರವರಾದ ಶ್ರೀಮತಿ ಎಸ್.ವೀಣಾ ಅಚ್ಚಯ್ಯರವರು ಸಭಾಪೀಠವನ್ನು ಅಲಂಕರಿಸಿದರು)**

ಮಾನ್ಯ ಬಿ.ಎಸ್.ಯಡಿಯೂರಪ್ಪನವರ ನೇತೃತ್ವದ ಸರ್ಕಾರದಲ್ಲಿ ಅದರ ಬಗ್ಗೆ ಉಲ್ಲೇಖ ಮಾಡಿದ ಮೇಲೆ ಮೇಲ್ಮನೆ ಮತ್ತು ಕೆಳಮನೆಯಲ್ಲಿ ವಿಶೇಷ ಸ್ಥಾನಮಾನ ನೀಡಲು ತಯಾರಿದ್ದೇವೆ ಎಂದು ಆ ವಿಧೇಯಕಕ್ಕೆ ಅನುಮೋದನೆ ನೀಡಿ, ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲಾಯಿತು. ಆ ಸಂದರ್ಭದಲ್ಲಿ ಕಾಂಗ್ರೆಸ್ ಸರ್ಕಾರದ ಕೇಂದ್ರ ಸಚಿವರಾಗಿದ್ದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಹೆಚ್ಚಿನ ಒತ್ತು ಮತ್ತು ಚಾಲನೆಯನ್ನು ನೀಡಿ, Article 371ಜೆ ಎಂದು ಆ ಸಂವಿಧಾನದಲ್ಲಿ ತಿದ್ದುಪಡಿ ಮಾಡಲಾಗಿತ್ತು.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಆ ವಿಧೇಯಕವನ್ನು ಕಳುಹಿಸಿದ ಮೇಲೆ ಮಾಜಿ ಉಪ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಎಲ್.ಕೆ.ಅಡ್ವಾಣಿಯವರು ಗೃಹ ಸಚಿವರಾಗಿದ್ದ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ.ಕೃಷ್ಣರವರಿಗೆ '371ಜೆ ನೀಡಲು ಬರುವುದಿಲ್ಲ' ಎಂದು ಪತ್ರ ಬರೆಯುತ್ತಾರೆ. ಈ ವಿಷಯವು ಸಹ ರೆಕಾರ್ಡ್‌ನಲ್ಲಿ ಇರಲಿ.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ಆಗ ವಿಶೇಷ ಸ್ಥಾನಮಾನ ಏನೆಂದು ನೀಡಬೇಕೆಂದು ಮಾಜಿ ಉಪ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಎಲ್.ಕೆ.ಅಡ್ವಾಣಿಯವರು ಗೃಹ ಸಚಿವರಾಗಿದ್ದ ಸಂದರ್ಭದಲ್ಲಿ ಕೇಳಿದಾಗ ಪ್ರತಿ ತಾಲ್ಲೂಕಿಗೆ Article 371ಜೆ based on ಡಾ|| ನಂಜುಂಡಪ್ಪ ವರದಿ ಮೇಲೆ ಯಾವ ರೀತಿ ಮಾಡಲು ಸಾಧ್ಯ, ಆ ರೀತಿ ಮಾಡಿ ಎಂದು ಹೇಳಿದ್ದರು. It has no meaning, ಅಂದರೆ, ಏನು ಅರ್ಥ ಬರುವುದಿಲ್ಲ. ಆ ಕಾರಣಕ್ಕಾಗಿ ಮಾಜಿ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಎಲ್.ಕೆ.ಅಡ್ವಾಣಿಯವರು ಗೃಹ ಸಚಿವರಾಗಿದಾಗ ತಿರಸ್ಕರಿಸಿದ್ದರು.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, reject ಮಾಡಿರುವುದನ್ನು ಒಪ್ಪಿಕೊಂಡಿದ್ದಾರೆ ಅಷ್ಟು ಸಾಕು.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ಅವರು ಬರೆದಿದ್ದ ಪತ್ರವೇ ಸರಿ ಇರಲಿಲ್ಲ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ **(ಗೊಂದಲ)** ಮಾಜಿ ಉಪ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಎಲ್.ಕೆ.ಅಡ್ವಾಣಿಯವರು ಗೃಹ ಸಚಿವರಾಗಿದ್ದ ಸಂದರ್ಭದಲ್ಲಿ ಬೇಡ ಎಂದು ತಿರಸ್ಕರಿಸಿದ್ದರು.

**(ಗೊಂದಲ)**

**ಶ್ರೀ ಶಶೀಲ್ ಜಿ.ನ**ಮೋಶಿ:- ಮಾನ್ಯ ಸಭಾಪತಿಯವರೇ, ಎಲ್ಲಾ ರಾಜ್ಯದಲ್ಲಿಯು Article 371ಜೆ ಬಂದಿದೆ. ಗೋವಾ, ಮಹಾರಾಷ್ಟ್ರ, ವಿದರ್ಭ, ಮರಾಟ್‌ವಾಡ ಒರಿಸ್ಸಾ ಈ ಎಲ್ಲಾ ಭಾಗಗಳಲ್ಲಿ ಒಂದೊಂದು region ಗೆ ನೀಡಿದ್ದಾರೆ.

**ವೈಸ್‌ಛೇರ್ಮನ್:-** ಒಬ್ಬೊಬ್ಬರೆ ಮಾತನಾಡಿ.

**ಶ್ರೀ ಸುನೀಲ್ ವಲ್ಯಾಪೂರೆ:-** ಮಾನ್ಯ ಸಭಾಪತಿಯವರೇ, ಬಿಜೆಪಿ ಸರ್ಕಾರ resolution ಮಾಡಲಿಕ್ಕೆ ಆಗಲಿಲ್ಲವೆಂದರೆ, ಕೇಂದ್ರ ಸರ್ಕಾರ ಮಾಡಲು ಸಾಧ್ಯವಾಗುತ್ತಿತ್ತೇ?

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಾಗಲೇ ಮಾಡಿದ್ದು, ಬಿಜೆಪಿ ಸರ್ಕಾರ ಮಾಡಿಲ್ಲ. ಅವರ ಸರ್ಕಾರ ಅಧಿಕಾರದಲ್ಲಿದ್ದಾಗ ತಿರಸ್ಕರಿಸಿತ್ತು. ಅದನ್ನು ಅವರು ಒಪ್ಪಿಕೊಳ್ಳಲಿ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ,...

**ವೈಸ್‌ಛೇರ್ಮನ್:-** ಮಾನ್ಯ ಎಂ.ನಾರಾಯಣಸ್ವಾಮಿಯವರೆ, ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೆ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಯಾವಾಗ ನಾವು Article 371ಜೆ ಅನುಷ್ಠಾನ ಮಾಡಬೇಕೆಂದು ಒತ್ತಾಯ ಮಾಡಲು ರಾಜ್ಯದ ಸರ್ವ ಪಕ್ಷ ನಿಯೋಗ ಕೇಂದ್ರದ ಮೊರೆ ಹೋದಾಗ ನಾನು ಸಹ ಹೋಗಿದ್ದೆನು. ಅದೇ ಸಮಯದಲ್ಲಿ ನಾವು ಅರ್ಜಿ ಸಲ್ಲಿಸಿದ್ದಾಗ ಮಾಜಿ ಉಪ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಎಲ್.ಕೆ.ಅಡ್ವಾಣಿಯವರು ಅದನ್ನು ಮಾಡಲು ಸಾಧ್ಯವಿಲ್ಲ ಎಂದು ಹೇಳಿದ್ದರು. ಅದಕ್ಕೆ ನಾನೇ ಸಾಕ್ಷಿ. ಮತ್ತೆ ಅದನ್ನು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸಚಿವರಾಗಿದ್ದಾಗ ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿ, ಕಾಂಗ್ರೆಸ್ ಪಕ್ಷ Article 371ಜೆ ಅನ್ನು ಲಾಘು ತಂದಿದ್ದು ಕಾಂಗ್ರೆಸ್ ಪಕ್ಷ. ಆದರೆ, ಬಿಜೆಪಿ ಸರ್ಕಾರ ಅದನ್ನು ತಿರಸ್ಕರಿಸಿತ್ತು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅಷ್ಟೆ ಹೇಳಿದರೆ ಹೇಗೆ? ಅದರ ಮುಂದೆ ಏನಾಗಿಯಿತು ಎಂಬುದನ್ನು ಕೇಳಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಅದೊಂದು ಕುಂಟು ನೆಪ ಅಷ್ಟೇ?

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ಮೊದಲನೆ ಬಾರಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಧರ್ಮಸಿಂಗ್‌ರವರು ಈ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದರು. ಅವರು ಕಳುಹಿಸಿಕೊಟ್ಟ ಅಂಶದಲ್ಲಿ ಏನಿತ್ತು ಎಂದರೆ, ಶ್ರೀ ನಂಜುಂಡಪ್ಪ ವರದಿ ಆಧಾರದ ಮೇಲೆಯೇ ಪ್ರತಿ ತಾಲ್ಲೂಕುಗಳಲ್ಲಿ ಏನು backwardness ಇದೆ, ಅದರ ಆಧಾರದ ಮೇಲೆ Article 371ಜೆ ಅನ್ನು ತಿದ್ದುಪಡಿ ತರುವಂತೆ ಸೂಚಿಸಿದ್ದರು.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆ ರೀತಿ ಆಗಿಲ್ಲ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಧರ್ಮಸಿಂಗ್‌ರವರ ಸರ್ಕಾರ ಬಂದಿದ್ದು ಯಾವಾಗ?

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ನನಗೆ ಮಾತನಾಡಲು ಬಿಡಲಿ

**(ಗೊಂದಲ)**

**ಶ್ರೀ ಅರವಿಂದ್ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಏತಕ್ಕೆ ಆ ರೀತಿ ತಪ್ಪು ಮಾಹಿತಿ ನೀಡುತ್ತಾರೆ. ಸದನಕ್ಕೆ ಏತಕ್ಕೆ ಸುಳ್ಳು ಮಾಹಿತಿ ನೀಡುತ್ತಾರೆ.

**(ಗೊಂದಲ)**

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ.

**(ಗೊಂದಲ)**

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ಅವರು ಮಾತನಾಡುವಾಗ ನಾನು ಏನು ಹೇಳಿಲ್ಲ. ಈಗ ಏತಕ್ಕೆ ಆ ರೀತಿ ಎದ್ದು ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ಅಲ್ಲಂ ವೀರಭದ್ರಪ್ಪ:-** ಮಾನ್ಯ ಸಭಾಪತಿಯವರೇ, It was rejected.

**(ಗೊಂದಲ)**

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಕುಂಬಾಳಕಾಯಿ ಕಳ್ಳ ಎಂದರೆ, ಏತಕ್ಕೆ ಅವರು ಹೆಗಲು ಮುಟ್ಟಿಕೊಂಡು ನೋಡಿಕೊಳ್ಳುತ್ತಾರೆ. ಅವರಿಗೆ ಸತ್ಯ ಬೇಡವೇ?

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಮಾಜಿ ಉಪ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಎಲ್.ಕೆ.ಅಡ್ವಾಣಿಯವರೊಂದಿಗೆ ಮಾತನಾಡಲು ಹೋದಾಗ 5 ನಿಮಿಷಗಳು ಸಹ ಅವರು ಆ ಪತ್ರವನ್ನು ಓದಲಿಲ್ಲ.

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೆ ದಯವಿಟ್ಟು ಮಧ್ಯೆ ಎದ್ದು ನಿಂತು ಮಾತನಾಡಬೇಡಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಮಾಜಿ ಉಪ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಎಲ್.ಕೆ.ಅಡ್ವಾಣಿಯವರು 5 ನಿಮಿಷ ನಮ್ಮ ಜೊತೆ ಮಾತನಾಡಲಿಲ್ಲ. ಬಿಜೆಪಿಯವರು ಸರ್ವ ಪಕ್ಷದ delegation ನಲ್ಲಿ ನಾನು ಸಹ ಇದ್ದೆ. ನಾವು ಕೊಟ್ಟ ಅರ್ಜಿಯನ್ನು ತೆಗೆದುಕೊಂಡು 5 ನಿಮಿಷ ಓದಲು ಇಲ್ಲ, ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿ ನಮ್ಮನ್ನು ವಾಪಸ್ಸು ಕಳುಹಿಸಿಬಿಟ್ಟರು.

**(ಗೊಂದಲ)**

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಧರ್ಮಸಿಂಗ್‌ರವರ ಸರ್ಕಾರ ಅಧಿಕಾರದಲ್ಲಿದ್ದಾಗ ಕೊಟ್ಟಿದಂತಹ ಅರ್ಜಿಯಲ್ಲಿ ಡಾ|| ನಂಜುಂಡಪ್ಪ ವರದಿ ಆಧಾರದ ಮೇಲೆ ಮಾಡಿ, ಪ್ರತಿ ಹಿಂದುಳಿದ ತಾಲ್ಲೂಕು ಎಂದು ಮಾಡಿ ಎಂದು ಹೇಳಿದ್ದರು. It has no meaning at all.

**ಶ್ರೀ ಬಸವರಾಜ ಇಟಗಿ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬೇರೆ ಏನಾದರೂ ಚರ್ಚೆ ಇದ್ದರೆ ಅದರ ಬಗ್ಗೆ ಮಾತನಾಡಲಿ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಬಿಜೆಪಿ ಸರ್ಕಾರಕ್ಕೆ ಮಾಡಲು ಸಾಧ್ಯವಿರಲಿಲ್ಲ. ಸುಮ್ಮನೆ ಕುಂಟು ನೆಪ ಹೇಳುವುದು ಬೇಡ.

**(ಗೊಂದಲ)**

**ಶ್ರೀ ಅಲ್ಲಂ ವೀರಭದ್ರಪ್ಪ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಶಶೀಲ್ ಜಿ.ನಮೋಜಿಯವರು ಹಿರಿಯರಾಗಿದ್ದು, ಅವರು ಹೇಳಿದ ಹಾಗೆ ಉಪ

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಎಲ್.ಕೆ.ಅಡ್ವಾಣಿಯವರು ಆ ಪತ್ರ ಸರಿಯಿಲ್ಲ, ಡಾ|| ನಂಜುಂಡಪ್ಪ ವರದಿಯನ್ನು ಕಳುಹಿಸಿಕೊಡಿ ಎಂದು ಪತ್ರ ಬರೆದಿದ್ದರೆ, ನಾನು challenge ಮಾಡುತ್ತೇನೆ. They have rejected it.

**ವೈಸ್‌ಛೇರ್ಮನ್:-** ಆಯಿತು. ಮಾನ್ಯ ಅಲ್ಲಂ ವೀರಭದ್ರಪ್ಪನವರೆ ಮಾನ್ಯ ಶಶೀಲ್ ಜಿ.ನಮೋಶಿಯವರು ಮಾತನಾಡಲು ಬಿಡಿ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆ ವಿಚಾರ ಬಿಟ್ಟು ಬೇರೆ ವಿಚಾರ ಮಾತನಾಡಲಿ.

**ವೈಸ್ ಛೇರ್ಮನ್:-** ಮೊದಲು ಅವರು ಮಾತನಾಡಲಿ ಸುಮ್ಮನೆ ಇರಿ.

**ಶ್ರೀ ಶಶೀಲ್ ಜಿ.ನ**ಮೋ**ಶಿ:-** ಮಾನ್ಯ ಸಭಾಪತಿಯವರೇ, ಮೊದಲು ಆ ವಿಷಯ ನಡೆಯಿತು. ಅದಾದ ಮೇಲೆ ನಮ್ಮ ಸರ್ಕಾರ ಬಂದಾಗ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಎರಡೂ ಮನೆಗಳಲ್ಲಿ ವಿಧೇಯಕಕ್ಕೆ ಅನುಮೋದನೆ ದೊರಕಿದ ಮೇಲೆ ಕೇಂದ್ರ ಸರ್ಕಾರಕ್ಕೆ ಹೋಗಿತ್ತು. ಕೇಂದ್ರ ಸರ್ಕಾರಕ್ಕೆ ಹೋದ ಮೇಲೆ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದಾಗಲೇ ಆ ವಿಧೇಯಕಕ್ಕೆ ಅನುಮೋದನೆ ದೊರಕಿತು. ಅದರಲ್ಲಿ ಎರಡನೇ ಮಾತಿಲ್ಲ.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದವರು ಮೇಜು ತಟ್ಟುವ ಮೂಲ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು)**

ಆದರೆ, ಅದರ ಬುನಾದಿ ಹಾಕಿದ್ದು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರ ಸರ್ಕಾರ. ಆದರೆ, ನಮ್ಮ ಸರ್ಕಾರ ಕಳುಹಿಸಿದೆ ಎಂದು ಹೇಳಿ ಅಲ್ಲಿ ವಿಧೇಯಕಕ್ಕೆ ಅನುಮೋದನೆ ಮಾಡಿದ್ದಾರೆ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಅದಕ್ಕೂ ಮೊದಲು ಕೇಂದ್ರ ಸರ್ಕಾರ ತಿರಸ್ಕಾರ ಮಾಡಿತ್ತು.

**(ಗೊಂದಲ)**

**ಶ್ರೀ ಶಶೀಲ್ ಜಿ.ನ**ಮೋ**ಶಿ:-** ಮಾನ್ಯ ಸಭಾಪತಿಯವರೇ, ಅದು ಹಳೆಯ ಕಥೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಬಿಜೆಪಿ ಸರ್ಕಾರ ಆ ವಿಧೇಯಕವನ್ನು ತಿರಸ್ಕರಿಸಿದಕ್ಕಾಗಿಯೇ ಕಾಂಗ್ರೆಸ್ ಸರ್ಕಾರ ಆ ವಿಧೇಯಕಕ್ಕೆ ಅನುಮೋದನೆ ನೀಡಿತ್ತು. ಬಿಜೆಪಿ ಸರ್ಕಾರದಿಂದ ತಿರಸ್ಕಾರವಾಗಿತ್ತು ಎಂಬುದನ್ನು ಅವರು ಒಪ್ಪಿಕೊಳ್ಳಲಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಒಟ್ಟಾರೆಯಾಗಿ ಹೇಳುವುದಾದರೆ, ಕಾಂಗ್ರೆಸ್ ಸರ್ಕಾರವು ಸತ್ಯವನ್ನು ಒಪ್ಪಿಕೊಳ್ಳುವ ಮಾನಸಿಕ ಸ್ಥಿತಿಯಲ್ಲಿ ಇಲ್ಲ.

**(ಗೊಂದಲ)**

**ವೈಸ್ ಛೇರ್ಮನ್:-** ತಾವು ಮಾತನಾಡುವುದು ಬೇಡ ಸುಮ್ಮನೆ ಇರಿ. ಮಾನ್ಯ ಶಶಿಲ್ ಜಿ.ನಮೋಶಿಯವರು ಮಾತನಾಡಲಿ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಯಾರದೋ ಹೆಸರು, ಯಾರದೋ ಬಸರು ಎನ್ನುವ ಹಾಗೆ ಆಗಿದೆ.

**(ಗೊಂದಲ)**

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಅಭಿವೃದ್ಧಿ ಬಗ್ಗೆ ಮಾತನಾಡಲಿ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಬರೀ ಸುಳ್ಳು ಹೇಳುವುದೇ ಬಿಜೆಪಿ ಸರ್ಕಾರದ ಬಂಡವಾಳ. ಮತ್ತೆ ಮಾತನಾಡುತ್ತಾರೆ. ಒಂದೇ ಒಂದು ನಿಜ ಹೇಳುವುದಿಲ್ಲ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಸುಳ್ಳೆ ಅವರ ಮನೆ ದೇವರು. ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರ್ರೇ ಒಂದು ನಿಮಿಷ.

**ವೈಸ್ ಛೇರ್ಮನ್:-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ ನಾನು ಹೇಳುತ್ತಲೇ ಇದ್ದೇನೆ ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಶಶೀಲ್ ಜಿ.ನಮೋಶಿಯವರು ಮಾತನಾಡಲಿ.

(ಮುಂದು)

**(1300) 23-12-2021/ 3.50 / ಎಸ್‌ಕೆ-ಬಿಎನ್‌ಎಸ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಮನೆದೇವರು ಯಾರೆಂದರೆ ಸುಳ್ಳೆ ಅವರ ಮನೆ ದೇವರು.

**(ಗೊಂದಲ)**

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ವೈಸ್ ಛೇರ್ಮನ್:-** ದಯವಿಟ್ಟು, ಮಾನ್ಯ ಸದಸ್ಯರು ಯಾರೂ ಮಾತನಾಡಬೇಡಿ. ಮಾನ್ಯ ಶಶೀಲ್ ಜಿ. ನಮೋಶಿಯವರು ಮಾತನಾಡಲಿ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನವನ್ನು ಹೊಂದಿದವರು):-** ಮಾನ್ಯ ಸಭಾಪತಿಯವರೇ, ನಾವು ಹೇಳುವುದು ಸುಳ್ಳೆ ಆದರೆ ಮಾನ್ಯ ರವಿಕುಮಾರ್‌ರವರೇ, I challenge it. ನಾವು ಮಾಡಿರುವಂತಹ ಪ್ರೋಸಿಡಿಂಗ್ಸ್‌ನ್ನು ತೆಗೆದುಕೊಂಡು ಬನ್ನಿ. ನಾನು ಆ delegation ನಲ್ಲಿ ಇದ್ದೆ. I challenge you, if you prove it to be wrong. (ಗೊಂದಲ) ನಾನು challenge ಮಾಡುತ್ತೇನೆ.

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಸಭಾಪತಿಯವರೇ, ದಯವಿಟ್ಟು, ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದೇನೆಂದರೆ, ಕೇಂದ್ರ ಸರ್ಕಾರ ಸನ್ಮಾನ್ಯ ಪ್ರಧಾನ ಮಂತ್ರಿಯಾಗಿದ್ದಂತಹ ಶ್ರೀ ಎಲ್.ಕೆ. ಅಡ್ವಾಣಿಯವರು ಇದ್ದಾಗ, ಇದು reject ಆಯಿತು. ಇದು ಸುಳ್ಳಲ್ಲ. I challenge Sri Ravikumar.

**(ಗೊಂದಲ)**

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಯಡಿಯೂರಪ್ಪನವರು . . .

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಯಡಿಯೂರಪ್ಪನವರು ಎಲ್ಲಿ ಸರ್, ನಾವು ಹೋಗಿದ್ದಂತಹ ಸಂದರ್ಭದಲ್ಲಿ ರಿಜೆಕ್ಟ್ ಮಾಡಿದ್ದು. ಇದನ್ನು ಮಾನ್ಯ ಮಲ್ಲಿಕಾರ್ಜನ ಖರ್ಗೆಯವರು ಪ್ರಸ್ತಾಪ ಮಾಡಿದ್ದು.

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಸಭಾಪತಿಯವರೇ, ದಯವಿಟ್ಟು, ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಿ. ಮಾನ್ಯ ಶಶೀಲ್ ಜಿ. ನಮೋಶಿಯವರು ಮಾತನಾಡಿ.

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅನುಚ್ಛೇದ 371 (ಜೆ) ಜಾರಿ ಬಂದಾದ ಮೇಲೆ. . . .

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಿ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನವನ್ನು ಹೊಂದಿದವರು):-** ಮಾನ್ಯ ಸಭಾಪತಿಯವರೇ, ಬರಿ ಗಲಾಟೆ ಮಾಡುವುದಾದರೆ, ನಾವು ಅದಕ್ಕೂ ಸಿದ್ಧರಿದ್ದೇವೆ.

**ವೈಸ್ ಛೇರ್ಮನ್:-** ಮಾನ್ಯ ಯು.ಬಿ. ವೆಂಕಟೇಶ್‌ರವರೇ, ದಯವಿಟ್ಟು, ಕುಳಿತುಕೊಳ್ಳಿ. ಮಾನ್ಯ ಶಶೀಲ್ ಜಿ. ನಮೋಶಿಯವರೇ, ತಾವು ಪಾಯಿಂಟ್‌ಗೆ ಬನ್ನಿ. ತಾವು ಬೇರೆ ಮಾತನಾಡಬೇಡಿ.

**ಶ್ರೀ ಶಶೀಲ್ ಜಿ. ನಮೋಶಿ :-** ಮಾನ್ಯ ಸಭಾಪತಿಯವರೇ, ಅನುಚ್ಛೇದ 371 (ಜೆ) ಜಾರಿ ಬಂದಾದ ಮೇಲೆ, ಅದರ ಪರಿಣಾಮವಾಗಿ ಒಂದು ಮಂಡಳಿ ಸ್ಥಾಪನೆ ಮಾಡಬೇಕು. ಅಂದಿನ ಹೈದರಾಬಾದ್-ಕರ್ನಾಟಕ ಮಂಡಳಿ ಸ್ಥಾಪನೆಯಾಯಿತು. ಇವತ್ತಿನ ಕೆ.ಕೆ.ಆರ್.ಡಿ.ಬಿ. ಸ್ಥಾಪನೆಯಾಯಿತು. ಇನ್ನೊಂದು ಬಹಳ ಮುಖ್ಯವಾದ ಉದ್ದೇಶವೆನೆಂದರೆ, ಆ ಭಾಗದ ಜನರಿಗೆ ಉದ್ಯೋಗಾವಕಾಶ ಮೀಸಲಿಡಬೇಕು. ಮಕ್ಕಳಿಗೆ ಶಿಕ್ಷಣ ಕೊಡುವಂತಹ ವಿಷಯವಾಗಲಿ, ಸೀಟ್ ಕೊಡುವ ವಿಷಯವಾಗಿರಲಿ, ಪ್ರಮೋಷನ್‌ಗಳ ವಿಚಾರವಾಗಿರಲಿ, ಇವೆಲ್ಲವೂ ಅನುಚ್ಛೇದ 371(ಜೆ) ಅಡಿಯಲ್ಲಿ ಆ ಭಾಗದ ಜನರಿಗೆ ಒಂದು ರೀತಿಯ ಆಶಾಕಿರಣವಾಯಿತು. ಅದನ್ನು ಸರಿಯಾಗಿ ಜಾರಿಗೆ ತರುವುದಕ್ಕೆ ಎಲ್ಲೋ ಒಂದು ಕಡೆ we are failing ಎನ್ನುವಂತಹ ಮಾತನ್ನು ನಾನು ಒತ್ತು ಕೊಟ್ಟು ಹೇಳುತ್ತಿದ್ದೇನೆ. ಇದರ ಬಗ್ಗೆ ಬಹಳ ಮುಖ್ಯವಾದ ನಾಲ್ಕೈದು ಅಂಶಗಳನ್ನು ಹೇಳಬೇಕೆಂದಿದ್ದೇನೆ. ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಶೇಕಡ 8 ರಷ್ಟು ಮೀಸಲಾತಿಯನ್ನು ಹೈದರಾಬಾದ್-ಕರ್ನಾಟಕ ಭಾಗದ ಜನರಿಗೆ ಕೊಡಬೇಕೆಂದು ಮೀಸಲಿಟ್ಟಿದ್ದಾರೆ. ಈ ವಿಷಯಕ್ಕೆ ಕೆಲವು ವಿಶ್ವವಿದ್ಯಾಲಯದವರು ಏತಕ್ಕೆ ಮೀಸಲಾತಿ ಕೊಡಬೇಕು ಎಂದು ಮಾನ್ಯ ನ್ಯಾಯಾಲಯದ ಮೊರೆ ಹೋಗಿದ್ದಾರೆ. ಆ ಕೋರ್ಟ್‌ಗೆ ಹೋಗಿದ್ದವರನ್ನು ಸರ್ಕಾರ stay vacate ಮಾಡಿಸಬೇಕಲ್ಲವೇ? Stay vacate ಮಾಡಿಸಿ, ಎಲ್ಲಾ ಕಡೆಗಳಲ್ಲಿ ಕೊಡಿಸುವಂತಹ ಕೆಲಸವಾಗಬೇಕಲ್ಲ. ನಾನು ಬೇರೇನೂ ಹೇಳುತ್ತಿಲ್ಲ. ನಿಯಮ ಏನಿದೆಯೋ, ಅದರ ಪ್ರಕಾರನೇ ಹೇಳುತ್ತಿದ್ದೇನೆ. ಇದನ್ನು ಏಕೆ ಮಾಡುತ್ತಿಲ್ಲ? All the Universities of Karnataka should give 8% reservation to people of Hyderabad-Karnataka region. ಈ ಭಾಗದ ಜನರಿಗೆ ಏಕೆ ಕೊಡುತ್ತಿಲ್ಲ? ಅದು ಕೊಡಬೇಕೆಂದು ನಾನು ಒತ್ತು ಕೊಟ್ಟು ಹೇಳುತ್ತಿದ್ದೇನೆ. ಬೇರೆ ಬೇರೆ ಇಲಾಖೆಯಲ್ಲಿರುವ, ಕೇಡರ್‌ನಲ್ಲಿ ಯಾವುದೇ ಹುದ್ದೆಯನ್ನು ನೇಮಕಾತಿ ಮಾಡುವಾಗ, ಮೊದಲನೆಯದಾಗಿ ಲೋಕಲ್ ಕೇಡರ್ ಯಾವುದು? ಮೂಲ ವೃಂದ ಯಾವುದು ಎಂದು ಹೇಳಿ, ಹೈದರಾಬಾದ್-ಕರ್ನಾಟಕ ಅಥವಾ ಕಲ್ಯಾಣ-ಕರ್ನಾಟಕ ಸೆಲ್ ಏನಿದೆ, ಆ ಭಾಗಕ್ಕೆ ಮೀಸಲಾತಿ ಎಷ್ಟು ಕೊಡಬೇಕೆಂದು ಹೇಳಿ, ಆ ಸೆಲ್‌ಗೆ ಪತ್ರವನ್ನು ಬರೆದು, ಅದರ ಅಪ್ಪಣೆಯನ್ನು ಪಡೆಯಬೇಕು. ಆದರೆ ದುರ್ದೈವದ ಸಂಗತಿ ಏನೆಂದರೆ, ಇವತ್ತಿಗೂ ಎಲ್ಲಾ ಇಲಾಖೆಯವರು ಸೆಲ್‌ನ ಅನುಮತಿಯನ್ನು ಕೇಳುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ಇತ್ತೀಚೆಗೆ ವೈದ್ಯರ ನೇಮಕಾತಿ ಆಯಿತು. ಆ ವೈದರ ನೇಮಕಾತಿಯಾದಾಗ, ನಾನು ಆ ಸೆಲ್‌ಗೆ ಅನುಮತಿಯನ್ನು ಕೇಳಿದ್ದೀರಿ ಎಂದರೆ, ಕೇಳಿಲ್ಲ. ಆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸೆಲ್‌ಗೆ ನಾನು ಒಂದು ದೂರು ಕೊಟ್ಟೆ. ಇದು ಡಿ.ಪಿ.ಎ.ಆರ್. ಅಡಿಯಲ್ಲಿ ನಡೆಯುತ್ತೆ. ವೈದ್ಯರ ನೇಮಕಾತಿ ಸರಿಯಾಗಿಲ್ಲ ಎಂದು ಡಿ.ಪಿ.ಎ.ಆರ್.ನ ಮಾನ್ಯ ಕಾರ್ಯದರ್ಶಿಯವರಿಗೆ ನಾನು ಪತ್ರ ಕೊಟ್ಟು ಕೇಳಿದಾಗ, ಆಗ ಮಾನ್ಯ ಕಾರ್ಯದರ್ಶಿಯವರು ಹೌದು. ವೈದ್ಯರ ನೇಮಕಾತಿ ಸರಿಯಾಗಿಲ್ಲ ಎಂಬುದು ನನಗೂ ಕಾಣಿಸುತ್ತದೆ. ಕಾರ್ಯದರ್ಶಿಯವರು ಅವರಿಗೆ ಪತ್ರ ಬರೆದಿದ್ದಾರೆ. ಅವರಿಗೆ ಕ್ಯಾರೆ ಎಂದಿಲ್ಲ. ಅವರು ಏನೊಂದು ವಿಚಾರ ಮಾಡದೇ, announce ಮಾಡಿಬಿಟ್ಟರು. ಕೋವಿಡ್-19 ಇರುವ ಕಾರಣದಿಂದ ವೈದ್ಯರ ನೇಮಕಾತಿಯಾಗಬೇಕು. ಕಲ್ಯಾಣ ಕರ್ನಾಟಕ ಭಾಗದ ಜನರು ಎಲ್ಲಿ ಹೋಗಬೇಕು?

**(ಗೊಂದಲ)**

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ಎಷ್ಟೇ ಹುದ್ದೆಗಳಿರಲಿ, ಆ ಭಾಗದ ಜನರಿಗೂ ಕೂಡ ನೇಮಕಾತಿಯಾಗಬೇಕೆಂಬ ಪ್ರಯತ್ನವಿತ್ತು. ಆ ಜನರಲ್ ಕೋಟಾದಲ್ಲಿ ಆ ಭಾಗದವರು ನೇಮಕಾತಿಯಾಗುತ್ತಿದ್ದರೆ, ಮೊದಲು ಅವರಿಗೆ ನೇಮಕಾತಿಯನ್ನು ಕೊಡಬೇಕು. Next, they have to come to reserved quota. ನಾನು ಅದಕ್ಕೆ ಒತ್ತು ಕೊಟ್ಟರೂ, ಅವರು ಮಾಡಲಿಲ್ಲ. ನಮ್ಮ ಭಾಗದಲ್ಲಿ ಪ್ರಮೋಷನ್ ಕೊಡುವಾಗ, ಹವಾಲ್ದಾರ್ ಪ್ರಮೋಷನ್ ಮತ್ತು ಪಿ.ಎಸ್.ಐ ಪ್ರಮೋಷನ್ ಆಯಿತು. ಅದೇ ರೀತಿಯಾಗಿ ಮುಖ್ಯ ಗುರುಗಳ ಪ್ರಮೋಷನ್ ಆಯಿತು. ಆ ಮುಖ್ಯ ಗುರುಗಳ ಪ್ರಮೋಷನ್ ಆಗುವಾಗ ತೊಂದರೆ ಏನಾಯಿತು ಎಂದರೆ, ಕಲ್ಯಾಣ ಕರ್ನಾಟಕ ಭಾಗದ ಜನರಿಗೆ 1997 ರ join ಆದವರ ಪಟ್ಟಿ ಏನಿತ್ತೋ, ಅವರು reach ಆಗಿಲ್ಲ. ಶೇಕಡ 20 quota ಕಲ್ಯಾಣ ಕರ್ನಾಟಕದಲ್ಲೇ ಬೇರೆ ಭಾಗದಿಂದ ಬಂದಂತಹವರಿಗೆ 2004 ರ ವರೆಗೆ ನೇಮಕಾತಿಯಾದವರಿಗೆ ಅವಕಾಶ ಬಂತು. ಅಂದರೆ ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ಮೀಸಲಾತಿ ಆದರೆ ಪ್ರಮೋಷನ್ ಅವರಿಗೆ ಮೊದಲು ಬರುತ್ತದೆ ಎಂದರೆ ಎಲ್ಲೋ ಒಂದು ಕಡೆ ಲೋಪ-ದೋಷವಿದೆ. ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದೆ. ನಾನು ಒತ್ತು ಕೊಟ್ಟು ಹೇಳುವುದೇನೆಂದರೆ, ಇಲ್ಲಿ ಏನಾಗಬೇಕೆಂದರೆ, ಪರಿಶಿಷ್ಟ ಜಾತಿ ಮೀಸಲಾತಿಯನ್ನು ಹೇಗೆ ಮಾಡುತ್ತೇವೆ. ಮೀಸಲಾತಿ ಮಾಡುವಾಗ, ಶೇಕಡ 100 ರಷ್ಟು ಸೀಟ್‌ಗಳಿದ್ದರೆ ಮೊದಲು ಶೇಕಡ 82 ರಷ್ಟು ಸೀಟ್‌ಗಳು ಜನರಲ್ ಕೋಟದಲ್ಲಿ ನೇಮಕಾತಿಯಾಗುತ್ತದೆ. ಅದರೊಳಗೆ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಯಾವುದಾದರೂ ಬರಬಹುದು. ಅದಾದ ಮೇಲೆ 18% will be reserved for S.C. quota. ಅದೇ ರೀತಿ ಇಲ್ಲಿ ಕೂಡ ಯಾವುದೇ ನೇಮಕಾತಿಯಾಗಲೀ, ಮೊದಲು ಶೇಕಡ 20, 15, ರಷ್ಟು ಜನರಲ್ ಕೋಟ announce ಮಾಡಿಕೊಡಿ. ಅದರಲ್ಲಿ ಯಾರು ಬೇಕಾದವರು ಬರುತ್ತಾರೆ. ಅವರು ಬಂದವರಿಗೆ ನೇಮಕಾತಿಯನ್ನು ಕೊಡಿ. ನೇಮಕಾತಿಯಾದ ಮೇಲೆ ಮೀಸಲಾತಿ ಭಾಗವನ್ನು ಟಚ್ ಮಾಡಿ. ಇದಕ್ಕೆ ಸಂಬಂಧಪಟ್ಟಂತಹ ಮಾನ್ಯ ಸಚಿವರಿಗೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ತಮ್ಮ ಮೂಲಕ ಹೇಳಬಯಸುವುದೇನೆಂದರೆ, ಈ ತಿದ್ದುಪಡಿಯನ್ನು ತನ್ನಿ. ಇಲ್ಲದಿದ್ದರೆ, natural justice ಸಿಗಲ್ಲ. ಕಲ್ಯಾಣ ಕರ್ನಾಟಕ ಭಾಗಕ್ಕೆ ಮೀಸಲಾತಿ ಇರುವಂತಹದ್ದನ್ನು ಬೇರೆ ಭಾಗದಿಂದ ಬಂದಂತಹ 2004 ನೇಮಕಾತಿಯಾದವರಿಗೆ ಪ್ರಮೋಷನ್ ಸಿಗುತ್ತದೆ. 1997 ರಲ್ಲಿ ಕಲ್ಯಾಣ ಕರ್ನಾಟಕ ಭಾಗದಿಂದ

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ನೇಮಕಾತಿಯಾದಂತಹವರಿಗೆ ಪ್ರಮೋಷನ್ ಇಲ್ಲ. ಈ ಲೋಪ-ದೋಷ ಹೋಗಬೇಕೆಂದರೆ, there has to be an amendment. ಇದಕ್ಕೆ ನಾನು ಬಹಳ ಒತ್ತು ಕೊಟ್ಟು, ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬಹಳ ಸ್ಪಷ್ಟವಾಗಿ ನಿಯಮ ಮಾಡಿದ್ದಾರೆ. ಆ ನಿಯಮ ಏನು ಹೇಳುತ್ತದೆ ಎಂದರೆ, ಕಲ್ಯಾಣ ಕರ್ನಾಟಕ ಭಾಗದಿಂದ ನೇಮಕಾತಿಯಾದವರಿಗೆ ಯಾವುದೇ ಪ್ರಮೋಷನ್ ಆಗಿರಲಿ, ಅನುದಾನ ಕೊಡುವಂತಹ ವಿಷಯದಲ್ಲಿ ಕೂಡ ಕಲ್ಯಾಣ ಕರ್ನಾಟಕ ಭಾಗಕ್ಕೆ ಯಾವುದೇ ಆರ್ಥಿಕ ನಿರ್ಬಂಧನೆ ಮಾಡುವುದಕ್ಕಾಗುವುದಿಲ್ಲ. You cannot impose any ban in respect of finance. ಈ ನಿಯಮ ಬಹಳ ಸ್ಪಷ್ಟವಾಗಿ ಇದೆ. ಆದರೆ ದುರ್ದೈವದ ಸಂಗತಿ ಏನೆಂದರೆ, ಅದನ್ನು ಸರ್ಕಾರ ಅನುಷ್ಠಾನ ಮಾಡುತ್ತಿಲ್ಲ. ಅದರ ಅನುಷ್ಠಾನವನ್ನು ಏಕೆ ಮಾಡುತ್ತಿಲ್ಲ? ಹಾಗಾದರೆ ನಿಯಮವನ್ನು ಏಕೆ ಮಾಡಿದಿರಿ? ಆ ಭಾಗಕ್ಕೆ ಅನೇಕ ವರ್ಷಗಳಿಂದ ಅನ್ಯಾಯವಾಗಿದೆ. ಆ ಭಾಗದ ಜನರಿಗೆ ಉದ್ಯೋಗಾವಕಾಶ ಸಿಕ್ಕಿಲ್ಲ ಎಂದರೆ, ಉದ್ಯೋಗಾವಕಾಶ ಕಡಿಮೆ ಇದೆ. ಡಾ. ನಂಜುಂಡಪ್ಪ ವರದಿ ಪ್ರಕಾರ only 4% of the appointment ಆ ಭಾಗದವರಿದ್ದಾರೆ. ಉಳಿದವರೆಲ್ಲಾ ಬೇರೆ ಭಾಗದಲ್ಲಿದ್ದಾರೆ ಎಂದು ಹೇಳಿ ಅಲ್ಲಿ ಅವಕಾಶ ಕೊಡುತ್ತಿದ್ದೇವೆ. Financial ban ಏಕೆ impose ಮಾಡುತ್ತೀರಿ? Grant-in-aid ನಲ್ಲಿ ಬ್ಯಾನ್ ಇದೆ. ಮತ್ತೆ ಏನಾದರೂ ಕೇಳಿದರೆ, ಬ್ಯಾನ್ ಇದೆ. ಇದನ್ನು ಏಕೆ ನಿಲ್ಲಿಸುತ್ತೀರಿ? ಅದನ್ನು ನಿಲ್ಲಿಸಬೇಡಿ. Please withdraw it. ಎಲ್ಲಾ ವಿಚಾರಗಳನ್ನು.......

**ಶ್ರೀ ಯು.ಬಿ. ವೆಂಕಟೇಶ್ (ನಾಮ ನಿರ್ದೇಶನವನ್ನು ಹೊಂದಿದವರು):-** ಇಲ್ಲಿಗೆ ಬ್ಯಾನ್ ಇಲ್ಲ. ಇಲ್ಲಿಗೆ ಹಣಕಾಸು ಇಲಾಖೆ ಬರುವುದಿಲ್ಲ. ನೇಮಕಾತಿ ಮಾತ್ರ ಮಾಡಿಲ್ಲವಷ್ಟೆ. ಇಲ್ಲಿಗೆ ಯಾವುದೇ ಬ್ಯಾನ್ ಇಲ್ಲ.

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅನುದಾನಿತ ಸಂಸ್ಥೆಗಳಿಗೆ ಅನುದಾನ ಕೊಡುವಂತಹ ವಿಚಾರವಾಗಿರಲಿ ಅಥವಾ ನೇಮಕಾತಿ ಕೊಡುವಂತಹ ಸಂದರ್ಭ ಬಂದಾಗ, ಆ ಭಾಗಕ್ಕೆ ಏನೇ ನೇಮಕಾತಿ ಆಗಬೇಕು. ಅದನ್ನು ಮೊದಲು ಮಾಡಬೇಕು. No ban can be imposed on that region. ಆ ಭಾಗದ ಖಾಲಿ ಹುದ್ದೆಗಳಿಗೆ, ಯಾವುದೂ ಬ್ಯಾನ್‌ನ್ನು ತರಬಾರದು ಮತ್ತು finance reason ಹೇಳಬಾರದು ಎಂದು 371(ಜೆ) ಅನುಚ್ಛೇದ ಸ್ಪಷ್ಟವಾಗಿ ಹೇಳುತ್ತದೆ. ಹಾಗಾದರೆ ಏಕೆ ಮಾಡುತ್ತಿಲ್ಲ? I am not blaming this or that Government. ಎರಡು ಸರ್ಕಾರ ಅಥವಾ ಹಿಂದಿನ ಸರ್ಕಾರ ಇದನ್ನು ಮಾಡಿಲ್ಲ. ದಯವಿಟ್ಟು, ಇದನ್ನು ಸರ್ಕಾರ ಗಣನೆಗೆ ತೆಗೆದುಕೊಳ್ಳಬೇಕು. ಇಪ್ಪತ್ತಾರು ಸಾವಿರದಿಂದ ಮೂವತ್ತು ಸಾವಿರ ಹುದ್ದೆಗಳು ಇನ್ನು ಖಾಲಿ ಇವೆ. ಮೊನ್ನೆ ಕೂಡ ಅಂಕಿ-ಸಂಖ್ಯೆಯನ್ನು ಕೊಟ್ಟರು. 15,000 and odd ಪ್ರಾಥಮಿಕ ಶಾಲೆಗಳಲ್ಲಿ ಹುದ್ದೆಗಳು ಖಾಲಿ ಇವೆ. ಪ್ರೌಢ ಶಾಲೆಗಳಲ್ಲಿ ಸುಮಾರು ಮೂರು ಸಾವಿರ ಹುದ್ದೆಗಳು ಖಾಲಿ ಇವೆ. ಪಿ.ಯು., ಮತ್ತು ಡಿಗ್ರಿ ಕಾಲೇಜುಗಳಲ್ಲಿ ಸಾಕಷ್ಟು ಹುದ್ದೆಗಳು ಖಾಲಿ ಇವೆ. ಆ ಹುದ್ದೆಗಳನ್ನು ತುಂಬುವುದಕ್ಕೆ ಸರ್ಕಾರ ಏಕೆ ಮುಂದಾಗಬಾರದು ಎಂದು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾನು ಬಹಳ ಒತ್ತು ಕೊಟ್ಟು ಹೇಳುತ್ತೇನೆ. ದಿನಾಂಕ 01.01.2013 ರಂದು 371(ಜೆ) ಅನುಚ್ಛೇದ ಜಾರಿಗೆ ಬಂತು. 371(ಜೆ) ಅನುಚ್ಛೇದ ಏನು ಹೇಳುತ್ತದೆ ಎಂದರೆ, ಮೂರು ತಿಂಗಳೊಳಗಡೆ, ಪ್ರತಿಯೊಂದು ಇಲಾಖೆಯಲ್ಲಿರುವ ಪ್ರತಿಯೊಂದು ಹುದ್ದೆಗೆ ದಯವಿಟ್ಟು bifurcate ಮಾಡಿ. Bifurcate ಮಾಡಿ ಎಂದರೆ, ಸ್ಥಳೀಯ ಅಭ್ಯರ್ಥಿ ಯಾರು? Local posts ಎಷ್ಟು? ಮೂಲ ವೃಂದದಲ್ಲಿ ಎಷ್ಟಿವೆ? ಬೇರೆ ಭಾಗದಿಂದ ಬಂದವರು ಅಲ್ಲಿ ಎಷ್ಟಿದ್ದಾರೆ? ಪ್ರತಿಯೊಂದು ಹುದ್ದೆಗಳಿಗೆ bifurcate ಮಾಡಿ ಎನ್ನುವುದು. ಆಂಧ್ರ ಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಲ್ಲಿ ಮಾಡಿರುವ ಬಗ್ಗೆ ನಾನು ಇಲ್ಲಿ ವಿನಂತಿ ಮಾಡಿದೆ. ಆ ರಾಜ್ಯಗಳಲ್ಲಿ ಏನು ಮಾಡಿದ್ದಾರೆ ಎಂದರೆ, ಒಂದೆರಡು ದಿವಸ ಇಡೀ ಸರ್ಕಾರ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಕೆಲಸವನ್ನು ಬಂದ್ ಮಾಡಿರಿ. ಇದು ಒಂದೇ ಕೆಲಸ ಮಾಡಿರಿ. ಪ್ರತಿಯೊಂದು ಹುದ್ದೆಗಳಿಗೆ bifurcate ಮಾಡಿ. Vacancy ಗೆ call for ಮಾಡಿದ ಮೇಲೆ, bifurcate ಮಾಡುವುದಕ್ಕೆ ಹೋಗುತ್ತಾರೆ.

(ಮುಂದು)

(1301)23.12.2021/4.00/ಎಂ.ಎಂ-ಜಿ.ಆರ್

(ವೈಸ್ ಚೇರ್ಮನ್‌ರವರ ಉಪಸ್ಥಿತಿ)

**ಶ್ರೀ ಶಶಿಲ್ ಜಿ. ನಮೋಶಿ (ಮುಂದು):-**

ಅದರ ಪರಿಣಾಮ ಏನಾಗುತ್ತದೆಂದರೆ ಬೇರೆ ಭಾಗದಲ್ಲಿ ನೇಮಕಾತಿ ಆಗುತ್ತದೆ. ಹೈದರಾಬಾದ್ ಕರ್ನಾಟಕ ಭಾಗ ಅದು ಹಾಗೇ ಇರಲಿ, ನೋಡೋಣ, ಕ್ಲಾರಿಫಿಕೇಷನ್ ಬರಲಿ ಎಂದು ಹಾಗೆಯೇ ಉಳಿಸುತ್ತಾರೆ. ಇದು ಯಾವ ನ್ಯಾಯ?

**ವೈಸ್ ಚೇರ್ಮನ್:-** ಮಾನ್ಯ ಶಶಿಲ್ ನಮೋಶಿಯವರೇ, ಮುಗಿಸುತ್ತೀರಾ?

**ಶ್ರೀ ಶಶಿಲ್ ಜಿ. ನಮೋಶಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇನ್ನೂ ಟೈಂ ಆಗಿಲ್ಲ. 15 ನಿಮಿಷಗಳು ಅವರು ತೆಗೆದುಕೊಂಡಿದ್ದಾರೆ. ಮೀಸಲಾತಿ ಇರುವುದೇ ನಮ್ಮ ಭಾಗದ ಸಲುವಾಗಿ. ಕಲ್ಯಾಣ ಕರ್ನಾಟಕ ಭಾಗದ ಜನತೆಗೆ ಅನುಕೂಲವಾಗಲಿ ಎಂದು ಈ ಮೀಸಲಾತಿಯನ್ನು ತಂದಿದ್ದಾರೆ. ಇದರ ಒಂದು ಶಾಖೆ, ಆಫೀಸ್ ನಮ್ಮ ಊರಿನಲ್ಲಿ ಬೇಡವೇ? ನಮ್ಮ ಭಾಗದಲ್ಲಿ ಎಲ್ಲಿಯಾದರೂ ಮಾಡಲಿ. ಕಷ್ಟ ಅಲ್ಲಿಯ ಜನರಿಗಿರುತ್ತದೆ. ಅವರು ಸಣ್ಣ ಪುಟ್ಟ ವಿಷಯಗಳನ್ನು ಬೆಂಗಳೂರಿಗೆ ಬಂದು ಹೇಳಬೇಕು. ಕೆ.ಕೆ.ಆರ್.ಡಿ.ಬಿ., ಯ ಜಂಟಿ ಕಾರ್ಯದರ್ಶಿ ಇದ್ದಾರೆ ಅಲ್ಲಿಗೆ ಬಂದು ಅವರ ಕೂಗನ್ನು ಹೇಳಬೇಕು. ಗುಲ್ಬರ್ಗಾದಲ್ಲಿಯೇ ಹೇಳುವುದಕ್ಕೆ ಒಂದು ಅವಕಾಶವಿದ್ದರೆ ಅನುಕೂಲವಾಗುತ್ತದೆ. ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ತಕ್ಷಣವೇ ಅದನ್ನು ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ವಿನಂತಿ ಮಾಡುತ್ತೇನೆ. ಎಷ್ಟು ಬೇಗನೆ ಮಾಡುತ್ತೀರೋ ಆ ಭಾಗದ ಜನರಿಗೆ ಅನುಕೂಲವಾಗುತ್ತದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಎಲ್ಲಿಯವರೆಗೆ ಎಂದರೆ ಗುತ್ತಿಗೆ ಆಧಾರದ ಮೇಲೆ ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ಕೂಡ ಮೀಸಲಾತಿ ಕೊಡಬೇಕೆಂದು ಆ ನಿಯಮ ಸ್ಪಷ್ಟವಾಗಿ ಹೇಳುತ್ತದೆ. ಅದನ್ನು

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಫಾಲೋ ಅಪ್ ಮಾಡುತ್ತಿಲ್ಲ. ಅದಕ್ಕೆ ದಯವಿಟ್ಟು ಅದರಲ್ಲಿ ಕೂಡ ಮಾಡಬೇಕೆಂದು ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇನ್ನೊಂದು, ಒಂದೇ ಒಂದು ಹುದ್ದೆ ಇದ್ದಲ್ಲಿ ಅನೇಕ ಇಲಾಖೆಗಳಲ್ಲಿ ನೇಮಕಾತಿ ಕೊಡುವಾಗ ಒಂದೇ ಒಂದು ಹುದ್ದೆ ಇರುತ್ತದೆ. ಆ ಭಾಗದ ಅಡಿಯಲ್ಲಿ ಬರುವಂತಹ ಒಂದು ಹುದ್ದೆ ಇದ್ದರೆ it has to be reserved for Kalyana Karnataka only. ಆ ಭಾಗಕ್ಕೆ ಇದನ್ನು ಫಾಲೋ ಮಾಡುತ್ತಿಲ್ಲ. ಅದಕ್ಕೆ ದಯವಿಟ್ಟು ಇದನ್ನು ಮಾಡಬೇಕೆಂದು ವಿನಂತ. ಇನ್ನೊಂದು ಏನೆಂದರೆ, ಎಸ್.ಸಿ/ಎಸ್.ಟಿ ಮೀಸಲಾತಿ ಇದ್ದಲ್ಲಿ ಬ್ಯಾಕ್‌ಲಾಗ್ ಇಡುತ್ತೇವೆ ಆದರೆ ಇಲ್ಲಿ ಅದನ್ನು ಮಾಡುತ್ತಿಲ್ಲ. ಇಲ್ಲಿ ಏತಕ್ಕೆ ಮಾಡಬಾರದು? ಆ ಬ್ಯಾಕ್‌ಲಾಗ್ ಇಲ್ಲಿ ಕೂಡ ಇರಲಿ. ನಮ್ಮ ಭಾಗದ ಅಭ್ಯರ್ಥಿಗಳು ಸಿಕ್ಕಿಲ್ಲವೆಂದರೆ ಬ್ಯಾಕ್‌ಲಾಗ್ ಇಡಿ, ಮತ್ತೆ call for ಮಾಡಿ. ಅವರಿಗೆ ಮೀಸಲಿಡಿ ಎಂದು ಕೆಲವು ತಿದ್ದುಪಡಿಗಳನ್ನು, ನಿಯಮಗಳನ್ನು ಪಾಲನೆ ಮಾಡಬೇಕೆಂದು ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇನ್ನೂ ಕೆಲವು ಅಂಶಗಳಿವೆ. ಅದಕ್ಕಿಂತಲೂ ಮೊದಲು;

**ವೈಸ್ ಚೇರ್ಮನ್:-** ಮಾನ್ಯ ಶಶಿಲ್ ನಮೋಶಿಯವರೇ, ಇನ್ನು ಐದು ನಿಮಿಷದಲ್ಲಿ ಮುಗಿಸಿ.

**ಶ್ರೀ ಶಶಿಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ಇನ್ನೊಂದು ಎಂದರೆ ಆಗಾಗ ಪುನರ್ ಪರಿಶೀಲನೆ ಮಾಡಬೇಕೆಂದು ನಿಯಮ ಸ್ಪಷ್ಟವಾಗಿ ಹೇಳುತ್ತದೆ. Unfortunately, ಒಂದೂವರೆ, ಎರಡು ವರ್ಷವಾಯಿತು ಅದರ ಬಗ್ಗೆ ಎಲ್ಲಿಯೂ ಚರ್ಚೆಯಾಗಿಲ್ಲ, ಸಭೆಯೂ ಆಗಿಲ್ಲ. ಏತಕ್ಕೆ ಆಗಬಾರದು? ಆಗಾಗ ಮೀಟಿಂಗ್ ಆದಾಗ ಯಾರು ದೂರನ್ನು ಕೊಡುತ್ತಾರೆ ಅದನ್ನು ಪರಿಶೀಲಿಸಿ ಸರಿಯಾದ ಒಂದು ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳಬಹುದಲ್ಲವೇ? ಏತಕ್ಕೆ ಮೀಟಿಂಗ್ ಮಾಡುವುದಿಲ್ಲ? ಮಾನ್ಯ ಮುಖ್ಯಮಂತ್ರಿಯವರಿಗೆ ನನ್ನ ಕಳಕಳಿಯ ವಿನಂತಿಯೇನೆಂದರೆ, ಆ ಬೋರ್ಡನ್ನು ಕಂಪ್ಲೀಟ್ ಮಾಡಿಲ್ಲ. ಆ ಬೋರ್ಡ್ ಕಂಪ್ಲೀಟ್ ಆದರೆ ಅಲ್ಲಿಯ ಭಾಗದಲ್ಲಿಯೇ ಮೀಟಿಂಗ್ ಮಾಡಿ ಅಲ್ಲಿಯೇ ನಿರ್ಣಯ ತೆಗೆದುಕೊಳ್ಳಬಹುದು. ಈ ಕಾರಣದಿಂದ ಯಾವುದಾದರೂ ಒಂದು ಸಣ್ಣ ಅಪ್ರೂವಲ್‌ಗಾಗಿ ಕೂಡ ನಾವು ಯೋಜನಾ ಇಲಾಖೆಗೆ ಕಳುಹಿಸಬೇಕು. ಆದ್ದರಿಂದ ಆ ಬೋರ್ಡನ್ನು ದಯವಿಟ್ಟು ಪೂರ್ಣಗೊಳಿಸಿ ಎಂಬುದು ನನ್ನ ಇನ್ನೊಂದು ಬೇಡಿಕೆಯಾಗಿದೆ.

ನನ್ನ ಸನ್ಮಿತ್ರರು ಇ.ಎಸ್.ಐ., ಆಸ್ಪತ್ರೆ ಬಗ್ಗೆ ಚರ್ಚೆ ಮಾಡಿದರು. ಇ.ಎಸ್.ಐ., ಆಸ್ಪತ್ರೆ ಬಂತು, ಆಸ್ಪತ್ರೆ full-fledged ಆಗಿ ನಡೆದಿದೆ. I have to compliment the E.S.I., Hospital authorities. ಮೊನ್ನೆ ಕೋವಿಡ್-19 ಸಂದರ್ಭದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಯಾದಗಿರಿಯಲ್ಲಿ patients care ಆಗುತ್ತಿಲ್ಲ. ಏಕೆಂದರೆ, ಯಾದಗಿರಿ ಆಸ್ಪತ್ರೆ ಅಷ್ಟು ದೊಡ್ಡದಾಗಿಲ್ಲ. ಹೊಸ ಮೆಡಿಕಲ್ ಕಾಲೇಜು ಮಾಡಿದ್ದಾರೆ, ಆಸ್ಪತ್ರೆ ಇನ್ನೂ ಬರಬೇಕಾಗಿದೆ. ಅವರು ಎಲ್ಲಾ ರೋಗಿಗಳನ್ನೂ ಇ.ಎಸ್.ಐ., ಆಸ್ಪತ್ರೆಗೆ ರೆಫರ್ ಮಾಡಿದ್ದಾರೆ. ಬೇಕಾದಷ್ಟು ಎಲ್ಲಾ ರೀತಿಯ ಅನುಕೂಲತೆ ಇದೆ, ಹಳೆಯ ಮೆಡಿಕಲ್ ಕಾಲೇಜಿನಲ್ಲಿ ಕೂಡ ಬೇರೆ ಬೇರೆ ಜೆ.ಎನ್.ಎಂ.ಸಿ.,

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಆಸ್ಪತ್ರೆ ತೆಗೆದುಕೊಳ್ಳಿ ಅಥವಾ ನಮ್ಮದೇ ರಾಂಪುರ ಮೆಡಿಕಲ್ ಕಾಲೇಜನ್ನು ತೆಗೆದುಕೊಳ್ಳಿ ಕೊರತೆ ಇದ್ದೇ ಇರುತ್ತದೆ. ಆಗಾಗ they will try to fulfill those demands. ಬೇಡಿಕೆಗಳನ್ನು ಪೂರೈಸುತ್ತಾರೆ. ಆದರೆ ಇಲ್ಲಿ ಹೊಸದಿರುವುದರಿಂದ ಕೆಲವು ಕೊರತೆಗಳು ಇವೆ. ಆದರೆ ಸರಿಯಾಗಿ ನಡೆದಿದೆ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಸೆಂಟ್ರಲ್ ವಿಶ್ವವಿದ್ಯಾನಿಲಯದ ಬಗ್ಗೆ ಮಾತನಾಡಿದರು. ಇವತ್ತು ನಾನು ಹೇಳಬೇಕಾಗುತ್ತದೆ, ನಮ್ಮ ಬೇರೆ ವಿಶ್ವವಿದ್ಯಾನಿಲಯಕ್ಕೆ ಹೋಲಿಕೆ ಮಾಡಿದರೆ ಸೆಂಟ್ರಲ್ ವಿಶ್ವವಿದ್ಯಾನಿಲಯ ಬಹಳ ಚೆನ್ನಾಗಿ ಗುಲ್ಬರ್ಗಾದಲ್ಲಿ ನಡೆಯುತ್ತಿದೆ. ಇದಕ್ಕೆ ಹಿಂದಿನ ವೈಸ್ ಛಾನ್ಸಲರ್ ಕೂಡ ಕಾರಣೀಭೂತರು. ಅಲ್ಲಿ ನೇಮಕಾತಿಗಳು ಕೂಡ ಸರಿಯಾಗಿ ಆಗಿದೆ. ಒಂದೇ ಕೊರತೆ ಏನೆಂದರೆ ಅಲ್ಲಿ ಕುಡಿಯುವ ನೀರಿನ ಕೊರತೆ ಇದೆ. ಅನೇಕ ಬಾರಿ ಕುಡಿಯುವ ನೀರಿನ ಕೊರತೆಯನ್ನು ರಾಜ್ಯಸರ್ಕಾರ ಭರಿಸಬೇಕೆಂದು ಹೇಳಿದೆ. ನನಗೆ ಗೊತ್ತಿಲ್ಲ, ಹಿಂದಿನ ಸರ್ಕಾರ ಇರಲಿ, ಈಗಿನ ಸರ್ಕಾರ ಇರಲಿ ಬಹಳ ದೊಡ್ಡದಲ್ಲ. ಒಳ್ಳೆಯ ರೀತಿಯಲ್ಲಿ ಕ್ಯಾಂಪಸ್‌ನಲ್ಲಿ, ಹಾಸ್ಟೆಲ್‌ನಲ್ಲಿ ಇರುತ್ತಾರೆ. ಆದರೆ ನೀರಿನ ಅನುಕೂಲತೆ ಇಲ್ಲ. ದಯವಿಟ್ಟು ಅನೇಕ ಯೋಜನೆಗಳನ್ನು ಮಾಡಿ ಏನೇನೋ ಆಗುತ್ತದೆ. ದಯವಿಟ್ಟು ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಕುಡಿಯುವ ನೀರಿನ ಯೋಜನೆಗಾಗಿ ರಾಜ್ಯ ಸರ್ಕಾರ ಏನು ಕೊಡಬೇಕಾಗಿದೆ, ಕೇಂದ್ರಕ್ಕೂ ಕೂಡ ನಾವು ನಿಯೋಗವನ್ನು ತೆಗೆದುಕೊಂಡು ಹೋದಾಗ ರಾಜ್ಯ ಸರ್ಕಾರದವರು ಕೊಡುತ್ತೇವೆಂದು ಒಪ್ಪಿದ್ದಾರೆ. ಹಾಗಿದ್ದರೂ ಇತಕ್ಕೆ ಕೊಟ್ಟಿಲ್ಲ ಎನ್ನುವಂತಹ ಮಾತನ್ನು ಅವರು ಹೇಳುತ್ತಿದ್ದಾರೆ. ದಯವಿಟ್ಟು ಆ ವಿಶ್ವವಿದ್ಯಾನಿಲಯಕ್ಕೆ ಕುಡಿಯುವ ನೀರಿನ ಯೋಜನೆಯನ್ನು ಕಳ್ಪಿಸಿಕೊಡಬೇಕು. ಆ ಭಾಗ ಅನೇಕ ವಿಚಾರಗಳ ಬಗ್ಗೆ ಇನ್ನೂ ಅನೇಕ ರೀತಿಯಿಂದ ಮುಂದುವರೆಯಬೇಕಾಗಿದೆ. ಆದ್ದರಿಂದ ಸರ್ಕಾರ ಎಲ್ಲಕ್ಕಿಂತ ಹೆಚ್ಚಾಗಿ ಆ ಭಾಗದ ಕಡೆಗೆ ನೋಡಿ, ಹೌದಪ್ಪ ನಮ್ಮ ಜೊತೆಗೆ ಸಮಾನವಾಗಿ ಬರಬೇಕಲ್ಲ ಎನ್ನುವ ವಿಚಾರದಲ್ಲಿ ಸರ್ಕಾರದ ನಿಲುವು ಇರಬೇಕೆಂದು ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ನಮೋಶಿಯವರೇ, ಒಂದು ನಿಮಿಷ, ನೀವು ಸೆಂಟ್ರಲ್ ಕಾಲೇಜಿನ ಬಗ್ಗೆ ಹೇಳಿದಿರಿ. ನಾನು ಕಾಲೇಜು ಚೆನ್ನಾಗಿಲ್ಲ ಎಂದು ಹೇಳಿಲ್ಲ. ಕಾಲೇಜಿನಲ್ಲಿ ಎಲ್ಲಾ ಸಿಲಬಸ್ ಮತ್ತು ಎಲ್ಲಾ ಕೋರ್ಸ್‌ಗಳು ನಡೆಯುತ್ತಿಲ್ಲ ಎಂದು ಹೇಳಿದೆ. ನನಗೆ ಅದಕ್ಕೆ ಕ್ಲಾರಿಫೈ ಮಾಡಿ.

**ವೈಸ್ ಚೇರ್ಮನ್:-** ಈಗ ಮಾನ್ಯ ಬಸವರಾಜ ಇಟಗಿಯವರು ಮಾತನಾಡುವುದು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಬಹಳಷ್ಟು ಜನ ಉತ್ತರ ಕರ್ನಾಟಕದ ಬಗ್ಗೆ ಮಾತನಾಡಿದರು. ಆದರೆ ಯಾರೂ ನೀರಾವರಿ ಮತ್ತು ಕೃಷಿಯ ಬಗ್ಗೆ ಬಹಳಷ್ಟು ಗಮನ ಕೊಡುತ್ತಿಲ್ಲ. ಅದು ಏತಕ್ಕೆಂದು ತಿಳಿಯುವುದಿಲ್ಲ. ಏಕೆಂದರೆ, ಶೇ.70ರಷ್ಟು ಏನು ಅನ್ನವನ್ನು ತಿನ್ನುತ್ತೇವೆ, ಕೃಷಿ ಆಧಾರದಿಂದಲೇ ಅನ್ನವನ್ನು ತಿನ್ನುತ್ತೇವೆ. ಇದರ ಬಗ್ಗೆ ಅತಿ ಹೆಚ್ಚು ಮಾತನಾಡಬೇಕಾಗಿತ್ತು. ಆಮೇಲೆ ಕೃಷಿ ಸಚಿವರು ಕೂಡ ಇಲ್ಲಿ ಇರಬೇಕಾಗಿತ್ತು. ಏಕೆಂದರೆ, ಈ ಭಾಗದಲ್ಲಿ ದೊಡ್ಡ ದೊಡ್ಡ ಸಮಸ್ಯೆಗಳಿವೆ, ಕೇವಲ ಹೈದರಾಬಾದ್-ಕರ್ನಾಟಕವಲ್ಲ, ಬಾಂಬೆ ಕರ್ನಾಟಕ, ಕಿತ್ತೂರು ಕರ್ನಾಟಕ ಇರಬಹುದು, ಕೃಷಿಯಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಇದನ್ನು ಗಮನಕ್ಕೆ ತರುತ್ತಾ, (**ಗೊಂದಲ**) ಅದಕ್ಕೆ ನಾನು ಬಿಟ್ಟಿದ್ದೇನೆ. ನಮ್ಮಲ್ಲಿ ಇ.ಎಸ್.ಐ ಎಲ್ಲಾ ಇದೆ ಇವರು ಯಾರೂ ಕೃಷಿ ಬಗ್ಗೆ ಮಾತನಾಡುವುದಿಲ್ಲ. ಬರೀ ಟೀಚರ್ ಬಗ್ಗೆ ಮಾತನಾಡುತ್ತಾರೆ. ಇಲ್ಲಿಯವರೆಗೂ ಟೀಚರ್ಸ್ ಬಗ್ಗೆಯೇ ಮಾತನಾಡಿದ್ದಾರೆ. ಟೀಚರ್ ಮತ್ತು ಪದವೀಧರರ ಬಗ್ಗೆ ಮಾತನಾಡುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಬಸವರಾಜ ಇಟಗಿಯವರೇ, ನಿಮ್ಮ ಸಲುವಾಗಿಯೇ ಕೃಷಿಯನ್ನು ಬಿಟ್ಟಿದ್ದೇವೆ. You can take full scope.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಶಶಿಲ್ ನಮೋಶಿಯವರೇ, ತಪ್ಪು ತಿಳಿಯಬೇಡಿ. ಅದಕ್ಕೇ ನಾನು ಮಾನ್ಯ ಶ್ರೀಕಂಠೇಗೌಡರನ್ನು ‘ಏನಪ್ಪಾ ಬರೀ ನಿಮ್ಮದೇ ಪ್ರಶ್ನೆಗಳಿರುತ್ತವೆ ಮಾಸ್ತರುಗಳದ್ದು ಮತ್ತು ಪಗಾರದ ಪ್ರಶ್ನೆಗಳಿರುತ್ತವೆ’ ಎಂದು ಕೇಳಿದೆ, ಅವರು ಬೈಯ್ದರು ಸುಮ್ಮನಾದೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಉತ್ತರ ಕರ್ನಾಟಕದ ಬಗ್ಗೆ ನಾನೇ opening batsman. ಮಹದಾಯಿ ಬಗ್ಗೆ ಯಾವ ಮಾಹಿತಿ ಬೇಕು ಕೇಳಿ ಕೊಡುತ್ತೇನೆ.

**ವೈಸ್ ಚೇರ್ಮನ್:-** ಮಾನ್ಯ ಇಟಗಿಯವರೇ, ನೀವು ಮಾತನಾಡಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಯಾವ ಮಾಹಿತಿ ಬೇಕು ಕೇಳಿ ನಾನು ಕೊಡುತ್ತೇನೆ. ಮೇಕೆದಾಟು ಬಗ್ಗೆ ಏನು ಮಾಹಿತಿ ಬೇಕು ಕೇಳಿ ಕೊಡುತ್ತೇನೆ.

**ವೈಸ್ ಚೇರ್ಮನ್:-** ಮಾನ್ಯ ಶ್ರೀಕಂಠೇಗೌಡರೇ, . . .

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಹೇಳಿದ್ದೀರಿ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ನೀವು ಯಾವಾಗಲೂ ಇದನ್ನೇ ಹೇಳುತ್ತೀರಲ್ಲಾ? ಚಾಲೂ ಮಾಡಿದ್ದೇ ನಾನು.

(ಗೊಂದಲ)

**ವೈಸ್ ಚೇರ್ಮನ್:-** ಮಾನ್ಯ ಶ್ರೀಕಂಠೇಗೌಡರೇ, ಕುಳಿತುಕೊಳ್ಳಿ. ಮಾನ್ಯ ಬಸವರಾಜ ಇಟಗಿಯವರೇ ಮಾತನಾಡಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಚಾಲೂ ಮಾಡಿದ್ದಕ್ಕೆ ನಿಮಗೆ ದೊಡ್ಡ ಧನ್ಯವಾದಗಳು. ಮೊನ್ನೆ ಕೇಂದ್ರ ಸರ್ಕಾರವು ಮೂರು ಕೃಷಿ ಕಾಯಿದೆಗಳನ್ನು ವಾಪಸ್ ತೆಗೆದುಕೊಂಡಿತು. ಏತಕ್ಕೆ ವಾಪಸ್ ತೆಗೆದುಕೊಂಡಿತು ಎನ್ನುವುದು ಬಹಳ ಪ್ರಮುಖವಾದುದು. ಏಕೆಂದರೆ ಆ ಭಾಗದಲ್ಲಿರುವಂತಹ ಪಂಜಾಬ್, ಹರಿಯಾಣ ಮತ್ತು ಉತ್ತರಪ್ರದೇಶ ಇಲ್ಲಿರುವಂತಹ ಕೃಷಿಕರು ತಮ್ಮ ಹೋರಾಟವನ್ನು ಎಷ್ಟು ಬಲವಾಗಿ ಮಾಡಿದರು ಎಂದರೆ ಸರ್ಕಾರಕ್ಕೆ ಅದು ನುಂಗಲಾರದ ಪರಿಸ್ಥಿತಿಯಾಯಿತು. ಸರ್ಕಾರವೇನು ಅಂತರರಾಷ್ಟ್ರೀಯ ಮಾರುಕಟ್ಟೆಗೆ ತಂದು ಯಾವುದೇ ಉತ್ಪನ್ನ ಪ್ರಪಂಚದಾದ್ಯಂತ ಸಿಗಬೇಕೆಂಬ ಉದ್ದೇಶದಿಂದ ಅವರು ತಂದರು. ಆದರೆ ಇಲ್ಲಿರುವ ಸ್ಥಳೀಯ ಸಮಸ್ಯೆಗಳನ್ನು ಅವರು ಗಮನದಲ್ಲಿಟ್ಟುಕೊಳ್ಳಲಿಲ್ಲ. ಏಕೆಂದರೆ, ತಮಗೆ ಗೊತ್ತಿದ್ದಂತೆ ಆ ಮೂರು ರಾಜ್ಯಗಳೇನಿವೆ; ನಾವು ಅಕ್ಕಿ ಬೆಳೆಯುತ್ತೇವೆ ಎಂದು ತಿಳಿದುಕೊಳ್ಳಿ. ಅಕ್ಕಿಯನ್ನು ಸರ್ಕಾರ ತೆಗೆದುಕೊಳ್ಳುತ್ತದೆ. ನಮ್ಮಲ್ಲಿ ಯಾವ ಸರ್ಕಾರ ತೆಗೆದುಕೊಳ್ಳುತ್ತದೆ, ಬೊಬ್ಬೆ ಹೊಡೆದಾಗ ಒಂದು ಖರೀದಿ ಕೇಂದ್ರವನ್ನು ತೆರೆಯುತ್ತದೆ. ಅದರಲ್ಲಿಯೂ ನಾವು ತೊಗರಿ ಸೇರಿದಂತೆ ಎಲ್ಲಾ ಮಾಲನ್ನೂ ಮಾರಿ ಬಿಟ್ಟಿರುತ್ತೇವೆ. Trader ಅವತ್ತಿನ ದಿವಸ ಖರೀದಿ ಕೇಂದ್ರವನ್ನು ತೆರೆಯುತ್ತಾರೆ. ರೂ. 5000/- ಕ್ಕೆ ನಮ್ಮಿಂದ ತೆಗೆದುಕೊಂಡು ಅವನು ರೂ. 6300/-ಕ್ಕೆ ಒಬ್ಬೊಬ್ಬ ರೈತರ ಹೆಸರನ್ನು ಹಾಕಿ ಅವನು ತೆಗೆದುಕೊಂಡು ಮಜಾ ಮಾಡುತ್ತಾನೆ. So, basically ಇವೆಲ್ಲವನ್ನೂ ಒಂದು ಸರ್ಕಾರ ತಿಳಿದುಕೊಳ್ಳುವ ಕೆಲಸವಿದು. ಯಾವಾಗ ಖರೀದಿ ಕೇಂದ್ರವನ್ನು ತೆರೆಯಬೇಕು, ಮಾರುಕಟ್ಟೆ ದರ ಏನಿದೆ, ರೈತನ input ಏನಿದೆ, ಅಲ್ಲಿನ ಪರಿಸ್ಥಿತಿ ಏನು? ತಾವು ನೋಡಿದಂತೆ ಕಳೆದ 2-3 ವರ್ಷದಲ್ಲಿ ಒಂದು ಸಲ ಪ್ರವಾಹ ಬಂದು ಹೊಡೆತ ಬಿದ್ದು, ಆ ರೈತ ಹೇಗೋ ಮೇಲಕ್ಕೆ ಏಳುವ ವೇಳೆಗೆ ಮತ್ತೊಂದು ಹೊಡೆತ ಬಂತು. ಈ ವರ್ಷ ಪೂರ್ತಿ ಮಳೆ ಹೆಚ್ಚಾಗಿ; ಮೊನ್ನೆ ನಾನು ಟಿ.ವಿ., ಯಲ್ಲಿ ನೋಡಿದೆ, ಗದಗ ಜಿಲ್ಲೆಯಲ್ಲಿ ಮೆಣಸಿನಕಾಯಿ ಬೆಳೆ ಪೂರ್ತಿಯಾಗಿ ಕೊಳೆತುಬಿಟ್ಟಿದೆ. ಅವು ಕ್ವಿಂಟಾಲ್‌ಗೆ ರೂ. 51,000/- ಗೆ ಮಾರುವ ಮೆಣಸಿನಕಾಯಿಗಳವು. ಒಳ್ಳೆಯ ಗುಣಮಟ್ಟದ ಬ್ಯಾಡಗಿ ಮೆಣಸಿನಕಾಯಿಯನ್ನು ಒಂದು ಸಲ ಕ್ವಿಂಟಾಲ್‌ಗೆ ರೂ. 51,000/- ಗೆ ಮಾರಲಾಗಿದೆ. ಅಂತಹದ್ದು ಕೊಳೆತ ಮೇಲೆ ಉರುಳು ಹಾಕಿಕೊಂಡು ಸಾಯುವುದೊಂದೇ ಉಳಿಯುತ್ತದೆ. ರೈತನಿಗೆ ಬೇರೆ ಏನೂ ಕೆಲಸವಿರುವುದಿಲ್ಲ. ಏಕೆಂದರೆ ಅಷ್ಟೊಂದು input ಹಾಕಿರುತ್ತಾನೆ, ಅಷ್ಟು ಕಷ್ಟ

ಪಟ್ಟಿರುತ್ತಾನೆ. ಏಕೆಂದರೆ, ಅದಕ್ಕೆ ಮೂರು ದಿವಸಕ್ಕೊಮ್ಮೆ ಔಷಧಿ ಸಿಂಪಡಿಸಬೇಕು. ಈಗ ನಮ್ಮಲ್ಲಿಯೂ ಪ್ರಾರಂಭ ಮಾಡಿದ್ದಾರೆ. ಹೈದರಾಬಾದ್-ಕರ್ನಾಟಕದಲ್ಲಿ, ರಾಯಚೂರಿನಲ್ಲಿ ನಾವು ಕೂಡ ಮೆಣಸಿನಕಾಯಿ ಬೆಳೆಯುತ್ತೇವೆ. ನಮ್ಮಲ್ಲಿ 20 ಕ್ವಿಂಟಾಲ್ ಮೇಲೆ yield ಬರುತ್ತದೆ. ಅದು ಬ್ಯಾಡಗಿ ಮತ್ತು ಸೂಪರ್ 10 ಎಂಬ ತಳಿ ಇದೆ. ಅದರಲ್ಲಿ ಡಬ್ಬ ಮತ್ತು ಕಡ್ಡಿ ಎರಡೂ ಇದೆ.

(ಮುಂದು)

(1302) 23-12-2021 KH/GR 4-10 **(ವೈಸ್ ಛೇರ್‌ಮನ್‌ರವರ ಉಪಸ್ಥಿತಿ)**

**ಶ್ರೀ ಬಸವರಾಜ ಪಾಟೀಲ್ ಇಟಗಿ (ಮುಂದು):-**

ಬ್ಯಾಡಗಿಯಲ್ಲಿ ಕಡ್ಡಿ ಜಾಸ್ತಿ ಮಾರಾಟವಾಗುತ್ತದೆ. ನಂತರ ಸೂಪರ್-10 ಎಂದು ಇದೆ. ಈ ಸೂಪರ್-10 ವೆರೈಟಿಯಲ್ಲಿ ಸುಮಾರು 35 ಕ್ವಿಂಟಾಲ್ ಮೇಲೆ ಬರುತ್ತದೆ. ಇದು ಮಾರುಕಟ್ಟೆಯಲ್ಲಿ 8 ರಿಂದ 14 ಸಾವಿರವರೆಗೂ ಬರುತ್ತದೆ, depending upon the situation. ಸರ್ಕಾರ ಮಾರುಕಟ್ಟೆಯ ಬಗ್ಗೆ ಸರಿಯಾಗಿ ಗಮನ ಹರಿಸಿಲ್ಲ. ಕೇವಲ ಬ್ಯಾಡಗಿ ಒಂದೇ ಮಾರುಕಟ್ಟೆಗೆ ಬರುತ್ತದೆ. ನಮ್ಮ ಕೃಷಿ ಮಂತ್ರಿಗಳಿಗೆ ಮೊದಲು ಏನು ಗೊತ್ತಿರಬೇಕೆಂದರೆ, ಯಾವಾಗ ಕೇಳಿದರೂ ನಾನು ಹೊಸ ಕೃಷಿ ನೀತಿಯನ್ನು ತರುತ್ತೇನೆ ಎಂದು ಹೇಳುತ್ತಾರೆ. ಹೊಸ ಕೃಷಿ ನೀತಿಯನ್ನು ಯಾರು ತಂದಿದ್ದಾರೆ? ಈಗಾಗಲೇ 6 ವರ್ಷವಾಯಿತು ನಾನು ನೋಡುತ್ತಿದ್ದೇನೆ. ಹೊಸ ಕೃಷಿ ನೀತಿಯನ್ನು ತರುತ್ತೇವೆಂದು ಹೇಳುತ್ತಾರೆ. ಎಲ್ಲೆಲ್ಲಿ ಮಾರುಕಟ್ಟೆಗಳು ಬೇಕು, ಎಲ್ಲೆಲ್ಲಿ ಮೂಲಭೂತ ಸೌಕರ್ಯಗಳು ಬೇಕು. ಎಲ್ಲೆಲ್ಲಿ ರೈತರಿಗೆ ಮಾಹಿತಿಗಳು ಬೇಕು. ಇವತ್ತು ನಾವು ದಾಳಿಂಬೆಯನ್ನು ಬೆಳೆಯುತ್ತೇವೆ. ಯಾವ ಭಾಗದಲ್ಲಿ ಹೆಚ್ಚಿನ ದರಕ್ಕೆ ಹೋಗುತ್ತದೆ ಎನ್ನುವುದರ ಬಗ್ಗೆ ಮಾಹಿತಿ ಬೇಕಲ್ಲವೇ? ಆ ಮಾಹಿತಿಯನ್ನು ಕೊಡುವವರು ಯಾರಾದರೂ ಇದ್ದಾರೆಯೇ? ಯಾರು ಇಲ್ಲ. We don't have any officers. ಏಕೆಂದರೆ, ಮಾನ್ಯ ಸಚಿವರೇ ತಮ್ಮ ಗಮನಕ್ಕೆ ತರುವುದೇನೆಂದರೆ, ನಾವು ಏನು ಬೆಳೆಯುತ್ತೇವೆಯೋ, ಅದರ ಬಗ್ಗೆ ಕೃಷಿ ಇಲಾಖೆಯವರಿಗೆ ಏನು ಗೊತ್ತಿಲ್ಲ. ಯಾವ ಎಣ್ಣೆ ಹೊಡೆಯಬೇಕೆಂದು ಗೊತ್ತಿಲ್ಲ. ಯಾವ ಹೂಳು ಬಂದಿದೆ ಎಂಬುದು ಗೊತ್ತಿಲ್ಲ. ಅವರು 20 ವರ್ಷಗಳಿಂದ package and practice ಓದಿರುತ್ತಾರೆ. ಅದರಲ್ಲಿ ಒಂದು standard ಇರುತ್ತದೆ. ಇಂತಹ ರೋಗ ಬರುತ್ತದೆ, ಇಂತಹದ್ದನ್ನು ಒಡೆಯಬೇಕೆನ್ನುವ standard ಇರುತ್ತದೆ. ಅದನ್ನು ಒಡೆದರೆ ಹೂಳು ಸಾಯುವುದಿಲ್ಲ. ನಾವೇ ಸಾಯಬೇಕು. ಅಗ್ರಿಕಲ್ಚರ್ ಅಸಿಸ್ಟೆಂಟ್ ಅದೇ ಕತೆಯನ್ನೇ ಹೇಳುತ್ತಾರೆ. ಎ.ಡಿ., ಮತ್ತು ಎ.ಓ., ಅದೇ ಹೇಳುತ್ತಾರೆ. ಹಾಗೆಯೇ ಸೆಮಿನಾರ್‌ಗಳನ್ನು ಮಾಡುತ್ತಾರೆ. ಇದರ ಬಗ್ಗೆ ಸರ್ಕಾರ ಅತ್ಯಂತ ಗಂಭೀರವಾದ ಚಿಂತನೆಯನ್ನು ಮಾಡಬೇಕಾಗುತ್ತದೆ. ಏಕೆಂದರೆ, ಇವತ್ತು ನಾವೆಲ್ಲಾ ಅಗ್ರಿಕಲ್ಚರ್‌ನಿಂದಲೇ ಬದುಕಿದ್ದೇವೆ. ಎಲ್ಲದಕ್ಕೂ raw materials supply ಎಲ್ಲಾ ಅಗ್ರಿಕಲ್ಚರ್‌ನಿಂದಲೇ ಆಗುತ್ತದೆ. ಇವತ್ತು ಸಾಕಷ್ಟು ಜನರು ಎಂ.ಎಸ್.ಪಿ., ಬಗ್ಗೆ ಕೇಂದ್ರ ಸರ್ಕಾರದಲ್ಲಿಯೂ ಮಾತನಾಡಿದ್ದಾರೆ. ಸರ್ಕಾರಕ್ಕೆ ನಾನು ಕೇಳುವುದೇನೆಂದರೆ, ತಾವು ಕಾನೂನುಬದ್ಧವಾದ ಎಂ.ಎಸ್.ಪಿ., ಯನ್ನು ಏಕೆ ಕೊಡುತ್ತಿಲ್ಲ? ಖರೀದಿ ಕೇಂದ್ರ ತೆಗೆಯುತ್ತೇವೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಎಂದು ಹೇಳುತ್ತಾರೆ. ಕೋಲಾರದಲ್ಲಿ ಟಮೊಟೋವನ್ನು ರಸ್ತೆಗೆ ಹಾಕಿರುತ್ತಾರೆ. ಇವೆಲ್ಲಾ ಕೊಳೆತ ಮೇಲೆ ಖರೀದಿ ಕೇಂದ್ರ ಪ್ರಾರಂಭವಾಗುತ್ತದೆ. ಸರ್ಕಾರದವರು ಶಾಸನಬದ್ಧ ಎಂ.ಎಸ್.ಪಿ.,ಯನ್ನು ಏಕೆ ತೆಗೆಯುತ್ತಿಲ್ಲ? ತಾವು ಒಂದು ದರವನ್ನು ನಿಗದಿ ಮಾಡಿ. 2000ನೇ ಸಾಲಿನಲ್ಲಿಯೇ ಮಾನ್ಯ ಎಸ್.ಎಂ.ಕೃಷ್ಣರವರ ಸರ್ಕಾರ ಇದ್ದಾಗ ಇದನ್ನು Revolving Fund ಎಂದು ಹೇಳಿದ್ದೆ. ಈ ಅಗ್ರಿಕಲ್ಚರ್ ಇನ್‌ಪುಟ್ಸ್ ತೆಗೆದುಕೊಳ್ಳುವುದಕ್ಕೆ Revolving Fund ಅನ್ನು ಮಾಡಿ, ಪ್ರತಿ ವರ್ಷ 5 ಸಾವಿರ ಕೋಟಿ, 10 ಸಾವಿರ ಕೋಟಿ ರೂಪಾಯಿಗಳನ್ನು ಇಡಬೇಕೆಂದು ಹೇಳಿದ್ದೆ. ಮೊದಲು ಪ್ರಾರಂಭ ಮಾಡಬೇಕಾದರೆ 500 ಕೋಟಿ ರೂಪಾಯಿಗಳನ್ನು ಮಾಡಿ. ಮುಂದಿನ ವರ್ಷ 5,000 ಕೋಟಿ ರೂಪಾಯಿಗಳನ್ನು ಮಾಡಿ. ಅದರ ಮುಂದಿನ ವರ್ಷ 10,000 ಕೋಟಿ ರೂಪಾಯಿಗಳನ್ನು ಮಾಡಿ. That Budget should be used for the M.S.P., only i.e., for market intervention. ಇವರು market intervention ಆದ ತಕ್ಷಣ ಏನಾಗುತ್ತದೆ ಎಂದರೆ, ಉದಾಹರಣೆಗೆ ಇವತ್ತು ಹತ್ತಿಯನ್ನು 8400 ರಿಂದ 8700 ವರೆಗೂ ಮಾರಾಟ ಮಾಡುತ್ತಿದ್ದೇವೆ. ರಾಯಚೂರು ಜಿಲ್ಲೆಯ ಮಾರುಕಟ್ಟೆಗೆ ಕೇರಳದವರು ಬಂದಿದ್ದಾರೆ. ಏಕಾಏಕಿ 300 ರೂಪಾಯಿಗಳಿಗೆ ಜಿಗಿದಿದೆ. ಚೆನ್ನಾಗಿರುವ ಬಿ.ಟಿ.ಹತ್ತಿಗೆ ಸುಮಾರು 9,000 ರೂಪಾಯಿಗಳು ಸಿಗುತ್ತಿದೆ. ಅವರ intervention ನಿಂದಲೇ ಈಗ 300-400 ರೂಪಾಯಿಗಳು ಬಂದಿದೆ.

**ವೈಸ್ ಛೇರ್ಮನ್:-** ಮಾನ್ಯ ಸಭಾನಾಯಕರೇ, ಸದನದಲ್ಲಿ ಕೃಷಿ ಮಂತ್ರಿಗಳು ಇಲ್ಲ. ಮಾನ್ಯ ಬಸವರಾಜ ಪಾಟೀಲ್ ಇಟಗಿಯವರ ಮಾತನ್ನು ಯಾರು ಕೇಳುತ್ತಾರೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದನಕ್ಕೆ ಕೃಷಿ ಮಂತ್ರಿಗಳನ್ನು ಕರೆಸುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೃಷಿ ಮಂತ್ರಿಗಳು ಯಾರು ಇರುವುದಿಲ್ಲ, ತಾವಾದರೂ ಸ್ವಲ್ಪ ಕೇಳಿ. ಏನಾದರೂ ಸ್ವಲ್ಪ ಉದ್ಧಾರ ಮಾಡಿ. ನಾವು ಹೇಳುವುದನ್ನು ಕೇಳುವುದಕ್ಕೆ ಯಾರು ತಯಾರಿಲ್ಲ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕೃಷಿ ಮಂತ್ರಿಗಳಿಂದ ಉತ್ತರ ಕೊಡಿಸಬೇಕೆಂದು ಹೇಳಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇವೆ. ಮಾನ್ಯ ಗೋವಿಂದ ಎಂ. ಕಾರಜೋಳ ಮತ್ತು ಇನ್ನಿತರ ಹಿರಿಯ ಮಂತ್ರಿಗಳು ಸದನದಲ್ಲಿ ಇದ್ದಾರೆ.

**ವೈಸ್ ಛೇರ್ಮನ್:-** ಮಾನ್ಯ ಸಭಾನಾಯಕರೇ, ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಹೇಳುವುದನ್ನು ಕೇಳಬೇಕಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಆಯಿತು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಕೃಷಿ ಪದವೀಧರರು, ಕೃಷಿಯಲ್ಲಿ ಅಪಾರವಾದ ಅನುಭವವನ್ನು ಹೊಂದಿರುವಂತಹವರು. ಈ ಸದನದಲ್ಲಿ ಇರುವಂತಹವರು ಶೇಕಡಾ 100 ಕ್ಕೆ 99 ರಷ್ಟು ಮಂದಿ ಕೃಷಿ ಕುಟುಂಬದಿಂದ ಬಂದಂತಹವರು. ಆದರೆ, ಕೃಷಿ ಮೇಲೆ ಚರ್ಚೆ ಆಗುವುದಿಲ್ಲ. ಅದು ದುರಂತ. ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಕೃಷಿ ಮೇಲೆ ಅಷ್ಟು ಚೆನ್ನಾಗಿ ಮಾತನಾಡುವಂತಹ ಸಂದರ್ಭದಲ್ಲಿ ನಮ್ಮ ಕೃಷಿ ಸಚಿವರು ಸದನದಲ್ಲಿ ಇದ್ದಿದ್ದರೆ ಒಳ್ಳೆಯದಾಗುತ್ತಿತ್ತು. ಅವರು ಚೆನ್ನಾಗಿ ಪ್ರತಿಕ್ರಿಯೆ ಕೊಡುತ್ತಿದ್ದರು. ಇವರ ಸಲಹೆಗಳು ಅವರ ಕಿವಿಯ ಮೇಲೆ ಬೀಳುತ್ತಿದ್ದವು. ಮುಂದೆ implement ಮಾಡಿದರೆ ರಾಜ್ಯದಲ್ಲಿ ಕೃಷಿಗೆ ಒಂದು ಶಕ್ತಿ ಬರುತ್ತದೆ ಎನ್ನುವ ಸಲುವಾಗಿ ಅವರು ಮಾತನಾಡುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನೆನ್ನೆಯ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರು ಉತ್ತರ ಕರ್ನಾಟಕದ ಬಗ್ಗೆ ಸುಮಾರು ಎರಡೂವರೆ ಗಂಟೆಗಳ ಕಾಲ ಏನು ಮಾತನಾಡಿದ್ದಾರೆ, ಅದರಿಂದ ಪ್ರಾರಂಭವಾಗಿ ಮಾನ್ಯ ಬಸವರಾಜ ಪಾಟೀಲ್ ಇಟಗಿಯವರವರೆಗೆ ಎಲ್ಲವನ್ನೂ ಕೂಡ ಕೂಲಂಕಷವಾಗಿ ಕೇಳುತ್ತಿದ್ದೇವೆ. ಈಗ ಇವರು ಮಾತನಾಡುವುದನ್ನು ಮುಂದುವರೆಸಲಿ. ನಾನು ಕೃಷಿ ಮಂತ್ರಿಗಳಿಗೆ ಕರೆ ಮಾಡುತ್ತೇನೆ.

**ವೈಸ್ ಛೇರ್ಮನ್:-** ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೇ, ತಾವು ಮಾತನಾಡಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಕೃಷಿ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳು ಬಾಕ್ಸ್‌ನಲ್ಲಿ ಇದ್ದಾರೆಯೇ? ಈ ವಿಚಾರದ ಬಗ್ಗೆ ಅವರಿಗೇನೂ ಆಸಕ್ತಿ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕೃಷಿ ಬಗ್ಗೆ ಅವರು ಮಾತನಾಡುತ್ತಾರೆ. ನೆನ್ನೆಯ ದಿವಸ ಫ್ಲಡ್ ಬಗ್ಗೆ, ನೀರಾವರಿ ಬಗ್ಗೆ, ಇನ್ನು ಬೇರೆ ಬೇರೆ ವಿಚಾರಗಳ ಬಗ್ಗೆ ಮಾತನಾಡಿದ್ದಾರೆ. ಇವತ್ತು ಕೃಷಿ ವಿಚಾರವಾಗಿ ಮಾತನಾಡುತ್ತಿದ್ದಾರೆ. ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಸದನಕ್ಕೆ ಒಂದು ಆಸ್ತಿ ಇದ್ದ ಹಾಗೆ. ಕೃಷಿ ಬಗ್ಗೆ ಅವರಷ್ಟು ಗೊತ್ತಿರುವವರು ಬೇರೆ ಯಾರೂ ಇಲ್ಲ. ಆ ಕಾರಣಕ್ಕೆ ನಾನು ಕೃಷಿ ಮಂತ್ರಿಯವರನ್ನು ಸದನಕ್ಕೆ ಬರುವುದಕ್ಕೆ ಹೇಳುತ್ತೇನೆ. ಆಗ ಅಧಿಕಾರಿಗಳು ಸಹ ಅವರ ಜೊತೆಯಲ್ಲಿಯೇ ಬರುತ್ತಾರೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ನಾನು ಎಂ.ಎಸ್.ಪಿ., ಬಗ್ಗೆ ಹೇಳುತ್ತಿದ್ದೇನೆ. ಎಂ.ಎಸ್.ಪಿ., ಬಗ್ಗೆ ಸರ್ಕಾರ ಈಗಲಾದರೂ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕು. ಸದನದಲ್ಲಿ ಹಿರಿಯ ಮಂತ್ರಿಯಾದ ಗೋವಿಂದ ಎಂ. ಕಾರಜೋಳರವರು ಇದ್ದಾರೆ. ಅವರು ಸಾಕಷ್ಟು ಕಬ್ಬು ಬೆಳೆಯನ್ನು ಬೆಳೆಯುತ್ತಾರೆ. ಮಾನ್ಯ ಮಂತ್ರಿಯಾದ ಸಿ.ಸಿ.ಪಾಟೀಲ್‌ರವರು ಸದನದಲ್ಲಿ ಇದ್ದಾರೆ. ಅವರ ಭಾಗದಲ್ಲಿ ಹತ್ತಿ, ಮೆಣಸಿನ ಕಾಯಿಯನ್ನು ಬೆಳೆಯುತ್ತಾರೆ. ಇಲ್ಲಿ ಕುಳಿತಿರುವ ಸಾಕಷ್ಟು ಮಂತ್ರಿಗಳು

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಆ ಭಾಗದವರೇ ಇದ್ದಾರೆ. ತಾವು ಎಂ.ಎಸ್.ಪಿ., ಬಗ್ಗೆ ಏಕೆ ಮಾತನಾಡುತ್ತಿಲ್ಲ? ಅದರ ಬಗ್ಗೆ ಏನಾದರೂ ಆಲೋಚನೆ ಮಾಡಬೇಕಲ್ಲವೇ? ಇದ್ದರಿಂದ, ತಮಗೆ ಏನು ನಷ್ಟವಾಗುವುದಿಲ್ಲ? ಒಂದು ವರ್ಷಕ್ಕೆ ಎರಡೂವರೆ ಕೋಟಿ ರೂಪಾಯಿಗಳ ಬಜೆಟ್ ಇದೆ. ಇದರಲ್ಲಿ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಇದಕ್ಕೆ ಇಡುವುದಕ್ಕೆ ಏನು ಗಂಟು ಹೋಗುತ್ತದೆ? ಒಂದು ವರ್ಷ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಿಟ್ಟರೆ, ಇನ್ನೊಂದು ವರ್ಷ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಿಡಬೇಕು. ಮತ್ತೆ ಮಾಲನ್ನು ಮಾರಿದ ಮೇಲೆ ವಾಪಸ್ಸು ಬರುತ್ತದೆಯಲ್ಲವೇ? ತಮ್ಮ ಮಾಹಿತಿಯ ಪ್ರಕ್ಕಾರ ತಾವು Government interfere ಮಾಡಿ, ಎಲ್ಲೆಲ್ಲಿ ಒಳ್ಳೆಯ ದರ ಇದೆಯೋ, ಆ ದೇಶಕ್ಕೆ ಕಳುಹಿಸಬಹುದು. ಇದನ್ನು ಮಾಡಿದಾಗ ಮಾತ್ರ ರೈತ ಉಳಿಯುವುದಕ್ಕೆ ಸಾಧ್ಯ. ಇಲ್ಲದಿದ್ದರೆ ರೈತ ಉಳಿಯುವುದಕ್ಕೆ ಸಾಧ್ಯವೇ ಇಲ್ಲ. ಈ 3-4 ವರ್ಷಗಳಿಂದ ತಮ್ಮ ಊರಿನಲ್ಲಿಯೇ ಎಷ್ಟು ಹೊಲಗಳು ಮುಳುಗಿವೆ, ಎಷ್ಟು ಮಂದಿ ಕಷ್ಟಕ್ಕೆ ಬಿದ್ದಿದ್ದಾರೆ ಎಂದು ತಾವೇ ನೋಡಿದ್ದೀರಿ. ಅವರಿಗೆ ಮನೆ ಇಲ್ಲ, ಎಲ್ಲಾ ಹೊಲ ಮುಳುಗಿದೆ. ಇದರಲ್ಲಿ ಸಾಕಷ್ಟು ಸಮಸ್ಯೆಗಳು ಇವೆ. ಇದರ ಬಗ್ಗೆ ಚರ್ಚೆಯಾಗುವಂತಹದ್ದು, ಸರ್ಕಾರದಿಂದ ಬಹಳ ಮುಖ್ಯವಾಗಿದೆ. ಮೂರನೆಯದಾಗಿ, ಇನ್‌ಶೂರೆನ್ಸ್ ಬಗ್ಗೆ ಹೇಳಬೇಕಾದರೆ, ನಮ್ಮಲ್ಲಿ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆ ಎಂದು ಇದೆ. ನನಗೆ ತಿಳಿದಿರುವ ಮಟ್ಟಿಗೆ ಇನ್‌ಶೂರೆನ್ಸ್ ಯಾರಿಗೆ ಬಂದಿದೆ, ಯಾರಿಗೆ ಬಂದಿಲ್ಲ ಎನ್ನುವುದು ನನಗಂತೂ ಗೊತ್ತಿಲ್ಲ. ನಾನು ಕೂಡ ಸಾಕಷ್ಟು ಇನ್‌ಶೂರೆನ್ಸ್ ಹಣವನ್ನು ಕಟ್ಟಿದ್ದೇನೆ. ಇವತ್ತಿನವರೆಗೆ ಒಂದು ದಿವಸವೂ ನನಗೆ ಇನ್‌ಶೂರೆನ್ಸ್ ಬಂದಿಲ್ಲ. ಹತ್ತಾರು ಬಾರಿ ಹೊಲ ಮುಳುಗಿದೆ. ಹತ್ತಾರು ಬಾರಿ ಬೆಳೆ ಹಾಳಾಗಿದೆ. ನಾವು ಪ್ರೀಮಿಯಂ ಅನ್ನು ಖಾಯಂ ಆಗಿ ಕಟ್ಟುತ್ತೇವೆ. ಇವರು ದೊಡ್ಡ ದೊಡ್ಡ ಕಂಪನಿಗಳಿಗೆ ಕೊಟ್ಟಿರುತ್ತಾರೆ. ಆ ಕಂಪನಿಯವನು ಎಲ್ಲಾ ಪ್ರೀಮಿಯಂ ಅನ್ನು ಕಲೆಕ್ಟ್ ಮಾಡಿಕೊಳ್ಳುತ್ತಾನೆ. ಕಲೆಕ್ಟ್ ಮಾಡಿಕೊಂಡು, ಇವನದು all-India level ನಲ್ಲಿ ಕಂಪನಿ ಇರುತ್ತದೆ. ಇವರು ಏನು ಮಾಡುತ್ತಾರೆ ಎಂದರೆ, ಬೆಳೆಗಳು ಹಾಳಾಗಿರುವ ಸಂದರ್ಭದಲ್ಲಿ ಇವರು ಬರುವುದಿಲ್ಲ. ಏಕೆಂದರೆ, ಇಲ್ಲಿಂದ ಮಾಹಿತಿಗಳು ಹೋಗಬೇಕು. ಈ ಮಾಹಿತಿಗಳು ಹೋಗಿ ಬರುವಷ್ಟರಲ್ಲಿಯೇ ಮೂರು ತಿಂಗಳು ಆಗಿರುತ್ತದೆ. ಆ ರೈತ ಮೂರು ತಿಂಗಳು ಸಮಯ ಹಾಳು ಮಾಡುವ ಆಗಿಲ್ಲ. ಏಕೆಂದರೆ, ಇನ್ನೊಂದು ಬೆಳೆಯನ್ನು ಬೆಳೆದು ಅವನು ಊಟ ಮಾಡಬೇಕಲ್ಲವೇ? ರೈತನು ಹೈಬ್ರೀಡ್ ಜೋಳ, ಬಜಾರ ಹಾಕುತ್ತಾನೆ. ಎರಡು-ಮೂರು ತಿಂಗಳ ಬೆಳೆಯನ್ನು ಹಾಕಿ, ಅವನು ಬದುಕಬೇಕಲ್ಲವೇ? ನಾನು ಕೂಡ ಸಾಕಷ್ಟು ನೋಡಿದ್ದೇನೆ. ಈ ಇನ್‌ಶೂರೆನ್ಸ್ ಸಲುವಾಗಿ ಊರಿಗೆ ಅಗ್ರಿಕಲ್ಚರ್ ಅಸಿಸ್ಟೆಂಟ್ ಮತ್ತು ವಿ.ಎ.,ಗಳು ಬರುತ್ತಾರೆ. ನಮ್ಮ ಕಡೆಯಲ್ಲಿ ಅಗಸಿ ಕಟ್ಟೆ ಎಂದು ಇರುತ್ತದೆ. ತಮ್ಮ ಕಡೆ ಏನೆಂದು ಕರೆಯುತ್ತಾರೋ ಗೊತ್ತಿಲ್ಲ. ಅಲ್ಲಿ ಕುಳಿತು ಊರಿನಲ್ಲಿ ಸ್ವಲ್ಪ ಗೊತ್ತಿರುವವರ ಹತ್ತಿರ ಹೆಸರನ್ನು ಕೇಳಿ, ಆ ಊರಿನಲ್ಲಿ ಇದ್ದಾನೋ, ಈ ಊರಿನಲ್ಲಿಇದ್ದಾನೋ ಎಂದು ಕೇಳುತ್ತಾರೆ. ಇದರ ಬಗ್ಗೆ ನಮಗೆ ಯಾವಾಗ ಗೊತ್ತಾಗುತ್ತದೆ ಎಂದರೆ, ಸರ್ಕಾರ 2,000 ದಿಂದ 5,000 ರೂಪಾಯಿಗಳನ್ನು ಬಿಡುಗಡೆ ಮಾಡುತ್ತದೆ. ಆ ಹಣವನ್ನು ಬಿಡುಗಡೆ ಮಾಡಿದಾಗ ಆ ಪಕ್ಕದ ಜಮೀನಿನವನಿಗೆ ಹಣ ಬಂದಿರುತ್ತದೆ. ಇನ್ನೊಂದು ಪಕ್ಕದ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜಮೀನಿನವನಿಗೆ ಹಣ ಬಂದಿರುವುದಿಲ್ಲ. ಅವರಿಗೆ ಹೇಗೆ ಹಣ ಬಂದಿತು. ನಮಗೆ ಏಕೆ ಹಣ ಬಂದಿಲ್ಲ ಎಂದು ಅವನು ಜಗಳ ತೆಗೆದು ಬಿಡುತ್ತಾನೆ. ಈ ರೀತಿಯ ಸಿಸ್ಟಂ ಇದೆ. ಕೃಷಿ ವಿಚಾರ ಬಂದಾಗ ಯಾವುದೇ ಸರ್ಕಾರ ಇರಲಿ, ನಮ್ಮ ಸರ್ಕಾರ ಇರಲಿ, ಅವರ ಸರ್ಕಾರ ಇರಲಿ, ಇದರ ಬಗ್ಗೆ ಬಹಳಷ್ಟು ಆಲೋಚನೆ ಮಾಡಬೇಕು. ಇವತ್ತು ರೈತ ಉಳಿಯುವ ಪರಿಸ್ಥಿತಿಯಲ್ಲಿಲ್ಲ. ಪ್ರತಿನಿತ್ಯ ರೈತ ನೇಣು ಹಾಕಿಕೊಂಡು ಸಾಯುತ್ತಾನೆ. ಮೊನ್ನೆಯ ದಿವಸ ಮೂರು ದಿನಗಳ ಹಿಂದೆ ನಾವು ಪೇಪರ್‌ನಲ್ಲಿಯೇ ಓದಿದ್ದೇವೆ. ಇದಕ್ಕೆ ಕಾರಣ ಏನು? ಸರ್ಕಾರಗಳು ಅಧಿಕಾರಿಗಳಿಗೆ ಸ್ವಲ್ಪ ಪಗಾರ ಕಡಿಮೆಯಾದ ಕೂಡಲೇ, ಅವರಿಗೆ ಕಡಿಮೆಯಾಯಿತು ಎಂದು ಎಷ್ಟೋ ತಾವು ಸರಿಪಡಿಸುತ್ತೀರಿ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯು ನಮ್ಮ ದೃಷ್ಟಿಯಲ್ಲಿ ಬಡವರಿಗೆ ಮತ್ತು ರೈತರಿಗೆ ಅನುಕೂಲವಾಗುತ್ತದೆ ಎನ್ನುವುದು ನಮ್ಮ ಯೋಚನೆ. ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೇ, ಈ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಜನರಿಗೆ ತಲುಪಿದ್ದರೆ ಬಹಳ ಒಳ್ಳೆಯ ಯೋಚನೆ ಎಂದು ನಾವು ಕಂಡುಕೊಂಡಿರುವಂತಹ ಸತ್ಯ. ಯಾವುದಾದರೂ ಕಾರಣಕ್ಕೆ ಸಂಸ್ಥೆಗೆ ಕೊಟ್ಟಿರುವುದು ಸಮರ್ಪಕವಾಗಿ ಆಗದೇ ಇದ್ದರೆ, ಅದಕ್ಕೆ ಏನು ಮಾಡಬೇಕೆಂದು ತಾವು ಸಲಹೆ ಕೊಡಿ. ಏಕೆಂದರೆ, ಈ ಸದನದಲ್ಲಿ ತಾವು ಮಾತ್ರ ಸಲಹೆ ಕೊಡುವುದಕ್ಕೆ ಸಮರ್ಥರು.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ಹಾಗೇನಿಲ್ಲ. ತಮ್ಮಲ್ಲಿ ಬಹಳಷ್ಟು ಸದಸ್ಯರು ನಮಗಿಂತ ಸಮರ್ಥರಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ಹೇಳಿದ್ದು ಮುಖಸ್ತುತಿಗೆ ಅಲ್ಲ. ಅದನ್ನು ಸ್ವಲ್ಪ ಸರಿಮಾಡಬೇಕಾದ ಅವಶ್ಯಕತೆ ಇದೆ ಎಂದು ನಾನು ಓಡಾಟ ಮಾಡಿದಾಗ ನನಗೆ ಅರ್ಥವಾಯಿತು. ಇದಕ್ಕೆ ನಾವು ಏನು ಮಾಡಬಹುದೆಂದು ಹೇಳಿದರೆ ಅದನ್ನು ಮಾಡುತ್ತೇವೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಇನ್‌ಶೂರೆನ್ಸ್ ಕಂಪನಿ ರಾಜ್ಯ ಸರ್ಕಾರದ ಅಧೀನದಲ್ಲಿರಬೇಕು. That is the first factor. ಏಕೆಂದರೆ, ಅವನು ಏನೇ ತಪ್ಪು ಮಾಡಿದರೂ our Minister should have the right to see that it is corrected. ಅವರು ತಮಗೆ ಸಂಬಂಧವೇ ಇರುವುದಿಲ್ಲ. ತಾವು ಏನೇನೋ ಹೇಳುವುದಕ್ಕೆ ಹೋದರೆ ತಮಗೆ ಕನ್‌ವಿನ್ಸ್ ಮಾಡಿ ಬಿಡುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಸಮಾಜ ಕಲ್ಯಾಣ ಇಲಾಖೆಯೊಳಗೆ ಒಂದು ರಿವ್ಯೂ ಮಾಡಿದ್ದೇವೆ. ಇದಕ್ಕೆ ಟೆಂಡರ್ ಹಾಕಿರುತ್ತಾರೆ. ಇದಕ್ಕೆ ಹಣ ಕಟ್ಟಿಲ್ಲ. ಇ.ಎಂ.ಡಿ., ಹಣ ಇತ್ತು. ಅದು ಮಾಫ್ ಆಗಿದೆ. Unbalanced Guarantee ಕೊಡಬೇಕು. ಕೇವಲ 3 ಕಂಪನಿಗಳು ಕೊಟ್ಟರೆ, ಇನ್ನುಳಿದ 20 ಕಂಪನಿಗಳು ಕೊಟ್ಟೇ ಇಲ್ಲ. ಒಂದರಿಂದ ಎರಡೆರಡು ಕೋಟಿ ರೂಪಾಯಿಗಳು ಕೊಡುವುದಿದೆ. ಆ ಅಧಿಕಾರಿಗಳು ಏನು ಮಾಡಿದ್ದಾರೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಂದರೆ, ಸುಮ್ಮನೆ 5 ರಿಂದ 10 ಲಕ್ಷ ತೆಗೆದುಕೊಂಡು, ಅವರನ್ನು ಪಾರು ಮಾಡಿ ಕೆಲಸವನ್ನೇ ಮುಗಿಸಿಬಿಟ್ಟರು. ಈ ರೀತಿಯಾದರೆ ಹೇಗೆ? ಇದನ್ನು ಯಾರಾದರೂ ನೋಡಬೇಕಲ್ಲವೇ? ಈಗ ಇರುವ ಮಂತ್ರಿಗಳು ಸಮರ್ಥರಿದ್ದಾರೆ. ಆ 4 ಮಂದಿಯನ್ನು ಅಮಾನತು ಮಾಡಿ.

**ವೈಸ್ ಛೇರ್ಮನ್:-** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಸಲಹೆ ಕೇಳಿದ್ದಾರೆಯಲ್ಲವೇ, ಅವರಿಗೆ ಸಲಹೆ ಕೊಡಿ.

**ಶ್ರೀ ಸಿ.ಸಿ.ಪಾಟೀಲ (ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೇ, ಮೊದಲ ಬಾರಿ ಇನ್‌ಶೂರೆನ್ಸ್ ಕಂಪನಿ ಬಂದಾಗ ತಾವು ಹೇಳಿದ ಹಾಗೆ ಆಗುತ್ತಿತ್ತು.

(ಮುಂದು)

**(1303) ಎಸ್‌ಪಿಆರ್/ಎಂಡಿ 4:20 23/12/2021 (ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಸಿ.ಸಿ.ಪಾಟೀಲ್ (ಮುಂದು):-**

ನಂತರದಲ್ಲಿ ರೈತರಿಗೆ ತಮ್ಮ ಮೊಬೈಲ್ ಆಪ್‌ಗಳ ಮೂಲಕ ಬೆಳೆ ವಿಮೆಯನ್ನು ಪಡೆಯುವ ಅವಕಾಶವನ್ನು ನೀಡಲಾಯಿತು. ಇದರಿಂದ ಎಲ್ಲಾ ಕಡೆಗಳಲ್ಲಿ ಬೆಳೆ ವಿಮೆಯ ಸಮಸ್ಯೆಗಳನ್ನು ಕಡಿಮೆಯಾಯಿತು. Threshold yield ಇದ್ದು ಅಲ್ಲಿನ ಸಮಸ್ಯೆಯಾಗಿದೆ. ಒಂದು ವೇಳೆ ಇದು ಜಾಸ್ತಿ ಇತ್ತು ಎಂದರೆ, ರೈತರು ಸರಿಯಾಗಿ ಎಲ್ಲಾ ಪ್ರೀಮಿಯಂ ಮೊತ್ತವನ್ನು ತುಂಬಿದ್ದರೂ ಸಹ ಬೆಳೆ ವಿಮೆಯು ಅನ್ವಯಿಸುವುದಿಲ್ಲ.

**ಶ್ರೀ ಬಸವರಾಜ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳುತ್ತಿರುವುದು ಸರಿಯಿದೆ. ರೈತರು ಬೆಳೆ ವಿಮೆಯನ್ನು ಪಡೆದುಕೊಳ್ಳುವ ವ್ಯವಸ್ಥೆಯನ್ನು ಸ್ವಲ್ಪ ಮಟ್ಟಿಗೆ ಬದಲಾಯಿಸಿದ್ದಾರೆ. ಆ ಬೆಳೆ ವಿಮೆಯನ್ನು ನೀಡುವುದು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಇಲ್ಲ ಎಂದು ನಾವು ಹೇಳುತ್ತೇವೆ. ವಿಮೆಯ ವ್ಯಾಪ್ತಿಯು ರಾಜ್ಯ ಸರ್ಕಾರದಡಿ ಇರುವುದು ಬಹಳ ಮುಖ್ಯವಾಗಿದೆ. ರಾಜ್ಯ ಸರ್ಕಾರವು ಬೆಳೆ ವಿಮೆಯನ್ನು ಒಂದು ಕಂಪೆನಿಗೆ ವಹಿಸಬೇಕು. ಒಂದು ವೇಳೆ ಸದರಿ ಕಂಪೆನಿಯವರು ತಪ್ಪು ಮಾಡಿದರೆ, ಅವರನ್ನು ಕರೆದು ಹೇಳಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿರುತ್ತದೆ. ಇವತ್ತಿನ ಬೆಳೆದ ಬೆಳೆಯು ಕೆಟ್ಟು ಹೋಗಿದೆ ಅಥವಾ ಮಳೆಯಿಂದ ಬೆಳೆ ನಾಶವಾಗಿದೆ ಎನ್ನುವ ಬಗ್ಗೆ ಬೆಳೆಗಳ ಮಾಪನ ಮಾಡುವ ವ್ಯವಸ್ಥೆ ಇದೆ. ಪ್ರದೇಶ, ಹೋಬಳಿ ಅಥವಾ ಗ್ರಾಮಪಂಚಾಯಿತಿವಾರು ಒಂದು ಎಕರೆಯಷ್ಟು ಭೂಮಿಯನ್ನು ಗುರ್ತಿಸಿ, ಎಷ್ಟು ಬೆಳೆ ನಷ್ಟವಾಗಿದೆ ಎನ್ನುವುದನ್ನು ನಿರ್ಧರಿಸಬೇಕು. ಯಾವಾಗಲೂ ಇಂತಹ ನಿರ್ಧಾರಗಳು ವಿಮಾ ಕಂಪೆನಿಯ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಪರವಾಗಿರುತ್ತವೆ ವಿನಾಃ ರೈತರ ಪರವಾಗಿರುವುದಿಲ್ಲ. ಅಲ್ಲಿನ ಗಿಡಗಳು ನೋಡುವುದಕ್ಕನೋ ಚೆನ್ನಾಗಿ ಕಾಣಿಸುತ್ತದೆ ಆದರೆ, ಅದರೊಳಗೆ ಯಾವುದೇ ಫಸಲು ಇರುವುದಿಲ್ಲ. ಆ ಗಿಡಗಳ ಬೇರುಗಳು ಕೆಳಗೆ ಕೊಳೆತುಬಿಟ್ಟಿರುತ್ತವೆ. They are not considering us, that is why we are talking to you. ಸಚಿವರು ಹೇಳಿದಂತೆ, ಕೆಲವು ಪ್ರದೇಶಗಳಲ್ಲಿ ಆ ರೀತಿಯಾಗಿ ಆಗುತ್ತಿರಬಹುದು; ಆದರೆ, ನಮ್ಮ ಹೈದರಾಬಾದ್ ಕರ್ನಾಟಕ ಪ್ರದೇಶಗಳಲ್ಲಿ ಹೆಚ್ಚಾಗಿ ಈ ರೀತಿಯಾಗಿ ಆಗುತ್ತಿಲ್ಲ. ವಿಮಾ ಕಂಪೆನಿಯು ತಮಗೆ ಇಷ್ಟಬಂದಂತೆ ಮಾಡುತ್ತಾರೆ. ಇಂತಹ ಪರಿಸ್ಥಿತಿಯು ಅಲ್ಲಿ ನಿರ್ಮಾಣವಾಗಿದೆ.

**ವೈಸ್ ಛೇರ್ಮನ್:-** ಶ್ರೀ ಬಸವರಾಜ ಪಾಟೀಲ್ ಇಟಗಿಯವರೇ, ಇನ್ನೂ ಎಷ್ಟು ಕಾಲಾವಕಾಶ ನಿಮಗೆ ಬೇಕು?

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಶ್ರೀ ಬಸವರಾಜ ಪಾಟೀಲ್ ಇಟಗಿಯವರು ಬೆಳೆ ವಿಮೆಯ ಬಗ್ಗೆ ಬಹಳ ಚೆನ್ನಾಗಿ ಬೆಳಕನ್ನು ಚೆಲ್ಲುತ್ತಿದ್ದಾರೆ. ಅವರಿಗೆ ಎಲ್ಲವೂ ತಿಳಿದಿದೆ. ನಮ್ಮ ರಾಜ್ಯದಲ್ಲಿ ಬೀದರ್ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಅತೀ ಹೆಚ್ಚು ಬೆಳೆ ವಿಮೆಯನ್ನು ಪಡೆಯುತ್ತಿದ್ದಾರೆ. ಈ ಸಾಲಿಗೆ ಗದಗ ಜಿಲ್ಲೆಯೂ ಸಹ ಇತ್ತೀಚೆಗೆ ಸೇರ್ಪಡೆಗೊಂಡಿದೆ. ಇದಕ್ಕೆ ಕಾರಣವೇನೆಂದರೆ, ಜನ ಪ್ರತಿನಿಧಿಗಳೂ ಸಹ ಇದರಲ್ಲಿ ಭಾಗಿಯಾಗಬೇಕಾಗಿದೆ. ಅಧಿಕಾರಿ ವರ್ಗದವರಿಗೆ ಆಗಿಂದಾಗ್ಗೆ ಸೂಚನೆಗಳನ್ನು ನೀಡಿ, ಅಲ್ಲಾಗಿರುವ ದೋಷಗಳನ್ನು ಅವರುಗಳಿಗೆ ಮನವರಿಕೆ ಮಾಡಿಕೊಟ್ಟರೆ ರೈತರಿಗೆ ಅನುಕೂಲವಾಗುತ್ತದೆ. ಒಮ್ಮೆ ವಿಮೆಯನ್ನು ಪಡೆದ ನಂತರ, ವಿಮೆ ಕಂಪೆನಿಯು ನೇರವಾಗಿ ರೈತರಿಗೆ ವಿಮಾ ಮೊತ್ತವನ್ನು ಕೊಡುವುದಕ್ಕಾಗುವುದಿಲ್ಲ. ನಮ್ಮಂತಹ ಜನಪ್ರತಿನಿಧಿಗಳು ಈ ಪ್ರಕ್ರಿಯೆಯಲ್ಲಿ ಭಾಗಿಯಾದರೆ, ಖಂಡಿವಾಗಿಯೂ ಸಹ ಯೋಜನೆಗಳು ಯಶಸ್ವಿಗೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಕಳೆದ ವರ್ಷ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನಲ್ಲಿ ದ್ರಾಕ್ಷಿ ಬೆಳೆಯು ನಷ್ಟವಾಯಿತು. ನಾನು ಪ್ರತಿನಿಧಿಸುವ ಕ್ಷೇತ್ರಗಳ ಪೈಕಿ ಕೇವಲ ಒಂದೇ ಕ್ಷೇತ್ರದಲ್ಲಿಯೇ 54 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ. ನಾನು ನನ್ನ ಕ್ಷೇತ್ರದ ಬಗ್ಗೆ ಮಾತ್ರವೇ ಇಲ್ಲಿ ಪ್ರಸ್ತಾಪಿಸುತ್ತಿಲ್ಲ. ಒಟ್ಟಾರೆಯಾಗಿ ನಮ್ಮಂತಹ ಜನ ಪ್ರತಿನಿಧಿಗಳು ರೈತರಿಗೆ ವಿಮಾ ಮೊತ್ತವನ್ನು ಕೊಡಿಸುವುದರಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸಬೇಕು; ನಾವುಗಳು ಇದರಲ್ಲಿ ಭಾಗಿಯಾದರೆ, ಯೋಜನೆಯು ಶೇಕಡಾ ನೂರಕ್ಕೆ ನೂರರಷ್ಟು ಫಲಪ್ರದವಾಗುತ್ತದೆ ಎಂದು ನಾನು ಭಾವಿಸುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ನನ್ನ ಬಳಿ...

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಈಗ ಅವರು ಮಾತನಾಡಲಿ. ಮಧ್ಯದಲ್ಲಿ ನೀವು ಅಡ್ಡಿಪಡಿಸಬೇಡಿ. ನೀವು ಮಾತನಾಡಬೇಡಿ. ಶ್ರೀ ಬಸವರಾಜ ಪಾಟೀಲ್ ಇಟಗಿಯವರೇ ನೀವು ಮುಂದುವರೆಸಿ. ಇಟಗಿಯವರೇ, ನೀವು yield ಆದರೆ, ಬೇರೆಯವರು ಮಾತನಾಡುತ್ತಾರೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಇಷ್ಟು ನಷ್ಟವಾದರೂ ಸಹ ಇದುವರೆವಿಗೆ ಒಂದು ಪೈಸೆಯನ್ನೂ ಸಹ ನೀಡಿಲ.

**ಸಭಾಪತಿಯವರು:-** ಶ್ರೀ ಪ್ರಕಾಶ್ ರಾಥೋಡ್‌ರವರೇ, ನಾನು ಹೇಳುವುದನ್ನು ಕೇಳಿ. ಸದಸ್ಯರು ಮಾತನಾಡುವುದನ್ನು ಕಡತಕ್ಕೆ ತೆಗೆದುಕೊಳ್ಳಬೇಡಿ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ನಿರ್ದೇಶನದಂತೆ, ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಕೆ.ರಾಥೋಡ್ ರವರು ಮಾತನಾಡಿರುವುದನ್ನು ನಡವಳಿಗಳಲ್ಲಿ ದಾಖಲಿಸಿರುವುದಿಲ್ಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ...

**ಸಭಾಪತಿಯವರು:-** ಶ್ರೀ ಪ್ರಕಾಶ್ ರಾಥೋಡ್‌ರವರೇ ಕುಳಿತುಕೊಳ್ಳಿ. ನಿಮಗೆ ಹೇಳುವವರು-ಕೇಳುವವರು ಯಾರೂ ಇಲ್ಲವೇ? ನೀವು ನಂತರದಲ್ಲಿ ಮಾತನಾಡಿ. ಶ್ರೀ ಬಸವರಾಜ ಪಾಟೀಲ್ ಇಟಗಿಯವರೇ, ನೀವು yield ಆದರೆ, ನಿಮ್ಮ ಸಮಯದ ಬಗ್ಗೆ ನನಗೆ ಗೊತ್ತಿಲ್ಲ. ಹೀಗಾಗಿ ನೀವು ಮಾತನಾಡಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶವೇ ನೀಡಿರುವುದಿಲ್ಲ. ನೀವು ಪೀಠಕ್ಕೆ ಬಂದಮೇಲೆ, ನನಗೆ ಮಾತನಾಡಲು ಅವಕಾಶ ದೊರೆತಿದೆ. ಒಂದು ವೇಳೆ ಆ ಪೀಠದಲ್ಲಿ ಬೇರೆಯವರು ಇದ್ದಿದ್ದರೆ, ನನಗೆ ಮಾತನಾಡಲು ಅವಕಾಶ ದೊರೆಯುತ್ತಿರಲಿಲ್ಲ. ನಾನು ಈವರೆಗೆ ಬೆಳೆ ವಿಮೆಯ ಬಗ್ಗೆ ಮಾತನಾಡುತ್ತಿದ್ದೇನು. ರೈತರು ಯಾವ ಬ್ಯಾಂಕಿನಲ್ಲಿ ಸಾಲ ಪಡೆಯುತ್ತಾರೆಯೋ, ಅಲ್ಲಿ ವಿಮಾ ಮೊತ್ತವು ಕಡಿತಗೊಳ್ಳುತ್ತದೆ. ಕೆಲವು ಬಡವರು ಮತ್ತು ಪರಿಶಿಷ್ಟ ಜಾತಿ ಮತ್ತು ಪಂಡದವರು ಕೇವಲ 1-2 ಎಕರೆ ಭೂಮಿಯನ್ನು ಹೊಂದಿರುತ್ತಾರೆ. ಈ ಜನರ ಬಗ್ಗೆ ಸರ್ಕಾರವು ಏನಾದರೂ ಚಿಂತನೆಯನ್ನು ಮಾಡಿದೆಯೇ? ನಮ್ಮ ಭಾಗದಲ್ಲಿ ಕನಿಷ್ಠ ಒಂದು ಎಕರೆ ಭೂಮಿಯನ್ನು ಹೊಂದಿದ್ದರೂ ಸಹ ರೈತರು ಬದುಕುತ್ತಾರೆ. ಏಕೆಂದರೆ ಒಂದು ಎಕರೆ ಭೂಮಿಯಲ್ಲಿ ಹತ್ತಿಯನ್ನು ಬೆಳೆದರೆ, ಕನಿಷ್ಠ 15 ಕ್ವಿಂಟಾಲ್‌ಗಳಷ್ಟು ಹತ್ತಿಯು ದೊರೆಯುತ್ತದೆ. ಇವತ್ತಿನ ದಿವಸ ಮಾರುಕಟ್ಟೆಯಲ್ಲಿ ಒಂದು ಕ್ವಿಂಟಾಲ್ ಹತ್ತಿಗೆ 8,000/- ರೂಪಾಯಿಗಳಷ್ಟು ಇದೆ. ಹೀಗಾಗಿ ರೈತರಿಗೆ ಲಕ್ಷಗಟ್ಟಲೆ ಆದಾಯ ದೊರೆಯುತ್ತದೆ ; 3-4 ಸದಸ್ಯರುಗಳುಳ್ಳ ರೈತನ ಕುಟುಂಬವು ಹೇಗಾದರೂ ಸರಿ, ಒಂದು ವರ್ಷದವರೆಗೆ ಜೀವನ ಸಾಗಿಸುತ್ತಾರೆ. ಈ ವರ್ಗದ ರೈತರ ಬಗ್ಗೆ ಯಾರಾದರೂ ಸಹ ಯೋಚನೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದಾರೆಯೇ? ನಾನು ಕೇವಲ ಪರಿಶಿಷ್ಟ ಜಾತಿ ಮತ್ತು ಪಂಗಡದ ಬಗ್ಗೆ ಮಾತ್ರವೇ ಮಾತನಾಡುತ್ತಿಲ್ಲ. ಯಾರೇ ಬಡವರು ಇರಬಹುದು; ಅವರುಗಳು ಕನಿಷ್ಠ ಭೂಮಿಯನ್ನು ಹೊಂದಿದ್ದರೆ ಅಂದರೆ ಸಣ್ಣ ಮತ್ತು ಮಧ್ಯಮ ವರ್ಗದ ರೈತರು ...,

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಈಗ ಎಲ್ಲಾ ವರ್ಗದ ರೈತರು ಅಂದರೆ ಲಿಂಗಾಯಿತ ಮತ್ತು ಬ್ರಾಹ್ಮಣ ಸಮುದಾಯದ ರೈತರು ಒಂದು ಎಕರೆಯಷ್ಟು ಭೂಮಿಯನ್ನು ಹೊಂದಿರುತ್ತಾರೆ. ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ...

**ಸಭಾಪತಿಯವರು:-** ಮಧ್ಯದಲ್ಲಿ ಯಾರೂ ಸಹ ಮಾತನಾಡಬೇಡಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಸಣ್ಣ ಮತ್ತು ಮಧ್ಯಮ ವರ್ಗದ ರೈತರು ಕೇವಲ 1-3 ಎಕರೆ ಭೂಮಿಗಳನ್ನು ಹೊಂದಿರುತ್ತಾರೆಯೋ, ಅವರುಗಳಿಗೆ ಬೆಳೆ ವಿಮಾ ಮೊತ್ತವನ್ನು ಭರಿಸಲಾಗುವುದಿಲ್ಲ. ಆಗ ಅವರುಗಳು ಏನು ಮಾಡಬೇಕು?

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ರೈತರ ಪರವಾಗಿ ಸಹಕಾರಿ ಸಂಘಗಳು ವಿಮಾ ಮೊತ್ತವನ್ನು ಭರಿಸಲು ಅವಕಾಶವಿದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಅಲ್ಲಿನ ಸಹಕಾರಿ ಸಂಘಗಳ ಹಣೆಬರಹವೇನಿದೆ?

**ಸಭಾಪತಿಯವರು:-** ಶ್ರೀ ಬಸವರಾಜ ಪಾಟೀಲ್ ಇಟಗಿಯವರೇ, ನೀವು ನನ್ನ ಕಡೆಗೆ ತಿರುಗಿ ಮಾತನಾಡಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ನಾನು ಸಹಕಾರ ಸಂಘಗಳ ಬಗ್ಗೆ ಮಾತನಾಡುತ್ತೇನೆ. ಗ್ರಾಮೀಣ ಸಹಕಾರ ಸಂಘವು ರೈತರಿಗೆ 50 ಸಾವಿರ ರೂಪಾಯಿಗಳಷ್ಟು ಸಾಲವನ್ನು ನೀಡಿರುತ್ತದೆ. ಇದನ್ನು ರೈತರು ಕೇವಲ ಒಂದು ಬಾರಿ ಮಾತ್ರವೇ ಉಪಯೋಗಿಸುವುದಿಲ್ಲ. ಒಂದು ಬಾರಿ ತೆಗೆದುಕೊಂಡ ಸಾಲವನ್ನು ಮರುಪಾವತಿಸಿ, ಪುನಃ ಎರಡನೇ ಬಾರಿಗೆ ಸಾಲವನ್ನು ಪಡೆಯುತ್ತಾರೆ. ಹೀಗೆ ಹಲವಾರು ಬಾರಿ ಮಾಡುತ್ತಾರೆ. ಇದರಿಂದ ಯಾವುದೇ ಉಪಯೋಗವಾಗುವುದಿಲ್ಲ. ಪ್ರತಿ ಎಕರೆಗೆ ಇಂತಿಷ್ಟೇ ಸಾಲ ಎಂಬುದಾಗಿ ಮಿತಿಯನ್ನು ನಿಗದಿಪಡಿಸಬೇಕು. ಯಾವುದೇ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದರೂ ಇದು ಬದಲಾಗಿಲ್ಲ. ಹೀಗಾಗಿ ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, ಆರ್ಥಿಕವಾಗಿ ಹಿಂದುಳಿದವರಿಗೆ, ಸಣ್ಣ ಮತ್ತು ಮಧ್ಯಮ ವರ್ಗದ ರೈತರಿಗೆ ಅಂದರೆ ಯಾರಿಗೆ ಬೆಳೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿಮೆಯನ್ನು ಭರಿಸಲು ಆಗುವುದಿಲ್ಲವೋ ಅವರುಗಳು ಏನು ಮಾಡಬೇಕೆಂದು ನಾನು ಕೇಳಲಿಚ್ಛಿಸುತ್ತೇನೆ. ಅವರುಗಳು ರೈತರು ಹೌದು ಅಥವಾ ಇಲ್ಲವೋ ಎಂದು ಸರ್ಕಾರವು ನಿರ್ಧರಿಸಬೇಕು. ಈ ವಿಚಾರದಲ್ಲಿ ಸರ್ಕಾರವು ಬಹಳ ಗಂಭೀರವಾಗಿ ಚಿಂತನೆಯನ್ನು ಮಾಡಬೇಕು ಮತ್ತು ಸದರಿ ಬೆಳೆ ವಿಮಾ ಮೊತ್ತವನ್ನು ಸರ್ಕಾರವು ಭರಿಸಬೇಕು. ಈ ವಿಚಾರಕ್ಕೆ ಸಂಬಂಧಪಟ್ಟಂತೆ, ರಾಜ್ಯದಲ್ಲಿ ಇಂತಹ ಒಟ್ಟು ಎಷ್ಟು ರೈತರಿದ್ದಾರೆ ಎಂಬ ಮಾಹಿತಿಯನ್ನು ಸರ್ಕಾರವು ತರಿಸಿಕೊಳ್ಳಬೇಕು. ಎಷ್ಟು ರೈತರು ಆದಾಯ ತೆರಿಗೆಯನ್ನು ಪಾವತಿಸುತ್ತಾರೆ; ಎಷ್ಟು ರೈತರು ಪಾವತಿಸುವುದಿಲ್ಲ; ಯಾರು ಪ್ರಗತಿಪರ ರೈತರಿದ್ದಾರೆ; ಯಾರು ದೊಡ್ಡ ರೈತರಿದ್ದಾರೆ ಎನ್ನುವ ಮಾಹಿತಿಯನ್ನೂ ಸಹ ಸರ್ಕಾರವು ತರಿಸಿಕೊಳ್ಳಬೇಕು. ದೊಡ್ಡ ರೈತರನ್ನು ಸರ್ಕಾರವು ಕೈಬಿಡಬೇಕು. ಯಾವುದೇ ಜಾತಿಯ ಸಣ್ಣ ಮತ್ತು ಮಧ್ಯಮ ವರ್ಗದ ರೈತರ ಪಟ್ಟಿಯನ್ನು ಸರ್ಕಾರವು ತರಿಸಬೇಕು. ಕನಿಷ್ಠ 1 ರಿಂದ 5 ಎಕರೆಗಳಷ್ಟು ಭೂಮಿಯನ್ನು ಹೊಂದಿರುವ ರೈತರ ಪಟ್ಟಿಯನ್ನು ಸರ್ಕಾರವು ತರಿಸಿಕೊಳ್ಳಬೇಕು. ಕೇವಲ 1-2 ಎಕರೆಗಳಷ್ಟು ಭೂಮಿಯನ್ನು ಹೊಂದಿದ ಮತ್ತು ಆರ್ಥಿಕವಾಗಿ ಹಿಂದುಳಿದ ರೈತರಿಗೆ ಈಗ ಸಮಾಜ ಕಲ್ಯಾಣ ಇಲಾಖೆಯಿಂದ ಬೋರ್‌ವೆಲ್‌ಗಳನ್ನು ಕೊರೆಸಿ ಕೊಡಲಾಗುತ್ತಿದೆ. ಈ ರೀತಿಯ ಮಾಹಿತಿಯನ್ನು ಸರ್ಕಾರವು ಸಿದ್ಧಪಡಿಸಬೇಕು. ರಾಜ್ಯ ಸರ್ಕಾರದ ಬಳಿ ಎಲ್ಲಾ ಮಾಹಿತಿಯು ಲಭ್ಯವಿದೆ. ತಮಗೆ ತಿಳಿದಿರುವಂತೆ, ಕಳೆದ ಬಾರಿ ನಾನು ಪ್ರಶ್ನೆಯೊಂದನ್ನು ಕೇಳಿದ್ದಾಗ, ರೈತರು ಹೊಂದಿರುವ ಭೂಮಿಯನ್ನು ಸರ್ವೆ ಕಾರ್ಡ್‌ನ್ನು ನೀಡುವುದಾಗಿ ಸರ್ಕಾರವು ತಿಳಿಸಿತ್ತು. ಆದರೆ, ಇವತ್ತಿನವರೆಗೆ, ಆ ರೀತಿಯ ಕಾರ್ಡ್‌ನ್ನು ನೀಡಿರುವುದಿಲ್ಲ. ಈ ವಿಚಾರದಲ್ಲಿ ಸರ್ಕಾರವು ಯಾವುದೇ ಪ್ರಗತಿಯನ್ನು ಸಾಧಿಸಿರುವುದಿಲ್ಲ. ನಾನು ಈ ಪ್ರಶ್ನೆಯನ್ನು ಕೇಳಿ 3 ವರ್ಷಗಳಾಗಿವೆ. ಇಂತಿಷ್ಟು ಲಕ್ಷಗಟ್ಟಲೆ ಕಾರ್ಡ್‌ಗಳನ್ನು ನೀಡಿರುವುದಾಗಿ, ಹೊಸ ಕೃಷಿ ನೀತಿಯನ್ನು ಜಾರಿಗೊಳಿಸುವುದಾಗಿ ಹಾಗೂ ಮತ್ತಿತರೆ ಕೆಲಸಗಳನ್ನು ಮಾಡುವುದಾಗಿ ಸರ್ಕಾರವು ಸುಖಾಸುಮ್ಮನೆ ತನ್ನ ಭಾಷಣದಲ್ಲಿ ಹೇಳುತ್ತದೆ. ಇಂತಹ ವಿಷಯಗಳಲ್ಲಿ ಬಹಳಷ್ಟು ಆಲೋಚನೆಗಳನ್ನು ಮಾಡುವ ಕೆಲಸಗಳನ್ನು ಸರ್ಕಾರವು ಬಹಳ ಗಂಭೀರವಾಗಿ ಮಾಡಬೇಕು.

ಈ ಭಾಗದ ಬಗ್ಗೆ ನಾನು ಸ್ವಲ್ಪ ಹೇಳಲಿಚ್ಛಿಸುತ್ತೇನೆ. ಇತ್ತೀಚೆಗೆ ರೇಷ್ಮೆ ಕೃಷಿಯು ಉತ್ತರ ಕರ್ನಾಟಕ ಭಾಗದಲ್ಲಿಯೂ ಸಹ ಹೆಚ್ಚಾಗುತ್ತಿದೆ. ಒಟ್ಟಾರೆಯಾಗಿ ಹೇಳುವುದಾರೆ, ಉತ್ತರ ಕರ್ನಾಟಕ ಭಾಗದ ಬಹಳಷ್ಟು ರೈತರು ನಿಧಾನವಾಗಿ ರೇಷ್ಮೆ ಕೃಷಿಯಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಏಕೆಂದರೆ, ಇದು ಪ್ರತಿ 3 ತಿಂಗಳಿಗೊಮ್ಮೆ ಫಸಲು ನೀಡುತ್ತದೆ. ಇದನ್ನು ಬೆಳೆದರೆ, ಆ ರೈತನು 3 ತಿಂಗಳುಗಳ ಕಾಲ ಜೀವನ ಸಾಗಿಸಬಹುದು ಎಂಬ ಭರವಸೆಯು ಆತನಿಗಿರುತ್ತದೆ. ಈ ಕ್ಷೇತ್ರದಲ್ಲಿ Automatic Silk Reeling Machine ಗಳಿಲ್ಲ; ಒಂದು ವೇಳೆ ಇವುಗಳನ್ನು ಸರ್ಕಾರವು ಒದಗಿಸಿದ್ದೇ ಆದರೆ, ಫಸಲಿನಲ್ಲಿ ಚೈನಾ ದೇಶದಲ್ಲಿರುವ ರೇಷ್ಮೆ ಗುಣಮಟ್ಟವು ದೊರೆಯುತ್ತದೆ. ಇಂತಹ ಸಮಸ್ಯೆಗಳ ಬಗ್ಗೆ ಸರ್ಕಾರವು ಕಿಂಚಿತ್ತೂ ತಲೆಕೆಡಿಸಿಕೊಳ್ಳುವುದಿಲ್ಲ. ಆದರೆ, ಆಯಾ ದಿನದ ಕಾರ್ಯಕಲಾಪಗಳನ್ನು ಪೂರ್ಣಗೊಳಿಬೇಕೆಂಬ ಮನೋಭಾವನೆಯನ್ನು ಸರ್ಕಾರವು ಹೊಂದಿದೆ. ಹೀಗಾಗಿ ನಾನು ಸರ್ಕಾರಕ್ಕೆ

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ವಿನಂತಿಸಿಕೊಳ್ಳುವುದೇನೆಂದರೆ, ಸರ್ಕಾರದ ಎಲ್ಲಾ ಮಂತ್ರಿಗಳು ಒಂದು ದಿನ ಕೇವಲ ಕೃಷಿ, ರೈತರು ಮತ್ತು ರೈತಾಪಿ ಮಹಿಳೆ ಈ ವಿಚಾರಗಳ ಬಗ್ಗೆ ಮಾತ್ರವೇ ಸಚಿವ ಸಂಪುಟ ಸಭೆಯನ್ನು ನಡೆಸಬೇಕು. ಅವರುಗಳಿಗಿರುವ ಸಮಸ್ಯೆಗಳ ಬಗ್ಗೆ ಸರ್ಕಾರವು ಮೊದಲು ತಿಳಿದುಕೊಳ್ಳಬೇಕು. ಇದು ಬಹಳಷ್ಟು ಅವಶ್ಯಕವಾದುದು. ಪ್ರಸಕ್ತ ಮತ್ತು ಮುಂಬರುವ ಸಾಲುಗಳಲ್ಲಿ ತಲಾ 10 ಸಾವಿರ ಕೋಟಿ ರೂಪಾಯಿಗಳಂತೆ ಇದೇ ಕ್ಷೇತ್ರದ ಅಭಿವೃದ್ಧಿಗಾಗಿ ಮೀಸಲಿಡಬೇಕು. ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ ರವರನ್ನು ನಾವು ಶ್ಲಾಘಿಸುತ್ತೇವೆ; ಏಕೆಂದರೆ, ಅವರು ರೈತರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಬಹಳಷ್ಟು ಅನುಕೂಲಗಳನ್ನು ಮಾಡಿದ್ದಾರೆ. ಇಂತಹ ವಿಷಯಗಳ ಬಗ್ಗೆ ಸರ್ಕಾರವು ಸ್ವಲ್ಪ ಮಟ್ಟಿಗಾದರೂ ಸಹ ವಿಚಾರ ಮಾಡಬೇಕು. ಏಕೆಂದರೆ ರೈತರಿಗೆ ನೇರವಾಗಿ ಹಣ ನೀಡುವುದಕ್ಕಾಗುವುದಿಲ್ಲ. ಯಾವುದೇ ಪಕ್ಷದ ಸರ್ಕಾರ ಅಧಿಕಾರದಲ್ಲಿರಲಿ, ಅವರು ಕೆಲಸಗಳನ್ನು ಮಾಡಿದ್ದಾರೆ. We have to appreciate it. ಈ ರೀತಿಯಾಗಿ ರೈತರಿಗೆ ಅನುಕೂಲ ಮಾಡಿಕೊಡುವ ಕೆಲಸಗಳು ಸರ್ಕಾರಿ ವ್ಯವಸ್ಥೆಗಳಲ್ಲಾಗಬೇಕು. ಶ್ರೀ ಗೋವಿಂದ ಕಾರಜೋಳ ರವರೇ, ನೀರಾವರಿ ಕುರಿತಾಗಿ ನಾನಿನ್ನೂ ಮಾತನಾಡಿಲ್ಲ. ನಾನು ಬಹಳವಾಗಿ ನೀರಾವರಿ ಕುರಿತಾಗಿ ಮಾತನಾಡಬೇಕಾಗಿದೆ. ಜಲಸಂಪನ್ಮೂಲ ಸಚಿವರು ಸದನದಲ್ಲಿದ್ದರೆ ಬಹಳ ಒಳ್ಳೆಯದಾಗುತ್ತದೆ. ಅವರು ಕೇಳಿಸಿಕೊಳ್ಳಲಿ ಅಥವಾ ಬಿಡಲಿ, ನಾವು ಮಾತನಾಡುತ್ತೇವೆ. ನಾನು ಮೊದಲು ನೀರಾವರಿ ವಿಚಾರವಾಗಿಯೇ ಮಾತನಾಡಬೇಕೆಂದುಕೊಂಡಿದ್ದೇನು. ಆಗ ಮೊದಲು ಕೃಷಿ ಬಗ್ಗೆ ಮಾತನಾಡಿ, ನಂತರದಲ್ಲಿ ನೀರಾವರಿ ಬಗ್ಗೆ ಮಾತನಾಡಿದರಾಯಿತು ಎಂದು ಸುಮ್ಮನಾದೆನು. ಜಲ ಸಂಪನ್ಮೂಲ ಸಚಿವರು ಖಡಕ್ಕಾಗಿದ್ದಾರೆ. ಪ್ರಸಕ್ತ ಅಧಿವೇಶನವು ನನ್ನ ಕೊನೆಯ ಅಧಿವೇಶನವಾಗಿರುವುದರಿಂದ ನಮ್ಮ ಭಾಗದ ಸಮಸ್ಯೆಗಳ ಬಗ್ಗೆ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟು ನಾವು ನಿರ್ಗಮಿಸುತ್ತೇವೆ.

**ಸಭಾಪತಿಯವರು:-** ಶ್ರೀ ಬಸವರಾಜ ಪಾಟೀಲ್ ಇಟಗಿಯವರೇ ಇನ್ನು ಐದು ನಿಮಿಷಗಳ ಕಾಲಾವಕಾಶವನ್ನು ನೀಡಲಾಗುತ್ತದೆ. ನೀವು 4:00 ಗಂಟೆಯಿಂದ ಮಾತನಾಡಲು ಪ್ರಾರಂಭಿಸಿದ್ದು, ಈಗಾಗಲೇ ಅರ್ಧ ಗಂಟೆಗಳ ಕಾಲಾವಕಾಶವನ್ನು ತೆಗೆದುಕೊಂಡಿದ್ದೀರಿ. ಇನ್ನು ಐದು ನಿಮಿಷಗಳ ಕಾಲಾವಕಾಶವನ್ನು ನೀಡಲಾಗುವುದು.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ನನಗೆ ಇನ್ನೂ 10 ನಿಮಿಷಗಳ ಕಾಲಾವಕಾಶವನ್ನು ನೀಡಿ. ನೀರಾವರಿ ಮತ್ತು ಕೃಷಿ ಇವುಗಳೆರೆಡು ಒಂದಕ್ಕೊಂದು ಸಂಬಂಧಪಟ್ಟಿದ್ದಾಗಿವೆ. ಇದು ನಮ್ಮ ಕಡೆಯ ಅಧಿವೇಶನವಾಗಿದೆ. ನಂತರದಲ್ಲಿ ನಾವು ಈ ಸದನಕ್ಕೆ ಬರುವುದೇ ಇಲ್ಲ; ಸಚಿವರೊಂದಿಗೆ ಮಾತನಾಡುವುದೂ ಸಹ ಇಲ್ಲ. ಸದನದ ಹೊರಗಡೆ ಸಚಿವರು ಭೇಟಿಯಾದಾಗ ನಾವು ಅವರೊಂದಿಗೆ ಮಾತನಾಡುತ್ತೇವೆ; ಆದರೆ ಸದನದೊಳಗೆ ಮಾತನಾಡುವುದಕ್ಕಾಗುವುದಿಲ್ಲ. ನಮ್ಮ ಭಾಗದಲ್ಲಿನ ಕ್ಷೇತ್ರಗಳೆಲ್ಲವೂ ಮೀಸಲಾತಿ ಕ್ಷೇತ್ರಗಳಾಗಿರುವುದರಿಂದ ನಾವು ಹೇಗೆ ಆಯ್ಕೆಗೊಂಡು

ವಿಧಾನಸಭಾ ಸದಸ್ಯರಾಗಿ ಬರಬೇಕು? ನಮ್ಮ ಭಾಗದಲ್ಲಿ 4 ಪರಿಶಿಷ್ಟ ಪಂಗಡ ಮತ್ತು 1 ಪರಿಶಿಷ್ಟ ಜಾತಿ ಮೀಸಲಾತಿ ಕ್ಷೇತ್ರಗಳಿವೆ. ಹೀಗಾಗಿ ನಾವು ವಿಧಾನ ಪರಿಷತ್ತಿನ ಸದಸ್ಯರಾಗಿ ಆಯ್ಕೆಗೊಂಡು ಬರಬೇಕಷ್ಟೇ. ನಾನು ಕೃಷಿ ವಿಚಾರವನ್ನು ಇಲ್ಲಿಗೆ ಮುಗಿಸುತ್ತೇನೆ. ಏಕೆಂದರೆ ನನಗೆ ಮಾತನಾಡಲು ಇನ್ನೂ ಹಲವಾರು ಅಂಶಗಳಿವೆ. ಅವುಗಳೆಲ್ಲವೂ ಮುಗಿಯಲಾರದ ಕಥೆಗಳಾಗಿವೆ. ತಾವೂ ಸಹ ಅಷ್ಟೊಂದು ಸಮಯವನ್ನು ನನಗೆ ನೀಡುವುದಿಲ್ಲ. ಹೀಗಾಗಿ ನಾನು ಕೇವಲ ನೀರಾವರಿ ಕ್ಷೇತ್ರದ ಬಗ್ಗೆ ಮಾತ್ರವೇ ಮಾತನಾಡುತ್ತೇನೆ. ಇದು ನನ್ನ ಕಡೆಯ ಅಧಿವೇಶನವಾಗಿದೆ ಎನ್ನುವುದು ತಮಗೂ ಸಹ ತಿಳಿದಿದೆ; ಹೀಗ್ಯಾಗಿ ಸ್ವಲ್ಪ ಕಾಲಾವಕಾಶವನ್ನು ನೀಡಿದ್ದಾರೆ.

ರಾಜ್ಯದ ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು 519.6 ಅಡಿಗಳಿಂದ 524 ಅಡಿಗಳವರೆಗೆ ಯಾವಾಗ ಏರಿಕೆ ಮಾಡಲಾಗುತ್ತದೆ ಎನ್ನುವುದರ ಬಗ್ಗೆ ಸಚಿವರು ತಿಳಿಸಬೇಕು. ಈ ಯೋಜನೆಗೆ ಸಂಬಂಧಪಟ್ಟಂತೆ ಇನ್ನೂ ಎಷ್ಟು ಭೂ ಸ್ವಾಧೀನಪಡಿಸಿಕೊಳ್ಳಬೇಕು. ಅದನ್ನು ಯಾವಾಗ ಮಾಡಲಾಗುತ್ತದೆಂದು ನಾನು ಕೇಳಬಯಸುತ್ತೇನೆ. ಇವುಗಳೆಲ್ಲವೂ ಬಹಳ ಪ್ರಮುಖ ವಿಷಯಗಳಾಗಿವೆ. ಏಕೆಂದರೆ, ಈ ಮೊದಲು ನಮ್ಮ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರಾವರಿ ಯೋಜನೆಗಳಿರಲಿಲ್ಲ. ಈ ಎರಡೂ ಜಿಲ್ಲೆಗಳಲ್ಲಿ ಈ ಮೊದಲು ARBC (Almatti Right Bank Canal) and ALBC (Almatti Left Bank Canal) ನಿರ್ಮಾಣಗೊಂಡಿರಲಿಲ್ಲ. ಆ ಹೊತ್ತಿಗಾಗಲೇ, ಕೃಷ್ಣಾ ಭಾಗ್ಯ ಜಲ ನಿಗಮವು ಸ್ಥಾಪನೆಗೊಂಡಿತ್ತು. ಆಗ ನಮಗೆ ನೀರು ಸಲೀಸಾಗಿ ಬರುತ್ತಿತ್ತು. ಕಳೆದ ಬಾರಿ ವಿಜಯಪುರ ಜಿಲ್ಲೆಯಲ್ಲಿ ಅಭಿವೃದ್ಧಿ ಕಾರ್ಯಗಳಾದ ಮೇಲೆ, ನಮಗೆ ನೀರೇ ದೊರೆಯುತ್ತಿಲ್ಲ.

(ಮುಂದು)

**(1304)/4-30/23-12-2021/ಎಲ್‌ಎಂ/ಎಂಡಿ** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಪಾಟೀಲ್ ಇಟಗಿ(ಮುಂದು):-**

Major ಕೆರೆಗಳನ್ನು ತುಂಬುವುದು, ARBC (Almatti Right Bank Canal), ALBC (Almatti Left Bank Canal) ಅವು ಎಲ್ಲ ಆದಮೇಲೆಯೇ ನಮಗೆ ನೀರು ಬರುವುದು. ನೀರಾವರಿ ಎಂದರೆ ಕೆಲವರು ಏನು ತಿಳಿದುಕೊಂಡಿದ್ದಾರೆ ಎಂದರೆ, ನಮ್ಮ ಹಳ್ಳಿಯಲ್ಲಿ ರೈತರು ಬಂದು, ಅಲ್ಲಿ ಡ್ಯಾಂ ತುಂಬಿದೆ ನಮಗೆ ಸ್ವಲ್ಪ ನೀರು ಬಿಡಲು ಏನು ತೊಂದರೆ, ಅವರಿಗೆ ನೀವೆ ಸ್ವಲ್ಪ ಹೇಳಿ ಎಂದು ನಮಗೆ ಹೇಳುತ್ತಾರೆ. ಡ್ಯಾಂ ತುಂಬಿದೆ ಆದರೆ ಅದು ಕೇವಲ 60 percent crop ಗೆ ಬರುತ್ತದೆ. ಎಲ್ಲರ ತಲೆಯಲ್ಲಿ ಡ್ಯಾಂ ತುಂಬಿದೆ ನಮಗೆ ನೀರಾವರಿಗೆ ನೀರು ಕೊಡುತ್ತಾರೆ ಎನ್ನುವ concept ಇದೆ. Basic ಏನು ಎನ್ನುವುದು ಅವರಿಗೆ ಗೊತ್ತೆ ಇಲ್ಲ. Remaining for 40 percent of the crop, we must depend upon the rainwater. ನಂತರ as a security 60 percent storage ಇರುವುದನ್ನು ಉಪಯೋಗಿಸಿಕೊಂಡು ಬೆಳೆಯನ್ನು ಬೆಳೆಯುತ್ತೇವೆ. ಆದರೆ ಸರ್ಕಾರ ಡ್ಯಾಂ ಬಗ್ಗೆ ತಲೆಯನ್ನು ಕೆಡಿಸಿಕೊಳ್ಳುತ್ತಿಲ್ಲ. ಡ್ಯಾಂ ಗಾಗಿ ಎಲ್ಲಾ infrastructure ಮಾಡಲಾಗಿದೆ. ನಮ್ಮ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಣೆ ಬರಹ ಹೇಗೆ ಆಗಿದೆ ಎಂದರೆ, canal ಎಲ್ಲಾ ನಮ್ಮ ಹೊಲದಲ್ಲಿ ಬಂದಿವೆ. ನಾವು ಹೋಗಿ insurance ಕೇಳಿದರೆ, ನಿಮ್ಮದು ನೀರಾವರಿ ಹೊಲ ಎಂದು ಹೇಳುತ್ತಾರೆ. ನೀರಾವರಿಗೆ ನೀರು ಇಲ್ಲ, ಸರ್ಕಾರ ಎಲ್ಲಾ ನೀರಾವರಿ ಹೊಲಗಳು ಎಂದು ಪ್ರಮಾಣ ಪತ್ರವನ್ನು ಕೊಟ್ಟುಬಿಟ್ಟಿದ್ದಾರೆ. ನಮ್ಮ ಬೆಳೆ ನಾಶವಾದಾಗ ನಾವು ಯಾವುದೇ ಬ್ಯಾಂಕ್‌ಗೆ ಹೋಗಿ insurance ಕೇಳಿದರೆ ನಿಮ್ಮ ಹೊಲ ನೀರಾವರಿಯಲ್ಲಿ ಬರುತ್ತದೆ ಎಂದು ಹೇಳುತ್ತಾರೆ. ಹಿಂದಿನ ಸಾರೆ ನಾನು ಮಾತನಾಡುವಾಗ, ಈಗ ಎಷ್ಟು ನೀರಾವರಿ ಕೊಡಲು ನಿಮಗೆ ಸಾಧ್ಯ ಅಷ್ಟು ಕೊಡಿ, ಉಳಿದಿರುವುದನ್ನು unlocalized ಮಾಡಿ ಎಂದು ಕೇಳಿಕೊಂಡಿದ್ದೇವೆ. ಸುಮ್ಮನೆ ನಮ್ಮ ಹೊಲಗಳಲ್ಲಿ ಕೆನಾಲ್ ಮಾಡಿ ೨೦ ವರ್ಷಗಳಾದರೂ ನೀರು ಕೊಡದೆ ಇದ್ದರೆ ಯಾವ ಪುರಷಾರ್ಥಕ್ಕೆ ಮಾಡಬೇಕು ಅದನ್ನು? ನಮ್ಮಲ್ಲಿ Upper Krishna Project ಆಗಿ ೨೦ ವರ್ಷವಾಗಿದೆ ಇವತ್ತಿಗೂ ಒಂದು ಹನಿ ನೀರು ಬಂದಿರುವುದಿಲ್ಲ. ಬೆಳೆ ಹಾನಿಯಾದರೆ insurance ಸಿಗುವುದಿಲ್ಲ, ನೀರು ಸಿಗುತ್ತಿಲ್ಲ ಇಂತಹ ಪರಿಸ್ಥಿತಿ ನಮ್ಮದಾಗಿದೆ. ಇವುಗಳಿಗೆಲ್ಲಾ address ಮಾಡುವವರು ಯಾರು. 519 meter to 524 meter ಗೆ ಡ್ಯಾಂ ನ್ನು ಎತ್ತರ ಮಾಡಿದರೆ ಮಾತ್ರ ನಮಗೆ ನೀರು ಬರುತ್ತದೆ ಇಲ್ಲದಿದ್ದರೆ ಇಲ್ಲ. ಹಣ ಜಾಸ್ತಿ ಬೇಕು ಎಂದು ಹೇಳುತ್ತಾ ಹಾಗೆ ಮುಂದಕ್ಕೆ ಹಾಕಿಕೊಂಡು ಹೋಗುತ್ತಿದ್ದಾರೆ. ಯುಕೆಪಿ ೩ನೇ ಹಂತ ಪೂರ್ಣ ಮಾಡಬೇಕಾದರೆ 70 ರಿಂದ 80 ಕೋಟಿ ರೂಪಾಯಿಗಳು ಬೇಕಾಗುತ್ತದೆ. Dam height increase ಮಾಡುವುದು ಏನು ಇಲ್ಲ, ಬರಿ welding ಮಾಡುವ ಕೆಲಸವಿದೆ. ಆದರೆ major ಎಂದರೆ land acquisition and rehabilitation ಮಾಡುವುದು. ಒಂದು ಮಾತನ್ನು appreciate ಮಾಡುತ್ತೇನೆ. ಯಾವುದೇ ಸರ್ಕಾರವಿರಲ್ಲಿ ಜಗತ್ತಿನಲ್ಲಿ highest rehabilitation ಆಗಿರುವುದು ನಮ್ಮ ಕರ್ನಾಟಕ ರಾಜ್ಯದಲ್ಲಿ, that is in the Upper Krishna Project.

**ಶ್ರೀ ಗೋವಿಂದ ಎಂ.ಕಾರಜೋಳ(ಜಲಸಂಪನ್ಮೂಲ ಸಚಿವರು)**:- ಮಾನ್ಯ ಸಭಾಪತಿಗಳೆ, ಮಾನ್ಯ ಬಸವರಾಜರವರೆ ನೀವು appreciate ಮಾಡಲು ಹೋಗಬೇಡಿ. 199 ಹಳ್ಳಿಗಳನ್ನು ನೀರಿನಲ್ಲಿ ಮುಳಗಿಸಿ ಅನಾಥರಾಗಿದ್ದೇವೆ. ನಮ್ಮ ಜನ ಇವತ್ತು ದುಡಿಯಲು ಗುಳೆ ಹೋಗುತ್ತಿದ್ದಾರೆ. ಅದಕ್ಕಾಗಿ ನೀವು appreciate ಮಾಡಲು ಹೋಗಬೇಡಿ. ಎಲ್ಲವನ್ನು ಕಳೆದುಕೊಂಡ ದೊಡ್ಡ ದುರಂತ ಅದು. ಈಗ ನೀವೆ ನಮಗೆ ನೀರೇ ಬರುತ್ತಿಲ್ಲ, ALBC, ARBC ಆಯಿತು ಎಲ್ಲ ನೀರನ್ನು ಅವರೆ ತೆಗೆದುಕೊಳ್ಳುತ್ತಿದ್ದಾರೆ ಎಂದು ಹೇಳುತ್ತಿದ್ದೀರಿ. ನಾವು ನೀರನ್ನು ಉಪಯೋಗಿಸಿಕೊಂಡಿರುವುದಿಲ್ಲ. ಇನ್ನು ನೀವೇ ಫಲಾನುಭವಿಗಳು ನಾವು ಸಂತ್ರಸ್ಥರಾಗಿದ್ದೇವೆ. ಮುಂದೆ ಮಾತನಾಡಿ ನಿಮಗೆ ನಾನು ಅಡ್ಡಿಪಡಿಸುವುದಿಲ್ಲ.

**ಶ್ರೀ ಬಸವರಾಜ ಪಾಟೀಲ್ ಇಟಗಿ**:- ಮಾನ್ಯ ಸಭಾಪತಿಗಳೆ, ನಾವು ಮತ್ತು ಅಧ್ಯಕ್ಷರಾಗಿದ್ದ ಸಾಹೇಬರು ನೀರಿಗಾಗಿ ಬಹಳ ಹೋರಾಟ ಮಾಡಿದ್ದೇವೆ. 199 ಹಳ್ಳಿಗಳು ಮುಳಗಡೆಯಾಗಿರುವುದಕ್ಕೆ ಏನು ಮಾಡಬೇಡಿ ಎಂದು ನಾವು ಹೇಳಿರುವುದಿಲ್ಲ. ಇನ್ನು ಚೆನ್ನಾಗಿ ಪರಿಹಾರವನ್ನು ಕೊಡಿ ನಾವು ಬೇಡ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಎಂದು ಹೇಳುವುದಿಲ್ಲ. ಆದರೆ ಇಡೀ ಜಗತ್ತಿನಲ್ಲಿ No. 1 rehabilitation ಆಗಿದೆ. ನೀವು ಹಳ್ಳಿ ಕಳೆದುಕೊಂಡಿರುವುದಕ್ಕೆ ನಮಗೆ ನೀರು ಬಂದಿದೆ. ಭೂಮಿ ಕಳೆದುಕೊಂಡವರಿಗೆ ಪ್ರತಿ ಎಕರೆಗೆ ಲಕ್ಷ ರೂಪಾಯಿಗಳನ್ನು ಕೊಡಿ, ಎಷ್ಟು ಕೊಡಬೇಕು ಅನ್ನಿಸುತ್ತದೆ ಅಷ್ಟು ಕೊಡಿ, ಅದಕ್ಕೆ ನಾವು ಅಡ್ಡಿಪಡಿಸುವುದಿಲ್ಲ. ನೀವು 10 ಲಕ್ಷ ಬಿಟ್ಟು20 ಲಕ್ಷ ರೂಪಾಯಿಗಳನ್ನು ಕೊಟ್ಟರು ಭೂಮಿ ಕಳೆದುಕೊಂಡವನಿಗೆ ಆ ಭೂಮಿಯ ಮೇಲೆ ಇರುವ sentiment ಹೋಗುವುದಿಲ್ಲ. ಆ sentiment ತುಂಬಾ ಮುಖ್ಯವಾದ್ದುದು ಅದಕ್ಕಾಗಿ ಎಷ್ಟು ಬೇಕಾದರೂ ಪರಿಹಾರ ಕೊಡಿ ನಾವು ಅಡ್ಡಿಪಡಿಸುವುದಿಲ್ಲ. ಈಗ land acquisition ಮಾಡುವುದು ಇದೆಯಲ್ಲ, ಎಷ್ಟು ಮನೆಗಳು ಹೋಗುತ್ತವೆ ಅವುಗಳಿಗೆ ಪರಿಹಾರವನ್ನು ಕೊಡಿ ನಾವು ಬೇಡ ಎನ್ನುವುದಿಲ್ಲ.

ಈಗ ನಾನು ಸರ್ಕಾರಕ್ಕೆ ಒಂದು ವಿಷಯವನ್ನು ಕೇಳಬಯಸುತ್ತೇನೆ, ಈಗ ಒಂದು ಯೋಜನೆಯನ್ನು ತೆಗೆದುಕೊಂಡಾಗ irrigation potential create ಮಾಡಲು ಎಷ್ಟು ಹಣವನ್ನು ಇಡುತ್ತೀರಿ, land acquisition process ಮುಗಿದ ಮೇಲೆ ಭೂಮಿ ಒಡೆಯನಿಗೆ ಪರಿಹಾರ ಕೊಡಲು ಎಷ್ಟು ಹಣ ಇಡುತ್ತೀರಿ? ಹಿಂದೆ land acquisition ಮಾಡಿ 20 ರಿಂದ 30 ವರ್ಷಗಳಾಗಿವೆ, ಇನ್ನು ಪರಿಹಾರವನ್ನು ಕೊಟ್ಟಿರುವುದಿಲ್ಲ. ಅಲ್ಲಿ ನೀರು ಬರುತ್ತದೆ, ಬೆಳೆ ಬೆಳೆಯುತ್ತಿದ್ದಾರೆ. ಆದರೆ ಪರಿಹಾರ ಇನ್ನೂ ಕೊಟ್ಟಿರುವುದಿಲ್ಲ. ಯಾವುದೇ ಕಛೇರಿ ಹೋಗಿ ಕೇಳಿ irrigation ಅಂದರೆ ಬರಿ irrigation potential create ಮಾಡುವುದು ಅಷ್ಟೆ. Irrigation potential create ಮಾಡಿ ಬೇಡ ಎನ್ನುವುದಿಲ್ಲ. ಆದರೆ comparatively land acquisition ಮಾಡಿರುವುದಕ್ಕೆ ಹಣ ಕೊಡಬೇಕು. ಭೂಮಿ ಕಳೆದುಕೊಂಡ ಆ ರೈತ ಎಲ್ಲಿಗೆ ಹೋಗಬೇಕು. ಇಲ್ಲಿಯು ಕೂಡಾ ಸಾಯುವವನು ರೈತನೇ. ನನ್ನ ಹೊಲ ಮುಳಗಡೆಯಾಗಿದೆ, ಅದರ ಪರಿಹಾರದ ಹಣ ಬಂದ ತಕ್ಷಣ ಹಣ ಕೊಡುತ್ತೇನೆ ಎಂದು ಹೇಳಿ ಆ ರೈತ ಸಾಲ ತೆಗೆದುಕೊಂಡಿರುತ್ತಾನೆ. ಸಾಲ ಕೊಡುವವನು ೨% ಬಡ್ಡಿಗೆ ಕೊಟ್ಟಿರುತ್ತಾನೆ. 20 ವರ್ಷಗಳಾದರೂ ಪರಿಹಾರದ ಹಣ ಬರುವುದಿಲ್ಲ, 50,000 ರೂಪಾಯಿಗಳ ಸಾಲವನ್ನು ತೆಗೆದುಕೊಂಡಿರುತ್ತಾನೆ ಮುಂದೆ ಪರಿಹಾರದ ಹಣ ಬರುವಷ್ಟರಲ್ಲಿ ಅದು ಒಂದುವರೆ ಲಕ್ಷ ದಿಂದ ಎರಡು ಲಕ್ಷ ರೂಪಾಯಿಗಳಾಗಿರುತ್ತದೆ. ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು ಇಲ್ಲೇ ಇದ್ದಾರೆ. ನಾನು ಅವರಲ್ಲಿ ಒಂದು ಮನವಿಯನ್ನು ಮಾಡಿಕೊಳ್ಳುತ್ತೇನೆ. ಯಾವುದೇ ಸರ್ಕಾರಿ ಯೋಜನೆಗಳನ್ನು ತೆಗೆದುಕೊಂಡಾಗ ಅದು ನೀರಾವರಿ ಒಂದೇ ಅಲ್ಲ ಶಾಲೆಗಳ ಕಟ್ಟಡ ಹೀಗೆ ಸರ್ಕಾರಿ ಯೋಜನೆಗಳನ್ನು ಮಾಡುವ ಸಮಯದಲ್ಲಿ land acquisition process ಸ್ವಲ್ಪ ಕಡಿಮೆ ಮಾಡಿ. ಮೂರರಿಂದ ಐದು ವರ್ಷಗಳವರೆಗೆ ಭೂ ಸ್ವಾಧೀನ ಕೆಲಸ ನಡೆಯುತ್ತದೆ. ಸರಿಯಾಗಿ ಮುಟ್ಟಲಿಲ್ಲವೆಂದರೆ ಐದಾರು ವರ್ಷಗಳಾಗುತ್ತವೆ. ಉದಾಹರಣೆಗೆ ಇದಕ್ಕೆ ಒಂದು special committee ಮಾಡಿ ಆರು ತಿಂಗಳು ಇಲ್ಲಾ ಒಂದು ವರ್ಷದಲ್ಲಿ ಆ ಕೆಲಸ ಮುಗಿಯುವಂತೆ ಮಾಡಿ. ಮೊದಲು land acquisition ಮಾಡಿಕೊಂಡಾಗ per acre Rs.70,000 compensation ಇತ್ತು ಕೆಲವು ಜನರಿಗೆ ಪರಿಹಾರದ ಹಣ ಸಿಕ್ಕಿದೆ.

ಇವತ್ತು ಅದೇ ಬೆಲೆ 8 ಲಕ್ಷ ರೂಪಾಯಿಗಳಾಗಿದೆ. ಇದರಿಂದ ಸರ್ಕಾರಕ್ಕೆ ಹೊರೆಯಾಗುತ್ತದೆ. Rs.70,000 compensation ಕೊಡುವ ಜಾಗದಲ್ಲಿ 8 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಈ ರೀತಿ ಕೆಲಸಗಳು ನಡೆಯುತ್ತಿವೆ.

ಇನ್ನು ತುಂಗಭದ್ರಾ ಸಮೀಪ ನವಲಿ Balancing Reservoir ಬಗ್ಗೆ ಹೇಳಬೇಕೆದರೆ, ಈ ಯೋಜನೆ ತೆಗೆದುಕೊಂಡು ಎಷ್ಟು ವರ್ಷಗಳಾದವು? ನಮ್ಮ ಸರ್ಕಾರ ನಿಮ್ಮ ಸರ್ಕಾರ ಎಂದು ಹೇಳುತ್ತಿಲ್ಲ. ಯಾವುದೇ ಸರ್ಕಾರವಿರಲ್ಲಿ.. ತುಂಗಭದ್ರಾ ಜಲಾಶಯದಲ್ಲಿ 33 ಟಿಎಂಸಿ ಹೂಳು ತುಂಬಿಕೊಂಡಿದೆ. ಎರಡುವರೆಯಿಂದ ಮೂರು ಲಕ್ಷ ಎಕರೆ ಹೊಲಗಳಿಗೆ ನೀರು ಬರುತ್ತಿಲ್ಲ. ಉದಾಹರಣೆಗೆ ರಾಯಚೂರ ತಾಲ್ಲೂಕುಗಳು, ಮಾನ್ವಿ ತಾಲ್ಲೂಕುಗಳು, ಸಿಂಧನೂರು ತಾಲ್ಲೂಕುಗಳಲ್ಲಿ ಅರ್ಧ ತಾಲ್ಲೂಕುಗಳಿಗೆ ನೀರು ಬರುತ್ತಿಲ್ಲ. ಗಂಗಾವತಿ, ಕೊಪ್ಪಳ ಮತ್ತು ಸಿಂಧನೂರು ಅರ್ಧ ಭಾಗಕ್ಕೆ ಮಾತ್ರ ನೀರು ಬರುತ್ತದೆ. ಇವು ಕನಕಗಿರಿ ಕ್ಷೇತ್ರಕ್ಕೆ ಬರುತ್ತದೆ. ಇಲ್ಲಿ Balancing Reservoir ನಿರ್ಮಿಸುತ್ತೇವೆ ಎಂದು ಹೇಳುತ್ತಲೇ ಇದ್ದಾರೆ. ಆದರೆ ಆ ಕೆಲಸ ಮಾಡುವುದಿಲ್ಲ. ಅಲ್ಲಿ ಎಲ್ಲಾ infrastructure ಆಗಿದೆ. ಈಗ Balancing Reservoir ಮಾತ್ರ ಮಾಡಬೇಕು. ಅಲ್ಲಿ 6,000 acres ಸರ್ಕಾರಿ ಭೂಮಿಯೇ ಇದೆ. ಜಾಸ್ತಿ ಪರಿಹಾರವನ್ನು ಕೊಡುವ ಅವಶ್ಯಕತೆ ಇಲ್ಲ. ಈ ಎಲ್ಲ ಸವಲತ್ತುಗಳನ್ನು ಉಪಯೋಗಿಸಿಕೊಂಡು ಈ ಯೋಜನೆಯನ್ನು ಮಾಡುತ್ತಿಲ್ಲ. ಮಹದಾಯಿ ಬಗ್ಗೆ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಮಾತನಾಡಿದ್ದಾರೆ. ಆ ತಿಂಗಳ ಹಿಂದೆ ಮಾನ್ಯ ರಮೇಶ್ ಜಾರಕಿಹೊಳಿಯವರು ನೀರಾವರಿ ಸಚಿರಾಗಿದ್ದರು, ಆಗ ಅವರಿಗೆ ಒಂದು ಪತ್ರವನ್ನು ಬರೆದಿದ್ದೇನೆ. ಮತ್ತು KBJNL (Krishna Bhagya Jala Nigam Limited) MD ಪ್ರಭಾಕರ ಚಿನ್ನಿ ಎಂದು ಇದ್ದರು ಅವರಿಗೂ ಒಂದು ಪತ್ರ ಬರೆದಿದ್ದೇನೆ. ಏನು ಪತ್ರ ಬರೆದಿದ್ದೇ ಎಂದರೆ, ನಮ್ಮಲ್ಲಿ NRBC (Narayanpur Right Bank Canal) re-modernization ಕೆಲಸ ನಡೆದಿತ್ತು. ಮೊದಲು ನಮ್ಮ ಸರ್ಕಾರವಿದ್ದಾಗ ಅದರ estimate ಮಾಡಿದ್ದು ಬರಿ 325 ಕೋಟಿ ರೂಪಾಯಿಗಳು, ಅದು ಆದಮೇಲೆ ಮತ್ತೆ revise ಮಾಡಿ 520 ಕೋಟಿ ರೂಪಾಯಿಗಳಿಗೆ ಮಾಡಿದರು. ನಂತರ ಟೆಂಡರ್ ಹಾಕುವ ಸಮಯದಲ್ಲಿ ಆ ಅಂದಾಜು 825 ಕೋಟಿ ರೂಪಾಯಿಗಳಾಗಿ ಮಾಡಿದರು. ನಂತರ finally 11 percent above ಆಗಿ Rs. 956 crores ಮಾಡಲಾಗಿದೆ. ಮಾನ್ಯ ಮಂತ್ರಿಗಳು ಅಲ್ಲಿ ಬಂದು ನೋಡಬೇಕು, 500 ಕೋಟಿ ಮರಮ್ ಇದೆ. ಆದರೆ ಒಂದು ಬುಟ್ಟಿ ಮರಮ್‌ನ್ನು ಹಾಕಿರುವುದಿಲ್ಲ. ಹೂಳು ತೆಗೆದು ಎಲ್ಲಿ ಹಾಕಬೇಕು ಎಂದು ಕೇಳುತ್ತಾರೆ. ಹೂಳು ಹಾಕಲು ಒಂದು ಲಕ್ಷ ಕ್ಯೂಬಿಕ್ ಮೀಟರ್‌ಗೆ ಇಷ್ಟು ಜಾಗ ಬೇಕು ಎಂದು ಅವರು ಪಟ್ಟಿ ಕೊಡುತ್ತಾರೆ. ಅದರಲ್ಲಿ 500ಕೋಟಿ ರೂಪಾಯಿಗಳ ಮರಮ್ ಎಂದರೆ 65 lakh cubic meter ಆಗುತ್ತದೆ. PAC (Public Accounts Committee) ಸಮಿತಿಯಲ್ಲಿ ನಾವು ಎಲ್ಲಾ ಇದರ ಬಗ್ಗೆ ಮಾತನಾಡಿದ್ದೇವೆ. ಆದರೆ ಏನು ಮಾಡಲು ಆಗಲಿಲ್ಲ. ಅಲ್ಲಿ ಇರುವವರು ಮಂತ್ರಿಗಳಲ್ಲ, ಅದೇ ಎಂಜಿನೀಯರ್ ಇರುತ್ತಾರೆ. Tender documents ನ್ನು ಅಧಿಕಾರಿಗಳು ಯಾರು ಮಾಡುವುದಿಲ್ಲ. Estimate ಗಳನ್ನು ಯಾರು ಅಧಿಕಾರಿಗಳು ತಯಾರು ಮಾಡುವುದಿಲ್ಲ. ದೊಡ್ಡ-

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದೊಡ್ಡ contractor ಇರುತ್ತಾರೆ ಅವರೇ ತಮ್ಮ ಮನೆಯಲ್ಲಿಯೇ ಕುಳಿತು ಪಿಏ ಇಟ್ಟು, ಅಂದಾಜು ತಯಾರು ಮಾಡುತ್ತಾರೆ. 120 ಅಥವಾ 150 ರೂಪಾಯಿಗಳ ಮರಮ್‌ಗೆ 625 ರೂಪಾಯಿಗಳು ತೋರಿಸುತ್ತಾರೆ. Red soil ನಲ್ಲಿcanal run ಆಗಿದೆ ಅದಕ್ಕೆ 30 km lead ಕೊಡುತ್ತಾರೆ. ಯಾರು ಕೇಳುವವರು. ನಾವು ಪತ್ರ ಬರೆದಿದ್ದೇವು, ಸಮಿತಿ ರಚನೆ ಆಯಿತು ಅಲ್ಲಿಗೆ ಮುಗಿಯಿತು. ಹೀಗಾದರೆ Upper Krishna Project ಯಾವ ಮುಗಿಯುತ್ತದೆ? 500 ಕೋಟಿ 600 ಕೋಟಿ ರೂಪಾಯಿಗಳು ಯೋಜನೆಯಲ್ಲಿ ಪೋಲಾದರೆ ಈ ಯೋಜನೆಗಳು ಯಾವಾಗ ಮುಗಿಯುವುದು. ಇನ್ನು 50 ವರ್ಷಗಳಾದರೂ ಮುಗಿಯುವುದಿಲ್ಲ, ಏಕೆಂದರೆ ಎಲ್ಲಾ re-modernization ಆಗುತ್ತದೆ. 200 ಕೋಟಿ ರೂಪಾಯಿಗಳಿಗೆ ಮುಗಿಯುವ ಯೋಜನೆ ಸಾವಿರ ಕೋಟಿ ರೂಪಾಯಿಗಳಿಗೆ ಬರುತ್ತದೆ. ನಮ್ಮ ಸರ್ಕಾರ ನಿಮ್ಮ ಸರ್ಕಾರ ಎಂದು ಅಲ್ಲ, irrespective of all Governments, ಇವೆಲ್ಲವು ನಮ್ಮ ರಾಜ್ಯಕ್ಕೆ, ನಮ್ಮ ದೇಶಕ್ಕೆ ಹಿಂಸೆ ಆಗುವಂತಹ ಕೆಲಸಗಳು. ಇದನ್ನು ಎಲ್ಲಿಯಾದರೂ ಒಂದು ಕಡೆ ನಿಲ್ಲಿಸಬೇಕಾಗುತ್ತದೆ. ಏನಾದರೂ ಟೆಂಡರ್ ಹಾಕಿದರೆ reject ಮಾಡಿ ಒಗೆಯುತ್ತಾರೆ.

(ಮುಂದು)

(1305)23-12-2021(04-40)bsd-ak

**ಶ್ರೀ ಬಸವರಾಜ ಪಾಟೀಲ್ ಇಟಗಿ (ಮುಂದು)**

Minimum qualification ಇರದೇ ಮನಸ್ಸಿಗೆ ಬಂದ qualification ಹಾಕುತ್ತಾನೆ, ರೂ.೪ ಕೋಟಿಗಳ work ಗೆ ರೂ.೯ ಕೋಟಿಗಳ work done certificate ತೆಗೆದುಕೊಂಡು ಬಾ ಎನ್ನುತ್ತಾರೆ. ಇದನ್ನು ಯಾರೂ ಕೇಳುವುದಿಲ್ಲವೇ? Higher level Secretary ಗಳು ಏನು ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಾಗುತ್ತಿಲ್ಲ. ಏನಾದರೂ ಒಂದು minimum qualification ಬೇಕಲ್ಲವೇ? ಒಂದು tender ಹಾಕಬೇಕೆಂದರೆ norms create ಮಾಡಿರುತ್ತಾರಲ್ಲವೇ? ಈ ರೀತಿ Upper Krishna Project start ಆಗಿ ಇನ್ನು ೫೦ ವರ್ಷ ಕಳೆದರೂ ಮುಕ್ತಾಯ ಮಾಡಲು ಆಗುವುದಿಲ್ಲ. ಏಕೆಂದರೆ ಈಗ re-modernization start ಆಗಿಬಿಟ್ಟಿದೆ. Lift irrigation project ಗಳು ಮತ್ತು ಮೊದಲು ಮಾಡಿದ್ದಕ್ಕೆಲ್ಲಾ re-modernization ಮಾಡುತ್ತಾ ಹೋಗಬೇಕು. ಇಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಇನ್ನು ಮಾನ್ಯ Minor Irrigation Minister ರವರು ಸದನದಲ್ಲಿ ಇದ್ದು, ಅವರಿಗೆ ನಾನು ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಏಕೆಂದರೆ ನನ್ನ ಕ್ಷೇತ್ರವಾದ ಕೊಪ್ಪಳಕ್ಕೆ ಕುಡಿಯುವ ನೀರಿನ ಸಲುವಾಗಿ ಬಹಳಷ್ಟು help ಮಾಡಿದ್ದಾರೆ. ಮಾನ್ಯ ಸಚಿವರು inspection ಗೆ ಬಂದಾಗ ನಾನೂ ಅಲ್ಲಿದ್ದೆನು. ಅವರು ನಮ್ಮನ್ನು ಏನು ಅವಶ್ಯಕತೆ ಇದೆಯೋ ತಿಳಿಸಿ, ಅದೆಲ್ಲವನ್ನು ಮಾಡಿಕೊಡುತ್ತೇನೆ ಎಂದು ಹೇಳಿದರು. ನಾನು ಅನೇಕ ಮಂತ್ರಿಗಳನ್ನು ನೋಡಿದ್ದೇನೆ. ಆದರೆ ಯಾರೂ ತಲೆ ಕೆಡಿಸಿಕೊಳ್ಳದೇ ಏನಾದರೂ ಮನವಿ ಕೊಟ್ಟರೆ ಅದರ ಮೇಲೆ 'P.S' ಎಂದು ಬರೆದು ಬಿಡುತ್ತಾರೆ. ಅದರ ಕೆಳಗೆ ಸಹಿಯನ್ನೂ ಹಾಕುವುದಿಲ್ಲ. ಹಾಗೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೊಟ್ಟುಬಿಡುತ್ತಾರೆ. ಮಾನ್ಯ ಅಮರೇಗೌಡ ಬಯ್ಯಾಪುರವರ ಕ್ಷೇತ್ರಕ್ಕೆ ಮಾನ್ಯ ಸಚಿವರು ಕೋವಿಡ್-೧೦ರ ಸಮಯದಲ್ಲಿ ಸಮಾರಂಭವೊಂದಕ್ಕೆ ಕ್ಷೇತ್ರಕ್ಕೆ. ಆ ಸಂದರ್ಭದಲ್ಲಿ ಮಾನ್ಯ ಗೋವಿಂದ ಕಾರಜೋಳ ರವರು ಇದ್ದರು. ಮಾನ್ಯ ಸಚಿವರೇ ಈ ಭಾಗಕ್ಕೆ ಏನೇನು ಬೇಕಾಗಿದೆ ಎಂದು ಕರೆದು ಕೇಳಿದರು. ಏಕೆಂದರೆ ಅಲ್ಲಿ potential ಆಗಿ red soil ಇದೆ. ಅಲ್ಲಿ ನೀರು ಕೊಟ್ಟರೆ ಬಂಗಾರ ಕೊಟ್ಟ ಹಾಗೆ. ಅದು horticulture based ಜಾಗವಾಗಿದೆ. ಕೊಪ್ಪಳದಿಂದ ಬಾಗಲಕೋಟೆ ಬಿಜಾಪುರ ಎಲ್ಲವೂ ಬರುತ್ತದೆ. ಪಪ್ಪಾಯಿ, pomegranate ಗಳೆಲ್ಲವನ್ನು ಬೆಳೆಯುತ್ತಾರೆ. ಸಾಕಷ್ಟು flowers ಬೆಳೆಯುತ್ತಾರೆ, ಅಲ್ಲಿ floriculture ಇದ್ದೆ. ಮಾನ್ಯ ಸಭಾಪತಿಯವರ ಮನೆಗೆ ಹೋಗಿ ನಾನು ನೋಡಿದ್ದು, ಅವರ ಮನೆಯಲ್ಲಿ ಬಹಳ ಎಮ್ಮೆಗಳಿದ್ದು, ಆದರೆ ಸ್ವತಃ ನೋಡಿಕೊಳ್ಳುತ್ತಾರೆ. ಆ ರೀತಿ ಮನುಷ್ಯನಿಗೆ interest ಇರಬೇಕು. ಕೆಲಸ ಆಗುತ್ತದ್ದೋ, ಬಿಡುತ್ತದೋ, ರೊಕ್ಕ ಇದೆಯೋ ಇಲ್ಲವೋ ಅದು ಬೇರೆ ವಿಷಯ.  Minister ಗಳು ಅವರ ಇಲಾಖೆಯಲ್ಲಿ ಏನೇನು problem ಗಳಿವೆ ಎಂಬುದನ್ನು ನೋಡಿ ಅರ್ಥಮಾಡಿಕೊಳ್ಳಬೇಕಲ್ಲವೇ? ಈಗ comparison ಮಾಡಿದಾಗ South Karnataka ದಲ್ಲಿ ಎಷ್ಟು ಶಾಲೆಗಳಿವೆ ಮತ್ತು North Karnataka ದಲ್ಲಿ ಎಷ್ಟು ಶಾಲೆಗಳಿವೆ?  South Karnataka ದಲ್ಲಿ ಎಷ್ಟು State Highway ಗಳು ಇವೆ ಮತ್ತು North Karnataka ದಲ್ಲಿ ಎಷ್ಟು State Highway ಗಳು ಇವೆ?  South Karnataka ದಲ್ಲಿ ಎಷ್ಟು National Highway ಗಳು ಇವೆ ಮತ್ತು ನಮ್ಮಲ್ಲಿ ಎಷ್ಟು National Highway ಗಳು ಇವೆ?  Veterinary ಆಸ್ಪತ್ರೆಗಳು ಅಲ್ಲಿ ಮತ್ತು ಇಲ್ಲಿ ಎಷ್ಟೆಷ್ಟು ಇವೆ? ಅದೇರೀತಿ staff ಗಳು ಎಷ್ಟೆಷ್ಟು ಇದ್ದಾರೆ? ಎಷ್ಟು teacher ಗಳು shortage ಇದ್ದಾರೆ ಎಂಬುದಲ್ಲವನ್ನೂ ಅರ್ಥಮಾಡಿಕೊಳ್ಳಬೇಕಲ್ಲವೇ? ಇದರಿಂದಲೇ ಉತ್ತರ ಕರ್ನಾಟಕದಲ್ಲಿ ಸಮಸ್ಯೆ ಇರುವುದು. ನಮ್ಮಲ್ಲಿನ ದೇವದುರ್ಗ ಆಸ್ಪತ್ರೆಯಲ್ಲಿ Veterinary Assistant ಒಬ್ಬನು Assistant Director of Animal Husbandry and Veterinary Services ಆಗಿ ಕೆಲಸ ಮಾಡುತ್ತಾನೆ. ಈ post ಅನ್ನು ಆತ handle ಮಾಡುತ್ತಾನೆ. ಆದರೆ ಆತ peon ಆಗಿದ್ದಾನೆ. ಇಂತಹ ಪರಿಸ್ಥಿತಿ ಇರುವಾಗ ಹೇಗೆ ಉದ್ದಾರ ಆಗಲು ಸಾಧ್ಯ?  Infrastructure, ನೀರಾವರಿ ಎಲ್ಲವೂ ಆಗಿದೆ. ಆದರೆ basically ಏಕೆ develop ಆಗುವುದಿಲ್ಲ ಎಂದರೆ ನಮ್ಮಲ್ಲಿ literacy percentage ಕಡಿಮೆ ಇದೆ. ಸಿಕ್ಕಾಪಟ್ಟೆ literacy percentage ಕಡಿಮೆ ಇದೆ. ಇವತ್ತು SC/ST women ಸುಮಾರು ೧೩-೧೪% ಮಾತ್ರ ಇದೆ. ಆದರೆ ಆ ಭಾಗದಲ್ಲಿ literacy ೭೦-೮೦% ವರೆಗೂ ಇದೆ. ಕೇವಲ ೨-೩೪ graduate ಗಳಿರುತ್ತಾರೆ. ಈ ಪರಿಸ್ಥಿತಿ ಇರುವಾಗ develop ಹೇಗೆ ಆಗುತ್ತದೆ? ಇವತ್ತು to reduce regional imbalance K.K.R.D.B (Kalyana Karnataka Region Development Board) ಯನ್ನು ಕೊಟ್ಟಿದ್ದಾರೆ. ಮಾನ್ಯ ಶಶಿಲ್ ನಮೋಶಿರವರು ಮಾತನಾಡುವಾಗ ಸ್ವಲ್ಪ ತಪ್ಪು ಹೇಳಿದ್ದಾರೆ ಎಂದನಿಸುತ್ತದೆ. ಅದನ್ನು correct ಮಾಡಬಹುದು. ಮಾನ್ಯ ಶಶಿಲ್ ನಮೋಶಿಯವರು ನಿದ್ದೆ ಹೊಡೆಯುತ್ತಿದ್ದಾರೆ. H.K.R.D.B (Hyderabad Karnataka Region Development Board) ಯು K.K.R.D.B ಬರುವುದಕ್ಕಿಂತ ಮೊದಲೇ start ಆಗಿದೆ.

**ಸಭಾಪತಿಯವರು:-** ಮಾನ್ಯ ಶಶಿಲ್ ಜಿ ನಮೋಶಿಯವರನ್ನು ನಿದ್ದೆಯಿಂದ ಎಬ್ಬಿಸಿ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಶಿಶಿಲ್ ಜಿ ನಮೋಶಿಃ-** ಮಾನ್ಯ ಸಭಾಪತಿಯವರೇ, ಹುಷಾರಿಲ್ಲದ ಕಾರಣ ಮಾತ್ರೆ ತೆಗೆದುಕೊಂಡಿದ್ದೇನೆ. ಆದರೂ ಮಾತನಾಡಬೇಕೆಂದು ಸದನಕ್ಕೆ ಬಂದಿದ್ದೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸದಸ್ಯರನ್ನು ಎಚ್ಚರಿಸಿದ ಉದ್ದೇಶವೇನೆಂದರೆ, ಅವರು ಮಾತನಾಡಿದಂತೆ Article 371-J ಬಂದ ಮೇಲೆ K.K.R.D.B form ಮಾಡಿದರು ಎಂದು ಹೇಳಿದ್ದು, ಅದಕ್ಕಿಂತ ಮೊದಲು H.K.R.D.B ಇತ್ತು. ಅದು ತಮಗೂ ಗೊತ್ತು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಅವರನ್ನು ಎಚ್ಚರಿಸಿದಾಗ ಒಂದು incident ಜ್ಞಾಪಕಕ್ಕೆ ಬಂತು. ಮಾನ್ಯ ಹೆಚ್.ಸಿ. ಶ್ರೀಕಂಠಯ್ಯನವರು ಕಂದಾಯ ಸಚಿವರಾಗಿದ್ದ ಸಂದರ್ಭದಲ್ಲಿ ಸದನದಲ್ಲಿ ನಿದ್ರೆ ಹೋಗಿದ್ದರು. ಬೇರೆಯವರು ಪ್ರಶ್ನೆ ಕೇಳುತ್ತಿದ್ದು ಉತ್ತರವನ್ನು ನೀಡುತ್ತಿದ್ದರು. ಒಂದು ಸಂದರ್ಭದಲ್ಲಿ ಪಕ್ಕದಲ್ಲಿದ್ದವರು ಮಾನ್ಯ ಶ್ರೀಕಂಠಯ್ಯನವರನ್ನು ಎಚ್ಚರಿಸಿದಾಗ, ಅವರು ಎದ್ದ ತಕ್ಷಣ ಅವರದ್ದೇ ಪ್ರಶ್ನೆ ಬಂದಿದೆ ಎಂದು ಈ ಪ್ರಶ್ನೆಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ ಎಂದು ಹೇಳಿಬಿಟ್ಟರು. ಆ ರೀತಿ ಮಾನ್ಯ ಶಶಿಲ್ ನಮೋಶಿ ರವರನ್ನು ಎಚ್ಚರಿಸಿದ್ದು ಆಯಿತು.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಮಾನ್ಯ ನಮೋಶಿ ರವರು Article 371-J ಬರುವುದಕ್ಕಿಂತ ಮೊದಲೇ H.K.R.D.B ಇತ್ತು ಎಂದು ಹೇಳಿದರು. ಮಾನ್ಯ ಸಭಾಪತಿಯವರೇ, H.K.R.D.B ಗೆ ಹಣ ಕೊಡುತ್ತಾರೆ. For example, ರೂ.೧,೫೦೦ ಕೋಟಿ ಎಂದು ಹೇಳಿದ್ದಾರೆ. ಅದಕ್ಕೆ estimate ಆಗಿ administrative approval ಸಿಗುವುದಕ್ಕೆ ಎರಡೂ ವರ್ಷಗಳು ಬೇಕು. ಅಲ್ಲಿ ರೂ.೨೦೦-೩೦೦ ಕೋಟಿ ಖರ್ಚಾಗುವುದಿಲ್ಲ. ಅಲ್ಲಿ K.K.R.D.B ಗೆ regular Secretary ರವರನ್ನು ಇಟ್ಟಿಲ್ಲ. ಅಲ್ಲಿನ R.C (Regional Commissioner) ಗೆ in-charge ಕೊಟ್ಟುಬಿಟ್ಟಿದ್ದಾರೆ. ಜಾಸ್ತಿ ರೊಕ್ಕ ಖರ್ಚು ಮಾಡಬಾರದು ಎಂದು ಅವರಿಗೆ ಹೇಳಿಬಿಟ್ಟಿರುತ್ತಾರೆ. ಇದರಲ್ಲಿ ಎರಡು-ಮೂರು ವರ್ಷ ತಿರುಗಾಡಿದರೆ ಕೆಲಸ ಹೇಗೆ ಆಗುತ್ತದೆ? ಕೊಡುವ ದುಡ್ಡು ಒಂದು ಅಥವಾ ಒಂದೂವರೆ ವರ್ಷದಲ್ಲಿ ಖರ್ಚಾದರೆ ಮಾತ್ರ ಲಾಭವಾಗುತ್ತದೆ. ಸುಮ್ಮನೆ ಮುಂದಕ್ಕೆ ಎಳೆದುಕೊಂಡು ಹೋದರೆ ಹೇಗೆ? ನಾಲ್ಕಾರು ವರ್ಷಗಳ ಕಾಮಗಾರಿಗೆ ಇನ್ನು estimate ಗಳು ಆಗಿಲ್ಲ. ಇಂತಹವುಗಳ ಬಗ್ಗೆ ಸರ್ಕಾರ ಗಂಭೀರವಾಗಿ ಗಮನಹರಿಸಬೇಕಾಗಿದೆ.

ಇನ್ನು ನಾನು ಧಾರವಾಡದಲ್ಲಿ ಓದಿದ್ದು, Lamington School ನಲ್ಲಿದ್ದೆನು. ಧಾರವಾಡದಲ್ಲಿ ಓದುತ್ತಿರುವಾಗ U.P.S (University Public School) ನಲ್ಲಿ ಇದ್ದ ಸಂದರ್ಭದಲ್ಲಿ ಪಕ್ಕದಲ್ಲಿ CCK Ground ಎಂದು ಇತ್ತು. ಅದು ಅಷ್ಟು ದೊಡ್ಡ ground ಆಗಿದ್ದು, ಆ public school ಒಳಗೆ ದೊಡ್ಡ ground ಇತ್ತು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಲ್ಲದೇ ಅದು ಹಾಕಿ ground ಆಗಿತ್ತು. ನಮ್ಮ ಕಲ್ಯಾಣ ಕರ್ನಾಟಕದಲ್ಲಿ ಅಂತಹ ದೊಡ್ಡ ಮೈದಾನವನ್ನು ತೋರಿಸಲಿ. ಯಾವುದೇ ಒಂದು ಮೈದಾನವನ್ನು ತೋರಿಸಲಿ. ಯಾರಿಗೂ interest ಇಲ್ಲ. ಒಬ್ಬರೂ ಕೋಕೋ player ಆಗುವಂತಿಲ್ಲ. ಒಬ್ಬರು cricketer ಆಗುವಂತಿಲ್ಲ. ಒಬ್ಬನು badminton ನಲ್ಲಿ state level ಗೆ ಬರುವುದಿಲ್ಲ. ಕಬ್ಬಡ್ಡಿಯನ್ನು ಆಡುತ್ತಾರೆ. Sports ನಲ್ಲಿ ಯಾವ ಗಂಧವೂ ಇಲ್ಲ. ಈಗ sports ಏಕೆ ಬೇಕು ಎಂದರೆ, ಈಗಿನ ಕಾಲದಲ್ಲಿ ತೆಗೆದುಕೊಳ್ಳುವ nutrition ನಲ್ಲಿ ಬಹಳಷ್ಟು diluted ಇದೆ. For example, ನಮ್ಮಲ್ಲಿ ಅಕ್ಕಿ ೧,೨೦೦ ರಿಂದ ರೂ.೧,೪೦೦ ರೂಪಾಯಿಗಳಿಗೆ 75 k.g. ಅಕ್ಕಿಗೆ ಬೆಲೆ ಸಿಗುತ್ತಿತ್ತು. ಇವತ್ತು ರೂ.೧,೧೦೦ ಗಳಿಗೆ ಬಂದಿದೆ. ಏಕೆಂದರೆ ಮೊದಲು export ಆಗುತ್ತಿದ್ದು, ಆ export ಆಗುವ time ನಲ್ಲಿ ಆ country ಯವರು test ಮಾಡಿ, ಊಟ ಮಾಡಲು ಯೋಗ್ಯ ಇಲ್ಲ ಎಂದು ಸೋನಾಮಸ್ೂರಿ ಅಕ್ಕಿಯನ್ನು ವಾಪಸ್ಸು ಕಳುಹಿಸಿದರು. ಅದಕ್ಕಾಗಿ rate down ಆಯಿತು. ಈಗ ಅಲ್ಲಿಯೂ ಊಟ ಸರಿಯಿಲ್ಲ. ಆದ್ದರಿಂದ ಈ sports ಅನ್ನಾದರೂ ಹುಡುಗರು ಆಡಿಕೊಂಡು ತಿರುಗಾಡಲು ಕೈ-ಕಾಲು ಗಟ್ಟಿಯಾಗಿರುತ್ತವೆ ಮತ್ತು ೫೦-೬೦ ವರ್ಷ ಬದುಕುತ್ತಾರೆ ಎಂದರೆ....... ಮಾನ್ಯ ಸಭಾಪತಿಯವರೇ, ನಿಮ್ಮ ವಯಸ್ಸಿನಷ್ಟು ಬದುಕುವುದಕ್ಕೆ ಆಗುವುದಿಲ್ಲ ಮತ್ತು ನಿಮ್ಮಷ್ಟು ಸಲ M.L.C. ಸಹ ಆಗುವುದಕ್ಕೆ ಆಗುವುದಿಲ್ಲ. ನಮ್ಮದೆಲ್ಲಾ ಬರೀ hybrid ಆಗಿದೆ. ನಮ್ಮ party ಯಲ್ಲಿ ಇದ್ದರೆ ನಾಲ್ಕು ಸಲ ಆದಮೇಲೆ ಕಿತ್ತುಹಾಕಿಬಿಡುತ್ತಿದ್ದರು, ಪಾಪ ನಮ್ಮ ಸಾಹೇಬರನ್ನು ಕಿತ್ತಿದ್ದಾರೆ ನೋಡಿ.

**ಶ್ರೀ ನಸೀರ್ ಅಹಮದ್:-** ಮಾನ್ಯ ಸಭಾಪತಿಯವರೇ, ತಮಗೆ ವಯಸ್ಸು ಎಷ್ಟಾಗಿದೆ ಎಂದು ತಿಳಿಸುವುದಕ್ಕೆ ಹೋಗಬೇಡಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರಿಗೆ ೬೪ ಕ್ರೀಡೆಗಳು ಗೊತ್ತು.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಈ sports infrastructure ಬಗ್ಗೆ ಕೂಡ ಹೆಚ್ಚಿನ ಗಮನ ಕೊಡಬೇಕು. K.K.R.D.B ಗೆ ಹಣ ಕೊಡುತ್ತಾರೆ. For example, ಈಗ ಶಿವಮೊಗ್ಗ Airport ಇದೆ, ಗುಲ್ಬರ್ಗ Airport ಇದೆ. ಶಿವಮೊಗ್ಗ Airport ಗೆ ಸರ್ಕಾರ ದುಡ್ಡು ಕೊಡುತ್ತದೆ. ಆದರೆ ಗುಲ್ಬರ್ಗ Airport ಗೆ H.K.R.D.B ಹಣ ತೆಗೆದುಕೊಳ್ಳಿ ಎನ್ನುತ್ತಾರೆ. ಬೀದರ್‌ನಲ್ಲಿ bypass ರಸ್ತೆಯನ್ನು H.K.R.D.B ಹಣದಲ್ಲಿ ಮಾಡಲಾಗಿದೆ. ಹೀಗಾದರೆ H.K.R.D.B ಗೆ ಕೊಡುವುದು ಏನು? ಏಕೆ ಕೊಡುತ್ತಾರೆ? ಅದನ್ನು ಬಿಟ್ಟು ಬೇರೆ ದುಡ್ಡು ಇಲ್ಲ. ಅದಕ್ಕೆ ಹಣ ಕೊಡದೇ ನಮ್ಮನ್ನು ಸುಮ್ಮನೆ ಬಿಟ್ಟುಬಿಡಬೇಕು. ಅದಕ್ಕೆ divert ಮಾಡುತ್ತಾರೆ. ದೊಡ್ಡ project ಬಂದ ಕೂಡಲೇ H.K.R.D.B ಯಿಂದ ತೆಗೆದುಕೊಳ್ಳಿ ಎಂದುಬಿಡುತ್ತಾರೆ.

(ಮುಂದು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(1306)/23.12.2021/4.50/ಹೆಚ್‌ವಿ:ಎಕೆ

**ಶ್ರೀ ಬಸವರಾಜ ಪಾಟೀಲ್ ಇಟಗಿ(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ರಾಯಚೂರು ವಿಶ್ವವಿದ್ಯಾಲಯ ಸ್ಥಾಪನೆಯಾಗಿ ಸುಮಾರು ಮೂರು ವರ್ಷಗಳಾಗಿವೆ. ಅಲ್ಲಿಗೆ ಒಬ್ಬ ಶಿಕ್ಷಕನಿಲ್ಲ, ಕ್ಲರ್ಕ್ ಇಲ್ಲ ಮತ್ತು ಕಸ ಗುಡಿಸುವವರು ಸಹ ಇಲ್ಲ. ಪಾಪ ಆ ವಿಶ್ವವಿದ್ಯಾಲಯದ ಉಪ ಕುಲಪತಿ ಎಲ್ಲ ಎಂ.ಎಲ್.ಎ.ಗಳ ಮನೆ ಮುಂದೆ ಹೋಗಿ ಅವರಿಗೆ ಕೈ ಮುಗಿದು, 'ನಿಮ್ಮ ಅನುದಾನದಲ್ಲಿ ಎಷ್ಟು ಸಾಧ್ಯವೋ ಅಷ್ಟು ಹಣವನ್ನು ಕೊಡಿ, ಕಸಗುಡಿಸುವವರಿಗೆ ಸಂಬಳ ಕೊಡಬೇಕು' ಎಂದು ಕೇಳಿಕೊಳ್ಳುತ್ತಿದ್ದಾರೆ. ಈ ಎಲ್ಲ ಮೂಲಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ಸರ್ಕಾರದಿಂದ ಸಾಧ್ಯವಾಗದಿದ್ದರೆ ಅಥವಾ ಸರ್ಕಾರದ ಬಳಿ ಹಣ ಇಲ್ಲದಿದ್ದರೆ ವಿಶ್ವವಿದ್ಯಾಲಯಗಳನ್ನು ಏತಕ್ಕೋಸ್ಕರ ಸ್ಥಾಪನೆ ಮಾಡಿದ್ದಾರೆನ್ನುವುದು ನನ್ನ ಪ್ರಶ್ನೆಯಾಗಿದೆ. ಮೊನ್ನೆ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ವಿಶ್ವವಿದ್ಯಾಲಯ ವಿಧೇಯಕದ ಬಗ್ಗೆ ಮಾತನಾಡುತ್ತಿದ್ದ ಸಂದರ್ಭದಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರು 'ಈ ಕಾಲೇಜನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ, ಐ.ಐ.ಟಿ. ಗುಣಮಟ್ಟಕ್ಕೆ ಏರಿಸಲಾಗುವುದು' ಎಂದು ಹೇಳಿದರು. ಈ ರೀತಿ ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡುವುದಕ್ಕೂ ಮೊದಲು ಶಾಲಾ-ಕಾಲೇಜುಗಳಿಗೆ ಶಿಕ್ಷಕರ ನೇಮಕಾತಿ ಮಾಡಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಶಿಕ್ಷಕರ ಬಗ್ಗೆ ನಾನು ಬಹಳ ಮಾತನಾಡುವುದಕ್ಕೆ ಹೋಗುವುದಿಲ್ಲ. ಹುಲಿ ಯಾವ ರೀತಿಯಲ್ಲಿ ತನ್ನ ಬೇಟೆಯನ್ನು ಹರಿದು ತಿನ್ನುತ್ತದೆಯೋ ಅದೇ ರೀತಿಯಲ್ಲಿ ಆಡಳಿತ ಪಕ್ಷದಲ್ಲಿರುವ ಮತ್ತು ವಿರೋಧ ಪಕ್ಷದಲ್ಲಿರುವ ಶಿಕ್ಷಕರ ಕ್ಷೇತ್ರದ ಸದಸ್ಯರುಗಳು ಶಿಕ್ಷಕರ ಮತ್ತು ಶಿಕ್ಷಣದ ವಿಚಾರಗಳನ್ನು ಹರಿದುಕೊಂಡು ತಿನ್ನುತ್ತಾರೆ. ತಾವು ಸಹ ಅವರಿಗೆ ಸಹಮತವನ್ನು ತೋರಿಸುತ್ತೀರಿ. ನಾವು ಎಷ್ಟು ಕೇಳಿಕೊಂಡರೂ ತಾವು ನಮಗೆ ಮಾತನಾಡಲು ಅವಕಾಶವನ್ನು ನೀಡುವುದೇ ಇಲ್ಲ.

ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಭತ್ತ ಖರೀದಿ ಕೇಂದ್ರವನ್ನು ಕೊಪ್ಪಳ ಜಿಲ್ಲೆಯಲ್ಲಿ ಪ್ರಾರಂಭ ಮಾಡಿದೆ. ಆದರೆ, ನಮ್ಮ ಜಿಲ್ಲೆಯಲ್ಲಿ ಇನ್ನೂ ಸ್ಥಾಪನೆ ಆಗಿಲ್ಲ. ಇದಕ್ಕೆ ಅನ್ವಯವಾಗುವ ನಿಬಂಧನೆಗಳನ್ನು ತೆಗೆದು ಹಾಕಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ರಾಯಚೂರಿನಲ್ಲಿ ಒಪೆಕ್ ಆಸ್ಪತ್ರೆ ಇದೆ. ಮಾನ್ಯ ಎಂ.ಎಸ್.ಪಾಟೀಲರು ಮಂತ್ರಿಗಳಾಗಿದ್ದಾಗ ಈ ಆಸ್ಪತ್ರೆಯನ್ನು ರಾಯಚೂರಿನಲ್ಲಿ ಸ್ಥಾಪಿಸಿದ್ದರು. ಹಿಂದೆ ಅದನ್ನು ಅಪೋಲೋ ಆಸ್ಪತ್ರೆಗೆ ನೀಡಲಾಗಿತ್ತು ಅವರು ಸುಮಾರು 12 ವರ್ಷಗಳ ಕಾಲ ಚೆನ್ನಾಗಿ ನಡೆಸಿದ್ದರು. ಅಪೋಲೋ ಆಸ್ಪತ್ರೆ ಜೊತೆಗೆ ಹಿಂದಿನ ಸರ್ಕಾರಗಳು ಬ್ರೇಕ್‌ಅಪ್ ಮಾಡಿಕೊಂಡವು. ಈಗ ಅದನ್ನು ಒಂದು ಮೆಡಿಕಲ್ ಕಾಲೇಜಿಗೆ attach ಮಾಡಿದ್ದಾರೆ. ಅಲ್ಲಿ ಯಾರೂ ವೈದ್ಯರು, ನರ್ಸ್‌ಗಳು ಇಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ ಭಾಗದಲ್ಲಿ ಒಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಇರಬೇಕೆನ್ನುವ ಉದ್ದೇಶದಿಂದ ಅದಕ್ಕೆ ಹೆಚ್ಚಿನ ಹಣವನ್ನು ಕೊಟ್ಟಿದ್ದರು. ಅಪೋಲೋ ಆಸ್ಪತ್ರೆಯಾಗಿದ್ದಾಗ, ಹೃದಯ ಶಸ್ತ್ರಚಿಕಿತ್ಸೆಗಳು ಅಲ್ಲೇ ನಡೆಯುತ್ತಿತ್ತು. ಕಿಡ್ನಿ ಕಸಿ ಮಾಡುವುದನ್ನು ಸಹ ಅಲ್ಲಿಯೇ ಮಾಡುತ್ತಿದ್ದರು. ಈಗ ಆ ಸೌಲಭ್ಯವಿಲ್ಲ. ಇದರ ಬಗ್ಗೆ ಸರ್ಕಾರಗಳು ಅತ್ಯಂತ ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ. ಇಷ್ಟು ಮಾತನಾಡಲು ನನಗೆ ಅವಕಾಶವನ್ನು ನೀಡಿದ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಪಿ.ಆರ್. ರಮೇಶ್‌ರವರು ನಿಯಮ 330ರಡಿಯಲ್ಲಿ ಈಗಾಗಲೇ ಕೆ.ಪಿ.ಎಸ್.ಸಿ.ಗೆ ಸಂಬಂಧಪಟ್ಟ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಈಗ ಮಾನ್ಯ ಸಚಿವರು ಅದಕ್ಕೆ ಉತ್ತರವನ್ನು ನೀಡುತ್ತಾರೆ.

**<u>6. ನಿಯಮ 330ರ ಮೇರೆಗೆ ಚರ್ಚೆ</u>**

**ಆ) ವಿಷಯ: ಲೋಕಸೇವಾ ಆಯೋಗವು ಸಲ್ಲಿಸಿದ್ದ 2021ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್‌ಗಳ ಆಯ್ಕೆ ಪಟ್ಟಿ/ ಸಲಹೆಗೆ ಸಂಬಂಧಿಸಿದಂತೆ ದಿನಾಂಕ:09.03.2018ರ (ರಿಟ್ ಸಂಖ್ಯೆ:13617-13627/2017) ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪನ್ನು ಪಾಲಿಸುವುದರ ಕುರಿತು.**

----

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, 2011ನೇ ಸಾಲಿನ ಕೆ.ಎ.ಎಸ್. ಬ್ಯಾಚ್ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆ ವಿಚಾರದ ಬಗ್ಗೆ ವಿವರಣೆಯನ್ನು ನೀಡಿದರೆ ಸದನಕ್ಕೂ ಅದರ ಬಗ್ಗೆ ಗೊತ್ತಾಗುತ್ತದೆ. ಆಮೇಲೆ ಬೇಕಾದರೆ, ಮಾನ್ಯ ಸಚಿವರು ಉತ್ತರವನ್ನು ಹೇಳಲಿ. ಮಾನ್ಯ ಸದಸ್ಯರಿಗೆ ಮಾತನಾಡಲು ಕಡಿಮೆ ಸಮಯವನ್ನು ಕೊಡಿ. ಗಮನಸೆಳೆಯುವ ಸೂಚನೆಯಾಗಿದ್ದರೆ ಅದು ಬೇರೆ ಮಾತು. ಆದರೆ, ನಿಯಮ 330ರಡಿಯಲ್ಲಿ ಮಾನ್ಯ ಸದಸ್ಯರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈ ರೀತಿ ಒಮ್ಮೆಲೇ ಮಾನ್ಯ ಸಚಿವರಿಗೆ ಉತ್ತರವನ್ನು ನೀಡಲು ಅವಕಾಶವನ್ನು ನೀಡಿದರೆ ನಿಯಮ 330ರ ಪಾವಿತ್ರತೆ ಹೊರಟು ಹೋಗುತ್ತದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಅವರಿಗೆಲ್ಲ ಒಪ್ಪಿಗೆ ಆಗುವ ರೀತಿಯಲ್ಲಿ ಬಹಳ ಚಿಕ್ಕದ್ದಾಗಿ ನಾನು ನನ್ನ ಉತ್ತರವನ್ನು ಹೇಳಿ ಮುಗಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಹೊಸ precedentನ್ನು ಅನುಸರಿಸುವುದು ಬೇಡ. ಮೊದಲಿಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಲಿ, ನಂತರ ಮಾನ್ಯ ಸಚಿವರು ಉತ್ತರವನ್ನು ನೀಡಲಿ. ನಿಯಮ 330 ಎನ್ನುವುದು ಸದನದ ದಾಖಲೆಗೆ ಹೋಗಬೇಕಾಗುತ್ತದೆ.

**ಸಭಾಪತಿಯವರು:-** ಮಾನ್ಯ ಸದಸ್ಯರು ಈ ವಿಚಾರದ ಬಗ್ಗೆ ಈಗಾಗಲೇ 3-4 ಬಾರಿ ಪ್ರಸ್ತಾಪ ಮಾಡಿದ್ದಾರೆ. ಈಗ ಹೊಸದಾಗಿ ಮಂಡನೆ ಮಾಡುತ್ತಿಲ್ಲ. ಅದಕ್ಕಾಗಿಯೇ ನಾನು ನೇರವಾಗಿ ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳಲಿ ಎನ್ನುವ ಮಾತನ್ನು ಹೇಳಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, 2011ನೇ ಸಾಲಿನ ಕೆ.ಎ.ಎಸ್. ಬ್ಯಾಚ್ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸದಸ್ಯರು ಈ ವಿಚಾರದ ಬಗ್ಗೆ ಸದನದಲ್ಲಿ ಸುಮಾರು 3-4 ಬಾರಿ ಪ್ರಸ್ತಾಪ ಮಾಡಿದ್ದಾರೆ. ಈಗ ಮಾನ್ಯ ಸದಸ್ಯರು ವಿಷಯವನ್ನು ಪ್ರಸ್ತಾಪ ಮಾಡಲೇಬೇಕು ಎನ್ನುವುದಾದರೆ, ಒಂದು ನಾಲ್ಕು ಸಾಲು ಓದಿದರೆ ಸಾಕು.

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶನ ಹೊಂದಿದವರು):-** ಸನ್ಮಾನ್ಯ ಸಭಾಪತಿಯವರೇ, ವಿಚಾರವನ್ನು ಈಗಾಗಲೇ 3-4 ಬಾರಿ ಪ್ರಸ್ತಾಪ ಮಾಡಲಾಗಿದೆ. ಕೆಳಮನೆಯಲ್ಲಿಯೂ ಈ ಬಗ್ಗೆ ಚರ್ಚೆಯಾಗಿದೆ. ಸಂವಿಧಾನದಲ್ಲಿ ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗವೆಂದು ಮೂರು ಅಂಗಗಳನ್ನು ಉಲ್ಲೇಖ ಮಾಡಿದ್ದಾರೆ. ಒಕ್ಕೂಟ ವ್ಯವಸ್ಥೆಯಲ್ಲಿ ಈ ಮೂರು ಅಂಗಗಳು ರಾಜ್ಯದ ಆಡಳಿತಕ್ಕೆ ಪ್ರಮುಖವಾಗಿರುವಂತಹ ಅಂಗಗಳಾಗಿವೆ. ಈ ಪ್ರಕರಣದಲ್ಲಿ constitutional breakdown ಆಗಿದೆ. It is totally a constitutional breakdown. ಮಾನ್ಯ ಸಚಿವರ ಗಮನಕ್ಕೆ ಕೆಲವು ವಿಚಾರಗಳನ್ನು ತರಲೇಬೇಕಾಗಿದೆ. ಮಾನ್ಯ ಸಚಿವರು ಕೊಟ್ಟಿರುವಂತಹ ಲಿಖಿತರೂಪದ ಉತ್ತರದ ಆಧಾರದ ಮೇಲೆ ನಾನು ಮಾತನಾಡುತ್ತಿದ್ದೇನೆ. ಅದರಲ್ಲಿ ನ್ಯಾಯಾಲಯದ ಆದೇಶದ ಮೇಲೆ ನಾವು ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆಂದು ಹೇಳಿದ್ದಾರೆ. ನ್ಯಾಯಾಲಯದ ಆದೇಶ ಬರಬೇಕಾದರೆ, ಸರ್ಕಾರ ನ್ಯಾಯಾಲಯಕ್ಕೆ ಏನು ಹೇಳಿದೆ ಎನ್ನುವ ಮಾಹಿತಿಯನ್ನು ಸಹ ಕೊಟ್ಟಿಲ್ಲ. ನ್ಯಾಯಾಲಯದ ಆದೇಶ ಏನಾಗಿದೆಯೆಂದರೆ, ದಿನಾಂಕ:14.08.2014ರ ಸರ್ಕಾರದ ಆದೇಶವನ್ನು ಎತ್ತಿ ಹಿಡಿದಿದೆ. ಅದರಲ್ಲಿ ಏನಿದೆಯೆಂದರೆ, ಸಿ.ಓ.ಡಿ. ರಿಪೋರ್ಟ್ ಮತ್ತು ಮಧ್ಯಂತರ ಆದೇಶವನ್ನು ಆಧರಿಸಿ ಸರ್ಕಾರ ಆದೇಶವನ್ನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹೊರಡಿಸಿದೆ. ಯಾವುದಾದರೂ ಮಧ್ಯಂತರ ತೀರ್ಪುನ್ನು ಅಥವಾ ಸಿ.ಓ.ಡಿ.ಯ ಮಧ್ಯಂತರ ಅಥವಾ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಕೊಡಬೇಕಾಗಿದೆಯೇ ಹೊರತು ಸರ್ಕಾರಕ್ಕಲ್ಲ. ಆದರೆ, ಆ ವರದಿಗಳನ್ನು ಇವರು ತೆಗೆದುಕೊಂಡು ಅದರ ಆಧಾರದ ಮೇಲೆ ಸರ್ಕಾರ ಒಂದು ಆದೇಶವನ್ನು ಮಾಡಿದೆ. ಇವತ್ತು ಆ ಆದೇಶವನ್ನು ರದ್ದುಗೊಳಿಸಿ ಎಂದು ನ್ಯಾಯಾಲಯ ಹೇಳಿದೆ. ಪ್ರಶ್ನೆ ಏನೆಂದರೆ, ಸರ್ಕಾರ ನ್ಯಾಯಾಲಯದಲ್ಲಿ ಅರ್ಟಿಕಲ್ 323(2) ಪ್ರಕಾರ ಅದನ್ನು ಸದನಗಳ ಮುಂದೆ ಮಂಡಿಸಲಾಗಿದೆಯೆಂದು ಹೇಳಲಾಗಿದೆ. ಆದರೆ, ನಮಗೆ ಕೊಟ್ಟಿರುವ ಉತ್ತರದಲ್ಲಿ ಅವಶ್ಯಕತೆ ಬರಲಿಲ್ಲ ಆದ್ದರಿಂದ, ಅದನ್ನು ಮಂಡಿಸಲಿಲ್ಲವೆಂದು ಹೇಳಿದ್ದಾರೆ. ಈಗ ನಾವು ಯಾವುದನ್ನು ನಂಬುವುದು? ಅವರು ಸದನಕ್ಕೆ ಕೊಟ್ಟಿರುವ ಲಿಖಿತರೂಪದ ಹೇಳಿಕೆಯನ್ನು ನಂಬಬೇಕೇ ಅಥವಾ ನ್ಯಾಯಾಲಯಕ್ಕೆ ಕೊಟ್ಟಿರುವ ಹೇಳಿಕೆಯನ್ನು ನಂಬಬೇಕೇ? ನ್ಯಾಯಾಲಯಕ್ಕೆ ಹೇಳಿರುವುದನ್ನು ನಾವು ನಂಬಬೇಕಾದರೆ, ಸದನದಲ್ಲಿ ಮಂಡನೆಯಾಗಿರುವ ದಾಖಲೆಗಳನ್ನು ತೋರಿಸಬೇಕಾಗಿದೆ. ದಾಖಲೆಗಳಲ್ಲಿ ಇದ್ದರೆ ಆಗ ನ್ಯಾಯಾಲಯಕ್ಕೆ ಹೇಳಿರುವುದು ಸರಿಯಾಗಿದೆ ಎಂದು ಹೇಳಬಹುದು. ಆದರೆ, ಅವರು ಕೊಟ್ಟಿರುವ ಲಿಖಿತರೂಪದ ಉತ್ತರದಲ್ಲಿ;

> **"ಕರ್ನಾಟಕ ಲೋಕಸೇವಾ ಆಯೋಗದ ಆಯ್ಕೆ ಪಟ್ಟಿಯನ್ನು ರದ್ದುಪಡಿಸುವ ಅಥವಾ ತಿರಸ್ಕರಿಸುವ ಪ್ರಸ್ತಾವವು ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪುಗಳ ಹಿನ್ನೆಯಲ್ಲಿ ಸಂಭವಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪುಗಳನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಎತ್ತಿ ಹಿಡಿದಿರುವುದರಿಂದ ಸರ್ಕಾರಕ್ಕೆ ಲಭ್ಯವಿರುವ ಕಾನೂನಿನ ಆಸ್ಪದಗಳಾದ ಎಸ್.ಎಲ್.ಪಿ. ಮರು ಪರಿಶೀಲನಾ ಅರ್ಜಿ ಸಲ್ಲಿಕೆ ಇತ್ಯಾದಿ ಅವಕಾಶಗಳು ಬರಿದಾಗಿದ್ದರಿಂದ ಸರ್ಕಾರವು ಮಾನ್ಯ ಉಚ್ಚ ನ್ಯಾಯಾಲಯ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳನ್ನು ಪಾಲಿಸಿರುತ್ತದೆ. "**

ಎಂದು ಹೇಳಲಾಗಿದೆ. ಮಾನ್ಯ ಉಚ್ಚ ನ್ಯಾಯಾಲಯದ ಕೆಲವು ಆಯ್ದ ಅಂಶಗಳನ್ನು ನಾನು ಸದನದ ಗಮನಕ್ಕೆ ತರಲು ಬಯಸುತ್ತಿದ್ದೇನೆ;

> "Para (e) - Article 323 requires a Public Service Commission to present its Annual Report to the Governor of the State. The Governor, on receipt of such report, shall cause a copy thereof together with a memorandum explaining the causes, if any, where the advice of the commission is not acceꮯpted, the same shall be laid before the State Legislature. We are informed by Sri Aditya Sondhi, learned Additional Advocate General that the reasons for not accepting the selected list was laid before the State Legislative Assembly during February 2017."

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

This is a record given by the government. ನಾನು ಆ ಸರ್ಕಾರ ಈ ಸರ್ಕಾರವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿ ವ್ಯವಸ್ಥೆಯ ಪ್ರಶ್ನೆಯಾಗಿದೆ. ಸರ್ಕಾರ ನ್ಯಾಯಾಲಯದಲ್ಲಿ ಕೊಟ್ಟಿರುವ ಹೇಳಿಕೆಯ ಆಧಾರದ ಮೇಲೆ ಇಂತಹ ಒಂದು ವ್ಯವಸ್ಥೆಯನ್ನು ನಾವು ಮುಂದುವರಿಸಿಕೊಂಡು ಹೋಗಬಹುದೇ? ಕಾನೂನಿನ ಕಣ್ಣಿನಲ್ಲಿ ಇದು ಸರಿಯೇ? ಇದಕ್ಕೆ ನಾನು ಒಂದೆರಡು ನಿದರ್ಶನಗಳನ್ನು ಕೊಡುತ್ತೇನೆ.

(ಮುಂದು)

**(1307) 23.12.2021 5.00 ಪಿಕೆ:ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)**

**Sri P.R.RAMESH:** (Contd)

Fraudulently submitted or ನೀವೇನು ದಾಖಲೆಗಳನ್ನು ಸೃಷ್ಟಿ ಮಾಡಿದ್ದೀರೋ ಅಥವಾ ನಿಲ್ಲಿಸಿದ್ದೀರೋ ಗೊತ್ತಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ**:- ಇಷ್ಟೆಲ್ಲಾ ಡೀಟೈಲ್ಸ್ ಹೋಗುವುದು ಬೇಡ ಎನ್ನುವ ದೃಷ್ಟಿಯಿಂದ ನಾನು ರಿಪ್ಲೈ ಮಾಡುತ್ತಿದ್ದೇನೆ. You want to continue, you want to arbitrate the High Court and Supreme Court decisions.

**Sri P.R.RAMESH:** This is a fraudulent order, you cannot implement it. Because, ಈಗ constitution breakdown ಆಗಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ, ಶಾಸನ ರಚನೆ ಸಚಿವರು:**- ನಿಮಗೆ remedy ಬೇಕೇ ಅಥವಾ ನೀವು ಮಾತನಾಡುವುದು ರೆಕಾರ್ಡ್‌ಗೆ ಹೋಗಬೇಕೇ? ಎರಡರಲ್ಲಿ ಒಂದನ್ನು ಹೇಳಿಬಿಡಿ. 2011ರ ಬ್ಯಾಚ್‌ನಲ್ಲಿ ಅನ್ಯಾಯವಾಗಿದೆ ಎಂದು ಒಬ್ಬ ಹೆಣ್ಣು ಮಗಳು ಆವತ್ತಿನ ಎ.ಜಿ. ಅವರಿಗೆ ಒಂದು ಅರ್ಜಿಯನ್ನು ಕೊಟ್ಟರು. ಎ.ಜಿಯವರ ಅರ್ಜಿ ಮೇಲೆ ಆವತ್ತಿನ ಮುಖ್ಯಮಂತ್ರಿಗಳು ತನಿಖೆ ಮಾಡಿ ಎಂದು ಸಿಐಡಿ ಗೆ ಆದೇಶ ಕೊಟ್ಟರು. ಸಿಐಡಿಯವರು ಒಂದು interim report ಹಾಕಿ, ಇಲ್ಲಿ ಸ್ವಲ್ಪ ಬೇರೆ-ಬೇರೆ ರೀತಿಯಲ್ಲಿ ನಡೆದಿದೆ ಎಂದು ವರದಿ ಕೊಟ್ಟರು. ಆ ವರದಿಯ ಆಧಾರದ ಮೇಲೆ ಸರ್ಕಾರ ಕೆಪಿಎಸ್‌ಸಿ ಗೆ , ಇದರಲ್ಲಿ ಕೆಲವನ್ನು ಮಾಡಿಫೈ ಮಾಡಬೇಕಾಗುತ್ತದೆ, ಕೈಬಿಟ್ಟು ಬೇರೆಯವರನ್ನು ತರಬೇಕಾಗುತ್ತದೆ ಎಂದು ತಿಳಿಸಿತು. ಆಗ ಕೆಪಿಎಸ್‌ಸಿಯವರು ಸಹಕರಿಸಲಿಲ್ಲ. ನಾವು ಶೇಕಡ ನೂರರಷ್ಟು ಕ್ಲೀನ್ ಇದ್ದೇವೆ ಎಂದು ಹೇಳಿದರು. ವರದಿಯಲ್ಲಿ, ಕೆಲವು ಕೆಪಿಎಸ್‌ಸಿ ಮೆಂಬರ್‌ಗಳು ಸುಮಾರು 40 ಜನ ಅಭ್ಯರ್ಥಿಗಳ ಜೊತೆ ದೂರವಾಣಿಯಲ್ಲಿ ಮಾತನಾಡಿದ conversation ಮಾಹಿತಿಯನ್ನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಿಐಡಿಯವರು ಕೊಟ್ಟಿದ್ದರು. ಹಾಗಾಗಿ we have proof that there was conversation. ಏನೋ link ಆಗಿದೆ ಎಂದು ಗೊತ್ತಾಯಿತು. ಸರ್ಕಾರಕ್ಕೆ ಕೆಪಿಎಸ್‌ಸಿ ಯವರು ಮಾಡಿಫೈ ಮಾಡುವುದಿಲ್ಲ ಎಂದು ಹೇಳಿದ ಮೇಲೆ, ರೂಲ್ 11 ಮತ್ತು 12ರ ಅನ್ವಯ entire list quash ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿತು. ಲಿಸ್ಟನ್ನು quash ಮಾಡಿದಾಗ ಆ ಅಭ್ಯರ್ಥಿಗಳು ಕೆಎಟಿ ಮುಂದೆ ಅರ್ಜಿ ಹಾಕಿದರು. ಕೆಎಟಿಯವರು upheld ಮಾಡಿತು, ಆಯ್ಕೆ ಆಗಿರುವುದು ಸರಿಯಿದೆ, quash ಮಾಡಬಾರದಾಗಿತ್ತು; reconsider ಮಾಡಿ ಎಂದು ಹೇಳಿತು. ಇದರ ಆಧಾರದ ಮೇಲೆ ಅಪೀಲ್ ಹೋದಾಗ ಹೈಕೋರ್ಟ್; Government is empowered to quash under that rule ಎಂದು ಹೇಳಿತು. ಒಂದು technical problem ಏನಾಗಿತ್ತು ಎಂದರೆ, ಆರ್ಟಿಕಲ್ 323(2) ಕೆಳಗೆ ಇದನ್ನು ಅಸೆಂಬ್ಲಿ ಮುಂದೆ ತಂದು, ಅಸೆಂಬ್ಲಿಯಲ್ಲಿ debate or deliberate ಆಗಿ ಮಾಡಬೇಕು ಎಂದು ಪ್ರಾವಿಷನ್ ಇತ್ತು. ಇದು comply ಆಯಿತೋ ಇಲ್ಲವೋ ಗೊತ್ತಿಲ್ಲ. ನಾವು ಈ ವರ್ಷದ ಕೆಪಿಎಸ್‌ಸಿ ಲಿಸ್ಟನ್ನು quash ಮಾಡಿದ್ದೇವೆ ಎಂದು ಅವರು ಅದನ್ನೇ ಹೈಕೋರ್ಟ್‌ನ ಮುಂದೆ Yes, it is brought known to the Assembly ಎಂದು ಹೇಳಿದರು. ಇಲ್ಲಿ ಬಂದಿರುವ ಜಿಜ್ಞಾಸೆ ಎಂದರೆ it was not in the agenda. It was not discussed. It was not made. Expressively before the House ಎನ್ನುವುದು. ಇದು ಹೀಗಾಯಿತಲ್ಲ ಎಂದು ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡಿತು. ಕೆಎಟಿ ಆದೇಶದಂತೆ ಅಭ್ಯರ್ಥಿಗಳನ್ನು ನೋಟಿಫೈ ಮಾಡುವುದಕ್ಕೆ ರೆಡಿ ಇದ್ದೇವೆ ಎಂದು ಸನ್ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಹೇಳಿತ್ತು. ಅಷ್ಟರಲ್ಲಿ ಸುಪ್ರೀಮ್ ಕೋರ್ಟ್‌ಗೆ we are considering the KAT decision ಹಾಕಲಾಯಿತು. ಆಗ ಸುಪ್ರಿಮ್ ಕೋರ್ಟ್ reject ಮಾಡಿ, no case to interfere with High Court decision ಎಂದು ಹೇಳಿತ್ತು. ಹೈಕೋರ್ಟ್ ತೀರ್ಪಿನ ಮಧ್ಯೆ ಬಾಯಿ ಹಾಕುವುದಿಲ್ಲ ಎಂದು ಹೇಳಿತು. ಬಹುಶಃ ಇದನ್ನು ಕನ್ಸಿಡರ್ ಮಾಡಬೇಕಾಗಿತ್ತು; ಆದರೆ ಆಗ Public Interest Litigation ಆಯಿತು. Tainted candidates ಇದ್ದಾರೆ, ಇದರಲ್ಲಿ ಭ್ರಷ್ಟಾಚಾರ ಮನೆ ಮಾಡಿದೆ; ಈ ರೀತಿ ಏಕ್‌ದಮ್ ಸರ್ಕಾರ ರಿವರ್ಸ್ ಹೋಗುತ್ತಿದ್ದೀರಿ ಎಂದು ಹೈಕೋರ್ಟ್ para-wise state ಮಾಡಿತ್ತು. ಇವರನ್ನು ತೆಗೆಯಬೇಕಾದರೆ written examination ನಲ್ಲಿ ತೆಗೆಯಬೇಕೇ, Viva-Voce ತೆಗೆಯಬೇಕೇ ಅಥವಾ ಲಿಸ್ಟನಲ್ಲಿ ತೆಗೆಯಬೇಕೇ ಎನ್ನುವುದು ಬಂತು. ಸರಿಯಾಗಿ positive grounds ಸಿಗದೇ ಇದ್ದುದರಿಂದ ಸರ್ಕಾರ ಏನು ತೀರ್ಮಾನ ತೆಗೆದುಕೊಂಡಿತೋ ಅದನ್ನು upheld ಮಾಡಲಾಗಿದೆ ಎಂದು ಕೇಸ್ ಕ್ಲೋಸ್ ಆಯಿತು. ಇದಾದ ಮೇಲೆ ಸಾಕಷ್ಟು ಮನವಿಗಳು ಬಂತು. ಶಾಸನ ಸಭೆಯಲ್ಲಿ ಮಾನ್ಯ ಸಿದ್ದರಾಮಯ್ಯನವರು, ಮಾನ್ಯ ಹೆಚ್.ಕೆ.ಪಾಟೀಲ್‌ರವರು ರೈಸ್ ಮಾಡಿ, ಇವರಿಗೆ ಅನ್ಯಾಯವಾಗಿದೆ, ಇದನ್ನು ಕನ್ಸಿಡರ್ ಮಾಡಿ ಎಂದು ಹೇಳಿದರು. ನಾನು we will consider the case ಎಂದು ಹೇಳಿ, ಇದು ಆಗಬಾರದಾಗಿತ್ತು, ಇದರ ಬಗ್ಗೆ ಅನುಕಂಪ ಇದೆ ಎಂದು ಉತ್ತರ ಕೊಟ್ಟೆ. ಇಲ್ಲಿ ಸಮಸ್ಯೆ ಏನಾಗಿತ್ತು ಎಂದರೆ, ಒಂದು ಕಡೆ ವಿದ್ಯಾರ್ಥಿಗಳು; ಇನ್ನೊಂದು ಕಡೆ ಸಿಐಡಿ ವರದಿಯನ್ನು ಆಧರಿಸಿ ಕೆಪಿಎಸ್‌ಸಿ ಸದಸ್ಯರ ಮೇಲೆ Criminal case and Prevention of Corruption case, Prosecution ಮಾಡಿದ್ದೆವು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕ್ರಿಮಿನಲ್ ಕೇಸ್ ಆದಾಗ ಒಬ್ಬ ಸದಸ್ಯರು, ತಮ್ಮನ್ನು ಸರ್ಕಾರ ಸಸ್ಪೆಂಡ್ ಮಾಡಿದ್ದಾರೆ ಎಂದು ಸ್ಟೇ ತಂದರು. ಸರ್ಕಾರ ಸಸ್ಪೆಂಡ್ ಮಾಡಿದ್ದು ರಾಷ್ಟ್ರಪತಿಗಳವರೆಗೆ ಅಥವಾ ಸುಪ್ರೀಮ್ ಕೋರ್ಟ್‌ನವರೆಗೆ ಹೋಗದೆ, ನೀವು ಕೆಪಿಎಸ್‌ಸಿ ಸದಸ್ಯರನ್ನು ತೆಗೆದು ಹಾಕುವುದಕ್ಕೆ ಆಗುವುದಿಲ್ಲ ಎನ್ನುವ ಕಾರಣಕ್ಕೆ ಅವರಿಗೆ ಸ್ಟೇ ಕೊಟ್ಟಿತು. ಆ ಸಮಯದಲ್ಲಿ ಕೆಪಿಎಸ್‌ಸಿ ಚೇರ್‌ಮೆನ್ ಆಗಿದ್ದವರು ನಿವೃತ್ತರಾಗಿದ್ದರು. ಇನ್ನು ಆರು ಜನರ ಮೇಲೆ ಕೇಸ್ ಉಳಿದಿತ್ತು. ಅದು ನಮ್ಮ ಮುಂದೆ ಇತ್ತು. ಈ ಮಧ್ಯೆ, ಅಲ್ಲಿ ಸೆಕ್ರಟರಿಯಾಗಿದ್ದವರನ್ನು ನಮ್ಮ ಚೀಫ್ ಸೆಕ್ರೆಟರಿಯವರು explanation ತೆಗೆದುಕೊಂಡು exonerate ಮಾಡಿದರು. ಕ್ಲೇಸ್‌ನಿಂದ ಕೈಬಿಟ್ಟರು. He was given some other post. ಈ ಆಧಾರದ ಹಿನ್ನೆಲೆಯಲ್ಲಿ who gave you power to do all these things. As you rightly said, ಸಿಐಡಿ ಫೈನಲ್ ರಿಪೋರ್ಟ್ ಬರುವವರೆಗೆ, ಚಾರ್ಜ್ ಶೀಟ್ ಬರುವವರೆಗೆ ನಾವು ಕಾಯಬೇಕಾಗಿತ್ತು. Secretary was Accused No.6 in the list. ಅವರ ಮೇಲೆ main charge ಆಗಿತ್ತು. ಇಂಥಿಂಥಿದ್ದಕ್ಕೆ ಸೆಕ್ರಟರಿಯವರೇ responsible ಆಗಿದ್ದು ಅವರನ್ನು ಹೇಗೆ ಬಿಟ್ಟಿರಿ ಎಂದು ಬಂತು. After filing chargesheet or FIR how can the government delete his name in the list? ನಾವು ವಾದ ಮಾಡಿದ ಮೇಲೆ ಕೇಸ್ ಇನ್ನೊಂದು ಟರ್ನ್ ತೆಗೆದುಕೊಂಡು ನನ್ನ ಅಧ್ಯಕ್ಷತೆಯಲ್ಲಿ ಒಂದು Cabinet Sub-Committee ರಚನೆಯಾಯಿತು. ಸಿಐಡಿ ಯವರು ಈಗ ಚಾರ್ಜ್ ಶೀಟ್ ತಂದು ಕೊಟ್ಟರು. ಈ ಮಧ್ಯೆ ಸಿಐಡಿ ಮೆಂಬರ್ಸ್‌ಗಳ ಮೇಲೆ under Prevention Corruption Act ಚಾರ್ಜ್ ಮಾಡಿ ರಾಜ್ಯಪಾಲರ ಮೂಲಕ ರಾಷ್ಟ್ರಪತಿಗಳಿಗೆ ಕಳುಹಿಸುವ ಪ್ರಯತ್ನ ನಡೆದಿತ್ತು. The then Governor refused. ಸಾಕಷ್ಟು ಮೆಟಿರಿಯಲ್ ಇಲ್ಲ, ನಾನು ರೆಕಮೆಂಡ್ ಮಾಡುವುದಿಲ್ಲ, interim report ಗಳನ್ನು ರಾಜ್ಯಪಾಲರ ಮೂಲಕ ರಾಷ್ಟ್ರಪತಿಗಳಿಗೆ ಕಳುಹಿಸುವುದಿಲ್ಲ ಎಂದಾಯಿತು. ನಾವು ಬಂದಾದ ಮೇಲೆ ನಮ್ಮ ಮುಂದೆ ಮೂರು ಇಶ್ಯೂ ಇತ್ತು. ಒಂದನೆಯದು, ಕೆಪಿಎಸ್‌ಸಿ ಸದಸ್ಯರ ಮೇಲಿರುವ Prosecution. ಇನ್ನೊಂದು, ಈ ಹುಡುಗರನ್ನು ಮತ್ತೆ ತೆಗೆದುಕೊಳ್ಳಬೇಕೇ ಬೇಡವೇ ಎನ್ನುವುದು. ಮತ್ತೊಂದು Prevention of Corruption case. ಸರ್ಕಾರಕ್ಕೆ prosecution ಎನ್ನುವ ಅಧಿಕಾರ ಇದ್ದುದರಿಂದ we have taken decision not to prosecute the PSC Members. ಉಳಿದಿದ್ದವರ ಮೇಲೆ prosecution case withdraw ಮಾಡಿ, ಮುಂದುವರೆಯುವುದು ಬೇಡ ಎಂದು ಹೇಳಿದೆವು. Prevention of Corruption ಕೇಸ್ ಇತ್ತು. ಅದರಲ್ಲಿ ನಮಗೆ ಅಧಿಕಾರ ಇಲ್ಲ we are not interfere with corruption cases ಎಂದು Bureaucratic opinion ಬಂತು. ಆಗ ನಾವು we have taken decision. Ok you proceed with your own source. Government will not say anything in this. ನಾವು ಒಂದು ಕಡೆ criminal prosecution withdraw ಮಾಡಿ, ಅವರ ಮೇಲೆ corruption ಹಾಕಿ ಎಂದು ಹೇಳುವುದಕ್ಕೆ ಆಗುವುದಿಲ್ಲ; ಹಿಂದಿನ ರಾಜ್ಯಪಾಲರು ಮೆಟಿರಿಯಲ್ ಇಲ್ಲ ಎಂದು ಹೇಳಿದ್ದರು. ಇಲ್ಲೂ ಕೂಡ ನಮ್ಮ ಮುಂದೆ ಸ್ಪೆಸಿಫಿಕ್ ಕೇಸ್ ಯಾವುದೂ ಇಲ್ಲ. ಈ ಕೇಸ್‌ನಲ್ಲಿ ದುಡ್ಡು ಕೊಟ್ಟವರಿಲ್ಲ; ದುಡ್ಡು ತೆಗೆದುಕೊಂಡವರಿಲ್ಲ. Telephonic conversation ಆಗಿತ್ತು ಎನ್ನುವುದು ಬಿಟ್ಟರೆ ಇನ್ನಾವ ಚಾರ್ಜನ್ನು level ಆಗಿಲ್ಲ ಎಂದು as a Chairman of the Cabinet Sub-

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

Committee ತೀರ್ಮಾನ ತೆಗೆದುಕೊಂಡೆವು. Prevision of Corruption ಕೇಸನ್ನು ಮತ್ತೆ ರಾಷ್ಟ್ರಪತಿಗಳಿಗೆ ಅವರು ಕಳುಹಿಸಿದರು. ಆದರೆ ನಂತರ ಅವರು you cannot straightaway reach President's Office it has to come to with proper source ಎಂದು ವಾಪಸ್ಸು ಕಳುಹಿಸಿದರು. ಈಗ ನಮ್ಮ ಅಂಗಳಕ್ಕೆ ಬಾಲ್ ಬಂದು ನಿಂತಿದೆ. ಈ ಮಧ್ಯೆ Session Court ನಲ್ಲಿ ಕೇಸ್ ಇತ್ತು. Session Court, ಯಾವಾಗ ನಾವು Prosecution case withdraw ಮಾಡಿದೆವೋ ಆಗ ಕೇಸನ್ನು ರದ್ದು ಮಾಡಿದರು. However it is open for the Government to come with a fresh proposal when and where it needs ಎನ್ನುವ ಒಂದು ಆದೇಶವನ್ನು ಕೊಟ್ಟಿತು. ಎರಡು-ಮೂರು ಇಶ್ಯೂ ಮಧ್ಯೆ ನಾವಿದ್ದೇವೆ. ಹೈಕೋರ್ಟ್‌ನಲ್ಲಿ ಸುಪ್ರೀಮ್ ಕೋರ್ಟ್‌ನಲ್ಲಿ ಡಿಸೈಡ್ ಆಗಿರುವ ಕೇಸನ್ನು ಏಕಾಏಕಿ ಕ್ಲೋಸ್ ಮಾಡುವುದು ಸುಲಭ ಎಂದೆನಿಸಿಲ್ಲ. Prevention of Corruption ಕೇಸ್ ಇನ್ನೂ ಕ್ಲೋಸ್ ಮಾಡಿಲ್ಲ. ಮೆಂಬರ್‌ಗಳು ಮೇಲೆ Corruption Charges ಏನು level ಆಗಿತ್ತೋ ಅದು ಕ್ಲೋಸ್ ಆಗಿಲ್ಲ. ಆದರೂ ನಾವು, ಬೇಕಾದ್ದಾಗಲಿ, ನಮ್ಮ ಇಡೀ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಇದಕ್ಕೆ ಯಾರದೂ ವಿರೋಧ ಇಲ್ಲ ಎಂದು ಭಾವಿಸುತ್ತೇನೆ. ಆಗ, it will be unanimous decision ಆಗುತ್ತದೆ, ನಾವು ಮಾಡಲೇಬೇಕೆಂದು we have taken decision. ಈ ಮಧ್ಯೆ Prevention of Corruption ಕೇಸನ್ನು ನಾವು ಕ್ಲೋಸ್ ಮಾಡಬೇಕಾಗಿದೆ. ಸಿಎಂ ರವರು ನನಗೆ ವಾಪಸ್ಸು ಬರೆದಿದ್ದರೆ. ಇವೆಲ್ಲಾ ಇದ್ದಾಗ ಈ ಅಧಿವೇಶನದಲ್ಲಿ ಏನಾದರೂ ಮಾಡಬೇಕು ಎಂದಿದ್ದವರು ಸದ್ಯಕ್ಕೆ ಸ್ವಲ್ಪ hold ಮಾಡಿದ್ದೇವೆ. ಉತ್ತರವೇನು ಕೊಟ್ಟರೋ ಅದನ್ನು ನಿಮಗೆ ಮೊನ್ನೆಯೇ ಕೊಡಬೇಕಾಗಿತ್ತು. ಆದರೆ, ಉತ್ತರದ last paragraph ನೋಡಿ, ನಾನೇ ಚೇರ್‌ಮೆನ್‌ರವರನ್ನು ರಿಕ್ವೆಸ್ಟ್ ಮಾಡಿ, ದಯಮಾಡಿ ಉತ್ತರವನ್ನು ಪ್ಲೇಸ್ ಮಾಡಬೇಡಿ, ಉತ್ತರದಿಂದ confusion ಆಗುತ್ತದೆ ಎಂದು ಹೇಳಿದೆ. ನಾವು ಒಂದು ಕಡೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ, ಆದರೆ ಉತ್ತರದಲ್ಲಿ it's a closed case ಎಂದು ರಿಪ್ಲೈ ಬಂದಿದೆ, ಆದರೆ ನಾವು ಇದಕ್ಕೆ ಬದ್ಧರಾಗಿರಲಿಲ್ಲ.ಈಗಲೂ ನಾನು ಇದರ ಬಗ್ಗೆ ಮಾತನಾಡಿದಾಗ, ಇದಕ್ಕೆ ಉತ್ತರ ಕೊಟ್ಟು ಬನ್ನಿ ಎಂದು ಇಲ್ಲಿಗೆ ಕಳುಹಿಸಿದರು. ಅಂದರೆ, Government will certainly consider their case.

(ಮುಂದು)

**(1308) 23-12-2021 5.10 DS-RN** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಜೆ.ಸಿ.ಮಾಧುಸ್ವಾಮಿ(ಮುಂದು):-**

ಇದರಲ್ಲಿ ಎರಡು ಮಾತಿಲ್ಲ we are committed. ನಾವು ಮಾತು ಕೊಟ್ಟಿದ್ದೇವೆ. ನಾನು, ಮಾನ್ಯ ಮುಖ್ಯಮಂತ್ರಿಗಳು ತೀರ್ಮಾನ ತೆಗೆದುಕೊಂಡಿದ್ದೇವೆ. ಕೊನೆ paragraph ನ್ನು ನೋಡಿ ಅವರು confuse ಮಾಡಿಕೊಳ್ಳುತ್ತಾರೆನ್ನುವ ಕಾರಣಕ್ಕಾಗಿ ನಾನೇ ಬಂದೆ. ಬೇಡ ಸರ್, ಇದು confuse ಆಗುತ್ತದೆ ಎಂದು ನಾನು ತಮಗೆ ಹೇಳಿದ್ದೇನೆ. ಏನ್ ಸಾರ್ ರಿಪ್ಲೈ ಈ ರೀತಿ ಹೋಗುತ್ತಿದೆ ಎಂದು ನಾನೇ ಮುಖ್ಯಮಂತ್ರಿಗಳನ್ನು ಕೇಳಿದೆ. ನೋಡ್ರೀ ಇದು ಸಡನ್ ಆಗಿ ಹೋಗಿಬಿಟ್ಟಿದೆ ಅದನ್ನು ಸ್ವಾಪ್ ಮಾಡಿ

ಎಂದು ಅವರು ಹೇಳಿದರು. ಈಗಲೂ ನಾನು ಅವರ ಹತ್ತಿರ ಮಾತನಾಡಿಕೊಂಡು ಬಂದೆ. ಮಾನ್ಯ ಮುಖ್ಯಮಂತ್ರಿಗಳು, ನಾನು consequences legal implications ಏನಾಗುತ್ತದೆ ಎನ್ನುವುದಕ್ಕೆ ಸ್ವಲ್ಪ ಸಮಯವನ್ನು ತೆಗೆದುಕೊಂಡದ್ದು ಬಿಟ್ಟರೆ ನಮ್ಮ ತೀರ್ಮಾನದಲ್ಲಿ ಇಲ್ಲ. ಇದು ಆಗಲೇ ಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ನನಗಿಂತ ಒಂದು ಹೆಜ್ಜೆ ಮುಂದಿದ್ದಾರೆ. ಅವತ್ತು ಅವರು ಗೃಹ ಮಂತ್ರಿಗಳಾಗಿದ್ದಾಗ ನಾನು ಮತ್ತು ಅವರು ಸಬ್-ಕಮಿಟಿಯಲ್ಲಿ ತೀರ್ಮಾನ ತೆಗೆದುಕೊಂಡು ಇದಕ್ಕೆ ಜೀವ ಕೊಟ್ಟಿದ್ದೇವೆ. ಇಲ್ಲದಿದ್ದರೆ prosecution withdraw ಮಾಡಿ, ಮತ್ತೊಂದು withdraw ಮಾಡಿ ಮಕ್ಕಳನ್ನು ಅಲ್ಲಿಯವರೆಗೆ ತರುವಂತಹ ಸ್ಥಿತಿ ನಮಗೆ ಇರಲಿಲ್ಲ. We are positive, we will certainly consider, ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ, ದಯಮಾಡಿ ಅದಕ್ಕೆ ಅವಕಾಶ ಕೊಡಿ. ಸ್ವಲ್ಪ complication ಇದೆ. ಕೆಳಗಡೆಯಿಂದ ಬರುವ opinion ಅಷ್ಟೊಂದು positive ಆಗಿ ಇಂತಹ ಪ್ರಕರಣಗಳಲ್ಲಿ ಬರುವುದಿಲ್ಲ. Because cases are already decided by the Courts. ಯಾರಾದರೂ bureaucratic opinion ಕೊಡಬೇಕಾದರೆ risk ಏಕೆ ಎನ್ನುವ ಭಾವನೆಗಳಲ್ಲಿರುತ್ತಾರೆ. Even then Government is with you and with those candidates. We will certainly consider. ದಯಮಾಡಿ oblige ಮಾಡಿ ಎಂದು ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಸಭಾಪತಿಯವರು:-** ಒಳ್ಳೆಯದಾಯಿತು, ಅದನ್ನು ಸರಿ ಮಾಡಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಚಿವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಆದರೆ ಅದಕ್ಕೊಂದು ಕಾಲಮಿತಿಯನ್ನು ನಿಗದಿ ಮಾಡಿ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒಳ್ಳೆಯ ಉತ್ತರ ಕೊಟ್ಟಿದ್ದಾರೆ. ಅವರಿಗೆ ಧನ್ಯವಾದಗಳು. I think 365 Gazetted Probationers in 2011. ಅವರ ಪರ ಮಾನ್ಯ ಸಚಿವರು ನಿರ್ಣಯ ಕೈಗೊಂಡಿರುವುದಕ್ಕೆ ವಿಶೇಷವಾಗಿ ಮಾನ್ಯ ಸಚಿವರಿಗೆ ಅಭಿನಂದನೆಯನ್ನು ಹೇಳುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಇದರಲ್ಲಿ ಸಕಾರಾತ್ಮಕವಾಗಿ ಇದ್ದುದರಿಂದ ಅವರಿಗೂ ಧನ್ಯವಾದಗಳನ್ನರ್ಪಿಸುತ್ತೇವೆ. ಆದರೆ ಇದು ಬೇಗನೇ ಕಾರ್ಯಗತವಾಗಲಿ. ಈ ಅಧಿವೇಶನದಲ್ಲಿ ಆಗುವುದು ಕಷ್ಟವೆಂದು ಕಾಣುತ್ತಿದೆ. ಅಧಿವೇಶನ ನಾಳೆಯೇ ಮುಗಿಯುತ್ತಿದೆ. ಬೇಗನೇ ಇತ್ಯರ್ಥವಾಗಲಿ ಎಂದು ತಮ್ಮ ಮೂಲಕ ನಾನು ಮಾನ್ಯ ಸಚಿವರಿಗೆ ಹೇಳಬಯಸುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಎಲ್ಲಾ ಮಾಹಿತಿಗಳನ್ನು ತೆಗೆದುಕೊಂಡು ಮುಂದಿನ ಸಲ ಮಾಡಿಬಿಡಿ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೆ, we will do it. ನಾವೆಲ್ಲಾ ಮಾಡುತ್ತೇವೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಸದನವು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಚಿವರೇ, ನಾವೆಲ್ಲಾ ತಮಗೆ ಅಭಾರಿಯಾಗಿದ್ದೇವೆ.

**7. ನಿಯಮ 68ರ ಮೇರೆಗೆ ಮುಂದುವರೆದ ಚರ್ಚೆ**

**ವಿಷಯ:-ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ.**

\- - - - - -

**ಶ್ರೀ ಅರವಿಂದ ಕುಮಾರ್ ಅರಳಿ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಉತ್ತರ ಕರ್ನಾಟಕ ಅಭಿವೃದ್ಧಿಯ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮತ್ತೊಮ್ಮೆ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಈಗಾಗಲೇ ಉತ್ತರ ಕರ್ನಾಟಕದ ಬಗ್ಗೆ ಹಲವು ಹಿರಿಯ ಸದಸ್ಯರೆಲ್ಲರೂ ಮಾತನಾಡಿದ್ದಾರೆ. 371(ಜೆ) ಬಗ್ಗೆ ಹಾಗೂ KKRDB (Kalyana Karnataka Regional Development Board) ಬಗ್ಗೆ ಎಲ್ಲಾ ವಿಷಯಗಳನ್ನು ಹೇಳಿದ್ದಾರೆ. ಕೃಷಿ ಬಗ್ಗೆ ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಹೇಳಿದ್ದಾರೆ. ನಾನು ಎರಡು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ನಮ್ಮ ಕರ್ನಾಟಕ ರಾಜ್ಯ ಅಭಿವೃದ್ಧಿಯ ಬಗ್ಗೆ ಮಾತನಾಡಬೇಕಾಗಿತ್ತು. ವಿಪರ್ಯಾಸವೆಂದರೆ, ನಾವು ಯಾವ ಹಂತಕ್ಕೆ ಹೋಗಿ ತಲುಪಿದ್ದೇವೆಂದರೆ, ದಕ್ಷಿಣ ಕರ್ನಾಟಕವೆಂದರೆ ಸಿನಿಮಾ ಮಂದಿರದಲ್ಲಿ ಬಾಲ್ಕಾನಿ ಇದ್ದ ಹಾಗೆ. ಮಧ್ಯ ಕರ್ನಾಟಕವೆಂದರೆ, ಫಸ್ಟ್ ಕ್ಲಾಸ್ ಇದ್ದ ಹಾಗೆ, ಮುಂಬೈ ಕರ್ನಾಟಕಕ್ಕೆ ಈಗ ಕಿತ್ತೂರು ಕರ್ನಾಟಕ ಎಂದು ಹೇಳುತ್ತೇವೆ, ಅದು ಸೆಕೆಂಡ್ ಕ್ಲಾಸ್ ಇದ್ದ ಹಾಗೆ, ಕಲ್ಯಾಣ ಕರ್ನಾಟಕ ಥರ್ಡ್ ಕ್ಲಾಸ್ ಇದ್ದ ಹಾಗೆ. ಆ ಮಟ್ಟದಲ್ಲಿ ಸರ್ಕಾರ ತಂದುಬಿಟ್ಟಿದೆ. ಅದು ಯಾವುದೇ ಸರ್ಕಾರ ಇರಬಹುದು. ಏಕೆಂದರೆ, ಅಭಿವೃದ್ಧಿ ಮಾಡಿಬಿಟ್ಟರೆ ಈ ರೀತಿಯ ಚರ್ಚೆಗಳು ಆಗುತ್ತಿರಲಿಲ್ಲ. ದಕ್ಷಿಣ ಕರ್ನಾಟಕಕ್ಕೆ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಮಾಡುತ್ತಾರೆ. ಉತ್ತರ ಕರ್ನಾಟಕದಲ್ಲಿ ಅದರಲ್ಲೂ ಕಲ್ಯಾಣ ಕರ್ನಾಟಕ ಎಂದರೆ ತಿರಸ್ಕಾರ ಮಾಡುತ್ತಾರೆ. ಈಗಾಗಲೇ ಕಲ್ಯಾಣ ಕರ್ನಾಟಕದ ಬಗ್ಗೆ 371(ಜೆ) ಬಗ್ಗೆ ಮಾತನಾಡಿದ್ದಾರೆ. ಕಲ್ಯಾಣ ಕರ್ನಾಟಕದ ಬೀದರ್ ಜಿಲ್ಲೆ ಬಗ್ಗೆ ನಾನು ಮಾತನಾಡುತ್ತೇನೆ. ಅಲ್ಲಿ ಯಾವುದೇ ದೊಡ್ಡ ನೀರಾವರಿ ಯೋಜನೆಗಳಿಲ್ಲ. ಒಂದು ಸಣ್ಣ ಯೋಜನೆ ಇದೆ. ಅದು ಕಾರಂಜಾ ಯೋಜನೆ. ಕಾರಂಜಾ ಯೋಜನೆ 1969-1970 ರಲ್ಲಿ ಪ್ರಾರಂಭವಾಗಿದೆ. ಅದು 76 ರಿಂದ 80 ಲಕ್ಷ ರೂಪಾಯಿಗಳ ಯೋಜನೆಯಾಗಿತ್ತು. ಆದರೆ ಈಗ 723 ಕೋಟಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ರೂಪಾಯಿಗಳಾದರೂ ಇನ್ನೂ ಮುಗಿದಿಲ್ಲ. ಇನ್ನೂ 173 ಕೋಟಿ ರೂಪಾಯಿಗಳು ಬೇಕು ಎಂದು ಹೇಳುತ್ತಿದ್ದಾರೆ. ನಾನು ಏಕೆ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, 1969-1970 ರಲ್ಲಿ ಪ್ರಾರಂಭವಾಗಿ ಈಗ 2021 ರಲ್ಲಿ ಇದ್ದೇವೆ. ಈಗ ಎಷ್ಟು ವರ್ಷಗಳಾಗಿದೆ? ಇದು ಸಣ್ಣ ಯೋಜನೆಯಾಗಿದೆ. ಆ ಯೋಜನೆಯನ್ನು ಇಷ್ಟು ಹೊತ್ತಿಗೆ ಮುಗಿಸಬೇಕಾಗಿತ್ತು. ನಮ್ಮ ಮನಃಸ್ಥಿತಿ ಏನಿದೆ ಎಂದರೆ ಕಲ್ಯಾಣ ಕರ್ನಾಟಕವೆಂದರೆ ಯಾವುದೇ ಸರ್ಕಾರ ಇರಲಿ, ಎಲ್ಲಾ ಸರ್ಕಾರಗಳು ಬಹಳ ಕಡೆಯಾಗಿ ನೋಡಿಕೊಂಡು ಬಂದಿದ್ದಾರೆ. ಕಲ್ಯಾಣ ಕರ್ನಾಟಕಕ್ಕೆ 1500 ಕೋಟಿ ರೂಪಾಯಿಗಳ ಅನುದಾನವನ್ನು ಕೊಡ್ತುತ್ತಾರೆಂದು ನಮ್ಮ ಹಿರಿಯ ಸದಸ್ಯರು ಹೇಳಿದರು. ಆದರೆ ಆ ಅನುದಾನವನ್ನು ಯಾವಾಗ ಕೊಡುತ್ತಾರೆಂದರೆ, ವರ್ಷದ ಕೊನೆಯಲ್ಲಿ ಸೆಪ್ಟೆಂಬರ್, ಅಕ್ಟೋಬರ್, ಡಿಸೆಂಬರ್ ತಿಂಗಳಿನಲ್ಲಿ ಕೊಡುತ್ತಾರೆ. ಅದಕ್ಕಾಗಿ ಪ್ರಪೋಸಲ್ ಕೊಟ್ಟು ಅದು ಇಂಪ್ಲಿಮೆಂಟ್ ಆಗುವುದಕ್ಕೆ ಮತ್ತು ಅದನ್ನು ಎಸ್ಟಿಮೇಟ್ ಮಾಡಿ ಅಪ್ರೂವಲ್ ತೆಗೆದುಕೊಳ್ಳುವುದಕ್ಕೆ ಫೆಬ್ರುವರಿ ಆಗುತ್ತದೆ. ಆಮೇಲೆ ಆ ಹಣವನ್ನು ಮಾರ್ಚ್ ತಿಂಗಳಿನಲ್ಲಿ ಮುಗಿಸಬೇಕು. 1500 ಕೋಟಿ ರೂಪಾಯಿಗಳ ಅನುದಾನದಲ್ಲಿ 650 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. 650 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಘೋಷಣೆ ಮಾಡಿದ್ದಾರೆ. ಅದರಲ್ಲಿ 330 ಕೋಟಿ ರೂಪಾಯಿಗಳ ಪ್ರಪೋಸಲ್ ತೆಗೆದುಕೊಂಡಿದ್ದಾರೆ. ಅದು ಕೂಡ ಇನ್ನು ಅಪ್ರೂವಲ್ ಆಗಿಲ್ಲ. ಮಾನ್ಯ ಶಶಿಲ್ ಜಿ.ನಮೋಶಿ ಯವರು ಹೇಳಿದರು, ಯಾವುದೇ ಒಂದು ಅಪ್ರೂವಲ್ ತೆಗೆದುಕೊಳ್ಳಬೇಕಾದರೆ ಬೆಂಗಳೂರಿಗೆ ಬರಬೇಕು. ಸೆಪ್ಟೆಂಬರ್ ತಿಂಗಳಿನಲ್ಲಿ ಗುಲ್ಬರ್ಗಾ ಜಿಲ್ಲೆಗೆ ಮುಖ್ಯಮಂತ್ರಿಗಳು ಬಂದಾಗ 1500 ಕೋಟಿ ರೂಪಾಯಿಗಳ ಬಜೆಟ್ ಸಾಲವುದಿಲ್ಲ, 3000 ಕೋಟಿ ರೂಪಾಯಿಗಳನ್ನು ತೆಗೆದುಕೊಳ್ಳಿ, ನಾನು ಕೊಡುತ್ತೇನೆಂದು ಹೇಳಿದರು. ಮತ್ತೆ ಇದಕ್ಕೆ ತಕ್ಷಣ ಬೋರ್ಡ್ ಮಾಡುತ್ತೇನೆಂದು ಹೇಳಿದರು. ಆದರೆ ಇಲ್ಲಿಯವರೆಗೂ ಆ ಬೋರ್ಡ್ ಬಗ್ಗೆ ಮಾತನಾಡುವುದಕ್ಕೆ ತಯಾರಿಲ್ಲ. ಬೋರ್ಡ್ ಅಸ್ತಿತ್ವಕ್ಕೆ ಬಂದು ಸುಮಾರು 100-150 ತಿಂಗಳುಗಳು ಆಗುತ್ತಿದೆ. ಇಲ್ಲಿಯವರೆಗೂ ಒಂದು ಸಭೆ ಕರೆದಿಲ್ಲ. ಯಾರ ನೋವು ಕೇಳಲಿಲ್ಲ, ಪರಿಸ್ಥಿತಿ ಯಾವ ರೀತಿ ಇದೆ ಎಂಬುದನ್ನು ಕೇಳಲಿಲ್ಲ. ಅದನ್ನು ಕೇಳುವ ಮನಃಸ್ಥಿತಿಯನ್ನು ಸರ್ಕಾರ ಮಾಡಬೇಕು. ಅದಕ್ಕೆ ಸರ್ಕಾರ ಬದ್ಧತೆಯನ್ನು ವಹಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಈಗಾಗಲೇ ಹಲವಾರು ಸದಸ್ಯರು ದೊಡ್ಡ ದೊಡ್ಡ ನೀರಾವರಿ ಯೋಜನೆಗಳ ಬಗ್ಗೆ ಮಾತನಾಡಿದ್ದಾರೆ. ನಮ್ಮ ಕಡೆ ಗೋದಾವರಿ ಬೇಸಿನ್ ಬರುತ್ತದೆ. ಆ ಗೋದಾವರಿ ಬೇಸಿನ್‌ಗೆ ಬಚಾವತ್ ಆಯೋಗದಿಂದ ನಮಗೆ ಅವಾರ್ಡ್ ಆಗಿದೆ. 23.47 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡುವುದಕ್ಕಾಗುತ್ತಿಲ್ಲ. ಏಕೆಂದರೆ, ಅದಕ್ಕೆ ತಕ್ಕಂಥೆ ಬ್ಯಾರೇಜ್ ಆಗಲಿ, reservoirs ಆಗಲಿ ಆಗುತ್ತಿಲ್ಲ. ನಾವು ಎಲ್ಲಾ ಮಾಡಿದರು ಇನ್ನೂ ಸುಮಾರು ಎಂಟು ಟಿ.ಎಂ.ಸಿ. ಗೂ ಹೆಚ್ಚಿನ ನೀರನ್ನು ಆಂಧ್ರ ಪ್ರದೇಶದ ತೆಲಂಗಾಣಕ್ಕೆ ಬಿಡುತ್ತಿದ್ದೇವೆ. ನೀರಾವರಿ ಯೋಜನೆಯು ಸರಿಯಾಗಿ ನಡೆಯಬೇಕಾದರೆ ಅದನ್ನು ತಡೆಗಟ್ಟಬೇಕಾಗುತ್ತದೆ. ಇದರಿಂದ ರೈತರಿಗೆ ನೀರಿನ ಬವಣೆ ತಪ್ಪುತ್ತದೆ. ಆ ದಿಸೆಯಲ್ಲಿ ಸರ್ಕಾರ ಕೆಲಸ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ನಮ್ಮಲ್ಲಿ ಸಕ್ಕರೆ ಕಾರ್ಖಾನೆಗಳಿವೆ. ನಮ್ಮ ಕಡೆ

ಬಹಳಷ್ಟು ಸಕ್ಕರೆ ಕಾರ್ಖಾನೆಗಳನ್ನು ತೆರೆದಿದ್ದೇವೆಂದು ನಿರಾಣಿ ಸಾಹೇಬರು ಹೇಳುತ್ತಿದ್ದರು, ಆದರೆ ಇಲ್ಲಿ ಸಕ್ಕರೆ ಕಾರ್ಖಾನೆಗಳು ಯಾವ ರೀತಿ ನಡೆಯುತ್ತಿವೆ, ರೈತರಿಗೆ ಎಷ್ಟು ಲಾಭ ಆಗಿದೆ? ನಮ್ಮ ಕಡೆ ಇರುವಂತಹ ಐದು ಸಕ್ಕರೆ ಕಾರ್ಖಾನೆಗಳಲ್ಲಿ ಮೂರು ಸಕ್ಕರೆ ಕಾರ್ಖಾನೆಗಳು ಮಾತ್ರ ಬಂದ್ ಆಗಿವೆ. ಆ ಕಾರ್ಖಾನೆಗಳು ನಡೆದರೂ ಕೂಡ -Fair & Remunerative Price ಪ್ರಕಾರ ಏನು ಬೆಲೆ ಕೊಡಬೇಕೋ ಆ ಬೆಲೆಯನ್ನು ರೈತರಿಗೆ ಕೊಡುತ್ತಿಲ್ಲ. ಬಹಳ ಮೋಸ ಮಾಡುತ್ತಿದ್ದಾರೆ. ಆ ಬಗ್ಗೆ ನಾವು ಹಲವು ಬಾರಿ ಮಂತ್ರಿಗಳಿಗೆ ಪತ್ರವನ್ನು ಬರೆದಿದ್ದೇವೆ. ಮಂತ್ರಿಗಳನ್ನು ಭೇಟಿ ಮಾಡಿದ್ದೇವೆ. ಸರ್ಕಾರಕ್ಕೆ ಪತ್ರ ಬರೆದಿದ್ದೇವೆ. ಆದರೆ ಯಾವುದು ಬಗೆಹರಿಯಲಿಲ್ಲ. ಕಬ್ಬು ಬೆಳೆಗಾರರ ಬಗ್ಗೆಯೂ ಚಿಂತನೆ ಮಾಡಬೇಕು. ಈ ಕಡೆ ಏನು ಬೆಲೆ ಕೊಡುತ್ತಿದ್ದಾರೆಯೋ ಅದೇ ಬೆಲೆಯನ್ನು ನಮ್ಮ ಭಾಗದ ರೈತರಿಗೂ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

(ಮುಂದು)

1309/23-12-2021/ 5-20/ಬಿಕೆಪಿ-ವಿಕೆ(ಆರ್.ಎನ್)

**ಶ್ರೀ ಅರವಿಂದ ಕುಮಾರ್ ಅರಳಿ(ಮುಂದು):-**

ಅದೇ ರೀತಿ ಈ ಕಾರಂಜಾ ಯೋಜನೆ ಮುಳುಗಡೆ ಪ್ರದೇಶದಲ್ಲಿದೆ. ಅಲ್ಲಿ ಪ್ರತಿ ವರ್ಷ ನೂರಾರು ಎಕರೆ ಜಮೀನಿನಲ್ಲಿ ಬೆಳೆಗಳು ಹಾಳಾಗಿ ಹೋಗುತ್ತಿದೆ. ಆದರೆ ಆ ಬೆಳೆಗೆ ಸರಿಯಾದ ಪರಿಹಾರ ಸಿಗುವುದಿಲ್ಲ. ಈ ಪರಿಹಾರದ ವಿಷಯವಾಗಿ ನಾನು ಜಲಸಂಪನ್ಮೂಲ ಸಚಿವರಿಗೆ ಈ ಜಮೀನನ್ನು ಭೂಸ್ವಾಧೀನ ಮಾಡಿಕೊಂಡು ಅವರಿಗೆ ದುಡ್ಡು ಕೊಟ್ಟರೆ ಅವರು settle ಆಗುತ್ತಾರೆಂದು ಹೇಳಿದ್ದೇನೆ. ಆದರೆ, ಇದು ನಮ್ಮಲ್ಲಿ ಪ್ರಾವಿಜನ್ ಇಲ್ಲವೆಂದು ಸಚಿವರು ಹೇಳಿದರು. ಯಾವಾಗ ಯಾವಾಗ ಬೆಳೆ ಹಾನಿಯಾಗುತ್ತದೆ. ಆ ಸಂದರ್ಭದಲ್ಲಿ ಪರಿಹಾರ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ, ಆ ಪರಿಹಾರವನ್ನು ಸರಿಯಾದ ಸಮಯಕ್ಕೆ ಕೊಡಬೇಕು. 2-3 ವರ್ಷಗಳಾದ ಮೇಲೆ ಕೊಟ್ಟರೆ, ಅದು ಉಪಯೋಗವಾಗುವುದಿಲ್ಲ. ನಮ್ಮ ರೈತರು ಬಹಳ ತೊಂದರೆಯಲ್ಲಿದ್ದಾರೆ.

**ಶ್ರೀ ಬಸವನಗೌಡ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಯಾವುದೇ ಒಂದು ಪ್ರಾಜೆಕ್ಟ್ ಮಾಡಿದಾಗ ಎಷ್ಟು ಜಮೀನು ಮುಳುಗಡೆಯಾಗುತ್ತದೆ, ಸರ್ಕಾರ ಅದಕ್ಕೆ ಪರಿಹಾರವನ್ನು ಕೊಡಬೇಕು.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ತಪ್ಪು ತಿಳಿದುಕೊಳ್ಳಬಾರದು. ಯಾವುದೇ ಯೋಜನೆಯ ನಿರಾಶ್ರಿತರಿಗೆ ಅವರು ಕಳೆದುಕೊಂಡ ಆಸ್ತಿ-ಪಾಸ್ತಿಗೆ ಪರಿಹಾರ ಕೊಡಲಿಕ್ಕೆ ಸರ್ಕಾರದಲ್ಲಿ ಪ್ರಾವಿಜನ್ ಇದೆ. ಅದಕ್ಕಾಗಿಯೇ ಭಾರತ ಸರ್ಕಾರ 2013 ರಲ್ಲಿಯೇ Special Land Acquisition Act ಕೂಡ ಜಾರಿಯಲ್ಲಿದೆ. ಅವರು ಏನು ಕೇಳುತ್ತಿದ್ದಾರೆಂದರೆ ಪ್ರವಾಹದಿಂದ

ಬಂದಂತಹದ್ದು. ಹಿನ್ನೀರಿನಿಂದ ಮುಳುಗಡೆಯಾದಂತಹದ್ದು ಅಲ್ಲ. ಪ್ರವಾಹ ಎಲ್ಲಾ ವರ್ಷದಲ್ಲಿಯೂ ಬರುವುದಿಲ್ಲ. ಎರಡು ವರ್ಷ ಸತತವಾಗಿ ಮಳೆಯಾಗಿ ಆಕಸ್ಮಿಕವಾಗಿ ರೈತರ ಬೆಳೆ ಹಾನಿಯಾಗಿದೆ. ಅದಕ್ಕೆ ಪರಿಹಾರವನ್ನು ಕೊಡಿಸುತ್ತೇನೆ. ಯಾವ ಸಂದರ್ಭದಲ್ಲಿ ಪ್ರವಾಹ ಬಂದು ಹಾನಿಯಾಗುತ್ತದೆ, ಅತಿವೃಷ್ಟಿಯಾಗಿ ಹಾನಿಯಾಗುತ್ತದೆ, ಅಂತಹ ಸಂದರ್ಭದಲ್ಲಿ ಪರಿಹಾರವನ್ನು ಕೊಡುತ್ತೇವೆಂದು ಉತ್ತರವನ್ನು ಕೊಟ್ಟಿದ್ದೇನೆ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೆ, ನಾನು ಹೇಳುವಂತಹ ವಿಷಯವನ್ನು ಮಾನ್ಯ ಸಚಿವರು ತಿಳಿದುಕೊಂಡಿದ್ದಾರೆ. ಮಾನ್ಯ ಸಚಿವರಿಗೆ ಧನ್ಯವಾದಗಳು. ಅದನ್ನು ಜಾರಿಗೆ ತರುವಂತಹ ಪ್ರಯತ್ನವನ್ನು ಮಾಡಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ. ಈಗಾಗಲೇ ನಮ್ಮ ಶ್ರೀ ಬಸವರಾಜ ಪಾಟೀಲ್ ಇಟಗಿಯವರು ಹೇಳಿದ ಹಾಗೆ ಬೆಳೆ ವಿಮೆ ಬಗ್ಗೆ ಅಂದರೆ ಫಸಲ್ ಭೀಮಾ ವಿಮೆ ಬಗ್ಗೆ ನಮ್ಮ ಮಾನ್ಯ ಸದಸ್ಯರಾದ ಶ್ರೀ ಲಕ್ಷ್ಮಣ ಸಂಗಪ್ಪ ಸವದಿಯವರು ಹೇಳಿದರು. ಮೊದಲು ಬೀದರ್, ನಂತರ ಹಾವೇರಿ ಗದಗ ಬಂದಿದೆ ಎಂದು ಹೇಳಿದರು, ಆದರೆ, ಫಸಲ್ ಭಿಮಾ ಯೋಜನೆಯ ವಿಮೆಯ ಕಂತನ್ನು ಮುಂಚೂಣಿಯಲ್ಲಿ ಕಟ್ಟಲಿಕ್ಕೆ ನಮ್ಮ ಕಡೆಯ ರೈತರು ಸಿದ್ದರಿದ್ದಾರೆ. ಆದರೆ, ಬೆಳೆ ಹಾನಿಯಾದ ಬೆಳೆಗಳಿಗೆ ಪರಿಹಾರ ಕೊಡಬೇಕಲ್ಲವೇ? ಅದಕ್ಕೆ ಅಧಿಕಾರಿಗಳು ಏನು ಹೇಳುತ್ತಾರೆಂದರೆ, ಅವರು ಬರಬೇಕು, ಇವರು ಬರಬೇಕು, ಸರ್ಕಾರಕ್ಕೆ ಕಡತ ಹೋಗಿದೆ ಎಂದು ಹೇಳುತ್ತಾರೆ. ಈ ರೀತಿಯಲ್ಲಿ ರೈತರಿಗೆ ಅಡ್ಡಾಡಿಸಿ, ಅವರ ಬೆಳೆ ಹಾಳಾಗುತ್ತಿದೆ. ಇದರಿಂದಾಗಿ ಇದ್ದಂತಹ ಬೆಳೆಯನ್ನು ಸಹ ಶುದ್ಧ ಮಾಡಲಿಕ್ಕೆ ಅಗುತ್ತಿಲ್ಲ. ಬಹಳ ತೊಂದರೆಯಾಗುತ್ತಿದೆ. ಈಗ 2017 ರಿಂದ 2020 ರವರೆಗೆ ಷುಗರ್ ಕಂಪನಿಯವರು 200 ಕೋಟಿ ರೂಪಾಯಿಗಳ ಲಾಭದಲ್ಲಿದ್ದಾರೆ. ಇಷ್ಟೊಂದು ಲಾಭದಲ್ಲಿದ್ದರೂ ಸಹ ನಮ್ಮ ರೈತರಿಗೆ ಏತಕ್ಕೆ ಹಣ ಕೊಡುತ್ತಿಲ್ಲವೆಂದರೆ ಅವರದ್ದು ವರದಿ ಬರಬೇಕು, ಇವರದ್ದು ವರದಿ ಬರಬೇಕೆಂದು ಈ ರೀತಿಯಲ್ಲಿ ನೆವ ಹೇಳುತ್ತಾರೆ. ಅದಕ್ಕೋಸ್ಕರ ಅವರು ನೆವ ಹೇಳುವುದು ಬೇಡ, ಮಾನ್ಯ ಸದಸ್ಯರಾದ ಬಸವರಾಜ ಪಾಟೀಲ್ ಇಟಗಿಯವರು ಹೇಳಿದ ಹಾಗೆ ಸರ್ಕಾರದವರೇ, ವಿಮಾ ಇಲಾಖೆಯವರೊಂದಿಗೆ monitor ಮಾಡುವುದನ್ನು ತಮ್ಮ ಕಸ್ಟಡಿಗೆ ತೆಗೆದುಕೊಳ್ಳುವುದು ಒಳ್ಳೆಯದು ಎನ್ನುವುದು ನನ್ನ ಆಗ್ರಹ ಇದೆ. ಅದೇ ರೀತಿಯಲ್ಲಿ ನಮ್ಮ ಜಿಲ್ಲೆಯಲ್ಲಿ 2012-13ರಲ್ಲಿ Satellite Urdu University ಎನ್ನುವುದು ಬಂದಿದೆ. ಅದಕ್ಕೆ 2-3 ವರ್ಷ ಆಯಿತು. 10 ಎಕರೆ ಜಮೀನು ಸಹ ಸರ್ಕಾರ ಕೊಟ್ಟಿದೆ. ಆದರೆ, ಇಲ್ಲಿಯವರೆಗೆ ಅದರ ಕಟ್ಟಡ ಕಟ್ಟಲಿಕ್ಕೆ ಮಾಡಲಿಕ್ಕೆ ಸಿದ್ದರಿಲ್ಲ. ಇದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲು ಇದೆ. ಅದನ್ನು ಮಾಡಿದರೆ, ಅಲ್ಲಿನ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ. ಮತ್ತೆ ವಿದ್ಯಾರ್ಥಿಗಳಿಗೆ ಓದಲಿಕ್ಕೆ ಅನುಕೂಲವಾಗುತ್ತದೆ. ಅಲ್ಲಿ ಕೇವಲ ಉರ್ದು ಭಾಷೆ ಮಾತ್ರ ಕಲಿಸುವುದಿಲ್ಲ, ಅದರ ಜೊತೆಗೆ ಇಂಗ್ಲಿಷ್ ಸಹ ಕಲಿಸುತ್ತಾರೆ. ಇಂಗ್ಲಿಷ್ ಕಲಿಯುವವರು ಅಲ್ಲಿಗೆ ಹೋಗಬಹುದು. ಆ ಒಂದು ದೃಷ್ಟಿಯಿಂದ ಸರ್ಕಾರ ಇದಕ್ಕೆ ಒತ್ತು ಕೊಟ್ಟು ಕಟ್ಟಡ ಕೆಲಸವನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚಾಲು ಮಾಡಬೇಕೆಂದು ಸರ್ಕಾರಕ್ಕೆ ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ. ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳು.

**8. ಪ್ರಕಟಣೆ**

**ವಿಷಯ: ಅಖಿಲ ಭಾರತ ಪೀಠಾಸೀನಾಧಿಕಾರಿಗಳ ಸಮ್ಮೇಳನದಲ್ಲಿ ನಡೆದ ಸಂಕ್ಷಿಪ್ತ ನಡವಳಿ ಕುರಿತು**

\- - - - - -

**ಸಭಾಪತಿಯವರು:-** ಅಖಿಲ ಭಾರತ ಪೀಠಾಸೀನಾಧಿಕಾರಿಗಳ ಸಮ್ಮೇಳನಕ್ಕೆ ನಮ್ಮ ರಾಜ್ಯದಿಂದ ಪ್ರತಿ ವರ್ಷ ಉಭಯ ಸದನಗಳ ಅಧ್ಯಕ್ಷರು ಹೋಗುತ್ತಿರುವಂತೆ ಪ್ರಸಕ್ತ ವರ್ಷ ದಿ:16.11.2021 ರಿಂದ 19.11.2021ರವರೆಗೆ ಹಿಮಾಚಲ ಪ್ರದೇಶದ ಶಿಮ್ಲಾದಲ್ಲಿ ಆಯೋಜಿಸಲಾಗಿದ್ದ ಸಮ್ಮೇಳನದಲ್ಲಿ ನಾನು ಸಹ ಭಾಗವಹಿಸಿದ್ದು, ಸದರಿ ಸಮ್ಮೇಳನದಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಹಾಗೂ ನಡೆದಂತಹ ವಿಚಾರ ವಿಮರ್ಶೆಗಳನ್ನು ಈ ಸಭೆಗೆ ತಿಳಿಸುವುದು ನನ್ನ ಕರ್ತವ್ಯವಾಗಿದೆ.

ಪೀಠಾಸೀನಾಧಿಕಾರಿಗಳ ಸಮ್ಮೇಳನದಲ್ಲಿ ಕೆಲವು ಮಹತ್ವ ವಿಷಯಗಳ ಬಗ್ಗೆ ಚರ್ಚೆ ನಡೆದು ಒಟ್ಟು 11 ನಿರ್ಣಯಗಳನ್ನು ಕೈಗೊಳ್ಳಲಾಗಿರುತ್ತದೆ. ಅವುಗಳ ಪೈಕಿ ಪ್ರಮುಖವಾದ ಅಂಶಗಳನ್ನು ಈ ಮೂಲಕ ಸದನದ ಗಮನಕ್ಕೆ ತರಬಯಸುತ್ತೇನೆ.

1. ಹೊಸದಾಗಿ ಆಯ್ಕೆಯಾದ ಶಾಸಕರುಗಳ ಸಂಸದೀಯ ಕರ್ತವ್ಯಗಳು/ ಸದನದ ನಿಯಮಗಳು/ ನಿಯಮಗಳ ಪಾಲನೆ / ಸದನದ ನಡವಳಿಯ ಚರ್ಚೆಯಲ್ಲಿ ಭಾಗವಹಿಸುವಿಕೆಯಲ್ಲಿ ಸದಸ್ಯರ ಪಾತ್ರದ ಬಗ್ಗೆ ತಿಳುವಳಿಕೆ ನೀಡುವುದರ ಮೂಲಕ ಸಾಮರ್ಥ್ಯವನ್ನು ಹೆಚ್ಚಿಸಲು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು ಹಾಗೂ ಪ್ರತಿ ವರ್ಷ **ಉತ್ತಮ ಶಾಸಕ** ಪ್ರಶಸ್ತಿಯನ್ನು ಕೊಡಮಾಡುವುದು;

"79ನೇ ಅಖಿಲ ಭಾರತ ಪೀಠಾಸೀನಾಧಿಕಾರಿಗಳ ಸಮ್ಮೇಳನದಲ್ಲಿ ನಿರ್ಣಯಿಸಿ ಪ್ರಸಕ್ತ 82ನೇ ಸಮ್ಮೇಳನದಲ್ಲಿ ಪುನರುಚ್ಚರಿಸಲಾದ ರೀತ್ಯಾ ಕ್ರಮವಹಿಸುವ ನಿಟ್ಟಿನಲ್ಲಿ ವಿಧಾನ ಮಂಡಲಗಳಲ್ಲಿ ಚರ್ಚೆಗಳ ಗುಣಮಟ್ಟಗಳನ್ನು ವೃದ್ಧಿಸಲು ಸದಸ್ಯರು ಸದನದಲ್ಲಿ ಪ್ರಸ್ತಾಪಿಸುವ ವಿಷಯ/ಪಾಲಿಸುವ ನಿಯಮಗಳು/ ಚರ್ಚಿಸುವ ಸಾಮರ್ಥ್ಯ / ಭಾಷಾ ಪಾಂಡಿತ್ಯ/ ಹಾಜರಾತಿ/ ಸದನದ ಒಳಗೆ ಹಾಗೂ ಹೊರಗೆ ಮಾನ್ಯ ಶಾಸಕರ ನಡವಳಿಕೆ ಇತ್ಯಾದಿಗಳನ್ನು ಪರಿಗಣಿಸಿ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಪ್ರತಿ ವರ್ಷ ಮಾನ್ಯ ಶಾಸಕರೊಬ್ಬರಿಗೆ ಅತ್ಯುತ್ತಮ ಸಂಸದೀಯ ಪಟು ಅಥವಾ ಅತ್ಯುತ್ತಮ ಶಾಸಕ ಎಂಬ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪ್ರಶಸ್ತಿಯನ್ನು ಪ್ರದಾನ ಮಾಡಲು ಮಾನ್ಯ ಶಾಸಕರನ್ನು ಆಯ್ಕೆ ಮಾಡಲು ಅನುಸರಿಸಬೇಕಾದ ಮಾರ್ಗಸೂಚಿಗಳು ಹಾಗೂ ಆಯ್ಕೆ ಸಮಿತಿಯನ್ನು ಸಹ ಈಗಾಗಲೇ ರಚಿಸಲಾಗಿರುತ್ತದೆ ಈ ಬಗ್ಗೆ ದಿನಾಂಕ:08.11.2021ರ ಲಘು ಪ್ರಕಟಣೆಯ ಮೂಲಕ ಮಾನ್ಯ ಶಾಸಕರುಗಳಿಗೆ ತಿಳಿಯಪಡಿಸಲಾಗಿದೆ.

2. ಇತ್ತೀಚೆಗೆ ಸದನದಲ್ಲಿ ಗದ್ದಲ / ಪ್ರತಿಭಟನೆಗಳು ಹೆಚ್ಚಾಗಿ ನಡೆಯುತ್ತಿದ್ದು, ಸದನದ ಕಾರ್ಯಕಲಾಪಗಳನ್ನು ಉತ್ಕೃಷ್ಟಮಟ್ಟದಲ್ಲಿ ನಡೆಸುವಲ್ಲಿ ಪೀಠಾಸೀನಾಧಿಕಾರಿಗಳು ಸದನವನ್ನು ನಿಯಂತ್ರಿಸಲು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಚರ್ಚೆಯಾಗಿ ರಾಷ್ಟ್ರಪತಿಗಳು ಮತ್ತು ರಾಜ್ಯಪಾಲರ ಭಾಷಣದ ಸಮಯದಲ್ಲಿ ಮತ್ತು ಪ್ರಶ್ನೋತ್ತರ ಅವಧಿಯಲ್ಲಿ ಸದನದಲ್ಲಿ ಮಾನ್ಯ ಸದಸ್ಯರುಗಳು ಯಾವುದೇ ರೀತಿಯ ಅಡಚಣೆಗಳನ್ನುಂಟು ಮಾಡುವಂತಿಲ್ಲ. ಈ ಹಿನ್ನಲೆಯಲ್ಲಿ ಎಲ್ಲಾ ಪಕ್ಷಗಳೊಂದಿಗೆ ಸಮಾಲೋಚಿಸಿ ಸಮ್ಮತಿಯನ್ನು ಪಡೆಯುವುದೆಂದು ತೀರ್ಮಾನಿಸಿರುತ್ತದೆ.

3. 1921 ಮತ್ತು 2021ರ ನಡುವೆ ನಡೆದ ಸಮ್ಮೇಳನಗಳಲ್ಲಿ ತೆಗೆದುಕೊಂಡ ಎಲ್ಲಾ ಪ್ರಸ್ತಾವಗಳು/ ನಿರ್ಣಯಗಳು /ತೀರ್ಮಾನಗಳ ಮೇಲೆ ತೆಗೆದುಕೊಂಡ ಕ್ರಮವನ್ನು ಪರಿಶೀಲಿಸಿ ಹೊಸ ಶತಮಾನೋತ್ಸವದ ಪ್ರಾರಂಭದಲ್ಲಿ ಆಯೋಜಿಸಲಾಗುತ್ತಿರುವ ಸಮ್ಮೇಳನಗಳಲ್ಲಿ ಈ ಕೆಳಕಂಡ ವಿಷಯಗಳ ಮೇಲೆ ಸೂಕ್ತ ಕ್ರಮವನ್ನು ಕೈಗೊಳ್ಳಬೇಕೆಂಬುದು ಅಭಿಪ್ರಾಯವಾಗಿದೆ.

1) ಶಾಸಕಾಂಗಗಳ ನಡವಳಿಗಳು ಸುಗಮ ಮತ್ತು ತಡೆರಹಿತವಾಗಿರಬೇಕು
2) ಶಾಸಕಾಂಗಗಳ ನಿಯಮಗಳಲ್ಲಿ ಏಕರೂಪತೆ
3) ಶಾಸಕಾಂಗಗಳ ಆರ್ಥಿಕ ಸ್ವಾಯತ್ತತೆ
4) ಸಂವಿಧಾನದ ಹತ್ತನೇ ಅನುಸೂಚಿಯ ಪುನರಾವಲೋಕನೆ
5) ಶಾಸಕಾಂಗಗಳಲ್ಲಿ ಸಮಿತಿ ವ್ಯವಸ್ಥೆಯ ಪುನರಾವಲೋಕನೆ

4. ಸಮ್ಮೇಳನದ ಶತಮಾನೋತ್ಸವ ವರ್ಷಾಚರಣೆಯ ಸಂದರ್ಭದಲ್ಲಿ ಹಿಮಾಚಲ ಪ್ರದೇಶ ಸರ್ಕಾರವು ಹಿಮಾಚಲ ವಿಧಾನಸಭೆಗೆ ಆರ್ಥಿಕ ಸ್ವಾಯತ್ತತೆ ನೀಡುವಂತಹ ಐತಿಹಾಸಿಕ ನಿರ್ಣಯವನ್ನು ತೆಗೆದುಕೊಂಡಿದ್ದು, ಸಂಸತ್ತಿನ ಉಭಯ ಸದನಗಳು ಆರ್ಥಿಕ ಸ್ವಾಯತ್ತತೆ ಪಡೆದು ಕೊಂಡಿರುವ ರೀತಿಯಲ್ಲಿ ಇತರೆ ರಾಜ್ಯಗಳ ಎಲ್ಲಾ ವಿಧಾನ ಮಂಡಲಗಳು ಆರ್ಥಿಕ ಸ್ವಾಯತ್ತತೆಯನ್ನು ಪಡೆದುಕೊಳ್ಳುವುದು.

5. ಗ್ರಾಮ ಪಂಚಾಯಿತಿಯಿಂದ ವಿಧಾನ ಮಂಡಲಗಳು, ಸಂಸತ್ತಿನವರೆಗೆ ಸಾರ್ವಜನಿಕ ಕರ್ತವ್ಯಗಳ ಕುರಿತು ಜನಜಾಗೃತಿ ಅಭಿಯಾನವನ್ನು ಆಯೋಜಿಸುವುದು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

6. ಸಂಸತ್ತಿನ ಉಭಯ ಸದನಗಳ ಹಾಗೂ ಎಲ್ಲಾ ರಾಜ್ಯಗಳ ವಿಧಾನಮಂಡಲಗಳ ಕಾರ್ಯಕಲಾಪಗಳನ್ನು, ಮಾಹಿತಿ ಮತ್ತು ತಂತ್ರಜ್ಞಾನ ಮಾಧ್ಯಮದ ಮೂಲಕ ಒಂದೇ ವೇದಿಕೆಯಲ್ಲಿ ತರುವುದು.

7. ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಪರಿಣಾಮಕಾರಿ ಕಾರ್ಯನಿರ್ವಹಣೆಗಾಗಿ ಮಾದರಿ ನಿಯಮಗಳನ್ನು ಸುಧಾರಿತ ರೂಪದಲ್ಲಿ ಸಿದ್ಧಪಡಿಸಬೇಕು ಹಾಗೂ ಈ ಸಂಸ್ಥೆಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡಲು ಹಣಕಾಸು ಸಂಪನ್ಮೂಲಗಳು ದೊರೆಯುವಂತೆ ಮಾಡುವುದು.

ಲೋಕಸಭಾ ಅಧ್ಯಕ್ಷರು ಅಧ್ಯಕ್ಷತೆಯಲ್ಲಿ ನಡೆದಂತಹ ಪೀಠಾಸೀನಾಧಿಕಾರಿಗಳ ಸಭೆಯಲ್ಲಿ ವಿವಿಧ ರಾಜ್ಯಗಳ ಸಭಾಧ್ಯಕ್ಷರು ಹಾಗೂ ರಾಜ್ಯಸಭಾ ಉಪ ಸಭಾಪತಿಯವರ ಜೊತೆ ಸದನದ ನಡವಳಿಗಳ ಗುಣಮಟ್ಟ ಕುಸಿಯುತ್ತಿರುವ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡಿರುತ್ತೇನೆ. ಈ ಸಂದರ್ಭದಲ್ಲಿ ವಿಧಾನ ಪರಿಷತ್ತುಗಳ ಮಹತ್ವ ಹಾಗೂ ಅದರ ಅವಶ್ಯಕತೆ ಕುರಿತು ನನ್ನ ಅಭಿಪ್ರಾಯವನ್ನು ತಿಳಿಸುತ್ತಾ, ದೇಶದ ಎಲ್ಲಾ ರಾಜ್ಯಗಳಲ್ಲೂ ವಿಧಾನ ಪರಿಷತ್ತು ಇರಬೇಕು ಎಂಬ ವಾದವನ್ನು ಮಂಡಿಸಿದ್ದೇನೆ.

ಈ ಹಿನ್ನಲೆಯಲ್ಲಿ ನನ್ನ ಮನದಾಳದ ವಿಚಾರಗಳನ್ನು ತಮ್ಮೆಲ್ಲರ ಮುಂದೆ ಪ್ರಸ್ತುತ ಪಡಿಸಲು ಇಚ್ಛಿಸುತ್ತೇನೆ.

ಈ ಸದನದ ನಡವಳಿಗಳು ರಾಜಕೀಯ ಅಖಾಡವಾಗದೆ, ಅತ್ಯುತ್ತಮವಾಗಿ, ಗಂಭೀರವಾಗಿ, ನಾಡಿನ ಜ್ವಲಂತ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತುವ ಮೂಲಕ ಮೇಲ್ಮನೆಯ ಗಾಂಭೀರ್ಯವನ್ನು, ದಕ್ಷತೆಯನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ನಾನು ನುಡಿಯುತ್ತಿರುವ ಈ ನುಡಿಗಳು ಅತ್ಯಂತ ಸೂಕ್ಷ್ಮವಾಗಿ ತಾವುಗಳೆಲ್ಲರೂ ಪರಿಗಣಿಸಿ ಮುನ್ನೆಡೆದಲ್ಲಿ ಮಾತ್ರ ನಾವು ಮೇಲ್ಮನೆಯ ಘನತೆಯನ್ನು ಹೆಚ್ಚಿಸಲು ಸಾಧ್ಯ.

ವಿವಿಧ ಕ್ಷೇತ್ರಗಳ ಮುತ್ಸದಿಗಳು ಈ ಸದನದಲ್ಲಿರಬೇಕು. ಅವರ ಅಪಾರ ಅನುಭವ ನಾಡಿನ ಅಭಿವೃದ್ದಿಗೆ ಪೂರಕವಾಗಿ ಮೇಲ್ಮನೆಯ ರಚನೆಯ ಉದ್ದೇಶವನ್ನು ಸಫಲಗೊಳಿಸಬೇಕಾಗಿದೆ. ಶಿಕ್ಷಣ, ಸ್ಥಳೀಯ ಸಂಸ್ಥೆ, ಕ್ರೀಡೆ, ಪದವೀಧರ, ಚಿತ್ರರಂಗ, ಉದ್ಯಮ ಮುಂತಾದ ಎಲ್ಲ ಕ್ಷೇತ್ರಗಳಲ್ಲಿ ಅಮೂಲಾಗ್ರವಾದ ಬದಲಾವಣೆ ಹಾಗೂ ಅಭಿವೃದ್ದಿ ಮತ್ತು ಸಾಧಕ-ಬಾಧಕಗಳ ಕುರಿತು ಚಿಂತನ ಮಂಥನವಾಗಿ ನಾಡಿನ ಪ್ರಜೆಗಳನ್ನು ಸಮಾಜಮುಖಿಯಾಗಿ, ರಾಜ್ಯದ ಪುರೋಭಿವೃದ್ಧಿಗೆ ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಪೂರಕವಾಗಿ ತಮ್ಮಿಂದ ಸಲಹೆ ಸೂಚನೆಗಳು ಬರಬೇಕು. ನಮ್ಮ ನಾಡಿನ ಯುವ ಜನಾಂಗ ಆಸಲಿಗಳಾಗದಂತೆ, ದುಷ್ಚಟಕ್ಕೆ ಬಲಿಯಾಗದಂತೆ ತಡೆದು ಯುವ ಜನಾಂಗವು ಹೊಸ ಹೊಸ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆವಿಷ್ಕಾರಗಳಲ್ಲಿ ತೊಡಗಿಸಿಕೊಂಡು ರಾಜ್ಯ/ದೇಶವನ್ನು ಪ್ರಖ್ಯಾತಗೊಳಿಸಲು ನಾವುಗಳು ಸ್ಫೂರ್ತಿದಾಯಕರಾಗಬೇಕು.

ಈ ಸದನದ ನಡವಳಿಗಳು ದಿಕ್ಕುತಪ್ಪಿ ಪರಿಷತ್ತಿನ ರಚನೆಯ ಮೂಲ ಉದ್ದೇಶದ ಅರ್ಥವನ್ನು ಕಳೆದುಕೊಳ್ಳುವಂತಹ ಸನ್ನಿವೇಶ ಎದುರಾಗಿದೆ. ಈ ಕುರಿತು ಸಾರ್ವಜನಿಕರಲ್ಲಿ, ಮಾಧ್ಯಮಗಳಲ್ಲಿ ಪರ/ವಿರೋಧ ಚರ್ಚೆಗೆ ಗ್ರಾಸವಾಗಿದೆ. ಸದನದ ಬಗ್ಗೆ ಬಿಂಬಿತವಾಗುತ್ತಿರುವ ತಪ್ಪು ಅಭಿಪ್ರಾಯವನ್ನು ನಮ್ಮ ಸೃಜನಾತ್ಮಕ ಕಾರ್ಯಗಳಿಂದಲೇ ಉತ್ತರಿಸುವ ಮೂಲಕ ಮೇಲ್ಮನೆ ಅನಿವಾರ್ಯ ಎಂದು ಸಾಬೀತುಪಡಿಸಿ ತೋರಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

ಸತತವಾಗಿ 42 ವರ್ಷಗಳಿಂದ ಈ ಮನೆಯ ಸದಸ್ಯನಾಗಿ ಭಾವನಾತ್ಮಕ ಸಂಬಂಧ ಹೊಂದಿರುವ ನನಗೆ ಮೇಲ್ಮನೆಯ ಅಸ್ತಿತ್ವದ ಬಗ್ಗೆ, ಮೇಲ್ಮನೆಯ ಬಗ್ಗೆ ಎಲ್ಲೇ ಅಪಸ್ವರ ಬಂದರೂ ಅತ್ಯಂತ ನೋವಾಗುತ್ತದೆ. ನಮ್ಮ ಗುರಿ, ನಮ್ಮ ಧ್ಯೇಯವನ್ನು ನಾವುಗಳು ಅರ್ಥೈಸಿಕೊಂಡು ಈ ಮನೆಯ ಕೀರ್ತಿಯನ್ನು ಉತ್ತುಂಗಕ್ಕೇರಿಸುವ ಹೊಣೆ ನಮ್ಮದಾಗಿದೆ.

ಕೆಳಮನೆಯಲ್ಲಿ ಆಯಾ ಚುನಾಯಿತ ಕ್ಷೇತ್ರದ ಅಭಿವೃದ್ಧಿಗೆ ಅವರು ಶ್ರಮಿಸುವಾಗ ನಾವು ಮೇಲ್ಮನೆ ಸದಸ್ಯರಾಗಿ ನಮ್ಮ ವಿವಿಧ ಕ್ಷೇತ್ರದ ಅನುಭವದೊಂದಿಗೆ ಎಲ್ಲಾ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಸಲಹೆ, ಸೂಚನೆ, ಕೊಡುಗೆ ನೀಡಿ ಅಭಿವೃದ್ಧಿಯ ಉನ್ನತೀಕರಣಕ್ಕೆ ನಾವು ಸಂಪೂರ್ಣವಾಗಿ ತೊಡಗಿಸಿಕೊಂಡು, ಸಮಸ್ಯೆಗಳಿದ್ದಲ್ಲಿ ಅದಕ್ಕೆ ಸದನದಲ್ಲಿ ಪರಿಹಾರ ಕಂಡುಕೊಂಡು ನಾಡು ಮೆಚ್ಚುವ ರೀತಿಯಲ್ಲಿ ಕಾರ್ಯನಿರ್ವಹಿಸುವ ಮೂಲಕ ನಾಡಿಗೆ/ದೇಶಕ್ಕೆ ಮಾದರಿಯಾಗುತ್ತೇವೆ ಎಂದು ಬಲವಾಗಿ ನಂಬಿರುತ್ತೇನೆ.

ನನ್ನ ಈ ಮನವಿಗೆ ಸದನದಲ್ಲಿ ಇರುವ ತಮ್ಮೆಲ್ಲರ ಸಹಮತಿ ಇದೆಯೆಂದು ಭಾವಿಸುತ್ತೇನೆ.

(ಮುಂದು)

**(1310) 23.12.2021 05.30 ಎಸ್‌ವಿ-ಆರ್‌ಎನ್**

**(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು (ಮುಂದು):-**

ಎರಡೂ ಕಡೆಗಳಲ್ಲಿ ಸದನ ಇರಬೇಕೆಂದು ನನ್ನ ವಾದವನ್ನು ಎರಡು ಗಂಟೆಗಳ ಕಾಲ ಮಂಡಿಸಿದ್ದೇನೆ. ಬಹಳಷ್ಟು ಮಂದಿ ಅದಕ್ಕೆ ಸಮ್ಮತಿಯನ್ನು ಸೂಚಿಸಿದರು ಎಂದು ಈ ಸದನಕ್ಕೆ ಹೇಳಲು ನನಗೆ ಸಂತೋಷವಾಗುತ್ತಿದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ತೆಗೆದುಕೊಂಡಿರುವ ನಿಲುವು ಬಹಳ ಸ್ಪಷ್ಟವಾಗಿದೆ. It is most appropriate stand. We all support to it.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇಡೀ ಸದನ ನಿಮ್ಮ ಪ್ರಸ್ತಾಪಕ್ಕೆ ಸಹಮತವನ್ನು ವ್ಯಕ್ತ ಪಡಿಸುತ್ತದೆ.

**ಸಭಾಪತಿಯವರು:-** ಧನ್ಯವಾದಗಳು. ಇದರ ಪ್ರತಿಯನ್ನು ನಾಳಿನ ಕಾರ್ಯಕಲಾಪ ಪಟ್ಟಿಯೊಂದಿಗೆ ಎಲ್ಲರಿಗೂ ಕಳುಹಿಸಿಕೊಡುತ್ತೇನೆ. ಈಗ ಜಲ ಸಂಪನ್ಮೂಲ ಸಚಿವರಿಂದ ಉತ್ತರ.

**9. ನಿಯಮ 68ರ ಮೇರೆಗೆ ನಡೆದ ಚರ್ಚೆಗೆ ಸರ್ಕಾರದಿಂದ ಉತ್ತರ**

**ವಿಷಯ:-ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ.**

\- - - - - -

**ಶ್ರೀ ಗೋವಿಂದ ಎಂ.ಕಾರಜೋಳ (ಜಲ ಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೇ, ದಿನಾಂಕ 21, 22, 23 ಈ ಮೂರು ದಿನಗಳ ಕಾಲ 15ಕ್ಕಿಂತಲೂ ಹೆಚ್ಚು ಸದಸ್ಯರು ಉತ್ತರ ಕರ್ನಾಟಕದ ನೀರಾವರಿ ಯೋಜನೆಗಳ ಬಗ್ಗೆ ಮತ್ತು ಉತ್ತರ ಕರ್ನಾಟಕದ ಜ್ವಲಂತ ಸಮಸ್ಯೆಗಳ ಬಗ್ಗೆ ಮಾತನಾಡಿದ್ದಾರೆ. ಅದರಲ್ಲಿ ಅತಿ ಹೆಚ್ಚು ಮಾತನಾಡಿರುವಂತಹವರು ನಮ್ಮ ಪ್ರತಿಪಕ್ಷದ ನಾಯಕರು. ಎರಡು ಗಂಟೆ ಮೂವತ್ತೇಳು ನಿಮಿಷಗಳ ಕಾಲ ಮಾತನಾಡಿದ್ದಾರೆ. ಎಲ್ಲರದ್ದೂ ಸೇರಿ ಎಂಟು ಗಂಟೆ ಆಗುತ್ತದೆ. ಯಾರು ಎಷ್ಟು ಸಮಯ ಮಾತನಾಡಿದ್ದಾರೆ ಎನ್ನುವ ಪಟ್ಟಿಯನ್ನು ನನ್ನ ಬಳಿ ಇಟ್ಟುಕೊಂಡಿದ್ದೇನೆ. ಯಾವಾಗ ಶುರು ಮಾಡಿದರು, ಯಾವಾಗ ಮುಗಿಸಿದರು ಎಂಬ ಮಾಹಿತಿ ಇದೆ.

**ಸಭಾಪತಿಯವರು:-** ಒಟ್ಟು ಎಂಟು ಗಂಟೆ ಹದಿನಾರು ನಿಮಿಷಗಳು.

**ಶ್ರೀ ಗೋವಿಂದ ಎಂ. ಕಾರಜೋಳ(ಜಲಸಂಪನ್ಮೂಲ ಸಚಿವರು):-** ಎಲ್ಲರದ್ದೂ ಹೆಸರು ಓದಿಬಿಡಲೇ? ಸಮಯ ವ್ಯರ್ಥವಾಗಬಾರದು. ಶ್ರೀ ಕೆ.ಟಿ.ಶ್ರೀಕಂಠೇಗೌಡ – 23 ನಿಮಿಷ, ಶ್ರೀ ಎಸ್.ಆರ್. ಪಾಟೀಲ್ - 2 ಗಂಟೆ 37 ನಿಮಿಷ, ಶ್ರೀ ತಿಪ್ಪೇಸ್ವಾಮಿ – 18 ನಿಮಿಷ, ಶ್ರೀ ಹಣಮಂತ ನಿರಾಣಿ – 25 ನಿಮಿಷ, ಶ್ರೀ ಲಕ್ಷ್ಮಣ ಸವದಿ – 3 ನಿಮಿಷ, ಶ್ರೀ ಮರಿತಿಬ್ಬೇಗೌಡ – 1 ಗಂಟೆ, ಶ್ರೀ ಅಲ್ಲಂ ವೀರಭದ್ರಪ್ಪ – 13 ನಿಮಿಷ, ಶ್ರೀ ಪ್ರಕಾಶ್ ರಾಥೋಡ್ - 42 ನಿಮಿಷ, ಶ್ರೀ ಆರ್. ಬಿ. ತಿಮ್ಮಾಪುರ – 20 ನಿಮಿಷ, ಶ್ರೀ ಯು.ಬಿ.ವೆಂಕಟೇಶ್ - 14 ನಿಮಿಷ, ಉಳಿದವರು ಹತ್ತು ನಿಮಿಷ, ಐದು ನಿಮಿಷ ಮಾತನಾಡಿದ್ದಾರೆ. ಅದರಲ್ಲಿ ಮಾನ್ಯ ಬಸವರಾಜ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಾಟೀಲ್ ಇಟಗಿಯವರು 55 ನಿಮಿಷ ಮಾತನಾಡಿ ಎಲ್ಲಾ ಸಮಸ್ಯೆಗಳ ಬಗ್ಗೆಯೂ ಹೇಳಿದ್ದಾರೆ. ಅವರ ಸಮಸ್ಯೆ ಬೇರೆ ಬೇರೆ ಕಡೆ ಇದ್ದವು. ಹೈದರಾಬಾದ್ ಕರ್ನಾಟಕದವರಲ್ಲ ಅವರು, ಪಾಯ ಬಿಟ್ಟು ಹೋಗುವ ಅಭ್ಯಾಸ ಅವರಿಗೆ. ಹಾಗಾಗಿ ಸ್ವಲ್ಪ ಎಲ್ಲೆಲ್ಲೋ ಹೋದರು.

**ಸಭಾಪತಿಯವರು:-** ಈ ಸದನದಲ್ಲಿ ಎಲ್ಲಾ ಪಕ್ಷಗಳ ನಾಯಕರೂ ಕೂಡಿ ತೀರ್ಮಾನ ಮಾಡಿ ಬೆಳಗಾವಿಯಲ್ಲಿ ನಡೆಯುತ್ತಿರುವ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಮಾಡಿದ್ದಾರೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಎಲ್ಲಾ ನಾಯಕರೂ ಅತ್ಯಂತ ಕಾಳಜಿ, ಕಳಕಳಿಯನ್ನು ವ್ಯಕ್ತ ಮಾಡಿದ್ದಾರೆ. ನಮ್ಮ ಕೆಲಸವನ್ನು ಹಗುರ ಮಾಡಿದ್ದಾರೆ. ಅದಕ್ಕೆ ಅವರಿಗೆ ಅಭಿನಂದನೆಗಳನ್ನು ಹೇಳಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ನಾವು, ನೀವು, ಪ್ರತಿಪಕ್ಷದ ನಾಯಕರು ಒಂದೇ ಜಿಲ್ಲೆಯಿಂದ ಬಂದಂತಹವರು. ಇಂದಿನ ಕಿತ್ತೂರು ಕರ್ನಾಟಕ ಎಂದು ಕರೆಯಲ್ಪಡುವ ಮುಂಬೈ ಕರ್ನಾಟಕದಿಂದ ಬಂದಂತಹವರು. ಕಿತ್ತೂರು ಎನ್ನುವ ಹೆಸರಿಗೆ ನಂತರ ಬರುತ್ತೇನೆ. ಇನ್ನೂ ಮುಂಬೈನಲ್ಲಿಯೇ ಇರುತ್ತೇನೆ. ಪ್ರತಿಪಕ್ಷದ ನಾಯಕರು ಮಾತನಾಡುವಂತಹ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು. 5ನೇ ಜನವರಿಗೆ ನನ್ನ ಅವಧಿ ಮುಗಿಯುತ್ತದೆ ಎಂದು ಹೇಳಿದರು. ನನಗೇಕೋ ಸ್ವಲ್ಪ ನೋವೂ ಆಯಿತು, ಕಸಿವಿಸಿಯೂ ಆಯಿತು. ಅವರಿರಬೇಕಾಗಿತ್ತು ಎಂದು ನನಗನ್ನಿಸಿತು. ಏಕಿರಬೇಕಾಗಿತ್ತು, ಅವರ ಬಗ್ಗೆ ಏಕೆ ಕಾಳಜಿ? ಅವರೊಂದು ಪಕ್ಷ, ನೀವೊಂದು ಪಕ್ಷ. ನಿಮ್ಮ ಪಕ್ಷಕ್ಕೆ ಅವರು ವೈರಿ, ಅವರ ಪಕ್ಷಕ್ಕೆ ನೀವು ವೈರಿ ಎಂದು ಬೇರೆಯವರು ಕೇಳಬಹುದು. ಆದರೆ ನಾನು ಹೇಳುತ್ತೇನೆ. ಈ ಭಾವನಾತ್ಮಕ ಸಂಬಂಧಗಳು ಇರುವ ಕಡೆ ಜಾತಿ, ಧರ್ಮ, ಮತ, ಪಂಥ, ಬಡವ-ಬಲ್ಲಿದ ಯಾವುದೂ ಇರುವುದಿಲ್ಲ. ಇಂತಹ ಭಾವನಾತ್ಮಕ ಸಂಬಂಧಗಳು ರಕ್ತ ಸಂಬಂಧಕ್ಕಿಂತಲೂ ಗಾಢವಾಗಿರುತ್ತವೆ. ಈ ಭಾವನಾತ್ಮಕ ಸಂಬಂಧದಿಂದಾಗಿ ನಾನು ಅವರನ್ನು ಬಹಳ ಪ್ರೀತಿ ಮಾಡುತ್ತೇನೆ. ಅವರೂ ನನ್ನನ್ನು ಪ್ರೀತಿ ಮಾಡುತ್ತಾರೆ. ಅದಕ್ಕಾಗಿ ನನಗೆ ಸ್ವಲ್ಪ ಏಕೋ ಕಸಿವಿಸಿಯಾಯಿತು. ಇರಲಿ, ಈ ರಾಜಕೀಯ ವ್ಯವಸ್ಥೆಯೊಳಗೆ ಸ್ವಲ್ಪ ಹೆಚ್ಚು ಕಡಿಮ್ಮೆಯಾಗುತ್ತಿರುತ್ತವೆ.

ಮಾನ್ಯ ಸಭಾಪತಿಯವರೇ, ಎಲ್ಲರೂ ಉತ್ತರ ಕರ್ನಾಟಕದ ಬಗ್ಗೆ ಹೆಚ್ಚಿನ ಕಾಳಜಿ ಕಳಕಳಿಯನ್ನು ತೋರಿಸಿದ್ದಾರೆ. ಉತ್ತರ ಕರ್ನಾಟಕದ ಬಗ್ಗೆ ಕಾಳಜಿ ಏಕೆಂದರೆ ಸುಮಾರು 350 ವರ್ಷಗಳ ಇತಿಹಾಸವನ್ನು ನಾವು ನೋಡಿದಾಗ ಬರಗಾಲಕ್ಕೆ ತುತ್ತಾಗುವಂತಹ ಜಿಲ್ಲೆಗಳು ಯಾವುದಾದರೂ ಇದ್ದರೆ ವಿಜಯಪುರ, ಬಾಗಲಕೋಟೆ, ಕಲಬುರಗಿ, ರಾಯಚೂರು, ಗದಗ ಈ ಕಡೆಯ ಜಿಲ್ಲೆಗಳು. ಅಂದರೆ ಹೈದರಾಬಾದ್

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ಮತ್ತು ಮುಂಬೈ ಕರ್ನಾಟಕದಲ್ಲಿ ಜನ ಗುಳೆ ಹೋಗುವುದು ಇಂದಿಗೂ ನಿಂತಿಲ್ಲ. ಭೂಮಿ ಇದೆ, ನೀರಿದೆ, ಆದರೆ ನಮಗೆ ಅದನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಆಗಿರುವುದಿಲ್ಲ. ಅದಕ್ಕಾಗಿ ಇಂದು ನಾವು ಬಡವರಾಗಿಯೇ ಉಳಿದಿದ್ದೇವೆಂದು ಹೇಳಬಹುದು. ನೀರಾವರಿ ಯೋಜನೆಗಳಾಗಬೇಕು ಎಂದು ಹೋರಾಟಗಳು ಇಂದು ನಿನ್ನೆಯಿಂದ ನಡೆದಿರುವುದಲ್ಲ. ಒಂದು ಶತಮಾನವೇ ಕಳೆದು ಹೋಗಿದೆ. ಬ್ರಿಟಿಷರ ಆಡಳಿತದಲ್ಲಿಯೂ ಕೂಡ ನಮ್ಮ ಜನ ಕೃಷ್ಣಾ ಮೇಲ್ದಂಡೆ ಯೋಜನೆಯಾಗಬೇಕೆಂದು ಹೋರಾಟ ಮಾಡಿದ್ದಾರೆ. ಆಗ ಅಖಂಡ ಕಾಂಗ್ರೆಸ್ ಒಂದೇ ಇತ್ತು. ಬೇರೆ ಬೇರೆ ಪಕ್ಷಗಳಿರಲಿಲ್ಲ. ಹೋರಾಟ ಮಾಡಿದವರೆಲ್ಲರನ್ನೂ ನಾವು ಇಂದು ನೆನಪಿಸಿಕೊಳ್ಳಬೇಕಾಗುತ್ತದೆ. ಅದರಲ್ಲಿಯೂ ವಿಶೇಷವಾಗಿ ಮುಳವಾಡ ಏತ ನೀರಾವರಿ ಆಗಬೇಕೆಂದು ಹೇಳಿ ಬ್ರಿಟಿಷ್ ಆಡಳಿತದ ವಿರುದ್ಧ ಹೋರಾಟ ಮಾಡಿದವರು ಮಾಜಿ ಶಾಸಕರು ಬಾಬುರಾವ್ ಹುಜರೆ ಅವರು. ನಮ್ಮ ಯಜಮಾನ. ಬಡೋಲ್ ಮೀಸಲು ವಿಧಾನ ಸಭಾ ಕ್ಷೇತ್ರದಿಂದ 1952ರಲ್ಲಿ ಮುಂಬೈ ಪ್ರಾಂತ್ಯಕ್ಕೆ ಚುನಾವಣೆಗೆ ನಿಂತು ಆಯ್ಕೆಯಾಗಿದ್ದರು. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ನಡೆದ ಮೊದಲ ಚುನಾವಣೆ. ಅವರು ಈಗ ಇಲ್ಲ. ಅವರು ಹೋರಾಟವನ್ನು ಮಾಡಿ ಜೈಲಿಗೆ ಹೋಗಿರುವುದು ಒಂದು ಇತಿಹಾಸ.

ನಂತರ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಎಲ್ಲಾ ಮಹನೀಯರು ಆಸೆಯನ್ನು ಇಟ್ಟುಕೊಂಡಿದ್ದರು. ದೇಶಕ್ಕೆ ಸ್ವಾತಂತ್ರ್ಯ ಬಂದು ಪ್ರಜೆಗಳಿಂದಲೇ ಆಡಳಿತ ನಡೆಯುತ್ತದೆ. ನಮ್ಮ ನಾಡು ಅಭಿವೃದ್ಧಿಯಾಗುತ್ತದೆ ಎನ್ನುವಂತಹ ಆಶಯವನ್ನು ಇಟ್ಟುಕೊಂಡಿದ್ದರು. ಆಶಯಕ್ಕನುಗುಣವಾಗಿ re-organization ಆಗುವುದಕ್ಕಿಂತಲೂ ಮುಂಚೆ ಅಂದಿನ ಮುಂಬೈ ಪ್ರಾಂತ ಇಂದಿನ ಮಹಾರಾಷ್ಟ್ರ ಸರ್ಕಾರ ಕೊಯ್ನಾ ಅಣೆಕಟ್ಟೆಗೆ ಅಡಿಗಲ್ಲನ್ನು ಹಾಕುವಂತಹ ಸಂದರ್ಭದಲ್ಲಿ ಅಖಂಡ ಬಿಜಾಪುರ ಜಿಲ್ಲೆಯೂ ಸೇರಿ ಅಡಿಗಲ್ಲನ್ನು ಹಾಕಲು ತಯಾರು ಮಾಡುತ್ತಾರೆ. ಅಷ್ಟು ಹೊತ್ತಿಗೆ 01.11.1956ರಲ್ಲಿ ನಾವು ಮೈಸೂರು ಪ್ರಾಂತ್ಯಕ್ಕೆ ಬಂದು ಬಿಡುತ್ತೇವೆ. ಬೆಳಗಾವಿ ವಿಭಾಗದ ನಾಲ್ಕು ಜಿಲ್ಲೆಗಳು ಅಖಂಡ ಬಿಜಾಪುರ ಜಿಲ್ಲೆ, ಅಖಂಡ ಧಾರವಾಡ ಜಿಲ್ಲೆ, ಬೆಳಗಾವಿ ಜಿಲ್ಲೆ ಹಾಗೂ ಉತ್ತರ ಕನ್ನಡ ಜಿಲ್ಲೆ ಈ ಪ್ರಾಂತ್ಯಕ್ಕೆ ಸೇರಿದ ಮೇಲೆ ಅವರು ಒಂದು ವಿನಂತಿಯನ್ನು ಮಾಡುತ್ತಾರೆ. ಅಂದರೆ ಅಂದಿನ ಮುಂಬೈ ಪ್ರಾಂತ್ಯದವರು. ನಾವು ಕೊಯ್ನಾ ಅಣೆಕಟ್ಟಿಗೆ ಮಂಜೂರಾತಿಯನ್ನು ಕೊಟ್ಟಿದ್ದೇವೆ. Detailed Project Report ಮಾಡಿದ್ದೇವೆ. ಟೆಂಡರ್ ಕರೆಯುತ್ತೇವೆ. ನಿಮ್ಮ ಪಾಲಿನ ರೂ.2 ಕೋಟಿ ಹಣವನ್ನು ಮೈಸೂರು ಸರ್ಕಾರದವರು ಕೊಡಬೇಕೆಂದು ಕೇಳುತ್ತಾರೆ.

ಮಾನ್ಯ ಸಭಾಪತಿಯವರೇ, ಎರಡು ಕೋಟಿ ರೂಪಾಯಿ ಕೊಡಲಿಕ್ಕಾಗುವುದಿಲ್ಲ ಎಂದು ಇವರು ತಿರಸ್ಕಾರ ಮಾಡುತ್ತಾರೆ. ತಿರಸ್ಕಾರ ಮಾಡುವುದರ ಬದಲಾಗಿ ಅವರು ಒಂದು ಪತ್ರವನ್ನು ಕೊಡಬೇಕಾಗಿತ್ತು. ನೀವು ಯೋಜನೆಯನ್ನು ಕೈಗೆತ್ತಿಕೊಳ್ಳಿ, ನಮ್ಮ ಪಾಲಿನ ಹಣವನ್ನು ಕಂತಿನಲ್ಲಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಡುತ್ತೇವೆ ಅಥವಾ ನಂತರ ಕೊಡುತ್ತೇವೆ ಎಂದು commitment letter ಅನ್ನು ಕೊಟ್ಟಿದ್ದರೂ ಕೂಡ ಆ ಯೋಜನೆ ಆಗುತ್ತಿತ್ತು ಎಂಬುದು ನಮ್ಮ ಭಾವನೆ. ಏಕೆ ನಾನು ಇದರ ಬಗ್ಗೆ ಪ್ರಸ್ತಾಪ ಮಾಡಿದೆ ಎಂಬುದನ್ನು ಹೇಳುತ್ತೇನೆ.

ಮಾನ್ಯ ಸಭಾಪತಿಯವರೇ, ಅಂದು ನಮಗೆ ಕೊಯ್ನಾ ಅಣೆಕಟ್ಟಿನಲ್ಲಿ ನೀರಾವರಿ ಆಗಿದ್ದರೆ ಇಂದು ನಮ್ಮ 193 ಹಳ್ಳಿಗಳು ಮುಳುಗಡೆ ಮಾಡುವಂತಹ ಪ್ರಸಂಗ ಬರುತ್ತಿರಲಿಲ್ಲ. 3,50,000 ಎಕರೆ ಭೂಮಿ ಮುಳುಗಡೆಯಾಗುವಂತಹ ಪ್ರಸಂಗ ಬರುತ್ತಿರಲಿಲ್ಲ. Flow irrigation ಆಗುತ್ತಿತ್ತು. Canal ಮೇಲೆ ನೀರು ಹರಿದು ಬಂದು ತಾಳಿಕೋಟೆಯವರೆಗೆ ನೀರಾವರಿಯಾಗಿ tail-off ಎಲ್ಲಿ ಆಗುತ್ತಿತ್ತೆಂದರೆ ತಾಳಿಕೋಟೆಯಿಂದ ಮುಂದೆ ಡೋಣಿಯಲ್ಲಿ ಆಗುತ್ತಿತ್ತು.ಅಲ್ಲಿಯವರೆವಿಗೂ ನೀರಾವರಿ ಆಗುತ್ತಿತ್ತು. ಬಹುಶಃ 50 ವರ್ಷಗಳು ದಾಟಿ ಹೋಗಿರುತ್ತಿತ್ತು. ನಾವು ಮಂಡ್ಯದವರಂತೆ ಶ್ರೀಮಂತರಾಗುತ್ತಿದ್ದೆವು ಎಂಬುದು ನನ್ನ ಆಸೆ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರು ಪೀಠವನ್ನು ಅಲಂಕರಿಸಿದರು)**

ಆಗ ತಪ್ಪಿದ್ದಕ್ಕೆ ನಾವು ಯಾರನ್ನು ಹೊಣೆಗಾರರನ್ನಾಗಿ ಮಾಡುವುದು? ಕೇಂದ್ರದಲ್ಲಿಯೂ ಕಾಂಗ್ರೆಸ್ ಸರ್ಕಾರವಿತ್ತು. ಮುಂಬೈ ಪ್ರಾಂತ್ಯದಲ್ಲಿಯೂ ಕಾಂಗ್ರೆಸ್ ಸರ್ಕಾರವಿತ್ತು. ಮೈಸೂರು ಪ್ರಾಂತ್ಯದಲ್ಲಿಯೂ ಕಾಂಗ್ರೆಸ್ ಸರ್ಕಾರವಿತ್ತು. ಎಲ್ಲರೂ ದೊಡ್ಡ ಮನಸ್ಸು ಮಾಡಿ ಮಾತನಾಡಿಕೊಂಡು ಯೋಜನೆಯನ್ನು ಕಾರ್ಯರೂಪಗೊಳಿಸಿದ್ದರೆ, ಒಂದು ಮಾತೃಕತೆಯ ಮೂಲಕ ಮುಗಿದು ಹೋಗುತ್ತಿತ್ತು. ಆದರೆ ಮಾಡಲಿಲ್ಲ ಎನ್ನುವ ಕೊರಗು ಇಂದಿಗೂ ನಮ್ಮನ್ನು ಕಾಡುತ್ತದೆ.

(ಮುಂದು)

**(1311) 23-12-2021, 5.40 ಕೆಜಿ – ಬಿಎನ್‌ಎಸ್ (ವೈಸ್‌ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಗೋವಿಂದ ಎಂ.ಕಾರಜೋಳ (ಮುಂದು):**

ಇವತ್ತು ಅವರು ಯಾರು ಇಲ್ಲ. ನಾವು ಯಾರನ್ನು ದೂಷಿಸುವುದಕ್ಕೆ ಆಗುವುದಿಲ್ಲ. ನಮ್ಮ ಕಣ್ಣು ಮುಂದೆ ಅವರು ಯಾರು ಇಲ್ಲ. ನಮ್ಮ ಯಜಮಾನರಾದ ಮತ್ತು ನಮ್ಮರಾದ ಶ್ರೀ ಉಜರೆಯವರು 1952 ರಲ್ಲಿ ಎಂ.ಎಲ್.ಎ, ಆಗಿದ್ದರು. ಅವರೂ ಸಹ ಇವತ್ತು ನಮ್ಮ ಕುಟುಂಬದ ಜೊತೆಯಲ್ಲಿ ಇಲ್ಲ. ಅದಕ್ಕೆ ನಾನು ಇಲ್ಲಿ ಯಾರನ್ನು ದೂಷಿಸುವಂತಹ ಪ್ರಸಂಗ ಇಲ್ಲಿ ಇಲ್ಲ. ಆದರೆ, ನಮಗೆ ಆಗಿರುವಂತಹ ನೋವು ಮತ್ತು ಅನ್ಯಾಯವನ್ನು ಈ ಸದನದ ಮುಂದೆ ಬಿಚ್ಚಿಡುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇನೆ. ಇದನ್ನು ಏಕೆ ಮಾಡುತ್ತಿದ್ದೇನೆಂದರೆ, ನೀರಾವರಿ ಯೋಜನೆಗಳ ಬಗ್ಗೆ ಮೇಲ್ಮನೆ ಮತ್ತು ಕೆಳಮನೆಯ ಸದಸ್ಯರೆಲ್ಲರೂ ಸಹ ಬಹಳ ಕಳಕಳಿಯಿಂದ ಮಾತನಾಡಿದ್ದಾರೆ. ಅವತ್ತು ನೀರಾವರಿ ಯೋಜನೆಗಳನ್ನು ಕೊಡಲಿಲ್ಲ. ನಂತರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಮ್ಮ ಯೋಜನೆಯನ್ನು ನಾವೇ ಮಾಡಿಕೊಳ್ಳಬೇಕೆಂದು ದಿನಾಂಕ 22-5-1964 ರಂದು ಹಿಂದಿನ ಪ್ರಧಾನ ಮಂತ್ರಿಗಳಾಗಿದ್ದ ದಿವಂಗತ ಲಾಲ್‌ಬಹದ್ದೂರ್ ಶಾಸ್ತ್ರೀರವರನ್ನು ಕರೆದು ಅಡಿಗಲ್ಲು ಹಾಕಿಸುವಂತಹ ಕೆಲಸವನ್ನು ಮಾಡಿದರು. ಶ್ರೀಮತಿ ಇಂದಿರಾ ಗಾಂಧಿಯವರನ್ನು ಮತ್ತು ಶ್ರೀ ನಿಜಲಿಂಗಪ್ಪನವರನ್ನು ಕರೆದು ಅವರ ತೂಕದಷ್ಟು ಬಂಗಾರ ಕೊಟ್ಟಿರುವುದನ್ನು ಮಾನ್ಯ ವಿರೋಧ ಪಕ್ಷದ ನಾಯಕರಾದ ಎಸ್.ಆರ್.ಪಾಟೀಲ್‌ರವರು ಹೇಳಿದರು. ಎಸ್.ಆರ್.ಪಾಟೀಲ್‌ರವರು ಶ್ರೀಮಂತ ಕುಟುಂಬದವರು. ಅವರು ಗೌಡ ಮನೆತನದವರು. ಅವರ ಮನೆಯಲ್ಲಿ ಬಂಗಾರದ ಆಭರಣಗಳು ಹೆಚ್ಚಾಗಿ ಇರುತ್ತಿದ್ದವು. ಈಗ ಸಭಾಪತಿಗಳಾಗಿರುವಂತಹ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ತಾಯಿಯವರು ಆ ಸಂದರ್ಭದಲ್ಲಿ ಅವರ ಕೈಯಲ್ಲಿನ ಬಳೆಗಳನ್ನು ತೆಗೆದು ತೂಕಕ್ಕೆ ಹಾಕಿದ್ದರು ಎಂದು ನಮ್ಮ ಕಡೆಯ ಜನರು ಹೇಳುತ್ತಿದ್ದರು. ಆ ಸಂದರ್ಭದಲ್ಲಿ ಹಳ್ಳಿ ಹಳ್ಳಿಗಳನ್ನು ಸುತ್ತಾಡಿ ಬಂಗಾರದ ಆಭರಣಗಳನ್ನು ಸಂಗ್ರಹಣೆ ಮಾಡಿದ್ದರು. ಏಕೆಂದರೆ, ಶ್ರೀಮತಿ ಇಂದಿರಾ ಗಾಂಧಿಯವರ ಮತ್ತು ಶ್ರೀ ನಿಜಲಿಂಗಪ್ಪನವರ ತೂಕದಷ್ಟು ನಮ್ಮ ಕಡೆಯವರು ಬಂಗಾರ ಕೊಟ್ಟು, ಇಡೀ ನಮ್ಮ ಅಖಂಡ ಜಿಲ್ಲೆಯ ಜನರು ನಮಗೆ ನೀರಾವರಿ ಯೋಜನೆ ಮಾಡಿಕೊಡಿ ಎಂಬ ಒಂದು ಮಾತನ್ನು ಕೇಳುತ್ತಿದ್ದರು. ಏಕೆಂದರೆ, ಇದು ಬರಗಾಲಕ್ಕೆ ತುತ್ತಾಗುವಂತಹ ಜಿಲ್ಲೆ. ಬಹುಶಃ ರಾಜ್ಯದ ಯಾವುದೇ ಜಿಲ್ಲೆಯಲ್ಲಿ 'ಬರಗಾಲ ನಿವಾರಣಾ ಸಮಿತಿ' ಬ್ರಿಟಿಷರ ಆಡಳಿತದಲ್ಲಿ open ಆಗಿಲ್ಲ. ಆದರೆ, ಬಿಜಾಪುರದಲ್ಲಿ Anti Famine Institute ಎಂದು ಇದೆ. ಬ್ರಿಟಿಷರು ಬರಗಾಲ ಬಂದಂತಹ ಸಂದರ್ಭದಲ್ಲಿ 'ಬರಗಾಲ ನಿವಾರಣಾ ಸಂಸ್ಥೆಯನ್ನು ಕಟ್ಟಿದ್ದಾರೆ. ಅದು ಬಿಜಾಪುರದಲ್ಲಿ ಶ್ರೀ ಬೀಚಿರವರ ಮನೆ ಮುಂದೆ ಇದೆ. ಅದು ದೊಡ್ಡ ಬಿಲ್ಡಿಂಗ್. Old I.B., ಮತ್ತು ಅದು ಎರಡೂ ಕೂಡಿ ಇದೆ. ಅದನ್ನು ಬಹುಶಃ ನಮ್ಮ ಜಿಲ್ಲೆಯಲ್ಲಿ ಬಿಟ್ಟು ಬೇರೆ ಎಲ್ಲಿಯೂ ಮಾಡಿಲ್ಲ. ಬಿಜಾಪುರದಲ್ಲಿ ಒಂದೇ ಒಂದು ಕಡೆ ಮಾಡಿದ್ದಾರೆ. ಅದಕ್ಕೆ ಕಾರಣ ಏನೆಂದರೆ, ಬರಗಾಲಕ್ಕೆ ಪದೇ ಪದೇ ತುತ್ತಾಗಿ ಜನರು ಗುಳೆ ಹೋಗುತ್ತಿದ್ದರು. Karadಗೆ, ಪುಣೆಗೆ, ಮುಂಬೈಗೆ, ಕೊಲ್ಹಾಪುರಕ್ಕೆ ಮತ್ತು ಗೋವಾಕ್ಕೆ ಹೋಗುತ್ತಿದ್ದರು. ಇತ್ತೀಚೆಗೆ, ಮೈಸೂರಿಗೆ, ಮಂಗಳೂರಿಗೆ ಮತ್ತು ಬೆಂಗಳೂರಿಗೆ ಹೋಗುವಂತಹದ್ದು ಜಾಸ್ತಿಯಾಗಿದೆ.

ಮಾನ್ಯ ಹರಿಪ್ರಸಾದ್‌ರವರೇ, ನಾವು ಚಿಕ್ಕವರಿದ್ದಾಗ, ವ್ಯಾಸಂಗ ಮಾಡುತ್ತಿದ್ದಂತಹ ಸಂದರ್ಭದಲ್ಲಿ ತಾಂಡ್ಯಾಗಳಿಗೆ ಬೀಗಗಳನ್ನು ಹಾಕುತ್ತಿದ್ದರು. ಇದು ರಾಥೋಡ್‌ರವರಿಗೆ ಗೊತ್ತಿಲ್ಲ. ಅವರು ಆಗ ಹುಟ್ಟಿರಲಿಲ್ಲ. ನಮಗೆ ರಾಥೋಡ್‌ರವರ ತಂದೆಯವರು ಗೊತ್ತಿದ್ದರು. ಹರಿಜನ ಕೇರಿಗಳಿಗೆಲ್ಲಾ ಬೀಗಗಳನ್ನು ಹಾಕುತ್ತಿದ್ದರು. ಆ ಮನೆಗಳಲ್ಲಿ ವಯಸ್ಸಾದ 70 ರಿಂದ 80 ವರ್ಷದ ಮುದುಕರನ್ನು ಬಿಟ್ಟು ಸುಮಾರು 6 ರಿಂದ 9 ತಿಂಗಳ ಕಾಲ ಗುಳೆ ಹೋಗುತ್ತಿದ್ದರು. ಎಲ್ಲಾ ಮಕ್ಕಳನ್ನು ಕರೆದುಕೊಂಡು ಹೋಗುತ್ತಿದ್ದರು. ಇಂತಹ ಕೆಟ್ಟ ಪರಿಸ್ಥಿತಿಯಲ್ಲಿ ಇದ್ದೆವು. ಅದಕ್ಕಾಗಿ ನಮ್ಮ ಜಿಲ್ಲೆಯವರು 'ನೀರಾವರಿ ಯೋಜನೆಗಳು' ಆಗಬೇಕೆಂದು ಹಂಬಲಿಸುತ್ತಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೇ, ಇದನ್ನು ಇಲ್ಲಿಗೆ ನಿಲ್ಲಿಸುತ್ತೇನೆ. ಏಕೆಂದರೆ, ಅದು ಒಂದು ಇತಿಹಾಸ. ನಾವು ಯಾರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದರೂ ಸಹ, ಅದು ನಮ್ಮ ಸಮಸ್ಯೆಗೆ ಪರಿಹಾರ ಆಗುವುದಿಲ್ಲ. ನಾನೀಗ 1956ನೇ ಇಸವಿಯಿಂದ 2010ನೇ ಸಾಲಿಗೆ ಬರುತ್ತೇನೆ. 1964 ರಲ್ಲಿ ಅಡಿಗಲ್ಲು ಹಾಕಿದ್ದ ಅಂದಿನ ಯೋಜನಾ ವೆಚ್ಚ 58 ಕೋಟಿ 20 ಲಕ್ಷ ರೂಪಾಯಿಗಳು ಇತ್ತು. ಅದಾದ ನಂತರ 1978 ರಲ್ಲಿ ಯೋಜನಾ ವೆಚ್ಚ 244 ಕೋಟಿ ರೂಪಾಯಿಗಳಿಗೆ ಪರಿಷ್ಕರಣೆಯಾಗುತ್ತದೆ. ನಂತರ ಮತ್ತೊಮ್ಮೆ 1989 ರಲ್ಲಿ 791 ಕೋಟಿ ರೂಪಾಯಿಗಳಿಗೆ ಪರಿಷ್ಕರಣೆಯಾಗುತ್ತದೆ. ಇದಾದ ನಂತರ 'ಬಚಾವತ್ ತೀರ್ಪು' ಅಂದರೆ, Krishna Water Disputes Tribunal-1 (ನ್ಯಾಯಾಧೀಕರಣ-1) ರಲ್ಲಿ ನಮಗೆ ಸಿಕ್ಕಂತಹ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ನಮಗೆ 1976 ರಲ್ಲಿಯೇ award ಆದರೂ ಸಹ, ನಾವು 2000 ನೇ ಸಾಲಿನವರೆಗೂ ಪೂರ್ಣ ಪ್ರಮಾಣದಲ್ಲಿ ಉಪಯೋಗ ಮಾಡಿಕೊಳ್ಳುವುದಕ್ಕೆ ಆಗಲಿಲ್ಲ. ಯೋಜನೆಗಳಿಗೆ allocation ಮಾಡಿದೇವು. ಆದರೆ, ಆ ಯೋಜನೆಗಳಿಗೆ ಹಣವನ್ನು ಹೊಡುವುದಕ್ಕೆ ಆಗಲಿಲ್ಲ. ಅದರ ಮಧ್ಯದಲ್ಲಿ ಹೇಗೋ ದಾಟಿದೇವು ಎನ್ನುವಷ್ಟರಲ್ಲಿ ´ಕೃಷ್ಣಾ ನ್ಯಾಯಾಧೀಕರಣ-II, ನ್ಯಾಯಮೂರ್ತಿ ಶ್ರೀ ಬ್ರಿಜೇಶ್ ಕುಮಾರ್‌ರವರ ತೀರ್ಪು ಬಂತು. 2010 ರಲ್ಲಿ ತೀರ್ಪನ್ನು ಘೋಷಣೆ ಮಾಡಿದರು. ಆದರೆ, finally, ಶ್ರೀ ಬ್ರಿಜೇಶ್ ಕುಮಾರ್‌ರವರ ತೀರ್ಪು, ನ್ಯಾಯಾಧೀಕರಣದ award ದಿನಾಂಕ 29-11-2013 ರಂದು ಬಂತು. ಇದು ಬಂದಮೇಲೆ, 2010 ರಲ್ಲಿ ತೀರ್ಪನ್ನು ಘೋಷಣೆ ಮಾಡಿದ್ದರು, ಇನ್ನೂ final award ಬಂದಿರಲಿಲ್ಲ. ಆಗ ಶ್ರೀ ಸದಾನಂದ ಗೌಡರವರ ಮತ್ತು ಶ್ರೀ ಜಗದೀಶ್ ಶೆಟ್ಟರ್‌ರವರ ನಮ್ಮ ಸರ್ಕಾರಗಳು ಇದ್ದವು. ಆ ಸಂದರ್ಭದಲ್ಲಿ ಇಬ್ಬರು ಮುಖ್ಯಮಂತ್ರಿಗಳು ಬಂದು ಹೋದರು. Immediately, ಈ ಇಬ್ಬರು ಪ್ರಯತ್ನಮಾಡಿ 17 ಸಾವಿರದ 207 ಕೋಟಿ ರೂಪಾಯಿಗಳಿಗೆ ಕ್ರಿಯಾ ಯೋಜನೆಯನ್ನು ತಯಾರಿಸಿ, ಅದನ್ನು ಸಂಪುಟ ಸಭೆಗೆ ಮಂಡಿಸಿ ಅದಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ಪಡೆದುಕೊಂಡರು. ನಾವು ಕೊಡಲೇ rehabilitation and resettlement (R&R) ಗೆ works ಆರಂಭ ಮಾಡಬೇಕಾಗಿತ್ತು. ಏಕೆ R&R ಗೆ ಸೀಮಿತ ಮಾಡಿದ್ದೆವು ಎಂದರೆ, ಅಷ್ಟೋತ್ತಿಗೆ ಆಂಧ್ರ ಪ್ರದೇಶದವರು ಮತ್ತು ಮಹಾರಾಷ್ಟ್ರ ರಾಜ್ಯದವರು ನೀರಿನ ಹಂಚಿಕೆಯಲ್ಲಿ ಅವರಿಗೆ ಅನ್ಯಾಯವಾಗಿದೆಯೆಂದು Supreme Court ಮೆಟ್ಟಿಲನ್ನು ಹತ್ತಿದರು. ನಾವು ಸಹ, ನಮಗೆ ಇನ್ನೂ ನೀರು ಹೆಚ್ಚಿಗೆ ಬರಬೇಕೆನ್ನುವ ಕಾರಣಕ್ಕಾಗಿ Supreme Court ಮೆಟ್ಟಿಲನ್ನು ಹತ್ತಿದೇವು. ಹೀಗಾಗಿ, gazette notification ಆಗಲಿಲ್ಲ. ಆದರೂ ಸಹ, ಚಿಂತೆ ಇಲ್ಲ. Gazette notification ಆಗುವುದರೊಳಗಾಗಿ ಒಂದು ಲಕ್ಷದ ಮೂವತ್ತ ಮೂರು ಸಾವಿರ ಎಕರೆ ಭೂಮಿಯನ್ನು ಕಳೆದುಕೊಂಡು ಮುಳುಗಡೆಯಾಗತಕ್ಕದ್ದು ಮತ್ತು rehabilitation ಗೆ ಬೇಕಾಗಿರುವಂತಹದ್ದಕ್ಕೆ ತೆಗೆದುಕೊಳ್ಳಬೇಕಾಗಿರುವುದು ಹಾಗೂ canal network ಗೆ ಬೇಕಾಗಿರುವಂಥದ್ದು , ಆ ಕೆಲಸ ಪ್ರಾರಂಭ ಮಾಡುವ ಮುನ್ನ, rehabilitation centre ಗೆ 6,437 ಎಕರೆ ಜಮೀನು ಬೇಕಾಗುತ್ತದೆ. ನಾವು ಅದನ್ನು ಮಾಡಬೇಕಾಗಿದೆ. ಇದಾದ ನಂತರ ಸುಮಾರು 19 ಸಾವಿರ ಕೋಟಿಗಳಷ್ಟು canal network ಗೆ ಬೇಕಾಗುತ್ತದೆ. ಇದಲ್ಲದೇ, 75 ಸಾವಿರ ಎಕರೆ ಭೂಮಿ ಮುಳುಗಡೆಯಾಗುವಂಥದ್ದಕ್ಕೆ ಪರಿಹಾರವನ್ನು ಕೊಡಬೇಕಾಗುತ್ತದೆ.

20 ಹಳ್ಳಿಗಳು ಸಂಪೂರ್ಣವಾಗಿ ನೀರಿನಲ್ಲಿ ಮುಳುಗಿ, ತೊಟ್ಟ ಬಟ್ಟೆಯಲ್ಲಿ ಮನೆಯಿಂದ ಹೊರಗೆ ಬರುವಂತಹವರಿಗೆ ಪರಿಹಾರ ಕೊಟ್ಟು ಪುನರ್ವಸತಿಯನ್ನು ಕಲ್ಪಿಸಬೇಕಾಗುತ್ತದೆ. ಇದೆಲ್ಲದಕ್ಕೂ 17 ಸಾವಿರದ 207 ಕೋಟಿ ರೂಪಾಯಿಗಳ ಒಂದು ಅಂದಾಜನ್ನು ತಯಾರಿಸಿ ಒಪ್ಪಿಗೆಯನ್ನು ಪಡೆದು ಕೊಟ್ಟೆವು. 2013 ರಲ್ಲಿ "ಕಾಂಗ್ರೆಸ್ ನಡೆ ಕೃಷ್ಣಾ ಕಡೆಗೆ" ಬಂತು.

ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಒಂದು ಪಾದಯಾತ್ರೆ ಬಂತು. ಅದೊಂದು ರೀತಿಯಲ್ಲಿ ರಾಜಕೀಯ ಪಕ್ಷಗಳ ನಡೆ. ಬಹುಶಃ ನಾವು ಆ ಕಡೆಗೆ ಇದಿದ್ದರೆ, ಮಾಡುತ್ತಿದ್ದೇವೇನೋ ಗೊತ್ತಿಲ್ಲ. ಆದರೆ, ನಾವು ಆಡಳಿತ ಪಕ್ಷದಲ್ಲಿ ಇದ್ದೆವು, ಅವರು ವಿರೋಧ ಪಕ್ಷದಲ್ಲಿದ್ದರು. ಆಗ ಅವರು ಸರ್ಕಾರಕ್ಕೆ ಮುಂದಾಲೋಚನೆ ಇಲ್ಲ. ಅವರು ಯಾವುದೇ ಕೆಲಸ-ಕಾರ್ಯಗಳನ್ನು ಮಾಡಲಿಲ್ಲ. ಅವರಿಗೆ ಪುನರ್ವಸತಿ ಬಗ್ಗೆ ಕಾಳಜಿ ಇರಲಿಲ್ಲ ಎನ್ನುವಂತಹ ವಿಚಾರಗಳಿಂದ "ಕಾಂಗ್ರೆಸ್ ನಡೆ ಕೃಷ್ಣಾ ಕಡೆಗೆ" ಎಂದು ಹೇಳಿದರು. Final award ದಿನಾಂಕ 29.11. 2013 ರಂದು ಬಂತು. ಅದಕ್ಕೆ ಅವರು ನಮ್ಮನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದಕ್ಕೆ ಹೊರಟರು.

ಮಾನ್ಯ ಸಭಾಪತಿಯವರೇ, ನಾನು ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯ ಕೆಲವು ಭಾಗವನ್ನು ಮಾತ್ರ ಓದುತ್ತೇನೆ. ನಾನು ಹೆಚ್ಚಿಗೆ ಓದುವುದಿಲ್ಲ. ಎಲ್ಲವನ್ನು ಓದುವುದಿಲ್ಲ. ಇದು ಬಹಳ ಹೆಚ್ಚಿಗೆ ಇದೆ. ಎಲ್ಲವನ್ನು ಓದಲಿಕ್ಕೆ ಆಗುವುದಿಲ್ಲ. ದಿನಾಂಕ 07-01-2013 ರಂದು, ಆಗ ಶ್ರೀ ಹರಿಪ್ರಸಾದ್‌ರವರು ಇಲ್ಲಿ ಇರಲಿಲ್ಲ. ಅವರು ದೆಹಲಿಯಲ್ಲಿದ್ದರು. ಹೊಸಪೇಟೆಯಿಂದ ಕೂಡಲಸಂಗಮದವರೆಗೆ ಪಾದಯಾತ್ರೆ ಪ್ರಾರಂಭ ಮಾಡಿದರು. ಇದಕ್ಕೆ ಬಹಳ ದೊಡ್ಡ ಸಂಖ್ಯೆಯಲ್ಲಿ ಜನರು ಸೇರುತ್ತಾರೆ. ಕೊಪ್ಪಳದಲ್ಲಿ ಸಭೆ ಮಾಡಿ ಅಲ್ಲಿಂದ ಪಾದಯಾತ್ರೆ ಬರುತ್ತಾರೆ. ಅದನ್ನು ದಿನಾಂಕ 14-01-2013 ಕ್ಕೆ ಏಕೆ ಇಟ್ಟುಕೊಂಡರೆಂದರೆ, ನಮ್ಮ ಕಡೆ ಜನವರಿ, 14ಕ್ಕೆ ಬರುವ **"ಸಂಕ್ರಮಣ ಬಹಳ ದೊಡ್ಡ ಹಬ್ಬವಾಗಿದೆ**". ಅದು fixed date. ಆ date ಹೆಚ್ಚು ಕಡಿಮೆ ಆಗುವುದಿಲ್ಲ. 'ಸಂಕ್ರಮಣ' ಎಂದರೆ, ಸುಗ್ಗಿಕಾಲ ಮತ್ತು ಶುಭಕಾಲ ಆಗಿರುತ್ತದೆ. ಅದಕ್ಕೆ ಉತ್ತರ ಕರ್ನಾಟಕದ ಜನರು ಒಳ್ಳೆಯ ಕೆಲಸವನ್ನು ಸಂಕ್ರಮಣದ ಮೂಹರ್ತದಲ್ಲಿ ಮಾಡುತ್ತಾರೆ. ಅದಕ್ಕೆ ಅವರು ಉತ್ತಮ ಮೂಹರ್ತವನ್ನು ಹುಡುಕಿ ಕೂಡಲಸಂಗಮದಲ್ಲಿ ಭಾಷಣ ಮಾಡಿದರು.

(ಮುಂದು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(1312) 23-12-2021 (5.50) ಎಂವಿ-ಬಿಎನ್‌ಎಸ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಗೋವಿಂದ ಎಂ. ಕಾರಜೋಳ (ಮುಂದು):-**

ಅವರು ನಮ್ಮನ್ನು ಬಿಜೆಪಿಯವರು ಏನೂ ಮಾಡಲಿಲ್ಲ ಮತ್ತು ಇವರಿಗೆ ಮುಂದಾಲೋಚನೆ ಇರಲಿಲ್ಲ, ನ್ಯಾಯಮೂರ್ತಿ ಬ್ರಿಜೇಶ್ ಕುಮಾರ್ ಆಲಮಟ್ಟಿ ಡ್ಯಾಂಗೆ 130 ಟಿಎಂಸಿ ನೀರನ್ನು ಕೊಟ್ಟಿದ್ದರು. ಈಗ 174 ಟಿಎಂಸಿ ನೀರನ್ನು ಹಂಚಿಕೆ ಮಾಡಿದರೂ ಕೂಡ, ಮುಂದಾಲೋಚನೆ ಇಲ್ಲದ ಸರ್ಕಾರ, ಇದೊಂದು ದರಿದ್ರ ಸರ್ಕಾರ, ಇವರು ಏನೂ ಮಾಡಿಲ್ಲ. ಅದಕ್ಕಾಗಿ ನಮಗೆ ಒಂದು ಅವಕಾಶ ನೀಡಿ. ನಮ್ಮಗೆ ಸಹಕಾರ ನೀಡಿದರೆ, ನಾವು ಬಂದು ನಿಮ್ಮನ್ನು ಉದ್ಧಾರ ಮಾಡುತ್ತೇವೆಂದು, ಅವರು ಭಾಷಣ ಮಾಡಿದರು. ನಾನು ಅವರ ಪ್ರಣಾಳಿಕೆಯ ಒಂದು ಪ್ಯಾರಾವನ್ನು ಓದುತ್ತೇನೆ; ಕೃಷ್ಣಾ ಜಲವಿವಾದ ನ್ಯಾಯಾಧೀಕರಣ, ನ್ಯಾಯಮೂರ್ತಿ ಬ್ರಿಜೇಶ್ ಕುಮಾರ್ ಆಯೋಗವು ಕರ್ನಾಟಕದ ಪಾಲಿಗೆ ಹಂಚಿಕೆ ಮಾಡಿರುವ 177 ಟಿಎಂಸಿ ನೀರನ್ನು ಸಂಪೂರ್ಣವಾಗಿ ಬಳಕೆ ಮಾಡಿಕೊಳ್ಳಲು ಸರ್ಕಾರ ಯಾವುದೇ ದೂರದೃಷ್ಟಿಯ ಕಾರ್ಯಕ್ರಮಗಳನ್ನು ರೂಪಿಸಿಲ್ಲ. ಆದುದರಿಂದ, ಈ ಭಾಗದ ರೈತರಿಗೆ ಮೂಗಿಗೆ ತುಪ್ಪ ಸವರುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ರಾಜ್ಯಕ್ಕೆ ಹಂಚಿಕೆಯಾದ ನೀರನ್ನು ಬಳಸಿಕೊಳ್ಳದೆ, ರೈತರಿಗೆ ದ್ರೋಹ ಮಾಡಿದ್ದಾರೆ. ಇದರಿಂದ, ಪ್ರಗತಿಯಲ್ಲಿರುವ ಕರ್ನಾಟಕ ಹಿಂದೆ ಬೀಳುವಂತೆ ಆಗಿದೆ. ತಮಗಾಗಿರುವ ಅನ್ಯಾಯವನ್ನು ಜನರ ಗಮನಕ್ಕೆ ತರುವುದು ವಿರೋಧ ಪಕ್ಷವಾದ ಕಾಂಗ್ರೆಸ್ ಪಕ್ಷದ ಜವಾಬ್ದಾರಿ ಎಂದು ಭಾವಿಸಿ, 'ಕಾಂಗ್ರೆಸ್ ನಡಿಗೆ, ಕೃಷ್ಣೆಯ ಕಡೆಗೆ' ಎಂದು ಹೇಳಿ ಭಾಷಣ ಮಾಡಿದರು. ನಾನು ಇದನ್ನು ಪೂರ್ಣ ಓದುವುದಿಲ್ಲ. ಏಕೆಂದರೆ, ಇದಕ್ಕೆ ಬಹಳ ಸಮಯ ಹಿಡಿಯುತ್ತದೆ. ಅವರು ಮುಂದುವರೆದು ಏನು ಹೇಳುತ್ತಾರೆಂದರೆ, "ನಾನು ಮಾನ್ಯ ಹೆಚ್.ಕೆ.ಪಾಟೀಲರಿಗೆ ಧನ್ಯವಾದ ಹೇಳುತ್ತೇನೆ. ಅವರು ವರ್ಷಕ್ಕೆ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದರ ಮೂಲಕ, ನಾವು ಐದು ವರ್ಷಗಳಲ್ಲಿ ಹಸಿರು ಕರ್ನಾಟಕವನ್ನಾಗಿ ಮಾಡಲು ಬದ್ಧರು" ಎಂದು ಇದು ಕೇವಲ ಭರವಸೆಯಲ್ಲ. ಇದು ನಮ್ಮ ಪ್ರತಿಜ್ಞೆ ಎಂದು ಹೇಳುತ್ತಾರೆ. ಕೂಡಲಸಂಗಮನಾಥನ ಮೇಲೆ ಆಣೆ ಮಾಡಿ ಹೇಳುತ್ತೇವೆ ಎಂದರು. ಇದು ಕೇವಲ ನಮ್ಮ ಭರವಸೆಗಳಲ್ಲ. ಇದು ನಮ್ಮ ಪ್ರತಿಜ್ಞೆ. ನಿಮ್ಮ ಸಹಕಾರವಿದ್ದರೆ, ಕರ್ನಾಟಕವನ್ನು ಹಸಿರು ಕರ್ನಾಟಕ ಮಾಡುವ ಬದ್ಧತೆಯನ್ನು ಪ್ರದರ್ಶಿಸುತ್ತೇವೆಂದು ಹೇಳುತ್ತಾರೆ. ಅವರು ಬಹಳಷ್ಟು ಹೇಳಿದ್ದಾರೆ. ನಾನು ಅದಕ್ಕೆಲ್ಲಾ ಹೋಗುವುದಿಲ್ಲ. ಏಕೆಂದರೆ, ನಾನು ಅದರ ಅವಶ್ಯಕತೆ ಇಲ್ಲವೆಂದು ಭಾವಿಸುತ್ತೇನೆ. ಅವರು ಹೇಳಿದಂತೆ ಐದು ವರ್ಷದಲ್ಲಿ ಮಾಡಿದ್ದು ಏನು? ಅದನ್ನು ಸಹ ತಮಗೆ ತಿಳಿಸಿಬಿಡುತ್ತೇನೆ. 2013-14ರಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂತು. ಮಾನ್ಯ ಸಿದ್ದರಾಮಯ್ಯನವರು ರಾಜ್ಯದ ಮುಖ್ಯಮಂತ್ರಿಗಳಾದರು. ನಮ್ಮ ಜಿಲ್ಲೆಯವರೇ ಆದ ಮಾನ್ಯ ಎಂ.ಬಿ.ಪಾಟೀಲರು ನೀರಾವರಿ ಸಚಿವರಾದರು. ಅವರು ಮಾಡಬೇಕಾಗಿದ್ದು ಏನೆಂದರೆ, detailed project report approval ಆಗಿರುವಂತಹ 17,207 ಕೋಟಿ ರೂಪಾಯಿಗಳ ಕೆಲಸವನ್ನು ಪ್ರಾರಂಭ ಮಾಡಿದ್ದರೆ. ಬಹುಶಃ ಇವತ್ತು ಇದಕ್ಕೆ 80 ಸಾವಿರ ಕೋಟಿ ರೂಪಾಯಿ ಅಥವಾ 90 ಸಾವಿರ ಕೋಟಿ ರೂಪಾಯಿಗಳಷ್ಟು ಹಣ ಬೇಕಾಗುತ್ತಿರಲಿಲ್ಲ. ಅವರು

2013ರಿಂದ 2018-19ರವರೆಗೆ ಅದರಲ್ಲಿ ಒಂದು ವರ್ಷ ಜೆಡಿ(ಎಸ್) ಸರ್ಕಾರದ ಪಾಲು ಸೇರಿ rehabilitation and resettlement (R & R) ಗೆ 2,675 ಕೋಟಿ ರೂಪಾಯಿಗಳು ಖರ್ಚು ಮಾಡಿದ್ದಾರೆ. ನ್ಯಾಯಮೂರ್ತಿ ಬ್ರಿಜೇಶ್ ಕುಮಾರ್ ರವರ ನೇತೃತ್ವದ ಟ್ರಿಬ್ಯೂನಲ್‌ನಲ್ಲಿ ಹಂಚಿಕೆಯಾಗಿದ್ದಂತಹ ನೀರನ್ನು ಬಳಕೆ ಮಾಡಿಕೊಳ್ಳುವುದಕ್ಕೆ ಒಟ್ಟಾರೆ ಅವರು ಮೂರನೇ ಹಂತದ ಕಾಮಗಾರಿಗಳಿಗೆ ಎಷ್ಟು ಹಣ ಖರ್ಚು ಮಾಡಿದ್ದಾರೆಂದರೆ, ಈಗ ಒಂಬತ್ತು lift irrigation, ಉಪ ಯೋಜನೆಗಳು ಸೇರಿದಂತೆ ಅವರು ಖರ್ಚು ಮಾಡಿರುವುದು 7,728 ಕೋಟಿ ರೂಪಾಯಿಗಳು ಮಾತ್ರ. ನಾನು ಹೇಳುತ್ತಿರುವುದು ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಡೀ ರಾಜ್ಯದ ನೀರಾವರಿ ಯೋಜನೆಗಳಿಗೆ ವರ್ಷಕ್ಕೆ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿರುವುದು.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ನಮ್ಮ ಕಡೆಯವರು ಅವರು ಕುಳಿತುಕೊಂಡು ನಾನು ಹೇಳುವುದನ್ನು ಪೂರ್ತಿ ಕೇಳಿಸಿಕೊಳ್ಳಲಿ. ಅವರು ಈ ರೀತಿ ಏಕೆ ಮಾತನಾಡುತ್ತಾರೆ. ನಾನು ಇಲ್ಲಿ ರಾಜಕಾರಣ ಮಾತನಾಡುತ್ತಿಲ್ಲ. ನಾನು ಉತ್ತರ ನೀಡುತ್ತಿದ್ದೇನೆ. ಅವರು 17,200 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾದ ಜಾಗದಲ್ಲಿ, ಕೇವಲ 2,675 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಸುಮಾರು 26,108 ಎಕರೆ ಜಮೀನನ್ನು ಭೂಸ್ವಾಧೀನ ಮಾಡಿದ್ದಾರೆ. ಅದಕ್ಕೆ 2,075 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. R & R ಕೆಲಸಗಳಿಗೆ 600 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈ ಎರಡೂ ಸೇರಿ 2,675 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅವರು ಇದಕ್ಕೆ ಪ್ರತಿ ವರ್ಷ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಆಣೆ ಮಾಡಿದಂತಹವರು. ಅದು ಅಲ್ಲಿಗೆ ಮುಗಿದು ಹೋಯಿತು. ನಮ್ಮ ಸರ್ಕಾರ ಬಂದ ಮೇಲೆ ಏನು ಮಾಡಿದ್ದೇವು ಎಂಬುದನ್ನು ಸಹ ಹೇಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು confuse ಮಾಡುವುದು ಬೇಡ. ಆಗ ನಾನು ಪ್ರತಿಪಕ್ಷದ ನಾಯಕನಾಗಿದ್ದೆ. ನಾವು ಪ್ರತಿ ವರ್ಷ ಹತ್ತು ಸಾವಿರ ಕೋಟಿ ರೂಪಾಯಿಗಳಂತೆ ಐದು ವರ್ಷದಲ್ಲಿ ಐವತ್ತು ಸಾವಿರ ಕೋಟಿ ರೂಪಾಯಿಗಳನ್ನು ಈ ರಾಜ್ಯದ ನೀರಾವರಿ ಯೋಜನೆಗಳಿಗೆ ಖರ್ಚು ಮಾಡುತ್ತೇವೆಂದು ಹೇಳಿದ್ದೇವೆ. ನಾವು ಆ ರೀತಿ ಹೇಳಿದ ಹಾಗೆ, ಸುಮಾರು ಐವತ್ತೂರು ಸಾವಿರ ಕೋಟಿ ರೂಪಾಯಿಗಳಷ್ಟು ಹಣ ಖರ್ಚಾಗಿದೆ. ಮಾನ್ಯ ಸಚಿವರು ಅದರ ದಾಖಲೆಯನ್ನು ತೆಗೆದು ನೋಡಲಿ. ಆದರೆ, ಮಾನ್ಯ ಸಚಿವರು ಹೇಳಿದ ಹಾಗೆ, ಕೃಷ್ಣಾ ಮೇಲ್ದಂಡೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯೋಜನೆಗೆ ಇಷ್ಟು ಖರ್ಚಾಗಿರಬಹುದು. ಏಕೆಂದರೆ, ಕೇಂದ್ರ ಸರ್ಕಾರ ಇದಕ್ಕೆ ಸಂಬಂಧಿಸಿದಂತೆ ನೋಟಿಫಿಕೇಶನ್ ಮಾಡಲಿಲ್ಲ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ನಾನು ನನ್ನ ಉತ್ತರವನ್ನು ಮುಗಿಸಿಬಿಡುತ್ತೇನೆ. ಆ ನಂತರ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ...

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಕಾಶ್ ಕೆ. ರಾಥೋಡ್ ರವರನ್ನು ಕುಳಿತುಕೊಳ್ಳುವುದಕ್ಕೆ ಹೇಳಿ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಕೊಡಬೇಕಾದರೆ, ಅದು ಸರಿಯಾಗಿ ಇರಬೇಕಲ್ಲವೇ?

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯಸಚೇತಕರು):-** ಮಾನ್ಯ ಸಭಾಪತಿಯವರೇ, ಅವರು ಯಾವ ಪ್ರಣಾಳಿಕೆಯನ್ನು ಓದುತ್ತಿದ್ದಾರೆಂದು ಗೊತ್ತಿಲ್ಲ. ನಮ್ಮ ಪಕ್ಷದ ಪ್ರಣಾಳಿಕೆ ನಮ್ಮ ಬಳಿ ಇದೆ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ...

**ವೈಸ್ ಛೇರ್ಮನ್:-** ಮಾನ್ಯ ರಘುನಾಥ ರಾವ್ ಮಲ್ಕಾಪೂರೆಯವರೆ, ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಚಿವರೆ, ತಾವು ಉತ್ತರ ನೀಡಿ.

**ಶ್ರೀ ಪ್ರಕಾಶ್ ಕೆ. ರಾಥೋಡ್-** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೆ, ತಾವು ದಯವಿಟ್ಟು ಕುಳಿತುಕೊಳ್ಳಿ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಗೋವಿಂದ ಎಂ. ಕಾರಜೋಳ ಸಾಹೇಬರು ಹಿಂದೆ ಉಪ ಮುಖ್ಯಮಂತ್ರಿಗಳಾಗಿದ್ದಂತಹವರು. ಅವರು ತಮ್ಮ ಪಕ್ಷದಲ್ಲಿ ಮತ್ತು ರಾಜಕಾರಣದಲ್ಲಿ ಬಹಳ ಹಿರಿಯರು. ಮಾನ್ಯ ಸಚಿವರೆ, ಹೇಳಿದ ಹಾಗೆ ಮೂರು ದಿವಸಗಳ ಕಾಲ ಸುದೀರ್ಘವಾಗಿ ಉತ್ತರ ಕರ್ನಾಟಕದ ವಿಚಾರವಾಗಿ ಮಾತನಾಡಿದ್ದೇವೆಂದು. ನಾವು ಕೆಲಸವನ್ನು ಮಾಡಿದ್ದೇವೆಯೋ ಬಿಟ್ಟಿದ್ದೇವೆಯೋ ಅದು ಜನರಿಗೆ ಬಿಟ್ಟ ವಿಚಾರ. ನಾನು ಅವರ ಮೇಲೆ ಏನೂ ಅಪಾದನೆ ಮಾಡುತ್ತಿಲ್ಲ. ಈಗ ಇನ್ನು ಏನ್ನೇನು ಕೆಲಸ ಆಗಿಲ್ಲವೆಂದು ಇಷ್ಟು ಜನ ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ಅದಕ್ಕೆ ಉತ್ತರ ನೀಡಿದರೆ ಸಾಕು. ನಾವು ಕೆಲಸ ಮಾಡಿರುವುದು, ಕೆಲಸ ಮಾಡದೇ ಇರುವುದು, ಅದು ಜನರಿಗೆ ಬಿಟ್ಟ ತೀರ್ಮಾನ. ಆದುದರಿಂದ, ದಯವಿಟ್ಟು ಮಾನ್ಯ ಸಚಿವರು ಏನು ಮಾಡುತ್ತಾರೆ ಎಂಬುದನ್ನು ಹೇಳಿಬಿಟ್ಟರೆ, ನಾವು ಸಮಾಧಾನಕರವಾಗಿ ವಾಪಸ್ಸು ಹೋಗುತ್ತೇವೆ.

**(ಗೊಂದಲ)**

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಖಂಡಿತವಾಗಿ. ಆ ವಿಷಯಕ್ಕೆ ಬರಬೇಕಾದರೆ, ಅದರ ಹಿಂದಿನಿಂದ ಬರಬೇಕಾಗುತ್ತದೆ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ...

**ವೈಸ್ ಛೇರ್ಮನ್:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೆ, ನೀವು ಮಾತನಾಡುವುದಕ್ಕೆ ನಾನು ಅನುಮತಿಯನ್ನು ನೀಡಿಲ್ಲ. ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ...

**ವೈಸ್ ಛೇರ್ಮನ್:-** ಮಾನ್ಯ ನಸೀರ್ ಅಹ್ಮದ್‌ರವರೆ, ದಯವಿಟ್ಟು ತಾವು ಕುಳಿತುಕೊಳ್ಳಿ. ಯಾರೂ ಸಹ ಪೀಠದ ಅನುಮತಿ ಇಲ್ಲದೇ ಎದ್ದು ನಿಲ್ಲಬಾರದು ಮತ್ತು ಮಾತನಾಡಬಾರದು. ಮಾನ್ಯ ಸಚಿವರೆ, ತಾವು ಉತ್ತರವನ್ನು ಮುಂದುವರೆಸಿ. ಈಗ ಅನಗತ್ಯವಾಗಿ ಯಾರೂ intervene ಆಗಬಾರದು.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಅವರು ತುಂಬಾ ಅವಸರ ಮಾಡಿದರು. ನಾನು ನಮ್ಮ ಪಕ್ಷದ ಬಗ್ಗೆಯೂ ಸಹ ಹೇಳುತ್ತೇನೆಂದು ಹೇಳಿದೆ. ಈಗ ವಿರೋಧ ಪಕ್ಷದವರ ಬಗ್ಗೆ ಮಾತನಾಡಿ, ಈಗ ನಮ್ಮ ಪಕ್ಷದ ಬಗ್ಗೆ ಮಾತನಾಡುವುದಕ್ಕೆ ಬರುತ್ತೇನೆ. ಈಗ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮತ್ತು ಮಾನ್ಯ ಬಸವರಾಜ ಬೊಮ್ಮಾಯಿಯವರನ್ನು ಈ ಇಬ್ಬರನ್ನು

ಸೇರಿಸಿಕೊಂಡಂತೆ ನಮ್ಮ ಸರ್ಕಾರ ಎರಡು ವರ್ಷ ಐದು ತಿಂಗಳ ಸರ್ಕಾರ. ಇದುವರೆಗೆ ಇದಕ್ಕೆ ನಮ್ಮ ಸರ್ಕಾರ ಖರ್ಚು ಮಾಡಿರುವುದು ಎಷ್ಟು ಹಣವೆಂದರೆ, ಸುಮಾರು 4,050 ಕೋಟಿ ರೂಪಾಯಿಗಳು.

**ಶ್ರೀ ಅಲ್ಲಂ ವೀರಭದ್ರಪ್ಪ:-** ಮಾನ್ಯ ಸಭಾಪತಿಯವರೇ, ...

**ವೈಸ್ ಛೇರ್ಮನ್:-** ಮಾನ್ಯ ಅಲ್ಲಂ ವೀರಭದ್ರಪ್ಪನವರೆ, ತಾವು ಹಿರಿಯರು, ಮಾನ್ಯ ಸಚಿವರು ಹೇಳುವುದನ್ನು ಬರೆದಿಟ್ಟುಕೊಳ್ಳಿ. ಆ ನಂತರ ಮಾನ್ಯ ಸಚಿವರ ಬಳಿ ಉತ್ತರ ಕೇಳಿ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ನಾನು ಉತ್ತರ ಹೇಳುವಾಗ ಅವರು ಈ ರೀತಿ ಗಡಿಬಿಡಿ ಮಾಡಿದರೆ ಹೇಗೆ?

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಮಾನ್ಯ ಸಭಾಪತಿಯವರೇ, ನಾವು ಸುಮಾರು 5,866 ಎಕರೆ ಜಮೀನನ್ನು ಭೂಸ್ವಾಧೀನ ಮಾಡಿದ್ದೇವೆ. ಆದರೆ, ಅವರು ಆರು ವರ್ಷದಲ್ಲಿ ಸುಮಾರು 26,108 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿದ್ದಾರೆ. ನಾನು ಪಕ್ಷದವರ ಬಗ್ಗೆಯೂ ಸಹ ಹೇಳುತ್ತೇನೆ. ನಾನು ಯಾವುದನ್ನು ಸಹ ಮುಚ್ಚಿಟ್ಟಿಲ್ಲ. ಅವರ ಮುಂದೆ ಮುಚ್ಚಿಡುವಂಥದ್ದು ಏನಿದೆ? ಅವರು ಇದಕ್ಕೆ ಸುಮಾರು 4,050 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈಗ ನಿನ್ನೆಯ ದಿನ ಅವಾರ್ಡ್ ಪಾಸ್ ಆಗಿ, payment ಗೆ due ಇತು., ಅದರಲ್ಲಿ ರೈತರಿಗೆ ಕೊಡಬೇಕಾಗಿದ್ದ 400 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅಂದರೆ, ನಾವು ಭೂಸ್ವಾಧೀನವನ್ನು ತುಂಬಾ ವೇಗವಾಗಿ ಮಾಡುತ್ತಿದ್ದೇವೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಯಾವುದೇ ಸಂದರ್ಭದಲ್ಲಿ ಗೆಜೆಟ್ ನೋಟಿಫಿಕೇಶನ್ ಆಗಬಹುದು ಮತ್ತು ಕೋರ್ಟ್ ನಮಗೆ relief ಮಾಡಬಹುದು. ಅದಕ್ಕೆ ಅದನ್ನು ಸೂಕ್ಷ್ಮವಾಗಿ ಹೇಳುತ್ತೇನೆ. ಅದರ ಬಗ್ಗೆ ಹೆಚ್ಚಿಗೆ ಏನೂ ಹೇಳುವುದಿಲ್ಲ. ಅದಕ್ಕೆ ನಾವು ನಮ್ಮ ತಯಾರಿಯನ್ನು ವೇಗವಾಗಿ ಮಾಡುತ್ತಿದ್ದೇವೆ. ಇನ್ನು ಮೊನ್ನೆಯ ದಿವಸ ಮೀಟಿಂಗ್ ಆದ ನಂತರ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚುವರಿಯಾಗಿ ಇನ್ನು 2,500 ಕೋಟಿ ರೂಪಾಯಿಗಳನ್ನು ನೀಡಿದ್ದಾರೆ. ಈಗ ಹೆಚ್ಚುವರಿಯಾಗಿ ನೀಡಿರುವ 2,500 ಕೋಟಿ ರೂಪಾಯಿಗಳನ್ನು ರೈತರ ಭೂಸ್ವಾಧೀನಕ್ಕೆ ಖರ್ಚು ಮಾಡುತ್ತೇವೆ. ಅದನ್ನು ಯಾರಿಗೂ ಕೊಡುವುದಿಲ್ಲ. ಯಾವ ಗುತ್ತಿಗೆದಾರರಿಗೂ ಒಂದು ರೂಪಾಯಿಯನ್ನು ಕೊಡುವುದಿಲ್ಲ. ಇದು ತಮಗೆ ಗೊತ್ತಿರಲಿ. ಇದು ನಮ್ಮ ಬದ್ಧತೆ. ಈಗ R & R ಪ್ಯಾಕೇಜ್‌ಗೆ 2012ರಲ್ಲಿ 17,207 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. 2017ರಲ್ಲಿ ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಅದನ್ನು ಸುಮಾರು 51,148

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೋಟಿ ರೂಪಾಯಿಗಳಿಗೆ revise ಮಾಡಿ ಇಟ್ಟಿದ್ದಾರೆ. ಈಗ ಅದಕ್ಕೆ ಸಂಬಂಧಪಟ್ಟಂತೆ ಮುಂದಕ್ಕೆ ಹೋಗುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ನನ್ನನ್ನು ಮತ್ತು ವಿರೋಧ ಪಕ್ಷದ ನಾಯಕರಾದ ಮಾನ್ಯ ಎಸ್.ಆರ್. ಪಾಟೀಲರನ್ನು ಮರೆಯಬೇಡಿ.

(ಮುಂದು)

(1313) 23.12.2021 06.00 LL-GR **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಗೋವಿಂದ ಎಂ. ಕಾರಜೋಳ(ಬೃಹತ್ ಹಾಗೂ ಮಧ್ಯಮ ನೀರಾವರಿ (ಜಲಸಂಪನ್ಮೂಲ) ಸಚಿವರು):-** ಮಾನ್ಯ ಸಭಾಪತಿಯವರೇ, ಆ ಸಂದರ್ಭದಲ್ಲಿ ತಮ್ಮನ್ನು ಹಾಗೂ ಮಾನ್ಯ ಎಸ್.ಆರ್. ಪಾಟೀಲರನ್ನು ಮರೆಯುವ ಹಾಗಿಲ್ಲ. ತಮ್ಮಿಬ್ಬರನ್ನು ಮುಳುಗಿಸಿಯೇ ಬಿಡುತ್ತೇವೆ. ಆ ಬಗ್ಗೆ ತಾವು ಕಾಳಜಿ ಮಾಡಬೇಡಿ.

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, 2017ರಲ್ಲಿ 51,148 ಕೋಟಿ ರೂಪಾಯಿ ಆದಂತಹದ್ದನ್ನು, as on today, how much interest...

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, 4050 ಕೋಟಿ ರೂಪಾಯಿ ಒಂದು. ಆ ನಂತರ...

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ನೇರವಾಗಿ ಹೇಳಬಯಸುವುದೇನೆಂದರೆ, ಶ್ರೀ ಬಸವರಾಜ ಬೊಮ್ಮಾಯಿಯವರು ಜಲಸಂಪನ್ಮೂಲ ಸಚಿವರಾಗಿದ್ದಾಗ, 17 ಸಾವಿರ ಚಿಲ್ಲರೆ ಕೋಟಿ ರೂಪಾಯಿ ಎಸ್ಟಿಮೇಟ್ ಆಗಿರುತ್ತದೆ. ಆ ನಂತರ 2017ರಲ್ಲಿ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಅದು 51,148 ಕೋಟಿ ರೂಪಾಯಿ ಆಗಿರುತ್ತದೆ. ಆದರೆ, ಇವೊತ್ತಿನ ದಿವಸಕ್ಕೆ ಎಷ್ಟು ಹೆಚ್ಚು ಮಾಡಲಾಗಿರುತ್ತದೆ?

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ನಾವು ರಿವೈಸ್ಡ್ ಮಾಡಿರುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಆದರೆ ಕಳೆದ ಅಧಿವೇಶನದಲ್ಲಿ 60 ಸಾವಿರ ಕೋಟಿ ರೂಪಾಯಿಗಳೆಂದು ಹೇಳಿದ್ದರು.

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ನಾವು ರಿವೈಸ್ಡ್ ಮಾಡಿರುವುದಿಲ್ಲ. ಒಂದು ವೇಳೆ ನಾವು ರಿವೈಸ್ಡ್ ಮಾಡಿದರೆ, ಪ್ರತಿ ವರ್ಷ ಶೇಕಡ 10 ರಷ್ಟು ಹೆಚ್ಚಿಗೆ ಹಣ ಇಡಬೇಕಾಗುತ್ತದೆ. ಅದರಂತೆ, ಶೇಕಡ 40 ರಷ್ಟು ಹಣ ಹೆಚ್ಚಾಗುತ್ತದೆ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಆ ರೀತಿ ಹೆಚ್ಚು ಮಾಡಿದರೆ, 20 ಸಾವಿರ ಕೋಟಿ ರೂಪಾಯಿ ಹೆಚ್ಚಾಗುತ್ತದೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಶೇಕಡ 10 ರಷ್ಟು ಹೆಚ್ಚಾಗುತ್ತದೆಂದು ಇಟ್ಟುಕೊಳ್ಳೋಣ. ಅದರ ಮೇಲೆ ಲೆಕ್ಕ ಹಾಕೋಣ.

**ಶ್ರೀ ಯು.ಬಿ. ವೆಂಕಟೇಶ್(ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಗೋವಿಂದ ಕಾರಜೋಳರವರು ತಮ್ಮ ಮೇಲೆ ಹಾಗೂ ನಮ್ಮ ನಾಯಕರ ಮೇಲೆ ಕಾಳಜಿ ಇದೆ, ಕಸಿವಿಸಿ ಇದೆಯೆಂದು ಹಾಗೂ ಅವರನ್ನು ಮುಳುಗಿಸುತ್ತೇನೆಂದು ಹೇಳಿದ್ದಾರೆ. ಆದರೆ, ಅವರಿಬ್ಬರೂ ಸಹ ನಮಗೆ ಬೇಕಾಗಿದ್ದು, ದಯಮಾಡಿ ಅವರಿಬ್ಬರನ್ನು ಮುಳುಗಿಸಬೇಡಿ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ನಾನು ಏತಕ್ಕೆ ಆ ರೀತಿ ಹೇಳಿದೆನೆಂದರೆ, ಅವರಿಬ್ಬರೂ ಸಹ ನಮ್ಮ ಭಾಗದವರು. ಅಲ್ಲದೇ ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಬಾಗಲಕೋಟೆ ಪಟ್ಟಣದಲ್ಲಿರುವ ಎಸ್.ಆರ್. ಪಾಟೀಲ್‌ರ ಮನೆ ಮುಳುಗಡೆಯಾಗುತ್ತದೆ ಮತ್ತು ಮಾನ್ಯ ಸಭಾಪತಿಯವರ ಘಟಪ್ರಭಾ ನದಿ ದಂಡೆಯಲ್ಲಿರುವ ಭೂಮಿ ಮುಳುಗಡೆಯಾಗುತ್ತದೆ. ಅದಕ್ಕಾಗಿ ನಾನು ಅವರಿಬ್ಬರನ್ನೂ ಮುಳುಗಿಸುತ್ತೇನೆಂದು ಹೇಳಿದೆನು.

**ಸಭಾಪತಿಯವರು:-** ಆ ಸಂದರ್ಭದಲ್ಲಿ ಮಾನ್ಯ ಕಾರಜೋಳರವರು ನಾನು ಚುನಾವಣೆಗೆ ನಿಲ್ಲುವುದಿಲ್ಲವೆಂದು ನನ್ನ ಕೈಹಿಡಿದುಕೊಂಡು ಓಡಿ ಹೋಗಿದ್ದರು. ಆದರೆ, ಈಗ ಜಲಸಂಪನ್ಮೂಲ ಸಚಿವರಾಗಿದ್ದಾರೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಇಷ್ಟು ಕೆಲಸವನ್ನು ನಾವು ಮಾಡಿರುತ್ತೇವೆ. ಅದರ ಜೊತೆಗೆ, ಹಿಂದಿನ ಸರ್ಕಾರಗಳು ಮಾಡಿರುವಂತಹ ಕೆಲಸದ ಜೊತೆಗೆ, ಈಗಿನ ಸರ್ಕಾರ ಮಾಡಿರುವ ಕೆಲಸವನ್ನು ಸಹ ಹೇಳಿರುತ್ತೇನೆ. ಆದರೆ, ಮಾನ್ಯ ಸದಸ್ಯರ ಆತಂಕ ಏನೆಂದರೆ, ಕೃಷ್ಣಾ ನ್ಯಾಯಾಧೀಕರಣದ ತೀರ್ಪು ಬಂದು 09 ವರ್ಷ ಆಯಿತು. ಅಂದರೆ, 2013ರಲ್ಲಿ ಅಂತಿಮ ತೀರ್ಪು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಂದು ಇಲ್ಲಿಗೆ ಸುಮಾರು 08 ವರ್ಷ ಆಯಿತು. ಫೈನಲ್ ನೋಟಿಫಿಕೇಷನ್ 29ನೇ ನವೆಂಬರ್ 2013ಗೆ ಬಂದಿದ್ದು, ಇದುವರೆವಿಗೂ ಆಗಿರುವುದಿಲ್ಲ. ಖಂಡಿತವಾಗಿಯೂ ಅದು ಹೌದು. ಏಕೆಂದರೆ, ನಾವು ಯಾವ ನಿರೀಕ್ಷೆ ಮಾಡಿಕೊಂಡಿದ್ದೆವು ಆ ಪ್ರಮಾಣದಲ್ಲಿ ಆರ್ ಅಂಡ್ ಆರ್ ವರ್ಕ್ಸ್ ಆಗಿರುವುದಿಲ್ಲ. ಅದಕ್ಕೆ ಇವೊತ್ತಿನ ದಿವಸ ನಮ್ಮ ಸರ್ಕಾರದ ಪ್ರಥಮ ಆದ್ಯತೆ ಏನೆಂದರೆ, ಆರ್ ಅಂಡ್ ಆರ್. ಅಂದರೆ, ಸುಮಾರು 20 ಹಳ್ಳಿಗಳು ಸಂಪೂರ್ಣ ಮುಳುಗಡೆಯಾಗಿ ಉಟ್ಟ ಬಟ್ಟೆಯಲ್ಲಿ ಮನೆ-ಮಠ ಮತ್ತು ಭೂಮಿಯನ್ನು ಕಳೆದುಕೊಂಡು ಯಾರು ಮನೆಯಿಂದ ಹೊರಗಡೆ ಬರುತ್ತಾರೆ, ಅವರಿಗೆ ನಾವು ಪರಿಹಾರ ಕೊಡತಕ್ಕಂಥದ್ದು ಆಗಿದೆ. ಅದರ ಜೊತೆಗೆ, ಅವರಿಗೆ ಪುನರ್‌ವಸತಿ ನಿರ್ಮಾಣ ಮಾಡಬೇಕಾಗಿದೆ ಅದಕ್ಕೆ ಸುಮಾರು 6437 ಎಕರೆ ಜಮೀನನ್ನು ಖರೀದಿ ಮಾಡುವಂಥದ್ದನ್ನು ನಾವು ಮಾಡಿರುತ್ತೇವೆ. ಅದರಲ್ಲಿ ಈಗಾಗಲೇ ಸುಮಾರು 5000 ಎಕರೆ ಜಮೀನಿನನ್ನು ಅವಾರ್ಡ್ ಸ್ಟೇಜ್‌ಗೆ ತಂದು, ಕೆಲವು ಪೇಮೆಂಟ್ ಸಹ ಮಾಡಿರುತ್ತೇವೆ. ಅದರಂತೆ, 400 ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಿರುವುದು ಅದರ part payment ಆಗಿದೆ. ಅಷ್ಟು ಜಮೀನನ್ನು ನಾವು ಮೊದಲು ತೆಗೆದುಕೊಳ್ಳಬೇಕು. ಏಕೆಂದರೆ, ಪುನರ್‌ವಸತಿ ಕೇಂದ್ರ ತಯಾರು ಮಾಡುವುದಕ್ಕಾಗಿ, ಲೇಔಟ್ ಫಾರ್ಮೇಷನ್ ಮಾಡಿ, ಅದರಲ್ಲಿ ಮೂಲಭೂತ ಸೌಕರ್ಯ ಕೊಟ್ಟು, ಅವರಿಗೆ ಹಕ್ಕುಪತ್ರ ಕೊಟ್ಟು, ಅವರನ್ನು ಆ ಪುನರ್‌ವಸತಿ ಕೇಂದ್ರಗಳಿಗೆ ಕಳುಹಿಸುವಂತಹ ಕೆಲಸ ಮೊದಲು ಮಾಡಬೇಕಾಗಿದೆ. ಅದಕ್ಕೆ ನಮ್ಮ ಪ್ರಥಮ ಆದ್ಯತೆ.

ಎರಡನೆಯದಾಗಿ, ಯಾರು ತಮ್ಮ ಮನೆ-ಮಠ ಮತ್ತು ಭೂಮಿಯನ್ನು ಕಳೆದುಕೊಂಡು ಉಟ್ಟ ಬಟ್ಟೆಯಲ್ಲಿ ಹೊರಗಡೆ ಬರುತ್ತಾರೆ, ಅವರ ಭೂಮಿ ಮತ್ತು ಮನೆ-ಮಠಗಳಿಗೆ ಪರಿಹಾರ ಕೊಡುವಂತಹ ಕೆಲಸ ನಮ್ಮ ಜವಾಬ್ದಾರಿಯಾಗಿರುತ್ತದೆ. ಇದಕ್ಕೆ ನಾವು ಪ್ರಥಮ ಆದ್ಯತೆಯನ್ನು ಕೊಟ್ಟು ಕೆಲಸ ಮಾಡುತ್ತೇವೆಂಬ ಭರವಸೆಯನ್ನು ತಮ್ಮ ಮುಂದೆ ಹೇಳುವುದಕ್ಕೆ ಬಯಸುತ್ತೇನೆ. ಇದರ ಜೊತೆಗೆ, ಮಾನ್ಯ ಕೆ.ಟಿ. ಶ್ರೀಕಂಠೇಗೌಡರವರು, ಮಹದಾಯಿ ಯೋಜನೆ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಮಾತನಾಡಿದರು. ಆದರೆ, ಈಗ ನಾನು ಮೊದಲು ಮಹದಾಯಿ ಬಗ್ಗೆ ಮಾತನಾಡಿ ನಂತರ, ಕೃಷ್ಣಾ ಬಗ್ಗೆ ನಂತರ ಮಾತನಾಡುತ್ತೇನೆ. ಏಕೆಂದರೆ, ಅವರು ಮಹದಾಯಿ ಬಗ್ಗೆ ಹೆಚ್ಚು ಆಸಕ್ತಿ ತೋರಿಸಿರುತ್ತಾರೆ. **(ಗೊಂದಲ)** ನನ್ನ ಬಳಿ ಉತ್ತರ ಕರ್ನಾಟಕದ ನೀರಾವರಿ ಯೋಜನೆ ಬಗ್ಗೆ ಯಾವ ಸದಸ್ಯರು ಮಾತನಾಡಿದ್ದಾರೆ ಎಂಬ ಬಗ್ಗೆ ಮಾಹಿತಿ ಇದೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಹದಾಯಿ ನದಿ ಬಗ್ಗೆ ಮಾತನಾಡುತ್ತಿದ್ದಾರೆ. ಆದರೆ, ಕೃಷ್ಣಾದಲ್ಲಿ ಈಗಾಗಲೇ ಟ್ರಿಬ್ಯುನಲ್‌ನಲ್ಲಿ ಏನು dispute ಇತ್ತು ಅದನ್ನು ಫೈನಲ್ ಮಾಡಿ, ಆಂಧ್ರಪ್ರದೇಶ ರಾಜ್ಯದವರು ನಾವು ಈಗಾಗಲೇ ವಿಂಗಡನೆಯಾಗಿದ್ದು, ನಮಗೆ ಹೆಚ್ಚಿನ ನೀರಿನ ಹಂಚಿಕೆ ಕೊಡಬೇಕೆಂದು ಹೇಳಿದಾಗ ಅದನ್ನು ನಿರಾಕರಣೆ

ಮಾಡಿದ್ದಾರೆ. ಆದರೆ, ನನ್ನ ಪ್ರಶ್ನೆ ಏನೆಂದರೆ, ಸರ್ಕಾರದವರು ಕೇಂದ್ರ ಸರ್ಕಾರದಿಂದ ಈ ಬಗ್ಗೆ ಒಂದು Affidavit ಹಾಕಿಸಬಹುದಲ್ಲವೇ? ಆ ಬಗ್ಗೆ ಗೆಜೆಟ್ ನೋಟಿಫಿಕೇಷನ್ ಆಗಬೇಕಲ್ಲವೇ?

**ಸಭಾಪತಿಯವರು:-** ಅದನ್ನು ಅವರು ವಿತ್‌ಡ್ರಾ ಮಾಡಿದ್ದಾರೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಹೆಚ್ಚು ಚರ್ಚೆ ಮಾಡುವುದು ಬೇಡ. ಇದು ಮಾನ್ಯ ನ್ಯಾಯಾಲಯದ ವಿಚಾರ ಆಗಿದ್ದು, ಅದರ ಬಗ್ಗೆ ನಾನು ಸೂಕ್ಷ್ಮವಾಗಿ ಹೇಳುತ್ತೇನೆ. ಮಾನ್ಯ ಸದಸ್ಯರು ಮೊದಲನೆಯದಾಗಿ, ಮಹದಾಯಿ ವಿಚಾರ ಹೇಳಿದ್ದು, ಅದನ್ನು ಮೊದಲು ಹೇಳುತ್ತೇನೆ. ನಮಗೆ, mandatory clearance, as required by law - ಅದನ್ನು process ಮಾಡುತ್ತಿದ್ದೇವೆ. ಏಕೆಂದರೆ, ಆ ವಿಷಯ ಸಹ ಕೋರ್ಟ್‌ನಲ್ಲಿದೆ. ನಾವು ಇದರಲ್ಲಿ ಡಿ.ಪಿ.ಆರ್., ಮಾಡಿಲ್ಲವೆಂದು ಹೇಳಬಾರದು. ಏಕೆಂದರೆ, ನಾವು ಇದರಲ್ಲಿ ಡಿ.ಪಿ.ಆರ್., ಸಲ್ಲಿಸಿರುತ್ತೇವೆ. ಕಳಸಾಗೆ 885 ಕೋಟಿ ರೂಪಾಯಿ ಮತ್ತು ಭಂಡೂರಿಗೆ 791 ಕೋಟಿ ರೂಪಾಯಿಯ ಡಿ.ಪಿ.ಆರ್., ಅನ್ನು ಸಿ.ಡಬ್ಲ್ಯೂ.ಸಿ., ಗೆ ಸಲ್ಲಿಸಿರುತ್ತೇವೆ. ಅದರಂತೆ, ನಮ್ಮ ಡಿ.ಪಿ.ಆರ್., ಪರಿಶೀಲನೆಯಲ್ಲಿದೆ. ಈ ಬಗ್ಗೆ ಬಹಳ ಮುಂದೆ ಹೋಗುವುದು ಬೇಡ. ಏಕೆಂದರೆ, ಕೋರ್ಟ್ ವಿಚಾರ ಆಗಿರುವುದರಿಂದ ನಾನು ಸೂಕ್ಷ್ಮವಾಗಿ ಹೇಳುತ್ತೇನೆ. ಇದರ ಬಗ್ಗೆ ಗೆಜೆಟ್ ನೋಟಿಫಿಕೇಷನ್ ಸಹ ಆಗಿರುತ್ತದೆ. ಆದರೆ, ನಮ್ಮ ವಿರುದ್ಧ ಗೋವಾ ರಾಜ್ಯ ಮತ್ತು ಮಹಾರಾಷ್ಟ್ರ ರಾಜ್ಯದವರು ಕೋರ್ಟ್‌ಗೆ ಹೋಗಿರುತ್ತಾರೆ. ಆದರೆ, ಮಹಾರಾಷ್ಟ್ರ ರಾಜ್ಯದಲ್ಲಿ ಕೇವಲ 77 ಚದರ ಕಿಲೋಮೀಟರ್‌ನಷ್ಟು ಜಲಾನಯನ ಪ್ರದೇಶ ಇದೆ. ಆದರೆ, ಹೆಚ್ಚು ಜಲಾನಯನ ಪ್ರದೇಶ ಗೋವಾ ರಾಜ್ಯದಿದ್ದು, ಕಡಿಮೆ ಜಲಾನಯನ ಪ್ರದೇಶ ನಮ್ಮ ರಾಜ್ಯದಿದೆ. ಜಲಾನಯನ ಪ್ರದೇಶದ ಆಧಾರದ ಮೇರೆಗೆ ನೀರಿನ ಹಂಚಿಕೆಯಾಗಿರುತ್ತದೆ. ಆದುದರಿಂದ, ನಮಗೆ 13.2 ಟಿ.ಎಂ.ಸಿ., ನೀರು ಹಂಚಿಕೆಯಾಗಿರುತ್ತದೆ. ಆದರೆ, ನಾವು 36 ಟಿ.ಎಂ.ಸಿ., ನೀರು ಹಂಚಿಕೆ ಮಾಡಬೇಕೆಂದು ಕೇಳಿದ್ದೇವೆ. ನಾವು ಆ ವಿಚಾರದಲ್ಲಿ ಮುಂದೆ ಏನು ಮಾಡಬೇಕೆಂಬ ಚರ್ಚೆ ಮಾಡುವುದು ಇಲ್ಲಿ ಅವಶ್ಯಕತೆ ಇರುವುದಿಲ್ಲ.

ಇನ್ನೂ ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಅನೇಕ ಸದಸ್ಯರೂ ಆತಂಕ ವ್ಯಕ್ತ ಮಾಡಿದ್ದು, ಎಲ್ಲರಿಗೂ ಕಾಮನ್ ಆಗಿ ಉತ್ತರ ಹೇಳುತ್ತೇನೆ. ಕೃಷ್ಣಾದಲ್ಲಿ ಏನಾಗಿದೆಯೆಂದರೆ, ಈಗಾಗಲೇ ನಾಲ್ಕು ಬಾರಿ ಅಂದರೆ, ಮೂರು ಬಾರಿ ಮಾನ್ಯ ಮುಖ್ಯಮಂತ್ರಿಗಳ ಜೊತೆ ನಾನು ಹೋಗಿದ್ದೇನೆ. ಇನ್ನೊಂದು ಮಾನ್ಯ ಮುಖ್ಯಮಂತ್ರಿಗಳೇ ಒಬ್ಬರೇ ಹೋಗಿರುತ್ತಾರೆ. ನಮ್ಮ ಎಲ್ಲಾ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ. ನಾನೇ ಅಷ್ಟು ಸೂಕ್ಷ್ಮವನ್ನು ಮಾತ್ರ ಹೇಳುತ್ತೇನೆ. ನಮ್ಮ ಸರ್ಕಾರದ ಪರವಾಗಿ ಕೋರ್ಟ್ ಮುಂದೆ ನಮ್ಮ ವಕೀಲರ ತಂಡ ತಮ್ಮ ವಾದವನ್ನು ಮಂಡಿಸಿರುತ್ತಾರೆ. ಕೇಂದ್ರ ಸರ್ಕಾರ ಕೂಡ ಕಾನೂನಾತ್ಮಕ ಪ್ರಕ್ರಿಯೆಗಳನ್ನು ಏನೇನು ಮಾಡಬೇಕು ಅದನ್ನು ಮಾಡುತ್ತಿದೆ. ದಿನಾಂಕ:10.01.2022 ಅಂದರೆ, ಇವೊತ್ತಿನ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದಿನಾಂಕ:23.12.2021 ಆಗಿದ್ದು, ಇನ್ನು ಸುಮಾರು 18 ದಿನಗಳಿಗೆ ಈ ಪ್ರಕರಣ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಬರುತ್ತದೆ. ಇದಕ್ಕಿಂತಲೂ ಹೆಚ್ಚಿಗೆ ಪ್ರಸ್ತಾಪ ಮಾಡುವುದು ಬೇಡ.

**ಸಭಾಪತಿಯವರು:-** ಹೌದು ಬೇಡ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ನಾವು ಏನೇನು procedure ನ್ನು ತೆಗೆದುಕೊಳ್ಳಬೇಕು ಅಂದರೆ, both technically as well as legally, ಆ ಎಲ್ಲವನ್ನೂ ಮಾಡಿದ್ದೇವೆ. ಅಷ್ಟು ಸಾಕು. **(ಗೊಂದಲ)** ಮಾನ್ಯ ಹಿರಿಯ ಸದಸ್ಯರಾದ ಶ್ರೀ ಅಲ್ಲಂ ವೀರಭದ್ರಪ್ಪನವರ ಹೇಳಿದ ಎಲ್ಲಾ procedure ಗಳನ್ನು ಮಾಡಿರುತ್ತೇವೆ. ಇಷ್ಟು ಭರವಸೆಯನ್ನು ಹೇಳುವುದಕ್ಕೆ ನಾನು ಬಯಸುತ್ತೇನೆ. ಕೃಷ್ಣಾದಲ್ಲಿ ನಾವು ಕಾಯುತ್ತಿರುವುದೇನೆಂದರೆ, ಇದರಲ್ಲಿ ಆರ್ ಅಂಡ್ ಆರ್ ಆಗಬೇಕು. ಅದಕ್ಕೆ ಮಾನ್ಯ ಎಸ್.ಆರ್. ಪಾಟೀಲರ ಸಹಕಾರ ಸಹ ನಮಗೆ ಬೇಕಾಗುತ್ತದೆ. ಏಕೆಂದರೆ, ಸರ್ಕಾರ ಇಟ್ಟುಕೊಂಡು ನಾನೇ ಮಾಡುತ್ತೇನೆ ಅಥವಾ ಮುಖ್ಯಮಂತ್ರಿಗಳೇ ಮಾಡುತ್ತಾರೆಂದರೆ ಆಗುವುದಿಲ್ಲ. ಅದಕ್ಕೆ ಅಖಂಡ ಜಿಲ್ಲೆಯ ನಾವೆಲ್ಲ ಜನಪ್ರತಿನಿಧಿಗಳು ಅಂದರೆ, affected parties ಎರಡು ಜಿಲ್ಲೆಯವರಾಗಿದ್ದು, ನಾವೆಲ್ಲರೂ ಕೂಡಿ ಈ ಕೆಲಸವನ್ನು ಮಾಡಬೇಕು. ನಾನು ಈಗಾಗಲೇ ಹೇಳಿದಂತೆ, ಪ್ರಥಮ ಆದ್ಯತೆಯನ್ನು ಪುನರ್ ವಸತಿ ಕೇಂದ್ರಗಳಿಗೆ ಮತ್ತು ಮುಳುಗಡೆಯಾಗತಕ್ಕಂತಹ 20 ಹಳ್ಳಿಗಳ ರೈತರಿಗೆ ಪರಿಹಾರ ಕೊಡತಕ್ಕಂಥದ್ದು ನಮ್ಮ ಪ್ರಥಮ ಆದ್ಯತೆಯಾಗಿರುತ್ತದೆ. ರೈತರಿಗೆ/ನಮ್ಮ ಹಳ್ಳಿ ಜನರಿಗೆ ಪರಿಹಾರ ಕೊಟ್ಟು ಸಂತ್ರಸ್ತರು ನಗು ನಗುತ್ತಾ ಪುನರ್‌ವಸತಿ ಕೇಂದ್ರಗಳಿಗೆ ಹೋಗುವ ರೀತಿ ಮಾಡಬೇಕೆನ್ನುವುದು ನಮ್ಮ ಆಸೆ.

ನಮ್ಮ ಸಹೋದರರಾದ ಶ್ರೀ ಪ್ರಕಾಶ್ ರಾಥೋಡ್‌ರವರು ಪ್ರಸ್ತಾಪಿಸಿರುವ ವಿಷಯದ ಬಗ್ಗೆ ನಾನು ಮಾತನಾಡುತ್ತೇನೆ. ಅವರು ಇದು ನ್ಯಾಷನಲ್ ಪ್ರಾಜೆಕ್ಟ್ ಆಗಬೇಕೆಂದು ಒತ್ತಾಯಿಸಿರುತ್ತಾರೆ. ಹೌದು, ಇದು ನ್ಯಾಷನಲ್ ಪ್ರಾಜೆಕ್ಟ್ ಆಗಲೇಬೇಕು. ಅದರಲ್ಲಿ ಎರಡನೆ ಮಾತಿಲ್ಲ. ಅದಕ್ಕೆ ನಾವು ಕೆಲವೊಂದು ಪ್ರಕ್ರಿಯೆಗಳನ್ನು ಮಾಡುತ್ತಿದ್ದೇವೆ. ಗೆಜೆಟ್ ನೋಟಿಫಿಕೇಷನ್ ಸಹ ಆಗಬೇಕಾಗಿದೆ. ಅದರ ಜೊತೆಗೆ, ಕೋರ್ಟ್‌ನಲ್ಲಿ ಪ್ರಕರಣ ಸಹ ಇತ್ಯರ್ಥವಾಗಬೇಕಾಗಿದೆ. ಅದು ಆದ ಮರುಕ್ಷಣವೇ ನಾವು ಖಂಡಿತವಾಗಿಯೂ ನ್ಯಾಷನಲ್ ಪ್ರಾಜೆಕ್ಟ್‌ಗೆ ಸೇರಿಸುವುದಕ್ಕೆ ಯಾವ್ಯಾವ ಪ್ರಯತ್ನಗಳನ್ನು ಮಾಡಬೇಕೋ ಅದನ್ನು ಮಾಡುತ್ತೇವೆ. ಈ ನ್ಯಾಷನಲ್ ಪ್ರಾಜೆಕ್ಟ್‌ಗೆ ಕೇಂದ್ರ ಸರ್ಕಾರ ಶೇಕಡ 60 ರಷ್ಟು ಗ್ರ್ಯಾಂಟ್ ಕೊಡುತ್ತದೆ. ಏಕೆಂದರೆ, ದೊಡ್ಡ ಹಣಕ್ಕೆ ಶೇಕಡ 60 ರಷ್ಟು ಗ್ರ್ಯಾಂಟ್ ಎಂದರೆ ಅದು ಸಣ್ಣ ಹಣವಲ್ಲ. ಏಕೆಂದರೆ, 51,148 ಕೋಟಿ ರೂಪಾಯಿಗೆ ಶೇಕಡ 60 ರಷ್ಟು ಗ್ರ್ಯಾಂಟ್ ಎಂದರೆ, ಬಹಳ ದೊಡ್ಡ

ಹಣವಾಗುತ್ತದೆ. ಅದನ್ನು ತೆಗೆದುಕೊಳ್ಳುವಂತಹ ಪ್ರಾಮಾಣಿಕ ಪ್ರಯತ್ನವನ್ನು ನಮ್ಮ ಸರ್ಕಾರ ಮಾಡುತ್ತದೆ. ಇಷ್ಟು ಸೂಕ್ಷ್ಮವನ್ನು ಮಾತ್ರ ನಾನು ಹೇಳುತ್ತೇನೆ.

ಇನ್ನೂ ನಮ್ಮ ಮಾನ್ಯ ಎಸ್.ಆರ್. ಪಾಟೀಲ್‌ರವರು ಮತ್ತು ಮಾನ್ಯ ಅಲ್ಲಂ ವೀರಭದ್ರಪ್ಪನವರು **(ಗೊಂದಲ)** ಯು.ಕೆ.ಪಿ., ವಿಚಾರದ ಬಗ್ಗೆ ಮಾತನಾಡಿರುತ್ತೇನೆ. ಈಗ ನಾನು ತುಂಗಭದ್ರಾ ನದಿ ಬಗ್ಗೆ ಮಾತನಾಡುತ್ತಿದ್ದೇನೆ. **(ಗೊಂದಲ)** ಅದನ್ನು ನಂತರ ಮಾತನಾಡುತ್ತೇನೆ. ಆ 09 ಯೋಜನ್ನೆಗಳು ಈಗ ನಡೆಯುತ್ತಿದ್ದು, ಅವು ಪ್ರಗತಿಯಲ್ಲಿರುತ್ತವೆ. ಆ ಬಗ್ಗೆ ಏನು ಮಾಡಬೇಕೋ ಅದನ್ನು ನಾವು ಮಾಡುತ್ತಿದ್ದೇವೆ. ಅದರ ಜೊತೆಗೆ, ನವಿಲೇ ಹತ್ತಿರ ಒಂದು Balancing Reservoir ಹಾಕಬೇಕೆಂದು ಮಾನ್ಯ ಸದಸ್ಯರು ಹೇಳಿರುತ್ತಾರೆ. ಆ ಕಾರಣ ಕೂಡ ಸಕಾರಣವಾಗಿದೆ. ಏಕೆಂದರೆ, ತುಂಗಭದ್ರಾ ನದಿ ಅಂತರರಾಜ್ಯ ಹರಿಯುವಂತಹ ನದಿ ಮತ್ತು ನಮಗೆ State reorganisation ಪೂರ್ವದಲ್ಲಿಯೇ ಅಣೆಕಟ್ಟಿನ ನಿರ್ಮಾಣ ಆಗಿರುವಂಥದ್ದು. ಬಹುಶಃ 1958ರಲ್ಲಿ ನೀರು ನಿಲ್ಲಿಸಿರಬಹುದು. ಆ ಸಂದರ್ಭದಲ್ಲಿ ಅಲ್ಲಿ ನೀರು ನಿಲ್ಲಿಸಿರಬಹುದು.

(ಮುಂದು)

**(1314) 23.12.2021 6.10 YL-GR** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಗೋವಿಂದ ಎಂ.ಕಾರಜೋಳ (ಮುಂದು):-**

ಅಲ್ಲಿ ಸುಮಾರು 30 ಟಿ.ಎಂ.ಸಿ., ಹೂಳು ತುಂಬಿದೆ. ಅಂದರೆ, 28 ಟಿ.ಎಂ.ಸಿ., ಹೂಳು ಬಂದಿದ್ದು, 30 ಟಿ.ಎಂ.ಸಿ., ಎಂದು round figure ಇಟ್ಟುಕೊಂಡಿದ್ದೇವೆ. ಆ ಹೂಳನ್ನು ತೆಗೆದು ಬೇರೆ ಕಡೆ ಹಾಕಲು ಸಾಧ್ಯವಿಲ್ಲ. ಏಕೆಂದರೆ, 30 ಟಿ.ಎಂ.ಸಿ., ನೀರು ಎಂದರೆ, ಸುಮಾರು 25 ರಿಂದ 30 ಕಿಲೋ ಮೀಟರ್‌ವರೆಗೆ ದೊಡ್ಡ ಗುಡ್ಡವೇ ಆಗುವಷ್ಟು ಹೂಳನ್ನು ತೆಗೆಯಲು ಸಾಧ್ಯವಿಲ್ಲ ಹಾಗೆಯೇ ಅಷ್ಟು ಭೂಮಿಯನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ, ಯಾರು ಅಷ್ಟು ಭೂಮಿಯನ್ನು ನೀಡುವುದಿಲ್ಲ. ಹಾಗಾಗಿ silt ತೆಗೆಯುವ ಬದಲು ಕೊಪ್ಪಳ ಜಿಲ್ಲೆಯ ನವಲಿ ಗ್ರಾಮದಲ್ಲಿ Balancing Reservoir ಕಟ್ಟಿದಲ್ಲಿ ಸುಮಾರು ರೂ.900.00 ಕೋಟಿಗಳಾಗಬಹುದೆಂದು ಅಂದಾಜಿಸಲಾಗಿದ್ದು, ಅಂತಿಮ ಮೊತ್ತ ತಿಳಿದುಬಂದಿಲ್ಲ. ಈಗಾಗಲೇ ನಾವು ಡಿ.ಪಿ.ಆರ್., ಮಾಡಲು ರೂ.18.00 ಕೋಟಿ ಭರಿಸಿದ್ದು, ಡಿ.ಪಿ.ಆರ್., ನಡೆಯುತ್ತಿದ್ದು, ಈಗಾಗಲೇ ಅಂತಿಮ ಹಂತದಲ್ಲಿರಬೇಕು. ಬೆಂಗಳೂರಿಗೆ ಹೋದ ನಂತರ ನಮ್ಮ ಅಧಿಕಾರಿಗಳನ್ನು ಕರೆಸಿ, ಈ ಬಗ್ಗೆ ಮತ್ತೊಮ್ಮೆ ಚರ್ಚೆ ಮಾಡುತ್ತೇನೆ. ಜೊತೆಗೆ ನಾವು ಅದನ್ನು ಮಾಡಲೇಬೇಕು. ಏಕೆಂದರೆ, ನೀರನ್ನು ಹಿಡಿದು ಇಟ್ಟುಕೊಂಡರೆ, ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುತ್ತದೆ ಮತ್ತು ತುಂಗಭದ್ರ ಎಡದಂಡೆಯಲ್ಲಿ suffering ಅಚ್ಚುಕಟ್ಟು ಏನಿದೆ, ಅದರ ಮೂಲಕ ನೀರನ್ನು ಬಳಕೆ ಮಾಡಿ, ಉಪಯೋಗ ಮಾಡಿಕೊಳ್ಳಲು ಸಾಧ್ಯವಾಗುವುದರಿಂದ ಮಾಡಲೇಬೇಕಾಗಿದೆ. ಅಂತರರಾಜ್ಯ ಸಮಸ್ಯೆಯಾಗಿರುವುದರಿಂದ ತೆಲಂಗಾಣ ಮತ್ತು ಆಂಧ್ರಪ್ರದೇಶಗಳ ಒಪ್ಪಿಗೆಯನ್ನು ಸಹ ನಾವು ಪಡೆದುಕೊಳ್ಳಬೇಕಾಗುತ್ತದೆ. ಏಕೆಂದರೆ, ಆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರಾಜ್ಯಗಳಿಗೂ ನಾವು ನೀರಿನ ಪಾಲನ್ನು ನೀಡಬೇಕಾಗಿದ್ದು, ಆ ರಾಜ್ಯಗಳ ಒಪ್ಪಿಗೆಯನ್ನು ತೆಗೆದುಕೊಳ್ಳಬೇಕಾಗುತ್ತದೆ ಮತ್ತು project cost ನಲ್ಲಿ proportionately sharing ಮಾಡಲೇಬೇಕಾಗಿರುವುದರಿಂದ ಅವರ ಜೊತೆಯಲ್ಲಿ ಮಾತುಕತೆ ನಡೆಸುವ ಪ್ರಯತ್ನ ನಡೆದಿದೆ. ಈಗಾಗಲೇ ಎರಡು ಬಾರಿ ನಮ್ಮ ಅಧಿಕಾರಿಗಳು ತಿಳಿಸಿದ್ದು, ಮಾನ್ಯ ಅಲ್ಲಂ ವೀರಭದ್ರಪ್ಪನವರಿಗೆ 'ವೈಯಕ್ತಿಕ ಪ್ರಭಾವವನ್ನು ಉಪಯೋಗಿಸಿ ಎರಡು ರಾಜ್ಯಗಳನ್ನು ನಮ್ಮ ರಾಜ್ಯದೊಂದಿಗೆ ಸೇರಿಸುವ ಪ್ರಯತ್ನ ಮಾಡಿ' ಎಂದು ಈಗಾಗಲೇ ಖುದ್ದಾಗಿ ಮನವಿಯನ್ನು ಸಹ ಮಾಡಿದ್ದೇನೆ.

**ಶ್ರೀ ಅಲ್ಲಂ ವೀರಭದ್ರಪ್ಪ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮೈನಿಂಗ್ ಬಗ್ಗೆ ತಾವು ಮಾತನಾಡಿದ್ದೀರಿ. ಮೈನಿಂಗ್ ಫಂಡ್‌ನ ಅಡಿಯಲ್ಲಿ ಏನು ಬರುತ್ತದೆ ಎಂಬುದನ್ನು ನೋಡಿ ಮಾಡಲಿ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, District Mining Fund ಅನ್ನು ಉಪಯೋಗ ಮಾಡಿಕೊಳ್ಳಬೇಕಾದರೆ, ಆ ಟ್ರಸ್ಟ್‌ನಿಂದ ಕೆಲವೊಂದು ಷರತ್ತುಗಳಿವೆ. ಅದಕ್ಕಾಗಿಯೇ 'ಕುಡಿಯುವ ನೀರಿಗಾಗಿ ಮತ್ತು ರೈತರಿಗಾಗಿ' ಎನ್ನುವಂಥ ಶಬ್ದವನ್ನು ಬಳಸಿದ್ದೇನೆ. ಕುಡಿಯುವ ನೀರನ್ನು ತೆಗೆದುಕೊಳ್ಳುವುದಕ್ಕೆ ನಮಗೆ ಅವಕಾಶ ಇದೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆ ಹಾಗೂ ಹೊಸದಾಗಿ ರಚನೆಯಾಗಿರುವ ವಿಜಯನಗರ ಜಿಲ್ಲೆ ಈ ಎರಡು ಜಿಲ್ಲೆಯಿಂದ ಸ್ವಲ್ಪ ಹಣವನ್ನು ತೆಗೆದುಕೊಂಡು ಈ ಕೆಲಸ ಮಾಡಲು ಅನುಕೂಲ ಮಾಡಿಕೊಳ್ಳಲಾಗುತ್ತದೆ ಎನ್ನುವಂಥ ಮಾತನ್ನು ತಮಗೆ ಹೇಳಲು ಬಯಸುತ್ತೇನೆ. ಜೊತೆಗೆ ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರ ಪ್ರಶ್ನೆಗೂ ಉತ್ತರ ನೀಡಿದ್ದು, ಮತ್ತೆ ಏನೂ ಹೇಳುವಂಥ ಕಾರಣಗಳಿಲ್ಲ. ಹಾಗೆಯೇ ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರು ಒಂದು ಒಳ್ಳೆಯ ಸಲಹೆಯನ್ನು ನೀಡಿದ್ದು, ಅವರು ನಾರ್ವೆ ಮಾದರಿಯಲ್ಲಿ ಮಾಡಲು ಏನು ಸಮಸ್ಯೆ ಎಂದು ಕೇಳಿದ್ದಾರೆ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನಾನು ಹೇಳಲಿಲ್ಲ. ಮಾನ್ಯ ರಮೇಶ್ ಜಾರಕಿಹೊಳಿಯವರು ಅದಕ್ಕೆ ಸಂಬಂಧಿಸಿದಂತೆ ನನಗೆ ಉತ್ತರ ನೀಡಿದ್ದಾರೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ನಾರ್ವೆ ಮಾದರಿಯಲ್ಲಿ ಮಾಡಲು ಸಾಧ್ಯವಿಲ್ಲ. ಮೊದಲನೆಯದಾಗಿ, ಈ ಹಿಂದೆ ನಾರ್ವೆ ಮಾದರಿಯಲ್ಲಿ ತಡೆಗೋಡೆ ನಿರ್ಮಿಸಿ, ಎಲ್ಲಾ ಊರುಗಳಿಗೆ ನೀರು ಹೋಗದಂತೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಎರಡನೆಯದಾಗಿ, ರೈತರ ಜಮೀನುಗಳನ್ನು ಭೋಗ್ಯದ ಆಧಾರದ ಮೇಲೆ ತೆಗೆದುಕೊಳ್ಳೋಣ ಎಂದು ಚರ್ಚಿಸಲಾಗಿದ್ದು, ಅದರ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಡೆವಳಿಯನ್ನು ಸಹ ತಂದಿದ್ದೇನೆ. ರೈತರ ಜಮೀನುಗಳನ್ನು ಭೋಗ್ಯಕ್ಕೆ ತೆಗೆದುಕೊಳ್ಳುವುದೆಂದರೆ ಹೇಗೆ ಸಾಧ್ಯ? ಅಣೆಕಟ್ಟನ್ನು ನಿರ್ಮಿಸಲು 100 ವರ್ಷಗಳಾಗುತ್ತದೆ. ಹೀಗಿರುವಾಗ ಯಾವ ರೈತ ಜಮೀನು ನೀಡುತ್ತಾನೆ? ಒಂದು ಸಲ ನೀರು ನಿಂತರೆ, ಭೂಮಿಯೇ ಬರಡಾಗುತ್ತದೆ, ಒಂದು ಹುಲ್ಲು ಕಡ್ಡಿಯನ್ನು ಬೆಳೆಯಲು ಸಾಧ್ಯವಿಲ್ಲ. ಆ ರೀತಿ ಇರುವಾಗ ನಾವು ಆ ಜಮೀನನ್ನು ರೈತರ ಹೆಸರಿನಲ್ಲಿಯೇ ಇಡುತ್ತೇವೆ, ವರ್ಷಕ್ಕೆ 20 ಸಾವಿರ ರೈತರಿಗೆ ನೀಡುತ್ತೇವೆ ಎಂದರೆ, ಯಾವ ರೈತ ಒಪ್ಪುವುದಿಲ್ಲ. ಈ ಸದನದಲ್ಲಿಯೇ ಮಾನ್ಯ ಅಲ್ಲಂ ವೀರಭದ್ರಪ್ಪನವರು ಇದ್ದು, ಅವರು ಭತ್ತವನ್ನು ಬೆಳೆಯುತ್ತಾರೆ. ಅವರನ್ನೇ ಬೇಕಾದರೆ ವರ್ಷಕ್ಕೆ ಎಷ್ಟು ಆದಾಯ ಬರುತ್ತದೆ ಎಂದು ಕೇಳಿ. ಜೊತೆಗೆ ನಾನು ಸಹ ನಮ್ಮ ಜಮೀನಿನಲ್ಲಿ ಕಬ್ಬು ಬೆಳೆಯುತ್ತೇನೆ, ವರ್ಷಕ್ಕೆ ರೂ.1.00 ಲಕ್ಷ ಆದಾಯ ಬರುತ್ತದೆ. ಆ ರೀತಿ ಇರುವಾಗ ವರ್ಷಕ್ಕೆ ರೂ.20 ಸಾವಿರ, ರೂ. 50 ಸಾವಿರ ನೀಡುತ್ತೇವೆ ಜಮೀನು ನೀಡಿ ಎಂದರೆ ಯಾವ ರೈತ ನೀಡುತ್ತಾನೆ. ಇಂತಹ ಒಂದು ಗೊಂದಲದಿಂದಾಗಿ ವಿಳಂಬವಾಗುವುದಕ್ಕೆ ಇದು ಒಂದು ರೀತಿ ಕಾರಣವಾಗಿದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಬಹಳ ವಿವರವಾಗಿ ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ಮಹದಾಯಿ ವಿಚಾರವಾಗಿ ನಾನು ಹೆಚ್ಚು ವಿಶ್ಲೇಷಣೆ ನೀಡಲು ಹೋಗುವುದಿಲ್ಲ. ಖಾನಾಪೂರ ತಾಲ್ಲೂಕಿನಲ್ಲಿರುವ ಕಳಸಾ ಭಂಡೂರಿ ಯೋಜನೆಯಿಂದ ಕರ್ನಾಟಕ ರಾಜ್ಯದ ಬಾಗಲಕೋಟೆ, ಧಾರವಾಡ, ಗದಗ ಜಿಲ್ಲೆಗಳಿಗೆ ಅನುಕೂಲವಾಗುತ್ತದೆ. ಆದರೆ, ಖಾನಾಪೂರ ತಾಲ್ಲೂಕಿನಲ್ಲಿ ಕಳಸಾ-ಭಂಡೂರಿ ಎಲ್ಲಿ ಹುಟ್ಟಿದೆ ಅಲ್ಲಿ ಅನೇಕ ಗ್ರಾಮಗಳಿಗೆ ಕುಡಿಯುವ ನೀರಿನ ತೊಂದರೆ ಇದೆ. ದಯವಿಟ್ಟು ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ, ಅಲ್ಲಿನ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಆಯಿತು ಮಾಡೋಣ. ಅದರ ಬಗ್ಗೆ ಮತ್ತೊಮ್ಮೆ ಮಾನ್ಯ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರನ್ನು ಕರೆಯಿಸಿ ಮಾತನಾಡುತ್ತೇನೆ. ಹಾಗೆಯೇ ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರು ಸಲಹೆ ನೀಡಿರುವಂಥ ವಿಚಾರಕ್ಕೆ ಸಂಬಂಧಿಸಿದಂತೆ, ಡೋಣಿ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಡೋಣಿ ಸಮಸ್ಯೆ ಹೇಗೆ ಎಂಬುದು ಮಾನ್ಯ ಸದಸ್ಯರಿಗೆ ತಿಳಿದಿದೆಯೇ, ಇಲ್ಲವೇ ಗೊತ್ತಿಲ್ಲ. ಏಕೆಂದರೆ, ನಾನು ಸಹ ಡೋಣಿ ಮತ್ತು ನದಿ ಎರಡರ ಮಧ್ಯೆ ಇದ್ದು ನೋಡಿದ್ದೇನೆ. ಡೋಣಿ ನದಿಯಲ್ಲಿ ಎರೆಭೂಮಿ ಇದೆ. ಒಂದು ವೇಳೆ ಈ ವರ್ಷ ಚೆಕ್ ಡ್ಯಾಂ ನಿರ್ಮಿಸಿದರೆ, ಮುಂದಿನ ವರ್ಷದೊಳಗೆ ಆ ಚೆಕ್ ಡ್ಯಾಂನ ತುಂಬಾ ಮಣ್ಣು ತುಂಬಿ ಹೋಗಿರುತ್ತದೆ. Loose soil is there. B.C. Soil area ಏನಿದೆ ಅದು ಹರಿದುಬರುತ್ತದೆ ಮತ್ತು 50 ಅಡಿ ಆಳ ತೆಗೆದರೂ ಅದರ ತುಂಬಾ ಮಣ್ಣು ಇರುತ್ತದೆ. ಹಾಗಾಗಿ ಈ ಹಿಂದೆ ನಾನು ಸಣ್ಣ ನೀರಾವರಿ ಸಚಿವನಾಗಿದ್ದಾಗ ಇದನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡುವ ಸಲುವಾಗಿಯೇ ಪ್ರಯತ್ನ ಮಾಡಿ, 5.00 ಕೋಟಿ ರೂಪಾಯಿ ಹಂಚಿಕೆ ಮಾಡಿದ್ದೇನೆ. ಆದರೆ, ನಮ್ಮ ಇಲಾಖಾಧಿಕಾರಿಗಳು ಬಂದು 'ಸಾರ್, ನೀವು ಅದನ್ನು ಮಾಡಿ ಎಂದು ಹೇಳಿದರೆ ನಾವು ರಾಜೀನಾಮೆ ಕೊಟ್ಟು ಹೋಗುತ್ತೇವೆ' ಎಂದು ಹೇಳಿದ್ದರು. ನಾನು ಏತಕ್ಕೆ ಎಂದು ಕೇಳಿದರೆ, 'ನಾವು ಅದನ್ನು ಮಾಡಿದ್ದರೂ ಒಂದೇ ವರ್ಷದಲ್ಲಿ ಮುಚ್ಚಿ ಹೋಗುತ್ತದೆ, ಮುಚ್ಚು ಹೋದರೆ ಮರು ದಿನವೇ ನಮ್ಮ ಮೇಲೆ ಎಲ್ಲಾ ಹಣವನ್ನು ತಿಂದು ಬಿಟ್ಟಿದ್ದಾರೆ, ಲೂಟಿ ಮಾಡಿದ್ದಾರೆ ಎಂದು allegation ಮಾಡುತ್ತಾರೆ, ನಾವು ನೌಕರಿ ಕಳೆದುಕೊಳ್ಳುತ್ತೇವೆ, ದಯವಿಟ್ಟು ಚೆಕ್‌ಡ್ಯಾಂ ನಿರ್ಮಿಸುವುದು ಬೇಡವೆಂದು' ಹೇಳಿದ್ದರು. ಜೊತೆಗೆ ವಿಶ್ವವಿದ್ಯಾಲಯದವರಿಗೂ entrust ಮಾಡಿದ್ದು, ಅವರು ಪ್ರಯತ್ನ ಮಾಡಿದ್ದರು. ಆದರೆ, ಅವರ ಕೈಯಲ್ಲಿಯು ಸಾಧ್ಯವಾಗುವುದಿಲ್ಲ ಎಂದು ವರದಿ ನೀಡಿದ ಮೇಲೆ ಕೈಬಿಟ್ಟಿದ್ದೇವೆ. ಕೃಷಿ ವಿಶ್ವವಿದ್ಯಾಲಯ, ಧಾರವಾಡ ಜಿಲ್ಲೆ ಇವರಿಗೆ ಹಣ ನೀಡಿರುವುದು ಮಾನ್ಯ ಸದಸ್ಯರಿಗೆ ತಿಳಿದಿದ್ದು, ಇವತ್ತಿಗೂ ಆ ಹಣ ಅವರ ಹತ್ತಿರವೇ ಇರಬೇಕು ಎಂದು ಅನಿಸುತ್ತದೆ, ಅದರ ಬಗ್ಗೆ ಸರಿಯಾಗಿ ನನಗೆ ಗೊತ್ತಿಲ್ಲ. ಡೋಣಿ ನದಿ ನೀರು ಉಪ್ಪು ನೀರಾಗಿದ್ದು, ಆ ನೀರನ್ನು ಕುಡಿಯಲು ಸಾಧ್ಯವಿಲ್ಲ, ಕೃಷಿಗೂ ಸಾಧ್ಯವಿಲ್ಲ, ಯಾವುದಕ್ಕೂ ಉಪಯೋಗವಾಗದಂಥ ನೀರು ಆಗಿದೆ. ಡೋಣಿ ನದಿ ನೀರಿನ ಪಕ್ಕದಲ್ಲಿಯೇ ನಮ್ಮ ಹೊಲವು ಇದ್ದು ಆ ನೀರು ಉಪಯೋಗಕ್ಕೆ ಬರುತ್ತಿಲ್ಲ. ಹಾಗಾಗಿ ಅದನ್ನು ಡೋಣಿ ನದಿ ನೀರು ಶೇಖರಣೆ ಮಾಡುವುದರಿಂದ ಏನು ಪ್ರಯೋಜನವಿಲ್ಲ ಮತ್ತು ಆರ್ ಅಂಡ್ ಆರ್ ಗೆ ಹೆಚ್ಚಿನ ಹಣ ನೀಡಬೇಕೆಂದು ಮಾನ್ಯ ಸದಸ್ಯರು ಕೇಳಿದ್ದರು.

ದಿನಾಂಕ: 28.10.2021 ರಂದು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಏರ್ಪಡಿಸಿ, ಎರಡೂವರೆ ಸಾವಿರ ಕೋಟಿ ರೂಪಾಯಿ ಹೆಚ್ಚಿನ ಹಣವನ್ನು ಭರಿಸಿದ್ದು, ಆ ಅಷ್ಟು ಹಣವನ್ನು ಭೂಸ್ವಾಧೀನಕ್ಕೆ ಉಪಯೋಗಿಸಲಾಗುವುದು. ಮಾನ್ಯ ಆರ್. ಬಿ.ತಿಮ್ಮಾಪೂರರವರು ಪ್ರಶ್ನೆಯನ್ನು ಕೇಳಿದ್ದರು. ಆದರೆ, ಅವರು ಈಗ ಸದನದಲ್ಲಿ ಇಲ್ಲ. ಅವರು ಸಹ ಬೇರೆ ಊರಿಗೆ ಸಂಬಂಧಿಸಿದಂತೆ ಕೇಳಿಲ್ಲ, ತಮ್ಮ ಊರಿಗೆ ಸಂಬಂಧಿಸಿದಂತೆ ಪ್ರಶ್ನೆ ಕೇಳಿದ್ದಾರೆ. ಅದೇನೆಂದರೆ, ಸಸಾಲಟಿ ಮತ್ತು ಮಂಟೂರು ಏತ ನೀರಾವರಿಗೆ ನೀರಿನ ಹಂಚಿಕೆಯನ್ನು ಹೇಗೆ ಮಾಡುತ್ತೀರಿ ಎಂದು ಆಕ್ಷೇಪಣೆ ಮಾಡುವ ರೀತಿ ಮಾತನಾಡಿದ್ದು, ಅದು ಸರಿಯಾದ ವಿಚಾರವಾಗಿಲ್ಲ. ಏಕೆಂದರೆ ನಾವು ಮಾಡುವಂಥ ಸಸಾಲಟಿ ಮತ್ತು ಮಂಟೂರು ಏತ ನೀರಾವರಿಗೆ ಘಟಪ್ರಭ ನದಿಯಿಂದ 89.5 ಟಿ.ಎಂ.ಸಿ., ನೀರು ಹಂಚಿಕೆಯಾಗಿದ್ದು, ಸುಮಾರು 19 ರಿಂದ 20 ಟಿ.ಎಂ.ಸಿ., ನೀರಿನ ಅಭಾವ ಇದೆ. ಆ ಜಲಾನಯನ ಪ್ರದೇಶದಲ್ಲಿ ಪ್ರತಿ ವರ್ಷ ಎಷ್ಟು ಪ್ರಮಾಣದಲ್ಲಿ ಮಳೆಯಾಗುತ್ತದೆ, ಎಷ್ಟು ನೀರು ಉತ್ಪತ್ತಿಯಾಗಿ ನೀರು ಹರಿದು ಬರುತ್ತದೆ ಆ ಒಂದು ಲೆಕ್ಕದ ಮೇಲೆ ನೀರಿನ ಹಂಚಿಕೆಯಾಗುತ್ತದೆ. ಹಾಗಾಗಿ ಇವತ್ತು ಸುಮಾರು 19 ರಿಂದ 20 ಟಿ.ಎಂ.ಸಿ., ನೀರಿನ ಅಭಾವ ಇದೆ. ಆ ಒಂದು ನೀರನ್ನು ಬಳಕೆ ಮಾಡಿ ಉಪಯೋಗ ಮಾಡಿಕೊಳ್ಳಲಾಗುವುದು.

Suffering achcut ಗೆ separate allocation ಬೇಕಾಗಿಲ್ಲ. ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಪಾಟೀಲ್ ಇಟಗಿಯವರು ಕೃಷ್ಣಾದ NRBC and NLBC suffering achcut ಬಗ್ಗೆ ಏನು ಮಾತನಾಡಿದ್ದಾರೆ, ಅದಕ್ಕೆ ಸಂಬಂಧಿಸಿದಂತೆ suffering achcut ಗೆ additional allocation ಬೇಕಾಗಿದೆ. ನಮಗೆ ಹಂಚಿಕೆಯಾಗಿರುವ ನೀರು ಹಾಗೂ ಈಗಾಗಲೇ estimated area, ಅಚ್ಚುಕಟ್ಟು ಪ್ರದೇಶ, Command Area ಗಳೇನಿವೆ ಅದಕ್ಕೆ ಅವಶ್ಯಕವಾಗಿರುವ ನೀರು ಈಗಾಗಲೇ ಹಂಚಿಕೆಯಾಗಿದೆ. ನಮಗೆ ಘಟಪ್ರಭಾ ನದಿಯಿಂದ 87.5 ಟಿ.ಎಂ.ಸಿ., ನೀರು ಹಂಚಿಕೆಯಾಗಿದ್ದು, ಸುಮಾರು 18 ಟಿ.ಎಂ.ಸಿ., ನೀರು ಅಭಾವ ಇದೆ. ನಮ್ಮ ರಾಜ್ಯದಲ್ಲಿಯೇ Hydrology ಯಲ್ಲಿ ಬಹಳ ನುರಿತರಾಗಿರುವಂಥ ಪ್ರೊ.ರಾಮಪ್ರಸಾದ್‌ರವರಿಂದ ವೈಜ್ಞಾನಿಕವಾಗಿ ಅದರ ಬಗ್ಗೆ ಅಧ್ಯಯನ ಮಾಡಿಸಿ, ಅವರ ವತಿಯಿಂದಲೇ ವರದಿ ತರಿಸಿ ಮಾಡಿದ್ದೇನೆ ವಿನಃ ಹಾಗೆಯೇ ಮಾಡಿಲ್ಲ. ನಮ್ಮ ಇಂಜಿನೀಯರ್ಸ್, Mines and Geology ರವರ ಮೇಲೆ ಅವಲಂಬಿತರಾಗಿಲ್ಲ. ಘಟಪ್ರಭ ನದಿಯಿಂದ 87.5 ಟಿ.ಎಂ.ಸಿ., ನೀರು ಹಂಚಿಕೆಯಾಗಿದ್ದು, ಅದರಲ್ಲಿ ಸುಮಾರು 19 ಟಿ.ಎಂ.ಸಿ., ನೀರು ಅಭಾವ ಇದೆ. ಆದರೂ ನಮ್ಮ ನೀರನ್ನೇ ಬಳಕೆ ಮಾಡಿಕೊಳ್ಳುತ್ತಿದ್ದೇವೆ ವಿನಃ ಬೇರೆ ಯಾವ ನೀರನ್ನು ತೆಗೆದುಕೊಳ್ಳುತ್ತಿಲ್ಲ. Already approved Command Area ಗೆ ಉಪಯೋಗ ಮಾಡಲಾಗುತ್ತಿದೆ. ಹೊಸದಾಗಿ ಎಲ್ಲಿಂದಲೂ ನೀರನ್ನು ತೆಗೆದುಕೊಳ್ಳುತ್ತಿಲ್ಲ. ಅದಕ್ಕಾಗಿ ಯಾವುದೇ ತೊಂದರೆ ಇಲ್ಲ ಹಾಗೂ ನೀರಿನ ಹಂಚಿಕೆಯ ಬಗ್ಗೆ ಪ್ರಶ್ನೆ ಕೇಳುವ ಅವಶ್ಯಕತೆಯು ಇಲ್ಲ.

(ಮುಂದು)

**(1315) 23-12-2021/ 6.20/ ಎಸ್.ಕೆ.-ಎಂ.ಡಿ** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಕುಡಿಯುವ ನೀರಿಗೆ ಒಂದು ಟಿ.ಎಂ.ಸಿ. , ಎರಡು ಟಿ.ಎಂ.ಸಿ. ಎಂದು allotment ಮಾಡುತ್ತಿರುವುದು ಏಕೆ? ಈ ಯೋಜನೆ ಮುಗಿದ ಮೇಲೆ ಸಿಂಗಟಲೂರು ಮಾಡಿದಿರಿ. ಇದು ಹೇಗೆ ಬಂತು? ಮೊದಲೇ allotment ಆಗಿರುವಂತಹ ನೀರು. ಕೃಷ್ಣಾ ನದಿಗೂ ಕೂಡ ಅಷ್ಟನ್ನು allotment ಮಾಡಿದಿರಿ. ಇದರಲ್ಲಿ ಒಂಭತ್ತು ಏತ ನೀರಾವರಿ ಬಂದವು. ಅದಕ್ಕೆ allotment ಹೇಗೆ ಬಂತು? ಪ್ರತಿ ವರ್ಷ ಕುಡಿಯುವ ನೀರಿಗೆ ಪಾವಗಡಕ್ಕೆ ಎರಡು ಟಿ.ಎಂ.ಸಿ. ನೀರು ಬೇಕು. ನೀರು ಎಲ್ಲಿಂದ ಬರುತ್ತದೆ?

**ಶ್ರೀ ಗೋವಿಂದ ಎಂ. ಕಾರಜೋಳ (ಬೃಹತ್ ಹಾಗೂ ಮಧ್ಯಮ ನೀರಾವರಿ (ಜಲ ಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೇ, ಇದಕ್ಕೆ ಹೆಚ್ಚಿನ ನೀರಿನ ಅವಶ್ಯಕತೆ ಇಲ್ಲ. ಅವರು ಬುದ್ಧಿವಂತರಿದ್ದರೆ, ಹಣ ಎಲ್ಲಿಂದ ತರುತ್ತೀರಾ ಎಂದು ಒಂದೇ ಅವರು ಕೇಳಬೇಕಾಗಿತ್ತು. ನೀರು ಮಾತ್ರ ಇದೆ. ನೀರು ಹೆಚ್ಚಿಗೆ ಬೇಕಾಗಿಲ್ಲ. ಮಾನ್ಯ ಸದಸ್ಯರು ಕೇಳಿರುವಂತಹದ್ದಕ್ಕೆ ಉತ್ತರವನ್ನು ಹೇಳಿದ್ದೇನೆ. ಕಾನೂನಾತ್ಮಕವಾಗಿ ಮಾಡುತ್ತಿದ್ದೇವೆ. ಕಾನೂನು ಬಾಹಿರವಾಗಿ ಏನು ಮಾಡುವುದಿಲ್ಲ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಇನ್ನು ಮೇಕೆದಾಟು ಬಗ್ಗೆ ತಾವು ಕೇಳಿದಿರಿ. ಮೇಕೆದಾಟು ಬಗ್ಗೆ ಹೇಳುತ್ತೇನೆ. ಕೃಷ್ಣಾ ನ್ಯಾಯಾಧೀಕರಣದ ಬಗ್ಗೆ ಸಾಕಷ್ಟು ಹೇಳಿದ್ದೇನೆ. ಇದರ ಬಗ್ಗೆ ಪ್ರಸ್ತಾಪ ಮಾಡುವುದು ಬೇಕಾಗಿಲ್ಲ. ಈಗಾಗಲೇ ಮಹದಾಯಿ ಬಗ್ಗೆ ಹೇಳಿದ್ದೇನೆ. ಅದರ ಬಗ್ಗೆ ಮಾತನಾಡುವ ಅವಶ್ಯಕತೆ ಏನಿಲ್ಲ. ಮೇಕೆದಾಟು ಬಗ್ಗೆ ತಾವು ಕೇಳಿದಿರಿ. ಮೇಕೆದಾಟು ಯೋಜನೆ 2007 ರಿಂದ ನಿರಂತರವಾದ ಪ್ರಯತ್ನಗಳು ನಡೆಯುತ್ತಿವೆ. 2014 ಕ್ಕೆ Global Expression of Interest ಎಂದು ಹೇಳಿ ಕರೆದಿದ್ದರು. ಅದರ ಮುಂದೆ process ಆಗಲಿಲ್ಲ. ಮೇಕೆದಾಟು ಯೋಜನೆ DPR (Detailed Project Report) ತಯಾರು ಮಾಡುವುದಕ್ಕೆ 2014 ರಲ್ಲಿಯೇ ಕರೆದಿದ್ದರು. ಆದರೆ ಪ್ರೋಸೆಸ್ ಆಗಲಿಲ್ಲ. ಅದು ಹಾಗೆ ಉಳಿಯಿತು. ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಿನಾಂಕ 16.02.2018 ರಂದು ನ್ಯಾಯಾಲಯದಲ್ಲಿ ತೀರ್ಪುಗಳಾಗಿರುವ ಬಗ್ಗೆ Civil Appeal ಗಳನ್ನು ಇಟ್ಟುಕೊಂಡಿದ್ದೇವೆ. ಮುಂದೆ SLP (Special Leave Petition) ಗಳು ಇವೆ. 14.75 ಟಿ.ಎಂ.ಸಿ. ನೀರು additional quantity ನಮಗೆ ಸಿಕ್ಕಿದೆ. ಅದಲ್ಲದೇ ನಮಗೆ ಹೆಚ್ಚುವರಿಯಾಗಿ 14.70 ಟಿ.ಎಂ.ಸಿ. ನೀರು ಸಿಕ್ಕಿದೆ. ಎರಡು ಸೇರಿ, ಕಾವೇರಿ ಬೆಸಿನ್‌ನಲ್ಲಿ ನೀರು allocation ಆಗಿರತಕ್ಕಂತಹದ್ದು 284.75 ಟಿ.ಎಂ.ಸಿ ನೀರು ಇದೆ. ತಮಿಳುನಾಡಿನವರಿಗೆ 177.75 ಟಿ.ಎಂ.ಸಿ.ಗಳಷ್ಟು ನೀರನ್ನು ಬಿಳಿಗೊಂಡ್ಲುಗೆ ನಾವು ಹರಿಸಬೇಕಾಗಿದೆ. ಅದಲ್ಲದೇ ಜಲ ಆಯೋಗಕ್ಕೆ Pre-Feasibility Report ಅನ್ನು ತಯಾರಿಸುವುದಕ್ಕೆ CWC (Central Water Commission) ಗೆ submit ಮಾಡಿದ್ದು. 2014 ನಿಂದ 2018 ವರೆಗೆ ಏನು ಮಾಡಿರಲಿಲ್ಲ. ಆದರೆ ನಾವು ಈಗ ಮೇಕೆದಾಟು ಯೋಜನೆಗೆ ದಿನಾಂಕ 18.01.2019 ರಂದು ಸರ್ಕಾರ 900 ಕೋಟಿ ರೂಪಾಯಿಗಳಿಗೆ DPR ತಯಾರು ಮಾಡಿ, ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಇದು ಬೆಂಗಳೂರು ಕುಡಿಯುವ ನೀರಿಗೆ ಮತ್ತು 400 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ ಇರುವಂತಹ ಯೋಜನೆಯಾಗಿದೆ. ಇದರಲ್ಲಿ ಯಾರಿಗೂ ಸಂಶಯ ಬೇಡವೇ ಬೇಡ. ನಾವು ನಮ್ಮ ಪಾಲಿನ ನೀರನ್ನು ಉಪಯೋಗ ಮಾಡಿಕೊಳ್ಳುತ್ತೇವೆ. ಇದರಲ್ಲಿ ಯಾರ ಅಪ್ಪಣೆಯೂ ಬೇಕಾಗಿಲ್ಲ. ಮಾನ್ಯ ನ್ಯಾಯಾಲಯದ ಮುಂದಿರುವಂತಹ ಸಣ್ಣ-ಪುಟ್ಟ ಸಮಸ್ಯೆಗಳನ್ನು ಬಗೆಹರಿಸಿಕೊಂಡು, ನಾವು ಮಾಡುತ್ತೇವೆ. ನಮಗೆ ಮೇಕೆದಾಟಿನಿಂದ 4.75 ಟಿ.ಎಂ.ಸಿ. ನೀರು ಸಿಕ್ಕಿರುವಂತಹದ್ದು. ಬೆಂಗಳೂರು ಕುಡಿಯುವ ನೀರಿಗೆ ಇರುವಂತಹದ್ದು ಮತ್ತು ಉಳಿದಿರುವಂತಹ ನೀರು ಹೊರಗಡೆ ಹೋಗುತ್ತದೆ. ಅಲ್ಲಿ 400 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಈಗಾಗಲೇ DPR ಅನ್ನು ಕಳುಹಿಸಿಕೊಟ್ಟಿದ್ದೇವೆ. ಮೇಕೆದಾಟು ಯೋಜನೆ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಕಳುಹಿಸಿರುವ ಬಗ್ಗೆ ಹೇಳಿದ್ದೇನೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ನಾನು ಈಗಾಗಲೇ ಹೋಗಿ, ಪ್ರಯತ್ನಗಳನ್ನು ಮಾಡಿದ್ದೇವೆ. ಇಲ್ಲಿ ಬಹಳ ವಿಚಿತ್ರವಾದಂತಹ ಸಮಸ್ಯೆಯಾಗಿದೆ. ನಮ್ಮ ಹಿಂದಿನ ನೀರಾವರಿ ಮಂತ್ರಿಗಳಾದ ಮಾನ್ಯ ರಮೇಶ ಜಾರಕಿಹೊಳಿಯವರು ಒಂದು ಸೈಟ್‌ಗೆ inspection ಗೆ ಹೋಗಿ ಬಿಟ್ಟಿದ್ದರು. ಅದರಿಂದಾಗಿ, ಆಂಗ್ಲ ಪತ್ರಿಕೆಯಲ್ಲಿ ಬಂತು ಎಂದು ಹೇಳಿ, suo moto case ಹಾಕಿಕೊಂಡು, National Green Tribunal, Southern Zone Bench, Chennai case ಹಾಕಿಕೊಂಡು, ನಮ್ಮ ವಿರುದ್ಧ ಒಂದು

ಆದೇಶವನ್ನು ಮಾಡಿದ್ದರು. ಅದನ್ನು ನಾವು Principal Bench, Delhi ಗೆ ಹಾಕಿಕೊಂಡು, ಅದನ್ನು quash ಮಾಡಿಸಿದೆವು. ಅದರ ವಿರುದ್ಧ ಮತ್ತೆ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ PIL (Public Interest Litigation) ಹಾಕಿಕೊಂಡಿದ್ದಾರೆ. ನಾವೂ ಕೂಡ ಇದರಲ್ಲಿ ಹಾಜರಾಗುತ್ತಿದ್ದೇವೆ. ಇದರ ಮಧ್ಯೆ CWC (Central Water Commission) and Cauvery Water Management Authority ಯವರು ದಿನಾಂಕ 25.09.2020 ರಲ್ಲಿ ಏನೊಂದು ಮೀಟಿಂಗ್ ಆಯಿತು. ಆ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ನ್ಯಾಯಾಲಯದ ಮುಂದಿರುವುದರಿಂದ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. 2014 ರಿಂದ 2018 ರವರೆಗೂ ರಾಜ್ಯ ಸರ್ಕಾರ ಮೇಕೆದಾಟು ವಿಚಾರದಲ್ಲಿ ಏನು ಮಾಡಲಿಲ್ಲ ಎನ್ನುವ ಕಾರಣಕ್ಕಾಗಿ ಸಾಕಷ್ಟು ತಡವಾಯಿತು ಎಂದು ಸೂಕ್ಷ್ಮವಾಗಿ ಹೇಳುತ್ತೇನೆ. ಇದು ಮೇಕೆದಾಟು ಪರಿಸ್ಥಿತಿ. Upper Bhadra National Project ಆಗಬೇಕು ಎನ್ನುವುದು almost ಶೇಕಡ 99.9 ರಷ್ಟು ಎಲ್ಲಾ ಪ್ರಕ್ರಿಯೆಗಳು ಮುಗಿದಿವೆ. ಇದು ಮುಂದೆ ಕ್ಯಾಬಿನೆಟ್‌ಗೆ ಹೋಗುತ್ತದೆ. ಕ್ಯಾಬಿನೆಟ್‌ಗೆ ಹೋದ ಮೇಲೆ ನಮಗೆ ಆದೇಶ ಸಿಗುತ್ತದೆ. 60 percent total cost of the project ಗೆ ನಮಗೆ ಅನುದಾನ ಸಿಗುತ್ತದೆ. ಅದರ ಬಗ್ಗೆ ಉಳಿದಂತೆ ಹೆಚ್ಚಿಗೆ ಹೇಳುವ ಅವಶ್ಯಕತೆ ಇಲ್ಲ.

ಎತ್ತಿನಹೊಳೆಯ ಬಗ್ಗೆ ಈಗಾಗಲೇ ಹೇಳಿದ್ದೇನೆ. ಇನ್ನೊಂದು ಕಲ್ಯಾಣ ಕರ್ನಾಟಕದ ಬಗ್ಗೆ ಹೇಳಿ ನನ್ನ ಮಾತನ್ನು ಮುಗಿಸಿಬಿಡುತ್ತೇನೆ. ಹೇಳುತ್ತೇನೆ. ಎಲ್ಲಾ ಇಲಾಖೆಗಳ ಬಗ್ಗೆ ನಾನೇ ಹೇಳಿ ಬಿಡುತ್ತೇನೆ. ಮತ್ತೆ ಏಕೆ ಸುಮ್ಮನೇ ನಾಳೆ ಕಿರಿ ಕಿರಿ ಬೇಡ. ಅವರು ಉತ್ತರ ಹೇಳುವುದು, ತಾವು ಗದ್ದಲ ಮಾಡುವುದು ಬೇಡ. ಈಗ ಹೇಳಿ ನನ್ನ ಮಾತನ್ನು ಮುಗಿಸಿ ಬಿಡುತ್ತೇನೆ. ಮತ್ತೆ ಬೇರೆ ವಿಷಯಗಳನ್ನು ತೆಗೆದುಕೊಳ್ಳುವುದಕ್ಕೆ ತಮಗೆ ಒಂದು ದಿವಸ ಸಮಯ ಸಿಗುತ್ತದೆ. ಕಲ್ಯಾಣ-ಕರ್ನಾಟಕದ ಬಗ್ಗೆ ...

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದ ಬಗ್ಗೆ ಹೇಳಬೇಕು. ಅದು ತುಂಬಾ ಪ್ರಮುಖವಾದ ವಿಷಯವಾಗಿದೆ. ಕೇಂದ್ರ ಸರ್ಕಾರದಿಂದ ತುಂಬಾ ಹಣ ಬರುತಿತ್ತು. ಅದರ ಬಗ್ಗೆ ತಾವು ಏನು ಕ್ರಮ ಕೈಗೊಂಡಿದ್ದೀರಾ. ಕೇಂದ್ರ ಸರ್ಕಾರಕ್ಕೆ ಏನಾದರೂ ಬರೆದಿದ್ದೀರೋ ಅಥವಾ ಇಲ್ಲವೋ,

**ಶ್ರೀ ಗೋವಿಂದ ಎಂ. ಕಾರಜೋಳ:-** ತಾವು ಏನು ಹೇಳುತ್ತಿದ್ದೀರಾ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** Accelerated Irrigation Benefits Programme (AIBP) fund ಎಂದು ಮೊದಲು ಹತ್ತತ್ತು ಸಾವಿರ ಕೋಟಿ ರೂಪಾಯಿಗಳ ಅನುದಾನ ಬರುತ್ತಿತ್ತು. ಇತ್ತೀಚಿನ ದಿನಗಳಲ್ಲಿ ಆ ಅನುದಾನ ಬರುತ್ತಿಲ್ಲ. ಕೇಂದ್ರ ಸರ್ಕಾರದಿಂದ ಯಾವ ಅನುದಾನವು ಬರುತ್ತಿಲ್ಲ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಇಟಗಿಯವರೇ ಬಹಳ ಗಡಿಬಿಡಿ ಮಾಡಬೇಡಿ. ಇವತ್ತು AIBP ಯೋಜನೆ ಕೇಂದ್ರ ಸರ್ಕಾರದಲ್ಲಿ ಇಲ್ಲ. 'ಕೃಷಿ ಸಂಚಾಯಿನಿ' ಎನ್ನುವಂತಹ ಹೊಸ ಯೋಜನೆಯ ಮೂಲಕ ನಮಗೆ ಅನುದಾನವನ್ನು ಕೊಡುತ್ತಿದ್ದಾರೆ. ತುಂತುರು ನೀರಾವರಿ ಮತ್ತೊಂದಕ್ಕೆ ಶೇಕಡ 90 ರಷ್ಟು ಸಬ್ಸಿಡಿ ಕೊಡುವಂತಹ ಕೆಲಸ ಮಾಡುತ್ತಿದ್ದಾರೆ. ಆದರೆ ಹೆಸರು ಮಾತ್ರ ಬದಲಾವಣೆಯಾಗಿದೆ. ಆದರೆ ಯೋಜನೆಗಳು ಒಂದೇ. ಅವು ಏನಾಗಿಲ್ಲ. ಅದರಲ್ಲಿಯೂ ನಮ್ಮ ರಾಜ್ಯಕ್ಕೆ ಅನುದಾನ ಬರುತ್ತದೆ. ಇದರಲ್ಲಿ ಯಾರೂ ಚಿಂತೆ ಮಾಡುವ ಅವಶ್ಯಕತೆ ಇಲ್ಲ.

ಮಾನ್ಯ ಸಭಾಪತಿಯವರೇ, ಕಲ್ಯಾಣ ಕರ್ನಾಟಕದ ಬಗ್ಗೆ ಹೇಳುವುದಾದರೆ, ನಾವು ಕೊಟ್ಟಿರುವಂತಹದ್ದನ್ನು ಹೇಳಿ ಬಿಡುತ್ತೇನೆ. ಉಳಿದಿದ್ದು ಬೇಡ. Guidelines ಏನು ಬೇಕಾಗಿಲ್ಲ. ನಾನು ಇಷ್ಟು ಮಾತ್ರ ಹೇಳುತ್ತೇನೆ. ಮಳೆಯಿಂದಾಗಿ ಸುಮಾರು 2254 ಮನೆಗಳು ಬಿದ್ದಿದ್ದವು. ಬಿದ್ದಂತಹ ಮನೆಗಳಿಗೆ ಪರಿಹಾರವನ್ನು ಕೊಟ್ಟಿದ್ದೇವೆ. ಮೊದಲ ಕಂತಾಗಿ ರೂ.95,000/- ಗಳು ಮತ್ತು ರೂ.1,00,000/- ಗಳನ್ನು ಕೂಡ ಬಿಡುಗಡೆ ಮಾಡಿದ್ದೇವೆ. ಕೆಲವು ಕಡೆ ರೂ.95,100 ಕಡೆ ಆಗಿದೆ. ಬಿಡುಗಡೆ ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಅದರಲ್ಲಿ ಎ.ಬಿ.ಸಿ.ಡಿ ಕೆಟಗೇರಿ ಮಾಡಿದ್ದೇವೆ. ಅದರಂತೆ ಎ.ಬಿ.ಸಿ. ಮೂರು ಕೆಟಗೇರಿ ಸೇರಿ ಒಟ್ಟು 3305 ಮನೆಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದೇವೆ. ಅದಲ್ಲದೇ, 3300 ಮನೆಗಳಿಗೆ ನೀರು ಹೋದಂತಹವುಗಳಿಗೆ ತಲಾ ಹತ್ತತ್ತು ಸಾವಿರ ರೂಪಾಯಿಗಳಂತೆ ಕೊಟ್ಟಿದ್ದೇವೆ. 4,55,000 ಎಕರೆ ಭೂಮಿ ಬೆಳೆ ಹಾನಿಯಾಗಿತ್ತು. ಸುಮಾರು 326 ಕೋಟಿ ರೂಪಾಯಿಗಳ ಪರಿಹಾರವನ್ನು ಬ್ಯಾಂಕ್‌ಗಳ ಮೂಲಕ ಕೊಡುವಂತಹ ಕೆಲಸವನ್ನು ಮಾಡಿದ್ದೇವೆ. ವಸ್ತುಗಳು ಮತ್ತು ಬಟ್ಟೆ, ಮಳೆಯ ಹಾನಿಯಿಂದಾಗಿ, ಬಡವರಿಗೆ ನಷ್ಟವಾಗಿರುವಂತಹದ್ದಕ್ಕೆ 1,249 ಪ್ರತಿ ಕುಟುಂಬಗಳಿಗೆ, ಪ್ರತಿ ಕುಟುಂಬಕ್ಕೆ ರೂ. 10,000/- ಗಳಂತೆ ಪರಿಹಾರ ಕೊಡುವಂತಹ ಕೆಲಸವನ್ನು ಮಾಡಿದ್ದೇವೆ. ಅದಲ್ಲದೇ, ರಸ್ತೆಗಳು ಹಾಳಾಗಿರುವಂತಹ ಲೋಕೋಪಯೋಗಿ ರಸ್ತೆ ಇರಬಹುದು, ಆರ್.ಡಿ.ಪಿ.ಎ.ಆರ್. ರಸ್ತೆ ಇರಬಹುದು. ಇನ್ನುಳಿದಂತಹ ರಸ್ತೆಗಳು ಇರಬಹುದು. ಅವುಗಳನ್ನು ರಿಪೇರಿ ಮಾಡುವುದಕ್ಕೆ ಆಯಾಯ ಇಲಾಖೆಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಅನುದಾನ ಬಿಡುಗಡೆ ಮಾಡುವಂತಹ ಕೆಲಸ ಮಾಡಿದ್ದಾರೆ. ಒಟ್ಟಾರೆಯಾಗಿ ಪ್ರವಾಹ ನಿಯಂತ್ರಣ ಕೆಲಸಕ್ಕೆ ಕಲ್ಯಾಣ ಕರ್ನಾಟಕಕ್ಕೆ ರೂ. 340 ಕೋಟಿ ರೂಪಾಯಿಗಳನ್ನು ಪ್ರವಾಹ ಹಾನಿಗೆ ಹಣವನ್ನು ಕೊಟ್ಟಿದ್ದೇವೆ. ಎರಡನೆಯದಾಗಿ, ಮಾನ್ಯ ಸದಸ್ಯರು ಯಾರು ಮಾತನಾಡುವಂತಹ ಸಂದರ್ಭದಲ್ಲಿ ಹೈದರಬಾದ್-ಕರ್ನಾಟಕದಲ್ಲಿ ನೇಮಕಾತಿಯೇ ಆಗಿಲ್ಲವೆಂದು ಹೇಳಿದರು. ನಾನು ಹೇಳುತ್ತೇನೆ. ಒಟ್ಟು ಅನುಚ್ಛೇದ 371 (ಜೆ) ಅನುಷ್ಠಾನಕ್ಕೆ ಬಂದ ಮೇಲೆ ಸುಮಾರು 1,60,373 ಹುದ್ದೆಗಳು ಖಾಲಿ ನಮ್ಮಲ್ಲಿ ಇರುವಂತಹದ್ದು.

(ಮುಂದು)

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(1316)23.12.2021/6.30/ಎಂ.ಎಂ-ಎಂ.ಡಿ** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಗೋವಿಂದ ಎಂ. ಕಾರಜೋಳ [ಮುಂದು]:-**

ಅದರಲ್ಲಿ ಈಗಾಗಲೇ ಸರ್ಕಾರ ರೂ. 1,01,656 ಜನರಿಗೆ ನೇಮಕಾತಿ ಕೊಟ್ಟಿದೆ. ಬಾಕಿ ಇರುವ 58,717 ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ಮತ್ತು ಬಡ್ತಿ ಮೂಲಕ ಭರ್ತಿ ಮಾಡುವಂತಹದ್ದು 29,143 ಇದೆ. ಅದರ ಪ್ರಕ್ರಿಯೆ ಪ್ರಾರಂಭವಾಗಿದೆ. ನೇಮಕಾತಿ ಹಂತದಲ್ಲಿರುವ ಹುದ್ದೆಗೆ ಸಂದರ್ಶನ ನಡೆದು ನೇಮಕಾತಿ ಆದೇಶ ಕೊಡುವುದು ನಮ್ಮ ಇಲಾಖೆಯಿಂದ ಅನುಚ್ಛೇದ 371ಜೆ ಕೆಳಗೆ ಹಿಂದೆ ಮೀಸಲಾತಿ ಕೊಟ್ಟಿರಲಿಲ್ಲ. ಅಸಿಸ್ಟೆಂಟ್ ಇಂಜಿನಿಯರುಗಳಿಗೆ ಮೊನ್ನೆ ಕೆ.ಪಿ.ಎಸ್.ಸಿ ಮೂಲಕ ನೇಮಕಾತಿ ಮಾಡಲಾಗಿದೆ. ಈಗ 195 ಜನರು ಆಯ್ಕೆಯಾಗಿ ಅವರಿಗೆ ನೇಮಕಾತಿ ಆದೇಶ ಕೊಡುವ ಹಂತದಲ್ಲಿದೆ. Provisional List ಬಿಡುಗಡೆ ಮಾಡಿ objections call for ಮಾಡಿದ್ದಾರೆ. ಆಕ್ಷೇಪಣೆ ಸಲ್ಲಿಸುವ ಅವಧಿ ಮುಗಿದ ತಕ್ಷಣ ಅವರಿಗೆ ನಮ್ಮ ಜಲಸಂಪನ್ಮೂಲ ಇಲಾಖೆಯೊಳಗೆ ನೇಮಕಾತಿ ಕೊಡುವ ಕೆಲಸ ಮಾಡುತ್ತೇವೆ. ಇನ್ನುಳಿದಂತೆ 20,215 ಹುದ್ದೆಗಳನ್ನು ನೇಮಕಾತಿ ಮಾಡಬೇಕಾಗುತ್ತದೆ. ಅದಕ್ಕೆ ಸರ್ಕಾರ ಸೂಚನೆಯನ್ನು ಕೊಡುತ್ತದೆ. ಎ, ಬಿ, ಸಿ, ಡಿ ಕೆಟಗರಿಯಲ್ಲಿ ಸಿ ಮತ್ತು ಡಿ ಕೆಟಗರಿ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವುದಕ್ಕೆ ಆಯಾ ಅಧಿಕಾರಿಗಳಿಗೆ ನೇಮಕಾತಿ ಮಾಡಿಕೊಳ್ಳುವ ಅಧಿಕಾರ ಕೊಡುತ್ತೇವೆ. ಗುಲ್ಬರ್ಗದಲ್ಲಿ ಅಲ್ಲಿಯೇ ನೇಮಕಾತಿ ಮಾಡಿಕೊಳ್ಳುತ್ತಾರೆ. ಎ ಮತ್ತು ಬಿ ಕೆಟಗರಿಯಲ್ಲಿ ಬರುವ ಹುದ್ದೆಗಳು ಕಡಿಮೆ ಇದ್ದು ಸುಮಾರು ಶೇ.20ರಷ್ಟು ಇರುತ್ತದೆ. ಅವುಗಳನ್ನು ಸರ್ಕಾರದ ಮಟ್ಟದಲ್ಲಿ ಮಾಡುವ ಪ್ರಕ್ರಿಯೆ ಮಾಡುತ್ತೇವೆ. ಶೇ. 80ರಷ್ಟು ಅವರನ್ನು ತೆಗೆದುಕೊಳ್ಳುವುದಕ್ಕೆ ಅನುಮತಿ ಕೊಡುತ್ತೇವೆ. ಬೆಳಗಾವಿಯಲ್ಲಿ ಮಾಡುತ್ತಿದ್ದೆವು. ನಾವು ಕಿತ್ತೂರು ಕರ್ನಾಟಕದಲ್ಲಿದ್ದೇವೆ. ಇಲ್ಲಿ ನಮಗೆ ಆಗಿರುವುದನ್ನು ಹೇಳುತ್ತೇನೆ. ಪ್ರವಾಹದಿಂದ ಹಾನಿಯಾಗಿರುವ ಒಟ್ಟು ಮನೆಗಳಿಗೆ; ಬಹಳ ದೊಡ್ಡ ಪ್ರಮಾಣದಲ್ಲಿ ಆದದ್ದು ಇಲ್ಲಿಯೇ. 15,800 ಮನೆಗಳು ಹಾನಿಯಾಗಿದ್ದು ಅದಕ್ಕೆ ಪರಿಹಾರ; ಈಗ ಉತ್ತರ ಕೊಡುತ್ತಿರುವುದು ಈ ವರ್ಷ ಕೊಟ್ಟಿರುವ ಬಗ್ಗೆ. 15,800 ಮನೆಗಳು ಸಂಪೂರ್ಣವಾಗಿ ಹಾನಿಯಾಗಿರುವುದಕ್ಕೆ 226 ಕೋಟಿ ರೂಪಾಯಿ ಕೊಟ್ಟಿದ್ದೇವೆ. ಎ, ಬಿ, ಸಿ, ಡಿ ಕೆಟಗರಿ ಮಾಡಿದ್ದಾರೆ. 15800 ಮನೆಗಳಿಗೆ 226 ಕೋಟಿ ರೂಪಾಯಿಗಳನ್ನು ಈಗಾಗಲೇ ಪೇಮೆಂಟ್ ಮಾಡಿದ್ದೇವೆ. ಅದೇ ರೀತಿಯಾಗಿ 3,57,000 ರೈತರಿಗೆ ಬೆಳೆ ಹಾನಿಯಾಗಿತ್ತು. ಅದಕ್ಕೆ 267 ಕೋಟಿ ರೂಪಾಯಿಗಳನ್ನು ಕೊಡುವಂತಹ ಕೆಲಸ ಮಾಡಿದ್ದೇವೆ. ಅದೂ ಅಲ್ಲದೇ ನಿನ್ನೆ ನಮ್ಮ ಮುಖ್ಯಮಂತ್ರಿಗಳು ಸದನದಲ್ಲಿ ಘೋಷಣೆ ಕೂಡ ಮಾಡಿದ್ದಾರೆ. ಈಗ ಕೇಂದ್ರಸರ್ಕಾರದ NDRF (National Disaster Relief Fund) and SDRF (State Disaster Relief Fund) guidelines ಪ್ರಕಾರ ಬರುತ್ತಿತ್ತು. ಅದರ ಮೇಲೆ ಇನ್ನೂ 10,000/- ರೂಪಾಯಿಗಳನ್ನು ಹೆಚ್ಚಾಗಿ ಕೊಡುವಂತಹದ್ದು ಮತ್ತು 6½ ಸಾವಿರ ಬರುವುದಕ್ಕೆ ಅದರ ಮೇಲೆ 6,000/- ಎಂದರೆ ಕೇಂದ್ರ ಸರ್ಕಾರದಿಂದ ಎಷ್ಟು ಬರುತ್ತದೆ matching grant ಕೊಟ್ಟ ಹಾಗೆ ನಮ್ಮಲ್ಲಿಯೂ ಸೇರಿಸಿ ರೈತರ ಬೆಳೆಗಳಿಗೆ ಡಬಲ್ ಕೊಡುವಂತಹ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಅದು ಅಲ್ಲದೇ ಇನ್ನೊಂದು ಬಹಳ ದೊಡ್ಡ ಪ್ರಮಾಣದಲ್ಲಿ ವಸ್ತುಗಳು ಹಾನಿಯಾಗಿರುವ

ಮನೆಗಳನ್ನು ಸರ್ವೆ ಮಾಡಿಸಿದ್ದೆವು. ಅದು 82,357 ಮನೆಗಳಾಗಿತ್ತು. ಪ್ರತಿ ಮನೆಗೂ ರೂ. 10,000/- ಗಳ ತುರ್ತು ಪರಿಹಾರ ಕೊಡುವ ಕೆಲಸವನ್ನು ಸರ್ಕಾರ ಮಾಡಿದೆ ಹಾಗೂ ಜೀವ ಹಾನಿ, ಪ್ರಾಣ ಹಾನಿಯಾಗಿರುವುದಕ್ಕೂ ಕೂಡ ಶೇ.100ರಷ್ಟು ಪರಿಹಾರವನ್ನು ಈಗಾಗಲೇ ಸಂಬಂಧಪಟ್ಟ ಕುಟುಂಬಕ್ಕೆ ಕೊಡುವಂತಹ ಕೆಲಸವನ್ನು ಸರ್ಕಾರ ಮಾಡಿದೆ. ಪಿ.ಡಬ್ಲ್ಯೂ.ಡಿ., ಆರ್.ಡಿ.ಪಿ.ಆರ್ ಮತ್ತು ನಗರದ ರಸ್ತೆಗಳು ಏನು ಹಾಳಾಗಿವೆ ಅವನ್ನು ರಿಪೇರಿ ಮಾಡುವುದಕ್ಕೆ ಈಗಾಗಲೇ ಅನುದಾನವನ್ನು ಸಂಬಂಧಪಟ್ಟಂತಹ ಇಲಾಖೆಯ ಅಧಿಕಾರಿಗಳಿಗೆ ಕೊಟ್ಟಿದ್ದೇವೆ, ಕೂಡಲೇ ಪ್ರಾರಂಭ ಮಾಡಬೇಕೆಂದು ಅವರಿಗೆ ಸೂಚನೆಯನ್ನು ಕೂಡ ಕೊಟ್ಟಿದ್ದೇವೆ. ಮಳೆ ಬಿಡದೇ ಇರುವುದರಿಂದ ಸ್ವಲ್ಪ ವಿಳಂಬವಾಗಿದೆ. ಏಕೆಂದರೆ 15 ದಿವಸಕ್ಕೆ ಬರುವಾಗಲೇ ಮತ್ತೆ ಮಳೆಯಾಗುತ್ತದೆ. ಹೀಗಾಗಿ ಕೆಲಸ ಮಾಡುವುದಕ್ಕೆ site conditions ಸರಿ ಇಲ್ಲದಕ್ಕಾಗಿ ಮಾಡುವುದಕ್ಕೆ ಆಗಿಲ್ಲ. ಒಟ್ಟಾರೆ ಕಿತ್ತೂರು ಕರ್ನಾಟಕದಲ್ಲಿ ಪ್ರವಾಹ ಹಾನಿಗೆ ನಾವು 576 ಕೋಟಿ ರೂಪಾಯಿಗಳನ್ನು ಈಗಾಗಲೇ ಪೇಮೆಂಟ್ ಮಾಡಿದ್ದೇವೆ. ಇನ್ನೂ ಬರುವಂತಹದ್ದನ್ನು ಮಾಡುತ್ತೇವೆ. ಏಕೆಂದರೆ ಮುಖ್ಯಮಂತ್ರಿಯವರು ಹೆಚ್ಚಿನ ಹಣವನ್ನು ಘೋಷಣೆ ಮಾಡಿದ್ದರಿಂದ ಇನ್ನಷ್ಟು ಮಾಡಬೇಕಾದಂತಹ ಪರಿಸ್ಥಿತಿ ಬರುತ್ತದೆ.

ಶಿಕ್ಷಣದ ಬಗ್ಗೆಯೂ ಕೆಲವರು ಮಾತನಾಡಿದರು. ನಮ್ಮ ರಾಜ್ಯದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ 13,777 ಹುದ್ದೆಗಳು ಖಾಲಿ ಇವೆ. ಹೈಸ್ಕೂಲ್‌ನಲ್ಲಿ 1995 ಹುದ್ದೆಗಳು ಖಾಲಿ ಇವೆ. ಅವುಗಳ ನೇಮಕಾತಿ ಪ್ರಕ್ರಿಯೆಯನ್ನು ಸರ್ಕಾರ ಮಾಡುತ್ತದೆ ಎಂಬುದನ್ನು ಹೇಳಬಯಸುತ್ತೇನೆ. ಪಶು ವಿಶ್ವವಿದ್ಯಾನಿಲಯದಲ್ಲಿ 470 ಬೋಧಕರು, 822 ಬೋಧಕೇತರರ ಖಾಲಿ ಹುದ್ದೆಗಳಿವೆ. ಅವನ್ನು ಕೂಡ ಭರ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಒಟ್ಟಾರೆ ಈಗ ಕಲ್ಯಾಣ ಕರ್ನಾಟಕ ಮತ್ತು ಮುಂಬೈ ಕರ್ನಾಟಕ ಎಂದು ನಮ್ಮ ಅಧಿಕಾರಿಗಳು ಬರೆದಿದ್ದಾರೆ. ಕಿತ್ತೂರು ಕರ್ನಾಟಕ ಎರಡೂ ಕಡೆ ಹುದ್ದೆಗಳು ಖಾಲಿ ಇರುವುದು ಪಿ.ಯು ಕಾಲೇಜುಗಳಲ್ಲಿ. ಕಲ್ಯಾಣ ಕರ್ನಾಟಕದಲ್ಲಿ 526 ಹುದ್ದೆಗಳು ಖಾಲಿ ಇದೆ. ಕಿತ್ತೂರು ಕರ್ನಾಟಕದಲ್ಲಿ 818 ಹುದ್ದೆಗಳು ಖಾಲಿ ಇದೆ. ಅವುಗಳನ್ನು ಭರ್ತಿ ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ಈಗ ಬೇಡ ಮಾನ್ಯ ಸಚಿವರು ಮಾತನಾಡಲಿ.

**ಶ್ರೀ ಗೋವಿಂದ ಎಂ. ಕಾರಜೋಳ**:- ಮಾನ್ಯ ಸಭಾಪತಿಯವರೇ, ಡಾಕ್ಟರ್ಸ್ ಬಗ್ಗೆ ಎಲ್ಲಾ ಸದಸ್ಯರು ಮಾತನಾಡಿದರು. ಉತ್ತರ ಕರ್ನಾಟಕದಲ್ಲಿ ಅದರಲ್ಲಿಯೂ ವಿಶೇಷವಾಗಿ ಕಲ್ಯಾಣ ಕರ್ನಾಟಕದಲ್ಲಿ ಒಂದೊಂದು ಲಕ್ಷಕ್ಕೆ ಒಂದೊಂದು ಆಸ್ಪತ್ರೆಗಳಿವೆ. ಉದಾಹರಣೆಗೆ ರಾಯಭಾಗ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ತಾಲ್ಲೂಕಿನಲ್ಲಿ ಒಂದು ಲಕ್ಷಕ್ಕೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಇರುವ ಬಗ್ಗೆ ಹೇಳಿದರು. ಸರ್ಕಾರ ಅದನ್ನು ಗಂಭೀರವಾಗಿ ಪರಿಗಣಿಸುತ್ತದೆ. ಕೇಂದ್ರ ಸರ್ಕಾರದ ನೀತಿ ಪ್ರಕಾರ 30,000ಕ್ಕೊಂದು ಪ್ರಾಥಮಿಕ ಆರೋಗ್ಯ ಕೇಂದ್ರ ಇರಬೇಕು. ಆದರೆ ಹಳೆಯ ಮೈಸೂರು ಭಾಗದಲ್ಲಿ 10,000ಕ್ಕೊಂದು ಪ್ರಾಥಮಿಕ ಆರೋಗ್ಯ ಕೇಂದ್ರ ಇವೆ. ಇಲ್ಲಿ ಆಗಿಲ್ಲ ಎನ್ನುವ ಕಾರಣಕ್ಕೆ ಬಸವರಾಜ ಇಟಗಿಯವರೇ, ಸ್ವಾತಂತ್ರ್ಯ ಬಂದು 75 ವರ್ಷವಾದರೂ ನಾವು ಹಿಂದುಳಿದ ಹಣೆಪಟ್ಟಿಯನ್ನು ಕಟ್ಟಿಕೊಂಡು ಕುಳಿತಿದ್ದೇವೆ. 2050 ಎಂ.ಬಿ.ಬಿ.ಎಸ್ ಡಾಕ್ಟರುಗಳ ನೇಮಕಾತಿ ಮಾಡಿದ್ದೇವೆ. ಉತ್ತರ ಕರ್ನಾಟಕದಲ್ಲಿ 911 ಜನರಿಗೆ posting ಮಾಡಿದ್ದೇವೆ. ಕೆಲವರು ಕೆಲಸಕ್ಕೆ ಸೇರಿದ್ದಾರೆ, ಇನ್ನು ಕೆಲವರು ಸೇರಿಲ್ಲ. ಅವರ ಬದಲಿಗೆ ಬೇರೆ ನೇಮಕಾತಿ ಮಾಡುವ ಪ್ರಕ್ರಿಯೆಯನ್ನು ಮುಂದುವರೆಸುತ್ತೇವೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಿ, ಅದಲ್ಲದೇ ಲಸಿಕೆ ಕಾರ್ಯಕ್ರಮವನ್ನು ಕೂಡ ನಾವು ಹೇಳಬೇಕಾಗುತ್ತದೆ.

ಲಸಿಕೆಯನ್ನು ಹಾಕುವಂತಹ ಕೆಲಸದಲ್ಲಿ ಈಗಾಗಲೇ ಸಾಕಷ್ಟು ಪ್ರಗತಿಯನ್ನು ಮಾಡಿದ್ದೇವೆ. ಎರಡನೇ ಡೋಸ್ ಯಾರು ತೆಗೆದುಕೊಂಡಿಲ್ಲ ಅವರು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿದ್ದೇವೆ. ಒಟ್ಟಾರೆ ಲಸಿಕೆ ಹಾಕಿಸಿಕೊಳ್ಳದೇ ಇರುವವರಿಗೂ ಕೂಡ ಹಾಕಿಸಿಕೊಳ್ಳಬೇಕೆಂದು ಹೇಳಿದ್ದೇವೆ. ದೇಶದ ಪ್ರಧಾನಮಂತ್ರಿಯವರಾದ ಸನ್ಮಾನ್ಯ ನರೇಂದ್ರ ಮೋದಿಯವರು ಬಹಳ ದೊಡ್ಡ ಕೆಲಸ ಮಾಡಿರುವುದು ಈ ದೇಶದಲ್ಲಿ ಪ್ರತಿ ವರ್ಷ 06 ಕೋಟಿ 25 ಲಕ್ಷ dose vaccine ತಯಾರಾಗುತ್ತಿತ್ತು. ಅದನ್ನು ಯಾವುದಕ್ಕೆ ಉಪಯೋಗ ಮಾಡುತ್ತಿದ್ದರೆಂದರೆ ಗರ್ಭಿಣಿ ಹೆಣ್ಣುಮಕ್ಕಳು ಮತ್ತು ಆರು ವರ್ಷದ ಒಳಗಿನ ಮಕ್ಕಳಿಗೆ ಹಾಕುವುದಕ್ಕೆ ಉಪಯೋಗ ಮಾಡುತ್ತಿದ್ದರು. ಆದರೆ ಇವತ್ತು ಕೊರೋನಾದಂತಹ ಕೆಟ್ಟ ರೋಗ ಬಂದ ಮೇಲೆ ದೇಶದ ಉದ್ದಗಲಕ್ಕೂ 130 ಕೋಟಿ ಜನರಿಗೂ ಲಸಿಕೆ ಹಾಕುವಂತಹ ಪರಿಸ್ಥಿತಿ ಬಂತು. 260 ಕೋಟಿ dose vaccine ಯನ್ನು ಉತ್ಪಾದನೆ ಮಾಡುವುದು ಬಹಳ ದೊಡ್ಡ ಸಾಹಸ ಕೆಲಸವದು. ಪ್ರಪಂಚದ ಅನೇಕ ದೇಶಗಳವರು ಕೂಡ ನಾವು ಮಾಡಿದ ಸಾಧನೆಯನ್ನು ಹೇಳಿದ್ದಾರೆ. ಇನ್ನೊಂದು ದೇಶದ ಉದ್ದಗಲಕ್ಕೂ ಮತ್ತು ರಾಜ್ಯದ ಉದ್ದಗಲಕ್ಕೂ ನಮ್ಮ ಆಸ್ಪತ್ರೆಗಳ ವ್ಯವಸ್ಥೆ ಸರಿ ಇರಲಿಲ್ಲ. ICU bed, Oxygen bed ಕಡಿಮೆ ಇತ್ತು, ventilators ಇರಲಿಲ್ಲ. Oxygen Plant ಗಳಿರಲಿಲ್ಲ. ಎರಡು ವರ್ಷದ ಮುಂಚೆ ಕೊರೋನಾ ಬಂದಂತಹ ಸಂದರ್ಭದಲ್ಲಿ ಒಂದೇ ಒಂದು Laboratory ಇತ್ತು. ನನಗೆ ಕೊರೋನಾ ಬಂದಿದೆಯೆಂದು ಟೆಸ್ಟ್ ಮಾಡಲು ಕಳುಹಿಸಿದರೆ ಅದರ ರಿಪೋರ್ಟ್ 8, 10, 15 ದಿವಸವಾದರೂ ಬರುತ್ತಿರಲಿಲ್ಲ. ಅಷ್ಟೊತ್ತಿಗೆ ಕೆಲವು ರೋಗಿಗಳು ಸತ್ತು ಹೋಗುತ್ತಿದ್ದರು. ಅಂತಹ ಪರಿಸ್ಥಿತಿ ಇತ್ತು. ಇವತ್ತು ರಾಜ್ಯದ ಉದ್ದಗಲಕ್ಕೂ 180 Laboratory ಗಳನ್ನು ಸ್ಥಾಪನೆ ಮಾಡಿದ್ದೇವೆ. ಎಲ್ಲಾ ಆಸ್ಪತ್ರೆಗಳಲ್ಲಿಯೂ ventilator ಗಳ ವ್ಯವಸ್ಥೆ ಮಾಡಿದ್ದೇವೆ. 100ಕ್ಕೆ 100 ಕೊಟ್ಟಿದ್ದೇವೆ ಎಂದಲ್ಲ, Immediate attend ಮಾಡುವುದಕ್ಕೆ ಏನು ಬೇಕು ಅದನ್ನು ಮಾಡಿದ್ದೇವೆ. Oxygen bed ಗಳನ್ನು, ICU bed ಗಳನ್ನು ಮಾಡಿದ್ದೇವೆ. ಆಸ್ಪತ್ರೆಗಳ ಗುಣಮಟ್ಟವನ್ನು ಹೆಚ್ಚಿಸುವಂತಹ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. ಕೇಂದ್ರ ಸರ್ಕಾರದ

ಸಹಯೋಗದೊಂದಿಗೆ ಮಾನ್ಯ ನರೇಂದ್ರ ಮೋದಿಯವರ ಮುಂದಾಲೋಚನೆಯಿಂದ ಸಾಕಷ್ಟು ಕೆಲಸವನ್ನು ಮಾಡಿದ್ದೇವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಎರಡೂವರೆ ವರ್ಷದಿಂದ ನಮ್ಮ ಸರ್ಕಾರ ಸಂಕಷ್ಟದಲ್ಲಿದೆ. ತಮಗೇ ಗೊತ್ತಿದೆ. ಆರು ತಿಂಗಳುಗಳ ಕಾಲ ಒಂದೇ ಒಂದು ಕಾರ್ಖಾನೆ ಬಾಗಿಲು ತೆರೆಯಲಿಲ್ಲ. ವ್ಯಾಪಾರ ವಹಿವಾಟುಗಳಾಗಲಿಲ್ಲ. ನಮ್ಮ ಬಸ್‌ಗಳು ಕಾಂಪೌಂಡ್ ಬಿಟ್ಟು ಹೊರಗಡೆ ಹೋಗಲಿಲ್ಲ, ರೈಲುಗಳು ಮುಂದಕ್ಕೆ ಚಲಿಸಲಿಲ್ಲ. ಇಂತಹ ಒಂದು ಕೆಟ್ಟ ಪರಿಸ್ಥಿತಿಯೊಳಗೆ ಕೂಡ ನಾವು ಉತ್ತಮವಾದ ಆಡಳಿತವನ್ನು ಮಾಡಿದ್ದೇವೆ ಎನ್ನುವುದನ್ನು ಹೇಳಬಯಸುತ್ತೇನೆ. ಸಾಲ ಮಾಡಿಯಾದರೂ ಮಾಡಿದ್ದೇವೆ.

(ಮುಂದು)

**(1317) 23-12-2021 KH/AK 6-40 (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಗೋವಿಂದ ಎಂ ಕಾರಜೋಳ(ಮುಂದು):-**

ಇದ್ದಂತಹ ಎಲ್ಲ resources ಅನ್ನೂ ಉಪಯೋಗ ಮಾಡಿ ಮಾಡುವಂತಹ ಕೆಲಸವನ್ನು ಮಾಡಿದರು. ನಾನು ಈ ಸಂದರ್ಭದಲ್ಲಿ ಇಷ್ಟೇ ಹೇಳುವುದಕ್ಕೆ ಬಯಸುತ್ತೇನೆ. 2 ವರ್ಷಗಳ ಕಾಲ ಮಾನ್ಯ ಬಿ.ಎಸ್.ಯಡಿಯೂರಪ್ಪನವರ ಸರ್ಕಾರ, ಇವತ್ತು ಬಸವರಾಜ ಬೊಮ್ಮಾಯಿಯವರ ಸರ್ಕಾರ ಉತ್ತಮವಾದಂತಹ ಕೆಲಸ ಕಾರ್ಯಗಳನ್ನು ಮಾಡುತ್ತಿದೆ. ಜನಪರವಾದಂತಹ ಕೆಲಸ ಕಾರ್ಯಗಳನ್ನು ಮಾಡುತ್ತಿದೆ. ಅದಕ್ಕಾಗಿ ಈ ಸದನದ ಎಲ್ಲಾ ಸದಸ್ಯರ ಸಹಕಾರವನ್ನು ಕೇಳುವಂತಹ ಕೆಲಸವನ್ನು ಮಾಡುತ್ತೇನೆ. ನನಗೆ ಉತ್ತರ ಹೇಳುವುದಕ್ಕೆ ಅವಕಾಶ ಕೊಟ್ಟಿರುವುದಕ್ಕೆ ತಮಗೆ ಧನ್ಯವಾದಗಳು.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಗೋವಿಂದ ಎಂ. ಕಾರಜೋಳರವರೇ, ತಾವು ಕೃಷಿ ವಿಚಾರವಾಗಿ ಏನು ಹೇಳಲಿಲ್ಲ?

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ನಸೀರ್ ಅಹ್ಮದ್‌ರವರೇ, ನಾನು ಒಂದು ನಿಮಿಷ ಮಾತನಾಡಿ ಮುಗಿಸುತ್ತೇನೆ. ಮಾನ್ಯ ಸಚಿವರು ಒಳ್ಳೆಯ ಉತ್ತರವನ್ನು ಕೊಟ್ಟಿದ್ದಾರೆ. ನಾನು ಅವರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ನಸೀರ್ ಅಹ್ಮದ್‌ರವರೇ, ಒಂದು ನಿಮಿಷ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಜಲ ಸಂಪನ್ಮೂಲ ಸಚಿವರು ಬಹಳಷ್ಟು ಸುದೀರ್ಘವಾಗಿ ಕೃಷ್ಣಾ ಮೇಲ್ದಂಡೆ ಯೋಜನೆ, ಮಹದಾಯಿ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಯೋಜನೆ, Navali Balancing Reservoir ಮತ್ತು ಕಲ್ಯಾಣ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕದ ಬಗ್ಗೆ ಬಹಳಷ್ಟು ವಿಚಾರಗಳನ್ನು ಸೇರಿಸುವುದರ ಜೊತೆಗೆ ನಿಯಮ 68 ರಡಿಯಲ್ಲಿ ಪ್ರವಾಹ ಮತ್ತು ಅತಿವೃಷ್ಟಿಯಿಂದ ಆಗಿರುವ ಹಾನಿ ಬಗ್ಗೆ ಕೂಡ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ಗೋವಿಂದ ಎಂ.ಕಾರಜೋಳ (ಜಲಸಂಪನ್ಮೂಲ ಸಚಿವರು):-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ತಮಗೆ ಹೇಳಿಯೇ ಪ್ರಾರಂಭ ಮಾಡಿದೆ. ಏಕೆಂದರೆ, ನಾಳೆ ಒಂದೇ ದಿನ ಅಧಿವೇಶನಕ್ಕೆ ಅವಕಾಶ ಇರುವುದು. ಉಳಿದ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ತಮಗೆ ಅನುವು ಮಾಡಿಕೊಟ್ಟಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಒಳ್ಳೆಯದಾಯಿತು. ನಮಗೆ ಅವರೇ ಹೇಳಬೇಕೆಂದಿಲ್ಲ. ತಾವು ಉತ್ತರ ಹೇಳಿದ್ದರಲ್ಲವೇ? ಆದರೆ, ಬಹುತರವಾಗಿ ಈ ಕಡೆ, ಆ ಕಡೆಯ ಎಲ್ಲಾ ಸದಸ್ಯರು ಕೃಷ್ಣಾ ಮೇಲ್ದಂಡೆ ಯೋಜನೆ, ಮಹದಾಯಿ ಯೋಜನೆ, Navali Balancing Reservoir ವಿಚಾರವಾಗಿ ಚರ್ಚೆ ಮಾಡಿದ್ದೇವೆ. ನಾವು ಸರ್ಕಾರಕ್ಕೆ ತಾವು ಮಾಡಲಿಲ್ಲ. ತಾವು ಹೀಗೆ ಮಾಡಿದ್ದೀರಿ. ಹಾಗೆ ಮಾಡಿದ್ದೀರಿ ಎಂದು ಒಂದು ಟೀಕೆ-ಟಿಪ್ಪಣಿಗಳನ್ನು ನಾವು ಮಾಡಲಿಲ್ಲ. ಬಹಳ ವಾಸ್ತವಿಕ ನೆಲೆಗಟ್ಟಿನಲ್ಲಿ ಏನಿದೆ ಎನ್ನುವಂತಹ ವಿಚಾರಗಳನ್ನು ನಾವು ಹೇಳಿದ್ದೇವೆ. ನಾನು ಮಾತನಾಡುವಾಗ ಇದು ಯಾವಾಗ ಪ್ರಾರಂಭವಾಯಿತು? ಇದು ಯಾವ ರೀತಿ ಕುಂಟು ಇಲ್ಲಿಯವರೆಗೆ ಬಂದಿದೆ? ಎಂದು ಹೇಳಿದ್ದೇನೆ. ಅದು ಯಾವುದೇ ಪಕ್ಷದ ಸರ್ಕಾರ ಇರಲಿ, ನಿಧಾನವಾಗಿ ಆಗಿರುವುದನ್ನು ಹೇಳಿದ್ದೇವೆ. ಇವತ್ತು ನಾವು ಬಸವರಾಜ ಬೊಮ್ಮಾಯಿಯವರ ಸರ್ಕಾರದ ಮೇಲೆ ನಮ್ಮ ಪಕ್ಷದ ಒಬ್ಬ ಸದಸ್ಯರು ಕೂಡ ಟೀಕೆ-ಟಿಪ್ಪಣಿಗಳನ್ನು ಮಾಡಲಿಲ್ಲ? ನಾವು ಯೋಜನೆಗಳು ಆಗಲಿ ಎನ್ನುವ ಕಳಕಳಿಯಿಂದ ಕರ್ನಾಟಕ ರಾಜ್ಯದ ಎರಡನೇ ರಾಜಧಾನಿ ಎನಿಸಿಕೊಂಡಿರುವಂತಹ ಬೆಳಗಾವಿಯಲ್ಲಿ 3 ವರ್ಷದ ನಂತರ ನಡೆಯುವಂತಹ ಅಧಿವೇಶನದಲ್ಲಿ ಈ ಉತ್ತರ ಕರ್ನಾಟಕದ ಜಲ್ವಂತ ಸಮಸ್ಯೆಗಳ ಬಗ್ಗೆ ಪಕ್ಷಾತೀತವಾಗಿ ಯಾರ ಮೇಲೆಯೂ ಟೀಕೆ-ಟಿಪ್ಪಣಿಗಳನ್ನು ಮಾಡಲಾರದೇ ನಾವು ಚೆನ್ನಾಗಿ ಮಾತನಾಡಿದೆವು. ನಮ್ಮ ಜಿಲ್ಲೆಗೆ ಮಾನ್ಯ ಗೋವಿಂದ ಎಂ.ಕಾರಜೋಳರವರು ಹಿರಿಯರು, ಅನುಭವಸ್ಥರು, ಮುತ್ಸದ್ದಿ ರಾಜಕಾರಣಿಗಳೆಂದು ತಮಗೂ ಗೊತ್ತಿದೆ. ಅವರು ಯಾಕೋ ಸ್ವಲ್ಪ ರಾಜಕೀಯ ಬೆರೆಸಿದರು ಎಂದು ಅನಿಸುತ್ತದೆ. ತಮ್ಮಂತಹ ಹಿರಿಯರಿಂದ ನಾನು ಈ ರೀತಿ ನಿರೀಕ್ಷೆ ಮಾಡಿರಲಿಲ್ಲ. ಇದ್ದರಿಂದ, ನಮಗೆ ಸ್ವಲ್ಪ ಮುಜುಗರವೆನಿಸಿತು. ತಾವು ಡಿಫೆಂಡ್ ಮಾಡಿಕೊಂಡು ಸರ್ಕಾರ ನಡೆಸುತ್ತೀರಿ. ಕೆಲವೊಂದು ಲೋಪದೋಷಗಳು ಇದ್ದಾಗ ಅದನ್ನೆಲ್ಲಾ ನಮ್ಮ ಮೇಲೆ ಹಾಕಿ, ಶುದ್ಧ ಮಾಡಿಕೊಳ್ಳುವುದಕ್ಕೆ ಒಳ್ಳೆಯ ಪ್ರಯತ್ನ ಮಾಡಿದಿರಿ. ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಆದರೆ, ತಮ್ಮ ಉತ್ತರದಲ್ಲಿ ಮೊದಲನೇ ಆದ್ಯತೆಯಂತೆ 20 ಹಳ್ಳಿಗಳು ಏನು ಮುಳುಗುತ್ತವೆ, ಆ ಹಳ್ಳಿಯಲ್ಲಿರುವ ಎಲ್ಲಾ ಮನೆಗಳನ್ನು ಸ್ವಾಧೀನಪಡಿಸಿಕೊಂಡು, ಆ 20

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಳ್ಳಿಗಳನ್ನು ಪುನರ್ವಸತಿ ಕೇಂದ್ರಗಳನ್ನಾಗಿ ನಿರ್ಮಿಸುವ ಸಲುವಾಗಿ 6,000 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಆದ್ಯತೆ ಕೊಡುತ್ತೇವೆ ಮತ್ತು ಅಲ್ಲಿ ಪುನರ್ವಸತಿ ಕೇಂದ್ರಗಳನ್ನು ಮಾಡಿ, ಮೂಲಭೂತ ಸೌಲಭ್ಯಗಳನ್ನು ಒದಗಿಸುವಂತಹ ಕೆಲಸಗಳನ್ನು ಮಾಡುತ್ತೇವೆ. ನಂತರ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ 519.6 ಮೀಟರ್‌ನಿಂದ 524.256 ಮೀಟರ್‌ವರೆಗೆ ತಮ್ಮ ಭೂಮಿಯಿಂದ ಹಿಡಿದು ನಮ್ಮ ಭೂಮಿಯವರೆಗೂ ಮುಳುಗುತ್ತದೆ. ಇದನ್ನು ಎರಡನೇ ಆದ್ಯತೆಯ ಮೇಲೆ ಅವುಗಳನ್ನು ಕೂಡ ನಾವು ಸ್ವಾಧೀನಪಡಿಸಿಕೊಂಡು ನ್ಯಾಯಸಮ್ಮತವಾದಂತಹ, ಯೋಗ್ಯವಾದಂತಹ ಪರಿಹಾರಧನವನ್ನು ಕೊಡಬೇಕೆಂದು ತಾವು ಏನು ಹೇಳಿದ್ದೀರಿ? ಇದನ್ನು ನಾನು ಕೂಡ ಸ್ವಾಗತ ಮಾಡುತ್ತೇನೆ. ಆದರೆ, ಒಂದೇ ಒಂದು ನಾನು ನಿರೀಕ್ಷೆ ಮಾಡಿದ್ದೆ. ಇವತ್ತು ನಾನು ಮಾತನಾಡುವಂತಹ ಸಂದರ್ಭದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತದಲ್ಲಿ 7 ಜಿಲ್ಲೆಗಳಿಗೆ ಫಲಪ್ರದವಾಗುವಂತಹದ್ದು ಆಗಿದೆ. 14 ಲಕ್ಷ ಎಕರೆ ಜಮೀನು ನೀರಾವರಿ ಆಗುವಂತಹದ್ದು ಆಗಿದೆ. ಅಂದಾಜು 60,000 ಕೋಟಿ ರೂಪಾಯಿಗಳ ಯೋಜನೆ ಇದೆಯಲ್ಲವೇ? ಇದನ್ನು ನಾನು ತೆಲಂಗಾಣದಲ್ಲಿ ಕಾಳೇಶ್ವರಂ, world's biggest lift irrigation project ನಲ್ಲಿ ಮಾಡಿದ್ದಾರೆ. ನಮ್ಮಲ್ಲಿ 7 ಜಿಲ್ಲೆಗಳಿಗೆ ಫಲಪ್ರದವಾದರೆ, ಅಲ್ಲಿ 13 ಜಿಲ್ಲೆಗಳಿಗೆ ಫಲಪ್ರದವಾಗುತ್ತದೆ. ಆ ಯೋಜನೆಗೆ 1.20 ಸಾವಿರ ಕೋಟಿ ರೂಪಾಯಿಗಳಾದರೆ, ನಮ್ಮ ಯೋಜನೆಗೆ 60 ಸಾವಿರ ಕೋಟಿ ರೂಪಾಯಿಗಳಾಗುತ್ತದೆ. ನಮ್ಮದು 14 ಲಕ್ಷ ಎಕರೆ ಜಮೀನು ನೀರಾವರಿಯಾದರೆ, ಅಲ್ಲಿ 28 ಲಕ್ಷ ಎಕರೆ ಜಮೀನು ನೀರಾವರಿಯಾಗುತ್ತದೆ. It is exactly double. ಇದನ್ನು ಅವರು 3 ವರ್ಷಗಳಲ್ಲಿಯೇ ಮುಗಿಸಿಬಿಟ್ಟಿದ್ದಾರೆ. 2016ನೇ ಸಾಲಿನಲ್ಲಿ ಪ್ರಾರಂಭ ಮಾಡಿ 2019ನೇ ಸಾಲಿನಲ್ಲಿ ಪೂರ್ಣಗೊಳಿಸಿದ್ದಾರೆ. ಇನ್ನು ತಮ್ಮ ಅವಧಿ ಒಂದೂವರೆ ವರ್ಷಗಳು ಇದೆಯಲ್ಲವೇ? ಅದರ ಅರ್ಧ ಕೆಲಸ ನಮ್ಮದು. ಇದನ್ನು ತಾವು ಒಂದೂವರೆ ವರ್ಷದೊಳಗೆ ಮುಗಿಸಿಬಿಡಬಹುದೆಂದು ನಾನು ನಿರೀಕ್ಷೆ ಮಾಡಿ ಚರ್ಚೆ ಮಾಡಿದ್ದೆ. ಬಹುತರವಾಗಿ ಇದರ ಬಗ್ಗೆ ಮಾನ್ಯ ಗೋವಿಂದ ಎಂ.ಕಾರಜೋಳರವರು ಮಾತನಾಡಿದರು. ಏಕೆಂದರೆ, ಒಂದೂವರೆ ವರ್ಷದೊಳಗೆ ಇದನ್ನು ಪೂರ್ಣಗೊಳಿಸುವುದು ಕಷ್ಟ ಸಾಧ್ಯ ಎಂದು ಅವರು ತಿಳಿದಿರಬೇಕು. ಏಕೆಂದರೆ, ತೆಲಂಗಾಣ ರಾಜ್ಯ ನೆನ್ನೆಯ ದಿವಸ ಹುಟ್ಟಿ, ಇಂದು ಕಣ್ಣು ತೆರೆದಂತಹ ರಾಜ್ಯದವರು Kaleshwaram, world's biggest lift irrigation project, ಬೃಹದಾಕಾರವಾದಂತಹ ದೊಡ್ಡ ಯೋಜನೆಯನ್ನು 3 ವರ್ಷಗಳಲ್ಲಿ ಮುಗಿಸಿದ್ದಾರೆ. ಅದರ ಅರ್ಧದಷ್ಟು ಎಲ್ಲಾದರಲ್ಲಿಯೂ ಕೂಡ irrigable area ವನ್ನು ತೆಗೆದುಕೊಳ್ಳಿ, cost ನಲ್ಲಿ ತೆಗೆದುಕೊಳ್ಳಿ, coverage of district ತೆಗೆದುಕೊಂಡರೆ ಅದರ ಅರ್ಧದಷ್ಟು ಇದ್ದು, ಒಂದೂವರೆ ವರ್ಷದಲ್ಲಿ ಪೂರ್ಣಗೊಳಿಸುತ್ತೇವೆ ಎಂದು ಅದೊಂದು ಮಾತು ಹೇಳಿದ್ದರೆ ಬಹಳ ಸಂತೋಷವಾಗುತ್ತಿತ್ತು. ಅವರು ಏಕೋ ಹೇಳಲಿಲ್ಲ? ಆದರೆ, ತಾವು ಹೇಳಲಿಲ್ಲವೆಂದರೂ ಚಿಂತೆ ಇಲ್ಲ. ನಾವು ಈ ಸದನದ ಪರವಾಗಿ ಒತ್ತಾಯ ಮಾಡುತ್ತೇವೆ. ಇವತ್ತು ತೆಲಂಗಾಣದವರು Kaleshwaram lift irrigation project ಅನ್ನು 3 ವರ್ಷದೊಳಗೆ ಮುಗಿಸಿದ್ದಾರೋ, ಅದೇ ರೀತಿ ಆ ಪ್ರಾಜೆಕ್ಟ್‌ನ ಎರಡರಷ್ಟು ಇರುವ ಪ್ರಾಜೆಕ್ಟ್‌ಅನ್ನು ತಮ್ಮ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಧಿಕಾರವಧಿಯಲ್ಲಿ ಇನ್ನು ಒಂದೂವರೆ ವರ್ಷದಲ್ಲಿ ಮುಗಿಸಿ, ಇತಿಹಾಸದಲ್ಲಿ ಶಾಶ್ವತವಾಗಿ ಆ ಭಾಗದ ಜನ ಪೂಜೆ ಮಾಡುತ್ತಾರೆನ್ನುವಂತಹ ಮಾತನ್ನು ಹೇಳಿ. ಈಗ ತಾವು ಹೇಳಲಿಲ್ಲವೆಂದರೂ ಚಿಂತೆ ಇಲ್ಲ. ಆದರೆ, ಒಂದೂವರೆ ವರ್ಷದಲ್ಲಿ ಮುಗಿಸುವುದಕ್ಕೆ ತಾವು ದಯಮಾಡಿ ಪ್ರಯತ್ನ ಮಾಡಬೇಕೆಂದು ಹೇಳಿ ಮಾನ್ಯ ಸಭಾಪತಿಯವರ ಮುಖಾಂತರ ಮಾನ್ಯ ಗೋವಿಂದ ಎಂ ಕಾರಜೋಳ ರವರಿಗೆ ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ನಸೀರ್ ಅಹ್ಮದ್‌ರವರೇ, ಕೇವಲ ಸ್ಪಷ್ಟೀಕರಣವನ್ನು ಕೇಳಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ವಿಸ್ತಾರವಾಗಿ ಸದನಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಹೆಚ್ಚಿನ ರೀತಿಯಲ್ಲಿ ನಮ್ಮ ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕದ ಬಗ್ಗೆ ಮಾತನಾಡಿದ್ದಾರೆ. ಅದರ ಜೊತೆ ಜೊತೆಯಲ್ಲಿ ಮೇಕೆದಾಟು ಯೋಜನೆಯ ಬಗ್ಗೆಯೂ ಪ್ರಸ್ತಾಪ ಮಾಡಿದ್ದಾರೆ. ಎಲ್ಲೋ ಒಂದು ಕಡೆ ಎತ್ತಿನಹೊಳೆ ಯೋಜನೆ ಬಗ್ಗೆ ಮರೆತು ಬಿಟ್ಟಿದ್ದಾರೆ ಎಂದು ಕಾಣುತ್ತದೆ. ದಯವಿಟ್ಟು, ಅದರ ಬಗ್ಗೆ ಸ್ವಲ್ಪ ಸ್ಪಷ್ಟೀಕರಣವನ್ನು ಕೊಡಿ.

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ನಸೀರ್ ಅಹ್ಮದ್‌ರವರಿಗೆ ಸ್ಪಷ್ಟೀಕರಣವನ್ನು ಕೇಳಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಈಗ ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ವಿಶೇಷವಾಗಿ ಕೃಷಿ ವಿಚಾರದ ಬಗ್ಗೆ, M.S.P (Minimum Support Price) ಬಗ್ಗೆ ಮಾತನಾಡಿದರು. ಇದರ ಬಗ್ಗೆ ಅವರು ಸ್ವಲ್ಪ ನಿರೀಕ್ಷೆ ಮಾಡಿದ್ದರು.

**ಸಭಾಪತಿಯವರು:-** ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಮಾನ್ಯ ಸಚಿವರನ್ನು ಕೇಳುತ್ತಾರೆ. ಅವರು ಇದಕ್ಕೆ ಉತ್ತರವನ್ನು ಕೊಡುತ್ತಾರೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೋಗುವಷ್ಟರಲ್ಲಿ ಪ್ರೀತಿ ಜಾಸ್ತಿಯಾಗಿದ್ದರೆ, ಅವರು ಉತ್ತರವನ್ನು ಕೊಡುತ್ತಾರೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, . . .

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸದಸ್ಯರೇ ಒಂದು ನಿಮಿಷ. ಮಾನ್ಯ ಗೋವಿಂದ ಎಂ.ಕಾರಜೋಳರವರೇ, ಎಲ್ಲರದ್ದು ಬರೆದುಕೊಂಡು ಒಂದೇ ಬಾರಿ ಉತ್ತರವನ್ನು ಹೇಳುತ್ತೀರೋ ಅಥವಾ ಒಬ್ಬೊಬ್ಬರದು ಉತ್ತರವನ್ನು ಹೇಳುತ್ತೀರೋ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಗೋವಿಂದ ಎಂ.ಕಾರಜೋಳರವರೇ, ಎತ್ತಿನಹೊಳೆ ಯೋಜನೆಗೆ ಸಂಬಂಧಿಸಿದಂತೆ ಸ್ಪಷ್ಟೀಕರಣವನ್ನು ಹೇಳಿ.

**ಸಭಾಪತಿಯವರು:-** ಮಾನ್ಯ ಸಚಿವರೇ, ಈಗ ಮಾನ್ಯ ನಸೀರ್ ಅಹ್ಮದ್‌ರವರು ಕೇಳಿರುವುದಕ್ಕೆ ಸ್ಪಷ್ಟೀಕರಣವನ್ನು ಕೊಡಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಸದಸ್ಯರೇ, ನಾನು ಈಗಾಗಲೇ ಹೆಸರುಗಳನ್ನು ಬರೆದುಕೊಂಡಿದ್ದೇನೆ. ನಾನು ನಂತರ ತಮ್ಮನ್ನು ಕರೆಯುತ್ತೇನೆ. ಮಾನ್ಯ ಸಚಿವರೇ ಒಬ್ಬರು ಸ್ಪಷ್ಟೀಕರಣವನ್ನು ಕೇಳಿದಾಗ ಅವರಿಗೆ ಉತ್ತರವನ್ನು ಹೇಳಿಬಿಡಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರೇ, ತಮ್ಮ ಹೆಸರನ್ನು ಬರೆದುಕೊಂಡಿದ್ದೇನೆ. ಮಾನ್ಯ ಸಚಿವರೇ, ನಸೀರ್ ಅಹ್ಮದ್‌ರವರಿಗೆ ಉತ್ತರವನ್ನು ಹೇಳಿ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ನಾನು ಜಲಸಂಪನ್ಮೂಲ ಇಲಾಖೆಯ ಸಚಿವನಾದ ಮೇಲೆ ಎತ್ತಿನಹೊಳೆ ಉಗಮಸ್ಥಾನಕ್ಕೆ ಹೋಗಿದ್ದಾಗ ಮಾನ್ಯ ಅರವಿಂದ ಕುಮಾರ ಅರಳಿಯವರನ್ನು ಕರೆದುಕೊಂಡು ಹೋಗಿದ್ದೆ. ಅಲ್ಲಿಗೆ ಹೋಗಿ ಪರಿಶೀಲನೆ ಮಾಡಿಕೊಂಡು, ಕೆಲವು ಕಾಮಗಾರಿಗಳು 10 ಎಕರೆ 10 ಗುಂಟೆ, ಅರ್ಧ ಎಕರೆ, 20 ಗುಂಟೆ ಜಮೀನುಗಳ ತಕರಾರಿನಿಂದ ಮತ್ತು ಭೂ ವ್ಯಾಜ್ಯದಿಂದ ಕಾಮಗಾರಿ ನಿಂತು ಹೋಗಿತ್ತು. ನಾವೆಲ್ಲಾ ಪ್ರಯತ್ನ ಮಾಡಿ ಜಿಲ್ಲಾಧಿಕಾರಿಯವರಿಂದ ಹಣವನ್ನು ಕೊಡಿಸಿ, ಕೆಲವರು ನೇರವಾಗಿ ಖರೀದಿ ಮಾಡುವುದಕ್ಕೆ coffee planters ನ್ಯಾಯಾಲಯಕ್ಕೆ ದಾವೆ ಹಾಕಿಕೊಂಡು ಕುಳಿತಿದ್ದರು, ಅವರಿಗೂ ವಿನಂತಿ ಮಾಡಿ, ಕ್ಲಿಯರ್ ಮಾಡುವುದಕ್ಕೆ ನಾನು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇನೆ.

(ಮುಂದು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(1318) ಎಸ್‌ಪಿಆರ್/ಎಕೆ 6:50 23/12/2021 (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಗೋವಿಂದ ಎಂ.ಕಾರಜೋಳ(ಮುಂದು):-**

ಭೂ ಸ್ವಾಧೀನ ಮೊತ್ತವನ್ನು ಹಾಸನ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ನೀಡಿ, ಅದನ್ನು ಬಿಡುಗಡೆ ಮಾಡಿಸಿ, ರೈತರಿಗೆ ಪಾವತಿ ಮಾಡಿಸಲಾಗಿದೆ. ನಾನು ಇಷ್ಟನ್ನು ಮಾತ್ರವೇ ಹೇಳಲಿಕ್ಕೆ ಬಯಸುತ್ತೇನೆ. ಎತ್ತಿನ ಹೊಳೆ ಕಾಮಗಾರಿಗೆ ಸಂಬಂಧಪಟ್ಟಂತೆ ಈಗ ವಿದ್ಯುದ್ದೀಕರಣದ ಸ್ಟೇಷನ್‌ಗಳಿವೆ ಮತ್ತು ಈಗ ಪೈಪ್‌ಲೈನ್‌ನ್ನು ಅಳವಡಿಸಿಕೊಂಡು ಬರಲಾಗುತ್ತಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಾದ ಸಮಸ್ಯೆಗಳಿಂದಾಗಿ ಯೋಜನೆಯು ಎಲ್ಲಿ ಸ್ಥಗಿತಗೊಂಡಿತ್ತೋ, ಅವುಗಳನ್ನೆಲ್ಲಾ ಈಗ ಬಗೆಹರಿಸಲಾಗಿದೆ. ಪ್ರಾಯಶಃ ಮುಂದಿನ ಎರಡು ತಿಂಗಳಿನಲ್ಲಿ ಎತ್ತಿನ ಹೊಳೆ ಯೋಜನೆಯ 1 ನೇ ಹಂತದ ಕಾಮಗಾರಿಯು ಪೂರ್ಣಗೊಳ್ಳುವ ಹಂತಕ್ಕೆ ಬರುತ್ತದೆ. ಇವುಗಳನ್ನೆಲ್ಲಾ ನಾನು ಪರಿಶೀಲನೆ ಮಾಡಿದ್ದೇನೆ. ಎಲ್ಲಿ ಡೆಲಿವರಿ ಛೇಂಬರ್‌ಗಳಿತ್ತೋ.... ಮೊದಲಿಗೆ ಪ್ರಾಯೋಗಿಕವಾಗಿ ಚಾಲನೆ ನೀಡುವುದಕ್ಕಾಗಿ ನಾವು ತಯಾರಿಯನ್ನು ಮಾಡಿಕೊಳ್ಳುತ್ತಿದ್ದೇವೆ. ಬಹುಶಃ ಇನ್ನೆರಡು ತಿಂಗಳೊಳಗಾಗಿ ಯೋಜನೆಯನ್ನು ನಾವು ಪ್ರಾಯೋಗಿಕ ಚಾಲನಾ ಹಂತಕ್ಕೆ ತರುತ್ತೇವೆ. ಇದು ಕೇವಲ ಮೊದಲನೆ ಹಂತವಾಗಿದ್ದು, ಬಹಳ ದೊಡ್ಡ ಯೋಜನೆಯಾಗಿದೆ; ಅಷ್ಟೇ ಸಮಸ್ಯೆಗಳು ಇದರಲ್ಲಿವೆ.

**ಸಭಾಪತಿಯವರು:-** ಸಚಿವರೇ, ನೀವು ಸ್ಪಷ್ಟೀಕರಣವನ್ನು ಮಾತ್ರವೇ ನೀಡಿ.

**ಶ್ರೀ ಗೋವಿಂದ ಎಂ.ಕಾರಜೋಳ(ಜಲಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನಾವು ಸತತ ಪ್ರಯತ್ನಗಳನ್ನು ಮಾಡಿದ್ದೇವೆ; ಯೋಜನೆಯು ಪ್ರಗತಿಯಲ್ಲಿದೆ. ಜಲಾಶಯಕ್ಕೆ ಸಂಬಂಧಪಟ್ಟಂತೆ, ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಸಮಸ್ಯೆಗಳಿವೆ. ಕೊರಟಗೆರೆ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕುಗಳ ಜಮೀನುಗಳು ಈ ಯೋಜನೆಗೆ ಸಂಬಂಧಪಟ್ಟಿದ್ದಾಗಿವೆ. ಶ್ರೀ ಎಸ್.ಆರ್. ಪಾಟೀಲ್ ರವರು ಪ್ರಸ್ತಾಪಿಸಿದಂತೆ, ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಾದ ಸಮಸ್ಯೆಗಳಂತೆ ಇಲ್ಲಿಯೂ ಸಹ ಸಮಸ್ಯೆಗಳಾಗಿವೆ. ಕೊರಟಗೆರೆ ತಾಲ್ಲೂಕಿನ ಜಮೀನಿನ ಮಾರ್ಗಸೂಚಿ ಬೆಲೆಯು ಬಹಳ ಕಡಿಮೆ ಇದ್ದು, ಕೇವಲ 6-8 ಲಕ್ಷ ರೂಪಾಯಿಗಳಿಗೆ ಜಮೀನು ದೊರೆಯುತ್ತದೆ. ಆದರೆ, ದೊಡ್ಡಬಳ್ಳಾಪುರ ತಾಲ್ಲೂಕಿನ ಮಾರ್ಗಸೂಚಿ ಬೆಲೆಯು 30 ಲಕ್ಷ ರೂಪಾಯಿಗಳಷ್ಟಿದೆ. ಹೀಗಾಗಿ ಇಲ್ಲಿನ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಸಮಸ್ಯೆಯಾಗಿದೆ. ಇದನ್ನು ಯಾವ ರೀತಿಯಾಗಿ ಬಗೆಹರಿಸಬೇಕೆನ್ನುವುದರ ಬಗ್ಗೆ ಕಂದಾಯ ಇಲಾಖಾಧಿಕಾರಿಗಳಿಗೆ ಈಗಾಗಲೇ ಸೂಚನೆಗಳನ್ನು ನೀಡಲಾಗಿದೆ. ಅಂತಿಮವಾಗಿ ತಾಂತ್ರಿಕ ಸಮಿತಿಯವರೊಂದಿಗೂ ಸಹ ನಾವು ಸಮಾಲೋಚಿಸಿ, ಅವರೊಂದಿಗೆ ಮಾತನಾಡಿ, ಇರುವ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನವನ್ನು ಮಾಡಲಾಗುವುದು.

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಯು.ಬಿ.ವೆಂಕಟೇಶ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಅಂಶಗಳಿಗೆ ಯಾವುದಕ್ಕೂ ಸಹ ಉತ್ತರ ಬಂದಿರುವುದಿಲ್ಲ. ಸಂವಿಧಾನದ ಅನುಚ್ಛೇದ – 371 (ಜೆ) ರಡಿ ರೈಲ್ವೆ ವಿಭಾಗ ಮತ್ತು IIIT-B, ಜವಳಿ ಪಾರ್ಕ್ ಇವುಗಳು ಏಕೆ ವಾಪಸ್ಸು ಹೋಯಿತು ಮತ್ತು ದೂರದರ್ಶನವನ್ನು ಯಾವ ಕಾರಣಕ್ಕಾಗಿ ಸ್ಥಗಿತಗೊಳಿಸಲಾಗುತ್ತಿದೆ ಎನ್ನುವ ಅಂಶಗಳ ಬಗ್ಗೆ ಸಚಿವರು ಸ್ಪಷ್ಟೀಕರಣವನ್ನು ನೀಡಿಲ್ಲ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್ ರವರು ಕೇಳಿದ ಅಂಶಗಳ ಬಗೆಗಿನ ಮಾಹಿತಿಯು ಪ್ರಸ್ತುತ ನನ್ನ ಬಳಿ ಲಭ್ಯವಿಲ್ಲ. ಅವುಗಳನ್ನು ಪಡೆದುಕೊಂಡು ನಾಳೆಯ ದಿನ ಸದಸ್ಯರಿಗೆ ಒದಗಿಸಲಾಗುವುದು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನಾನು 3 ಅಂಶಗಳ ಬಗ್ಗೆ ಸಚಿವರಿಂದ ಉತ್ತರವನ್ನು ಬಯಸುತ್ತೇನೆ. ಸರ್ವೋಚ್ಚ ನ್ಯಾಯಾಲಯದಲ್ಲಿ ತೆಲಂಗಾಣ ಸರ್ಕಾರವು ಸಲ್ಲಿಸಿದ ದಾವೆಯನ್ನು ಹಿಂಪಡೆದಿದ್ದಾರೆ; ಹೀಗಾಗಿ ನಮ್ಮ ದಾರಿ ಸುಮಗವಾಗಿದೆ ಎಂದು ನಿನ್ನೆಯ ದಿನ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯೊಂದನ್ನು ನೀಡಿದ್ದಾರೆ. ದಿನಾಂಕ 10/11/2020 ರೊಳಗಾಗಿ ಏತ ನೀರಾವರಿ ಯೋಜನೆಯು ಪೂರ್ಣಗೊಳ್ಳುತ್ತದೆ ಎಂಬುದಾಗಿಯೂ ಸಹ ಸಚಿವರು ಹೇಳುತ್ತಿದ್ದಾರೆ. ಆದರೆ ಈ ಬಗ್ಗೆ ಸದನಕ್ಕೆ ಮಾಹಿತಿಯನ್ನು ನೀಡಬೇಕೆಂದು ನಾನು ಕೋರುತ್ತೇನೆ.

ಕಳಸಾ-ಬಂಡೂರಿ ನಾಲ ತಿರುವು ಈ ಬಗ್ಗೆ ಗೋವಾ ರಾಜ್ಯವು ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ ನಿಂದನಾ ಅರ್ಜಿಯು ಏನಾಯಿತು ಹಾಗೂ ಈ ವಿಚಾರದಲ್ಲಿ ನಮ್ಮ ರಾಜ್ಯ ಸರ್ಕಾರವು ಗೋವಾ ರಾಜ್ಯದೊಂದಿಗೆ ಸಂಧಾನ ನಡೆಸುತ್ತಿದೆಯೇ ಅಥವಾ ಈ ವಿಚಾರದಲ್ಲಿ ಮುಖ್ಯ ಇಂಜಿನಿಯರ್ ನೇತೃತ್ವದಲ್ಲಿ ರಚಿಸಿದ್ದ ತಂಡವು ನೀಡಿದ ವರದಿಯನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿ, ನಿಂದನಾ ಅರ್ಜಿಯನ್ನು ವಜಾಗೊಳಿಸುವ ಪ್ರಯತ್ನಗಳನ್ನು ನಡೆಸಲಾಗಿದೆಯೇ ಎನ್ನುವ ವಿಚಾರಗಳ ಬಗ್ಗೆ ಏನನ್ನೂ ಹೇಳಿಲ್ಲ. ಹೀಗಾಗಿ ಈ ಎಲ್ಲಾ ಅಂಶಗಳ ಬಗ್ಗೆ ಸಚಿವರು ಸದನಕ್ಕೆ ಮಾಹಿತಿಯನ್ನು ನೀಡಬೇಕು.

ರಾಜ್ಯದ ಮೇಕೆದಾಟು ಯೋಜನೆಯ ಬಗ್ಗೆ ಹೇಳುವುದಾದರೆ, ಕಾವೇರಿ ನೀರು ವ್ಯವಸ್ಥಾಪನಾ ಮಂಡಳಿಯಿಂದ ಇತ್ತೀಚೆಗೆ ತೀರ್ಪು ಬಂದಿದೆ. ಅದರನ್ವಯ ನಮ್ಮ ರಾಜ್ಯಕ್ಕೆ 270 ಟಿ.ಎಂ.ಸಿ.ಗಳಷ್ಟು ನೀರು ಹಂಚಿಕೆಯಾಗಿದೆ. ಈ ಪೈಕಿ 30 ಟಿ.ಎಂ.ಸಿ.ಯಷ್ಟು ನೀರು ಬಳಕೆಯಾಗಿಲ್ಲ ಹೀಗಾಗಿ ಇದನ್ನು ಬಳಸಿಕೊಳ್ಳಿ ಎನ್ನುವ ತದ್ವಿರುದ್ಧವಾದ ತೀರ್ಪು ಬಂದಿರುತ್ತದೆ. ಪ್ರಸ್ತುತ ಸದನದಲ್ಲಿರುವ ಮಂಡ್ಯ, ತುಮಕೂರು, ಮೈಸೂರು ಮತ್ತು ಹಾಸನ ಭಾಗದ ಎಲ್ಲಾ ಶಾಸಕರು ಬಹಳ ಗಾಬರಿಯಾಗಿದ್ದೇವೆ. ನಮ್ಮ ತುಮಕೂರು ಭಾಗದಲ್ಲಿ ಕುಡಿಯಲೂ ಸಹ ನೀರು ಬರುವುದೇ ಇಲ್ಲ. ಇಂತಹ ಸಂದರ್ಭದಲ್ಲಿ ಈಗಾಗಲೇ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹಂಚಿಕೆಯಾಗಿರುವ 270 ಟಿ.ಎಂ.ಸಿ. ನೀರಿನಲ್ಲಿಯೇ ಯೋಜನೆಗಳನ್ನು ಮಾಡಿ ಎಂದು ಹೇಳಿದರೆ, ಹೇಗೆ ಆಗುತ್ತದೆ ಎಂದು ನಾನು ಕೇಳಲಿಚ್ಛಿಸುತ್ತೇನೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ, ಸರ್ವೋಚ್ಛ ನ್ಯಾಯಾಲಯದಲ್ಲಿ ದಾಖಲಾಗಿರುವ ದಾವೆಗಳಿಂದ ಸಚಿವರು ರಕ್ಷಣೆಯನ್ನು ಪಡೆದುಕೊಳ್ಳುತ್ತಿದ್ದಾರೆಂದು ನನಗನ್ನಿಸುತ್ತದೆ. ಈ ಬಗ್ಗೆ ಅವರು ಸದನಕ್ಕೆ ಮಾಹಿತಿಯನ್ನು ನೀಡುತ್ತಿಲ್ಲ; ಮಡಿವಂತಿಕೆ ಅವರು ಮಾಡುತ್ತಿದ್ದಾರೆಂದು ನನಗನ್ನಿಸುತ್ತಿದೆ. ಈ ವಿಚಾರದಲ್ಲಿ ಗಂಭೀರತೆಯನ್ನು ಸಚಿವರು ದಯಮಾಡಿ ಅರ್ಥಮಾಡಿಕೊಳ್ಳಬೇಕು. 30 ಟಿ.ಎಂ.ಸಿ.ಯಷ್ಟು ನೀರನ್ನು ಬಳಕೆ ಮಾಡಿ ಎಂಬುದಾಗಿ ರಾಜ್ಯ ಸರ್ಕಾರದ ನೀರಾವರಿ ಇಲಾಖೆಗೆ ಈಗಾಗಲೇ ಪತ್ರವು ಬಂದಿದೆ. ಇದರ ಬಗ್ಗೆಯೂ ಸಹ ಸಚಿವರು ಮಾಹಿತಿಯನ್ನು ನೀಡಬೇಕೆಂದು, ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅದು 270 ಟಿ.ಎಂ.ಸಿ. ಅಲ್ಲ, 284.75 ಟಿ.ಎಂ.ಸಿ. ಆಗಿದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದ ಕುಡಿಯುವ ನೀರಿಗಾಗಿ ಒಳಗೊಂಡಂತೆ ಹೆಚ್ಚುವರಿಯಾಗಿ 14.75 ಟಿ.ಎಂ.ಸಿ.ಯನ್ನು ಹಂಚಿಕೆ ಮಾಡಲಾಗಿದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಚಿವರು ಬಹಳ ಅಪರೂಪವಾಗಿ ಸದನಕ್ಕೆ ಬಂದಿದ್ದಾರೆ. ಹೀಗಾಗಿ ನಾನು ಕೆಲವು ಸ್ಪಷ್ಟೀಕರಣವನ್ನು ಕೇಳಬಯಸುತ್ತೇನೆ. ನಾನು ಸುಮಾರು 20-25 ನಿಮಿಷಗಳಷ್ಟು ಕೃಷಿ ವಿಚಾರವಾಗಿಯೇ ಮಾತನಾಡಿದ್ದೇನೆ. ಆಗ ಸಚಿವರು ಸದನದಲ್ಲಿ ಉಪಸ್ಥಿತರಿರಲಿಲ್ಲ. ನಾನು ಕಳೆದ ಬಾರಿ ಮಾತನಾಡಿದಾಗ, ಸಚಿವರು ನೂತನ ಕೃಷಿ ನೀತಿಯನ್ನು ಜಾರಿಗೆ ತರುವುದಾಗಿ ತಿಳಿಸಿದ್ದರು. ಈ ಬಾರಿಯಾದರೂ ಇದನ್ನು ಮಾಡಲಾಗಿದೆಯೇ ಅಥವಾ ಮುಂದಿನ ವರ್ಷ, ಇದನ್ನೇ ಪುನರುಚ್ಚರಿಸಲಾಗುತ್ತದೆಯೇ ಎನ್ನುವುದು ಗೊತ್ತಿಲ್ಲ. ಈ ವಿಚಾರದಲ್ಲಿ ನಾನು ಹೆಚ್ಚಿಗೆ ಬೆಳೆಸುವುದಕ್ಕೆ ಹೋಗುವುದಿಲ್ಲ. ಸರ್ಕಾರವು ಕನಿಷ್ಠ ಬೆಂಬಲ ಬೆಲೆಯನ್ನು ಕಾನೂನುಬದ್ಧವಾಗಿ ಏಕೆ ನಿಗದಿಪಡಿಸುತ್ತಿಲ್ಲ? ಇದರಲ್ಲಿರುವ ತೊಂದರೆಯಾದರೂ ಏನು ಎಂದು ನಾನು ಕೇಳಲಿಚ್ಛಿಸುತ್ತೇನೆ. ಸರ್ಕಾರದ ಬಳಿ ಅನುದಾನದ ಕೊರತೆ ಇದೆ ಎಂದು ಹೇಳಲಾಗುತ್ತಿದೆ, ಹೀಗಾಗಿ ಸರ್ಕಾರವು ಪ್ರತಿ ವರ್ಷವೂ 10 ಸಾವಿರ ಕೋಟಿ ರೂಪಾಯಿಗಳಷ್ಟು Revolving Fund ಹಾಕಬೇಕು. ಆ ಹಣವನ್ನು ಮಾರಿದ ತಕ್ಷಣವೇ ಅದು ಪುನಃ ಸರ್ಕಾರಕ್ಕೇ ವಾಪಸ್ಸು ಬರುತ್ತದೆ. ಕೃಷಿ ಕ್ಷೇತ್ರದಲ್ಲಿ ಬಹಳಷ್ಟು ಗಂಭೀರವಾದ ಸಮಸ್ಯೆಗಳಿವೆ. ಇವತ್ತಿನ ದಿವಸ ಬಹಳಷ್ಟು ಬೆಳೆಗಳು ನಾಶವಾಗುವ ಪರಿಸ್ಥಿತಿಯಲ್ಲಿವೆ. ಈ ಪರಿಸ್ಥಿತಿಯನ್ನು ಸಚಿವರೂ ಸಹ ನೋಡಿದ್ದಾರೆ. ನಾನು ಧಾರವಾಡ ವಿಶ್ವವಿದ್ಯಾನಿಲಯ ಹಾಗೂ ಕೃಷಿ ವಿಶ್ವವಿದ್ಯಾಲಯದ ನಿರ್ದೇಶಕ ಮಂಡಳಿಯ ಸದಸ್ಯನಾಗಿದ್ದೇನೆ. ಕೃಷಿ ಸಚಿವರ ಬೀಗರಾದ ಶ್ರೀ ಅಜಯಣ್ಣ ಎಂಬುವವರೂ ಸಹ ನನ್ನ ಜೊತೆಗೆ ಇದ್ದಾರೆ. ಆ ವಿಶ್ವವಿದ್ಯಾನಿಲಯಗಳಲ್ಲಿ ನೇಮಕಾತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿ ಎಂದು ನಾನು ಸುಮಾರು 20 ಬಾರಿ ಅವರ ಮುಂದೆ ಕೈಮುಗಿದು ಕೇಳಿಕೊಂಡಿದ್ದೇನೆ. ಆದರೆ ಸರ್ಕಾರವು ಈ ವಿಚಾರದಲ್ಲಿ ಯಾವುದೇ ಕ್ರಮಗಳನ್ನು ತೆಗೆದುಕೊಂಡಿದೆಯೇ ಎಂದು ಕೇಳಲಿಚ್ಛಿಸುತ್ತೇನೆ. ಸರ್ಕಾರವು ಸುಖಾಸುಮ್ಮನೆ ಹೇಳಿಕೆಗಳನ್ನು ನೀಡುತ್ತಿರುತ್ತದೆ. ಈ ವಿಚಾರದಲ್ಲಿ ನಾವು ಪರಿ ಪರಿಯಾಗಿ ಕೇಳಿಕೊಂಡಿದ್ದೇವೆ. ಇಲ್ಲಿ ಕಳೆದ ಒಂದು ದಶಕದಿಂದ ಯಾವುದೇ ನೇಮಕಾತಿಯನ್ನು ಮಾಡಿರುವುದಿಲ್ಲ. ಅಲ್ಲಿ ಸಹಾಯಕನಾಗಿ ಸೇವೆಗೆ ಸೇರಿದವರು, ಪಶುವೈದ್ಯ ವಿಭಾಗದ ಉಪ ನಿರ್ದೇಶಕರಾಗಿಯೂ ಸಹ ಮುಂಬಡ್ತಿಯನ್ನು ಪಡೆದಿರುತ್ತಾರೆ. ಈ ವಿಚಾರದ ಬಗ್ಗೆ ನಾನು ಈ ದಿನ ಪೂರ್ವಾಹ್ನ ಪ್ರಸ್ತಾಪಿಸಿದ್ದೇನೆ. ಯಾರಿಗೋ ಪ್ರಭಾರ ವಹಿಸಿದ ವಿಚಾರಗಳ ಬಗ್ಗೆ ಪ್ರತಿ ದಿನವೂ ಸಹ ನನಗೆ ಸುತ್ತೋಲೆಗಳು ಬರುತ್ತವೆ. ಅಲ್ಲಿನ ಪರಿಸ್ಥಿತಿಗಳು ಈ ರೀತಿಯಾದರೆ, ಅಲ್ಲಿ ಯಾವ ರೀತಿಯ ಸಂಶೋಧನೆಗಳಾಗುತ್ತವೆ; ಕೃಷಿಯ ಅಭಿವೃದ್ಧಿ ಹೇಗೆ ಆಗುತ್ತದೆ ಮತ್ತು ರೈತರು ಹೇಗೆ ಉದ್ಧಾರವಾಗುತ್ತಾರೆ ಎನ್ನುವ ಅಂಶಗಳ ಬಗ್ಗೆ ನಾನು ಪ್ರಶ್ನಿಸುತ್ತೇನೆ. ಈ ವಿಚಾರದಲ್ಲಿ ಸಚಿವರು ಉತ್ತರಿಸಬೇಕು. ಕೃಷಿ ಅಭಿವೃದ್ಧಿ ಸರ್ಕಾರವು ಅನುದಾನಗಳನ್ನು ಬಿಡುಗಡೆ ಮಾಡುವುದಿಲ್ಲ ಮತ್ತು ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡದಿದ್ದರೆ ಹೇಗೆ? ಇಂತಹ ವಿಚಾರಗಳ ಬಗ್ಗೆ ಕೃಷಿ ಸಚಿವರೇ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಕೃಷಿ ಸಚಿವರು ಆ ಜಿಲ್ಲೆಯನ್ನು ಪ್ರತಿನಿಧಿಸುತ್ತಾರೆ; ಅಲ್ಲಿ ಸಚಿವರಿಗೆ ಸಂಬಂಧಪಟ್ಟವರೇ ಇದ್ದಾರೆ. ಧಾರವಾಡದಂತಹ ಜಿಲ್ಲೆಯಲ್ಲಿಯೇ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡದಿದ್ದರೆ, ಇನ್ನು ನಮ್ಮ ರಾಯಚೂರು ಹಾಗೂ ಈ ಭಾಗದ ಮತ್ತಿತರೆ ಜಿಲ್ಲೆಗಳ ಪರಿಸ್ಥಿತಿ ಏನಾಗುತ್ತದೆ ಎಂದು ಸ್ವಲ್ಪ ಊಹಿಸಬೇಕು. ಇಂತಹ ಪರಿಸ್ಥಿತಿಗಳಲ್ಲಿ ನಾವು ಯಾವುದೇ ರೀತಿಯ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ.

ಸರ್ಕಾರವು ಪ್ರಥಮ ಆದ್ಯತೆ ನೀಡಿ, ರೈತರ ಬೆಲೆಗೆ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸಬೇಕು. ಇಲ್ಲವೆಂದಾದರೆ, ರೈತರೂ ಯಾರೂ ಸಹ ಬದುಕುಳಿಯಲು ಕಷ್ಟವಾಗುತ್ತದೆ. ಕೃಷಿ ವಿಚಾರಕ್ಕೆ ಸಂಬಂಧಪಟ್ಟಂತೆ ಸರ್ಕಾರವು ಪ್ರತ್ಯೇಕವಾಗಿ ಸಚಿವ ಸಂಪುಟದ ಸಭೆಯನ್ನು ನಡೆಸಿ, ಶೀಘ್ರವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ಎಷ್ಟು ಸಾಧ್ಯವೋ ಅಷ್ಟು ಅಗತ್ಯ ಕ್ರಮಗಳನ್ನು ಶೀಘ್ರವೇ ತೆಗೆದುಕೊಳ್ಳಬೇಕು. ಇದರಿಂದ ಶೇಕಡಾ 90 ರಷ್ಟು ರೈತರು ಬದುಕುಳಿಯುತ್ತಾರೆ ಇಲ್ಲವೆಂದಾದರೆ, ರೈತರಿಗೆ ಕಷ್ಟವಾಗಿ, ಅವರುಗಳು ಮುಂದೆ ಒಂದು ದಿನ ನೇಣು ಹಾಕಿಕೊಂಡು ಸಾಯುವ ಪರಿಸ್ಥಿತಿ ಬರುತ್ತದೆ. ಸಚಿವರು ಈ ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ಮೊದಲು ಉತ್ತರಿಸಲಿ; ನಂತರದಲ್ಲಿ ನಾನು ಸ್ಪಷ್ಟೀಕರಣವನ್ನು ಕೇಳುತ್ತೇನೆ.

**ಶ್ರೀ ಬಿ.ಸಿ.ಪಾಟೀಲ್(ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ, ಕನಿಷ್ಠ ಬೆಂಬಲ ಬೆಲೆ ನಿಗದಿ ಇದು ಕೃಷಿ ಇಲಾಖೆಗೆ ಸಂಬಂಧಪಡುವುದಿಲ್ಲ. ಇದು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಗೆ ಸಂಬಂಧಪಟ್ಟಿದ್ದು, ಆ ಇಲಾಖೆಯ ಸಚಿವರ ಅಧ್ಯಕ್ಷತೆಯಲ್ಲಿ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸಲಾಗುತ್ತದೆ. ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯವರೇ ರೈತರಿಂದ ಆಹಾರ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಧಾನ್ಯಗಳನ್ನು ಖರೀದಿಸುತ್ತಾರೆ; ಎ.ಪಿ.ಎಂ.ಸಿ. ರವರು ಇದನ್ನು ಸಂಗ್ರಹಣೆ ಮಾಡುತ್ತಾರೆ. ಕೃಷಿ ಸಚಿವನಾಗಿ ಹಾಗೂ ಆ ಸಮಿತಿಯ ಒಬ್ಬ ಸದಸ್ಯನಾಗಿ ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ಈಗಾಗಲೇ ಕನಿಷ್ಠ ಬೆಂಬಲ ಬೆಲೆಯಲ್ಲಿ ಆಹಾರ ಧಾನ್ಯಗಳನ್ನು ಖರೀದಿ ಮಾಡುವ ಬಗ್ಗೆ ತೀರ್ಮಾನಿಸಲಾಗಿದ್ದು; ಹಾಲಿ ನೊಂದಣಿಯು ಪ್ರಾರಂಭವಾಗಿರುತ್ತದೆ. ಜನವರಿ-2022 ರಿಂದ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸಲಾಗುವುದು. ಕೇಂದ್ರ ಸರ್ಕಾರವು 14 ಬೆಳೆಗಳನ್ನು ನಮೂದಿಸಿದೆ. ದಿನಾಂಕ 01/01/2022 ರಿಂದ ಬೆಳೆಗಳನ್ನು ಕನಿಷ್ಠ ಬೆಂಬಲ ಬೆಲೆ ಅಡಿ ಖರೀದಿಸಲು ಪ್ರಾರಂಭಿಸಲಾಗುವುದು.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಇದನ್ನು ಕಾನೂನು ಬದ್ಧವಾಗಿ ಮಾಡಬೇಕು.

**ಶ್ರೀ ಬಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಕನಿಷ್ಠ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರವು ನಿಗದಿಪಡಿಸುತ್ತದೆ. ಕೇಂದ್ರದ ಮಾರ್ಗಸೂಚಿಗಳನ್ವಯ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸಲಾಗುವುದು.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದ ಬದಲಾಗಿ ರಾಜ್ಯ ಸರ್ಕಾರವು ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸಬೇಕು. ಪಂಜಾಬ್, ಹರಿಯಾಣ ಮತ್ತು ಉತ್ತರ ಪ್ರದೇಶ ರಾಜ್ಯಗಳಲ್ಲಿ ಅಲ್ಲಿನ ರಾಜ್ಯ ಸರ್ಕಾರಗಳೇ ಆಹಾರ ಧಾನ್ಯಗಳನ್ನು ಖರೀದಿಸುತ್ತಾರೆ? ಆದರೆ, ಆ ರೀತಿಯಾಗಿ ನಮ್ಮ ರಾಜ್ಯದಲ್ಲಿ ಏಕೆ ಖರೀದಿಸುವುದಿಲ್ಲ ಎನ್ನುವುದರ ಬಗ್ಗೆ ಸಚಿವರು ತಿಳಿಸಬೇಕು.

**ಶ್ರೀ ಬಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ದಿನಾಂಕ 01/01/2020 ರಿಂದ ಆಹಾರ ಧಾನ್ಯಗಳನ್ನು ಖರೀದಿಸಲಾಗುತ್ತಿದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಆಹಾರ ಧಾನ್ಯಗಳ ಬೆಲೆಯು ಈಗ ಕಡಿಮೆ ಆಗಿದೆ, ಈಗ ಸರ್ಕಾರವು ಆಹಾರ ಧಾನ್ಯಗಳನ್ನು ಖರೀದಿಸುತ್ತಿದೆ. ಕೆಲವೊಂದು ಧಾನ್ಯಗಳಿಗೆ ಇಂತಿಷ್ಟೇ ಕನಿಷ್ಠ ಬೆಂಬಲ ಬೆಲೆಯನ್ನು ಖಾಯಂ ಆಗಿ ನಿಗದಿಪಡಿಸಬೇಕೆಂಬುದು ಇದೆ. ಆದರೆ ಇದನ್ನು ಸರ್ಕಾರವು ಯಾವ ಕಾರಣಕ್ಕಾಗಿ ಕಾನೂನು ಬದ್ಧವಾಗಿ ಮಾಡುತ್ತಿಲ್ಲವೆಂದು ನಾನು ಇಲ್ಲಿ ಕೇಳಬಯಸುತ್ತೇನೆ.

**ಶ್ರೀ ಬಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಕಾನೂನು ಬದ್ಧವಾಗಿಯೇ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸಲಾಗುತ್ತಿದೆ. 14 ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸುವಂತೆ, ಕೇಂದ್ರ ಸರ್ಕಾರವು ನಿರ್ಧರಿಸಿದೆ. ಕೇಂದ್ರದ ಸುತ್ತೋಲೆಗಳಂತೆ, ನಾವು ಈಗಾಗಲೇ ನೋಂದಣಿಯನ್ನು

ಪ್ರಾರಂಭಿಸಿದ್ದೇವೆ. ಅದರಂತೆ, 2022 ನೇ ವರ್ಷದ ಜನವರಿ 1 ನೇ ತಾರೀಖಿನಿಂದ ನೋಂದಣಿಯು ಪ್ರಾರಂಭಗೊಳ್ಳುತ್ತದೆ.

ಸದಸ್ಯರು ವಿಶ್ವವಿದ್ಯಾನಿಲಯಗಳಲ್ಲಿರುವ ಖಾಲಿ ಹುದ್ದೆಗಳ ಬಗ್ಗೆ ಪ್ರಸ್ತಾಪಿಸಿದರು. ಕಳೆದೆರೆಡು ವರ್ಷಗಳಿಂದ ಕೋವಿಡ್-19 ರ ಸಾಂಕ್ರಾಮಿಕ ಕಾಯಿಲೆಯ ಕಾರಣದಿಂದಾಗಿ ಆರ್ಥಿಕ ಇಲಾಖೆಯವರು ಯಾವುದೇ ನೇಮಕಾತಿಯನ್ನು ಸ್ಥಗಿತಗೊಳಿಸಿರುವುದರಿಂದ, ಯಾವುದೇ ನೇಮಕಾತಿಗಳು ಆಗುತ್ತಿಲ್ಲ. ಇದನ್ನು ಹೊರತುಪಡಿಸಿ, ರಾಜ್ಯದ 4 ವಿಶ್ವವಿದ್ಯಾನಿಲಯಗಳಿಗೆ ಒಟ್ಟು 132 ಹುದ್ದೆಗಳನ್ನು ಭರ್ತಿ ಮಾಡಲು ಐ.ಸಿ.ಆರ್. ಸಂಸ್ಥೆಯಿಂದ ಈಗಾಗಲೇ ಆದೇಶವಾಗಿದೆ. ಹೀಗಾಗಿ ಈ ಪ್ರಕ್ರಿಯೆಯು ಪ್ರಾರಂಭಗೊಳ್ಳುತ್ತದೆ. ಇನ್ನುಳಿದಂತೆ, ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಈಗಾಗಲೇ ವಿನಂತಿಸಿದ್ದೇವೆ. ಅದರನ್ವಯ, ಮುಖ್ಯಮಂತ್ರಿಗಳು ಖಾಲಿಯಿರುವ ಹುದ್ದೆಗಳ ಪೈಕಿ ಶೇಕಡಾ 50 ರಷ್ಟನ್ನು ಭರ್ತಿ ಮಾಡಲು ಆದೇಶಿಸಿರುತ್ತಾರೆ. ಈ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ. ಆರ್ಥಿಕ ಇಲಾಖೆಯವರು ಕೆಲವು ಸ್ಪಷ್ಟೀಕರಣವನ್ನು ಕೇಳಿದ್ದು; ಅದನ್ನು ಈಗಾಗಲೇ ನೀಡಲಾಗಿದೆ.

(ಮುಂದು)

**(1319) 07.00 23-12-2021 CS.VK**

**ಶ್ರೀ ಬಿ.ಸಿ.ಪಾಟೀಲ್(ಮುಂದು):-**

ಇವತ್ತು ಕೂಡ ಆರ್ಥಿಕ ಇಲಾಖೆಯ ಕಾರ್ಯದರ್ಶಿಯವರ ಜೊತೆಯಲ್ಲಿ ಮಾತನಾಡಿದ್ದೇವೆ. ಆದಷ್ಟು ಬೇಗ ಇದನ್ನೆಲ್ಲ ಮಾಡುತ್ತೇವೆ. ಆದಷ್ಟು ಬೇಗ ಖಾಲಿ ಇರುವ ಹುದ್ದೆಗಳನ್ನು ತುಂಬಲಾಗುವುದು. ಮಾನ್ಯ ಸದಸ್ಯರ ಕಾಳಜಿಗೆ ನನ್ನ ಧನ್ಯವಾದಗಳು.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಗಳೇ, I am only concerned with the MSP. ಅದನ್ನು ಕಾನೂನುಬದ್ಧವಾಗಿ ಮಾಡಬೇಕೆಂದು ಕೇಳುತ್ತಿದ್ದೇನೆ.

**ಶ್ರೀ ಅಲ್ಲಂ ವೀರಭದ್ರಪ್ಪ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಗಳೇ, ನಾನು ಮಾನ್ಯ ಕೃಷಿ ಸಚಿವರನ್ನು ಕೇಳುವುದೇನೆಂದರೆ ಅವರು ಬಳ್ಳಾರಿ ಜಿಲ್ಲೆಗೆ ವಿಸಿಟ್ ಮಾಡಿದ್ದರು. ಬಳ್ಳಾರಿ ಜಿಲ್ಲೆಯಲ್ಲಿ ನೂರಾರು ವರ್ಷಗಳ ಹಿಂದೆ form ಆಗಿರುವ Agri Farm ಇದೆ. ಒಂದು ಕೃಷಿ ವಿಶ್ವವಿದ್ಯಾನಿಲಯವನ್ನು ಅಲ್ಲಿ ಮಾಡಬೇಕೆಂದು ನಾವು ಬಹಳ ದಿವಸಗಳಿಂದ ಬೇಡಿಕೆಯನ್ನಿಡುತ್ತಿದ್ದೇವೆ. ಬಳ್ಳಾರಿ ಜಿಲ್ಲೆಯಲ್ಲಿ ಎಲ್ಲಾ ರೀತಿಯ ಕೃಷಿ ಮತ್ತು ತೋಟಗಾರಿಕಾ ಬೆಳೆಗಳನ್ನು ಬೆಳೆಯುವುದಕ್ಕೆ ಎಲ್ಲಾ ರೀತಿಯ ಅನುಕೂಲವಿದೆ. ಹಾಗೆಯೇ ಅಲ್ಲಿ ಕೃಷಿ ಬೆಳೆಗಳಿಗೆ ಸಾಕಷ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೋಗಗಳು ಸಹ ಬರುತ್ತಿವೆ. ಹತ್ತಿ,, ಮೆಣಸಿನಕಾಯಿ, ಭತ್ತ - ಎಲ್ಲಾ ಬೆಳೆಗಳನ್ನು ಬೆಳೆಯುತ್ತಾರೆ. Except apple, ಎಲ್ಲಾ ರೀತಿಯ ಹಣ್ಣುಗಳನ್ನು ಬೆಳೆಯುತ್ತಿದ್ದೇವೆ. ಆದ್ದರಿಂದ ಅಲ್ಲಿ ಒಂದು ಕೃಷಿ ವಿಶ್ವವಿದ್ಯಾನಿಲಯ ಬಂದರೆ it will be useful ಎನ್ನುವುದು ನಮ್ಮ ಭಾವನೆ. ಅಲ್ಲಿನ ಸಂಶೋಧನೆಯಿಂದ ಇಡೀ ರಾಜ್ಯಕ್ಕೆ ಮತ್ತು ದೇಶಕ್ಕೆ ಅನುಕೂಲವಾಗುತ್ತದೆ. ಇದು ನಮ್ಮ ಬಹಳ ದಿವಸಗಳ ಬೇಡಿಕೆ. ಇದರ ಬಗ್ಗೆ ಸಚಿವರು ಉತ್ತರ ನೀಡಬೇಕು.

**ಶ್ರೀ ಬಿ.ಸಿ.ಪಾಟೀಲ್(ಕೃಷಿ ಸಚಿವರು):-** ಮಾನ್ಯ ಸಭಾಪತಿಗಳೇ, ಹಿರಿಯ ಸದಸ್ಯರಾದಂತಹ ಅಲ್ಲಂ ವೀರಭದ್ರಪ್ಪನವರು ಹಗರಿ ಬೊಮ್ಮಹಳ್ಳಿ ಯಲ್ಲಿ ಒಂದು ಕೃಷಿ ವಿಶ್ವವಿದ್ಯಾನಿಲಯ ಆಗಬೇಕೆಂದು ಕೇಳಿದ್ದಾರೆ. ಅಲ್ಲಿ ವಿಶ್ವವಿದ್ಯಾನಿಲಯ ಅಲ್ಲ, ಕೃಷಿ ಕಾಲೇಜನ್ನು ತೆರೆಯಲು ಸಾಧ್ಯವಾಗುತ್ತಿಲ್ಲ. ಕೆಳಮನೆಯಲ್ಲಿ ಮಾನ್ಯ ಸೋಮಲಿಂಗಪ್ಪನವರು ಆ ಭಾಗದಲ್ಲಿ ಒಂದು ಕಾಲೇಜನ್ನು ನೀಡಬೇಕೆಂದು ಕೇಳಿದರು. 2015ರಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಒಂದು ಕೃಷಿ ಕಾಲೇಜನ್ನು ತೆರೆಯಲಾಯಿತು. 2020ರಲ್ಲಿ ಗಂಗಾವತಿಯಲ್ಲಿ ಕೂಡ ಒಂದು ಕೃಷಿ ಕಾಲೇಜನ್ನು ತೆರೆಯಲಾಯಿತು. ಈಗಾಗಲೇ ಈ ಕಾಲೇಜುಗಳಲ್ಲಿ 40-50% ಹುದ್ದೆಗಳು ಖಾಲಿಯಿದ್ದು, ಅಗತ್ಯ ಮೂಲಭೂತ ಸೌಕರ್ಯಗಳಿಲ್ಲ. ಸುಮ್ಮನೆ ಕಾಲೇಜುಗಳನ್ನು ಮತ್ತು ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿಕೊಂಡು ಹೋದ ಮಾತ್ರಕ್ಕೆ ಉತ್ತಮ ಶಿಕ್ಷಣವನ್ನು ನೀಡಲು ಸಾಧ್ಯವಾಗುವುದಿಲ್ಲ. ಈಗಾಗಲೇ ಇರುವ ಕಾಲೇಜುಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ನಂತರ ಸಿಬ್ಬಂದಿಯನ್ನು ನೇಮಕ ಮಾಡಿ, ಅಲ್ಲಿಗೆ ಉತ್ತಮ ಶಿಕ್ಷಣವನ್ನು ನೀಡಿದ ಮೇಲೆ ಮುಂದೆ ಹೊಸ ಕಾಲೇಜುಗಳನ್ನು ತೆರೆಯುವ ವಿಚಾರವನ್ನು ಮಾಡಬೇಕಾಗುತ್ತದೆ. ಈಗಾಗಲೇ ನಮ್ಮ ರಾಜ್ಯದಲ್ಲಿ 4 ಕೃಷಿ ವಿಶ್ವವಿದ್ಯಾನಿಲಯಗಳಿವೆ. ಒಂದು ತೋಟಗಾರಿಕೆ ವಿಶ್ವವಿದ್ಯಾನಿಲಯ ಇದೆ. ಒಂದು ಪಶುಸಂಗೋಪನಾ ವಿಶ್ವವಿದ್ಯಾನಿಲಯ ಇದ್ದು ಅದರ ಕೆಳಗೆ 14 ಕಾಲೇಜುಗಳು ಬರುತ್ತಿವೆ. ಆದರೂ ಕೂಡ BSc Agriculture ಕೋರ್ಸಿಗೆ ಅತ್ಯಂತ ಹೆಚ್ಚಿನ ಬೇಡಿಕೆ ಇದೆ. ಇವತ್ತು ಮಕ್ಕಳು ಇಂಜಿನಿಯರಿಂಗ್ ಸೀಟು ಸಿಕ್ಕರೂ ಸಹ BSc Agriculture ಬೇಕೆಂದು ಕೇಳುತ್ತಾರೆ. ಈ ಕಾಲೇಜುಗಳನ್ನು ವಿಸ್ತರಣೆ ಮಾಡಬೇಕೆಂದು ನಮಗೂ ಕೂಡ ಆಸೆ ಇದೆ. ಹಿಂದೆ ಅಗ್ರಿ ಬಗ್ಗೆ ಮಾನ್ಯ ಬಿಸಿಲಯ್ಯನವರ ನೇತೃತ್ವದ ಸಮಿತಿಯವರು ಕೂಡ ಕಾಲೇಜನ್ನು ಮಾಡಬಹುದೆಂದು ವರದಿಯನ್ನು ನೀಡಿದ್ದರು. ಆದರೆ ನಮ್ಮ Development Commissioner and ACS ನೇತೃತ್ವದಲ್ಲಿ ಒಂದು recommendation Committee ಇದ್ದು, ಅವರು ಈಗಾಗಲೇ ಇರುವಂತಹ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ, ಅಲ್ಲಿಗೆ ಸೂಕ್ತ ಸಿಬ್ಬಂದಿಯನ್ನು ನೇಮಕ ಮಾಡಿದ ಮೇಲೆ ಹೊಸ ಕಾಲೇಜನ್ನು ತೆರೆಯಬೇಕೆಂದು ಹೇಳಿರುವ ಹಿನ್ನಲೆಯಲ್ಲಿ ಮುಂದಿನ ದಿವಸಗಳಲ್ಲಿ ಕಾಲೇಜುಗಳನ್ನು ವಿಶ್ವವಿದ್ಯಾನಿಲಯಗಳನ್ನು ತೆರೆಯುವ ಚಿಂತನೆ ಮಾಡಲಾಗುವುದು. ಸದ್ಯಕ್ಕೆ ಕೃಷಿ ವಿಶ್ವವಿದ್ಯಾನಿಲಯ ತೆರೆಯುವ ಚಿಂತನೆ ಇಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಅಲ್ಲಂ ವೀರಭದ್ರಪ್ಪ:-** ಮಾನ್ಯ ಸಭಾಪತಿಗಳೇ, ಅದಕ್ಕಾಗಿ ನಮ್ಮಲ್ಲಿ Mining Fund ಇದೆ, ಸರ್ಕಾರ ಹಣ ನೀಡಬೇಕಾಗಿಲ್ಲ. We have sufficient Mining Fund including maintaining the Staff.

**ಶ್ರೀ ಬಿ.ಎ.ಬಸವರಾಜು(ನಗರಾಭಿವೃದ್ಧಿಸಚಿವರು)**:- ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು Mining Fund ಬಗ್ಗೆ ಪ್ರಸ್ತಾಪಿಸಿದರು. ನಾನು ಕೂಡ ಬಳ್ಳಾರಿ ಜಿಲ್ಲೆಯಲ್ಲಿ ಹೊಸದಾಗಿ ಒಳಚರಂಡಿ ಮಾಡಿಸಬೇಕೆಂದು ಸುಮಾರು 234 ಕೋಟಿ ರೂಪಾಯಿಗಳ ಒಂದು ಪ್ರಸ್ತಾವನೆ ತಯಾರು ಮಾಡಲಾಗಿದೆ. ಇದಕ್ಕಾಗಿ Mining Fund ನೀಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಸಾಕಷ್ಟು ಸಲ ಮನವಿಯನ್ನು ಮಾಡಿದೆನು. ಅದರ ಬಗ್ಗೆ ಅವರು ಯಾವುದೇ ಉತ್ತರ ನೀಡಿರುವುದಿಲ್ಲ.

**(ಗೊಂದಲ)**

**ಶ್ರೀ ಬಿ.ಸಿ.ಪಾಟೀಲ್(ಕೃಷಿ ಸಚಿವರು):-** ಮಾನ್ಯ ಸಭಾಪತಿಗಳೇ, ಗಂಗಾವತಿಯಲ್ಲಿಯೂ ಕಾಲೇಜು ತೆರೆಯುವಾಗ, ಕೊಪ್ಪಳದ ಶಾಸಕರು, ನಮ್ಮ ಬಳಿ District Mining Fund ಸಾಕಷ್ಟು ಇದೆ, ಅದನ್ನು ಕೊಡುತ್ತೇವೆ ನಿಮ್ಮ ಸರ್ಕಾರದಿಂದ ಒಂದು ಪೈಸೆ ಖರ್ಚು ಮಾಡಬೇಡಿ ಎಂದು ಹೇಳಿದರು. ಗಂಗಾವತಿಗೆ ಒಂದು ಕೃಷಿ ಕಾಲೇಜನ್ನು ನೀಡಲಾಯಿತು, ಆ ಕಾಲೇಜಿನ inauguration ಗೆ ಹೋದಾಗ 3 ಪುಟಗಳ ಬೇಡಿಕೆಗಳನ್ನು ನೀಡಿದರು. District Mining Fund ಅನ್ನು ಬೇರೆ ಕಡೆಗೆ divert ಮಾಡಿದ್ದಾರೆ. ಆದ್ದರಿಂದ District Mining Fund ಕೊಟ್ಟರೆ ಸಂತೋಷ, ಅದರಿಂದ ನಾವು infrastructure create ಮಾಡಬಹುದೇ ಹೊರತು faculty ಗಳಿಗೆ ನಿರಂತರವಾಗಿ ಖಾಯಂ ಆಗಿ ಕೊಡಲು ಸಾಧ್ಯವಾಗುವುದಿಲ್ಲ. ಅದರ ಬಗ್ಗೆ ಸರ್ಕಾರವೇ ತೀರ್ಮಾನ ಕೈಗೊಂಡು ಆಯವ್ಯಯದಲ್ಲಿ ಸೇರಿಸಿದಾಗ ಮಾತ್ರ ಸಾಧ್ಯವಾಗುತ್ತದೆ ಎಂದು ಮಾನ್ಯ ಸದಸ್ಯರ ಮಾಹಿತಿಗಾಗಿ ತಿಳಿಸುತ್ತಿದ್ದೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಮಾನ್ಯ ನೀರಾವರಿ ಸಚಿವರು ಬಹಳ ದೀರ್ಘವಾದ ಉತ್ತರವನ್ನು ನೀಡಿದ್ದಾರೆ. ನಾನು ಮೂರು ವಿಚಾರಗಳ ಬಗ್ಗೆ ವಿವರಣೆಯನ್ನು ಕೇಳಬಯಸುತ್ತೇನೆ. ಕೃಷ್ಣಾ ಯೋಜನೆ 58 ವರ್ಷಗಳ ಹಿಂದೆ ಪ್ರಾರಂಭ ಆಗಿದೆ. ನನ್ನ ಮಟ್ಟಿಗೆ ಈ ಯೋಜನೆಯ ಜಾರಿಗೆ ಯಾವುದೇ hurdles ಇಲ್ಲ. ಇವತ್ತು ತೆಲಂಗಾಣ, ಆಂಧ್ರದೇಶದವರು ಎತ್ತಿರುವ ಆಕ್ಷೇಪಣೆ, ಅಕ್ಷೇಪಣೆಯೇ ಅಲ್ಲ. Allocation is over, 2ನೇ ಟ್ರಿಬ್ಯೂನಲ್ ತಮ್ಮ ಅಂತಿಮ ನಿರ್ಧಾರವನ್ನು ಈಗಾಗಲೇ ನೀಡಿದೆ. ಇವರು ಮತ್ತೆ appeal ಮಾಡಿದಾಗ ಅದನ್ನು reject ಕೂಡ ಮಾಡಲಾಗಿದೆ. ಅದರ ಬಗ್ಗೆ ಕೇಂದ್ರದಲ್ಲಿ ಒಂದು affidavit ಹಾಕಿಸಿದರೆ there ends the matter. ಈಗಾಗಲೇ 58 ವರ್ಷ ಆಗಿರುವುದರಿಂದ ಈ ಯೋಜನೆ ಮತ್ತಷ್ಟು ಮುಂದಕ್ಕೆ ಹೋಗುವುದು ಬೇಡ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸರ್ಕಾರ ಏನು ಮಾಡಬೇಕೆಂದಿದೆ ಅದನ್ನು ಶರವೇಗದಲ್ಲಿ ಮಾಡಬೇಕು. ಮುಂದಿನ hearing ನಲ್ಲಿ ತೀರ್ಮಾನ ಆಗುತ್ತದೆ ಎಂದು ಮಾನ್ಯ ನೀರಾವರಿ ಸಚಿವರು ಬಹಳ positive ಆಗಿ ಹೇಳಿದ್ದು ನಮಗೆ ಬಹಳ ಸಂತೋಷವನ್ನು ನೀಡಿದೆ.

ಇನ್ನು ಮಹದಾಯಿ ಯೋಜನೆಗೆ 30 ವರ್ಷಗಳ ಇತಿಹಾಸವಿದೆ. ಇವತ್ತಿನ ಮುಖ್ಯಮಂತ್ರಿಗಳ ತಂದೆಯವರಾದ ಶ್ರೀ ಎಸ್.ಆರ್.ಬೊಮ್ಮಾಯಿಯವರು ಇದ್ದಂತಹ ಒಂದು ಆಯೋಗ ಶಿಫಾರಸ್ಸನ್ನು ಮಾಡಿತ್ತು. ಇದರ ಬಗ್ಗೆ Final Gazette Notification ಆಗಿದೆ. ಅವರು ಸುಮ್ಮನೆ ಕೋರ್ಟಿಗೆ ಹೋಗಿದ್ದಾರೆ. ಆದರೆ ಅವರಿಗೇನು ಸ್ಟೇ ಸಿಕ್ಕಿಲ್ಲ. ಅಕ್ಷರಶಃ hurdles ಇಲ್ಲ. There is no hurdles at all and also the Final Gazette Notification is completed. ಇದಾದ ಮೇಲೆ ಈ ಯೋಜನೆಗೆ ಬೇರೆ ಯಾವುದೇ ಅಡ್ಡಿಗಳಿಲ್ಲ. ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಬಾಗಲಕೋಟೆ, ಗದಗ ನಗರಗಳ ಕುಡಿಯುವ ನೀರಿನ ಯೋಜನೆಗೆ ನನಗೆ ತಿಳಿದ ಮಟ್ಟಿಗೆ ಯಾವುದೇ hurdles ಇಲ್ಲ. ಈಗ ಮಾನ್ಯ ಕಾರಜೋಳರವರು ಹೊಸದಾಗಿ ನೀರಾವರಿ ಸಚಿವರಾಗಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ತಂದೆಯವರ ಕಾಲದ ಯೋಜನೆ, ಈಗಲಾದರೂ ಆಗಲಿ. ಈ ಸರ್ಕಾರ ದಯಮಾಡಿ ಪೂರಕ ಆಯವ್ಯಯದಲ್ಲಿ ಅದಕ್ಕೆ ಅನುದಾನವನ್ನು ಒದಗಿಸಿ ಟೆಂಡರ್ ಕರೆಯಬೇಕು.

ಇನ್ನು ಮೇಕೆದಾಟು ಯೋಜನೆಯ ಬಗ್ಗೆ ನಾನು ಬಹಳ ಹಿಂದೆ ವಿವರವಾಗಿ ಹೇಳಿದ್ದೆನು. ಈ ವಿಚಾರದಲ್ಲಿ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದ 2018ರಲ್ಲಿ, ದಿನಾಂಕ 22-12-2018ರಲ್ಲಿ ಯೋಜನಾ ವರದಿಗೆ ತಾತ್ವಿಕ ಅನುಮೋದನೆ ಪಡೆದು ಡಿಪಿಆರ್ ಕೊಟ್ಟಿದ್ದೇವೆ. ಈ ಡಿಪಿಆರ್ ವರದಿಗೆ ಅನುಮೋದನೆ ಕೇಳಿದರೆ ಲೋಕಸಭೆಯಲ್ಲಿ ನೀವು Management Authority ಕಡೆ ಹೋಗಿ ಎನ್ನುವ ಉತ್ತರ ನೀಡುತ್ತಾರೆ. ಈ Management Authority 173 ಟಿಎಂಸಿ ನೀರು ಬಿಡುವುದನ್ನು ನೋಡುವುದಕ್ಕೆ ಮಾತ್ರ ಇದೆ. ಅದರ ಉಸಾಬರಿ ಇದಕ್ಕಿಲ್ಲ. ಈಗ ಪ್ರತಿ ವರ್ಷ ನೂರಾರು ಟಿಎಂಸಿ ನೀರು ಸಮುದ್ರಕ್ಕೆ ಹರಿದು ಹೋಗುತ್ತಿತ್ತು. ಅದು ವೇಸ್ಟ್ ಆಗುತ್ತಿದೆ. ಮೇಕೆದಾಟು ಯೋಜನೆಗೆ ಅವರು clearance ಕೊಡುವುದು ಮಾತ್ರ ಬಾಕಿ ಉಳಿದಿದೆ. ತಮಿಳುನಾಡಿನಲ್ಲಿ ಕಾವೇರಿ ನೀರಿನ ಜೊತೆಗೆ ಇನ್ನೂ ಮೂರು ನದಿಗಳ ಜೋಡನೆ ಆಗುತ್ತಿದೆ. ಇದಕ್ಕೆ ಕೇಂದ್ರ ಸರ್ಕಾರ ಕೂಡ ಶಾಮೀಲಾಗಿದೆ. ಅದಕ್ಕೆ ಯಾರು ಅನುಮತಿಯನ್ನು ನೀಡಿದ್ದಾರೆ? ತಮಿಳುನಾಡಿಗೆ ಕುಡಿಯುವ ನೀರನ್ನು ಬಿಡುವ ಯೋಜನೆ ಇದು. ದಯಮಾಡಿ ಇದನ್ನು ಕೇಂದ್ರ ಸರ್ಕಾರದಲ್ಲಿ clear ಮಾಡಿಸಬೇಕು.

**ಶ್ರೀ ಗೋವಿಂದ ಎಂ. ಕಾರಜೋಳ(ಜಲಸಂಪನ್ಮೂಲ ಸಚಿವರು)**:- ಮಾನ್ಯ ಸಭಾಪತಿಗಳೇ, ಮಹದಾಯಿ ಮತ್ತು ಕೃಷ್ಣಾ ತೀರ್ಪಿನ ಕುರಿತು ಸುಪ್ರೀಮ್ ಕೋರ್ಟಿನಲ್ಲಿ SLP (Special Leave Petition) ಹಾಕಲಾಗಿದೆ. ಅದು ಇನ್ನೂ ಸಹ ಇತ್ಯರ್ಥ ಆಗಿಲ್ಲ. ಅದಕ್ಕಾಗಿಯೇ ನಾನು ಈ ಬಗ್ಗೆ ಸಂಕ್ಷಿಪ್ತವಾಗಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಉತ್ತರವನ್ನು ಹೇಳಿದೆನು. ಇದರಲ್ಲಿ ಮಡಿವಂತಿಕೆ ಮಾಡುವಂತದ್ದು ಏನೂ ಇಲ್ಲ. ಅದಕ್ಕಾಗಿ ರಾಜ್ಯ ಸರ್ಕಾರ ಸಕಾರಾತ್ಮಕವಾಗಿ ಏನೇನು ಕ್ರಮಗಳನ್ನು ಕೈಗೊಳ್ಳಬೇಕು, ಅದನ್ನೆಲ್ಲ ತೆಗೆದುಕೊಳ್ಳುತ್ತಿದೆ.

ಇನ್ನು ಮಾನ್ಯ ಸದಸ್ಯರಾದ ತಿಪ್ಪೇಸ್ವಾಮಿಯವರು ಮೇಕೆದಾಟು ಯೋಜನೆಯ ಬಗ್ಗೆ ಪ್ರಸ್ತಾಪವನ್ನು ಮಾಡಿದರು. ಇದರ ಬಗ್ಗೆ CWMA (Cauvery Water Management Authority) ಯವರು ಬಿಳಿಗೊಂಡಲದಲ್ಲಿ 30.65 ಟಿಎಂಸಿ available ಇದೆ. ಈ ಕುರಿತು ತಾಂತ್ರಿಕ ಪರಿಶೀಲನೆ ನಡೆಸಿ, ಅಗತ್ಯ ಕ್ರಮ ಕೈಗೊಳ್ಳಲಿಕ್ಕೆ ಈಗ ನಾವು ಮುಂದಾಗಿದ್ದೇವೆ. ಇದರ ಬಗ್ಗೆ ಈಗಾಗಲೇ ಸುಪ್ರೀಮ್ ಕೋರ್ಟ್‌ನಲ್ಲಿ ದಿನಾಂಕಗಳು ನಿಗದಿ ಯಾಗಿರುವ ಕಾರಣ ಇದರ ಬಗ್ಗೆ ಹೆಚ್ಚು ಮಾತನಾಡುವುದು ಸೂಕ್ತವಲ್ಲ. ಕೃಷ್ಣಾ ಮತ್ತು ಕಾವೇರಿ ಎಲ್ಲವೂ ಬಹಳ ಬೇಗ ಕೋರ್ಟ್‌ನಲ್ಲಿ ಬರುತ್ತಿವೆ. ಮೊದಲಿನ ಹಾಗೆ 3-6 ತಿಂಗಳು ಕಾಯುವ ಮುದ್ದತ್ ಇಲ್ಲ. ಒಂದೆರಡು ವಾರಗಳಲ್ಲಿ immediately ಹಾಕುತ್ತಾರೆ. ಅದಕ್ಕಾಗಿಯೇ ಸ್ವಲ್ಪ ಸೂಕ್ಷ್ಮವಾಗಿ ನಾನು ಉತ್ತರ ನೀಡಿದ್ದೇನೆ. ಅಷ್ಟು ಮಾತ್ರ ಹೇಳುತ್ತೇನೆ. ಏಕೆಂದರೆ ಈ ವಿಚಾರ ಎಲ್ಲರಿಗೂ ತಿಳಿದಿದೆ.

(ಮುಂದು)

(1320)/7-10/23-12-2021/LM/VK

**ಶ್ರೀ ಗೋವಿಂದ ಕಾರಜೋಳ(ಮುಂದು)**:-
ಮಾನ್ಯ ತಿಪ್ಪೇಸ್ವಾಮಿಯವರು ಸಾಕಷ್ಟು knowledge ಹೊಂದಿದವರಿದ್ದಾರೆ. ಇದರಲ್ಲಿ ಮಡಿವಂತಿಕೆ ಮಾಡುವಂತದ್ದು ಏನು ಇಲ್ಲ. ರಾಜ್ಯದ ಹಿತದೃಷ್ಟಿಯಿಂದ ಹೇಳಿದ್ದೇನೆ. ನನ್ನ ಹತ್ತಿರ ಮಾಹಿತಿಯ ಕೊರತೆ ಇದೆ ಎಂದು ಅಲ್ಲ. ಎಲ್ಲ ಮಾಹಿತಿ ಇದೆ. ಆದರೆ ಸೂಕ್ಷ್ಮವಾಗಿ ಹೇಳಿದ್ದೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು)**:- ಮಾನ್ಯ ಸಭಾಪತಿಗಳೆ, ಸಾಕಷ್ಟು ವಿವರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಬೆಳಗಾವಿ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡಿರುವುದಿಲ್ಲ. ಸಚಿವರು ನಮ್ಮವರೇ ಆಗಿರುವುದರಿಂದ ನಾನು ಹೆಚ್ಚಿಗೆ ಏನು ಪ್ರಸ್ತಾಪ ಮಾಡಲು ಹೋಗುವುದಿಲ್ಲ. ಬೆಳಗಾವಿ ಜಿಲ್ಲೆಯ ಮಹಾಲಕ್ಷ್ಮಿ ಏತನೀರಾವರಿ 2012ರಲ್ಲಿ water allocation ಆಗಿದೆ. DPR ಕೂಡ ಆಗಿದೆ. ಉತ್ತರ ಕರ್ನಾಟಕದ ಕೃಷ್ಣಾ ಏತ ನೀರಾವರಿ ಮುಖಾಂತರ ಸುಮಾರು 4000 ಹೆಕ್ಟೇರ್ ನೀರಾವರಿಯಾಗಬೇಕಾಗಿದೆ. ಸುಮಾರು 12000 ಎಕರೆ.... ಪಕ್ಕದಲ್ಲಿಯೇ 20 ಕಿ.ಮೀ ಅಂತರದಲ್ಲಿ ಕೃಷ್ಣಾನದಿ ಹರಿಯುತ್ತದೆ. ಆದರೂ ಆ ಭಾಗದಲ್ಲಿ ನೀರಾವರಿಯಾಗಿರುವುದಿಲ್ಲ. ಈ ಬಗ್ಗೆ ಮಾನ್ಯ ನೀರಾವರಿ ಸಚಿವರು ಹೇಳಬೇಕು. ಇದರ ಜೊತೆಗೆ ರಾಯಬಾಗ ತಾಲ್ಲೂಕಿನ ಕರಬಾ ಏತ ನೀರಾವರಿ ಬಗ್ಗೆ ಮಾನ್ಯ ಸಚಿವರ ಗಮನಕ್ಕೆ ಬಂದಿದೆ. ಬಹಳ ದಿನಗಳಿಂದ ರಾಯಬಾಗ ವಿಧಾನಸಭಾ ಕ್ಷೇತ್ರದ ನಾಗರಮೂನ್ನಳಿ ಹೋಬಳಿ ನೀರಾವರಿಯಿಂದ ವಂಚಿತವಾಗಿರುವಂತಹ ಭಾಗ. ಇದರ ಬಗ್ಗೆ ಮಾನ್ಯ ಸಚಿವರು ದಯಮಾಡಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

clarification ಕೊಡಬೇಕು. ಮೂರನೆಯದು, ಗಿಣಿಗಾವ ಬಸವೇಶ್ವರ ಏತ ನೀರಾವರಿ ಯೋಜನೆ ಅಥಣಿ ತಾಲ್ಲೂಕಿನ ಕಾಗವಾಡದಲ್ಲಿ ಪ್ರಾರಂಭವಾಗಿ ಸುಮಾರು 4 ವರ್ಷವಾಗಿದೆ. ಇನ್ನು ೫೦% ಕಾಮಗಾರಿಯಾಗಿರುವುದಿಲ್ಲ. ದಯಮಾಡಿ ಈ ಯೋಜನೆಗೆ ಹಣ ಒದಗಿಸುತ್ತೀರಾ? ಈ ಏತ ನೀರಾವರಿ ಯೋಜನೆಗಳ ಬಗ್ಗೆ ಸರ್ಕಾರದ ನಿಲುವೇನು? ಯಾವಾಗ ಈ ಯೋಜನೆಗಳನ್ನು ಕೈಗೆತ್ತಿಕೊಳ್ಳುತ್ತೀರಿ ಎನ್ನುವ ವಿವರವನ್ನು ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ**:- ಮಾನ್ಯ ಸಭಾಪತಿಗಳೆ, ಕಾಗವಾಡ ಕ್ಷೇತ್ರದಲ್ಲಿ ಬರುವಂತಹ ಗಿಣಿಗಾವ ಬಸವೇಶ್ವರ ಏತ ನೀರಾವರಿ ಕಾಮಗಾರಿ entrust ಮಾಡಿದ್ದೇವೆ. ಈ ಯೋಜನೆ ಹೆಚ್ಚು progress ಆಗದಿರುವುದರಿಂದ ನಮಗೂ ಆತಂಕವಾಗಿದೆ. ಕಳೆದ ಬಾರಿ ಮೀಟಿಂಗ್ ಮಾಡಿ final notice ಕೊಡಬೇಕೆಂದು ಅಧಿಕಾರಿಗಳಿಗೆ ಹೇಳಿದ್ದೇನೆ. ಕಂಟ್ರಾಕ್ಟ ಹಿಡಿದವರು ಬೇಗನೆ ಕೆಲಸವನ್ನು ಮುಗಿಸದೆ ಹೋದರೆ tender terminate ಮಾಡಬೇಕು, final notice ಕೊಟ್ಟು measurement ತೆಗೆದುಕೊಳ್ಳಿ ಎಂದು ಅಧಿಕಾರಿಗಳಿಗೆ ಹೇಳಿದ್ದೇನೆ. ಮಹಾಲಕ್ಷ್ಮಿ ಯೋಜನೆ ಬಗ್ಗೆ ಕೇಳಿದ್ದಾರೆ. ಅದನ್ನು survey ಮಾಡಿಸುತ್ತೇನೆ.

**Sri KAVATAGIMATH MAHANTESH MALLIKARJUN:-** DPR ಆಗಿದೆ, water allocation ಆಗಿದೆ.

**ಶ್ರೀ ಗೋವಿಂದ ಕಾರಜೋಳ:- ಮಾನ್ಯ ಸಭಾಪತಿಗಳೆ,** ಇದು ರಾಜ್ಯದಲ್ಲಿ ಹೇಗೆ ಆಗಿದೆ ಎಂದರೆ, ಎಲ್ಲರ ಒತ್ತಡ ಸೇರಿ ಒಂದು ಲಕ್ಷದ ಐದು ಸಾವಿರ ಕೋಟಿ ರೂಪಾಯಿಗಳ ಅನುಮೋದನೆಯಾಗಿದೆ. ೨೦೧೪ರಿಂದ ೨೦೨೧ರ ವರೆಗೆ ಆಗಿರುವ ಎಲ್ಲ ಮಾಹಿತಿ ನಮ್ಮ ಕಣ್ಣಮುಂದೆ ಇದೆ. Balance work of ongoing projects ಸುಮಾರು Rs.59,000 crores ದು ಇದೆ. ಇದು ಬಹಳ ದೊಡ್ಡ ಕೆಲಸವಾಗಿದೆ. ನಾನು ಎಲ್ಲವನ್ನು ಮಾಡುತ್ತೇನೆ ಎಂದು ಸದನದಲ್ಲಿ ನಾನು ಹೇಳಲು ಆಗುವುದಿಲ್ಲ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಗಳೆ, ಇಂದಿನ ಮುಖ್ಯಮಂತ್ರಿಗಳು ಹಿಂದೆ ನೀರಾವರಿ ಸಚಿವರಾಗಿದ್ದರು. ಅವರು ಆಗ promise ಮಾಡಿರುವಂತಹ ಯೋಜನೆ ಇದು. Water allocation ಆಗಿ ಆಗದೆ ಇರುವಂತಹ ಒಂದೇ ಒಂದು scheme ಇದು. ದಯಮಾಡಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಗೋವಿಂದ ಕಾರಜೋಳ:-** ಮಾನ್ಯ ಸಭಾಪತಿಗಳೆ, water allocation ನೋಡಬೇಕು, budget provision ನೋಡಬೇಕು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಗಳೆ, that is the only pending project. ಇಷ್ಟು ಒತ್ತಾಯ ಮಾಡುವ ಅವಶ್ಯಕತೆ ಇರಲಿಲ್ಲ. ದಯಮಾಡಿ ಈ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಗೋವಿಂದ ಕಾರಜೋಳ:-** ಮಾನ್ಯ ಸಭಾಪತಿಗಳೆ, ನಿಮ್ಮ ಊರಿನಲ್ಲಿ ಅಧಿವೇಶನ ನಡೆಸುತ್ತಿದ್ದೇವೆ. ಅದಕ್ಕೆ ತಾವು ಜೋರು ಮಾಡುತ್ತಿದ್ದೀರಿ.

**ಶ್ರೀ ಮಹಾತೇಶ ಎಂ.ಕವಟಗಿಮಠ:-** ಜೋರು ಮಾಡುವ ಪ್ರಶ್ನೆಯೇ ಇಲ್ಲ ಸರ್. ಈ ಯೋಜನೆಯಿಂದ ಜನರು ವಂಚಿತರಾಗಿದ್ದಾರೆ.

**ಶ್ರೀ ಗೋವಿಂದ ಕಾರಜೋಳ:-** ಸಕಾರಾತ್ಮಕವಾಗಿ ಸ್ಪಂಧಿಸುತ್ತೇವೆ.

**ಶ್ರೀ ಮರಿತ್ತಿಬ್ಬೇಗೌಡ( ಶಿಕ್ಷಕರ ಕ್ಷೇತ್ರ)**:- ಮಾನ್ಯ ಸಭಾಪತಿಗಳೆ, ಮಾನ್ಯ ಕಾರಜೋಳರವನ್ನು ನಮ್ಮ ತಾತನ ಕಾಲದಲ್ಲಿ ನೋಡುತ್ತಿದ್ದ ಹಿರಿಯ ಶಾನುಭೋಗರನ್ನು ನೋಡಿದ ಹಾಗೆ ಆಗುತ್ತದೆ. ಅವರು ತುಂಬಾ ಚೆನ್ನಾಗಿ ಉತ್ತರವನ್ನು ಕೊಡುತ್ತಿದ್ದಾರೆ. 13,000 ಪ್ರಾಥಮಿಕ ಶಾಲಾ ಶಿಕ್ಷಕರು, 2000 ಕ್ಕೂ ಹೆಚ್ಚು ಪ್ರೌಢಶಾಲಾ ಶಿಕ್ಷಕರು ಇಲ್ಲ ಭರ್ತಿ ಮಾಡಬೇಕು ಎಂದು ಹೇಳಿದ್ದಾರೆ. ಮಾನ್ಯ ಸಭಾಪತಿಯವರು ಹಿಂದೆ ಶಿಕ್ಷಣ ಸಚಿವರಾಗಿದ್ದಾಗ 1,045 ಸರ್ಕಾರಿ ಪ್ರೌಢಶಾಲೆಗಳನ್ನು ತೆರೆದರು. ಇದು ಆ ಸರ್ಕಾರದ ಸಮಯದಲ್ಲಿ ಶಿಕ್ಷಣ ಇಲಾಖೆಯಲ್ಲಿ ಆಗಿರುವ ದಾಖಲೆ. 385 ಸೈನ್ಸ್ ವಿಭಾಗದಲ್ಲಿ ಪಿಯು ಕಾಲೇಜುಗಳನ್ನು ತೆಗೆದರು. ಅದರಲ್ಲಿ ೭೦% ಈ ಭಾಗಕ್ಕೆ ಕೊಟ್ಟರು. ಹುದ್ದೆಗಳನ್ನು ಕೊಟ್ಟರು, ಕಟ್ಟಡ ಕಟ್ಟಲು ಹಣ ಕೊಟ್ಟರು. ಆದರೆ ಇವತ್ತು ೨೦೦೦ ಕ್ಕೂ ಹೆಚ್ಚು ಮಕ್ಕಳಿಗೆ ಪಾಠ ಮಾಡಲು ಶಿಕ್ಷಕರು ಇಲ್ಲ ಎಂದರೆ ಸರ್ಕಾರಿ ಶಾಲಾ ಮಕ್ಕಳಿಗೆ ಯಾವ ರೀತಿ ಶಿಕ್ಷಣವನ್ನು ಕೊಡಲು ಸಾಧ್ಯ. ಯಾವ ಅವಧಿಯೊಳಗೆ ಹುದ್ದೆಗಳನ್ನು ತುಂಬುತ್ತೀರಿ ಎನ್ನುವುದನ್ನು ದಯಮಾಡಿ ಹೇಳಬೇಕು. ಈ ಭಾಗದಲ್ಲಿ ೫ ವಿಶ್ವವಿದ್ಯಾನಿಲಯಗಳು ಇವೆ. ಒಂದು Veterinary University, Agriculture University, ಮೂರು ಸಾಮಾನ್ಯ ವಿಶ್ವವಿದ್ಯಾನಿಲಯ.

**ಶ್ರೀ ಗೋವಿಂದ ಎಂ. ಕಾರಜೋಳ** :- ಮಾನ್ಯ ಸಭಾಪತಿಗಳೆ, ಮಾನ್ಯ ಶಿಕ್ಷಣ ಸಚಿವರು ಇಲ್ಲೇ ಇದ್ದಾರೆ. ಮಾನ್ಯ ಸದಸ್ಯರ ಶ್ನೆಗೆ ಅವರೇ ಉತ್ತರ ಕೊಡುತ್ತಾರೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಗಳೆ, ಈ ಐದು ವಿಶ್ವವಿದ್ಯಾನಿಲಯಗಳಲ್ಲಿರುವ backlog ಹುದ್ದೆಗಳನ್ನು ಭರ್ತಿ ಮಾಡಲೇ ಇಲ್ಲ. ಯಾವಾಗ ಭರ್ತಿ ಮಾಡುತ್ತೀರಿ? Backlog ಹುದ್ದೆಗಳನ್ನು ಭರ್ತಿ ಮಾಡದೆ ಇರುವುದರಿಂದ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗುತ್ತದೆ.

ಈ ಭಾಗದಲ್ಲಿ ಭೀಮಾ, ಘಟ್ಟಪ್ರಭಾ, ಕೃಷ್ಣಾ, ತುಂಗಾ, ಮಲಪ್ರಭಾ ಹೀಗೆ ಪಂಚ ನದಿಗಳು ಹರಿಯುತ್ತವೆ. ಈ ಪಂಚ ನದಿಗಳಿಗೆ ಅಲ್ಲಲ್ಲಿ ಬ್ಯಾರೇಜ್ ಚಿಕ್ಕ ಚಿಕ್ಕ ಡ್ಯಾಂ ಗಳನ್ನು ಕಟ್ಟಿ ನೀರನ್ನು ಸಂಗ್ರಹ ಮಾಡಿದರೆ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬಹುದು ಮತ್ತು ಅಂತರ್ಜಲ ವೃದ್ಧಿಯಾಗಲು ಸಹಾಯಕವಾಗುತ್ತದೆ. ಇಂತಹ ಬ್ಯಾರೇಜ್‌ಗಳ ನಿರ್ಮಾಣ ಮಾಡಿ surface water ನಿಂದ ಕೆರೆ ತುಂಬಿಸುವ ಯೋಜನೆಯನ್ನು ತೆಗೆದುಕೊಳ್ಳುತ್ತೀರಾ ಎಂದು ಕೇಳಿರುವುದಕ್ಕೆ ತಮ್ಮಿಂದ ಉತ್ತರ ಬಂದಿರುವುದಿಲ್ಲ. ಅದಕ್ಕೆ ಉತ್ತರವನ್ನು ಕೊಡಬೇಕು.

ಗುಲ್ಬರ್ಗಾ ಜಿಲ್ಲೆಯಲ್ಲಿ ತೊಗರಿ ಅಭಿವೃದ್ಧಿ ಮಂಡಳಿ ಇದೆ. ಇದನ್ನು ದ್ವಿದಳ ಧಾನ್ಯ ಅಭಿವೃದ್ಧಿ ಎಂದು ಮಾಡಿ ಬಹಳ ವರ್ಷಗಳಾಗಿವೆ. ಅಲ್ಲಿ ಯಾವುದೇ ದ್ವಿದಳ ಧಾನ್ಯವನ್ನು ಇದುವರೆಗೂ ಖರೀದಿ ಮಾಡುತ್ತಿಲ್ಲ. ದ್ವಿದಳ ಧಾನ್ಯ ಬೆಳೆಯುವ ರೈತರಿಗೆ ಉತ್ತೇಜನಕಾರಿಯಾಗುವಂತೆ ಯಾವುದೆ ಸಹಾಯವನ್ನು ಕೊಡುತ್ತಿಲ್ಲ. ಭಾಗದಲ್ಲಿ ದ್ವಿದಳ ಧಾನ್ಯವನ್ನು ತುಂಬಾ ಬೆಳೆಯುತ್ತಾರೆ. ಇದರಿಂದ ರೈತರಿಗೆ ಯಾವುದೇ ಸಹಾಯ ದೊರಕಿರುವುದಿಲ್ಲ. ಅಲ್ಲಿ ಮಂಡಳಿ ಇದೆ ಮತ್ತು ಅದಕ್ಕೆ ಒಬ್ಬರು ಎಂಡಿ ಇದ್ದಾರೆ ಅಷ್ಟೆ. ಈ ಮಂಡಳಿಯಿಂದ ದ್ವಿದಳ ಧಾನ್ಯ ಖರೀದಿ ಮತ್ತು ರೈತರಿಗೆ ಸಹಾಯವಾಗುವಂತಹ ಯಾವುದಾದರೂ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ?

ಇನ್ನೊಂದು ಪ್ರಮುಖ ವಿಚಾರ ಎಂದರೆ, ಮಾನ್ಯ ಎಸ್.ಎಂ.ಕೃಷ್ಣಾರವರು ಮುಖ್ಯಮಂತ್ರಿಗಳಾಗಿದ್ದಾಗ ಮಾನ್ಯ ಶ್ರೀ ಎಚ್.ಕೆ.ಪಾಟೀಲ್‌ರವರು ನೀರಾವರಿ ಸಚಿವರಾಗಿದ್ದರು. ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ, ಈಗಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ೫ ವರ್ಷ ನೀರಾವರಿ ಸಚಿವರಾಗಿದ್ದರು. ಮಾನ್ಯ ಶ್ರೀ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದ ಸಮಯದಲ್ಲಿ ಮಾನ್ಯ ಶ್ರೀ ಎಂ.ಬಿ.ಪಾಟೀಲ್‌ರವರು ನೀರಾವರಿ ಸಚಿವರಾಗಿದ್ದರು. ಈಗ ಕೆಲವು ದಿನ ಮಾನ್ಯ ಶ್ರೀ ರಮೇಶ್ ಜಾರಿಕಿಹೊಳಿಯವರು ನೀರಾವರಿ ಸಚಿವರಾಗಿ ಕೆಲಸ ಮಾಡಿದ್ದಾರೆ. ಈಗ ತಾವು ಮಾನ್ಯ ಶ್ರೀ ಗೋವಿಂದ ಕಾರಜೋಳರವರು ನೀರಾವರಿ ಸಚಿವರಾಗಿ ಕೆಲಸ ಮಾಡುತ್ತಿದ್ದೀರಿ. ಪಂಚ ನದಿಗಳು ಹರಿಯುತ್ತಿರುವ, 7 ಡ್ಯಾಂ ಗಳು ಇರುವಂತಹ ಈ ಭಾಗಕ್ಕೆ ನಿರಂತರವಾಗಿ ಎಲ್ಲಾ ಸರ್ಕಾರಗಳು ಭಾರಿ ನೀರಾವರಿ ಸಚಿವರ ಖಾತೆಯನ್ನು ಈ ಭಾಗದವರಿಗೆ ಕೊಡುತ್ತಲೇ ಬಂದಿದೆ. ಆದರೂ ಕೂಡಾ ಇಲ್ಲಿಯವರೆಗೆ ಇಲ್ಲಿಯ ನೀರಿನ ಸಮಸ್ಯೆ ಬಗೆಹರಿಯುತ್ತಿಲ್ಲ

ಎಂದರೆ, ಇನ್ನು ಯಾರಿಂದ ಎಲ್ಲಿಂದ ಕೆಲಸವನ್ನು ಮಾಡಿಸಬೇಕು. ದಯಮಾಡಿ ಕೆಲಸದಲ್ಲಿ ಬದ್ಧತೆ ಇರಬೇಕು. ಆ ಬದ್ಧತೆಯನ್ನು ತಿಳಿಸಬೇಕು.

ಹೋದ ವರ್ಷದ ಅತಿವೃಷ್ಟಿ ಬಗ್ಗೆ ನಾನು ಮಾತನಾಡುವುದಿಲ್ಲ. ಈ ವರ್ಷದ ಅತಿವೃಷ್ಟಿ ಬಗ್ಗೆ ಹೇಳುತ್ತೇನೆ. ಬಹಳ ಜನರು ಜೀವ ಕಳೆದುಕೊಂಡರು, ಪ್ರಾಣಿಗಳು ನೀರಿನಲ್ಲಿ ಕೊಚ್ಚಿಕೊಂಡು ಹೋದವು. ಬೆಳೆ ಹಾನಿ ಉಂಟಾಯಿತು, ಬಹಳ ಜನರು ಸೂರು ಕಳೆದುಕೊಂಡರು. ಕೇಂದ್ರ ಸರ್ಕಾರದ ತಂಡ ಇಲ್ಲಿಗೆ ಬಂದು ಅಧ್ಯಯನ ಮಾಡಿದೆ. ಈ ಹಾನಿಗೆ ಪರಿಹಾರವಾಗಿ ಎಷ್ಟು ಹಣವನ್ನು ಅಂದಾಜು ಮಾಡಲಾಗಿದೆ? ರಾಜ್ಯ ಸರ್ಕಾರ ಅತಿವೃಷ್ಟಿಗೆ ಒಳಗಾದ ರೈತರಿಗೆ ಏನಾದರೂ ಸಹಾಯವನ್ನು ನೀಡಿದೆಯೇ? ಕೇಂದ್ರ ಸರ್ಕಾರ ಎಷ್ಟು ಹಣವನ್ನು ಕೊಟ್ಟಿದೆ ಎನ್ನುವುದನ್ನು ದಯಮಾಡಿ ತಿಳಿಸಬೇಕು. ಈ ನಾಲ್ಕು ವಿಷಯಗಳ ಬಗ್ಗೆ ದಯಮಾಡಿ ಮಂತ್ರಿಗಳು ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಮುಂದು)

**(1321)23-12-2021(07-20)vk** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಗೋವಿಂದ ಎಂ. ಕಾರಜೋಳ (ಮುಂದು):-**

ಮಾನ್ಯ ಸದಸ್ಯರು ಹೇಳಿದಂತೆ ಕೆರೆ ತುಂಬುವ ಯೋಜನೆ ಬಹಳ ಮಹತ್ವದ ಯೋಜನೆಯಾಗಿದ್ದು, ಅಂತರ್ಜಲ ಹೆಚ್ಚಾಗುತ್ತದೆ, ಜನರಿಗೆ ಶುದ್ಧ ಕುಡಿಯುವ ನೀರನ್ನು ಕೊಡಲು ಆಗುತ್ತದೆ, ಪಶು, ಪಕ್ಷಿ, ಪ್ರಾಣಿಗಳಿಗೆ ಕುಡಿಯುವ ನೀರನ್ನು ಕೊಡಲು ಸಾಧ್ಯವಾಗುತ್ತದೆ. ಇದು ಉತ್ತಮವಾದ ಯೋಜನೆಯಾಗಿದ್ದು, ನಮ್ಮ ಹಣಕಾಸಿನ ಇತಿ-ಮಿತಿಯಲ್ಲಿ ಮಾನ್ಯ ಸದಸ್ಯರು ಏನು proposal ಕೊಡುತ್ತಾರೋ, ಅದನ್ನು ನೋಡಿಕೊಂಡು ಪ್ರಯತ್ನ ಮಾಡುತ್ತೇನೆ.

ಇನ್ನು ಎರಡನೆಯದಾಗಿ ಬೆಂಬಲ ಬೆಲೆಯಲ್ಲಿ ದ್ವಿದಳ ಧಾನ್ಯಗಳ ಖರೀದಿ ಪ್ರಾರಂಭ ಮಾಡಿದೇ, ಕೇವಲ ತೊಗರಿ ಒಂದನ್ನೇ ಖರೀದಿ ಮಾಡುತ್ತಿರುವ ಬಗ್ಗೆ ಹೇಳಿದರು. ನಾನು ಸಂಬಂಧಪಟ್ಟವರ ಜೊತೆ ಮಾತನಾಡಿ, ದ್ವಿದಳ ಧಾನ್ಯ ಖರೀದಿ ಮಾಡಲು ಮಾತನಾಡಿ, ಸೂಚನೆ ಕೊಡುತ್ತೇನೆ.

ಇನ್ನು backlog ವಿಷಯಕ್ಕೆ ಸಂಬಂಧಪಟ್ಟಂತೆ ನಾನು Chairman ಆಗಿದ್ದು, ಮೊನ್ನೆ ಒಂದು meeting ಕರೆದಿದ್ದು, code of conduct ಇತರ ಕೆಲವು ಕಾರಣಗಳ ಸಲುವಾಗಿ ಮತ್ತೆ postpone ಮಾಡಿದ್ದೇನೆ. ಬೆಂಗಳೂರಿಗೆ ಹೋದ ತಕ್ಷಣ ೧ನೇ ತಾರೀಖಿನ ನಂತರ ಸಭೆ ಕರೆದು ಮಾಡುವ ಪ್ರಯತ್ನವನ್ನು ಮಾಡುತ್ತೇನೆ. ಅತಿವೃಷ್ಟಿ ಬಗ್ಗೆ ವಿಧಾನ ಸಭೆಯಲ್ಲಿ ಕೆಲವು ಘೋಷಣೆಗಳು ಆಗಿದ್ದು, NDRF (National Disaster Response Fund) ಮತ್ತು SDRF (State Disaster Response Fund) guidelines ಪ್ರಕಾರ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ double ಕೊಡುವ ಕೆಲಸ ಮಾಡುತ್ತೇವೆ, ಅದರ ಆದೇಶ ಇನ್ನೂ ಹೊರಬಂದಿಲ್ಲ. ಖಂಡಿತವಾಗಿ ಅವರ ನೆರವಿಗೆ ಸರ್ಕಾರ ಬರುತ್ತದೆ.

**ಶ್ರೀ ಗೋವಿಂದರಾಜುಃ-** ಮಾನ್ಯ ಸಭಾಪತಿಯವರೇ, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಸಂಬಂಧಪಟ್ಟವನಾಗಿ ಎತ್ತಿನಹೊಳೆ ಯೋಜನೆ ಬಗ್ಗೆ ಬಹಳ ವಿಸ್ತೃತವಾದ ಚರ್ಚೆ ಮಾಡಲು ಆಸೆ ಇತ್ತು. ಮಾನ್ಯ ನೀರಾವರಿ ಸಚಿವರು ಭೈರಗೊಂಡಲು ಜಲಾಶಯಕ್ಕೆ ಜಮೀನಿನ ಸ್ವಾಧೀನ ಸಮಸ್ಯೆ ಇದೆ ಎಂದು ಹೇಳಿದರು. ಅಲ್ಲಿನ ಜಲಾಶಯಕ್ಕೆ ೧೦ TMC ನೀರಿನ storage capacity ಮಾಡಬೇಕೆಂದು DPR ನಲ್ಲಿತ್ತು. ಇತ್ತೀಚೆಗೆ ೨.೬ TMC ನೀರಿಗೆ tender ಕರೆದಿದ್ದಾರೆ ಎನ್ನುವುದು ಗೊತ್ತಾಯಿತು. ಅದರ ಪ್ರಕಾರ ೨.೬ TMC ನೀರನ್ನು storage ಮಾಡಿದ್ರೆ ಆದರೆ ಈ ನೀರನ್ನು ೬ ತಿಂಗಳ ಕಾಲ ಮಧುಗಿರಿ feeder ಕಾಲುವೆ, ಗೌರಿಬಿದನೂರು feeder ಕಾಲುವೆ, ರಾಮನಗರ feeder ಕಾಲುವೆ, ಕೋಲಾರ feeder ಕಾಲುವೆ ಮತ್ತು ಶ್ರೀನಿವಾಸಪುರ feeder ಕಾಲುವೆಗಳಿಗೆ ಅಂದರೆ ೩ ಜಿಲ್ಲೆಗಳಿಗೆ ೨.೬ TMC ನೀರನ್ನು supply ಮಾಡುವುದಕ್ಕೆ ಆಗುತ್ತದೆಯೇ? ಎತ್ತಿನಹೊಳೆ ಮೂಲ ಉಗಮ ಸ್ಥಾನದಲ್ಲಿ ಕೇವಲ ೬ ತಿಂಗಳು ಮಾತ್ರ ಬೀಳುವ ಮಳೆಯ ನೀರು ಭೈರಗೊಂಡನಹಳ್ಳಿ ಜಲಾಶಯಕ್ಕೆ pump ಮಾಡಲು ಅವಕಾಶ ಇದೆ. ಇನ್ನು ೬ ತಿಂಗಳು ನೀರು ಸಿಗುವುದಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿಯಾಗಿ, ಮೂಲ ೧೦ TMC ನೀರಿನ storage capacity ಇತ್ತು, ಅಷ್ಟೇ ಮಾಡಬೇಕೆಂದು ಮನವಿ ಕೊಟ್ಟಿದ್ದೇವೆ. ಅದರ ಬಗ್ಗೆ ಮಾನ್ಯ ನೀರಾವರಿ ಸಚಿವರು ಉತ್ತರಿಸಬೇಕೆಂದು ಕೋರುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಭೈರಗೊಂಡನಹಳ್ಳಿಯ 10 TMC reservoir ಆಗಬೇಕಾಗಿತ್ತು, ಆದರೆ ೨.೬ TMC ಗೆ ಕಡಿಗೊಳಿಸಿರುವ ಬಗ್ಗೆ ಹೇಳಿದರು. ನಾನು ಅದನ್ನು ಪರಿಶೀಲನೆ ಮಾಡುತ್ತೇನೆ, ಏಕೆಂದರೆ ನನ್ನ ಹತ್ತಿರ ಅದರ ಮಾಹಿತಿ ಇಲ್ಲ, ಬೆಂಗಳೂರಿಗೆ ಹೋದ ತಕ್ಷಣ ಮಾನ್ಯ ಸದಸ್ಯರನ್ನು ಕರೆದು, ಪರಿಶೀಲನೆ ಮಾಡಿ, finally ಉತ್ತರ ಹೇಳುತ್ತೇನೆ.

**ಶ್ರೀ ಗೋವಿಂದರಾಜು:-** ೧೦ TMC ನೀರನ್ನು ಕಡಿಮೆ ಮಾಡಿದ್ರೆ ಆದರೆ ಕೋಲಾರ ಭಾಗಕ್ಕೆ ನೀರು ಬರುವುದೇ ಇಲ್ಲ.

**ಸಭಾಪತಿಯವರುಃ-** ಮಾಹಿತಿ ಇಲ್ಲ, ನೋಡಿ ಹೇಳುತ್ತೇನೆ ಎಂದು ಹೇಳುತ್ತಿದ್ದಾರೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ನಾನು ನೀರಾವರಿ ಸಚಿವನಾದ ಮೇಲೆ ಯಾವುದೇ ನಿರ್ಣಯಗಳು ನನ್ನ ಮುಂದೆ ಆಗಿಲ್ಲದ ಕಾರಣ ಪರಿಶೀಲನೆ ಮಾಡಿ ಉತ್ತರ ಹೇಳುತ್ತೇನೆ ಎಂದು ಹೇಳಿದೆ. ಸದನಕ್ಕೆ ತಪ್ಪು ಹೇಳುವುದು ಬೇಡ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ನನ್ನ ಕೆಲವು ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದು, ಇನ್ನು ಕೆಲವಕ್ಕೆ ಉತ್ತರ ಕೊಟ್ಟಿಲ್ಲ. ಮೊಟ್ಟಮೊದಲನೆಯದಾಗಿ ಮಾನ್ಯ ಸಚಿವರು ಪ್ರಾರಂಭ ಮಾಡಿದಾಗ ಕೃಷ್ಣ ವಿಚಾರವಾಗಿ ರೂ.೧೦ ಸಾವಿರ ಕೋಟಿ UKP ಗೆ ಮೀಸಲಿಡುತ್ತೇವೆ ಎಂದು ಹೇಳಿದರು ಮತ್ತು ವಾಗ್ದಾನ ಮಾಡಿರುವ ಬಗ್ಗೆ ಹೇಳಿದರು. ಮಾನ್ಯ ಸಭಾಪತಿಯವರೇ, ನಮ್ಮ ಪ್ರಣಾಳಿಕೆಯನ್ನು ನಾನು ಕಳುಹಿಸಿಕೊಡುತ್ತೇನೆ. ನಮ್ಮ ಪ್ರಣಾಳಿಕೆಯಲ್ಲಿ ಕೃಷ್ಣ ನದಿ ಕಾಲುವೆ ಮತ್ತು ಕಾವೇರಿ ನದಿ ಕೊಳ್ಳದಲ್ಲಿ ಅಭಿವೃದ್ಧಿ ಹಾಗೂ ಆಧುನೀಕರಣಕ್ಕಾಗಿ ವಾರ್ಷಿಕ ರೂ.೧೦ ಸಾವಿರ ಕೋಟಿ ಮೀಸಲು ಎಂದು ಇದ್ದು, ಇದು ನಮ್ಮ ಅಧಿಕೃತ manifesto ಆಗಿದೆ.

**ಸಭಾಪತಿಯವರುಃ-** ಮಾನ್ಯ ಸಚಿವರೇ, ಅದಕ್ಕೆ ಉತ್ತರ ಹೇಳಿಬಿಡಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಇನ್ನೂ ಇದೆ.

**ಸಭಾಪತಿಯವರುಃ-** ಬೆಳಗ್ಗೆ ಹೇಳಿದ್ದನ್ನೇ repeat ಮಾಡುತ್ತೀರಿ.

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿಃ-** ಬೆಳಗ್ಗೆ ೧೦-೩೦ಕ್ಕೆ ಸದನ ಪ್ರಾರಂಭವಾಗಿದೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ನಾನು ಹೇಳಿದ ಮೇಲೆ ಈಗ ಮತ್ತೆ ಪ್ರಸ್ತಾಪ ಮಾಡಿದರು. It was a point of order. ನಾನು ಮತ್ತೆ ಬೇರೆ ವಿಚಾರದಲ್ಲಿ ತರುತ್ತೇನೆ. Clarification ಹೇಳಲಿ. ಮತ್ತೆ ಅದನ್ನೇ ಹೇಳಿದ್ದಾರೆ. ಮಾಧ್ಯಮದಲ್ಲಿ ಅವರು ಹೇಳುವುದು ಬರುತ್ತದೆ, ನಾವು ಹೇಳುವುದು ಬರುವುದಿಲ್ಲ. ಬರೀ record ಗೆ ಹೇಳಿಕೊಂಡು ಕುಳಿತುಕೊಳ್ಳಬೇಕು. ಮಾಧ್ಯಮದವರು ನಾವು ಹೇಳಿದ್ದನ್ನು cover ಮಾಡುವುದಿಲ್ಲ.

**Mr. CHAIRMAN:-** Cover ಮಾಡಿಸಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಅವರು ಹೇಳಿದ್ದು ಮತ್ತು ನಾನು ಹೇಳಿದ್ದು ಏನು? ಬಿಜೆಪಿ ಸರ್ಕಾರ ಪ್ರಣಾಳಿಕೆಯಲ್ಲಿ ಏನು ಹೇಳಿದೆ. ೨೦೨೩ರವರೆಗೆ ರೂ.೧.೫೦ ಲಕ್ಷ ಕೋಟಿ ಕೊಡುವುದಾಗಿ ವಾಗ್ದಾನ ಮಾಡಿದ್ದು, ಇದನ್ನು ನಾವು ಹೇಳಿಲ್ಲ. ಈ ಪ್ರಣಾಳಿಕೆಯನ್ನು ತಮಗೂ ಕಳುಹಿಸಿಕೊಡುತ್ತೇನೆ. ಸುಜಲಾಂ ಸುಫಲಾಂ ಕರ್ನಾಟಕ ಯೋಜನೆಯಡಿ to complete all irrigation projects by 2020-23.

**ಡಾ: ವೈ.ಎ. ನಾರಾಯಣಸ್ವಾಮಿ:-** ನಿನ್ನೆ ಒಂದು ಗಂಟೆ ಭಾಷಣ ಮಾಡಿದ್ದಾರೆ. ಹೀಗೆ ಭಾಷಣ ಮಾಡಿದರೆ ನಮ್ಮ ಕತೆ ಏನು? ಬೆಳಗ್ಗೆ same ಭಾಷಣ ಮಾಡಿದ್ದಾರೆ. ಮಾನ್ಯ ಮಂತ್ರಿಗಳನ್ನು ಕಟಕಟೆಯಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಿಲ್ಲಿಸಿ ಪಾಟಿ ಸವಾಲು ಮಾಡುತ್ತಿದ್ದಾರೆಯೇ? ಇದನ್ನು ಎಲ್ಲರೂ ಕೇಳಬೇಕೇ? ಉತ್ತರ ಹೇಳಿದ ಮೇಲೆ ಆಯಿತು.

**ಸಭಾಪತಿಯವರು:-** ಸಮಯವನ್ನು ದುರುಪಯೋಗ ಮಾಡಿಕೊಳ್ಳದೇ short ಮುಕ್ತಾಯ ಮಾಡಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ನಾನು ಪ್ರಸ್ತಾಪ ಮಾಡುತ್ತಿರಲಿಲ್ಲ, ಅವರು ಮತ್ತೆ ಪುನರುಚ್ಚಾರ ಮಾಡಿದ್ದರಿಂದ ಹೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಉತ್ತರ ಹೇಳಿಬಿಡಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಇಲ್ಲ ಸಾರ್, ನಾನು ಇನ್ನೂ ಮಾತನಾಡಬೇಕು.

**ಸಭಾಪತಿಯವರು:-** ಅದನ್ನು ತಿಳಿದುಕೊಂಡು ಹೇಳಿಬಿಡಿ. ಅವರು ಹೇಳಿದ ನಂತರ ಹೇಳಿ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ನಾನು ನನ್ನ ಮನೆಯಿಂದ ಹಣ ತಂದಿಲ್ಲ. ಇದನ್ನು ಆವತ್ತಿನ ಅಧ್ಯಕ್ಷರಾದ ಡಾ: ಪರಮೇಶ್ವರ್ ರವರು manifesto ತಯಾರು ಮಾಡಿದ ಶ್ರೀ ಹೆಚ್.ಕೆ. ಪಾಟೀಲರಿಗೆ, ಅಂದರೆ ಪ್ರಣಾಳಿಕೆ ತಯಾರು ಮಾಡಿದ ಮಾಜಿ ನೀರಾವರಿ ಸಚಿವರಾದ ಶ್ರೀ ಹೆಚ್.ಕೆ. ಪಾಟೀಲರಿಗೆ ವಂದನೆಗಳನ್ನು ತಿಳಿಸಿದ್ದಾರೆ. ನಾನು ಹಾಗೆ ಕೊಟ್ಟಿಲ್ಲ. **(ಗೊಂದಲ)** ನಾನು ನನ್ನ ಮನೆಯಿಂದ ತಂದಿಲ್ಲ, ಅವರದ್ದೇ ಪ್ರಣಾಳಿಕೆ copy ತೆಗೆದುಕೊಂಡಿದ್ದೇನೆ. ಇದರಲ್ಲಿ ಆವತ್ತಿನ ಅಧ್ಯಕ್ಷರಾಗಿದ್ದ ಮಾನ್ಯ ಪರಮೇಶ್ವರ್‌ರವರು ಮಾನ್ಯ ಹೆಚ್.ಕೆ. ಪಾಟೀಲರಿಗೆ ಅಭಿನಂದನೆ ಹೇಳಿರುವುದನ್ನು ಹೇಳಿದ್ದೇನೆ. ಮಾನ್ಯ ಸದಸ್ಯರು ಹೋರಾಟ ಮಾಡಬೇಕಾದ್ದು ಯಾವ ವಿಚಾರಕ್ಕೆ ಎಂದರೆ ನ್ಯಾಯಮೂರ್ತಿ ಶ್ರೀ ಬ್ರಿಜೇಶ್ ಕುಮಾರ್ ರವರು ಕೃಷ್ಣಾ ೧೩೦ TMC ನೀರನ್ನು ಆಲಮಟ್ಟಿ ಅಣೆಕಟ್ಟಿನಲ್ಲಿ storage ಮಾಡಲು ಕೊಟ್ಟಿದ್ದು, ಅದನ್ನು ಉಪಯೋಗ ಮಾಡಿದ್ದರೆ ಸುಮಾರು ೧೫ ಲಕ್ಷ ಎಕರೆ ಭೂಮಿಗೆ ನೀರಾವರಿ ಆಗುತ್ತಿತ್ತು, ಆದರೆ ಅದನ್ನು ಮಾಡಿಲ್ಲ ಮಾನ್ಯ ಸದಸ್ಯರು ಹೇಳಿದ್ದಾರೆ. ಮಾನ್ಯ ಸದಸ್ಯರು ನ್ಯಾಯಮೂರ್ತಿ ಶ್ರೀ ಬ್ರಿಜೇಶ್ ಕುಮಾರ್ ತೀರ್ಪಿನ award..... ನಾನು ಹೇಳುವುದೇನೆಂದರೆ ೧೯೭೬ Krishna Water Dispute Tribunal -I award, ನ್ಯಾಯಮೂರ್ತಿ ಶ್ರೀ ಬಚಾವತ್ ತೀರ್ಪಿನ ಬಗ್ಗೆ ಮಾತನಾಡುತ್ತಿಲ್ಲ.

(ಮುಂದು)

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(1322)/23.12.2021/7.30/ಹೆಚ್‌ವಿ:ವಿಕೆ** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಗೋವಿಂದ ಎಂ.ಕಾರಜೋಳ:-** ಸನ್ಮಾನ್ಯ ಸಭಾಪತಿಯವರೇ, ಮತ್ತೊಮ್ಮೆ ಹೇಳಿ ಎಂದರೆ ನಾನು ಹೇಳುವುದಕ್ಕೆ ತಯಾರಿದ್ದೇನೆ. ಅಲ್ಲಿ ಅವರು ಬ್ರಿಜೇಶ್‌ಕುಮಾರ್ ಅವರ ಬಗ್ಗೆಯೇ ಪ್ರಸ್ತಾಪ ಮಾಡಿರುವುದು, ಬೇರೆ ಯಾರ ಬಗ್ಗೆಯೂ ಅಲ್ಲ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಸನ್ಮಾನ್ಯ ಸಭಾಪತಿಯವರೇ, ನಾನು ಅಧಿಕೃತವಾದ ಮೂಲ ಪ್ರತಿಯನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ. ಮಾನ್ಯ ಸಚಿವರು ಉಲ್ಲೇಖ ಮಾಡುತ್ತಿರುವುದು ನಮ್ಮ ಪಕ್ಷದ ಆಂತರಿಕ ನೋಟ್ ಆಗಿದೆ. ಪಕ್ಷದ ಪ್ರಣಾಳಿಕೆಯ ರಚನಾ ಕಮಿಟಿಯಲ್ಲಿ ನಾನು ಸಹ ಇದ್ದೆ.

**ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, ತಾವು ಕಳುಹಿಸಿಕೊಟ್ಟಿರುವುದನ್ನೇ ನಾನು ಮಾನ್ಯ ಸಚಿವರಿಗೆ ಕೊಟ್ಟಿದ್ದೇನೆ. ಒರಿಜಿನಲ್ ಕಾಪಿಯನ್ನು ಕಳುಹಿಸಿಕೊಡುವ ಅವಶ್ಯಕತೆ ಇಲ್ಲ. ತಮ್ಮ ಮೇಲೆ ನನಗೆ ನಂಬಿಕೆ ಇದೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಸನ್ಮಾನ್ಯ ಸಭಾಪತಿಯವರೇ, ಅವರ ಪಕ್ಷದ ಪ್ರಣಾಳಿಕೆಯ ಮುಖಾಂಶಗಳು ನನ್ನ ಬಳಿ ಇದೆ. ಅದನ್ನು ಬೇಕಾದರೆ ನಾನು ತಮಗೆ ಕಳುಹಿಸಿಕೊಡುತ್ತೇನೆ. ಏಕೆಂದರೆ ಅದರ ಮೂಲ ಪ್ರತಿ ನನ್ನ ಹತ್ತಿರ ಇರುವುದಿಲ್ಲ, ಅವರ ಬಳಿ ಇರುತ್ತದೆ. ನಾನು ಅದರ ಪ್ರತಿಯನ್ನು ತೆಗೆದುಕೊಂಡಿದ್ದೇನೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಸನ್ಮಾನ್ಯ ಸಭಾಪತಿಯವರೇ, ನಮ್ಮ ಇಂಟರ್‌ನಲ್ ನೋಟ್ ಅನ್ನು ಅವರು ಅಧಿಕೃತ ಎಂದು ಹೇಳುತ್ತಿದ್ದಾರೆ ಇದು ಸರಿಯಲ್ಲ.

ಸನ್ಮಾನ್ಯ ಸಭಾಪತಿಯವರೇ, ಗುತ್ತಿ ಬಸವಣ್ಣ ಏತ ನೀರಾವರಿ ಯೋಜನೆಯಲ್ಲಿ ಇಂಡಿ ತಾಲ್ಲೂಕಿನ ತಾಂಬಾ ಗ್ರಾಮಕ್ಕೆ ನೀರು ಹರಿಸಲು 9 ಪಂಪ್‌ಸೆಟ್‌ಗಳು ಇರಬೇಕಾಗಿತ್ತು. ಅವುಗಳಲ್ಲಿ 6 ಪಂಪ್‌ಸೆಟ್‌ಗಳು ಕಳೆದ ಎರಡು ವರ್ಷಗಳಿಂದ ಹಾಳಾಗಿವೆ. ಮಾನ್ಯ ಸಚಿವರು ಅಲ್ಲಿಗೆ ಭೇಟಿ ನೀಡಿ, 30 ಕೋಟಿ ರೂಪಾಯಿಗಳ ಟೆಂಡರ್ ಕರೆಯಲಾಗಿದೆಯೆಂದು ಹೇಳಿದ್ದಾರೆ. ಯಾವಾಗ ಈ ಪಂಪ್‌ಸೆಟ್‌ಗಳನ್ನು ಸರಿಪಡಿಸಲಾಗುತ್ತದೆ ಎನ್ನುವ ಪ್ರಶ್ನೆಗೆ ಮಾನ್ಯ ಸಚಿವರಿಂದ ಉತ್ತರವನ್ನು ಬಯಸುತ್ತಿದ್ದೇನೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಸನ್ಮಾನ್ಯ ಸಭಾಪತಿಯವರೇ, ಗುತ್ತಿ ಬಸವಣ್ಣ ಏತ ನೀರಾವರಿಯ ಬಗ್ಗೆ ಅವರಿಗಿಂತ ಹೆಚ್ಚು ನನಗೆ ತಿಳಿದಿದೆ. ಮೊನ್ನೆ ತಾನೇ ನಾನು ಅಲ್ಲಿಗೆ ಭೇಟಿ ನೀಡಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಂದಿದ್ದೇನೆ. ಗುತ್ತಿ ಬಸವಣ್ಣ ಏತ ನೀರಾವರಿಯಲ್ಲಿ 2815 ಹೆಚ್‌ಪಿ ಸಾಮರ್ಥ್ಯದ 08 ಪಂಪ್‌ಸೆಟ್‌ಗಳನ್ನು ಅಳವಡಿಸಲಾಗಿದೆ. ಇದರಲ್ಲಿ 7 ಕಾರ್ಯನಿರತವಾಗಿರುತ್ತವೆ ಮತ್ತು ಒಂದು ಪಂಪ್‌ಸೆಟ್ ಅನ್ನು ಹೆಚ್ಚುವರಿಯಾಗಿ ಉಳಿಸಿಕೊಳ್ಳಲಾಗಿದೆ. ಆ 07 ಪಂಪ್‌ಸೆಟ್‌ಗಳಲ್ಲಿ ಯಾವುದಾದರೊಂದು ಕೆಟ್ಟರೇ ಅಥವಾ ರಿಪೇರಿಗೆ ಬಂದರೆ, ನೀರು ಪಂಪ್ ಮಾಡುವ ಕಾರ್ಯದಲ್ಲಿ ಅಡೆತಡೆಯಾಗಬಾರದು ಎನ್ನುವ ಕಾರಣದಿಂದ ಒಂದು ಪಂಪ್‌ಸೆಟ್ ಅನ್ನು ಹೆಚ್ಚುವರಿಯಾಗಿ ಇಟ್ಟುಕೊಳ್ಳಲಾಗಿದೆ. ಸುಮಾರು 06 ಪಂಪ್‌ಸೆಟ್‌ಗಳನ್ನು ಬದಲಾವಣೆ ಮಾಡುವಂತಹ ಅವಶ್ಯಕತೆ ಇದೆ. ಈಗಾಗಲೇ ಎರಡು ಪಂಪ್‌ಸೆಟ್‌ಗಳಿಗೆ ಸುಮಾರು 10 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಟೆಂಡರ್ ಕರೆದು ನವೆಂಬರ್ ತಿಂಗಳಿನಲ್ಲಿ ಬಿಡ್ ಓಪನ್ ಮಾಡಲಾಗಿದೆ. ವರ್ಕ್ ಆರ್ಡರ್ ಸಹ ಆಗಿದೆ. ಆ ಎರಡು ಹೊಸ ಪಂಪ್‌ಸೆಟ್‌ಗಳು ಬರುತ್ತವೆ. ಉಳಿದಿರುವ ನಾಲ್ಕು ಪಂಪ್‌ಸೆಟ್‌ಗಳು ಏಪ್ರಿಲ್ ತಿಂಗಳವರೆಗೆ ಕಾರ್ಯನಿರ್ವಹಿಸುತ್ತವೆ. ಏಪ್ರಿಲ್ ನಂತರ ಇವುಗಳನ್ನು ಬದಲಾವಣೆ ಮಾಡುವಂತಹ ಕೆಲಸವನ್ನು ಮಾಡುತ್ತೇವೆ. ಹೊಸ ಪಂಪ್‌ಸೆಟ್‌ಗಳನ್ನು ಅಳವಡಿಸುವುದಕ್ಕೆ ಟೆಂಡರ್ ಕರೆಯಬೇಕೆನ್ನುವ ಸೂಚನೆಯನ್ನು ನೀಡಲಾಗಿದೆ. ನಾಲ್ಕು ಪಂಪ್‌ಸೆಟ್‌ಗಳಿಗೆ ಸುಮಾರು 20 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇದಕ್ಕಾಗಿ ಟೆಂಡರ್ ಅನ್ನು ಕರೆಯಲಾಗುತ್ತದೆ. ಒಟ್ಟಾರೆಯಾಗಿ 06 ಪಂಪ್‌ಸೆಟ್‌ಗಳನ್ನು ಹೊಸದಾಗಿ ಅಳವಡಿಸಲಾಗುವುದು.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಸನ್ಮಾನ್ಯ ಸಭಾಪತಿಯವರೇ, ವ್ಯವಸ್ಥಾಪಕ ನಿರ್ದೇಶಕರ ಕಛೇರಿಯನ್ನು ಆಲಮಟ್ಟಿಗೆ ಸ್ಥಳಾಂತರಿಸಬೇಕಾಗಿದೆ. ಆ ಕೆಲಸವನ್ನು ಸರ್ಕಾರ ಮಾಡಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಜಿಂದಾಲ್ ಕೈಗಾರಿಕೆಗೆ ಸರ್ಕಾರ ನೀರನ್ನು ಕೊಡುತ್ತಿದೆ, ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪಿಸಿರುವಂತೆ ಕಾಳೇಶ್ವರದಲ್ಲಿ ಬಾಹುಬಲಿ ಎನ್ನುವ ಒಂದು ವಿನೂತನ ಕುಡಿಯುವ ನೀರಿನ ಯೋಜನೆಯಾಗಿದೆ. ಇದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಮಾನ್ಯ ಸಚಿವರಿಗೆ ಕಳುಹಿಸಿಕೊಡುತ್ತೇನೆ.

**ಸಭಾಪತಿಯವರು:-** ಪ್ರಕಾಶ್ ರಾಥೋಡ್‌ರವರೇ, ಎಷ್ಟು ಹೇಳಿದರೂ ತಾವು ಕೇಳುವುದೇ ಇಲ್ಲ. ಇನ್ನು ಮುಂದೆ ತಾವು ಮಾತನಾಡಿದರೆ ಅದು ಯಾವುದೂ ಕಡತಕ್ಕೆ ಹೋಗುವುದಿಲ್ಲ. ಮಾನ್ಯ ಸಚಿವರೇ ತಾವು ಉತ್ತರವನ್ನು ಹೇಳಿ.

**ಶ್ರೀ ಗೋವಿಂದ ಎಂ. ಕಾರಜೋಳ:-** ಸನ್ಮಾನ್ಯ ಸಭಾಪತಿಯವರೇ, ಕುಡಿಯುವ ನೀರಿನ ಸಮಸ್ಯೆ ಎಲ್ಲಿದೆ ಎನ್ನುವುದರ ಬಗ್ಗೆ ಪತ್ರವನ್ನು ಕಳುಹಿಸಿಕೊಟ್ಟರೆ, ನಾನು ಅಲ್ಲಿಗೆ ಅಧಿಕಾರಿಗಳನ್ನು ಕಳುಹಿಸಿಕೊಟ್ಟು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ಭೂಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ಬಗ್ಗೆ ಮಾನ್ಯ ಸಚಿವರು ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ. ಭೂಸ್ವಾಧೀನವಾಗಿರುವ ಜಮೀನುಗಳ ಪಕ್ಕದಲ್ಲಿ ಇರುವಂತಹ ಸುಮಾರು 500 ಮೀಟರ್‌ನಷ್ಟು ಜಮೀನುಗಳು ಸವಳು ಜವಳು ಆಗಿ ಬಿತ್ತನೆಗೆ ಯೋಗ್ಯವಾಗಿರುವುದಿಲ್ಲ. ಇಂತಹ ಭೂಮಿಗೆ ಸರ್ಕಾರ ಪರಿಹಾರವನ್ನು ನೀಡುವುದಕ್ಕೆ ಸಾಧ್ಯವಿದೆಯೇ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನದಿಗಳ ಜೋಡಣೆ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ತಿಳಿಸಬೇಕಾಗಿದೆ. ಕಾಳಿನದಿ ನೀರನ್ನು ಮಲಪ್ರಭ ಮತ್ತು ಘಟಪ್ರಭ ನದಿಗಳಿಗೆ ಜೋಡಣೆ ಮಾಡಿ ಸುಮಾರು 25 ಟಿ.ಎಂ.ಸಿ. ನೀರನ್ನು ಸಂಗ್ರಹ ಮಾಡುವಂತಹ ಕೆಲಸವನ್ನು ಮಾಡಿದರೆ ಶಾಶ್ವತವಾಗಿ 5 ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸಲು ಅನುಕೂಲವಾಗುತ್ತದೆ ಎನ್ನುವ ಅಂಶವನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಸನ್ಮಾನ್ಯ ಸಭಾಪತಿಯವರೇ, ನನಗೆ ಅವರು ಮಾಹಿತಿಯನ್ನು ಕಳುಹಿಸಿಕೊಟ್ಟರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಶಶೀಲ್ ಜಿ.** ನಮೋಶಿ:- ಸನ್ಮಾನ್ಯ ಸಭಾಪತಿಯವರೇ, ಸಂವಿಧಾನದ ಅನುಚ್ಛೇದ 371(ಜೆ)ಯಲ್ಲಿ ಸಾಕಷ್ಟು ಲೋಪದೋಷಗಳಿವೆ, ಅವುಗಳಿಗೆ ತಿದ್ದುಪಡಿಗಳನ್ನು ತರುವುದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ತಕ್ಷಣವೇ ಒಂದು ಸಭೆಯನ್ನು ಕರೆಯಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಈ ಬಗ್ಗೆ ಮಾನ್ಯ ಸಚಿವರು ಆಶ್ವಾಸನೆ ನೀಡಬೇಕಾಗಿದೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಹಣಮಂತ್ ನಿರಾಣಿಯವರು ಕಾಳಿನದಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಕೋರ್ಟಿನಲ್ಲಿ ಕೇಸ್ ನಡೆಯುತ್ತಿರುವ ಪ್ರಕರಣಗಳ ವ್ಯಾಪ್ತಿಗೆ ಇವೆಲ್ಲವೂ ಬರುವುದರಿಂದ ನದಿಗಳ ಜೋಡಣೆ ಬಗ್ಗೆ ನಾನು ಮಾತನಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಕಾನೂನಿಗೆ ಒಳಪಟ್ಟು ಏನೇನು ನಿರ್ಣಯಗಳು ಬರುತ್ತವೆ ಅವುಗಳನ್ನು ನೋಡಿಕೊಂಡು ನಾವು ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**10. ಪ್ರಕಟಣೆ**

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ;

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಗಳ ನಿಯಮ 104ರ ಮೇರೆಗೆ ವಿಧಾನಸಭೆಯು ದಿನಾಂಕ:23.12.2021ರಂದು ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕ, 2021ನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತವನ್ನು ನೀಡಬೇಕೆಂದು ಕೋರಿರುತ್ತಾರೆ.

**11. <u>ನಿಯಮ 330ರ ಮೇರೆಗೆ ಚರ್ಚೆ</u>**

**ಇ) ವಿಷಯ: 1995ರ ನಂತರ ಪ್ರಾರಂಭವಾದ ಅನುದಾನರಹಿತ ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವುದರ ಕುರಿತು.**

\- - - - - - - -

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, 1995ರ ನಂತರ ಪ್ರಾರಂಭವಾಗಿರುವ ಅನುದಾನರಹಿತ ಶಾಲಾ ಕಾಲೇಜುಗಳಿಗೆ ಅನುದಾನ ಒದಗಿಸುವ ಬಗ್ಗೆ ಮಾನ್ಯ ಸಚಿವರಲ್ಲಿ ಸ್ಪಷ್ಟೀಕರಣವನ್ನು ಕೇಳುತ್ತಿದ್ದೇನೆ. 1987ರಲ್ಲಿ 'ಶಾಶ್ವತ ಅನುದಾನ ರಹಿತ' ಎನ್ನುವ ಪದ ಜಾರಿಗೆ ಬಂದಿತ್ತು. 1995ರ ನಂತರ ಹಂತಹಂತವಾಗಿ ಅನುದಾನವನ್ನು ನೀಡಲಾಗುತ್ತದೆಯೆಂದು ತಾವು ಶಿಕ್ಷಣ ಸಚಿವರಾಗಿದ್ದಾಗ, ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಹಣಕಾಸಿನ ಸಚಿವರಾಗಿದ್ದಾಗ ಮತ್ತು ಸನ್ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ 'ಶಾಶ್ವತ ಅನುದಾನರಹಿತ' ಎನ್ನುವ ಪದವನ್ನು ತೆಗೆದು ಹಾಕುವಂತಹ ಒಳ್ಳೆಯ ಕೆಲಸವಾಗಿತ್ತು. ಈ ಶಾಲೆಗಳನ್ನು ಹಂತಹಂತವಾಗಿ ಅನುದಾನಕ್ಕೆ ಒಳಪಡಿಸುವಂತಹ ಪ್ರಕ್ರಿಯೆ ನಡೆಯುತ್ತಿತ್ತು. ನಂತರ 2019ರಲ್ಲಿ ಸರ್ಕಾರ ಒಂದು ನಿರ್ಣಯವನ್ನು ಮಾಡಿದೆ.

(ಮುಂದು)

**(1323) 23.12.2021 7.40 ಪಿಕೆ:ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಅರುಣ ಶಹಾಪೂರ(ಮುಂದು)**

1987 ರಿಂದ 1995ರ ಮಧ್ಯದ ಅವಧಿಯ ಅನುದಾನವನ್ನು ಕೊಡುವುದು ನಿಲ್ಲಿಸಿದೆ. ಅಲ್ಲದೇ ಅನುದಾನ ಕೊಡುವ ಪ್ರಕ್ರಿಯೆಯನ್ನು ಹಂತ ಹಂತವಾಗಿ ನಡೆಸಬೇಕಾಗಿತ್ತು. ಆದರೆ ಅದೂ ಕೂಡ ನಿಂತಿದೆ. 1995 ರಿಂದ 2005ರ ಅವಧಿಯಲ್ಲಿ ಪ್ರಾರಂಭವಾದ ಶಾಲೆಗಳಿಗೆ ಅನುದಾನ ಕೊಡಬೇಕು ಎನ್ನುವ ಕೂಗಿದೆ. ಅಲ್ಲಿರುವ ಶಿಕ್ಷಕರು ಸರ್ಕಾರದಿಂದ ಇಲ್ಲಿಯವರೆಗೂ ಯಾವುದೇ ಸಂಬಳವನ್ನು ನಿರೀಕ್ಷಿಸದೇ ಕೆಲಸ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡುತ್ತಿದ್ದಾರೆ. ಅ ಹಿನ್ನೆಲೆಯಲ್ಲಿ 1995ರ ನಂತರ ಆರಂಭವಾದ ಅನುದಾನ ರಹಿತ ಶಾಲಾ ಕಾಲೇಜುಗಳಿಗೆ ಅನುದಾನ ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ತಾವು ಹಿಂದೆ ಶಿಕ್ಷಣ ಸಚಿವರಾಗಿದ್ದಾಗ ಖಾಸಗಿ ಅನುದಾನರಹಿತ ಶಾಲೆಗಳ ಶಿಕ್ಷಕರಿಗೆ ವೇತನಾನುದಾನ ಕೊಡಬೇಕು ಎನ್ನುವ ಸದಾಶಯದ ಮೇರೆಗೆ ಶಾಶ್ವತವಾಗಿ ಅನುದಾನರಹಿತ ಎನ್ನುವುದನ್ನು ಬದಲಾಯಿಸಿ, ಮುಖ್ಯಮಂತ್ರಿಗಳ ಮತ್ತು ಉಪಮುಖ್ಯಮಂತ್ರಿಗಳ ಮನವೊಲಿಸಿ, 1993 ರಿಂದ 2006-07ನೇ ಸಾಲಿನಲ್ಲಿ ಪ್ರಾರಂಭವಾಗಿದ್ದ ಶಾಲೆಗಳಿಗೆ ಅನುದಾನ ಕೊಡುವ ಪ್ರಕ್ರಿಯೆಗೆ ಚಾಲನೆ ಕೊಟ್ಟಿದ್ದೀರಿ. ನಂತರ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿ ಆದಾಗ, ಇದನ್ನು ಮಾನ್ಯ ಕಾಗೇರಿಯವರ ಕಾಲದಲ್ಲಿ, 1995ರವರೆಗೆ ಪ್ರಾರಂಭ ಆಗಿರತಕ್ಕಂಥ ಕನ್ನಡ ಮಾಧ್ಯಮ ಶಾಲೆಗಳಿಗೆ ಅನುದಾನ ಕೊಡುವುದನ್ನು ಮಾಡಿದಿರಿ. ಅದಾದ ಮೇಲೆ 1995 ರಿಂದ ಪ್ರಾರಂಭವಾಗಿರುವ ಶಾಲೆಗಳಿಗೆ ಅನುದಾನ ಕೊಡಬೇಕು ಎನ್ನುವುದು ದೀರ್ಘಕಾಲದಿಂದ ಒತ್ತಡ ಇದ್ದರೂ ಕೂಡ ಆಗಲಿಲ್ಲ. ಶ್ರೀಮಾನ್ ಸುರೇಶ್‌ಕುಮಾರ್‌ರವರು ಮಂತ್ರಿಯಾಗಿದ್ದಾಗ, 5 ವರ್ಷಕ್ಕೊಮ್ಮೆ ಘಟಕಗಳಾಗಿ ಮಾಡಿ, ನಾವು ಅನುದಾನ ಕೊಡುವ ಪ್ರಕ್ರಿಯೆಗೆ ಚಾಲನೆ ಕೊಡೋಣ ಎಂದು ಹೇಳಿ, 1995 ರಿಂದ 2000ನೇ ಇಸವಿರಯವರೆಗೆ ಮತ್ತು 2000 ದಿಂದ 2005ನೇ ಇಸವಿಯವರೆಗೆ ಎಂದು 3-4 ಘಟಕಗಳನ್ನು ಮಾಡಿದ್ದರು. ನನ್ನ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ, 1995 ರಿಂದ 2000ನೇ ಸಾಲಿನವರೆಗೆ ಕನ್ನಡ ಮಾಧ್ಯಮ ಅನುದಾನ ರಹಿತ ಒಟ್ಟು 685 ಪ್ರಾಥಮಿಕ ಶಾಲೆಗಳು, ಪ್ರೌಢ ಶಾಲೆಗಳ ಸಂಖ್ಯೆ 211 ಇತ್ತು.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ಆ ಅಂಕಿ-ಸಂಖ್ಯೆಗಳು ಮಾನ್ಯ ಸಚಿವರ ಹತ್ತಿರ ಇದೆ. ತಾವು ಏನು ಕೇಳಬೇಕು ಎಂದಿದ್ದೀರೋ ಅದನ್ನು ಕೇಳಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಗಳೆ, ಪ್ರಾಮಾಣಿಕವಾಗಿ ಈ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿರುವ ಶಾಲೆಗಳು ಶೇಕಡ ನೂರರಷ್ಟು ಫಲಿತಾಂಶ ಕೊಡುತ್ತಿವೆ. ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಶೇಕಡ 50 ರಷ್ಟು ಮಾತ್ರ ಬರುತ್ತಿದೆ. ಆದರೆ ಅನುದಾನ ರಹಿತ ಶಾಲೆಗಳಲ್ಲಿ ಬರುತ್ತಿದೆ. ಈ ಶಾಲೆಗಳಲ್ಲಿ, ಇಂದಲ್ಲ ನಾಳೆ ತಮ್ಮ ಶಾಲೆಗೆ ಅನುದಾನ ಸಿಗುತ್ತದೆ ಎಂದು ಪುಕ್ಕಟ್ಟೆಯಾಗಿ ಕೆಲಸ ಮಾಡುತ್ತಿದ್ದಾರೆ. ಎರಡು ಸಾವಿರ ರೂಪಾಯಿಗಳಿಗೆ ಕೆಲಸ ಮಾಡುತ್ತಿದ್ದಾರೆ. ಅನುದಾನ ರಹಿತ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳಿಗೆ ಕೆಲವು ಸರ್ಕಾರದ ಉಚಿತ ಸೌಲಭ್ಯಗಳು ಸಿಗುತ್ತಿಲ್ಲ. ಇವರೆಲ್ಲರಿಗೆ 10 ವರ್ಷದ ಸೇವೆ ಸಿಗುವುದಿಲ್ಲ. ವಯೋಮಾನ ಮೀರುತ್ತಿದೆ. 10-15 ವರ್ಷಗಳಿಂದ ಇಲ್ಲಿ ಕೆಲಸ ಮಾಡುತ್ತಿದ್ದಾರೆ. ತಾವು

ಮಾನವೀಯತೆಯ ದೃಷ್ಟಿಯಿಂದ ನೋಡಬೇಕು. ಹಿಂದಿನ ಮಂತ್ರಿಗಳು ಏನು ಪ್ರಯತ್ನ ಮಾಡಿದ್ದಾರೋ, 1995 ರಿಂದ 2000ದ ವರೆಗಿನ ಅವಧಿಯಲ್ಲಿ ಪ್ರಾರಂಭವಾಗಿರುವ ಕನ್ನಡ ಮಾಧ್ಯಮ ಶಾಲೆಗಳಿಗೆ ವೇತನಾನುದಾನ ಕೊಡುವಂಥದ್ದಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ನಾನು ನೇರವಾಗಿ ಎರಡು ಮಾತುಗಳನ್ನು ಹೇಳಿಬಿಡುತ್ತೇನೆ. ತಮ್ಮ ನೇತೃತ್ವದಲ್ಲಿ ಹುಬ್ಬಳ್ಳಿಯಲ್ಲಿ ದೊಡ್ಡ ಧರಣಿಯಾಯಿತು; ಸ್ವಾಮೀಜಿಗಳೂ ಸೇರಿದ್ದರು. ನಾವು ಮದ್ದೂರಿನಿಂದ ಬೆಂಗಳೂರಿಗೆ ಪಾದಯಾತ್ರೆ ಮಾಡಿಕೊಂಡು ಬಂದೆವು. ಆಗ ಮಾನ್ಯ ಸುರೇಶ್ ಕುಮಾರ್‌ರವರು ಒಂದು ಮಾತು ಕೊಟ್ಟರು. 2000 ಮತ್ತು 2005ರ ವರೆಗಿನ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಿದರೆ ಎಷ್ಟು ಖರ್ಚಾಗುತ್ತದೆ ಎನ್ನುವ ಮಾಹಿತಿ ತರಿಸಿಕೊಂಡರು. ಈ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರ ಪ್ರಶ್ನೆ ಅಡಗಿದೆ. ಇವರ ಅನ್ನಕ್ಕೆ ಕಷ್ಟವಾಗಿದೆ. ಬಹಳ ಜನರಿಗೆ ಇನ್‌ಕ್ರಿಮೆಂಟ್ ಕೇಳುತ್ತೇವೆ, ಆದರೆ ಇವರಿಗೆ ಊಟಕ್ಕೇ ಇಲ್ಲ. ಸರ್ಕಾರ ಮಾತು ಕೊಟ್ಟಿದೆ. ಹೋದ ಬಜೆಟ್‌ನಲ್ಲಿ ಇದರ ಬಗ್ಗೆ ಘೋಷಣೆ ಆಗಬೇಕಾಗಿತ್ತು. ಇವರಿಗೆ ಪುಸ್ತಕವೂ ಇಲ್ಲ, ಬಿಸಿ ಊಟವೂ ಇಲ್ಲ. ಯಾವುದೇ ಸವಲತ್ತು ಈ ಕನ್ನಡ ಮಾಧ್ಯಮದ ಮಕ್ಕಳಿಗೆ ಇಲ್ಲ. ಈ ಕನ್ನಡ ಮಾಧ್ಯಮ ಶಾಲೆಗಳು ಉಳಿಯಬೇಕು ಎಂದರೆ ಸರ್ಕಾರ ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕು. ಅದರ ಜೊತೆಗೆ, 1995ಕ್ಕೂ ಮೊದಲಿನ 49 ಕಡತಗಳು ಉಳಿದುಕೊಂಡಿವೆ. ಅವುಗಳನ್ನು ಕ್ಲಿಯರ್ ಮಾಡಬೇಕು. ಮತ್ತೆ, ಹಿಂದೆ ಏನು ಸಚಿವರು ಇಲ್ಲೇ ಮಾತು ಕೊಟ್ಟಿದ್ದರೋ, ಸ್ವಾಮಿಜಿಗಳ ಮುಂದೆ ಮಾತು ಕೊಟ್ಟಿದ್ದರೋ ಮತ್ತು ಬಜೆಟ್‌ನಲ್ಲಿ ಸೇರಿಸುತ್ತೇವೆ ಎಂದು ಲಿಖಿತದ ಮೂಲಕ ತಿಳಿಸಿದ್ದರು. ಈಗ ಅದೇರೀತಿ ನಡೆದುಕೊಳ್ಳಬೇಕು.

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಈಗಾಗಲೇ ಮಾನ್ಯ ಹಿರಿಯ ಸದಸ್ಯರು ಅನುದಾನರಹಿತ ಶಾಲೆಗಳ ಕಷ್ಟದ ಬಗೆ ಹೇಳಿದ್ದಾರೆ. ಕಳೆದ 25 ವರ್ಷಗಳಿಂದ ಅನುದಾನರಹಿತ ಸಂಘಟನೆಗಳು ಹೋರಾಟ ಮಾಡಿ ಸೋತು ಹೋಗಿದ್ದಾರೆ. ಅವರ ದೇಹದಲ್ಲಿ ಒಂದು ಹನಿ ರಕ್ತ ಇಲ್ಲ. ಸರ್ಕಾರಕ್ಕೆ ಕಷ್ಟಗಳು ಇದ್ದೇ ಇರುತ್ತವೆ. ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ 2000 ಸಾಲಿನ ತನಕ ಪ್ರಾರಂಭವಾದ ಶಾಲೆಗಳ ಮಟ್ಟಿಗಾದರೂ ಅನುದಾನಕ್ಕೆ ಒಳಪಡಿಸಬೇಕು. ಸಂವಿಧಾನದಲ್ಲಿ, ಶಿಕ್ಷಣ ಎನ್ನುವುದು ಮಕ್ಕಳ ಹಕ್ಕಾಗಿದೆ, ಸಂವಿಧಾನ ಪ್ರದತ್ತವಾದುದಾಗಿದೆ. ಈ ನಿಟ್ಟಿನಲ್ಲಿ ನಡೆದುಕೊಳ್ಳುವುದು ಸರ್ಕಾರದ ಕರ್ತವ್ಯ. ಅನುದಾನರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳು ಈ ದಿಸೆಯಲ್ಲಿ ಕೆಲಸ ಮಾಡುತ್ತಿವೆ. ಸರ್ಕಾರ ಅನುದಾನ ಕೊಡಲಿಕ್ಕೆ ಬೇಕು. 2000 ಸಾಲಿನ ತನಕ ಏನು ಶಾಲೆಗಳು ಪ್ರಾರಂಭವಾಗಿದೆಯೋ, ಒಂದನೆಯ ಹಂತದಲ್ಲಿ ಅನುದಾನಕ್ಕೆ ಒಳಪಡಿಸಬೇಕು ಎನ್ನುವುದು ಶಿಕ್ಷಣ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಮಾನ್ಯ ಅರುಣ ಶಹಾಪುರ ಪ್ರಸ್ತಾವನೆ, ಮಾನ್ಯ ಮರಿತಿಬ್ಬೇಗೌಡ, ಮಾನ್ಯ ಶ್ರೀಕಂಠೇಗೌಡ ಮತ್ತು ಮಾನ್ಯ ಸಂಕನೂರರವರ ಅನುಮೋದನೆಗೆ ನನ್ನ ಧ್ವನಿಗೂಡಿಸುತ್ತಿದ್ದೇನೆ. ಕನ್ನಡ ರಕ್ಷಣೆ ಮಾಡಬೇಕಾದರೆ, ಆ ಶಿಕ್ಷಕರ ಪ್ರಾಣ ಉಳಿಸಬೇಕಾದರೆ 1995ರ ನಂತರ ಪ್ರಾರಂಭವಾದ ಕನ್ನಡ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಈಗಾಗಲೇ ಹಿರಿಯ ಶಾಸಕರು ಹೇಳಿರುವ ಹಾಗೆ, 1995ರ ನಂತರ ಪ್ರಾರಂಭವಾದ ಕನ್ನಡ ಮಾಧ್ಯಮ ಶಾಲೆಗಳಿಗೆ ಅನುದಾನ ಕೊಡುವುದರ ಬಗ್ಗೆ ನನ್ನ ಸಹಮತಿ ಸೂಚಿಸುತ್ತೇನೆ. 1995ಕ್ಕಿಂತ ಮುಂಚೆ ಉಳಿದಿರುವ ಕೆಲವೊಂದು ಡಿಗ್ರಿ ಕಾಲೇಜುಗಳಿಗೂ ಅನುದಾನ ಕೊಡಬೇಕು.

**ಸಭಾಪತಿಯವರು:-** ಈಗ ಡಿಗ್ರಿ ಕಾಲೇಜಿನ ವಿಷಯ ಪ್ರಸ್ತಾಪ ಆಗುತ್ತಿಲ್ಲ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸದಸ್ಯರು ವಿಷಯಗಳನ್ನು ರಿಪಿಟೇಷನ್ ಮಾಡಬಾರದು. ಶಾಶ್ವತ ಅನುದಾನರಹಿತ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಬೇಕು ಎನ್ನುವುದೇ ಇಲ್ಲಿ ಮುಖ್ಯ.

**ಶ್ರೀ ಬಿ.ಸಿ.ನಾಗೇಶ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು):-** ಮಾನ್ಯ ಸಭಾಪತಿಗಳೆ, ತಮ್ಮ ನೇತೃತ್ವದಲ್ಲಿ ಒಂದು ಸಭೆ ಮಾಡಲಾಯಿತು. 2018ರಲ್ಲಿ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಆದ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನವನ್ನು ಮತ್ತೊಮ್ಮೆ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ಸಭೆ ಸೇರೋಣ ಎಂದು ಹೇಳಲಾಗಿ, ಅದೇರೀತಿ ಮೊನ್ನೆ ಸಭೆ ಸೇರಿತ್ತು. ಅದರಲ್ಲಿ ತಾವು ಮತ್ತು ಮುಖ್ಯಮಂತ್ರಿಗಳು ಇದ್ದರು. 1995-2000ನೇ ಸಾಲಿನ ತನಕದ ಪೂರ್ಣ ವಿವರಗಳನ್ನು ತೆಗೆದುಕೊಂಡು ನಂತರ ಪರಿಶೀಲನೆ ಮಾಡಲಾಗುವುದು ಎಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅದನ್ನು ನಾವು ಪರಿಶೀಲಿಸುತ್ತೇವೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಈ) ವಿಷಯ: ಕಲ್ಯಾಣ ಕರ್ನಾಟಕ ವಿಭಾಗದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಮಕ್ಕಳ ಶಿಕ್ಷಕರ ಅನುಪಾತದಲ್ಲಾದ (ಪಿಟಿಆರ್) ತಾರತಮ್ಯ ಹೋಗಲಾಡಿಸುವ ಕುರಿತು.**

\- - - - - - -

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):**-ಮಾನ್ಯ ಸಭಾಪತಿಗಳೆ, ಕಲ್ಯಾಣ ಕರ್ನಾಟಕ ವಿಭಾಗದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಮಕ್ಕಳ ಶಿಕ್ಷಕರ ಅನುಪಾತ (ಪಿಟಿಆರ್)ಎನ್ನುವುದು ಬಹಳ ಮುಖ್ಯವಾದುದು. ಪ್ಯೂಪಿಲ್ ಟೀಚರ್ಸ್ ರೇಶ್ಯೋ ಇದರಲ್ಲಿ ತಾರತಮ್ಯವನ್ನು ಹೋಗಲಾಡಿಸುವ ವಿಚಾರವನ್ನು ನಾನು ಸರ್ಕಾರದ, ಮಂತ್ರಿಗಳ ಗಮನಕ್ಕೆ ತರಬಯಸುತ್ತಿದ್ದೇನೆ. ಕಲ್ಯಾಣ ಕರ್ನಾಟಕದ ಶೈಕ್ಷಣಿಕ ಗುಣಮಟ್ಟ ಯಾವರೀತಿ ಬದಲಾವಣೆ ಆಗುತ್ತದೆ ಎನ್ನುವ ಮಹತ್ವದ ವಿಷಯವನ್ನು ನಾನು ತನ್ಮೂಖಾಂತರ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಈ ಪಿಟಿಆರ್ ಏನಿದೆ, ಇದರಿಂದ ಶೈಕ್ಷಣಿಕ ಗುಣಮಟ್ಟ ಒಂದು ಕಡೆ, ಸಾಕ್ಷರತೆ ಪ್ರಮಾಣ ಇನ್ನೊಂದು ಕಡೆ ಮತ್ತು ಬಹಳ ಮುಖ್ಯವಾಗಿ ಶಿಕ್ಷಣದ ಗುಣಮಟ್ಟ ಬದಲಾವಣೆ ಆಗುತ್ತದೆ. ಶಿಕ್ಷಕರನ್ನು ಕಡಿಮೆ ಕೊಟ್ಟರೆ ಇವೆಲ್ಲಕ್ಕೂ ಧಕ್ಕೆ ಆಗುತ್ತದೆ. ಅಂದರೆ, ಶಿಕ್ಷಕರನ್ನು ಕಡಿಮೆ ಕೊಟ್ಟರೆ ಫಲಿತಾಂಶ ಕಡಿಮೆ ಅಗುತ್ತದೆ, ಶಿಕ್ಷಣದ ಗುಣಮಟ್ಟ ಇರುವುದಿಲ್ಲ. ಸಾಕ್ಷರತಾ ಪ್ರಮಾಣ ಕಡಿಮೆ ಆಗುತ್ತದೆ. ಬೀದರ್‌ನಲ್ಲಿ 19 ಇದೆ, ಅದೇ ಬೆಟರ್ ಎಂದು ಹೇಳಬಹುದು. ಇಡೀ ರಾಜ್ಯದಲ್ಲೇ ಕೊಪ್ಪಳಕ್ಕೆ 24ನೇ ಸ್ಥಾನ. ಬಳ್ಳಾರಿಯಲ್ಲಿ 25, ಕಲ್ಬುರ್ಗಿಯಲ್ಲಿ 27, ರಾಯಚೂರು 29, ಯಾದಗಿರಿ 30. ಅಂದರೆ ನಾವು ಕೊನೆಯ ಸ್ಥಾನದಲ್ಲಿದ್ದೇವೆ.

(ಮುಂದು)

(1324) 23-12-2021 7.50 DS-BNS

**ಶ್ರೀ ಶಶಿಲ್ ಜಿ.ನಮೋಶಿ(ಮುಂದು):-**

ಎಲ್ಲಿ PTR (pupil-teacher ratio) ಕಡಿಮೆ ಇದೆ, ಎಲ್ಲಿ ಸಾಕ್ಷರತಾ ಪ್ರಮಾಣ ಚೆನ್ನಾಗಿದೆ ಎನ್ನುವುದನ್ನು ಕಲ್ಯಾಣ ಕರ್ನಾಟಕಕ್ಕೆ ಹೋಲಿಕೆ ಮಾಡಿದರೆ ಶೇಕಡ 12 ರಷ್ಟು ವ್ಯತ್ಯಾಸವಾಗುತ್ತದೆ. ಇದರ ಬಗ್ಗೆ ಅನೇಕ ಸರ್ವೆಗಳಾಗಿವೆ. Census Based Students' Achievement Survey (CSAS) ಇದು ಒಂದು ಲೆಕ್ಕಾಚಾರ ತೋರಿಸುತ್ತದೆ. 2017-18 ರಲ್ಲಿ ಮಾಡಿದಂತಹ ಸರ್ವೆಯಲ್ಲಿ 4 ರಿಂದ 10ನೇ ತರಗತಿಯ ಮಕ್ಕಳಿಗೆ ಇದನ್ನು ಹೋಲಿಸಿದಾಗ ಅಥವಾ ಸರ್ವೆಯಲ್ಲಿ ಏನು ಹೇಳುತ್ತದೆಂದರೆ, ಶೇಕಡ 4 ರಷ್ಟು ಕಲ್ಯಾಣ ಕರ್ನಾಟಕ ಭಾಗಕ್ಕೆ ಈ ಫಲಿತಾಂಶ ಕಡಿಮೆಯಾಗುತ್ತದೆ. ಅದೇ ರೀತಿ National Achievement Survey ನಲ್ಲಿಯೂ ಕೂಡ ಇದೇ ಒಂದು ಫಲಿತಾಂಶವನ್ನು ತೋರಿಸಿ ಕೊಡುತ್ತದೆ. ಅದರ ಜೊತೆಗೆ 'ನಲಿ-ಕಲಿ' ಯಲ್ಲೂ ಕೂಡ micro study result of 2019 ಅದು ವಿವರವಾಗಿ ಏನು ಹೇಳುತ್ತದೆಂದರೆ, ಕಡಿಮೆ ಪಿಟಿಆರ್ ಇದ್ದಲ್ಲಿ ಹಾಸನದಲ್ಲಿ 10 ಮಕ್ಕಳಿಗೆ ಒಬ್ಬ ಶಿಕ್ಷಕ, ಚಿಕ್ಕಮಗಳೂರಿನಲ್ಲಿ 11 ಮಕ್ಕಳಿಗೆ ಒಬ್ಬ ಶಿಕ್ಷಕ,

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತುಮಕೂರಿನಲ್ಲಿ 12 ಮಕ್ಕಳಿಗೆ ಒಬ್ಬ ಶಿಕ್ಷಕ, ಅದೇ ಕಲ್ಯಾಣ ಕರ್ನಾಟಕ ಭಾಗದಲ್ಲಿ ಯಾದಗಿರಿಯಲ್ಲಿ 25 ಮಕ್ಕಳಿಗೆ ಒಬ್ಬ ಶಿಕ್ಷಕ, ರಾಯಚೂರಿನಲ್ಲಿ 25 ಮಕ್ಕಳಿಗೆ ಒಬ್ಬ ಶಿಕ್ಷಕ, ಕೊಪ್ಪಳದಲ್ಲಿ 25 ಮಕ್ಕಳಿಗೆ ಒಬ್ಬ ಶಿಕ್ಷಕ, ಬಳ್ಳಾರಿಯಲ್ಲಿ 25 ಮಕ್ಕಳಿಗೆ ಒಬ್ಬ ಶಿಕ್ಷಕ, ಈ ರೀತಿಯಾಗಿ ವ್ಯತ್ಯಾಸ ಇರುವುದರಿಂದ ಪರಿಣಾಮವೇನಾಗುತ್ತದೆಂದರೆ, ನಮ್ಮ ಭಾಗದಲ್ಲಿ ಪ್ರೌಢ ಶಾಲೆಯಲ್ಲಿ ಬಹಳ ಆಶ್ಚರ್ಯಕರವಾಗಿರುವುದೇನೆಂದರೆ, 1 ರಿಂದ 8ನೇ ತರಗತಿಯ ಮಕ್ಕಳಿಗೆ ಈ ಸರಾಸರಿ ಅಂದರೆ, stage average, 18.58 ಅಂದರೆ, 19 ಮಕ್ಕಳು ಇದ್ದಲ್ಲಿ ಒಬ್ಬ ಶಿಕ್ಷಕ ಇರಬೇಕೆಂದು average ಇದೆ. ಆ ಲೆಕ್ಕಾಚಾರ ಹಾಕಿದರೆ ನಮ್ಮ ಭಾಗದಲ್ಲಿ 10,83,399 ಮಕ್ಕಳಿದ್ದಾರೆ. ಅದಕ್ಕೆ 58,310 ಹುದ್ದೆಗಳು ಬೇಕು. ಈಗ ಮಂಜೂರಾಗಿರುವ ಹುದ್ದೆಗಳು 45,370 ಅಂದರೆ, 12,940 ಹುದ್ದೆಗಳು ನಮಗೆ ಬೇಕು. ಇದನ್ನು solution ಹೇಗೆ ಮಾಡಬಹುದೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ.

**ಸಭಾಪತಿಯವರು:-** ನೀವು ಏಕೆ solution ಕೊಡುತ್ತೀರಿ, ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

**ಶ್ರೀ ಶಶಿಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ನಾನು solution suggest ಮಾಡುತ್ತೇನೆ. ಅದನ್ನು ನಾವು ಮಾಡುತ್ತೇವೆಂದು ಮಾನ್ಯ ಸಚಿವರು ಹೇಳಿಬಿಡಲಿ, ನಾನು ಸುಮ್ಮನೆ ಕುಳಿತುಕೊಂಡು ಬಿಡುತ್ತೇನೆ. ಅದು ಬೆಂಗಳೂರು ಗ್ರಾಮಾಂತರ, ರಾಮನಗರ, ಮಧುಗಿರಿ, ತುಮಕೂರು, ಚಿಕ್ಕಬಳ್ಳಾಪುರ ಆಗಿರಲಿ, ಇಲ್ಲಿ ಪಿಟಿಆರ್ 12, 13, 12.28, ಇವೆಲ್ಲಾ ಇದೆ. ಮಂಜೂರಾಗಿರುವ ಹುದ್ದೆಗಳು 6132, ನಾನು ಒಂದು ಉದಾಹರಣೆ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಆದರೆ ಅಲ್ಲಿ State average ಪ್ರಕಾರ 4,106 ಶಿಕ್ಷಕರು ಇರಬೇಕು. ಆದರೆ ಹೆಚ್ಚುವರಿಯಾಗಿ 2026 ಶಿಕ್ಷಕರು ಇದ್ದಾರೆ. ಆ ಹೆಚ್ಚುವರಿ ಶಿಕ್ಷಕರ ಜೊತೆಗೆ 1,209 ಹುದ್ದೆಗಳು ಖಾಲಿ ಇವೆ. ನಾವು ಮತ್ತೇನು ಕೇಳುತ್ತಿಲ್ಲ. ಇದ್ದಂಥ ಶಿಕ್ಷಕರುಗಳನ್ನು ಈ ಕಡೆ ಕಳುಹಿಸಿ ಎಂದು ಹೇಳುತ್ತಿಲ್ಲ. ಈ ಖಾಲಿ ಹುದ್ದೆಗಳೇನಿವೆ, where there are excess posts, ಅವುಗಳನ್ನು ವರ್ಗಾವಣೆ ಮಾಡಿ. ಈ ಹುದ್ದೆಗಳಿಗೇನು ಹಣ ಕೊಡಬೇಕಾಗಿಲ್ಲ. ಹೆಚ್ಚುವರಿ ಹುದ್ದೆಗಳಿದ್ದಲ್ಲಿ ಎಲ್ಲಿ ಖಾಲಿ ಹುದ್ದೆಗಳಿವೆ ಅವುಗಳನ್ನು ಭರ್ತಿ ಮಾಡಬೇಡಿ, ಇಲ್ಲಿಗೆ ಕಳುಹಿಸಿಕೊಡಿ. ಇದನ್ನು ಮಾನ್ಯ ಸಚಿವರು ಮಾಡಿಕೊಟ್ಟರೆ ಸುಮಾರು 2277 ಪ್ರೌಢಶಾಲೆಗಳಿಗೆ ಈ ರೀತಿ ವರ್ಗಾವಣೆ ಮಾಡಬಹುದು. 12900 and odd ಪ್ರಾಥಮಿಕ ಶಾಲೆಗಳಿಗೆ ವರ್ಗಾವಣೆ ಮಾಡಬಹುದು. ದಯವಿಟ್ಟು ಇದನ್ನು ಮಾನ್ಯ ಸಚಿವರು ಮಾಡುತ್ತೇವೆಂದು ಹೇಳಬೇಕು. Otherwise, this leads to……. ನನಗೇನು ದುಃಖವಾಗುತ್ತಿದೆ ಎಂದರೆ, ಇದು ಒಂದೇ ಸಲ ಮಾಡುವುದಕ್ಕಾಗುತ್ತದೆಯೇ ಎಂದು ಹೇಳುತ್ತಾರೆ. 75 ವರ್ಷಗಳಿಂದ ಇದೇ ನಡೆಯುತ್ತಿದೆ. ನಮಗೆ ಶಿಕ್ಷಕರನ್ನು ಕೊಡದಿರುವುದಕ್ಕೆ ಹಿಂದುಳಿದಿದ್ದೇವೆಯೇ ಹೊರತು ಮತ್ತೆ ಇನ್ನು ಯಾವುದೇ ಕಾರಣಕ್ಕಾಗಿ ಅಲ್ಲ. ನಮಗೂ ಸಂಖ್ಯೆ ಪ್ರಕಾರ ಶಿಕ್ಷಕರುಗಳನ್ನು ಕೊಡಿ. ನಾವೇನು ಮಧುಗಿರಿ, ತುಮಕೂರು, ಬೆಂಗಳೂರು ಗ್ರಾಮಾಂತರಕ್ಕಿಂತಲೂ ದಡ್ಡರೇನು ಇಲ್ಲ. ನಾನು ಇದನ್ನು ಒತ್ತು ಕೊಟ್ಟು ಹೇಳುತ್ತಿದ್ದೇನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಮಗೆ ಶಿಕ್ಷಕರುಗಳನ್ನು ಕಡಿಮೆ ಕೊಟ್ಟಿದ್ದಾರೆ. ಆ ಕಾರಣದಿಂದ ನಮ್ಮ ಸ್ಥಿತಿ ಈ ರೀತಿ ಇದೆ. ಸರ್ಕಾರ ಸರಿ ಮಾಡದಿದ್ದರೆ ಮತ್ತೆ ಇನ್ನು ಯಾರು ಸರಿ ಮಾಡಬೇಕು. ಅದಕ್ಕಾಗಿ ಆ ಹುದ್ದೆಗಳನ್ನು ವರ್ಗಾವಣೆ ಮಾಡಿ ಎಂದು ನಾನು ಕೇಳುತ್ತಿದ್ದೇನೆ.

**ಶ್ರೀ ಬಿ.ಸಿ.ನಾಗೇಶ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು):-** ಮಾನ್ಯ ಸಭಾಪತಿಯವರೇ,

(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಮಾನ್ಯ ಸಭಾಪತಿಯವರೇ, ಮಾನ್ಯ ಶಶೀಲ್ ಜಿ.ನಮೋಶಿಯವರು ಹೇಳಿದ ಹಾಗೆ pupil-teacher ratio ಕಲ್ಯಾಣ ಕರ್ನಾಟಕದ ಮೇಲೆ ಹೆಚ್ಚು ಕಡಿಮೆ ಆಗಿರುವಂಥದ್ದು ನಿಜ. Rationalisation ಆಗದಿರುವ ಕಾರಣಕ್ಕಾಗಿ ಅದು ಹಲವಾರು ವರ್ಷಗಳಿಂದ ಮಾಡುವುದಕ್ಕಾಗಿಲ್ಲ. ಮುಂದಿನ ದಿನಗಳಲ್ಲಿ rationalisation ಮಾಡಿ ಹಂತ ಹಂತವಾಗಿ ಅದನ್ನು ಸರಿ ಮಾಡುವ ಕೆಲಸ ಮಾಡುತ್ತೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಉ) ವಿಷಯ: ಮೈಸೂರು ನಗರದಲ್ಲಿ ಪದವಿ ಪೂರ್ವ ಮತ್ತು ಪದವಿ ತರಗತಿಗಳಲ್ಲಿ ಗ್ರಾಮೀಣ ಪ್ರದೇಶದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಅಗತ್ಯಕ್ಕನುಗುಣವಾಗಿ ಹಿಂದುಳಿದ ವರ್ಗದ ವಸತಿ ನಿಲಯಗಳ ಕೊರತೆಗಳಿರುವುದರಿಂದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೊಂದರೆಯಾಗುತ್ತಿರುವ ಕುರಿತು.**

--------

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮೈಸೂರು ನಗರದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಸಾಮಾನ್ಯ ಮತ್ತು ಪದವಿ ವಿದ್ಯಾರ್ಥಿಗಳಿಗಾಗಿ 17 ಹಾಸ್ಟೆಲ್ ಮತ್ತು ವೈದ್ಯಕೀಯ, ತಾಂತ್ರಿಕ, ವೃತ್ತಿಪರ ಸ್ನಾತಕೋತ್ತರ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ 13 ಹಾಸ್ಟೆಲ್‌ಗಳು. ಒಟ್ಟು 30 ಹಾಸ್ಟೆಲ್‌ಗಳಿವೆ. ಇವತ್ತು ಹೆಣ್ಣುಮಕ್ಕಳಿಗಂತೂ ತುಂಬಾ ತೊಂದರೆಯಾಗುತ್ತಿದೆ. 2021-22ನೇ ಸಾಲಿನಲ್ಲಿ 3890 ಅರ್ಜಿಗಳು ಬಂದಿವೆ. ಅದರಲ್ಲಿ ಕೇವಲ 1048 ಮಂದಿಗೆ ಮಾತ್ರ ಹಾಸ್ಟೆಲ್‌ನಲ್ಲಿ ಸ್ಥಳಾವಕಾಶ ಮಾಡಲಾಗಿದೆ. ಇವತ್ತು 2842 ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯವಿಲ್ಲ. ಇವತ್ತು ಮೈಸೂರು ನಗರ, ಚಾಮರಾಜ ನಗರ, ಕೊಡಗು, ಹಾಸನ, ಮಂಡ್ಯ, ಈ ಎಲ್ಲಾ ಜಿಲ್ಲೆಗಳ ಗ್ರಾಮಾಂತರ ಪ್ರದೇಶಗಳಿಂದ, ದೂರುದ ಊರುಗಳಿಂದ ಅವರು ಹೊಸ ಕೋರ್ಸ್‌ಗಳನ್ನು ಓದುವುದಕ್ಕೆ ಮಹಾರಾಣಿ ಕಾಲೇಜು, ಹೆಸರಾಂತ ಕಾಲೇಜುಗಳಿಗೆ entrance examination ಮುಖಾಂತರ ಪ್ರವೇಶವನ್ನು ಪಡೆಯುತ್ತಾರೆ. ಆದರೆ ಅವರು ಉಳಿದುಕೊಳ್ಳುವುದಕ್ಕೆ ಅವಕಾಶ ಇಲ್ಲ. ಈಗೇನು 'ವಿದ್ಯಾಸಿರಿ' ಎನ್ನುವ ಹೊಸ ಯೋಜನೆಯಲ್ಲಿ ವಿದ್ಯಾರ್ಥಿನಿಯರಿಗಂತೂ ಬಹಳ ಕಷ್ಟ. ಆ ಯೋಜನೆಯಲ್ಲಿ ಅವರು ರೂಮ್ ಮಾಡಿಕೊಂಡು ಅಲ್ಲೆಲ್ಲಾ ಇರುವುದಕ್ಕೆ ಆಗುವುದಿಲ್ಲ. ಪುರುಷರು ಇರಬಹುದು. ಆದರೆ ವಿದ್ಯಾರ್ಥಿನಿಯರಿಗೆ ಬಹಳ ತೊಂದರೆಯಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾ ಪಂಚಾಯತ್ ಮತ್ತು ಅಲ್ಲಿಯ ಹಿಂದುಳಿದ ವರ್ಗದ ಜಿಲ್ಲಾಧಿಕಾರಿಗಳು 2018-2019, 2019-2020, 2020-2021, ಈ ನಾಲ್ಕು ವರ್ಷಗಳಿಂದ ಕನಿಷ್ಠ 8 ಹೊಸ ಹಾಸ್ಟೆಲ್‌ಗಳು ಇಲ್ಲಿ ಬೇಕು. ಇಲ್ಲಿ ಅನಿವಾರ್ಯವಿದೆ, ಅಗತ್ಯವಿದೆ ಎಂದು ಬೇಡಿಕೆ ಸಲ್ಲಿಸುತ್ತಿದ್ದರೂ ಕೂಡ ಒಂದು ಹೊಸ ಹಾಸ್ಟೆಲ್‌ನ್ನು ತೆರೆಯುವುದಕ್ಕೆ ಆಗಲಿಲ್ಲ. ಇದರಿಂದ ಬಹಳಷ್ಟು ಹೆಣ್ಣುಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗಿದೆ. ದಯಮಾಡಿ ಮಾನ್ಯ ಸಚಿವರು ಏನಾದರೂ ಮಾಡಿ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಈ 8 ವಸತಿ ನಿಲಯಗಳನ್ನು ಅದರಲ್ಲೂ ವಿಶೇಷವಾಗಿ ಹೆಣ್ಣುಮಕ್ಕಳಿಗೋಸ್ಕರ ಮೈಸೂರು ನಗರದಲ್ಲಿ ತೆರೆಯಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಹೆಣ್ಣುಮಕ್ಕಳು ಬಹಳಷ್ಟು ತೊಂದರೆಯಲ್ಲಿದಾರೆ. ನಾವು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಬಹಳಷ್ಟು ಕೇಳಿಕೊಂಡರೂ ಕೂಡ ಇಬ್ಬರಿಗೂ ಅಡ್ಮಿಷನ್ ಕೊಡುವುದಕ್ಕಾಗುವುದಿಲ್ಲವೆಂದು ಜಿಲ್ಲಾಧಿಕಾರಿಗಳು ಹೇಳುತ್ತಾರೆ. ಸರ್, ಷರತ್ತುಗಳಿವೆ, overload ಇದೆ, ನಾವು ಎರಡು ಮಕ್ಕಳು ಹಾಕುವ ಕಡೆ ನಾಲ್ಕು ಮಕ್ಕಳನ್ನು ಹಾಕುತ್ತಿದ್ದೇವೆ, ಆದರೂ ಕೂಡ ನಾವು ಏನು ಮಾಡುವುದಕ್ಕಾಗುವುದಿಲ್ಲ. ಅನಿವಾರ್ಯವಾಗಿದೆ ಎಂದು ಬೇಡಿಕೆ ಪತ್ರಗಳನ್ನು ನಮಗೆ ಕೊಡುತ್ತಿದ್ದಾರೆ. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಬಹಳ ತೊಂದರೆಯಾಗಿದೆ. ಗ್ರಾಮೀಣ

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪ್ರದೇಶದ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ. ಮೈಸೂರು ನಗರಕ್ಕೆ ಈ ನಾಲ್ಕು ಜಿಲ್ಲೆಗಳಿಂದಲೂ ಬರತಕ್ಕಂಥ ವಿದ್ಯಾರ್ಥಿಗಳು ಸಿ.ಇ.ಟಿ. ಮೂಲಕ ಅವರಿಗೆ ಪ್ರವೇಶಾತಿ ಸಿಕ್ಕಿಬಿಡುತ್ತದೆ. ಬರತಕ್ಕಂಥ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಕೊಡುವುದಕ್ಕಾಗುತ್ತಿಲ್ಲ. ಇದನ್ನು ಅತ್ಯಂತ ಪ್ರಾಮುಖ್ಯ ಎಂದು ಪರಿಗಣಿಸಿ ಈ 8 ಹೊಸ ವಿದ್ಯಾರ್ಥಿ ನಿಲಯಗಳನ್ನು ಮುಂದಿನ ಶೈಕ್ಷಣಿಕ ವರ್ಷದಲ್ಲಾದರೂ ಪ್ರಾರಂಭಿಸುವುದಕ್ಕೆ ಸೂಕ್ತ ಅನುದಾನವನ್ನು ಒದಗಿಸಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ,

(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾನ್ಯ ಮರಿತಿಬ್ಬೇಗೌಡರು ಹೇಳಿರುವುದೆಲ್ಲಾ ನಾನು ಒಪ್ಪಿದ್ದೇನೆ. ಅದರಲ್ಲಿ ಯಾವ ಗೊಂದಲವೂ ಇಲ್ಲ. ಮೈಸೂರು ನಗರದಲ್ಲಿರುವಂತಹ 30 ಹಾಸ್ಟೆಲ್‌ಗಳ ಪೈಕಿ 3890 ಅರ್ಜಿಗಳು ಬಂದಿವೆ. 1048 ಅವಕಾಶ ಇದೆ. 2842 ಅರ್ಜಿಗಳಿಗೆ ಅವಕಾಶ ಸಿಕ್ಕಿಲ್ಲ ಎಂದು ಹೇಳಿದ್ದಾರೆ. ಅದನ್ನೆಲ್ಲಾ 'ವಿದ್ಯಾಸಿರಿ' ಯೋಜನೆಯಲ್ಲಿ ಅಳವಡಿಸಬೇಕು ಎಂದು ನಾವು ಯೋಚನೆ ಮಾಡಿದ್ದೆವು. ಆದರೆ ಮಾನ್ಯ ಮರಿತಿಬ್ಬೇಗೌಡರು ಏನು ಹೇಳುತ್ತಿದ್ದಾರೆಂದರೆ, ಹೆಣ್ಣುಮಕ್ಕಳಿಗೆ 'ವಿದ್ಯಾಸಿರಿ' ಯೋಜನೆಯಿಂದ ಅನುಕೂಲವಾಗುತ್ತಿಲ್ಲ. ಹಾಸ್ಟೆಲ್‌ನಲ್ಲಿ ಇದ್ದು ಓದಿದರೆ ಮಾತ್ರ ಅನುಕೂಲವಾಗುತ್ತದ್ದೆ ಎಂದು ಹೇಳುತ್ತಿದ್ದಾರೆ. ಕಳೆದ ಸಲ ಸುಮಾರು 5,000 ಸೀಟುಗಳನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನಪಟ್ಟು ಅದರಲ್ಲಿ ಯಶಸ್ವಿಯಾದೆವು. ಈಗ ಪುನಃ ಮತ್ತೊಂದು ಸುತ್ತೋಲೆಯನ್ನು ಕೊಟ್ಟು ಎಲ್ಲೆಲ್ಲಿ ಸ್ಥಳಾವಕಾಶ ಇದೆಯೋ ಅಲ್ಲಿ ಮತ್ತೆ ಶೇಕಡ 10 ರಷ್ಟು ಮೂಲಭೂತ ಸೌಕರ್ಯವನ್ನು ಒದಗಿಸುವುದಕ್ಕೆ ಆಗುತ್ತದೆಯೇ ಎಂದು ಯೋಚನೆ ಮಾಡುತ್ತಿದ್ದೇವೆ. ಅದು ಕೂಡ ಒಂದು ವಾರದಲ್ಲಿ ಸಿದ್ಧಪಡಿಸಿ ಕೊಡುತ್ತೇವೆ. ನಿನ್ನೆ ನಮ್ಮ ಎಲ್ಲಾ ಅಧಿಕಾರಿಗಳನ್ನು ಕರೆದು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಚರ್ಚೆ ಮಾಡಿದ್ದೇನೆ. ಇಡೀ ರಾಜ್ಯದಲ್ಲಿ 100 ರಿಂದ 150 ರಷ್ಟು ಹೊಸ ಹಾಸ್ಟೆಲ್‌ಗಳನ್ನು ಈ ವರ್ಷದಲ್ಲೇ ಪ್ರಾರಂಭಿಸಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಮೌಖಿಕ ಸೂಚನೆಯ ಮೇರೆಗೆ 30 ಜಿಲ್ಲೆಗಳ ಜಿಲ್ಲಾ ಕೇಂದ್ರದಲ್ಲಿ ಮತ್ತು ಪಟ್ಟಣ ಎಂದು ಗುರುತಿಸಬಹುದಾದ ತಾಲ್ಲೂಕು ಕೇಂದ್ರಗಳಲ್ಲಿ ಈಗಾಗಲೇ ನಮ್ಮ ಅಧಿಕಾರಿಗಳು ಗುರುತನ್ನು ಹಾಕಿರುತ್ತಾರೆ.

(ಮುಂದು)

**1325/23-12-2021/8-00/bkp-gr** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದು):-**

ಇನ್ನು ಒಂದು ವಾರದಲ್ಲಿ ಅದಕ್ಕೊಂದು ಸ್ವರೂಪವನ್ನು ಕೊಡುತ್ತೇವೆ. ಮತ್ತೆ ಮೈಸೂರಿನಲ್ಲಿ ೩ ಹಾಸ್ಟೆಲ್‌ಗಳು ಸಿದ್ಧವಾಗುತ್ತವೆ. ಜನವರಿ ತಿಂಗಳಿನಲ್ಲಿ ಪ್ರಥಮ ವಾರದಲ್ಲಿ ಬಿಟ್ಟುಕೊಡುತ್ತೇನೆಂದು ಈಗಲೂ ಸಹಿತ ಆ ನಿಯಮದ ಪ್ರಕಾರ ಬಿಟ್ಟುಕೊಡುತ್ತಾರೆ. ಅದರಲ್ಲಿಯೂ ಸಹಿತ ಹೆಚ್ಚುವರಿ ಆಗುವುದಕ್ಕೆ ಪ್ರಯತ್ನಪಡುತ್ತೇವೆ. ಇದನ್ನು ಸಂಪೂರ್ಣವಾಗಿ ನಾನು ಒಪ್ಪಿದ್ದೇನೆ ಮತ್ತು ಈ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆ. ಒಂದು ಸಲ ವಿದ್ಯಾಸಿರಿ ಯೋಜನೆಯಿಂದಾಗಿ ಗಂಡುಮಕ್ಕಳಿಗಾದರೂ ಸ್ವಲ್ಪ ಸಹಾಯವಾಗುತ್ತದೆ, ಹೆಣ್ಣುಮಕ್ಕಳಿಗೆ ಸ್ವಲ್ಪ ಕಷ್ಟವಾಗುತ್ತದೆ. ಅದನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ಮಾತನಾಡಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ನನ್ನ ನಿಯಮ 330ರ ವಿಚಾರಕ್ಕೆ ಸಂಬಂಧಪಟ್ಟಂತೆ ಮಂತ್ರಿಗಳಿಲ್ಲ.

**ಸಭಾಪತಿಯವರು:-** ಸಭಾನಾಯಕರು ಇದ್ದಾರೆ.

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ ದಯವಿಟ್ಟು ಈ ಕುರಿತ್ತು ತಮ್ಮಲ್ಲಿ ಕ್ಷಮೆ ಕೋರುತ್ತೇನೆ. ಇದು ಒಂದು ವಾರದಿಂದ ಬರುತ್ತಿದೆ. ಕೆಲವು ಸಮಯದಲ್ಲಿ ಮಂತ್ರಿಗಳು ಇದ್ದರು, ನಾನು request ಮಾಡಿದ್ದೆ, ಮಂತ್ರಿಗಳಿದ್ದಾರೆ ನಾನು ಮಾತನಾಡುತ್ತೇನೆಂದು request ಮಾಡಿದ್ದೆ, ತಾವು ಆಮೇಲೆ ಈ ವಿಷಯ ತೆಗೆದುಕೊಳ್ಳಿ ಎಂದು ಹೇಳಿದ್ದಿರಿ.

**(ಗೊಂದಲ)**

**ಸಭಾಪತಿಯವರು:-** ಏನು ಮಾಡಬೇಕೆಂದು ಹೇಳಿ.

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ ಕೋಲಾರ ಹಾಗೂ ಚಿಕ್ಕಬಳ್ಳಾಪುರದ ಜನರು ಬೆಂಗಳೂರಿನ ಮೂತ್ರ ಕುಡಿಯುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ಕೇಳಿದಂತಹ ಗಂಭೀರ ಪ್ರಶ್ನೆಗೆ ಉತ್ತರ ಹೇಳುತ್ತೇನೆ.

**ಡಾ: ವೈ.ಎ.ನಾರಾಯಣಸ್ವಾಮಿ:-** ಬೇಡ. ಉತ್ತರ ಬೇಕಾಗಿಲ್ಲ. ಪ್ರಶ್ನೆಗೆ ಪರಿಹಾರ ಬೇಕಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ನಾಳೆ ಮಂತ್ರಿಗಳಿಂದ ಉತ್ತರ ಕೊಡಿಸುತ್ತೇನೆ. ನಾಳೆ ಅವರೇ ಇರುವಾಗ ಇದರ ಬಗ್ಗೆ ತುಂಬಾ ಚರ್ಚೆ ಮಾಡೋಣ.

**ಸಭಾಪತಿಯವರು:-** ನಾಳೆಗೆ ಈ ವಿಷಯವನ್ನು ಮೊದಲಿಗೇ ತೆಗೆದುಕೊಳ್ಳೋಣ ಬಿಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ನಾರಾಯಣಸ್ವಾಮಿಯವರು ತುಂಬಾ ಉತ್ಸುಕರಾಗಿದ್ದಾರೆ. ಅವರಿಗೆ ಉತ್ತರ ಕೊಡಿಸುತ್ತೇನೆ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:** ಆಯಿತು. ನಾಳೆ ಮೊದಲಿಗೇ ಹಾಕಿಸುತ್ತೇನೆ. ಮಾನ್ಯ ಎನ್.ರವಿಕುಮಾರ್, ಮಾನ್ಯ ಪುಟ್ಟಣ್ಣ, ಮಾನ್ಯ ಎಸ್.ವ್ಹಿ.ಸಂಕನೂರು, ಮಾನ್ಯ ರುದ್ರಯ್ಯ ಎಸ್.ಗೌಡ, ಮಾನ್ಯ ಕೆ. ಪ್ರತಾಪ್ ಸಿಂಹ ನಾಯಕ್, ಡಾ: ತಳವಾರ್ ಸಾಬಣ್ಣ, ಮುನಿರಾಜುರವರು ಮಾತನಾಡುತ್ತಾರೆ. ಎಲ್ಲರ ಪರವಾಗಿ ನಿಮ್ಮಲ್ಲಿ ಯಾರಾದರೂ ಒಬ್ಬರು ಕೇಳಿಬಿಡಿ ಸಾಕು.

**ಊ) ವಿಷಯ:- ದೇವಸ್ಥಾನಗಳ ಅಭಿವೃದ್ಧಿಗಾಗಿ ದಾನದ ರೂಪದಲ್ಲಿ ಪಡೆಯಲಾಗುವ ಭೂಮಿಯನ್ನು ಅಕ್ರಮವಾಗಿ ಪರಭಾರೆ ಮಾಡುತ್ತಿರುವುದರಿಂದ ದೇವಸ್ಥಾನಗಳ ಪೂಜೆಗೆ ಬಹಳ ತೊಂದರೆಯಾಗುತ್ತಿದ್ದು, ದಾನವಾಗಿ ಪಡೆದ ದೇವಸ್ಥಾನಗಳ ಭೂಮಿಯನ್ನು ದೇವರ ಹೆಸರಿನಲ್ಲಿಯೇ ಖಾತೆ/ಪಹಣಿ ಮಾಡುವ ಕುರಿತು.**

\- - - - - - -

**ಶ್ರೀ ಎನ್.ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ದೇವಸ್ಥಾನದ ಅಭಿವೃದ್ಧಿಗಾಗಿ ದಾನದ ರೂಪದಲ್ಲಿ ಪಡೆಯುವ ಭೂಮಿಯನ್ನು ಅಕ್ರಮವಾಗಿ ಪರಾಭಾರೆ ಮಾಡುತ್ತಿರುವುದರಿಂದ ದೇವಸ್ಥಾನಗಳ ಪೂಜೆಗೆ ಬಹಳ ತೊಂದರೆಯಾಗುತ್ತಿದ್ದು, ದಾನವಾಗಿ ಪಡೆದ ದೇವಸ್ಥಾನಗಳ ಭೂಮಿಯನ್ನು ದೇವರ ಹೆಸರಿನಲ್ಲಿಯೇ ಖಾತೆ ಹಾಗೂ ಪಹಣಿ ಮಾಡುವ ಕುರಿತು ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಸಭಾಪತಿಯವರೆ, ಕರ್ನಾಟಕ ರಾಜ್ಯದಲ್ಲಿ ದೇವಸ್ಥಾನಗಳ ಜಮೀನನ್ನು ದೇವರುಗಳ ಹೆಸರು ಇಲ್ಲದೇ ಬೇರೆ ಬೇರೆ ಹೆಸರಿನಲ್ಲಿರುವಂತಹ ಉದಾಹರಣೆಗಳು ಸಾಕಷ್ಟು ಇವೆ. ಕೆಲವು ಕಡೆಗಳಲ್ಲಿ ಅರ್ಚಕರ ಹೆಸರಿನಲ್ಲಿರಬಹುದು, ಕೆಲವು ಕಡೆಗಳಲ್ಲಿ ಭಕ್ತರ ಹೆಸರಿನಲ್ಲಿರುಬಹುದು, ಕೆಲವು ಕಡೆಗಳಲ್ಲಿ ಟ್ರಸ್ಟಿಗಳ ಅಧ್ಯಕ್ಷರ ಹೆಸರಿನಲ್ಲಿರಬಹುದು, ಈ ರೀತಿ ಬೇರೆ ಬೇರೆ ತರಾವರಿಯ ಹೆಸರುಗಳಲ್ಲಿ ದೇವಸ್ಥಾನಗಳ ಜಮೀನು ಅನೇಕ ಬಾರಿ ಅವರುಗಳಿಗೆ ವೈಯಕ್ತಿಕ ಆಸ್ತಿಯಾಗಿ ಬಿಟ್ಟಿದೆ. ಅದಕ್ಕೆ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಉದಾಹರಣೆಗೆ ಹೇಳುತ್ತೇನೆ. ಬೆಂಗಳೂರಿನಲ್ಲಿರುವಂತಹ ಶ್ರೀ ರಂಗನಾಥಸ್ವಾಮಿ ದೇವಸ್ಥಾನದಲ್ಲಿ 1939ನೇ ಸಾಲಿನಲ್ಲಿ 1198 ಎಕರೆ ಜಮೀನು, ಒಂದು ಎಕರೆ ಅಥವಾ ಎರಡು ಎಕರೆ ಜಮೀನಲ್ಲ, 1198 ಎಕರೆ ಜಮೀನಿನಲ್ಲಿ ಈಗ ಉಳಿದ್ದಿರುವ ಜಮೀನು ಎಷ್ಟು ಎಂದರೆ 50 ಎಕರೆ ಮಾತ್ರ ಉಳಿದಿದೆ. ಅವರು ಏನು ಹೇಳಿದ್ದಾರೆ ಎಂದರೆ ಈ ಜಮೀನಿನಿಂದ ಏನು ಹಣ ಬರುತ್ತದೆ ಅಂದರೆ ಆದಾಯ ಏನು ಬರುತ್ತದೆಯೋ ಇದರಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಶಿಕ್ಷಣ ಕೊಡಬೇಕು, ಹಾಸ್ಟೆಲ್‌ಗಳನ್ನು ನಡೆಸಬೇಕೆಂದು deed ಇದೆ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡ ರವರು ಸಭಾಪೀಠವನ್ನು ಅಲಂಕರಿಸಿದರು)**

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಆದರೆ, ಈ ಜಮೀನು ಇವತ್ತಿಗೆ ಉಳಿದುಕೊಂಡಿರುವುದು ಮಾತ್ರ 50 ಎಕರೆಗಳು. ಉಳಿದಿರುವ ಜಮೀನನ್ನು ಯಾರು occupy ಮಾಡಿಕೊಂಡರು, ಯಾರ ಹೆಸರಿನಲ್ಲಿದೆ ಎನ್ನುವಂತಹದ್ದನ್ನು ಉದಾಹರಣೆಗೆ ಹೇಳುತ್ತಿದ್ದೇನೆ. ಇನ್ನೂ ಒಂದು ಹೇಳುತ್ತೇನೆ. ತಿಗಳರ ಪೇಟೆ, ಧರ್ಮರಾಯ ಸ್ವಾಮಿ ದೇವಸ್ಥಾನಕ್ಕೆ ಸೇರಿದ 15 ಎಕರೆ 12 ಗುಂಟೆ ಜಮೀನು ಸರ್ವೆ ನಂಬರ್ 79, ನೀಲಸಂದ್ರ ಗ್ರಾಮದಲ್ಲಿ ಒತ್ತುವರಿಯಾಗಿದೆ. ಇಲ್ಲಿರುವ ಎಲ್ಲಾ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಹಾಗೂ ಇತರೆ ಸೌಲಭ್ಯಗಳನ್ನು ನೀಡುವುದು ಬೇಸರದ ಸಂಗತಿಯಾಗಿದೆ. ಇವತ್ತು ಆ ಜಮೀನು ಆ ದೇವಸ್ಥಾನದ ಹೆಸರಿನಲ್ಲಿಲ್ಲ. ಇನ್ನೂ ಒಂದು ಹೇಳುತ್ತೇನೆ. ಬಳೇಪೇಟೆ, ಶ್ರೀ ಕಾಶಿವಿಶ್ವೇಶ್ವರ ಸ್ವಾಮಿ ದೇವಾಲಯಕ್ಕೆ ಸೇರಿದ 8 ಎಕರೆ 35 ಗುಂಟೆ ಜಮೀನು ಇವತ್ತು ಆ ದೇವಸ್ಥಾನದ ಹೆಸರಿನಲ್ಲಿಲ್ಲ. ಇನ್ನೂ ಯಾರದೋ ಹೆಸರಿನಲ್ಲಿದೆ. ರಾಜ್ಯದಲ್ಲಿ ಈ ರೀತಿಯ ನೂರಾರು ಪ್ರಕರಣಗಳಿವೆ. ಮತ್ತೆ ಸಾವಿರಾರು ಪ್ರಕರಣಗಳಿರಬಹುದು, ಅದಕ್ಕೆ ದೇವಸ್ಥಾನದ ಜಮೀನು ಏನಿದೆ ಅದು ಇವತ್ತು ಸಾವಿರಾರು ಕೋಟಿಗಟ್ಟಲೆ ಬಾಳುತ್ತದೆ, ಭವಿಷ್ಯ ಕರ್ನಾಟಕದ ಇವೆಲ್ಲಾ ಜಮೀನುಗಳನ್ನು ತೆಗೆದುಕೊಂಡು ಎಷ್ಟು ಆದಾಯವಾಗಬಹುದು ಎಂದರೆ ನನ್ನ ಪ್ರಕಾರ ಲಕ್ಷಾಂತರ ಕೋಟಿ ರೂಪಾಯಿಗಳ ಆದಾಯವಾಗಬಹುದು. ಈ ಜಮೀನಿನಿಂದ ಸಾರ್ವಜನಿಕರಿಗೆ, ಭಕ್ತಾದಿಗಳಿಗೆ, ಬಡವರಿಗೆ ಒಳ್ಳೆಯದು ಮಾಡಬೇಕೆಂದು ಆವತ್ತು ಬಹಳ ದೊಡ್ಡ ದೊಡ್ಡ ದಾನಿಗಳು ದೇವಸ್ಥಾನಕ್ಕೆ ಕೊಟ್ಟಿದ್ದರು, ಇವತ್ತು ಅದು ಬೇರೆ ಬೇರೆಯವರ ವೈಯಕ್ತಿಕ ಆಸ್ತಿಯಾಗಿದೆ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಉದಾಹರಣೆಗೆ ಮೊನ್ನೆ ಸುಪ್ರೀಂಕೋರ್ಟ್ judgment ಬಂದಿದೆ.

**ಸಭಾಪತಿಯವರು:-** ಈ ಬಗ್ಗೆ ಮೊದಲು ಸಚಿವರು ಮಾತನಾಡಲಿ, ಉತ್ತರ ಸಮಾಧಾನವಾಗಲಿಲ್ಲವೆಂದರೆ ನೀವೆಲ್ಲರೂ ಕೇಳುವಿರಂತೆ.

**ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್(ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಎನ್.ರವಿಕುಮಾರ್ ಮತ್ತು ಇನ್ನಿತರೆ ಶಾಸಕ ಸಹೋದರರು ಕೇಳಿರುವಂತಹ ಪ್ರಶ್ನೆ ನಿಜಕ್ಕೂ ಆ ರೀತಿಯಿದೆ. ರಾಜ ಮಹಾರಾಜರ ಕಾಲದಿಂದಲೂ ಕೂಡ ದೇವಸ್ಥಾನಗಳಿಗೆ ಅನೇಕ ಜಮೀನುಗಳನ್ನು ದಾನವಾಗಿ ಕೊಟ್ಟಿರುವುದನ್ನು ನಾವು ನೋಡುತ್ತೇವೆ. ಆದರೆ, ಅವರು ಹೇಳಿದ ರೀತಿಯಲ್ಲಿ ಅನೇಕ ಕಡೆಗಳಲ್ಲಿ ಅದು ದೇವರ ಹೆಸರಿನಲ್ಲಿಲ್ಲ, ಅರ್ಚಕರ ಹೆಸರಿನಲ್ಲಿವೆ. ಇನ್ನೊಂದು ಟ್ರಸ್ಟ್ ಹೆಸರಿನಲ್ಲಿದೆ. ಒತ್ತುವರಿ ಕೂಡ ಆಗಿರುವುದನ್ನು ನಾವು ನೋಡುತ್ತೇವೆ. ಆದರೆ, ಅದು ನನ್ನ ಗಮನಕ್ಕೆ ಬಂದಮೇಲೆ ಮೊನ್ನೆ ನವೆಂಬರ್-16ನೇ ತಾರೀಖು ನಾನು ಒಂದು ಸಭೆಯನ್ನು ಅಂದರೆ ಕರ್ನಾಟಕದ ನಮ್ಮ ಇಲಾಖೆಯ ಎಲ್ಲಾ EO ಗಳ ಒಂದು ಸಭೆಯನ್ನು ತೆಗೆದುಕೊಂಡು ಅದರಲ್ಲಿ ಬಹಳಷ್ಟು strict ಆಗಿ ನಾವು ಹೇಳಿದ್ದೇವೆ. ಈ ಒಂದು ಏನು ದೇವಾಲಯಗಳ ಜಮೀನುಗಳ ಬಾಬ್ತು ದೇವಾಲಯಗಳ ಹೆಸರಿನಲ್ಲಿವೆಯೋ ಅಥವಾ ಅರ್ಚಕರ ಹೆಸರಿನಲ್ಲಿವೆಯೋ ಅಥವಾ ಬೇರೆ ಟ್ರಸ್ಟ್‌ನ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೆಸರಿನಲ್ಲಿವೆಯೋ ಎಂದು ಇದರ ರಿಪೋರ್ಟ್‌ಅನ್ನು ನಮಗೆ ಕೊಡಬೇಕೆನ್ನುವಂತಹದ್ದು ಒಂದು. ಅದರ ಜೊತೆಗೆ 17ನೇ ತಾರೀಖು ನಾವು ಎಲ್ಲಾ ಜಿಲ್ಲಾಧಿಕಾರಿಗಳೊಂದಿಗೆ ಪತ್ರ ವ್ಯವಹಾರ ಮಾಡಿದ್ದೇವೆ. ಸುಮಾರು 227 ತಹಶೀಲ್ದಾರರುಗಳಿಗೆ, ಏಕೆಂದರೆ, 'C' Grade ಹಾಗೂ ಹಳ್ಳಿಗಳಲ್ಲಿರುವಂತಹ ದೇವಾಲಯಗಳು ಇವೆಲ್ಲಾ ತಹಶೀಲ್ದಾರರ ಕೆಳಗೆ ಬರುವುದರಿಂದ ಅವರ ಜೊತೆಗೂ ಕೂಡ ನಾವು ಪತ್ರ ವ್ಯವಹಾರ ಮಾಡಿ ಇದಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಮುಂದಿನ ಮೀಟಿಂಗ್‌ನೊಳಗಾಗಿ ನಮಗೆ ಕೊಡಬೇಕೆನ್ನುವಂತಹದ್ದು, ಅಂದರೆ ನಾವು ಡಿಸೆಂಬರ್ 31 last date ಕೊಟ್ಟಿದ್ದೆವು, ಅಷ್ಟರಲ್ಲಿ ಕೊಡಬೇಕೆನ್ನುವಂತಹದ್ದನ್ನೂ ಸಹಿತ ಈಗಾಗಲೇ ಹೇಳಿದ್ದೇವೆ. ಅದರಲ್ಲಿ ಸುಮಾರು 38 ಅಧಿಕಾರಿಗಳು ಈಗಾಗಲೇ ರಿಪೋರ್ಟ್‌ಅನ್ನು ಕೊಟ್ಟಿದ್ದಾರೆ. Assembly ಇರುವುದರಿಂದ ನಾನು ಅದನ್ನು ನೋಡುವುದಕ್ಕೆ ಆಗಿಲ್ಲ. ಆದರೆ, 38 ಅಧಿಕಾರಿಗಳು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಇನ್ನು ಉಳಿದಂತಹವರಿಗೂ ಕೂಡ ಉತ್ತರವನ್ನು ಬೇಗ ಕಳುಹಿಸಬೇಕೆನ್ನುವಂತಹದ್ದನ್ನು ಹೇಳಿದ್ದೇವೆ. ಅದರ ಜೊತೆಗೆ ನಮ್ಮ ADLR ಇರಬಹುದು ಅಥವಾ survey commissioner ಇರಬಹುದು ಮತ್ತು ಮಾನ್ಯ ಮುಖ್ಯಮಂತ್ರಿಗಳ ಬಳಿ ಕೂಡ ಇದರ ಬಗ್ಗೆ ನಾನು ಚರ್ಚೆ ಮಾಡಿದ್ದೇನೆ. ಅದರ ಜೊತೆಗೆ ನಮ್ಮ ಕಂದಾಯ ಸಚಿವರಾದಂತಹ ಮಾನ್ಯ ಆರ್.ಅಶೋಕರವರ ಬಳಿ ಕೂಡ ಇದರ ಬಗ್ಗೆ ಚರ್ಚೆ ಮಾಡಿದ್ದೇನೆ. ನಮ್ಮಲ್ಲಿ ಒಂದು ಸರ್ವೆ ಮಾಡುವಂತಹ ಒಬ್ಬರು surveyor ಇಲ್ಲದೇ ಇರುವಂತಹ ಕಾರಣಕ್ಕೆ ಅವರು ತಮ್ಮ ಇಲಾಖೆಯಿಂದ ನಮಗೆ help ಮಾಡುತ್ತೇನೆಂಬ ಭರವಸೆಯನ್ನು ಕೊಟ್ಟಿದ್ದಾರೆ. ಮೊದಲನೇ ಹಂತದಲ್ಲಿ ಸುಮಾರು 262 ದೇವಾಲಯಗಳ ಆಸ್ತಿಯ ಬಗ್ಗೆ ನಮಗೆ ಅಳತೆಯನ್ನು ಗುರುತು ಮಾಡಿ ಅದನ್ನು ಒತ್ತುವರಿ ಮಾಡಿರುವುದನ್ನೂ ಕೂಡ ಆದ್ಯತೆ ಮೇರೆಗೆ ಖುಲ್ಲಾಪಡಿಸುವಂತಹ ಕಾರ್ಯವನ್ನು ಈಗ ಮಾಡಿದ್ದೇವೆ. ಹಾಗಾಗಿ ಎಲ್ಲೆಲ್ಲಿ ಒತ್ತುವರಿಯಾಗಿದೆ ಆ ಒತ್ತುವರಿಯನ್ನು ತೆರವುಗೊಳಿಸುವಂತಹದ್ದು ಹಾಗೂ ಎಲ್ಲಿ ದೇವರ ಹೆಸರಿನಲ್ಲಿ ಅದು ಪಹಣಿಯಿಲ್ಲವೋ ಅಂತಹ ಕಡೆಗಳಲ್ಲಿ ದೇವರ ಹೆಸರಿಗೆ ಮಾಡಿಕೊಡುವಂತಹದ್ದು ಅದರ ಜೊತೆಗೆ ಬರತಕ್ಕಂತಹ ದಿನಗಳಲ್ಲಿ ಆ ಜಾಗದ ಒತ್ತುವರಿಯನ್ನು ತೆಗೆದು ಅಲ್ಲಿ compound ಅನ್ನು fencing ಅನ್ನು ಹಾಕಿ ಅಲ್ಲಿ ಮುಜರಾಯಿ ಇಲಾಖೆಯ ಬೋರ್ಡ್‌ಗಳೂ ಸಹಿತ ಆಗಬೇಕೆನ್ನುವಂತಹದ್ದರ ಬಗ್ಗೆಯೂ ಕೂಡ ಈಗ ಎರಡು ಮೀಟಿಂಗ್‌ಗಳನ್ನು ಮಾಡಿದ್ದೇವೆ, ಅದರ ರಿಪೋರ್ಟ್‌ಅನ್ನೂ ಸಹಿತ ಈಗ ತೆಗೆದುಕೊಳ್ಳುತ್ತಿದ್ದೇವೆ. 38 ಅಧಿಕಾರಿಗಳು ರಿಪೋರ್ಟ್‌ಅನ್ನೂ ಕೂಡ ಕೊಟ್ಟಿದ್ದಾರೆ.

**ವೈಸ್ ಛೇರ್ಮನ್:-** ಮಾನ್ಯ ಸಚಿವರೆ, ಒಂದು ಕೆಲಸ ಮಾಡಿ. ತಾವು ಈ ಅಧಿವೇಶನ ಮುಗಿದ ಮೇಲೆ ಕಂದಾಯ ಸಚಿವರದ್ದನ್ನೂ ಸೇರಿಸಿ ನಮ್ಮ ಮಾನ್ಯ ಎನ್. ರವಿಕುಮಾರ್, ಮಾನ್ಯ ಪುಟ್ಟಣ್ಣ, ಮಾನ್ಯ ಸಂಕನೂರು, ಮಾನ್ಯ ರುದ್ರೇಗೌಡರು, ಮಾನ್ಯ ಕೆ. ಪ್ರತಾಪ್ ಸಿಂಹ ನಾಯಕ್, ಡಾ: ತಳವಾರ್ ಸಾಬಣ್ಣನವರು ಹಾಗೂ ಮಾನ್ಯ ಮುನಿರಾಜುರವರನ್ನೂ ಸೇರಿಸಿ ಒಂದು ಸಭೆ ಮಾಡಿ. ಅವರ ಸಲಹೆ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪಡೆದು ಆ ಎಲ್ಲಾ ಸಲಹೆಗಳನ್ನು . . . .ಕೊಡುವುದಕ್ಕೆ ಪ್ರಯತ್ನ ಮಾಡಿ. ಇದು ಮಹತ್ವದ ವಿಚಾರವಾಗಿದೆ. ಹಾಗಾಗಿ ನೀವು ಆ ಕೆಲಸ ಮಾಡುವುದಾದರೆ ಅವರೆಲ್ಲರಿಗೂ ಸಮಾಧಾನವಾಗುತ್ತದೆ.

**ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್**:- ನಾನು ಮಾನ್ಯ ಎನ್. ರವಿಕುಮಾರ್ ರವರ ಹೆಸರನ್ನು ಮಾತ್ರ ಹೇಳಿದ್ದೆ. ಆದರೆ, ಈಗ ಇವರೆಲ್ಲರೂ ಕೂಡ ಕಳಕಳಿ ವ್ಯಕ್ತಪಡಿಸಿದ್ದಾರೆ. ಮಾನ್ಯ ಕಂದಾಯ ಸಚಿವರನ್ನು ಕರೆದುಕೊಂಡು ಆದಷ್ಟುಬೇಗ ಸಭೆಯನ್ನು ಮಾಡಿ ಇದಕ್ಕೆ ಅವರ ಸಲಹೆ-ಸೂಚನೆಗಳನ್ನು ತೆಗೆದುಕೊಂಡು ಮುಂದೆ ಕ್ರಮ ತೆಗೆದುಕೊಳ್ಳುತ್ತೇವೆ.

**ವೈಸ್ ಛೇರ್ಮನ್:-** ಶ್ರೀ ವೈ.ಎ.ನಾರಾಯಣಸ್ವಾಮಿಯವರು ಮಾತನಾಡಿ.

(ಗೊಂದಲ)

**ಶ್ರೀ ಸಿ.ಎಂ ಲಿಂಗಪ್ಪ:** ಮಾನ್ಯ ಸಭಾಪತಿಯವರೆ, ...

**ವೈಸ್ ಛೇರ್ಮನ್:-** ಮಾನ್ಯ ಲಿಂಗಪ್ಪನವರೆ, ಒಂದು ನಿಮಿಷ. ಮಾನ್ಯ ವೈ.ಎ.ನಾರಾಯಣಸ್ವಾಮಿಯವರದ್ದು ಪೆಂಡಿಂಗ್ ಇದೆ. ಮಾನ್ಯ ಸಭಾನಾಯಕರು ಉತ್ತರ ಕೊಡುವುದಾದರೆ ನೀವು ಪ್ರಸ್ತಾಪ ಮಾಡಬಹುದು.

(ಗೊಂದಲ)

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೆ, ...

**ವೈಸ್ ಛೇರ್ಮನ್:-**ನಿಮ್ಮ ಜೊತೆ ಸಭೆ ಮಾಡುತ್ತಾರೆ. ಈಗ 6-7 ಜನರಿದ್ದಾರೆ, ಅವರೆಲ್ಲರೂ ಕೈ ಎತ್ತಿದ್ದಾರೆ. ಆ ಕಾರಣಕ್ಕಾಗಿ ಅವರಿಗೆ ಸ್ಪಷ್ಟವಾಗಿ ಸೂಚನೆ ಕೊಡಲಾಗಿದೆ. ನಿಮ್ಮ ಕಂದಾಯ ಸಚಿವರೊಂದಿಗೆ ಸಭೆ ಮಾಡಿ ನಿಮ್ಮೆಲ್ಲರ ಸಲಹೆಗಳನ್ನು ತೆಗೆದುಕೊಂಡು ಅನುಷ್ಠಾನಕ್ಕೆ ತರುವಂತಹ ಪ್ರಯತ್ನವನ್ನು ಮಾಡುತ್ತಾರೆ. ಈಗ ಮಾನ್ಯ ನಾರಾಯಣಸ್ವಾಮಿಯವರು ಮಾತನಾಡುತ್ತಾರೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಖು) ವಿಷಯ:- ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಎತ್ತಿನ ಹೊಳೆ ಕುಡಿಯುವ ನೀರಿನ ಯೋಜನೆಗೆ ಹಣ ಬಿಡುಗಡೆಯಾಗಿದ್ದರೂ ಸಹ ಭೂಸ್ವಾಧೀನ ಪ್ರಕ್ರಿಯೆ ಹಾಗೂ ನೀರು ಶೇಖರಣ ಜಲಾಶಯಗಳ ಕಾಮಗಾರಿಗಳು ಪ್ರಾರಂಭವಾಗದೆ ಇರುವುದರಿಂದ ಎತ್ತಿನ ಹೊಳೆ ಯೋಜನೆ ಅನುಷ್ಠಾನದ ಕುರಿತು.**

\- - - - - - -

**ಡಾ: ವೈ.ಎ.ನಾರಾಯಣಸ್ವಾಮಿ** :ಮಾನ್ಯ ಸಭಾಪತಿಯವರೆ, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆಗೆ ....

**ವೈಸ್ ಛೇರ್ಮನ್:-** ಕಡಿಮೆ ಮಾತುಗಳಲ್ಲಿ ನೇರವಾಗಿ ಮಾತನಾಡಬೇಕು.

**ಡಾ: ವೈ.ಎ.ನಾರಾಯಣಸ್ವಾಮಿ**:- ಮಾನ್ಯ ಸಭಾಪತಿಯವರೆ, ಕುಡಿಯುವ ನೀರಿನ ಯೋಜನೆಗೆ ಹಣ ಬಿಡುಗಡೆ ಮಾಡಿ ಸ್ವಾಧೀನ ಮಾಡದೇ ಇರುವುದರಿಂದ ಈ ಯೋಜನೆಯಲ್ಲಿ ಜಲಾಶಯಗಳು ಪ್ರಾರಂಭವಾಗದೇ ಇರುವುದರಿಂದ ಯಾವಾಗ ಮುಗಿಯುತ್ತದೆ, ಇದರ ಕಥೆಯೇನು ಎಂದು ಕೇಳಿದ್ದೇವೆ. ನೇರವಾಗಿ ಇದರ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಭಾಪತಿಯವರೆ, ಇದು 2012ನೇ ಸಾಲಿನಲ್ಲಿ ರೂ.3900 ಕೋಟಿಗಳ ವೆಚ್ಚದಲ್ಲಿ ಈ ಯೋಜನೆ ಪ್ರಾರಂಭವಾಯಿತು. 2014ನೇ ಸಾಲಿನಲ್ಲಿ ಕೆಲಸ ಪ್ರಾರಂಭವಾಗುವುದಕ್ಕೆ ಮೊದಲೇ ರೂ.12,600 ಕೋಟಿಗಳಿಗೆ ಅದನ್ನು **jack up** ಮಾಡಿ tender ಕರೆಯಲಾಯಿತು.

(ಮುಂದು)

**(1326) 23.12.2021 08.10 ಎಸ್‌ವಿ-ಜಿಆರ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಡಾ:ವೈ.ಎ.ನಾರಾಯಣಸ್ವಾಮಿ (ಮುಂದು):-**

ಈ ಯೋಜನೆಯ ಹೆಸರೇನೆಂದರೆ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಜನರಿಗೆ ಕುಡಿಯುವ ನೀರಿನ ಯೋಜನೆ. ಅದರ preamble ಆ ರೀತಿಯಿದೆ. ಈ ಯೋಜನೆ ಪ್ರಾರಂಭವಾಗಿ ಹತ್ತು ವರ್ಷಗಳಾಗಿದೆ. ಇನ್ನೂ ಒಂದು ಹನಿ ನೀರು ಎಲ್ಲಿಗೂ ಬಂದಿರುವುದಿಲ್ಲ. Lift component ಮತ್ತು conveyance component ಬೈರಗೊಂಡ್ಲುವಿನಿಂದ feeder canals ಮುಖಾಂತರ ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಮಧುಗಿರಿ ಕಡೆಗೆ ನೀರು ಪೂರೈಕೆ ಮಾಡುವ ಯೋಜನೆ ಇದಾಗಿದೆ. ನಮ್ಮ ಜಿಲ್ಲೆಗೆ 4.7 ಟಿ.ಎಂ.ಸಿ. ನೀರನ್ನು ಕೊಡಲಾಗುವುದು ಎಂದು promise ಮಾಡಿ ಇದನ್ನು ಸಿದ್ಧಪಡಿಸಲಾಯಿತು. ಆದರೆ ನಾನು ಸರ್ಕಾರಕ್ಕೆ ಒಂದು ಮಾತನ್ನು ಕೇಳಲು ಬಯಸುತ್ತೇನೆ. ನಮ್ಮ ಜಿಲ್ಲೆಯ ಹೆಸರು ಹೇಳಿ ಸಕಲೇಶಪುರ, ಅರಸೀಕೆರೆ, ಚಿಕ್ಕನಾಯಕನಹಳ್ಳಿ, ತಿಪಟೂರು, ರಾಮನಗರ,

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಧುಗಿರಿ, ತುಮಕೂರು ಎಲ್ಲರಿಗೂ ನೀರು ಕೊಡಲು ಸರ್ಕಾರ ಹೊರಟಿದೆ. ನಮ್ಮ ಜಿಲ್ಲೆಗೆ ಯಾವಾಗ ನೀರು ಕೊಡುತ್ತದೆ? ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಜನರು ಬೆಂಗಳೂರಿನ ಕೊಳಚೆ ನೀರನ್ನು ಕುಡಿಯುತ್ತಿದ್ದಾರೆ. ಬೆಂಗಳೂರಿನ ಜನ ಸ್ನಾನ ಮಾಡಿ ಬಿಟ್ಟ ನೀರನ್ನು ಶೋಧನೆ ಮಾಡಿ ಕುಡಿಯುತ್ತಿದ್ದಾರೆ. ಏಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆಂದರೆ ಅಷ್ಟು ನೋವಾಗಿದೆ.

ನಾವು ಇಲ್ಲಿ ಉತ್ತರ ಕರ್ನಾಟಕದ ಬಗ್ಗೆ ಚರ್ಚೆಯನ್ನು ಮಾಡಿದ್ದೇವೆ. ಐದು ನದಿಗ್ಗಳು, ಆರು ಅಣೆಕಟ್ಟುಗಳು ಸುಮಾರು 800 ಟಿ.ಎಂ.ಸಿ. ನೀರು – ಕೇಳಲಿಕ್ಕೆ ನಮಗೆ ಖುಷಿಯಾಗುತ್ತದೆ. ಈ ಭಾಗದ ಶಾಸಕರ ಒಗ್ಗಟ್ಟನ್ನು ನೋಡಿದರೆ ಬಹಳ ಸಂತೋಷವಾಗುತ್ತದೆ. ಈ ಭಾಗದ ಜನರಿಗೆ ನ್ಯಾಯ ದೊರಕಿಸಿಕೊಡಬೇಕೆಂಬುದರ ಜೊತೆಯಲ್ಲಿ ನಾವೂ ಸೇರಿಕೊಂಡಿದ್ದೇವೆ. ಆದರೆ tailenders ಆದ ನಮ್ಮ ಬಗ್ಗೆ ಸರ್ಕಾರಕ್ಕೆ ಕರುಣೆ ಬೇಡವೇ? ನಮ್ಮ ಭಾಗದ ಜನರಲ್ಲಿ ವಿಶ್ವಾಸ ತುಂಬುವಂತಹ ಕೆಲಸವನ್ನು ಸರ್ಕಾರ ಮಾಡುವುದು ಬೇಡವೇ? 9-10 ವರ್ಷಗಳು ಕಳೆದಿವೆ, ಇನ್ನೂ ಬೈರಗೊಂಡ್ಲು ಜಲಾಶಯದಲ್ಲಿ ಅಡಿಗಲ್ಲನ್ನು ಹಾಕಿರುವುದಿಲ್ಲ. 2018ನೇ ಇಸವಿಯಲ್ಲಿ ರೂ.5000 ಕೋಟಿಗೆ ಟೆಂಡರ್ ಅನ್ನು ಕರೆಯಲಾಗುತ್ತದೆ. Take off ಮಾಡಿರುವುದಿಲ್ಲ. ಭೂಮಿಪೂಜೆ ಮಾಡಿರುವುದಿಲ್ಲ. ಭೂ ಸ್ವಾಧೀನ ಎನ್ನುವ ಪದವನ್ನು ಮುಂದೆ ಇಟ್ಟುಕೊಂಡು ಕೊರಟಗೆರೆ ಮತ್ತು ದೊಡ್ಡಬಳ್ಳಾಪುರ ರೈತರ ಮಧ್ಯೆ ಭಿನ್ನಾಭಿಪ್ರಾಯವಿದೆ ಎಂದು ಹೇಳಿ ಒಂದು ರೂಪಾಯಿ ಬಿಡುಗಡೆ ಮಾಡದೆ ಜಲಾಶಯ ಕಟ್ಟದೆ ಇದ್ದರೆ ನಮಗೆ ನೀರು ಬರುತ್ತದೆಯೇ? ನಮ್ಮ ಗತಿಯೇನು? ನಮ್ಮ ನೋವನ್ನು ಕೇಳುವವರು ಯಾರು? ನಾನು ಈ ವಿಷಯವನ್ನು ಮಾನ್ಯ ನೀರಾವರಿ ಸಚಿವರಿದ್ದಾಗಲೇ ಪ್ರಸ್ತಾಪ ಮಾಡಬೇಕೆಂದು ಆಸೆ ಪಟ್ಟಿದ್ದೆನು. ಆದರೆ ಅವರು ಕಾರಣಾಂತರಗಳಿಂದ ಎದ್ದು ಹೋಗಿದ್ದಾರೆ. ಮಾನ್ಯ ಸಭಾನಾಯಕರಾದರೂ ನಮಗೆ ಈ ಪ್ರಶ್ನೆಗೆ ಉತ್ತರ ಕೊಡಬೇಕೆಂದು ಕೇಳುತ್ತಿದ್ದೇನೆ. ಏಕೆಂದರೆ ಸಭಾನಾಯಕರ ಜಿಲ್ಲೆಯಲ್ಲಿ ವಾರಾಹಿ ಯೋಜನೆ ಪ್ರಾರಂಭವಾಗಿ 35 ವರ್ಷಗಳಿಗೆ ಮುಗಿಯಿತು. ಈ ಭಾಗದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ 1, 2, 3ನೇ ಹಂತಗಳು 58 ವರ್ಷಗಳು ಕಳೆದರೂ ಇನ್ನೂ ಮುಗಿಯಲಿಲ್ಲ. ಕೋಲಾರ-ಚಿಕ್ಕಬಳ್ಳಾಪುರ ಭಾಗದ ಎತ್ತಿನಹೊಳೆ ಯೋಜನೆ ಪೂರ್ಣಗೊಳ್ಳಲು ಇನ್ನೆಷ್ಟು ದಶಕಗಳು ಕಳೆಯಬೇಕೋ ಗೊತ್ತಿಲ್ಲ. ನನಗೆ ಏನೂ ಅರ್ಥವಾಗುತ್ತಿಲ್ಲ. ತಾವು ದಯಮಾಡಿ ನಮ್ಮ ರಕ್ಷಣೆಗೆ ಬರಬೇಕು.

ಮಾನ್ಯ ಮುಖ್ಯಮಂತ್ರಿಯವರಿಗೆ, ಮಾನ್ಯ ಜಲಸಂಪನ್ಮೂಲ ಸಚಿವರಿಗೆ ಸಭೆಯನ್ನು ಕರೆಯುವಂತೆ ಫೆಬ್ರುವರಿ 2020ರಲ್ಲಿ ಪತ್ರವನ್ನು ಬರೆದಿದ್ದೆನು. ದಿನಾಂಕ 08.12.2020ರಲ್ಲಿ ಮತ್ತೊಂದು ಪತ್ರವನ್ನು ಬರೆದಿದ್ದರೂ ಸಭೆಯನ್ನು ಮಾಡಲಿಲ್ಲ. ಬೆಂಗಳೂರು ಜಿಲ್ಲೆಗೆ ಹತ್ತಿರವಾಗಿದ್ದೇವೆ ಎಂದು ಯಾಕೆ ನಮ್ಮ ಮೇಲೆ ಈ ರೀತಿಯ ಗದಾಪ್ರಹಾರ ಎಂದು ನನಗೆ ಅರ್ಥವಾಗುತ್ತಿಲ್ಲ. ಯಾವುದೇ ಸರ್ಕಾರವಿರಲಿ, ನಾನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸರ್ಕಾರದ ಭಾಗವಾಗಿದ್ದರೂ ಆ ಭಾಗದ ಧ್ವನಿಯಾಗಿ ನಮ್ಮ ಜನ ಪಡುತ್ತಿರುವ ಕಷ್ಟವನ್ನು ನೋಡಿ ನನಗೆ ಸಹಿಸಿಕೊಳ್ಳಲು ಆಗುತ್ತಿಲ್ಲ. ಅನಿವಾರ್ಯವಾಗಿ ನಾನು ಪ್ರಸ್ತಾಪ ಮಾಡಬೇಕಾಗಿದೆ.

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ. ಸಭಾನಾಯಕರು ಉತ್ತರವನ್ನು ಕೊಡಲಿ. ನಂತರ ತಾವು clarification ಕೇಳಬಹುದು.

**ಡಾ:ತೇಜಸ್ವಿನಿ ಗೌಡ:-** ಮಾನ್ಯ ನಾರಾಯಣಸ್ವಾಮಿಯವರು ಎತ್ತಿರುವ ವಿಚಾರಗಳಿಗೆ ನಮ್ಮ ಧ್ವನಿಯನ್ನೂ ಸೇರಿಸುತ್ತೇವೆ. ಸರ್ಕಾರ ಶೀಘ್ರವಾಗಿ ಇದಕ್ಕೆ ಪರಿಹಾರ ಕೊಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)(ಜಲಸಂಪನ್ಮೂಲ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾನ್ಯ ಸಭಾಪತಿಯವರೇ, ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ಈ ವಿಚಾರವನ್ನು ಬಹಳ ವರ್ಷಗಳಿಂದಲೂ ಪ್ರಸ್ತಾಪ ಮಾಡುತ್ತಿದ್ದಾರೆ. ಅಲ್ಲಿರುವ ಕುಡಿಯುವ ನೀರಿನ ಸಮಸ್ಯೆಗಳು, ಕುಡಿಯುವ ನೀರಿನಲ್ಲಿರುವಂತಹ ಖನಿಜಾಂಶಗಳಿಂದಾಗಿ ಆರೋಗ್ಯದ ಮೇಲಾಗುವ ಪರಿಣಾಮಗಳು ಎಲ್ಲಕ್ಕಿಂತಲೂ ಹೆಚ್ಚಾಗಿ ಬಹಳ ದಿನಗಳ ಹೋರಾಟ ಫಲಪ್ರದವಾಗಿ ಒಂದು ಹಂತಕ್ಕೆ ಬಂದು, ಮಾನ್ಯ ಜಲಸಂಪನ್ಮೂಲ ಸಚಿವರು ಮಾತನಾಡುತ್ತಾ ಎತ್ತಿನ ಹೊಳೆ ಯೋಜನೆಯ ಪ್ರಥಮ ಹಂತ ಮುಗಿಯುತ್ತದೆ ಎಂದು ಹೇಳಿದರು. ಆದರೆ ಅದು ಕೋಲಾರದವರೆಗೆ ಹೋಗುವುದಿಲ್ಲ ಎನ್ನುವುದು ಸತ್ಯ. ಈ ಹಿನ್ನೆಲೆಯಲ್ಲಿ ಅವರಿಗೆ ವಿವರವಾದ ಉತ್ತರವನ್ನು ಒದಗಿಸಲಾಗಿದೆ.

ಹಾಸನ, ಚಿಕ್ಕಮಗಳೂರು, ತುಮಕೂರು, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳಲ್ಲಿ 24.01 ಟಿ.ಎಂ.ಸಿ. ನೀರನ್ನು ಬಳಸಿಕೊಂಡು ಸುರಕ್ಷಿತ ಕುಡಿಯುವ ನೀರಿನ ಯೋಜನೆ ಮಾಡುವುದಕ್ಕೋಸ್ಕರ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಯಿತು. ಆರಂಭದಲ್ಲಿ ರೂ.12,912 ಕೋಟಿ ಮೊತ್ತದ ಪರಿಷ್ಕೃತ ಯೋಜನೆಗೆ ಪುನಃ ಆಡಳಿತಾತ್ಮಕ ಅನುಮೋದನೆಯನ್ನು ಸರ್ಕಾರ ನೀಡಿದೆ. ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯನ್ನು ಎರಡು ಹಂತದಲ್ಲಿ ಕೈಗೆತ್ತಿಕೊಳ್ಳಲಾಗುತ್ತದೆ. ಸದರಿ ಯೋಜನೆಯ ವಿವರಗಳನ್ನು ಸರ್ಕಾರದ ಪರವಾಗಿ ಮಾನ್ಯ ಸದಸ್ಯರಿಗೆ ನೀಡಿದ್ದೇವೆ. ಒಟ್ಟು ಸುಮಾರು 3716 ಕೋಟಿ ರೂಪಾಯಿ ಮೊತ್ತದಲ್ಲಿ ಐದು ಪ್ಯಾಕೇಜ್‌ಗಳಲ್ಲಿ ಮಾರ್ಚ್ 2014ರಲ್ಲಿ ಕಾಮಗಾರಿಯನ್ನು ಆರಂಭ ಮಾಡಲಾಗಿದ್ದು, ಅರಣ್ಯ ಭೂಮಿಗೆ ಸಂಬಂಧಿಸಿದಂತೆ ಬಂದಂತಹ ಸಮಸ್ಯೆಗಳನ್ನು ಯಾವ ರೀತಿಯಲ್ಲಿ ಪರಿಹರಿಸಲಾಗಿದೆ ಎಂಬುದನ್ನು ವಿವರಿಸಿದ್ದೇವೆ. ಅಕ್ಟೋಬರ್ 2021 ರವರೆಗೆ ಸುಮಾರು 3411.72 ಕೋಟಿ ರೂಪಾಯಿ ವೆಚ್ಚ ಮಾಡಿ ಹಣವನ್ನು ಬಿಡುಗಡೆ ಮಾಡಲಾಗಿದೆ. ಎತ್ತಿನ ಹೊಳೆ ಯೋಜನೆಯ ಸಮಗ್ರ ಕುಡಿಯುವ ನೀರಿನ ಯೋಜನೆಯ ಎರಡನೆಯ ಹಂತದ ಕಾಮಗಾರಿಯಲ್ಲಿ 360 ಕಿ.ಮೀ.ಉದ್ದದ ಗುರುತ್ವ ಕಾಲುವೆ ಮತ್ತು ಬೈರಗೊಂಡ್ಲು ಜಲಾಶಯದ ಕಾಮಗಾರಿ ಇವೆಲ್ಲವೂ ಅತ್ಯಂತ ತ್ವರಿತಗತಿಯಲ್ಲಿ ನಡೆಯಬೇಕು ಎನ್ನುವುದಕ್ಕೋಸ್ಕರ ಶೀಘ್ರವಾಗಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಯೋಜನೆ ಮತ್ತು ಯೋಚನೆಯನ್ನು ಮಾಡಿದ್ದೇವು.

ಮಾನ್ಯ ಸಭಾಪತಿಯವರೇ, ನಾನು ಇಲ್ಲಿ ಒಂದು ಮಾತನ್ನು ಸ್ಪಷ್ಟ ಪಡಿಸಬೇಕು. ಏನೇ ವಿವರಗಳನ್ನು ಕೊಟ್ಟರೂ, ಈ ಕಾರ್ಯಕ್ರಮವನ್ನು ಬಹುಬೇಗ ಆಶಾದಾಯಕವಾಗಿ ಮುಗಿಸಬೇಕಾದರೆ ಜಲಸಂಪನ್ಮೂಲ ಮಂತ್ರಿಗಳೊಡನೆ ನಾವು ಮಾತನಾಡಬೇಕಾದ ಅವಶ್ಯಕತೆಯಿದೆ. ಈ ಸದನ ಮುಗಿದ ಒಂದು ವಾರ ಅಥವಾ ಹತ್ತು ದಿನಗಳೊಳಗಾಗಿ ಮಾನ್ಯ ವೈ.ಎ.ನಾರಾಯಣಸ್ವಾಮಿಯವರನ್ನು ಮತ್ತು ಆಸಕ್ತರನ್ನು ಕರೆದು, ಮಾನ್ಯ ಜಲಸಂಪನ್ಮೂಲ ಸಚಿವರ ಸಮಕ್ಷಮದಲ್ಲಿ ಸಮಗ್ರವಾದಂತಹ ಒಂದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚರ್ಚೆಯನ್ನು ಮಾಡಿ ಈ ಸಮಸ್ಯೆಗೆ ಬಹುಬೇಗ ಪರಿಹಾರವನ್ನು ಕಂಡುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಆ ಭಾಗದ ಸದಸ್ಯರೆಲ್ಲರನ್ನೂ ಕರೆಯಿರಿ. ಮಾನ್ಯ ನಸೀರ್ ಅಹಮದ್ ಅವರೇ, ತಾವು ಮಾತನಾಡಿ.

**ಶ್ರೀ ನಸೀರ್ ಅಹಮದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾನಾಯಕರೇ, ಈ ವಿಷಯದಲ್ಲಿ ಕೇವಲ ಜಲಸಂಪನ್ಮೂಲ ಸಚಿವರು ಮಾತ್ರ ಸಾಲುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರೂ ಸಹ ಇರಬೇಕು. ಈಗ ಈ ವಿಷಯವು ಸುಮಾರು ಮೂರು ವರ್ಷಗಳಿಂದ ನಡೆಯುತ್ತಿದೆ. ಕೊರಟಗೆರೆ, ದೊಡ್ಡಬಳ್ಳಾಪುರ ಎಂಬ ಹೆಸರಿನಲ್ಲಿ ಒಂದು ತೀರ್ಮಾನಕ್ಕೆ ಬರದೆ, ಕೊರಟಗೆರೆ ದರದಲ್ಲಿ ಏಳು ಲಕ್ಷ ರೂಪಾಯಿ ಇದೆ, ಇಲ್ಲಿ ಮೂವತ್ತು ಲಕ್ಷ ರೂಪಾಯಿ ಇದೆ ಎಂದು ಮಾತನಾಡುತ್ತಾರೆ. ಅದಕ್ಕೆ ಪರಿಹಾರವೇನು? ಈಗಾಗಲೇ ಮೂರು ವರ್ಷಗಳಾಗಿದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಭೆ ಆಗಬೇಕು ಎಂದು ನಾನು ಒತ್ತಾಯಿಸುತ್ತೇನೆ.

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇಡೀ ಯೋಜನೆಗೆ ಬೇಕಾಗಿರುವಂತಹ ಭೂಮಿಯಲ್ಲಿ ಕೇವಲ 13 ಹೆಕ್ಟೇರ್ ಮಾತ್ರ ಅರಣ್ಯ ಭೂಮಿ. ಇದು ಅತ್ಯಂತ ಸರಳವಾದ ಯೋಜನೆ.

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ಅದನ್ನೆಲ್ಲಾ ಮುಖ್ಯಮಂತ್ರಿಯವರು ಮತ್ತು ನೀರಾವರಿ ಸಚಿವರೊಂದಿಗಿನ ಸಭೆಯಲ್ಲಿ ಹೇಳಿ.

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಮುಖ್ಯಮಂತ್ರಿಯವರು ಸಭೆ ಮಾಡಬೇಕೆಂದು ನನ್ನದೂ ಆಗ್ರಹ ಇದೆ.

**ಸಭಾಪತಿಯವರು:-** ಸಭಾನಾಯಕರು ಅದಕ್ಕೆ ಒಪ್ಪಿದ್ದಾರೆ.

**ಡಾ: ವೈ.ಎ.ನಾರಾಯಣಸ್ವಾಮಿ:-** ಆದರೆ ಮಾನ್ಯ ನಸೀರ್ ಅಹಮದ್ ಅವರು ಹೇಳಿದಂತೆ 2018ರಿಂದ ಭೂಸ್ವಾಧೀನದ ಬಗ್ಗೆ ಇರುವ ಗೊಂದಲವನ್ನು ಪರಿಹಾರ ಮಾಡಲಿಲ್ಲವಲ್ಲ. ಮೂರು ವರ್ಷ ಬೇಕೆ? ಕಾಂಗ್ರೆಸ್ ಸರ್ಕಾರವಿತ್ತು, ಸಮ್ಮಿಶ್ರ ಸರ್ಕಾರ ಇತ್ತು, ಈಗ ಬಿಜೆಪಿ ಸರ್ಕಾರವಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಈ ಗಂಭೀರತೆಯನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಪರಿಹಾರ ಮಾಡುವುದಕ್ಕೆ ಪ್ರಯತ್ನಿಸಬೇಕು.

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸರ್ಕಾರದಲ್ಲಿ ಹಣವಿದೆ. ಆದರೆ ನಮ್ಮ ಜಿಲ್ಲೆಗಳ ಬಗ್ಗೆ ಏಕೆ ಅಸಡ್ಡೆ? 100 ಕೋಟಿ ರೂಪಾಯಿ ಹೆಚ್ಚಾದರೆ ಆಗಲಿ. ಮಾನ್ಯ ಇಟ್ಟಗಿಯವರು ಮಾತನಾಡುತ್ತಾ ಹೇಳಿದರು. ಯಾರೋ ಗುತ್ತಿಗೆದಾರ ಮರುಂ ಎನ್ನುವವರು ಐಟಂ ಬರೆದು 6.95 ಲಕ್ಷ ಕ್ಯುಬಿಕ್ ಮೀಟರ್‌ನ 500 ಕೋಟಿ ರೂಪಾಯಿಗಳನ್ನು ಕೆಲಸ ಮಾಡದೆ ಹಣ ಡ್ರಾ ಮಾಡಿದ್ದಾರೆ. ಅಂತಹವರಿಗೆಲ್ಲಾ ಸರ್ಕಾರ ಹಣ ಕೊಡುವುದಕ್ಕೆ ಸಿದ್ಧವಾಗಿರುತ್ತದೆ. ಆದರೆ ಕೋಲಾರ ಜಿಲ್ಲೆಯ ಜನಕ್ಕಾಗಿ ಭೂಸ್ವಾಧೀನ ಪ್ರಕ್ರಿಯೆಗೆ 100 ಕೋಟಿ ಹೆಚ್ಚುವರಿಯಾಗಿ ನೀಡಲು ಸಾಧ್ಯವಿಲ್ಲವೇ? ಏನು ಅನ್ಯಾಯ ಇದು? ನಮ್ಮ ಜಿಲ್ಲೆಯ ಜನರು ತೆರಿಗೆಯನ್ನು ಕಟ್ಟುತ್ತಿಲ್ಲವೇ? ನಾವು ಈ ರಾಜ್ಯದ ಭಾಗವಲ್ಲವೇ? ನಮ್ಮ ಜಿಲ್ಲೆಗಳಿಗೆ ಭಾರಿ ಅನ್ಯಾಯವಾಗಿದೆ. ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಜಲಸಂಪನ್ಮೂಲ ಸಚಿವರು, ಮಾನ್ಯ ಸಭಾನಾಯಕರು ಒಂದು ವಾರದಲ್ಲಿ ಸಭೆಯನ್ನು ಕರೆಯಬೇಕು. ಅಂದಿನ ಸಭೆಯಲ್ಲಿ ಭೂ ಸ್ವಾಧೀನ ಪ್ರಕ್ರಿಯೆಯನ್ನು ಇತ್ಯರ್ಥ ಮಾಡಲೇಬೇಕು ಎನ್ನುವಂತಹ ಆಗ್ರಹವನ್ನು ಸರ್ಕಾರಕ್ಕೆ ಮಾಡುತ್ತಿದ್ದೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ನಾರಾಯಣಸ್ವಾಮಿಯವರೇ, ತಾವು ಕೆಲವೊಂದು ವಿಷಯಗಳನ್ನು ಸದನದ ಮುಂದೆ ಇಡಲಿಲ್ಲ. ಏಕೆಂದರೆ ಎತ್ತಿನ ಹೊಳೆ ತಿರುವು ಯೋಜನೆಯಲ್ಲಿ 24.1 ಟಿ.ಎಂ.ಸಿ. ನೀರು ದೊರೆಯುತ್ತದೆ. ಅದು 261 ಕಿ.ಮೀ. open canal ನಲ್ಲಿ ಬರುತ್ತದೆ. ಬೈರಗೊಂಡ್ಲು ಜಲಾಶಯದಲ್ಲಿ 10 ಟಿ.ಎಂ.ಸಿ. ನೀರು ಸಂಗ್ರಹಣೆ ಮಾಡಲಾಗುವುದು. ಈ ಯೋಜನೆಯು ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಕುಡಿಯುವ ನೀರಿನ ಸಲುವಾಗಿಯೇ ಆಗಿರುವಂತಹ ಯೋಜನೆ. ದಾರಿ ಮಧ್ಯೆಯಲ್ಲಿ ಬರುವಂತಹ ಕೆಲವು ತಾಲ್ಲೂಕುಗಳಿಗೆ ಮಾತ್ರ ಇದರಿಂದ ನೀರು ಲಭಿಸುವುದು.

ಮೊಟ್ಟ ಮೊದಲನೆಯದಾಗಿ 10 ಟಿ.ಎಂ.ಸಿ. ನೀರು ಸಂಗ್ರಹಣೆ ಮಾಡುವಂಥದ್ದನ್ನು ದೇವರಾಯನದುರ್ಗ ಅರಣ್ಯ ಪ್ರದೇಶದಲ್ಲಿ ಮಾಡುವುದರಿಂದ ಪರಿಸರ ತೊಂದರೆಯಾಗುತ್ತದೆ ಎಂದು ಬೈರಗೊಂಡ್ಲುವಿನಲ್ಲಿ 10 ಟಿ.ಎಂ.ಸಿ. ನೀರಿಗಾಗಿ ಜಲಾಶಯ ಮಾಡಲಾಯಿತು. ತದನಂತರ ದೊಡ್ಡಬಳ್ಳಾಪುರ ಕೊರಟಗೆರೆಯಲ್ಲಿರುವಂತಹ ಜಮೀನಿನಲ್ಲಿ ಕೊಡತಕ್ಕಂತಹ ಪರಿಹಾರಕ್ಕೆ ವ್ಯತ್ಯಾಸವಿದೆ ಎಂದು ಹೇಳಿ ಅದನ್ನು 5 ಟಿ.ಎಂ.ಸಿ. ಗೆ ಇಳಿಸಲಾಯಿತು.

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(1327) 8:20 23.12.2021 ಕೆಜಿ ಎಂಡಿ (ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ಮುಂದು):-**

ಈಗ ಕೊರಟಗೆರೆಯವರು ಒಪ್ಪುವುದಿಲ್ಲವೆಂದು ಆ ಸ್ಥಳವನ್ನು ಬಿಟ್ಟು, ದೊಡ್ಡಬಳ್ಳಾಪುರದ ಬಳಿ ಇರುವ ಲಕ್ಕನಹಳ್ಳಿಯ ಬಳಿ 2.6 ಟಿ.ಎಂ.ಸಿ ಜಲಾಶಯವನ್ನು ಮಾಡುತ್ತಿದ್ದಾರೆ.

**ವೈಸ್ ಛೇರ್ಮನ್:-** ತಿಪ್ಪೇಸ್ವಾಮಿಯವರೇ, ಈಗ ಸಾಕು ಬಿಡಿ. ಅದನ್ನು ಸಭೆ ಕರೆದಾಗ ಹೇಳಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಈ ವಿಷಯವನ್ನು ಅವರು ಸದನಕ್ಕೆ ಹೇಳಬೇಕಾಗಿತ್ತು. ಅದಕ್ಕೆ ಟೆಂಡರ್ ಸಹ ಕರೆದಿದ್ದಾರೆ.

**(ಗೊಂದಲ)**

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದು ಭೈರಗೊಂಡನಹಳ್ಳಿಯಿಂದ shift ಆಗಿ ಬೇರೆ ಕಡೆ ಜಲಾಶಯ ಮಾಡುತ್ತಿರುವುದು official ಆಗಿ ಯಾರಿಗೂ ಗೊತ್ತಿಲ್ಲ. ಅದಕ್ಕೆ ಇದರ ಬಗ್ಗೆ ಒಂದು ಸಭೆಯನ್ನು ಕರೆಯಿರಿ.

**(ಗೊಂದಲ)**

**ವೈಸ್ ಛೇರ್ಮನ್:-** ವೈ.ಎ.ನಾರಾಯಣಸ್ವಾಮಿಯವರೇ, ಅವರು ಮಾತನಾಡಲಿ. ತಾವು ಕುಳಿತುಕೊಳ್ಳಿ. ತಿಪ್ಪೇಸ್ವಾಮಿಯವರೇ, ತಾವು ಬೇಗ ಮಾತನಾಡಿ ಮುಗಿಸಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಇದರಲ್ಲಿ technical ಅಂಶ ಇದೆ. 2.6 ಟಿ.ಎಂ.ಸಿ ನೀರು ಸಂಗ್ರಹಣೆ ಮಾಡುವಂತಹ ಜಲಾಶಯವನ್ನು ಇಟ್ಟುಕೊಂಡು ಯಾವ ರೀತಿಯಲ್ಲಿ 10 ಟಿ.ಎಂ.ಸಿ ನೀರನ್ನು ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಿಗೆ ಕೊಡುತ್ತಾರೆ? ಇದನ್ನು approve ಮಾಡಿದವರು ಯಾರು? ಇದಕ್ಕೆ ಟೆಂಡರ್‌ನ್ನು ಏಕೆ ಕರೆದಿದ್ದಾರೆ? ಇದಕ್ಕೆ ಈಗಾಗಲೇ administrative sanction ಸಿಕ್ಕಿದೆ. ದಯಮಾಡಿ. ಈ ಮಾಹಿತಿಯನ್ನು ಸದನಕ್ಕೆ ಕೊಡಿ.

**ವೇಸ್ ಛೇರ್ಮನ್:-** ಆಯಿತು. ತೇಜಸ್ವಿನಿ ಗೌಡರವರೇ, ತಾವು ಒಂದು ನಿಮಿಷದಲ್ಲಿ ನೇರವಾಗಿ ಮಾತನಾಡಿ ಮುಗಿಸಿ.

**ಡಾ: ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಇವತ್ತು ಬೆಳಗ್ಗೆ ಮಾನ್ಯ ಸಚಿವರು ಕೊರಟಗೆರೆ ಭಾಗದ ಮತ್ತು ದೊಡ್ಡಬಳ್ಳಾಪುರ ಭಾಗದ ರೈತರ ಭೂಮಿಗಳಿಗೆ ಆಗಾಧವಾದ ವ್ಯತ್ಯಾಸ ಇರುವುದರಿಂದ,

ಇದು ಪರಿಹಾರ. ಅದೊಂದು ಸಮಸ್ಯೆಯಾಗಿದೆ ಎಂದು ಹೇಳಿದ್ದಾರೆ. ದೊಡ್ಡಬಳ್ಳಾಪುರದಲ್ಲಿ ಹೆಚ್ಚಾಗಿ ನೇಕಾರಿಕೆಯನ್ನು ಅವಲಂಬಿಸಿದ್ದಾರೆ. ಆ ಭಾಗದಲ್ಲಿ ಗುಡ್ಡಗಾಡುಗಳು ಇವೆ. ಹಾಗಾಗಿ, ಅಲ್ಲಿ ಕೃಷಿ ಭೂಮಿ ಬಹಳ ಕಡಿಮೆ ಇದೆ. ಅವರು ಭೂಮಿಯನ್ನು ಕಳೆದುಕೊಳ್ಳುತ್ತಾರೆ. ವಿಧಿ ಇಲ್ಲ. ಲೋಕ ಕಲ್ಯಾಣಕ್ಕಾಗಿ ಭೂಮಿಯನ್ನು ಕೊಡಲೇಬೇಕು. ಬೇರೆ ದಾರಿ ಇಲ್ಲ. ಅದಕ್ಕೆ ಅವರು ಬದಕು ಕಟ್ಟಿಕೊಳ್ಳುವುದಕ್ಕಾಗಿ ಆ ಭಾಗದ ರೈತರಿಗೆ ಸೂಕ್ತವಾದ ಪರಿಹಾರವನ್ನು ಕೊಡಲೇಬೇಕಾಗುತ್ತದೆ. ಅದಕ್ಕೆ ವಸ್ತುನಿಷ್ಠ ಅಧ್ಯಯನದ ಮೇಲೆ ಅವರಿಗೆ ಪರಿಹಾರವನ್ನು ಒದಗಿಸಬೇಕು. ಇದಕ್ಕೆ 12 ಸಾವಿರ ಕೋಟಿ ರೂಪಾಯಿಗಳು ಆಗಿದೆ. ಈ ಯೋಜನೆ ಬೇಗ ಆಗದಿದ್ದರೆ, ಇದರಿಂದ ರಾಜ್ಯದ ಖಜಾನೆಗೆ ದೊಡ್ಡ challenge ಆಗುತ್ತದೆ. ಅದು ನನ್ನ ತವರು ಮನೆ. ನನಗೆ ಜನ್ಮ ಕೊಟ್ಟ ಊರು. ಅಲ್ಲಿ ಬೋರ್‌ಬೋಲ್‌ಗಳ ಅಳ ಸುಮಾರು 1600 ಅಡಿಗಳಿಗೆ ಹೋಗಿದೆ. ಇದನ್ನು ತಾವು ದಯವಿಟ್ಟು, ಅರ್ಥ ಮಾಡಿಕೊಳ್ಳಬೇಕು. ಅಲ್ಲಿನ ಜನರಿಗೆ ಮಳೆ ಬಿಟ್ಟರೆ, ಬೇರೆ ಆಧಾರ ಇಲ್ಲ. ಅಲ್ಲಿನ ರೈತರು ರೇಷ್ಮೆ, ಹೈನುಗಾರಿಕೆ ಮತ್ತು ತರಕಾರಿಗಳನ್ನು ಬೆಳೆಯುವುದನ್ನು ಬಿಟ್ಟರೆ ಬೇರೆ ಯಾವುದೇ ಬೆಳೆಗಳನ್ನು ಬೆಳೆಯುತ್ತಿಲ್ಲ. ಇದರ ನಡುವೆಯೂ ಸಹ ಅಲ್ಲಿನ ರೈತರು ಬಹಳ ಕಷ್ಟಪಡುತ್ತಿದ್ದಾರೆ. ಆದ್ದರಿಂದ, ತಾವು ದಯಮಾಡಿ ಇದರ ರಕ್ಷಣೆಗೆ ಬರಬೇಕು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇದು ಕೊರಟಗೆರೆ ಮತ್ತು ದೊಡ್ಡಬಳ್ಳಾಪುರದ guidance value ನಲ್ಲಿ ಬಹಳಷ್ಟು ವ್ಯತ್ಯಾಸ ಇದೆ. ಈ ವ್ಯತ್ಯಾಸವನ್ನು ಸರಿ ಮಾಡುವಂತಹ ಜವಾಬ್ದಾರಿ ಸರ್ಕಾರದ್ದು ಅಲ್ಲವೇ; ಇದನ್ನು ಪ್ರತಿವರ್ಷ ಪರಿಷ್ಕರಣೆ ಮಾಡುತ್ತಾರೆ. ಅಂದಾಜು 10% ಹೆಚ್ಚಿಗೆ ಆಗುತ್ತದೆ. ಈಗ ಕೊರಟಗೆರೆಯಲ್ಲಿ ಹೆಚ್ಚಿಗೆ ಇದೆ, ದೊಡ್ಡಬಳ್ಳಾಪುರದದಲ್ಲಿ ಕಡಿಮೆ ಇದೆ ಎಂದು ಮಾನ್ಯ ಜಲ ಸಂಪನ್ಮೂಲ ಸಚಿವರು ಹೇಳಿದ್ದಾರೆ. ಅದನ್ನು Cabinet Sub- Committee ಯಲ್ಲಿ ಚರ್ಚೆ ಮಾಡಿ compensation issue settle ಮಾಡಬೇಕು. ಅದನ್ನು ಬಿಟ್ಟು ನೀರಿನ quantity ಅನ್ನು ಕಡಿಮೆ ಮಾಡಿದರೆ ಹೇಗೆ? ಇದು ಕುಡಿಯುವ ನೀರಿನ ಯೋಜನೆ. ಕೋಲಾರ ಜಿಲ್ಲೆಯಲ್ಲಿ ಬೋರ್‌ವೆಲ್ ಸುಮಾರು 1000 ರಿಂದ 2000 ಅಡಿಗಳಿಗೆ ಹೋದಾಗ ಮಾತ್ರ ನೀರು ಸಿಗುವಂತಹ ಪರಿಸ್ಥಿತಿ ಇದೆ. ಇದು ಸಣ್ಣ ವಿಷಯ. ಇದೇ ರೀತಿ ನಮ್ಮಲ್ಲಿ ಆಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆ 3ನೇ ಹಂತದಲ್ಲಿ ವಿಜಯಪುರ ಜಿಲ್ಲೆ, ಬಬಲೇಶ್ವರ ತಾಲ್ಲೂಕಿನಲ್ಲಿರುವ ಜಮೀನುಗಳಿಗೆ guidance value 1.50 ಲಕ್ಷ ರೂಪಾಯಿಗಳಿದೆ. ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನಲ್ಲಿ guidance value 6 ಲಕ್ಷ ರೂಪಾಯಿಗಳು ಇದೆ. ಇಲ್ಲಿ ವ್ಯಾತ್ಯಸ ಇದೆ. ಬಬಲೇಶ್ವರ ತಾಲ್ಲೂಕಿನ 14 ಹಳ್ಳಿಗಳ valuation ಅನ್ನು ಸರಿಮಾಡುವುದಕ್ಕೆ, ಪರೀಷ್ಕರಣೆ ಮಾಡುವುದಕ್ಕೆ ಸರ್ಕಾರ ಕ್ರಮವನ್ನು ಕೈಗೊಳ್ಳಬೇಕಲ್ಲವೇ? ಅದೇರೀತಿ ಕೊರಟಗೆರೆ ಮತ್ತು ದೊಡ್ಡಬಳ್ಳಾಪುರದ guidance value ವ್ಯತ್ಯಾಸವನ್ನು ಅನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸರಿಮಾಡುವುದು ದೊಡ್ಡ ಸಮಸ್ಯೆ ಅಲ್ಲ. ಸರ್ಕಾರ ಇದನ್ನು ಸರಿಮಾಡಬೇಕೆಲ್ಲವೇ? ಇಲ್ಲವೆಂದರೆ, ಏಕರೂಪದ compensation ಅನ್ನು ಕೊಡುವುದಕ್ಕೆ ಕ್ರಮವನ್ನು ಕೈಗೊಳ್ಳಬೇಕಲ್ಲವೇ?

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆ ಸಂದರ್ಭದಲ್ಲಿ ಮಾನ್ಯ ಜಿ.ಪರಮೇಶ್ವರ್‌ರವರು ಉಪ ಮುಖ್ಯಮಂತ್ರಿ ಹಾಗೂ ಕೊರಟಗೆರೆ ಕ್ಷೇತ್ರದ ಶಾಸಕರಾಗಿದ್ದರು. ಅವರೇ Cabinet Sub-Committee ಗೆ ಅಧ್ಯಕ್ಷರಾಗಿದ್ದರು. ಅವತ್ತು ಅವರು ಈ ಸಮಸ್ಯೆಯನ್ನು solve ಮಾಡಲ್ಲಿಲ್ಲ.

**ವೈಸ್ ಛೇರ್ಮನ್:-** ನಾರಾಯಣಸ್ವಾಮಿಯವರೇ, ಅದು ಆಯಿತು ಬಿಡಿ. ಈಗ ತಾವು ಮಾಡಿವಿರಂತೆ ಬಿಡಿ.

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ಆ ಪಕ್ಷ, ಈ ಪಕ್ಷ ಎಂದು ಹೇಳುತ್ತಿಲ್ಲ. ದಯವಿಟ್ಟು, ತಾವು ನಮ್ಮ ನೋವವನ್ನು ಕೇಳಿ.

**ವೈಸ್ ಛೇರ್ಮನ್:-** ನಾರಾಯಣಸ್ವಾಮಿಯವರೇ, ಆಯಿತು. ತಾವು ಮಾತನಾಡುವುದಕ್ಕೆ ಯಾರ ಅನುಮತಿ ತೆಗೆದುಕೊಂಡಿದ್ದೀರಿ?

**(ಗೊಂದಲ)**

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಜಿ.ಪರಮೇಶ್ವರ್‌ರವರು ಇದ್ದಾಗಲೂ ಸಹ ಇದನ್ನು solve ಮಾಡಲಿಲ್ಲ.

**ವೈಸ್ ಛೇರ್ಮನ್:-** ವಿರೋಧ ಪಕ್ಷದ ನಾಯಕರೇ, ತಾವು ಮಾತನಾಡಿ ಮುಗಿಸಿ. ಅವರು yield ಆಗಿಲ್ಲ. ಇಲ್ಲಿ ಅವರಿಗೆ ಅನುಮತಿಯೂ ಸಹ ನೀಡಿಲ್ಲ. ಇದು ಎಂತಹ ಮಾತು? ತಾವು ಮಾತನಾಡಿ ಮುಗಿಸಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದನ್ನು ಬಗೆಹರಿಸಬೇಕಲ್ಲವೇ?

**(ಗೊಂದಲ)**

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೇ,.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ವೈಸ್ ಛೇರ್ಮನ್:-** ನಿಮಗೆ ಅನುಮತಿ ಕೊಟ್ಟಿಲ್ಲ. I am not allowing to you. ಗೋವಿಂದರಾಜುರವರೇ, ಸಾಕು ಬಿಡಿ. ಈಗಲೇ ಟೈಮ್ ಆಗಿದೆ. 8.30 ಕ್ಕೆ ಆದರೂ ಸಹ ಸಭೆಯನ್ನು ಮುಗಿಸೋಣ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಟೈಮ್ ಎಷ್ಟದರೂ ಆಗಲಿ. ಇದು ಬಹಳ ಜಲ್ವಂತ ಸಮಸ್ಯೆ ಇದೆ.

**ವೈಸ್ ಛೇರ್ಮನ್:-** ವಿರೋಧ ಪಕ್ಷದ ನಾಯಕರೇ, ತಾವೀಗ message ಕೊಟ್ಟಿದೀರಿ. ಇದರ ಗಂಭೀರತೆಯ ಅರಿವನ್ನು ಸಭಾನಾಯಕರಿಗೆ ಮಾಡಿಕೊಟ್ಟಿದೀರಿ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, Land valuation ಹೆಚ್ಚು ಕಡಿಮೆ ಆಗುತ್ತದೆ ಎನ್ನುವ ಸಲುವಾಗಿ ಈ ಯೋಜನೆ ತಡವಾಗುತ್ತದೆ ಎಂದರೆ, ಇದಕ್ಕಿಂತ ದರುಂತ ಬೇರೆ ಇಲ್ಲ.

**ವೈಸ್ ಛೇರ್ಮನ್:-** ಸಭಾನಾಯಕರೇ, ಈ ಸಭೆಗೆ ವಿರೋಧ ಪಕ್ಷದ ನಾಯಕರನ್ನು ಕರೆಯಿರಿ. ಗೋವಿಂದರಾಜುರವರೇ, ತಾವೀಗ ನೇರವಾಗಿ ಹೇಳಿಬಿಡಿ.

**ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ದೊಡ್ಡಬಳ್ಳಾಪುರ ಭಾಗದಲ್ಲಿ land valuation ವ್ಯತ್ಯಾಸವಿದೆ ಎಂಬ ಕುಂಟು ನೆಪವನ್ನು ಹೇಳಿಕೊಂಡು ಮುಂದಕ್ಕೆ ತಳ್ಳುತ್ತಿದ್ದಾರೆ. ಆದರೆ, ಬಹಳ ವ್ಯತ್ಯಾಸವಿಲ್ಲ. ಕೊರಟಗೆರೆಯಲ್ಲಿ 5 ಲಕ್ಷ ರೂಪಾಯಿಗಳು ಇದ್ದರೆ, ದೊಡ್ಡಬಳ್ಳಾಪುರದಲಿ 8 ಲಕ್ಷ ರೂಪಾಯಿಗಳು ಇದೆ. ಒಟ್ಟಾರೆ ಜಮೀನನ್ನು ಇವರು ಸ್ವಾಧೀನ ಪಡಿಸಿಕೊಂಡರೆ, ಆಗುವಂತಹ ವ್ಯತ್ಯಾಸ ಸುಮಾರು 319 ಕೋಟಿ ರೂಪಾಯಿಗಳು ಮಾತ್ರ. ಇದು ಹೀಗೆ ಮುಂದುವರೆದರೆ, guidance value ಪ್ರತಿವರ್ಷ ಪರೀಷ್ಕರಣೆ ಆಗುತ್ತಾ ಹೋಗುತ್ತದೆ, ಮತ್ತೇ value ಹೆಚ್ಚಿಗೆ ಆಗುತ್ತಾ ಹೋಗುತ್ತದೆ. ಅವತ್ತು ಸಹ ಕುಂಟು ನೆಪವನ್ನು ಹೇಳಿಕೊಂಡು ಯೋಜನೆಯನ್ನು ಮುಂದಕ್ಕೆ ಹಾಕುತ್ತಾ ಹೋದರೆ, ಈ ಯೋಜನೆಗೆ ಹಾಕಿರುವಂತಹ ಬಂಡವಾಳ ಹಾಳಾಗುತ್ತದೆ. ಅಲ್ಲದೇ, ಕಳೆದ 10 ವರ್ಷಗಳಿಂದ ಈ ಯೋಜನೆಗೆ ಭೂಮಿಯಲ್ಲಿ ಹಾಕಿರುವಂತಹ ಪೈಪ್‌ಗಳು ತುಕ್ಕು ತಿಂದು ಹಾಳಾಗಿ ಹೋಗುತ್ತವೆ. ನಾವು ನೀರು ಬರುತ್ತದೆ ಎಂದು ನಮ್ಮ ಜಿಲ್ಲೆಯ ಕೊನೆಯ ಭಾಗದಲ್ಲಿ ಕಾಯುತ್ತಿರುತ್ತೇವೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ವೈಸ್ ಛೇರ್ಮನ್:-** ಗೋವಿಂದರಾಜುರವರೇ, ಸಭಾನಾಯಕರು ಮಾತನಾಡಿದ ನಂತರ ನಿಮಗೆ ಏನಾದರೂ ಅನುಮಾನ ಇದ್ದರೆ, ಕೇಳಿ.

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 2.5 ಟಿ.ಎಂ.ಸಿ ನೀರು ಬಂದರೆ, ಅದು ಒಂದು ತಾಲ್ಲೂಕಿಗೂ ಸಹ ಸಾಕಾಗುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ, ಇದು ಬಹಳ ದೊಡ್ಡ ಅನ್ಯಾಯ. ನಾನು ಇದನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದೆ, one time measure ಎಂದು ಏನಾದರೂ ಮಾಡಿ ಮಾನ್ಯ ಜಲಸಂಪನ್ಮೂಲ ಸಚಿವರನ್ನು ಕೇಳಿಕೊಂಡಿದ್ದೆ. ಆ ಸಂದರ್ಭದಲ್ಲಿ ಮಾನ್ಯ ಸಚಿವರು ಈ ವಿಚಾರದಲ್ಲಿ ಏನಾದರೊಂದು ವ್ಯವಸ್ಥೆಯನ್ನು ಶೀಘ್ರವಾಗಿ ಮಾಡುತ್ತೇವೆಂದು ಹೇಳಿದ್ದರು. ಕೋಲಾರ , ಚಿಕ್ಕಬಳ್ಳಾಪುರ ಜಿಲ್ಲೆಗಳ ಜೊತೆಗೆ ಕೊರಟಗೆರೆ ಮತ್ತು ಮಧುಗಿರಿಯೂ ಸಹ ಈ ನೀರಿನ ಮೇಲೆ ಅವಲಂಬಿತವಾಗಿದೆ 10 ಟಿ.ಎಂ.ಸಿ ನೀರನ್ನು ಕೊಟ್ಟರೆ ಮಾತ್ರ ಏನಾದರೂ ಪ್ರಯೋಜನವಾಗುತ್ತದೆ. ಇಲ್ಲವೆಂದರೆ, ಖಂಡಿತವಾಗಿಯೂ ಸಹ ದೊಡ್ಡ ಅನ್ಯಾಯವಾಗುತ್ತದೆ.

**ವೈಸ್ ಛೇರ್ಮನ್:-** ಚಿದನಂದ್ ಗೌಡರವರೇ, ಧನ್ಯವಾದಗಳು. ಸಭಾನಾಯಕರೇ, ತಾವು ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸಾಕಲ್ಲವೇ;

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದಿಲ್ಲ. ಇದಕ್ಕೆ ನಮ್ಮ ಸಹಮತ ಇದೆ. ವೈ.ಎ.ನಾರಾಯಣಸ್ವಾಮಿಯವರೇ, walk out ಮಾಡಿಬಿಡಿ. ಇದಕ್ಕೆ ಸರಿಯಾಗಿ ಉತ್ತರ ಸಿಗುತ್ತಿಲ್ಲ.

(**ಗೊಂದಲ)**

**ಡಾ: ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, walk out ಆಗುವುದಿಲ್ಲ, check out ಆಗುತ್ತದೆ.

**(ಗೊಂದಲ)**

**ವೈಸ್ ಛೇರ್ಮನ್:-** ತೇಜಸ್ವಿನಿಗೌಡರವರೇ ಮತ್ತು ಗೋವಿಂದರಾಜುರವರೇ, ತಾವುಗಳು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇದರಲ್ಲಿ ಸರ್ಕಾರದ ನಿಲುವು ಬಹಳ ಸ್ಪಷ್ಟವಾಗಿ ಇದೆ. ಇದು ರಾಜಕೀಯಕ್ಕೆ ಸೀಮಿತವಾದುದಲ್ಲ. ಇದು ಕುಡಿಯುವ ನೀರಿನ ಯೋಜನೆ. ಶ್ರೀ ಸದಾನಂದ ಗೌಡರವರು ಈ ಯೋಜನೆಗೆ ಮಂಜೂರಾತಿ ಕೊಟ್ಟರು. ಮಾನ್ಯ ಸಿದ್ದರಾಮಯ್ಯನವರು ಈ ಯೋಜನೆಗೆ ಶೀಲಾನ್ಯಾಸ ಮಾಡಿದರು. ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು ಈ ಯೋಜನೆಯನ್ನು ಚುರುಕು ಮಾಡಬೇಕೆಂದು ಬಡಿದಾಡಿದರು. ಆದರೆ, ಈ ಯೋಜನೆಯನ್ನು ನಿರ್ಧಿಷ್ಟ ಸಮಯದಲ್ಲಿ ಪೂರ್ಣಗೊಳಿಸುವುದಕ್ಕೆ ಆಗಲಿಲ್ಲ. ಇದಕ್ಕೆ ಬೇರೆ ಬೇರೆ ಕಾರಣಗಳು ಇದ್ದವು. ಭೂ-ಸ್ವಾಧೀನದ ಪ್ರಕ್ರಿಯೆ, ಅರಣ್ಯ ಪ್ರದೇಶಕ್ಕೆ ಸೇರಿದಂತೆ ತಿರುವಳಿ, ಹಸಿರು ನ್ಯಾಯಾಧೀಕರಣದಲ್ಲಿರುವ ದಾವೆಗಳು ಸೇರಿದಂತೆ ಹಲವಾರು ಎಡರು-ತೊಡರುಗಳು ಬಂದಿದ್ದು, ಹೌದು. ಈ ಎಲ್ಲವನ್ನು ಪರಿಹಾರ ಮಾಡಿ ಕೋಲಾರ ಜಿಲ್ಲೆಯ ಜನರಿಗೆ ಕುಡಿಯುವ ನೀರು ಕೊಡಲು ನಮ್ಮ ಸರ್ಕಾರ ಬದ್ಧವಿದೆ ಎಂದು ತಮ್ಮ ಮೂಲಕ ಹೇಳುತ್ತೇನೆ. ಇನ್ನೊಂದು ವಾರ ಅಥವಾ 10 ದಿವಸಗಳಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಮತ್ತು ಆಸಕ್ತ ಸದಸ್ಯರನ್ನು ಕರೆದು ಮಾನ್ಯ ಜಲ ಸಂಪನ್ಮೂಲ ಸಚಿವರ ಜೊತೆಯಲ್ಲಿ ಸಮಗ್ರವಾಗಿ ಚರ್ಚೆ ಮಾಡಿ ಈ ಸಮಸ್ಯೆಯನ್ನು ಬಗೆಹರಿಸುವಂತಹ ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇವೆ.

**ವೈಸ್ ಛೇರ್ಮನ್:-** ಸಭಾನಾಯಕರೇ, ವಂದನೆಗಳು. ಆ ಸಭೆಗೆ ಎರಡು ಮನೆಯ ಸಂಬಂಧಪಟ್ಟ ಶಾಸಕರನ್ನು ಕರೆಯಿರಿ.

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು.

**ಎ) ವಿಷಯ: ರಾಮನಗರ ತಾಲ್ಲೂಕಿನಲ್ಲಿ ಭೂ ಮಂಜೂರಾತಿ ಸಮಿತಿ ರಚನೆಗೊಂಡಾಗಿನಿಂದಲೂ ಒಂದು ಬಾರಿಯು ಸಭೆ ಸೇರದೆ ಇರುವುದರಿಂದ 2004ನೇ ಸಾಲಿನಿಂದಲೂ ಅರ್ಜಿಗಳು ವಿಲೇವಾರಿಯಾಗದೆ ಬಾಕಿ ಉಳಿದಿರುವುದಲ್ಲದೆ ಭೂ ಮಂಜೂರಾತಿ ಸಮಿತಿಯಿಂದ ಮಂಜೂರಾಗಿರುವ ಗೋಮಾಳ ಜಮೀನುಗಳಿಗೆ ಸಾಗುವಳಿ ಪತ್ರ ಸಹ ನೀಡದಿರುವುದರಿಂದ ತೀವ್ರ ತೊಂದರೆಯಾಗುತ್ತಿರುವ ಕುರಿತು.**

\- - - - - -

**ಶ್ರೀ ಸಿ.ಎಂ.ಲಿಂಗಪ್ಪ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಪಟ್ಟ ಸಚಿವರು ಸದನದಲ್ಲಿ ಇಲ್ಲದಿದ್ದರೂ ಸಹ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ ಅದಕ್ಕೆ ಧನ್ಯವಾದಗಳು. ನನ್ನ ನಾಲ್ಕನೇ ವರ್ಷದ ಅವಧಿಗೆ ಇದು ನನ್ನ ಮೊದಲನೇ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಮನ ಸೆಳೆಯುವ ಸೂಚನೆ. ಇದರ ಬಗ್ಗೆ ಮಾನ್ಯ ಸಭಾಪತಿಯವರು ಹೆಚ್ಚಿನ ಆಸ್ತಕಿ ತೆಗೆದುಕೊಂಡು ಇದು ಸರ್ಕಾರದ ಕಾರ್ಯಕ್ರಮವಾಗಿದೆ ಎಂದು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ರಾಮನಗರದಲ್ಲಿ ಭೂ ಮಂಜೂರಾತಿ ಸಮಿತಿ ರಚನೆಯಾಗಿದೆ. ಆ ಸಮಿತಿ ರಚನೆಯಾಗಿದ್ದರೂ ಸಹ, ಕಳೆದೆ 10 ವರ್ಷಗಳಿಂದ ಒಂದು ಸಭೆಯು ಸಹ ನಡೆದಿಲ್ಲ. 2004 ರಲ್ಲಿ ಆ ಸಮಿತಿಯ ಕಾರ್ಯಕ್ರಮ ನಿಂತಿದೆ. ಅಲ್ಲಿಂದ ಮುಂದಕ್ಕೆ ಮುಂದುವರಿದಿಲ್ಲ. 2004ಕ್ಕೂ ಮುಂಚೆ ಮಂಜೂರಾಗಿದ್ದಂಥವು, ಹಣ ಕಟ್ಟಿ ಎಂದು ನೋಟೀಸ್ ಕೊಟ್ಟಿರುವಂಥದ್ದು ಹಾಗೂ ಹಣ ಕಟ್ಟಿಸಿಕೊಂಡಿರುವಂಥದ್ದು ಯಾವುವೂ ಸಹ ಏನು ಪಕ್ರಿಯೆ ಆಗದೆಯೇ ಹಾಗೆಯೇ ನಿಂತಿವೆ. ಇತ್ತೀಚೆಗೆ ಹಿಂದಿನ ಸರ್ಕಾರ ಅರ್ಜಿ ಹಾಕಿಕೊಳ್ಳುವುದಕ್ಕೆ ಅನುಮತಿ ಕೊಟ್ಟರು. ಆಗ ಸಾವಿರಾರು ಜನರು ಅರ್ಜಿ ಹಾಕಿದರು. ಅವರು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದರೋ ಬಿಡುತ್ತಿದ್ದರೋ ಗೊತ್ತಿಲ್ಲ. ನೀವೆಲ್ಲರೂ ಏಕೆ ಅರ್ಜಿ ಹಾಕುತ್ತಿದ್ದೀರಿ ಎಂದರೆ, ಸರ್ಕಾರದವರು ಒಂದೊಂದು ಎಕರೆ ಭೂಮಿ ಕೊಡುತ್ತಾರಂತೆ ಅದಕ್ಕೆ ಅರ್ಜಿ ಹಾಕುತ್ತಿದ್ದೇವೆಂದು ಹೇಳುತ್ತಿದ್ದರು. ಅವರು ಏನಾದರೂ ಹಾಕಿಕೊಳ್ಳಲಿ. ಈ ಬಗ್ಗೆ ಒಂದು ಸಭೆ ನಡೆದಿಲ್ಲ.

(ಮುಂದು)

**(1328) 23-12-2021 (8.30) ಎಂವಿ-ಎಂಡಿ (ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಸಿ.ಎಂ.ಲಿಂಗಪ್ಪ (ಮುಂದು):-**

ಒಂದು ಅರ್ಜಿಯು ಇತ್ಯರ್ಥವಾಗಿರುವುದಿಲ್ಲ. ಹಿಂದಿನ ಅರ್ಜಿಗಳು ಸಮರ್ಪಕವಾಗಿದ್ದು ಅವುಗಳು ಮಂಜೂರಾಗಿದ್ದು, ಇದುವರೆಗೆ ಅವುಗಳಿಗೆ ಹಕ್ಕುಪತ್ರ ನೀಡಿರುವುದಿಲ್ಲ. ರಾಮನಗರ ಜಿಲ್ಲೆಯಲ್ಲಿ ಈ ಬಗ್ಗೆ ಯಾವುದೇ ಕಾರ್ಯಕ್ರಮ ಆಗಿರುವುದಿಲ್ಲ. ರೈತರ ಕಷ್ಟ-ಸುಖಗಳನ್ನು ತಿಳಿದುಕೊಂಡಿರುವಂತಹ ರೈತನ ಮಗನಾದ ನಮ್ಮ ಸಭಾನಾಯಕರು ದಯಮಾಡಿ ಇದಕ್ಕೆ ಏನಾದರೂ ಪರಿಹಾರ ಕೊಡಿಸಿ, ಉಳಿದಿರತಕ್ಕಂತಹ ಅರ್ಜಿಗಳನ್ನು ಆದಷ್ಟು ಬೇಗ ಇತ್ಯರ್ಥಪಡಿಸಬೇಕು ಮತ್ತು ಇತ್ಯರ್ಥವಾಗಿರುವಂತಹ ಅರ್ಜಿಗಳಿಗೆ ಹಕ್ಕುಪತ್ರ ಕೊಡಿಸುವಂತಹ ಕೆಲಸ ಮಾಡಿಸಿಕೊಡಬೇಕೆಂದು ಮಾನ್ಯ ಸಭಾಪತಿಯವರ ಮೂಲಕ ಮಾನ್ಯ ಸಭಾನಾಯಕರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಕಂದಾಯ ಸಚಿವರ ಪರವಾಗಿ):-**
ಮಾನ್ಯ ಸಭಾಪತಿಯವರೇ,

(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಶಾಸಕರಾದ ಶ್ರೀ ಸಿ.ಎಂ.ಲಿಂಗಪ್ಪನವರು ರಾಮನಗರ ತಾಲ್ಲೂಕಿನಲ್ಲಿ ಭೂ ಮಂಜೂರಾತಿ ವಿಷಯದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಆ ಭೂ ಮಂಜೂರಾತಿ ಅಕ್ರಮ-ಸಕ್ರಮ ಸಮಿತಿ ರಚನೆಯಾಗಿದ್ದು, 2004ರಿಂದ ಇಲ್ಲಿಯವರೆಗೂ ಒಂದು ಸಭೆ ನಡೆಸದೇ ಇರುವ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅವರ ಗಮನಕ್ಕೋಸ್ಕರ ಅದರ ಸತ್ಯಾಸತ್ಯತೆಯನ್ನು ಅವರು ಪುನಃ ವಿಮರ್ಶೆ ಮಾಡಿ ನನಗೆ ಹೇಳಬಹುದು. ನನಗಿರುವ ಮಾಹಿತಿ ಪ್ರಕಾರ 2004ರಲ್ಲಿ ಒಟ್ಟು 6 ಸಭೆಗಳನ್ನು ಅಕ್ರಮ-ಸಕ್ರಮ ಸಮಿತಿ ಸಭೆಗಳನ್ನು ಕರೆಯಲಾಗಿದೆ. ನಂತರ, 2005ರಲ್ಲಿ ಯಾವುದೇ ಸಭೆ ಕರೆಯಲಾಗಿರುವುದಿಲ್ಲ. 2007ರಲ್ಲಿ 2 ಸಭೆಗಳನ್ನು, 2010ರಲ್ಲಿ 4 ಸಭೆಗಳನ್ನು, 2011ರಲ್ಲಿ 2 ಸಭೆಗಳನ್ನು, 2012ರಲ್ಲಿ 1 ಸಭೆ, 2016ರಲ್ಲಿ 5 ಸಭೆಗಳನ್ನು, 2017ರಲ್ಲಿ 6 ಸಭೆಗಳನ್ನು, 2018ರಲ್ಲಿ 6 ಸಭೆಗಳನ್ನು, 2021ರಲ್ಲಿ 1ಸಭೆಯನ್ನು ಕರೆಯಲಾಗಿದೆ. ಇಷ್ಟು ನನ್ನಲ್ಲಿರುವ ಮಾಹಿತಿಯಾಗಿದೆ. ಅದು ತಪ್ಪಾಗಿದ್ದರೆ ಅದನ್ನು ಸರಿಪಡಿಸಿಕೊಳ್ಳುತ್ತೇವೆ. ಒಟ್ಟಾರೆಯಾಗಿ, ಫಾರಂ-50, ಫಾರಂ- 53 ಮತ್ತು ಫಾರಂ-57ರಲ್ಲಿ ಸ್ವೀಕಾರವಾಗಿರತಕ್ಕಂತಹ ಅರ್ಜಿಗಳ ಸಂಖ್ಯೆ 12,292. ಅದರಲ್ಲಿ ಮಂಜೂರು ಮಾಡಿರುವಂತಹ ಅರ್ಜಿಗಳ ಸಂಖ್ಯೆ 4,856. ಅವುಗಳಲ್ಲಿ ಹಕ್ಕುಪತ್ರಗಳನ್ನು ಕೊಟ್ಟಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಅವುಗಳಲ್ಲಿ ತಿರಸ್ಕಾರ ಆಗಿರುವಂಥ ಅರ್ಜಿಗಳ ಸಂಖ್ಯೆ 9,891. ಇನ್ನೂ ವಿಲೇವಾರಿಗೆ ಬಾಕಿ ಇರುವಂಥದ್ದು 4,555 ಅರ್ಜಿಗಳಿರುತ್ತವೆ. ಈಗಿರುವ ಮಾಹಿತಿ ಪ್ರಕಾರ 2004ರಿಂದ ಬಗರ್‌ಹುಕುಂ ಅಕ್ರಮ-ಸಕ್ರಮ ಸಮಿತಿಯಲ್ಲಿ ಫಾರಂ-53ರ ಅಡಿಯಲ್ಲಿ 1,413 ಜನ ಫಲಾನುಭವಿಗಳ ಪೈಕಿ 254 ಫಲಾನುಭವಿಗಳಿಗೆ ಸಾಗುವಳಿ ಚೀಟಿಯನ್ನು ನೀಡಿದ್ದೇವೆ ಎಂಬ ಮಾಹಿತಿ ಇದೆ. ಇನ್ನುಳಿದ 4,846 ಜನ ಫಲಾನುಭವಿಗಳಿಗೆ ಮಂಜೂರಾತಿ ಮಾಡಿದ್ದೇವೆ ಎಂಬ ಮಾಹಿತಿ ಇದೆ. ಈ ಎಲ್ಲಾ ಹಿನ್ನೆಲೆಯಲ್ಲಿ ರಾಮನಗರ ಜಿಲ್ಲೆಯ ಜಿಲ್ಲಾಧಿಕಾರಿಯವರನ್ನು ಸಂಪರ್ಕ ಮಾಡಿ, ತಕ್ಷಣ ಈ ಎಲ್ಲಾ ಕಡತಗಳನ್ನು ಅವರಿಗೆ ಕಳುಹಿಸಿಕೊಟ್ಟು, ಮಾನ್ಯ ಶಾಸಕರನ್ನು ಸಂಪರ್ಕ ಮಾಡಿ, ಏನಾಗಿದೆ ಎಂಬ ಬಗ್ಗೆ ಒಮ್ಮೆ ಚರ್ಚೆ ಮಾಡಿ, ಬಾಕಿ ಉಳಿದಿರುವಂತಹ ಎಲ್ಲಾ ಅರ್ಜಿಗಳನ್ನು ತೀರ್ಮಾನ ಮಾಡುವುದಕ್ಕೆ ಮತ್ತು ಮಂಜೂರಾದಂತಹ ಅರ್ಜಿಗಳಿಗೆ ಅವರಿಗೆ ಸಾಗುವಳಿ ಚೀಟಿಯ ದಾಖಲಾತಿಗಳನ್ನು ಕೊಡುವುದಕ್ಕೆ ಅಗತ್ಯವಾದ ಕ್ರಮ ಕೈಗೊಳ್ಳುತ್ತೇವೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 12. ಪ್ರಕಟಣೆ

**ವೈಸ್ ಛೇರ್ಮನ್:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 104ರ ಮೇರೆಗೆ ವಿಧಾನ ಸಭೆಯ ದಿನಾಂಕ 23.12.2021ರಂದು ಕರ್ನಾಟಕ ಧನ ವಿನಿಯೋಗ (ಸಂಖ್ಯೆ-4) ವಿಧೇಯಕ, 2021 ಅನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

ಈಗ ಸದನವನ್ನು ನಾಳೆ ಬೆಳಗ್ಗೆ 10 ಗಂಟೆ 30 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

**(ಸದನವು ರಾತ್ರಿ 8 ಗಂಟೆ 33 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 24ನೇ ಡಿಸೆಂಬರ್ ಮಾಹೆ 2021ರ ಶುಕ್ರವಾರದಂದು ಬೆಳಗ್ಗೆ 10 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)**

<><><>

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”